
ಸಮಗ್ರ ದಾಸ ಸಾಹಿತ್ಯ

ಸಂಪುಟ : ೯ - ಭಾಗ ೧



ಶ್ರೀ ವಿಜಯದಾಸರ ಕೀರ್ತನೆಗಳು



ಸಮಗ್ರ ದಾಸ ಸಾಹಿತ್ಯ
ಸಂಪುಟ : ೯ – ಭಾಗ ೧

ಶ್ರೀ ವಿಜಯದಾಸರ ಕೀರ್ತನೆಗಳು

ಸಂಪಾದಕರು
ಪ್ರೊ. ಜಿ. ಅಶ್ವತ್ಥನಾರಾಯಣ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

SAMAGRA DASA SAHITYA VOLUME - 9 Part 1 :
Shri Vijayadasara Keerthanegalu, Edited by Prof. G. Aswathanarayana and published by Sri. Y. K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 63 + ೪೫೯

ಪ್ರಥಮ ಮುದ್ರಣ : ೨೦೦೩
ಪ್ರತಿ : ೧೨೫೦.

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು – ೫೬೦ ೦೫೨.

ಮುದ್ರಕರು :

ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩.೩

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಡಾ. ಟಿ. ಎನ್. ನಾಗರತ್ನ

ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ

ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಮಂದಾಕಿನಿ

ಪ್ರೊ. ಸುಧಾಕರ

ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ, ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು• ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ, ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಅವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿ.ಡಿ. ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್
ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮಾವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು) ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ–ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ, ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ-ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕನ್ನಡಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ) ನಾಲ್ಕುನೂರಕ್ಕೂ ಮೀರಿದ ದಾಸರಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ **'On the Karnataka Vaishnava Dasas'** – ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೆ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆಯ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ-ಪೀಳಿಗೆ'ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯದಲ್ಲಿ ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ-ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದುಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯ ವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದೂ, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದೂ ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು* ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ–ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು, ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ–ಗುರು ತಾರತಮ್ಯವನ್ನು ಪಾಲಿಸಬೇಕು : ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು–ಎಂಬುದಾಗಿ ನಿರ್ಧರಿಸಲಾಯಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ, ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, "ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ" ಎಂದು ಘೋಷಿಸಿದರು. ಅದರಂತೆ, ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ . ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ–ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಶ್ರೀ ವಿಜಯದಾಸರ ಜೀವನ ವೃತ್ತಾಂತ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಸಮಗ್ರವಾಗಿ ಅವಲೋಕಿಸಿದಾಗ ವಿಶ್ವಸಾಹಿತ್ಯಕ್ಕೆ ಕನ್ನಡದ್ದೇ ಆದ ಕೊಡುಗೆ ಎಂದರೆ ವಚನಸಾಹಿತ್ಯ ಮತ್ತು ದಾಸಸಾಹಿತ್ಯ ಎನ್ನಬಹುದು. ಇವು ಕನ್ನಡ ಸಾಹಿತ್ಯ ಶಾರದೆಯ ಎರಡು ಕಣ್ಣುಗಳಿದ್ದಂತೆ. ಈ ಪೈಕಿ ದಾಸಸಾಹಿತ್ಯವು ಭಕ್ತಿಮಾರ್ಗದ ಪ್ರತಿಪಾದನೆಯ ಜತೆಗೆ ಕನ್ನಡದ ಭಾಷಿಕ ಶಕ್ತಿಯ ಬಹು ಆಯಾಮಗಳನ್ನು ತೆರೆದು ತೋರಿರುವುದಲ್ಲದೆ ಭಾರತೀಯ ಸಂಗೀತಶಾಸ್ತ್ರದಲ್ಲಿ ಅಮರವಾದ ಕರ್ನಾಟಕ ಸಂಗೀತದ ಸಿದ್ಧಿ ಪ್ರಸಿದ್ಧಿಗೆ ಸಾಕ್ಷಿಯಾಗಿದೆ. ಈ ದೃಷ್ಟಿಯಿಂದ ಸಾಹಿತ್ಯ ಮತ್ತು ಸಂಗೀತ ಸಾಮರಸ್ಯ ಹೊಂದಿರುವ ಹರಿದಾಸ ಸಾಹಿತ್ಯ ವಿಶ್ವಸಾಹಿತ್ಯಕ್ಕೆ ಕನ್ನಡನಾಡು ನೀಡಿರುವ ವಿಶಿಷ್ಟ ಕೊಡುಗೆ ಎಂದರೆ ತಪ್ಪಾಗದು.

ವಚನ ಮತ್ತು ದಾಸ ಸಾಹಿತ್ಯಗಳು ಅಂಕಿತ ಬದಲಿಸಿದರೂ ಅಂತಃಕರಣ ಒಂದೇ ಎಂಬಂತೆ ಹಲವಾರು ವಿಷಯಗಳಲ್ಲಿ ಸಾದೃಶ್ಯ ಹೊಂದಿದೆ. ನಡುಗನ್ನಡ ಬಳಕೆ, ಆಡುಮಾತಿನ ಸೊಗಸಾದ ಅಳವಡಿಕೆ, ಜನಬಳಕೆಯ ಶಬ್ದಸಂಪತ್ತು, ತತ್ತ್ವಪ್ರತಿಪಾದನೆ, ಭಕ್ತಿಪ್ರತಿಪಾದನೆ ಮೊದಲಾದ ವಿಷಯಗಳಲ್ಲಿ ದಾಸ – ವಚನ ಸಾಹಿತ್ಯಗಳ ಹೂರಣ ಒಂದೇ, ತೋರಣ ಬೇರೆ. ಆದರೆ ಸಂಗೀತ – ನೃತ್ಯ ಅಂಶಗಳ ಅಳವಡಿಕೆ, ವಿಶಿಷ್ಟ ಛಂದೋಬದ್ಧ ರಚನೆಗಳು, ತನ್ನದೇ ಆದ ಸಿದ್ಧಾಂತ, ಆಚಾರ ಪ್ರತಿಪಾದನೆ, ಸಂಸ್ಕೃತ ಕನ್ನಡ ಎರಡರಲ್ಲೂ ಒಬ್ಬರೇ ಸಾಹಿತ್ಯ – ಶಾಸ್ತ್ರ ರಚನೆ ಮಾಡುವುದು ಇವೇ ಮೊದಲಾದ ಹಿರಿಮೆಗಳನ್ನು ದಾಸಸಾಹಿತ್ಯ ಹೊಂದಿದೆ.

ಹತ್ತಾರು ವಿಷಯಗಳಲ್ಲಿ ವಚನ ಸಾಹಿತ್ಯದಂತೆ ಕನ್ನಡತನ, ಕನ್ನಡ ಸಂಸ್ಕೃತಿಯನ್ನು ದಾಸಸಾಹಿತ್ಯ ಒಳಗೊಂಡಿದೆ. ಹರಿದಾಸ ಸಾಹಿತ್ಯದ ಉಗಮ ವಿಕಾಸ ಪ್ರಗತಿಯ ಹಂತಗಳೆಲ್ಲ ಕರ್ನಾಟಕದಲ್ಲೇ ಆಗಿದೆ. ಪ್ರಾಚೀನ ಭಾಗವತ ಪಂಥ ಮತ್ತು ಮಧ್ವಮತ ತತ್ತ್ವಗಳನ್ನು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅಚ್ಚುಕಟ್ಟಾಗಿ ಅಭಿವ್ಯಕ್ತಗೊಳಿಸಿದ್ದು ದಾಸಸಾಹಿತ್ಯ. ಮಧ್ವಮತ ಸಿದ್ಧಾಂತ ಪ್ರತಿಪಾದಕರಾದ ಆಚಾರ್ಯ ಮಧ್ವರು ಕನ್ನಡಿಗರು. ಹೀಗೆ ದೇಶ, ಭಾಷೆ, ಸಿದ್ಧಾಂತ, ಸಾಹಿತ್ಯ, ಆಚಾರ್ಯ ಪುರುಷರುಗಳೆಲ್ಲ ಕರ್ನಾಟಕದ್ದು ಕನ್ನಡದ್ದು. ಇದರ ಪ್ರತಿಫಲನವೇ ಹರಿದಾಸ ಸಾಹಿತ್ಯ.

ಹರಿದಾಸ ಸಾಹಿತ್ಯವನ್ನು ಅಧ್ಯಯನಾನುಕೂಲಕ್ಕಾಗಿ ವಿದ್ವಾಂಸರು ನಾನಾ ರೀತಿ ವರ್ಗೀಕರಿಸಿದ್ದಾರೆ. ಕಾಲಮಾನದ ದೃಷ್ಟಿಯಿಂದ ಶ್ರೀಪಾದರಾಜ ಪೂರ್ವ ಯುಗ (ಕ್ರಿ. ಶ. ೮೭೯–೧೪೫೦) ಶ್ರೀಪಾದರಾಜ ಯುಗ (ಕ್ರಿ. ಶ. ೧೪೫೧–೧೫೬೫) ವಿಜಯದಾಸ ಯುಗ (ಕ್ರಿ ಶ ೧೫೬೬–೧೮೮೯) ವಿಜಯದಾಸರ ಶಿಷ್ಯಪ್ರಶಿಷ್ಯ ಯುಗ (ಕ್ರಿ. ಶ. ೧೮೯೦ ರಿಂದ) ಎಂದು ವರ್ಗೀಕರಿಸಿದ್ದಾರೆ.

ಸಾಧನೆಯ ಘಟ್ಟಗಳ ಹಿನ್ನೆಲೆಯಲ್ಲಿ ಪುರಂದರದಾಸರ ಯುಗವನ್ನು ಪ್ರಥಮ ಘಟ್ಟವೆಂತಲೂ ವಿಜಯದಾಸರ ಯುಗವನ್ನು ದ್ವಿತೀಯ ಘಟ್ಟ ಎಂತಲೂ ಅನಂತರದ ಪ್ರಾಣೇಶದಾಸರ ಯುಗವನ್ನು ತೃತೀಯ ಘಟ್ಟವೆಂದೂ ವರ್ಗೀಕರಿಸುತ್ತಾರೆ.

ಕೆಲವರು ದಾಸಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಹನ್ನೆರಡನೆಯ ಶತಮಾನದಿಂದ ಹತ್ತೊಂಬತ್ತನೇ ಶತಮಾನದವರೆಗೆ ಬೆಳೆದು ಬಂದ ಸಾಹಿತ್ಯವನ್ನು ನರಹರಿತೀರ್ಥರಿಂದ ಪುರಂದರ, ಕನಕದಾಸರ ಜೀವಿತ ಕಾಲದವರೆಗಿನ ಅವಧಿಯನ್ನು ಒಂದು ಘಟ್ಟವೆಂದೂ ? ಮುಂದೆ ವಿಜಯದಾಸರು ಹಾಗೂ ತರುವಾಯದ ಅವಧಿಯನ್ನು ಇನ್ನೊಂದು ಘಟ್ಟವೆಂದೂ ಪರಿಗಣಿಸುತ್ತಾರೆ. ಹೀಗೆ ಎರಡೇ ಪ್ರಧಾನ ಘಟ್ಟಗಳಾಗಿ ಎಣಿಸುವುದರಲ್ಲಿ ಸೌಲಭ್ಯವೂ ಚಾತುರ್ಯವೂ ಇದೆ. ಈ ಅವಧಿಗಳು ನರಹರಿತೀರ್ಥರ ಮತ್ತು ಶ್ರೀಪಾದರಾಯರ ನಡುವಣ ಹಾಗು ಪುರಂದರ ಮತ್ತು ವಿಜಯದಾಸರ ನಡುವಿನ ಅಜ್ಞಾತ ಕಾಲಗಳೆರಡನ್ನೂ ಒಳಗೊಳ್ಳುತ್ತದೆ ಎಂದು ವರ್ಗೀಕರಿಸಿದ್ದಾರೆ. ಹರಿದಾಸ ಸಾಹಿತ್ಯವನ್ನು

ಆರ್. ಎಸ್. ಪಂಚಮುಖಿಯವರು ನಾಲ್ಕು ಮೆಟ್ಟಿಲುಗಳಾಗಿ ವರ್ಗೀಕರಿಸಿರುವುದನ್ನು ಪುನರ್ ವಿಮರ್ಶಿಸುತ್ತಾ ಡಾ|| ಜಿ. ವರದರಾಜರಾವ್ ಅವರು 'ಶ್ರೀಪಾದರಾಜರ ಪರಂಪರೆಯಲ್ಲಿ ನೆರವೇರಿದ ಮಹತ್ಕಾರ್ಯ ಹರಿದಾಸ ಸಾಹಿತ್ಯದ ಪರ್ವಯುಗ ಮಾತ್ರವಲ್ಲದೆ ಸುವರ್ಣಯುಗವೂ ಆಗಿರುವುದು ಆ ಕಾಲದಲ್ಲಿ ರಚಿತವಾದ ಕೃತಿಗಳ ಮೂಲಕ ವೇದ್ಯವಾಗುತ್ತದೆ. ಆದಕಾರಣ ಈ ಅವಧಿಯನ್ನು ಹರಿದಾಸರ ಸಾಹಿತ್ಯ ಸುವರ್ಣಯುಗವೆಂದು ಕರೆಯಬಹುದು. ವಿಜಯನಗರದ ಉನ್ನತಿ ಅವನತಿಗಳಿಂದ ಹರಿದಾಸ ಸಾಹಿತ್ಯವೂ ಉನ್ನತವಾಗಿ ಬೆಳಗಿ ಅನಂತರ ಇಳಿಮುಖವಾದಂತೆ ವ್ಯಕ್ತವಾಗುತ್ತದೆ. ಕೆಲಕಾಲದವರೆಗೆ ಗುಪ್ತಗಾಮಿನಿಯಾಗಿದ್ದ ಈ ಹರಿದಾಸ ಸಾಹಿತ್ಯವಾಹಿನಿ ವಿಜಯದಾಸರ ಪ್ರವೇಶದಿಂದ ಪುನಃ ಚೇತರಿಸಿಕೊಂಡು ಪರಿಪುಷ್ಟವಾಗಿ ಪ್ರಕಾಶಿಸುವುದನ್ನು ನಾವು ಸ್ಪಷ್ಟವಾಗಿ ಕಾಣಬಹುದು' ಎಂದಿದ್ದಾರೆ. ಆದ್ದರಿಂದ ಈ ಉತ್ತರಾವಧಿಯನ್ನು ಹರಿದಾಸಸಾಹಿತ್ಯದ ಪುನರುಜ್ಜೀವನ ಯುಗವೆಂದು ಪರಿಗಣಿಸುವುದು ಸೂಕ್ತವೆನ್ನಿಸುತ್ತದೆ. ಹೀಗೆ ದಾಸಸಾಹಿತ್ಯದ ಪ್ರಥಮ ದ್ವಿತೀಯ ಘಟ್ಟಗಳನ್ನೇ ವರದರಾಜರಾವ್ ಅವರು ಸುವರ್ಣಯುಗ, ಪುನರುಜ್ಜೀವನಯುಗಗಳೆಂದು ಕರೆದಿರುವುದು ಅರ್ಥಪೂರ್ಣವಾಗಿದೆ.

ಯಾವುದೇ ರೀತಿಯ ವರ್ಗೀಕರಣವಾದರೂ ವಿಜಯದಾಸರ ಯುಗವೊಂದು ಪ್ರತ್ಯೇಕವಾಗಿ ಕಂಡುಬರುತ್ತದೆ ಎಂಬುದು ಗಮನಾರ್ಹ. ಎರಡನೇ ಘಟ್ಟ, ಪುನರುಜ್ಜೀವನಯುಗ, ಮೂರನೇ ಮೆಟ್ಟಿಲು ಹೀಗೆ ಏನೇ ಹೆಸರಿನಲ್ಲಿ ಕರೆಯಲಿ ವಿಜಯದಾಸರದೇ ಒಂದು ಮಾರ್ಗ, ಹಂತ, ಘಟ್ಟವಾಗಿದೆ ಎಂಬುದನ್ನು ಗಮನಿಸಬಹುದು.

ಇನ್ನೊಂದು ದೃಷ್ಟಿಯಿಂದಲೂ ಶ್ರೀ ವಿಜಯದಾಸರಿಗೆ ಮಹತ್ವವಿದೆ.

ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ.
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ ||

ಇದು ದಾಸಸಾಹಿತ್ಯದ ಸಾಧನೆಗಳ ಹಿನ್ನೆಲೆಗಳ ಹಂತಗಳನ್ನು ಹೇಳುತ್ತವೆ.

ಶ್ರೀಪಾದರಾಜರು ದಾಸಸಾಹಿತ್ಯದ ಹಿರಿಮೆಗೆ ಕನ್ನಡಕ್ಕೆ ಉಚಿತ ಸ್ಥಾನ ದೊರಕಿಸಿ ಕೊಟ್ಟರೆ ವ್ಯಾಸರಾಯರು ಸಂಸ್ಕೃತಕ್ಕೂ ಕನ್ನಡಕ್ಕೂ ಉನ್ನತಿ ತಂದುಕೊಟ್ಟರು. ಪುರಂದರದಾಸರು ಇವನ್ನು ಜನರ ಪಾಲಿಗೆ ಜನಪ್ರಿಯಗೊಳಿಸಿಕೊಟ್ಟರು. ತಾವೇ ದೇವರನಾಮಗಳ ಮೂಲಕ ಕರ್ನಾಟಕ ಸಂಗೀತ ಪದ್ಧತಿಗೆ ಬುನಾದಿ ಹಾಕಿ ದಾಸಸಾಹಿತ್ಯ ಗಂಗೆಯ ಭಗೀರಥರಾದರು. ಇವರೆಲ್ಲರ ಸಾಧನೆ ಕಾಲಗರ್ಭದಲ್ಲಿ ಸೇರುತ್ತಿದ್ದಾಗ ಅದನ್ನು ಪುನರುತ್ಥಾನಗೊಳಿಸಿದವರು ಶ್ರೀ ವಿಜಯದಾಸರು. ಆದ ಕಾರಣ ಈ ನಾಲ್ವರನ್ನು ಕ್ರಮವಾಗಿ ಸ್ಮರಿಸುವ ಪರಂಪರೆಯನ್ನು ಕಾಣುತ್ತೇವೆ.

ವಿಜಯದಾಸರ ವಿಶೇಷ ಕೊಡುಗೆ ಎಂದರೆ ಮೊದಲ ಘಟ್ಟದ ದಾಸವರೇಣ್ಯರನ್ನು, ದಾಸ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿ ಪರಂಪರೆಯನ್ನು ಶಿಷ್ಯವೃಂದದ ಮೂಲಕ ಮುಂದುವರೆಸಿದುದು. ಇಂದು ಕರ್ನಾಟಕದಲ್ಲಿ ಕಾಣುವ ನೂರಾರು ಜನ ಹರಿದಾಸರು ಮೂಲತಃ ವಿಜಯದಾಸರ ಮತ್ತು ಶಿಷ್ಯರ ಪರಂಪರೆಗೆ ಸೇರಿದವರು ಎಂಬುದನ್ನು ನೆನಪಿನಲ್ಲಿಡಬೇಕು ೧೯ ಮತ್ತು ೨೦ನೇ ಶತಮಾನದಲ್ಲಿ ಕಂಡುಬರುವ ದಾಸರೆಲ್ಲರೂ ವಿಜಯದಾಸರ ಶಿಷ್ಯಪ್ರಶಿಷ್ಯ ಪರಂಪರೆಯವರೇ ಆಗಿದ್ದಾರೆ. ಇವರಲ್ಲಿ ಹರಿದಾಸಿಯರೂ ಸೇರಿದ್ದಾರೆ.

ಹೀಗೆ ವಿಜಯದಾಸರ ಯುಗ ಹರಿದಾಸ ಸಾಹಿತ್ಯದಲ್ಲಿ ಅವಿಸ್ಮರಣೀಯ ವಾಗಿದ್ದು ವಿಜಯದಾಸರು ಉತ್ತರಕಾಲೀನ ಹರಿದಾಸ ಸಾಹಿತ್ಯದ ಆದ್ಯ ಮಾರ್ಗದರ್ಶಕರಾಗಿದ್ದಾರೆ.

ವಿಜಯದಾಸರು ಪುರಂದರದಾಸರ ಜೀವನವನ್ನು ಕುರಿತು ಹೇಳಿದಂತೆ ವಿಜಯದಾಸರ ಜೀವನವನ್ನು ಶಿಷ್ಯ ಪ್ರಶಿಷ್ಯ ದಾಸರು ಹಾಡಿದ್ದಾರೆ. ಹಾಗಾಗಿ ಸಾಕಷ್ಟು ಮಾಹಿತಿ ಅವರ ಜೀವನದ ಬಗ್ಗೆ ದೊರೆಯುತ್ತದೆ. ಐತಿಹಾಸಿಕ ಸಂಗತಿಗಳ ಜತೆಗೆ ಪರಂಪರಾಗತವಾಗಿ ಬಂದ ನಂಬಿಕೆ ಐತಿಹ್ಯಗಳೂ ಇಲ್ಲಿ ಸೇರಿರುವುದನ್ನು ಮರೆಯಲಾಗದು. ಕೀರ್ತನೆ, ಸುಳಾದಿಗಳಲ್ಲಿ ಸಿಗುವ ವಿಷಯಗಳನ್ನು ಆಧರಿಸಿ ಇತರ ಆಕರಗಳನ್ನು ಗಮನಿಸಿ ಸ್ಥೂಲವಾಗಿ ಶ್ರೀ ವಿಜಯದಾಸರ ಜೀವನವನ್ನು ಇಲ್ಲಿ ನಿರೂಪಿಸಿದೆ.

ಕರ್ನಾಟಕದ ರಾಯಚೂರು ಜಿಲ್ಲೆಯ ಮಾನವಿ ಬಳಿಯಲ್ಲಿ ಚೀಕಲ ಪರವಿ ಗ್ರಾಮ ಐತಿಹಾಸಿಕ ಮಹತ್ವ ಪಡೆದ ಸ್ಥಳವಾಗಿದೆ. ಶ್ರೀಪಾದರಾಜರು ದೇಶಸಂಚಾರದ ಕಾಲದಲ್ಲಿ ಈ ಗ್ರಾಮಕ್ಕೆ ಬಂದವರು ಅಶ್ವತ್ಥವೃಕ್ಷ ಬೆಳಸಿ ಕಟ್ಟೆ ಕಟ್ಟಿ ಆ ವೃಕ್ಷದಡಿಯಲ್ಲಿ ಲಕ್ಷ್ಮೀನರಸಿಂಹದೇವರನ್ನು ಪ್ರತಿಷ್ಠಾಪಿಸಿ ಪುಣ್ಯಕ್ಷೇತ್ರವಾಗಿಸಿದರು. ಈ ಗ್ರಾಮದಲ್ಲಿ ಭಾರದ್ವಾಜ ಗೋತ್ರದ ಋಕ್‌ಶಾಖೆಗೆ ಸೇರಿದ ಬ್ರಾಹ್ಮಣ ಮನೆತನದ ಬಡ ದಂಪತಿಗಳು ಕಷ್ಟದಿಂದ ಬಾಳುವೆ ಮಾಡುತ್ತಿದ್ದರು. ಶ್ರೀನಿವಾಸಪ್ಪ–ಕೂಸಮ್ಮ ಆ ದಂಪತಿಗಳ ಹೆಸರು. ದೈವಭಕ್ತರಾದ ಇವರು ಶ್ರೀಪಾದರಾಜರಿಂದ ಸ್ಥಾಪಿತವಾದ ಲಕ್ಷ್ಮೀನರಸಿಂಹನನ್ನು ಆರಾಧಿಸುತ್ತಿದ್ದರು. ಇವರಿಗೆ ಮೂರು ಜನ ಮಕ್ಕಳಾದರು. ಇದರಲ್ಲಿ ಹಿರಿಯವನೇ ದಾಸಪ್ಪ. ಇವರೇ ಮುಂದೆ ವಿಜಯದಾಸರೆಂದು ಪ್ರಸಿದ್ಧರಾದವರು. ದಾಸಪ್ಪ ಜನಿಸಿದ್ದು ಶಾಲಿವಾಹನ ಶಕ ೧೬೦೪ (ಕ್ರಿ. ಶ. ೧೬೮೨) ದುಂದುಭಿ ಸಂವತ್ಸರದಲ್ಲಿ. ಮಕ್ಕಳ ಸಂಪತ್ತು ದೊರೆತರೂ ಧನಧಾನ್ಯ ಸಂಪತ್ತು ದೊರೆಯಲಿಲ್ಲ. ಬಡತನದಲ್ಲೇ ಬಾಳ್ವೆ ಸಾಗಿತು. ಬುದ್ಧಿವಂತ ಬಾಲಕನಾಗಿ ಬೆಳೆದರೂ ದಾಸಪ್ಪನನ್ನು ಊರಿನವರು ಕೂಸೀಮಗ ದಾಸನೆಂದು ತಿರಸ್ಕಾರದಿಂದ ಕಾಣುತ್ತಿದ್ದರು. ಬಾಲ್ಯದಲ್ಲಿ ವಿಜಯದಾಸರು ದಾಸಪ್ಪನಾಗಿದ್ದಾಗ ಇದ್ದ ಬಡತನವನ್ನು ಜ್ಞಾಪಿಸಿಕೊಳ್ಳುತ್ತಾ 'ಸಂಜೆತನಕ ಇದ್ದು ಸಣ್ಣ ಸವುಟು ತುಂಬ ಗಂಜಿ ಕಾಣದಲೆ ಬಳಲಿದೆನೊ' ಎಂದಿದ್ದಾರೆ.

ಬಡತನದಲ್ಲಿದ್ದರೂ ಕಾಲಕಾಲಕ್ಕೆ ನಡೆಯಬೇಕಾದ್ದ ಅಕ್ಷರಾಭ್ಯಾಸ ಉಪನಯನ, ವಿವಾಹಗಳನ್ನು ತಂದೆ ತಾಯಿಯರು ನಿಲ್ಲಿಸಲಿಲ್ಲ. ಆ ಕಾಲದ ಸಂಪ್ರದಾಯಾನುಸಾರ ಅರಳಮ್ಮ ಎಂಬ ಕನ್ಯೆಯನ್ನು ತಂದು ದಾಸಪ್ಪನಿಗೆ ಮದುವೆಮಾಡಿ ಗೃಹಸ್ಥಪಟ್ಟ ಕಟ್ಟಿದರು. ಕೆಲವು ಕಾಲಾನಂತರ ಸಂಸಾರದ ತಾಪತ್ರಯವನ್ನು ತಾಳಲಾರದೆಯೊ, ಬಂಧುವರ್ಗದವರಿಂದ ಆಗುತ್ತಿದ್ದ ತಿರಸ್ಕಾರವನ್ನು ಸಹಿಸಲಾಗದೆಯೋ, ತನ್ನಿಂದ ಕುಟುಂಬ ರಕ್ಷಣೆ ಮಾಡಲಾಗದ ವ್ಯಥೆಯ ಕಾರಣದಿಂದಲೋ, ಬೇಸರ ಹೊಂದಿ ಯಾರಿಗೂ ತಿಳಿಸದೆ ದಾಸಪ್ಪನು ತನ್ನ ಹದಿನಾರನೆಯ ವಯಸ್ಸಿನಲ್ಲಿ ಮನೆಬಿಟ್ಟು ಹೊರಟನು. ಸಂಚಾರದ ಕಾಲದಲ್ಲಿ ಹತ್ತಿರವಿದ್ದ ಬಟ್ಟೆ ಬರೆ, ಬುತ್ತಿ ಎಲ್ಲವನ್ನು ಕಳ್ಳರು ಅಪಹರಿಸಿದರು. ಇದರಿಂದ

ಇನ್ನಷ್ಟು ವೈರಾಗ್ಯ ತಾಳಿ ಸಂಚಾರವನ್ನು ಮುಂದುವರೆಸಿದಾಗ ಮಾರ್ಗಮಧ್ಯದಲ್ಲಿ ಬಾವಾಜಿ ಸಂನ್ಯಾಸಿಗಳ ಗುಂಪನ್ನು ಸೇರಿ ಅವರಂತೆಯೆ ಆಚಾರ ವ್ಯವಹಾರಗಳನ್ನು ಅನುಸರಿಸುತ್ತಾ ಅನೇಕ ಯಾತ್ರಾ ಕ್ಷೇತ್ರಗಳನ್ನು ದರ್ಶಿಸುತ್ತಾ ಕಾಶೀಯಾತ್ರೆ ಮುಗಿಸಿ ರಾಮೇಶ್ವರ ಯಾತ್ರೆಗಾಗಿ ದಕ್ಷಿಣದತ್ತ ಬರುವಾಗ ಸುಮಾರು ನಾಲ್ಕು ವರ್ಷಗಳನಂತರ ತನ್ನ ೨೦ನೆಯ ವಯಸ್ಸಿನಲ್ಲಿ ಚೀಕಲಪರಿವಿಗೆ ಬಂದಾಗ ಅವನನ್ನು ಕುಟುಂಬದವರು ಗುರುತಿಸಿದರು ಮತ್ತೆ 'ಕಟ್ಟೆಕಲ್ಲು ಕಟ್ಟೆಗೆ ಕೂತಿತು' ಎಂಬಂತೆ ದಾಸಪ್ಪ ಗೃಹಸ್ಥಜೀವನಕ್ಕೆ ಮರಳಿದನು.

ದೇಶಸಂಚಾರ ಮಾಡಿ ಬಂದುದರಿಂದ ಸಾಕಷ್ಟು ಲೋಕಾನುಭವ ಉಂಟಾಗಿತ್ತು. ಜೀವನದಲ್ಲಿ ಕಷ್ಟ ಎಲ್ಲರಿಗೂ ಇದ್ದದ್ದೇ. ಅದನ್ನು ದಿಟ್ಟವಾಗಿ ಎದುರಿಸಬೇಕೇ ಹೊರತು ಅಂಜಿ ಹಿಂಜರಿಯಬಾರದು ಎಂಬ ಪಾಠ ಕಲಿತಿದ್ದನು. ಮತ್ತೆ ಧರ್ಮಿಷ್ಠನಾಗಿ ಬಾಳುವೆಗೆ ತೊಡಗಿದನು. ದೈವಕೃಪೆಯಿಂದ ಹದಿನೆಂಟು ಗ್ರಾಮಗಳ ಶಾನುಭೋಗಿಕೆ ದೊರೆತಿದ್ದರಿಂದ ಸ್ವಲ್ಪ ಮಟ್ಟಿಗೆ ಅನ್ನ ಬಟ್ಟೆಗೆ ನೆರವು ಸಿಕ್ಕಿ ಸಂಸಾರದಲ್ಲಿ ಸ್ವಲ್ಪ ನೆಮ್ಮದಿ ಸಿಗುವಂತಾಯಿತು. ಚಕ್ರದ ಅರೆಗಳ ಏಳುಬೀಳಿನ ಹಾಗೆ ಪರಿಸ್ಥಿತಿ ಸ್ವಲ್ಪ ಸುಧಾರಿಸಿತು ಎನ್ನುವ ವೇಳೆಗೆ ಮತ್ತೆ ಬಿಗಡಾಯಿಸುವ ಸ್ಥಿತಿ ಬಂದಿತು. ತಂದೆ ನಿಧನರಾಗಿ ಜವಾಬ್ದಾರಿ ಹೆಚ್ಚಿ ಯಾವುದೋ ಕಾರಣದಿಂದ ಹಣದ ಲೆಕ್ಕ ತಪ್ಪಿ ಸರ್ಕಾರಕ್ಕೆ ಹಣ ಕೊಡಬೇಕಾದ ಪರಿಸ್ಥಿತಿ ಬಂದಿತು. ಹಣವಿಲ್ಲದೆ ಮನಸ್ಸು ಅಶಾಂತವಾಯಿತು. ಅಪವಾದ, ಅವಮಾನ, ಆರ್ಥಿಕಸಂಕಷ್ಟ ಮತ್ತೆ ಉಂಟಾಗಿ ಜೀವನದಲ್ಲಿ ತಂದುಕೊಂಡಿದ್ದ ಧೈರ್ಯ ಸ್ಥೈರ್ಯ ಕುಂಟಿತು. ಕಂಗಾಲಾದ ದಾಸಪ್ಪ ಸಂಸಾರ ತೊರೆದು ಮತ್ತೆ ಕಾಶಿಯತ್ತ ಹೊರಟನು.

ಕ್ರಿ. ಶ. ೧೭೭೧ರಲ್ಲಿ ದಾಸಪ್ಪ ತನ್ನ ೩೨ನೆಯ ವಯಸ್ಸಿನಲ್ಲಿ ಕಾಶಿಯಾತ್ರೆ ಹೊರಟಾಗ ಯಥಾಪ್ರಕಾರ ಇದ್ದಬದ್ದುದನ್ನೆಲ್ಲ ಕಳೆದುಕೊಂಡು ಕಾಶಿ ಸೇರಿ ಗಂಗೆಯಲ್ಲಿ ಮುಳುಗಿದನು. ಗಯೆಯಲ್ಲಿ ಪಿಂಡವನಿತ್ತು ಮರಳಿದನು. ಗಂಗಾನದಿಯ ದಡದಲ್ಲಿ ದಿನವೂ ಸ್ನಾನ, ವಿಶ್ವೇಶ್ವರನ ಧ್ಯಾನದಲ್ಲಿ ಕಾಲ ಕಳೆಯತೊಡಗಿದನು. ಈಗ ಸಾಕಷ್ಟು ಭಕ್ತನ ಲಕ್ಷಣಗಳನ್ನು ಹೊಂದಿದ್ದನು.

ಸಜ್ಜನಸಂಗ, ಸದಾಚಾರ, ವಿಷಯ ವಿರಕ್ತಿ, ಗುರುಹಿರಿಯರಲ್ಲಿ ಭಕ್ತಿ, ಭಗವಂತನಲ್ಲಿ ಅನುರಕ್ತಿ ಇಂಥ ಗುಣಗಳಿರುವ ಭಕ್ತರಿಗೆ ತತ್ವಾಭಿಮಾನಿ ದೇವತೆಗಳು ಪ್ರಸನ್ನರಾಗುತ್ತಾರಂತೆ. ಪ್ರಾಣದೇವರು ಕೃಪೆದೋರಿ ಶ್ರೀಹರಿಯ ಒಲುಮೆ ದೊರೆಯುವ ಪಕ್ವತೆಗೆ ಭಕ್ತ ಬಂದಿರುತ್ತಾನೆ. ದಾಸಪ್ಪ ಅಂತಹ ಸ್ಥಿತಿಯನ್ನು ತಲುಪಿದ್ದನು.

ಒಂದು ದಿನ ಕಾಶಿಯಲ್ಲಿ ಗಂಗಾನದಿ ತೀರದ ಮಣಿಕರ್ಣಿಕಾ ಘಾಟಿನಲ್ಲಿ ಮಲಗಿದ್ದಾಗ ಅದ್ಭುತ ಸ್ವಪ್ನವೊಂದು ದಾಸಪ್ಪನಿಗೆ ಕಾಣಿಸಿತು. ಸ್ವಪ್ನದಲ್ಲಿ ಪುರಂದರದಾಸರೇ ಸಾಕ್ಷಾತ್ತಾಗಿ ಬಂದು ದಾಸಪ್ಪನ ಕೈಹಿಡಿದುಕೊಂಡು ಏಳಿಸಿ ವ್ಯಾಸಕಾಶಿಗೆ ಕರೆದೊಯ್ದು ಅಲ್ಲಿ ವೇದವ್ಯಾಸರ ದರ್ಶನ ಮಾಡಿಸಿ, ಮಧ್ವಶಾಸ್ತ್ರದ ತತ್ವೋಪದೇಶ ಕೇಳಿಸಿದಾಗ ವೇದವ್ಯಾಸರ ಅನುಗ್ರಹ ಆದಮೇಲೆ ಪುರಂದರದಾಸರು ದಾಸಪ್ಪನ ಬಾಯಿ ತೆಗೆಸಿ ನಾಲಿಗೆ ಮೇಲೆ ವಿಜಯವಿಠ್ಠಲ ಬೀಜಾಕ್ಷರಗಳನ್ನು ಬರೆದು ಅಂಕಿತ ಪ್ರದಾನ ಮಾಡಿದರು. ತಂಬೂರಿ, ತಾಳ ಗೆಜ್ಜೆಗಳನ್ನು ನೀಡಿ ಆಶೀರ್ವದಿಸಿದರು. ದಾಸಪ್ಪನ ಮನಸ್ಸಿನಲ್ಲಿದ್ದ ಅಶಾಂತಿ, ಆತಂಕ, ಚಿಂತೆ, ಕಳವಳಗಳೆಲ್ಲ ತೊಲಗಿ ಉತ್ಸಾಹ ತುಂಬಿತು, ಸ್ಫೂರ್ತಿ ಉಕ್ಕಿತು. ಭಕ್ತಿ ಜ್ಞಾನ ವೈರಾಗ್ಯಗಳು ಮೈಗೂಡಿದವು. ಕಾಲಲ್ಲಿ ಗೆಜ್ಜೆಯನಾದ ಹೊಮ್ಮಿ, ಕೈಯಲ್ಲಿ ತಾಳ ತಟ್ಟಿ ಬೆರಳಲ್ಲಿ ತಂಬೂರಿ ಮೀಟಿ ಬಾಯಲ್ಲಿ ಶ್ರೀಹರಿಗಾನ ಚಿಮ್ಮಿ ದಾಸಪ್ಪ ವಿಜಯದಾಸರಾದರು. "ಅಂತರಂಗದ ಕದವು ತೆರೆಯಿತಿಂದು ಎಂತು ಪುಣ್ಯದ ಫಲವು ಪ್ರಾಪ್ತಿ ದೊರಕಿತೊ ಎನಗೆ" ಎಂದು ಹಾಡುತ್ತಾ ಕಮಲಜಾದಿಗಳಿಂದ ತುತಿಸಿಕೊಳ್ಳುತ ಹೃದಯಕಮಲದೊಳಗಿರುವ ಶ್ರೀ ವಿಜಯವಿಠ್ಠಲನ ಕಂಡೆ ಎಂದು ನಲಿದಾಡಿದರು.

ಪುರಂದರದಾಸರಿಗೂ ವಿಜಯದಾಸರಿಗೂ ಜನ್ಮಾಂತರದ ಬಾಂಧವ್ಯ– ತಂದೆ ಮಕ್ಕಳ ಸಂಬಂಧವಿದೆಯೆಂಬ ನಂಬಿಕೆ ಬೆಳೆದು ಬಂದಿದೆ. ವಿಜಯದಾಸರನ್ನು ಅವತಾರಪುರುಷರೆಂದೇ ಭಕ್ತರು ಭಾವಿಸುತ್ತಾರೆ. ವಿಜಯದಾಸರ ಮತ್ತು ಅವರ ಶಿಷ್ಯಪ್ರಶಿಷ್ಯರ ಸುಳಾದಿ ಕೀರ್ತನೆಗಳಲ್ಲಿ ಈ

ಬಗೆಗೆ ಉಲ್ಲೇಖಗಳು ಸಿಗುತ್ತವೆ. ಇದರ ಪ್ರಕಾರ ತ್ರೇತಾಯುಗದಲ್ಲಿ ಸುರಲೀಲ ಎಂಬ ವಾನರಜನ್ಮ ಕಳೆದು ಯಾದವನಾಗಿ ಜನಿಸಿ ಶ್ರೀ ಕೃಷ್ಣನ ಸೇವೆಮಾಡಿ ಕಲಿಯುಗದಲ್ಲಿ ಪುರಂದರದಾಸರ ಮನೆಯಲ್ಲಿ ತುರುಕರುವಾಗಿ ಅನಂತರ ಮಧ್ವಪತಿದಾಸರಾಗಿ ಆಮೇಲೆ ವಿಜಯದಾಸರಾದರೆಂದು ಹೇಳಲಾಗಿದೆ. ಅಲ್ಲದೆ ಬ್ರಹ್ಮಪುತ್ರರಾದ ಶ್ರೀ ಭೃಗುಮಹರ್ಷಿ ಅವತಾರವೇ ವಿಜಯದಾಸರೆಂದು ನಾರದರ ಅವತಾರವೇ ಪುರಂದರದಾಸರೆಂದು ದಾಸಶ್ರೇಷ್ಠರೆಲ್ಲ ತಮ್ಮ ಕೀರ್ತನೆಗಳಲ್ಲಿ ಪದಪದ್ಯಗಳಲ್ಲಿ ಕೀರ್ತಿಸಿದ್ದಾರೆ. ವಿಜಯದಾಸರು ಶ್ರೀಶಾಪರೋಕ್ಷಿದಾಸರೆಂದು ಸಾರಿದ್ದಾರೆ.

ವಿಜಯದಾಸರಿಗೆ ಗುರುಕರುಣ ದೊರೆತ ಮೇಲೆ ಬೇಡ ಬೇಡವೆಂದರೂ ಅಪಾರ ಐಶ್ವರ್ಯ, ಮೇಣೆ, ಆನೆ, ಕುದುರೆ, ತುರು, ಕರು, ಪರಿಚಾರಕವರ್ಗ ಎಲ್ಲವೂ ದಾಸರಲ್ಲಿ ಮೇಳವಿಸಿತು. ತಮಗೆ ಬಂದುದ್ದನ್ನೆಲ್ಲ ಭಕ್ತರ ಕಷ್ಟ ನಿವಾರಣಕ್ಕೆ ಇಷ್ಟಪೂರಣಕ್ಕೆ ಕೃಷ್ಣಾರ್ಪಣವೆನ್ನುತ್ತ ಕೆರೆಯ ನೀರನ್ನು ಕೆರೆಗೆ ಚೆಲ್ಲಿದರು. ದಾಸರು ದಾಸರಾಗಿ ಉಳಿದರು, ಮುಂದಕ್ಕೆ ಹೊರಟರು. ವಿಜಯಯಾತ್ರೆ ಸಾಗಿತು, ಹೋದಲ್ಲೆಲ್ಲ ಜನ ದಾಸರ ಭಕ್ತಿಗಾಯನಕ್ಕೆ ದಿವ್ಯತೇಜಕ್ಕೆ ಅದ್ಭುತಾನುಗ್ರಹಕ್ಕೆ ಒಲಿದು ಬೆರಗಾದರು ಶರಣಾದರು. ದಾಸರ ದಾಸರಾದರು. ದಾಸರ ಶಿಷ್ಯವೃಂದ ಹೆಚ್ಚತೊಡಗಿತು. ದಾಸರ ಶಿಷ್ಯರೆಷ್ಟು ಎಂಬುದು ಖಚಿತವಿಲ್ಲ. ಗೋಪಾಲದಾಸರು 'ಪ್ರತ್ಯಕ್ಷವಾಗಿ ಹತ್ತಿಪ್ಪತ್ತು ಜನರಿಗೆ ತತ್ತ್ವೋಪದೇಶ ಮಾಡಿ ವಿಜಯರಾಯ'.......... ಎನ್ನುತ್ತಾರೆ. ಹತ್ತಿಪ್ಪತ್ತು ಎಂಬ ಪದವನ್ನು ಕೆಲವರು ೩೦ ಜನರೆಂದು ಅರ್ಥೈಸಿದ್ದರೆ ಮತ್ತೆ ಕೆಲವರು ೨೦ಜನರೆಂದು ಅರ್ಥೈಸಿದ್ದಾರೆ. ಹೊನ್ನಾಳಿ ವೆಂಕಟದಾಸರು ಆರುಮೂರೆರಡೊಂದು ಜನರು ಎಂದರೆ ೩೨ ಜನವೆಂದು ತಮ್ಮ ಪದವೊಂದರಲ್ಲಿ ಹೇಳಿದ್ದಾರೆ. ಒಟ್ಟಿನಲ್ಲಿ ಸಾಕಷ್ಟು ಶಿಷ್ಯವರ್ಗ ದಾಸರಿಗಿತ್ತು ಎಂದು ತಿಳಿಯುತ್ತದೆ. ಇವರಲ್ಲಿ ಪ್ರಸಿದ್ಧರಾಗಿ ವಿಜಯದಾಸರಿಗೆ ತಕ್ಕ ಶಿಷ್ಯರೆನ್ನಿಸಿಕೊಂಡವರು ಕೆಲವರೇ. ಆ ಪೈಕಿ ಗೋಪಾಲದಾಸರು (ಭಾಗಣ್ಣ), ವೇಣುಗೋಪಾಲದಾಸರು (ಪಂಗನಾಮ ತಿಮ್ಮಣ್ಣದಾಸರು), ಮೋಹನದಾಸರು ಪ್ರಸಿದ್ಧರು.

ರಾಯಚೂರು ಜಿಲ್ಲೆಯ ಮೊಸರುಕಲ್ ಎಂಬಲ್ಲಿ ಜನಿಸಿದ ಭಾಗಣ್ಣ ಬಾಲ್ಯದಲ್ಲಿ ಬಡತನವನ್ನೇ ಹಾಸಿ ಹೊದ್ದು ಬೆಳೆದನು. ಉಪನಯನವಾದಾಗ ಉಪದೇಶ ಮಾಡಿದ ಗಾಯತ್ರಿಯ ಮಂತ್ರವನ್ನು ಎರಡು ವರ್ಷ ಅಖಂಡವಾಗಿ ಪುನಶ್ಚರಣ ಮಾಡಿ ಸಿದ್ಧಿ ಪಡೆದನು. ಇದರ ಪರಿಣಾಮವಾಗಿ ನುಡಿದಿದ್ದೆಲ್ಲ ಸತ್ಯ, ಉಪದೇಶಿಸಿದ್ದೆಲ್ಲ ಪಥ್ಯ ಎಂಬಂತೆ ವಾಕ್ಸಿದ್ಧಿ ಉಂಟಾಗಿ ಜನರಿಗೆ ತ್ರಿಕಾಲ ಸಂಗತಿಗಳನ್ನು ಭವಿಷ್ಯ ಹೇಳತೊಡಗಿದನು. ಪರಿಣಾಮವಾಗಿ ಜನಜಾತ್ರೆ ಸೇರಿ ಧನಕನಕರಾಶಿ ಸುರಿಯಿತು. ಕೀರ್ತಿ ಹಬ್ಬಿತು. ತಾಯಿ ತಮ್ಮಂದಿರೊಡನೆ ಜೀವನ ಸಾಗಿಸುತ್ತಾ ಈ ಮಧ್ಯೆ 'ವೆಂಕಟಕೃಷ್ಣ'ಮುದ್ರಿಕೆಯಿಂದ ಅನೇಕ ದೇವರನಾಮಗಳನ್ನು ರಚಿಸುತ್ತಾ ಇರಲಾಗಿ ಸುದ್ದಿ ವಿಜಯದಾಸರ ಕಿವಿಗೆ ಬಿತ್ತು. ಭಾಗಣ್ಣ ತನ್ನ ಪೂರ್ವಜನ್ಮದ ಮತ್ತು ಈ ಜನ್ಮದ ಸುಕೃತವನ್ನು ಲೌಕಿಕ ಧನಕ್ಕೆ ಮಾರುತ್ತಿದ್ದಾನೆಂದು ಅರಿತರು.

ಭಾಗಣ್ಣನ ಬಳಿ ಬಂದ ವಿಜಯದಾಸರು ಇದೇನು ಅಂಗಡಿ ಇಟ್ಟುಕೊಂಡು ಪುಣ್ಯದ ಮಾರಾಟ ಮಾಡುತ್ತಿರುವೆ ಸಾಕುಮಾಡು ಎಂದರು. ಆ ಮಾತು ಕೇಳಿ ಭಾಗಣ್ಣನಿಗೆ ಜ್ಞಾನೋದಯವಾಯಿತು. 'ಕ್ಷಮಿಸಿ ಅಪರಾಧವಾಯಿತು. ಇದೀಗ ನನ್ನ ಕಣ್ಣು ತೆರೆಯಿತು. ಮುಂದಿನ ದಾರಿ ತೋರಿಸಿ' ಎಂದು ಶರಣಾದನು. ಆಗ ಭಾಗಣ್ಣನಿಗೆ ಗೋಪಾಲವಿಠ್ಠಲನೆಂದು ಅಂಕಿತನೀಡಿ ಉಪದೇಶ ಮಾಡಿ ಶಿಷ್ಯನಾಗಿ ಸ್ವೀಕರಿಸಿದರು. ಗೋಪಾಲದಾಸರೇ ವಿಜಯದಾಸರ ಮೊದಲ ಶಿಷ್ಯರಾದರು. ಗೋಪಾಲದಾಸರಿಗೆ ನೀಡಿದ ಅಂಕಿತಪದದಲ್ಲಿ "ಇವನನ್ನು ನಿನ್ನ ಅಚ್ಛಿನ್ನದಾಸರಲ್ಲಿರಿಸು ಗೋಪಾಲವಿಠ್ಠಲ ನಿನ್ನ ಪೂಜೆ ಮಾಡುವೆನೊ ಕಾಪಾಡು ಈ ಮಾತನು ನೀ ಪ್ರೀತಿಯನು ಮಾಡಿ ನಿಜದಾಸರೊಳಗಿಡು" ಎಂದು ವಿಜಯದಾಸರು ಬೇಡಿಕೊಂಡಿದ್ದಾರೆ. "ಅಂಕಿತವ ನಾನಿತ್ತೆ ನಿನ್ನ ಪ್ರೇರಣೆಯಿಂದ" ಎಂದು ಹೇಳಿ ಭಾಗಣ್ಣನಿಗಾಗಿ "ಕಿಂಕರರಿಗೆ ಲೌಕಿಕದ ಡೊಂಕನಡತಿಯ ಬಿಡಿಸಿ, ಜನುಮ ಜನುಮದಲ್ಲಿ ಪಂಕನಿಕರವ ತೊಲಗಿಸಿ ಶಂಕೆ ಪುಟ್ಟದಂತೆ ಕಾವ್ಯಗಳ ಪೇಳಿಪುದು" ಎಂದಿದ್ದಾರೆ. ವೆಂಕಟಕೃಷ್ಣ ಅಂಕಿತದಲ್ಲಿ ಪದ ರಚನೆ ಮಾಡುತ್ತಿದ್ದ

ಭಾಗಣ್ಣನ ಕಾವ್ಯ ಶಕ್ತಿಯನ್ನು ನೆನೆದು ಕಾವ್ಯಗಳ ಪೇಳಿಪುದು ಎಂದಿದ್ದಾರೆ. ದಾಸರ ಸಹೃದಯತೆ ಎಷ್ಟು ಅಮೋಘವಾದುದು!

ವಿಜಯದಾಸರ ಮತ್ತೊಬ್ಬ ಪ್ರಸಿದ್ಧ ಶಿಷ್ಯರು ದಿವಾನ್ ತಿಮ್ಮಣ್ಣನವರು. ಆದವಾನಿಯ ನವಾಬ ಬಸಾಲತ್ ಜಂಗ್ ಎಂಬ ಸರದಾರನಲ್ಲಿ ದಿವಾನ ರಾಗಿದ್ದವರು ತಿಮ್ಮಣ್ಣನವರು. ಭಾಗಣ್ಣನವರು ಭವಿಷ್ಯ ಹೇಳಿ ಪ್ರಸಿದ್ಧರಾದಾಗ ಅವರ ಬಳಿ ಕೈಂಕರ್ಯಗೊಂಡು ಇದ್ದರು. ವಿಜಯದಾಸರ ಮಹಿಮೆಯನ್ನು ಕಂಡು ಬೆರಗಾದ ತಿಮ್ಮಣ್ಣನವರು ವಿಜಯದಾಸರ ಅನುಗ್ರಹಕ್ಕಾಗಿ ಕಾತರಿಸುತ್ತಿದ್ದರು. ಹೀಗಿರಲು ಒಮ್ಮೆ ವಿಜಯದಾಸರ ದರುಶನವಾದಾಗ ದಾಸರು ಏನು ಪಂಗನಾಮದ ತಿಮ್ಮಣ್ಣನವರೆ ಕ್ಷೇಮವೇ ಎಂದಾಗ ತಿಮ್ಮಣ್ಣನವರಿಗೆ ಜನ್ಮಾಂತರದ ಸ್ಮೃತಿ ಉದ್ಬೋಧಗೊಂಡು ಹಿಂದಿನ ಜನ್ಮದಲ್ಲಿ ಶ್ರೀವೈಷ್ಣವಕುಲದ ಬೇಲೂರು ವೈಕುಂಠದಾಸರಾಗಿದ್ದುದು ಸ್ಮರಣೆಗೆ ಬಂತು. ಕಾಲಕ್ರಮೇಣ ವೇಣುಗೋಪಾಲವಿಠ್ಠಲ ಎಂಬ ಅಂಕಿತವನ್ನು ದಾಸರು ಅವರಿಗೆ ಅನುಗ್ರಹಿಸಿದರು. ಪೂರ್ವಜನ್ಮದ ಹೆಸರಿನಿಂದ ವಿಜಯದಾಸರು ಗುರುತಿಸಿದ್ದರಿಂದ ಅವರು ಪಂಗನಾಮ ತಿಮ್ಮಣ್ಣದಾಸರೆಂದೇ ಪ್ರಖ್ಯಾತಗೊಂಡರು.

ವಿಜಯದಾಸರ ಕೃಪಾಕಟಾಕ್ಷಕ್ಕೆ ಪಾತ್ರರಾದವರಲ್ಲಿ ಇನ್ನೊಬ್ಬ ಪ್ರಸಿದ್ಧ ಶಿಷ್ಯರೆಂದರೆ ಮೋಹನದಾಸರು. ಮೋಹನವಿಠಲ ಅಂಕಿತ ಹೊಂದಿದವರು. ಶ್ರೀ ವಿಜಯದಾಸರು ಪ್ರತಿವರ್ಷವೂ ಹಂಪೆಗೆ ಹೋಗಿ ಪುರಂದರದಾಸರ ಆರಾಧನೆಯನ್ನು ನಡೆಸುತ್ತಿದ್ದರು. ಜ್ಞಾನದಾನ, ಅನ್ನದಾನ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಆ ಜ್ಞಾನಸತ್ರಕ್ಕೆ ಆನೆಗೊಂದಿಯ ಭೀಮಣ್ಣನಾಯಕನ ಹೆಂಡತಿ ತನ್ನ ಪತಿಯ ಅಣ್ಣತಮ್ಮಂದಿರು ತನ್ನ ಮೇಲೆ ಅಪಕೀರ್ತಿ ಹೊರಿಸಿ ಹೊರಹಾಕಿದ ಫಲವಾಗಿ ದಿಕ್ಕಿಲ್ಲದವಳಾಗಿ ಮೈತುಂಬ ಕಜ್ಜಿ, ಹುರುಕು ತುಂಬಿದ ಮಗುವಿನೊಂದಿಗೆ ಬಂದಿದ್ದಳು. ಜನರಿಂದ ದೂರೀಕರಿಸಿಕೊಂಡ ಅವಳನ್ನು ಅವಳ ಮಗುವನ್ನು ಕರುಣೆಯಿಂದ ನೋಡಿ ಹತ್ತಿರ ಬಂದು ಆಶೀರ್ವದಿಸಿ ವಿಜಯದಾಸರು ಅನುಗ್ರಹ ಮಾಡಿದರು. 'ಚಿರಂಜೀವಿಯಾಗೆಲವೊ ಚಿಣ್ಣ ನೀನು ಹರಿದಾಸ ದಾಸರ

ಪಾದಧೂಳಾಗಿ' ಎಂದು ಹರಸಿದರು. ಆ ಮಗುವನ್ನು ತಾವೇ ಸಾಕಿ ದೊಡ್ಡವನನ್ನಾಗಿ ಮಾಡಿ 'ಮೋಹನವಿಠ್ಠಲ' ಎಂದು ಅಂಕಿತದಾನಮಾಡಿದರು ಆ ಸಾಕುಮಗನೇ ಮೋಹನದಾಸರೆಂದು ಪ್ರಸಿದ್ಧರಾಗಿ ವಿಜಯದಾಸರ ಪರಂಪರೆಯನ್ನು ಮುಂದುವರೆಸಿದವರಲ್ಲಿ ಅಗ್ರಗಣ್ಯರೆನಿಸಿದರು.

ಹೀಗೆ 'ಭಕ್ತಿಯಲ್ಲಿ ಭಾಗಣ್ಣ, ಯುಕ್ತಿಯಲಿ ಮೋಹನ್ನ, ಶಕ್ತಿಯಲ್ಲಿ ತಿಮ್ಮಣ್ಣ' ಎಂಬಂತೆ ಮೂವರು ಪ್ರಸಿದ್ಧ ಶಿಷ್ಯರು ವಿಜಯದಾಸರ ಅನುಗ್ರಹಕ್ಕೆ ಪಾತ್ರರಾಗಿ ಶಿಷ್ಯ ಪರಂಪರೆ ಬೆಳೆಸಿ ಇಂದೂ ದಾಸಸಾಹಿತ್ಯ ಉಳಿಯಲು ಬೆಳೆಯಲು ಕಾರಣಕರ್ತರಾಗಿದ್ದಾರೆ. ಇವರಲ್ಲದೆ ಇನ್ನೂ ಅನೇಕ ಶಿಷ್ಯರು ಇದ್ದು ಅವರಲ್ಲಿ ಇಬ್ಬರು ಶಿಷ್ಯರ ಸಂಗತಿ ಜಗಜ್ಜನಿತವಾಗಿದೆ. ಕಲ್ಲೂರು ಸುಬ್ಬಣ್ಣಾಚಾರ್ಯರು ಆ ಪೈಕಿ ಒಬ್ಬರು. ಇವರು ಪಂಡಿತರಾಗಿದ್ದು ಸುಧಾಪಾಠ ಹೇಳುವಲ್ಲಿ ಸುಧೀರರೆಂದು ತಿಳಿದಿದ್ದರು. ವಿಜಯದಾಸರ ವಿಜಯವೈಭವದ ಬಗ್ಗೆ ಸಹನೆ ಇಲ್ಲದೆ ಕೂಸೀಮಗ ದಾಸನೆಂದು ದಾಸರನ್ನು ಹಂಗಿಸುತ್ತಿದ್ದರು. ಸುಧಾಮಂಗಳಕ್ಕೆ ಅಪೇಕ್ಷೆಪಟ್ಟಾಗ ನಿಮ್ಮಂಥ ದಾಸರಿಗೆ ಸುಧಾ ತಿಳಿಯಲು ಸಾಧ್ಯವೇ, ಇದೇನು ಕನ್ನಡದ ಪದ ಪದ್ಯವೇ ಎಂದು ಹೀಗಳೆದರು. ಆಗ ಅಲ್ಲಿದ್ದ ಪರಿಚಾರಕನೊಬ್ಬನಿಂದ ವಿಜಯದಾಸರು ಸುಧಾವ್ಯಾಖ್ಯಾನ ಮಾಡಿಸಿದಾಗ ಸುಬ್ಬಣ್ಣನವರ ಅಹಂ ಕರಗಿ ಜ್ಞಾನೋದಯವಾಗಿ ದಾಸರಿಗೆ ಶರಣಾದರು. ಆಗ ವಿಜಯದಾಸರು ತಮ್ಮ ಶಿಷ್ಯರಾದ ಪಂಗನಾಮ ತಿಮ್ಮಣ್ಣದಾಸರಿಂದ ಸುಬ್ಬಣ್ಣಾಚಾರ್ಯರಿಗೆ 'ವ್ಯಾಸವಿಠ್ಠಲ' ಎಂಬ ಅಂಕಿತವನ್ನು ಕರುಣಿಸಿದರು. ಇವರು ರಚಿಸಿದ ದೇವರನಾಮಗಳ ಪೈಕಿ 'ವಿಜಯಕವಚ'ವೆಂದು ಪ್ರಸಿದ್ಧವಾದ ಕೀರ್ತನೆ ತುಂಬಾ ಜನಪ್ರಿಯ ಸ್ತೋತ್ರವಾಗಿದೆ. ಈ ಸ್ತೋತ್ರದಲ್ಲಿ ವಿಜಯದಾಸರನ್ನು ಕುರಿತು :

ಸ್ಮರಿಸಿ ಬದುಕಿರೊ ದಿವ್ಯ ಚರಣಕೆರಗಿರೊ
ದುರಿತ ತರಿದು ಪೊರೆವ ವಿಜಯ ಗುರುಗಳೆಂಬರ

ಎಂದು ವ್ಯಾಸವಿಠ್ಠಲರು ಸಾರಿದ್ದಾರೆ.

ಶ್ರೀ ವಿಜಯದಾಸರು ಕಾಶಿಯಿಂದ ರಾಮೇಶ್ವರದವರೆಗಿನ ಎಲ್ಲಾ ತೀರ್ಥಕ್ಷೇತ್ರಗಳನ್ನು ಅನೇಕ ಬಾರಿ ಸಂದರ್ಶಿಸಿದ್ದಾರೆ. ಹೋದ ಕಡೆಗಳಲ್ಲೆಲ್ಲಾ ಶ್ರೀಹರಿಯ ದರ್ಶನ ಪಡೆದು ಪುನೀತರಾಗಿದ್ದಾರೆ. ಸ್ತೋತ್ರಗೈದು ಧನ್ಯರಾಗಿದ್ದಾರೆ. ಎಷ್ಟೋ ಕಡೆ ಪವಾಡಗಳೆನ್ನಬಹುದಾದ ಘಟನೆಗಳು ಸಂಭವಿಸಿವೆ. ಕೆಲವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ತಿರುಪತಿ ತಿಮ್ಮಪ್ಪನಲ್ಲಿ ಅಪಾರ ಭಕ್ತಿ ದಾಸರಿಗೆ. ಅಲ್ಲಿಗೆ ಅದೆಷ್ಟೋ ಸಲ ಹೋಗಿ ಬಂದಿದ್ದಾರೆ ಲೆಕ್ಕವಿಲ್ಲ. ಒಮ್ಮೆ ತಿರುಪತಿಗೆ ಬಂದು ದೇವರ ದರ್ಶನಕ್ಕೆ ಪ್ರಯತ್ನಿಸಿದಾಗ ಅಂದು ರಥೋತ್ಸವದ ಪ್ರಯುಕ್ತ ನೂಕುನುಗ್ಗಲು ಹೆಚ್ಚಾಗಿತ್ತು. ಪರಿಚಾರಕರಿಂದ ಬೆನ್ನಿಗೆ ಪೆಟ್ಟು ತಿಂದು ಹಿಂದಕ್ಕೆ ಸರಿಯಬೇಕಾಯಿತು. ಆಗ ಹಾಡಿದ ಕೀರ್ತನೆ ಶ್ರೇಷ್ಠ ನಿಂದಾಸ್ತುತಿಯಾಗಿದೆ. ಭಕ್ತನ ಮೊರೆ ಜತೆಗೆ ಸಾಹಿತ್ಯದ ಸೊಗಸು ಈ ಕೀರ್ತನೆಯಲ್ಲಿ ಅಡಗಿದೆ. ಪ್ರಾರಂಭದ ಪಲ್ಲವಿಯೇ ಚೇತೋಹಾರಿಯಾಗಿದೆ.

ನಿನ್ನ ದರುಶನಕೆ ಬಂದವನಲ್ಲವೊ ಓ ದೇವಾ
ಪುಣ್ಯವಂತರ ದಿವ್ಯ ಚರಣ ನೋಡಲಿ ಬಂದೆ
ಏಕೆಂದರೆ ನೀನು ಭಕ್ತ ಪರಾಧೀನ ಭಕ್ತನೇ ಹೆಚ್ಚು

ಆದ್ದರಿಂದ ಅವರೇ ಪುಣ್ಯವಂತರು ಅವರ ದರ್ಶನಕ್ಕೆ ಬಂದೆ ಎಂದರು. "ಸೊಲ್ಲಿಗೆ ಸ್ತಂಭದಲಿ ತೋರಿದ ಮಹಾಮಹಿಮ ಎಲ್ಲಿಲ್ಲವೊ ನೀನು ! ಬಲ್ಲ ಭಕ್ತರಿಗೆ?"ಎಂದು ಸವಾಲು ಹಾಕಿದ್ದಾರೆ. ಹೀಗೆ ನೇರವಾಗಿ ಭಗವಂತನನ್ನೇ ಉದ್ದೇಶಿಸಿ ಮಾತನಾಡುವಂತೆ ಇರುವ ಈ ಕೀರ್ತನೆ ಎಲ್ಲರ ಮನಸೆಳೆಯುತ್ತದೆ. ವಿಜಯದಾಸರ ಪ್ರತಿಭೆ ಭಕ್ತಿ ಪಾಂಡಿತ್ಯಗಳಿಗೆ ನಿದರ್ಶನವಾಗಿದೆ.

ಬಹುಶಃ ದಾಸರು ತಿರುಪತಿಗೆ ಹೋದಾಗಲೆಲ್ಲ ಒಂದೊಂದು ಘಟನೆ ಸಂಭವಿಸಿರಬೇಕು. ಅವರ ಕೀರ್ತನೆಗಳಲ್ಲಿ ಕೆಲವು ಘಟನೆಗಳ ಉಲ್ಲೇಖವಷ್ಟೆ ಕಂಡುಬರುತ್ತದೆ. ಇನ್ನೊಮ್ಮೆ ರಥೋತ್ಸವದಂದು ಉತ್ಸವ ಹೊರಟಾಗ ಎಲ್ಲರೂ ಹೊರಬಂದು ದೇವಸ್ಥಾನದಲ್ಲಿದ್ದ ಧ್ಯಾನಸ್ಥ ವಿಜಯದಾಸರನ್ನು ಯಾರೂ ಗಮನಿಸಲೇ ಇಲ್ಲ. ರಥ ಮುಂದೆ ಸಾಗದೇ ಇದ್ದಾಗ ಕೊನೆಗೆ ದಾಸರು ಗುಡಿಯಲ್ಲಿರುವುದನ್ನು ಅರಿತು ಗುಡಿಯ ಅರ್ಚಕರು ಅವರಲ್ಲಿ ಕ್ಷಮೆಯಾಚನೆ

ಮಾಡಿದ ಮೇಲೆ ರಥ ಮುಂದಕ್ಕೆ ಸಾಗಿತಂತೆ. ಆಗ ದಾಸರ ಬಾಯಿಂದ, ಅಲ್ಲ ಹೃದಯದಿಂದ ಹೊರಟ ವಾಣಿ ಇದು :

ಸಾಗಿ ಬಾರಯ್ಯ ಭವರೋಗದ ವೈದ್ಯನೆ
ಬಾಗುವೆ ನಿನಗೆ ಚೆನ್ನಾಗಿ ಸ್ತುತಿಸಿ ಇಂದು
ಭಾಗೀರಥಿಪಿತ ಭಾಗವತರ ಸಂ
ಯೋಗ ರಂಗ ಉರಗಗಿರಿ ವೆಂಕಟ ಸಾಗಿ ಬಾರಯ್ಯ

ದಾಸರು ಪ್ರಾರ್ಥಿಸಿದ ಕೂಡಲೇ ರಥಮುಂದಕ್ಕೆ ಚಲಿಸಿತು ! ಇನ್ನೊಮ್ಮೆ ಪ್ರತ್ಯಕ್ಷ ದರ್ಶನ ಕೊಟ್ಟು ವರದ ಹಸ್ತವನ್ನು ಮಸ್ತಕದ ಮೇಲಿಟ್ಟು ಹರಸಿದಾಗ "... ಮಸ್ತಕದಲಿ ಅಭಯಹಸ್ತವನಿಟ್ಟು ಬಲು ಅಸ್ತಮಾನ ಉದಯಾವಸ್ಥೆಯನು ಹರುಸುತ್ತಾ ...." ಎಂದು ಹಾಡಿದ್ದಾರೆ.

ಜಯಮಂಗಳಂ ನಿತ್ಯ ಶುಭಮಂಗಳಂ
ತೊಳಸದಕ್ಕಿಯ ತಿಂಬ ಕಿಲುಬು ತಳಿಗೆಯಲುಂಬ.......

ಎಂಬ ಕೀರ್ತನೆಯು ವ್ಯಾಜಸ್ತುತಿ ಅಲಂಕಾರದಿಂದ ಕೂಡಿದ್ದು ಮತ್ತೊಂದು ಪ್ರಸಂಗವೊಂದನ್ನು ನೆನಪಿಸುತ್ತದೆ.

ದೇಗುಲಗಳ ಪುಣ್ಯಕ್ಷೇತ್ರಗಳ ದರ್ಶನ ಮಾಡಲು ಹೊರಟ ದಾಸರಿಗೆ ಆದ ಅನುಭವಗಳು ಅನೇಕಾನೇಕ. ಒಂದೊಂದು ಕಡೆ ಆದ ಅನುಭವ – ಘಟನೆಯು ಒಂದೊಂದು ತೆರ.

ಮನ್ನಾರ್ ಗುಡಿ ಕ್ಷೇತ್ರದಲ್ಲಿ ನದಿಯಲ್ಲಿ ಸ್ನಾನ ಮಾಡಲು ಹೊರಟಾಗ ಭಗವಂತ ಗೋಪಾಲ ವೇಷದಲ್ಲಿ ಬಂದು ದಾಸರೊಡನೆ ನೀರನ್ನು ಸಿಂಪಡಿಸಿ ಚೆಲ್ಲಾಟವಾಡಿ ಕೋಪ ಬರಿಸಿ ಜ್ಞಾನೋದಯ ಉಂಟು ಮಾಡಿದ ಸಂದರ್ಭದಲ್ಲಿ ದಾಸರು "ಮಾತನಾಡೈ ಮನ್ನಾರಿ ಕೃಷ್ಣ ಮಾತನಾಡೈ" ಎಂಬ ಕೀರ್ತನೆಯನ್ನು ರಚಿಸಿ ಕೃಷ್ಣನನ್ನು ಸ್ತುತಿಸಿದ್ದಾರೆ.

ಪಂಡರಾಪುರಕ್ಕೆ ಹೋದಾಗ ದಾಸರಿಗಾಗಿದ್ದು ಇನ್ನೊಂದು ತೆರನಾದ ಅನುಭವ. ಮಾರುವೇಷದಲ್ಲಿ ಬಂದಾಗ ಗುರುತಿಸಿ ಹಾಡಿದರು: " ಚಲ್ಲಣ ಬಿಗಿವಿನಿಂದುಟ್ಟಾನೆ । ಮಾಸಿದ ವಸ್ತ್ರ ತೊಟ್ಟಾನೆ । ಕಾಲಲಿ ದಿಪ್ಪನ ಕೆರಹು ಮೆಟ್ಟಾನೇ" ಎಂದು ಕೊಂಡಾಡಿದಾಗ "ಅಂಗದ ಮುಸುಕು ತೆಗೆದನೊ ಕ್ಷೇತ್ರದಿ ಪಾಂಡುರಂಗ ವಿಜಯರಾಯ" ಎಂದಿದ್ದಾರೆ. ಹೀಗೆ ದಾಸರು ಹೋದೆಡೆಗಳಲ್ಲೆಲ್ಲಾ ವಿಚಿತ್ರ ಘಟನೆಗಳು ನಡೆದು ಶ್ರೀಹರಿ ದಾಸರಿಗೆ ಕಾಣಿಸಿಕೊಂಡಿದ್ದಾನೆ. ಅವುಗಳ ಹಿನ್ನೆಲೆಯಲ್ಲಿ ದಾಸರು ಎಷ್ಟೋ ಕೀರ್ತನೆಗಳನ್ನು ರಚಿಸಿದ್ದಾರೆ. ದಾಸರು ಮೂರನೆಯ ಬಾರಿ ಕಾಶಿಯಾತ್ರೆ ನಡೆಸಿದಾಗ, ತುಂಗೆ ಉಕ್ಕಿ ಹರಿದಾಗ, ಮಂಡಗದ್ದೆ ಭೀಮನಿಂದ ಗೋಪಾಲದಾಸರಿಗೆ ರಕ್ಷಣೆ ನೀಡಲು ಉಗಾಭೋಗ ರಚಿಸಿದಾಗ, ಈ ಎಲ್ಲ ಸಂದರ್ಭಗಳಲ್ಲೂ ಪವಾಡಸದೃಶ ಘಟನೆಗಳು ನಡೆದಿವೆ. ಆಗೆಲ್ಲಾ ದಾಸರು ಹಾಡುಗಳನ್ನು ರಚಿಸಿದ್ದಾರೆ. ಹೀಗಾಗಿ ಅವರ ಎಷ್ಟೋ ಕೀರ್ತನೆಗಳು ಅವರ ಕ್ಷೇತ್ರಸಂಚಾರ ಮತ್ತು ಸಂಭವಿಸಿದ ಘಟನೆಗಳ ಹಿನ್ನೆಲೆಗಳನ್ನು ಒಳಗೊಂಡಿವೆ ಎನ್ನಬಹುದು.

ಶ್ರೀ ವಿಜಯದಾಸರಿಗಿದ್ದ ತಪೋಶಕ್ತಿ, ಶ್ರೀ ಹರಿಯ ಕೃಪಾಕಟಾಕ್ಷ, ಭಕ್ತರನ್ನು, ಮೊರೆಹೊಕ್ಕವರನ್ನು, ದೀನದಲಿತರನ್ನು ಉದಾರ ಹೃದಯದಿಂದ ಕರುಣಾಂತ-ರಂಗದಿಂದ ಉದ್ಧರಿಸುವ ಮನೋಭಾವ ಇವೇ ಮೊದಲಾದ ಶಕ್ತಿ- ಗುಣಗಳಿಂದ ಈ ಕಾಲದ ಜನ ನಂಬಲಾಗದ ಆದರೆ ವಿಜಯದಾಸರ ಜೀವಿತ ಕಾಲದಲ್ಲಿ ನಡೆದಿರಬಹುದಾದ ಹಲವಾರು ಅಪಮೃತ್ಯು ನಿವಾರಣಾಪ್ರಸಂಗಗಳು ಅವರ ಕೀರ್ತನೆ, ಸುಳಾದಿಗಳಲ್ಲಿ ಉಲ್ಲೇಖಗೊಂಡಿವೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ವಿಜಯದಾಸರು ತಮ್ಮ ಮಗ ಶೇಷಗಿರಿಗೆ ಕಾಯಿಲೆಯಾಗಿ ಅಪಮೃತ್ಯು ಒದಗಿದಾಗ ಶ್ರೀಹರಿಯನ್ನು ಪ್ರಾರ್ಥಿಸಿ ಎರಡು ವರ್ಷ ಆಯುರ್ದಾನ ಮಾಡಿ ಬದುಕಿಸಿದರು. ಎರಡು ವರ್ಷಗಳ ನಂತರ ಕ್ರಿ. ಶ. ೧೭೫೧ರಲ್ಲಿ ಶೇಷಗಿರಿ

ನಿಧನವಾದಾಗ ಹೆಂಡತಿ ಅರಳಮ್ಮನ ಶೋಕ ನಿವಾರಣೆಗಾಗಿ ಹಾಡುಗಳನ್ನು ರಚಿಸಿ ತತ್ತ್ವೋಪದೇಶ ಮಾಡಿ ಸಮಾಧಾನ ಮಾಡಿದರು. ಸಾಕುಮಗ ಮೋಹನದಾಸನಿಗೆ ಅಪಮೃತ್ಯು ಬಂದು ಅಕಾಲಮರಣ ಹೊಂದಿದಾಗ ಮತ್ತೆ ಜೀವ ಬರಿಸಿದರು. ಪುನರ್ಜನ್ಮವಿತ್ತರು. ತುಂಗಾತೀರದ ಚಾಗಿ ಎಂಬ ಊರಲ್ಲಿ ಶಿಷ್ಯರೊಡನೆ ವಿಜಯದಾಸರು ತಂಗಿರುವಾಗ ಕೇಶವರಾಯನೆಂಬ ವ್ಯಕ್ತಿ ನಿಧನವಾಗಿದ್ದನು. ಅವನ ಪತ್ನಿ ಮಹಾಮಹಿಮರು ವಿಜಯದಾಸರು ಬಂದಿದ್ದಾರೆಂದು ಕೇಳಿ ತಿಳಿದು ಅವರು ಪತಿಯನ್ನು ಬದುಕಿಸಿಯಾರು ಎಂದು ಭಾವಿಸಿ ಅವರಲ್ಲಿ ಶರಣು ಹೋದಳು. ಪಾದಕ್ಕೆ ಅಡ್ಡ ಬಿದ್ದ ಆಕೆಗೆ ಸುಮಂಗಲೀಭವ ಎಂದು ಹರಸಿದಾಗ ಆಕೆ ನಡೆದ ಸಂಗತಿ ಹೇಳಿದಳು. ಹಲವಾರು ಉಗಾಭೋಗಗಳನ್ನು ರಚಿಸಿ ಭಗವಂತನನ್ನು ಪ್ರಾರ್ಥಿಸಿದರು. "ನೀನೆ ನನ್ನ ಬಾಯಿಂದ ಸುಮಂಗಲೀಭವ ಎಂದು ನುಡಿಸಿರುವೆ ನೀನೇ ಈಗ ಕಾಪಾಡಬೇಕು" ಎಂದು ಪರಿಪರಿಯಾಗಿ ಸ್ತುತಿಸಿದರು. ಮೂರು ವರ್ಷಗಳ ಆಯುರ್ದಾನದಿಂದ ಕೇಶವರಾಯ ಬದುಕಿ ಮೇಲೆದ್ದನು.

ಆದವಾನಿ ದಿವಾನರೂ ತಮ್ಮ ಶಿಷ್ಯರೂ ಆಗಿದ್ದ ವೇಣುಗೋಪಾಲದಾಸರಿಗೆ ಅಪಮೃತ್ಯು ಒದಗಿದಾಗ ವಿಜಯದಾಸರು ಮತ್ತು ಜೊತೆಯಲ್ಲಿದ್ದ ಗೋಪಾಲದಾಸರು ಇಬ್ಬರೂ ಶ್ರೀ ಹರಿಯನ್ನು ಪ್ರಾರ್ಥಿಸಿ ಶ್ರೀಹರಿ ಅವರಿಗೆ ಪುನರ್ಜನ್ಮವನ್ನು ಕರುಣಿಸುವಂತೆ ಮಾಡಿದರು.

ಜಗನ್ನಾಥದಾಸರ ಅಪಮೃತ್ಯು ನಿವಾರಣೆ ಮಾಡಿದ ಘಟನೆ ರೋಚಕವಾಗಿದೆ. ಮಾನವಿಯಲ್ಲಿದ್ದ ಶ್ರೀನಿವಾಸಾಚಾರ್ಯರೆಂಬ ಘನಪಂಡಿತರು ಶ್ರೀ ವರದೇಂದ್ರ ತೀರ್ಥರಲ್ಲಿ ವ್ಯಾಸಂಗ ಮಾಡಿದವರಾಗಿದ್ದು ವಿಜಯದಾಸರ ಕೀರ್ತಿ ಪ್ರಸಿದ್ಧಿ ಕೇಳಿ ನೋಡಿ ಅವರ ಬಗೆಗೆ ಅಸೂಯೆ ಪಡುತ್ತಿದ್ದರು, ತಿರಸ್ಕಾರವನ್ನು ತೋರುತ್ತಿದ್ದರು. ಕೂಸೀಮಗ ದಾಸನಿಗೆ ಕನ್ನಡಪದ ಹಾಡಿದ್ದಕ್ಕೆ ಇಷ್ಟೇಕೆ ಗೌರವ ಎನ್ನುತ್ತಿದ್ದರು. ಹೀಗಿರಲು ಒಮ್ಮೆ ದಾಸರು ಶ್ರೀನಿವಾಸಾಚಾರ್ಯರನ್ನು, ತೀರ್ಥಪ್ರಸಾದಕ್ಕೆ ಆಹ್ವಾನಿಸಿದಾಗ

ಉದರಬೇನೆಯ ನೆಪ ಹೇಳಿ ತಪ್ಪಿಸಿಕೊಂಡರು. ಆದರೆ ನಿಜವಾಗಿ ಉದರಬೇನೆ ಉಂಟಾಯಿತು ಆಚಾರ್ಯರಿಗೆ. ಆಗ ಅವರು ಮಾಡಿದ್ದು ತಪ್ಪೆಂದು ಮಂತ್ರಾಲಯದ ರಾಯರು ಹೇಳಿದಾಗ ಆಚಾರ್ಯರಿಗೆ ತಮ್ಮ ತಪ್ಪಿನ ಅರ್ಥವಾಯಿತು. ಕೂಡಲೇ ವಿಜಯದಾಸರಲ್ಲಿ ಕ್ಷಮೆ ಕೋರಿದರು. ಅವರ ಅಪ್ಪಣೆಯಂತೆ ಉತ್ತನೂರಿಗೆ ಹೋಗಿ ಗೋಪಾಲದಾಸರನ್ನು ಶರಣು ಹೋಗಿ ಉದರಬೇನೆ ನಿವಾರಣೆಗಾಗಿ ಪ್ರಾರ್ಥಿಸಿದರು. ವಿಜಯದಾಸರ ಅಪ್ಪಣೆಯನ್ನು ಶಿರಸಾ ಪಾಲಿಸುತ್ತಿದ್ದ ಗೋಪಾಲದಾಸರು "ಎನ್ನ ಬಿನ್ನಪ ಕೇಳೊ ಧನ್ವಂತ್ರಿ ದಯಮಾಡೊ ಸಣ್ಣವನು ಇವ ಕೇವಲ" ಎಂದು ಹೇಳುತ್ತಾ "ಬನ್ನ ಪಡಿಸುವ ರೋಗವನ್ನು ಮೋಚನಮಾಡಿ ಚನ್ನಾಗಿ ಪಾಲಿಸುವುದು ಕರುಣಿ" ಎಂದು ಧನ್ವಂತರಿ ಸ್ತುತಿ ಮಾಡಿ ಮಂತ್ರದಿಂದ ಅಭಿಮಂತ್ರಿಸಿಕೊಟ್ಟ ಎರಡು ಜೋಳದ ರೊಟ್ಟಿ ಭೋಜನದಿಂದ ಆಚಾರ್ಯರ ಉದರವ್ಯಾಧಿ ನಿವಾರಣೆ ಆಯಿತು. ಮುಂದೆ ತಿರುಪತಿಯಲ್ಲಿ ವ್ಯಾಧಿ ಮರುಕಳಿಸಿದಾಗ ಅಲ್ಲೇ ಇದ್ದ ಗೋಪಾಲದಾಸರು ಸೂಕ್ಷ್ಮರೂಪದಲ್ಲಿ ಬಂದು ವಿಜಯದಾಸರು ನೀಡಿದ ಆಜ್ಞಾರೂಪದಲ್ಲಿ ತಮ್ಮ ಆಯುಷ್ಯದಲ್ಲಿನ ನಲವತ್ತು ವರ್ಷಗಳನ್ನು ಆಚಾರ್ಯರಿಗೆ ಧಾರೆ ಎರೆದರು. ಕಾಲಕ್ರಮದಲ್ಲಿ ಶ್ರೀನಿವಾಸಾಚಾರ್ಯರಿಗೆ ಚಂದ್ರಭಾಗಾ ನದಿಯಲ್ಲಿ ಜಗನ್ನಾಥವಿಠ್ಠಲ ಎಂಬ ಶಿಲೆ ದೊರೆತು ದೀಕ್ಷಾಬದ್ಧರಾಗಿ ಜಗನ್ನಾಥದಾಸರೆಂದು ಪ್ರಸಿದ್ಧರಾಗಿ ಜಗನ್ನಾಥವಿಠ್ಠಲ ಅಂಕಿತದಲ್ಲಿ ಹರಿಕಥಾ-ಮೃತಸಾರವೆಂಬ ಕನ್ನಡದ ಶ್ರೇಷ್ಠ ತತ್ವಗ್ರಂಥವನ್ನು ರಚಿಸಿ ಲೋಕವಿಖ್ಯಾತರಾದರು. ಹೀಗೆ ವಿಜಯದಾಸರಿಂದ ಅಪಮೃತ್ಯು ನಿವಾರಣೆ ಆಗಿ ಗೋಪಾಲದಾಸರ ಮೂಲಕ ಕನ್ನಡಕ್ಕೆ ಜಗನ್ನಾಥದಾಸರು ಲಭ್ಯವಾದರು.

ವಿಜಯದಾಸರು ತಮ್ಮ ಜೀವಿತ ಕಾಲದಲ್ಲಿ ಸುಮಾರು ೧೮ ವರ್ಷಗಳ ಕಾಲ ಭಾರತಾದ್ಯಂತ ಸಂಚರಿಸಿ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದ್ದಾರೆ. ಭಕ್ತರಿಗೆ ಮಾರ್ಗದರ್ಶನ ಮಾಡಿದ್ದಾರೆ. ಕೊನೆಗಾಲದಲ್ಲಿ ಆಂಧ್ರ ಪ್ರದೇಶದ ಗುಂತಕಲ್ ಬಳಿ ಇರುವ ಚಿಪ್ಪಗಿರಿಗೆ ಬಂದು ನೆಲಸಿದರು. ಈ ಸ್ಥಳ ಭಾಸ್ಕರಕ್ಷೇತ್ರವೆಂದು ಪ್ರಸಿದ್ಧಿ ಹೊಂದಿತ್ತು. ಇಲ್ಲಿ ನೆಲೆಸಲು ಬಂದಾಗ ನಡೆದ ಘಟನೆಯೊಂದು ಗಮನಾರ್ಹವಾಗಿದೆ.

ವಿಜಯದಾಸರು ಚಂದಪ್ಪನೆಂಬ ಕುರುಬನೊಬ್ಬನ ಹೊಲದ ಬಾವಿಯಲ್ಲಿದ್ದ ಶ್ರೀ ವೇಣುಗೋಪಾಲಕೃಷ್ಣ ವಿಗ್ರಹವನ್ನು ತೆಗೆಸಿ, ಅಲ್ಲಿಯೇ ಸಣ್ಣಕಟ್ಟೆ ಕಟ್ಟಿ ವೃಕ್ಷದಡಿ ಪ್ರತಿಷ್ಠಾಪನೆ ಮಾಡಿದರು. ಚಂದಪ್ಪನು ದಾಸರ ಮಹಿಮಾತಿಶಯವನ್ನು ನೋಡಿ ಇಪ್ಪತ್ತು ಕೂರಗಿ ಹೊಲವನ್ನೂ ಒಂದು ಕೊಪ್ಪರಿಗೆ ತುಂಬ ಹಣವನ್ನೂ ಅವರಿಗೆ ದಾನಮಾಡಿದ. ದಾಸರು ಆ ಬಾವಿಯನ್ನು ಜೀರ್ಣೋದ್ಧಾರಗೊಳಿಸಿದರು. ವಿಜಯ ತೀರ್ಥವೆಂದು ಅದು ಪ್ರಸಿದ್ಧವಾಗಿದೆ. ಇವು ಈಗಲೂ ವಿಜಯದಾಸರ ವಂಶಸ್ಥರಿಗೆ ಸೇರಿವೆ. ಚಿಪ್ಪಗಿರಿಯಲ್ಲಿ ನೆಲೆಸಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಭಗವಂತನ ಧ್ಯಾನದಲ್ಲಿ ನಿರತರಾಗಿರುತ್ತ ತಮ್ಮ ಎಪ್ಪತ್ತಮೂರನೆಯ ವಯಸ್ಸಿನಲ್ಲಿ ತಿರುಪತಿಯ ಬ್ರಹ್ಮೋತ್ಸವಕ್ಕೆ ಯಾತ್ರೆ ಹೋಗಿ ಬಂದವರು ಕ್ರಿ. ಶ. ೧೩-೧೧-೧೭೫೫ ರಲ್ಲಿ ಯುವ ಸಂವತ್ಸರದ ಶಕ ೧೬೭೭ ರಲ್ಲಿ ಕಾರ್ತೀಕ ಶುದ್ಧ ದಶಮಿ ಗುರುವಾರ ಪ್ರಹರದಲ್ಲಿ ಶ್ರೀ ಹರಿಪಾದವನ್ನು ಸೇರಿದರು. ಭಕ್ತರು ಪ್ರತಿವರ್ಷ ಕಾರ್ತೀಕ ಶುದ್ಧ ನವಮಿ ದಶಮಿ ಏಕಾದಶಿಗಳಂದು ಚಿಪ್ಪಗಿರಿಯಲ್ಲಿ ವಿಜಯದಾಸರ ಆರಾಧನೆಯನ್ನು ನಡೆಸುತ್ತಾರೆ. ವಿಜಯದಾಸರನ್ನು ಅವರ ಮಹಿಮಾತಿಶಯಗಳನ್ನು ಅವರ ಶಿಷ್ಯರು ಪ್ರಶಿಷ್ಯರು ಬಗೆ ಬಗೆಯಾಗಿ ಕೊಂಡಾಡಿದ್ದಾರೆ. ಪಂಡಿತ ಪಂಡರೀನಾಥಾಚಾರ್ಯ ಗಲಗಲಿ ಅವರು ಹೇಳಿದಂತೆ ಶ್ರೀ ಪುರಂದರದಾಸರು ಶ್ರೀ ವಾದಿರಾಜ ಕನಕದಾಸರೊಂದಿಗೆ ದಿವ್ಯ ಭವ್ಯವಾಗಿ ಆ ದಾಸಪರಂಪರೆ ಗುಡಿ ಕಟ್ಟಿಸಿದರೆ ಮುಂದೆ ವಿಜಯದಾಸರು ಅದಕ್ಕೆ ಶಿಖರವಿಟ್ಟರು. ಶ್ರೀ ಗೋಪಾಲದಾಸರು ಕಲಶ ಏರಿಸಿದರು. ಅನಂತರ ಶ್ರೀ ಜಗನ್ನಾಥದಾಸರು ದಾಸಕೂಟದ ಗೌರವ ಘನತೆಗಳನ್ನು ಗಗನದೆತ್ತರಕ್ಕೆ ಎತ್ತಿದರು. ತದನಂತರ ಬಂದ ದಾಸವರೇಣ್ಯರೆಲ್ಲರೂ ಆ ದಾಸಪ್ರಾಸಾದನವನ್ನು ತಮ್ಮ ವಿವಿಧ ವಾಙ್ಮಯ ಪ್ರಾಕಾರಗಳಿಂದ ಶೃಂಗರಿಸಿ ಅಲಂಕರಿಸುತ್ತಲೇ ಇದ್ದಾರೆ. ಈ ರೀತಿಯಾಗಿ ದಾಸಪಂಥವೆಂಬ ದಿವ್ಯದೇಗುಲ ನಿರ್ಮಾಣದಲ್ಲಿ ಶ್ರೀ ವಿಜಯದಾಸರು ಮಹತ್ವದ ಪಾತ್ರವಹಿಸಿ ಕನ್ನಡ ದಾಸಸಾಹಿತ್ಯದ ರೂವಾರಿಗಳಲ್ಲಿ ಒಬ್ಬರಾಗಿದ್ದಾರೆ.

ವಿಜಯದಾಸರ ಕೀರ್ತನೆಗಳು – ಒಂದುನೋಟ

ದಾಸಸಾಹಿತ್ಯದ ಪುನರುತ್ಥಾನದ ಕಾರ್ಯದಲ್ಲಿ ವಿಜಯದಾಸರು ಅಗ್ರಗಣ್ಯರಾಗಿ ದಾಸಕೂಟದ ಪರಂಪರೆಯನ್ನು ಎರಡನೇ ಘಟ್ಟದಲ್ಲಿ ಮುಂದುವರೆಸಿದ್ದಾರೆ. ವ್ಯಾಸಕೂಟದ ಪರಂಪರೆಯನ್ನು ಶ್ರೀ ರಾಘವೇಂದ್ರಸ್ವಾಮಿಗಳು ಮುಂದುವರೆಸಿದ್ದಾರೆ. ಯತಿಗಳೇ ಇರಲಿ ದಾಸರೇ ಇರಲಿ ಶಾಸ್ತ್ರಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿರಲಿ, ದೇವರನಾಮಗಳನ್ನು ಕನ್ನಡದಲ್ಲಿ ರಚಿಸಿರಲಿ ಇಬ್ಬರ ಗುರಿಯೂ ಒಂದೇ. ಭಕ್ತಿಮಾರ್ಗದ ಅನುಸರಣೆ, ಮಧ್ವಸಿದ್ಧಾಂತದ ಪ್ರಚುರಣೆ. ಫಲಾಪೇಕ್ಷೆಯಿಲ್ಲದೆ ಲೋಕಕಲ್ಯಾಣಕ್ಕಾಗಿ ಭಗವಂತನ ಪ್ರೀತ್ಯರ್ಥವಾಗಿ ಕಾಯಕದ ಆಚರಣೆ. ಒಟ್ಟಿನಲ್ಲಿ ಪೂಜೆ, ಸೇವೆ, ಕೀರ್ತನೆ, ಶಾಸ್ತ್ರಗ್ರಂಥ ರಚನೆ ಹರಿದಾಸರ ಹರಿಯತಿಗಳ ಮುಖ್ಯ ಗುರಿಯಾಗಿತ್ತು.

ಕೀರ್ತನೆ, ಸುಳಾದಿ, ಉಗಾಭೋಗ ಮೊದಲಾದ ದಾಸಸಾಹಿತ್ಯ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ಶ್ರೀ ವಿಜಯದಾಸರು, ವ್ಯಾಸರಾಜರ ಯತಿ ಪರಂಪರೆಯನ್ನು ಶ್ರೀರಾಘವೇಂದ್ರಸ್ವಾಮಿಗಳು ಮುಂದುವರೆಸಿದಂತೆ, ಪುರಂದರದಾಸರ ಕೀರ್ತನೆ ಪರಂಪರೆಯನ್ನು ಅವರ ಉತ್ತರಾಧಿಕಾರಿಗಳೋ ಎಂಬಂತೆ ವರ್ತಿಸಿ ಮುಂದುವರೆಸಿದ್ದಾರೆ. ಪುರಂದರದಾಸರು ರಚಿಸಿದ್ದು ೪ ಲಕ್ಷ ೭೫ ಸಾವಿರ ಪದಗಳೆಂದು ತಾವು ತಿರಿಪಾದೋನ ಪಂಚಲಕ್ಷ ಪೇಳಿಹೆ (ಎಂದರೆ ೭೫ ಸಾವಿರ ಪದಗಳು) ಎಂದಿದ್ದಾರೆ. ಆದ ಕಾರಣ ೫ ಲಕ್ಷ ಪದಗಳ ರಚನೆಯನ್ನು ಪೂರೈಸಬೇಕೆಂಬ ಪುರಂದರದಾಸರ ಆಸೆಯನ್ನು ವಿಜಯದಾಸರು ಪೂರೈಸಿದರು ಎನ್ನುವರು. ಅಭಿನವ ಪುರಂದರದಾಸರೆಂಬ ಅಭಿದಾನಕ್ಕೆ ವಿಜಯದಾಸರು ಪಾತ್ರರಾಗಿದ್ದಾರೆ. ಇನ್ನೊಂದು ದೃಷ್ಟಿಯಿಂದಲೂ ವಿಜಯದಾಸರು ಪುರಂದರ ಪರಿವಾರಕ್ಕೆ ಸೇರಿದವರು. ಪುರಂದರದಾಸರ ಮಕ್ಕಳಲ್ಲಿ ಒಬ್ಬರಾದ ಮಧ್ವಪತಿವಿಠಲರೇ ಈ ಜನ್ಮದಲ್ಲಿ ವಿಜಯದಾಸರಾಗಿದ್ದಾರೆಂಬ ಪ್ರತೀತಿಯಿದೆ. ಜನಪ್ರಿಯತೆ ದೃಷ್ಟಿಯಿಂದಲೂ ಪುರಂದರರ ಅನಂತರ ವಿಜಯದಾಸರು ಸ್ಥಾನಗಳಿಸಿದ್ದಾರೆ ಎಂದರೂ ತಪ್ಪಾಗಲಾರದು. ಒಟ್ಟಿನಲ್ಲಿ ಕೀರ್ತನ

ಸಾಹಿತ್ಯ ಜಗತ್ತಿನಲ್ಲಿ ವಿಜಯದಾಸರು ವಿಶಿಷ್ಟ ಸ್ಥಾನವನ್ನು ಗಳಿಸಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ.

ವಿಜಯದಾಸರ ಕೀರ್ತನೆ, ಉಗಾಭೋಗ, ಸುಳಾದಿಗಳಲ್ಲಿ (ಉಗಾಭೋಗ ಮತ್ತು ಸುಳಾದಿಗಳನ್ನು ಕುರಿತು ಬೇರೆಡೆ ಸಂಪುಟದಲ್ಲಿ ಚರ್ಚಿಸಿ ವಿವರಿಸಿರುವುದರಿಂದ ಇಲ್ಲಿ ಕೇವಲ ಕೀರ್ತನೆಗಳನ್ನು ಕುರಿತಷ್ಟೇ ನಾಲ್ಕು ಮಾತುಗಳನ್ನು ಹೇಳಲಾಗಿದೆ.) ಹತ್ತಾರು ಕೀರ್ತನೆಗಳ ವೈಶಿಷ್ಟ್ಯ ವಿವರಣೆಗಳನ್ನು ಆಯಾ ಕೀರ್ತನೆಗಳ ಟಿಪ್ಪಣಿಗಳಲ್ಲಿ ಕಾಣಿಸಲಾಗಿದೆ. ಸಮಗ್ರ ದೃಷ್ಟಿಯಿಂದ ಕೆಲವು ಮಾತುಗಳನ್ನು ಇಲ್ಲಿ ಹೇಳಲಾಗಿದೆ.

ಸಾಮಾನ್ಯವಾಗಿ ಕೀರ್ತನೆಗಳಲ್ಲಿ ರಾಗತಾಳ ಬದ್ಧವಾಗಿ ಪಲ್ಲವಿ, ಅನುಪಲ್ಲವಿ ಮತ್ತು ಚರಣ ಅಥವಾ ನುಡಿಗಳ ಯೋಜನೆ ಇರುತ್ತದೆ. ಕೊನೆಯಲ್ಲಿ ಆಯಾ ದಾಸರ ಅಂಕಿತವಿರುತ್ತದೆ. ಬಹುಮಟ್ಟಿಗೆ ಹರಿದಾಸರೆಲ್ಲರೂ ವಿಠಲನ ಭಕ್ತರು. ತಮ್ಮ ಸ್ವರೂಪ ಗುರುಗಳ ಹೆಸರಿನೊಂದಿಗೆ ವಿಠಲನೆಂಬ ನಾಮವನ್ನು ಸೇರಿಸಿಕೊಂಡು ಅಂಕಿತ ಹೊಂದುತ್ತಾರೆ. ಹರಿದಾಸರನ್ನು ಮೂರು ನಾಮಧಾರಿಗಳೆಂದು ಕರೆಯುವುದುಂಟು ಏಕೆಂದರೆ ಸಂಪ್ರದಾಯದಲ್ಲಿ ದಾಸರಿಗೆ ಇಹಜನ್ಮನಾಮ, ಪೂರ್ವಜನ್ಮನಾಮ, ಉಪದೇಶದ ಅಂಕಿತನಾಮ ಇರುತ್ತದೆ. ವಿಜಯದಾಸರಿಗೆ ಇಹಜನ್ಮನಾಮ ದಾಸಪ್ಪ ಎಂದು ಅಂಕಿತನಾಮ ವಿಜಯವಿಠಲನೆಂಬ ಪೂರ್ವಜನ್ಮನಾಮ ಮಧ್ವಪತಿವಿಠಲನೆಂದೂ ಇತ್ತು.

ವಿಜಯದಾಸರ ಕೀರ್ತನೆಗಳ ವಸ್ತು ವೈವಿಧ್ಯ ವಿಸ್ತಾರವಾದುದು. ಹತ್ತಾರು ಬಾರಿ ಆಸೇತುಹಿಮಾಚಲಪರ್ಯಂತ ಸಂಚರಿಸಿರುವುದರಿಂದ ಅವರ ಲೋಕಾನುಭವ ಅಧಿಕವಾದುದು. ಅಪರೋಕ್ಷ ಲೋಕಜ್ಞಾನಿಗಳೂ ಆಗಿರುವುದರಿಂದ ಜ್ಞಾನವಿಸ್ತಾರ ಅಪಾರ. ಇನ್ನು ಶಾಸ್ತ್ರ, ಸಂಪ್ರದಾಯ, ಆಚರಣೆಗಳ ವಿಚಾರದಲ್ಲಿ ಅವರನ್ನು ಸರಿಗಟ್ಟುವವರೇ ಕಮ್ಮಿ. ದೇವಕಕ್ಷೆಯಲ್ಲಿ ಸುಮಾರು ೨೦ ದೇವಾನುದೇವತೆಗಳನ್ನು ಸ್ತುತಿಸಿದರೆ ಯತಿಕಕ್ಷೆಯಲ್ಲಿ ೧೦ ಮಂದಿ ಯತಿವರೇಣ್ಯರನ್ನು ಸ್ತುತಿಸಿದ್ದಾರೆ.

ಆತ್ಮನಿವೇದನೆ, ಲೋಕನೀತಿಗಳ ಬಗ್ಗೆ ಅನೇಕ ಕೀರ್ತನೆಗಳಿವೆ. ಕ್ಷೇತ್ರಗಳ ಬಗ್ಗೆ ನದಿನದಗಳ ಬಗ್ಗೆ ಸಾಕಷ್ಟು ಕೀರ್ತನೆಗಳನ್ನು ರಚಿಸಿದ ಹರಿದಾಸರು ಹೆಚ್ಚು ಜನ ಇಲ್ಲವೆಂದರೆ ತಪ್ಪಾಗದು. ಒಟ್ಟಿನಲ್ಲಿ ಶಾಸ್ತ್ರಜ್ಞಾನ ಸಾಹಿತ್ಯಮಾಧುರ್ಯ ಲೋಕಾನುಭವ ಮುಂತಾದವುಗಳ ಸಂಗಮಕ್ಷೇತ್ರ ವಿಜಯದಾಸರ ಕೀರ್ತನೆಗಳು.

ವಿಜಯದಾಸರು ೨೫೦೦೦ ಪದಗಳನ್ನು ರಚಿಸಿದ್ದರೂ ಈಗ ಉಪಲಬ್ಧವಿರುವ ಅವರ ಕೀರ್ತನೆಗಳು ಎಲ್ಲಾ ಸೇರಿದರೂ ೨೦೦೦ ಸಹ ಆಗುವುದಿಲ್ಲ. ಲಭ್ಯವಿರುವ ಸಾಹಿತ್ಯವೂ ಸಮಗ್ರವಾಗಿ ಒಂದೆಡೆ ಸಿಗುವುದಿಲ್ಲ. ಈ ದೆಸೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರು ಸಮಗ್ರ ದಾಸವಾಙ್ಮಯವನ್ನು ಪ್ರಕಟಿಸುವ ಕಾರ್ಯವನ್ನು ಕೈಗೆತ್ತಿಕೊಂಡಿರುವುದು ಶ್ಲಾಘನೀಯವೇ ಸರಿ. ದಾಸಸಾಹಿತ್ಯದ ಪ್ರಭಾವ ೨೦ನೇ ಶತಮಾನದಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಮೇಲೂ ಪ್ರಭಾವ ಬೀರಿ ಹರಿದಾಸೇತರರೂ ಕೀರ್ತನ ಸಾಹಿತ್ಯ ರಚಿಸಿರುವುದು ಗಮನಾರ್ಹ ಸಂಗತಿಯಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಕೀರ್ತನಸಾಹಿತ್ಯದ ಮತ್ತು ಸುಳಾದಿಗಳ ಹಾಗೂ ಸಂಕ್ಷಿಪ್ತ ರಚನೆಗಳಾದ ಉಗಾಭೋಗ ಮತ್ತು ಇತರ ಸಾಹಿತ್ಯ ಪ್ರಕಾರಗಳಲ್ಲಿ ಕಂಡುಬರುವ ಗೇಯಗುಣ, ಸಾಹಿತ್ಯದ ಸೊಗಸು, ಭಾಷಾವೈಖರಿ, ಛಂದೋರಚನೆ, ಲಯವಿನ್ಯಾಸ ಇತ್ಯಾದಿ ಅಂಶಗಳು ಇತರರ ಮನಸೆಳೆದಿವೆ. ಇನ್ನು ವಸ್ತುವಿನ ದೃಷ್ಟಿಯಲ್ಲಿ ಆತ್ಮನಿವೇದನೆ ಲೋಕನೀತಿ, ಹರಿಸ್ತುತಿ ಮೊದಲಾದವು ಸಾರ್ವಕಾಲಿಕ ಅಂಶಗಳನ್ನು ಒಳಗೊಂಡಿವೆ. ಹೊಸಗನ್ನಡ ಕವಿಗಳ ಕವಿತೆಗಳಲ್ಲಿ ಹೊಸವೇಷದಲ್ಲಿ ಕೀರ್ತನ ಸಾಹಿತ್ಯ ಮೂಡಿ ಬಂದಿರುವುದು ಚಿಕಿತ್ಸಕ ಬುದ್ಧಿಗೆ ಥಟ್ಟನೆ ಹೊಳೆಯುತ್ತದೆ. ಡಿವಿಜಿ, ಬೇಂದ್ರೆ, ಕುವೆಂಪು, ಪುತಿನ, ಮಾಸ್ತಿ, ಕೆಎಸ್‌ನ, ವಿಸೀ, ಎಕ್ಕುಂಡಿ ಮೊದಲಾದವರ ಕವಿತಾರಚನೆಗಳು ಇದಕ್ಕೆ ನಿದರ್ಶನಗಳನ್ನು ನೀಡುತ್ತವೆ.

ದಾಸಸಾಹಿತ್ಯದಲ್ಲಿ ಕೀರ್ತನೆ, ಉಗಾಭೋಗ, ಸುಳಾದಿ ದಂಡಕ ಸಾಂಗತ್ಯ ರಗಳೆ, ದ್ವಿಪದಿ, ತ್ರಿಪದಿ ಮತ್ತು ಇತರ ಜಾನಪದ ಪ್ರಕಾರಗಳೂ ಸಂಗೀತಕ್ಕೆ ಅಳವಡುವ ಛಂದೋರಚನೆಗಳೂ ಕಂಡು ಬಂದರೂ ಕೀರ್ತನೆಗಳದೇ

ಸಂಖ್ಯೆಯಲ್ಲಿ ಮೇಲುಗೈ ಎನ್ನಬಹುದು. ಎಲ್ಲ ಹರಿದಾಸರೂ ಉಳಿದ ಸಾಹಿತ್ಯ ಪ್ರಕಾರಗಳನ್ನು ರಚಿಸಿರಲಿ ಬಿಡಲಿ ಕೀರ್ತನೆಗಳನ್ನು ತಪ್ಪದೆ ರಚಿಸಿದ್ದಾರೆ. ಕೀರ್ತನೆಯ ಪ್ರಭಾವ ಎಷ್ಟೆಂದರೆ ದಾಸಸಾಹಿತ್ಯವೆಂದರೆ ಕೀರ್ತನೆ ಎಂಬಷ್ಟರ ಮಟ್ಟಿಗೆ ಆಗಿದೆ ಮತ್ತು ವಿವಿಧ ಬಗೆಯ ಛಂದೋರಚನಾ ವೈವಿಧ್ಯಗಳನ್ನು ಕೀರ್ತನೆಗಳೆಂದೇ ಕರೆಯುವ ಪರಿಪಾಠವನ್ನು ಇಲ್ಲಿ ಕಾಣಬಹುದಾಗಿದೆ.

ವಿಜಯದಾಸರ ಕೀರ್ತನೆಗಳಲ್ಲಿ ಸಾಮಾನ್ಯವಾಗಿ ೩ ಅಥವಾ ೫ ನುಡಿಗಳನ್ನು ಕಾಣುತ್ತೇವೆ. ಆದರೆ ಕೆಲವು ಕೀರ್ತನೆಗಳು ದೀರ್ಘಕೀರ್ತನೆ ಇಲ್ಲವೆ ನೀಳ್ಗವಿತೆಗಳಂತೆ ಇವೆ. ಇವು ವಾರ್ಧಕ ಷಟ್ಪದಿಯಂತಹ ಛಂದಸ್ಸಿನಲ್ಲಿ ರಚಿತವಾಗಿದ್ದರೂ ಹಾಡಲು ಬರುವ ಉದಯರಾಗದಲ್ಲಿವೆ. ಇಂಥ ಹಲವು ರಚನೆಗಳ ಪೈಕಿ ಶ್ರೀ ತುಳಸೀ ಸ್ತೋತ್ರವೂ ಒಂದು. ಹರಿದಾಸರಲ್ಲಿ ತುಳಸಿಗೆ ಮಹತ್ವವಿದೆ. ಹರಿದಾಸರ ಅಲಂಕಾರಗಳಲ್ಲಿ ತುಳಸಿಯೂ ಒಂದು. ತುಳಸಿಯನ್ನು ಕುರಿತ ರಚನೆಗಳು ದಾಸಸಾಹಿತ್ಯದಲ್ಲಿ ಸಾಕಷ್ಟಿವೆ. ಶ್ರೀ ಜಗನ್ನಾಥದಾಸರ ತತ್ವಸುವ್ವಾಲಿಯಲ್ಲಿಯ ತುಳಸಿ ಸ್ತೋತ್ರ ಪ್ರಕರಣ, ಪ್ರಾಣೇಶವಿಠಲರ ಶ್ರೀ ತುಳಸೀ ಸ್ತೋತ್ರ, ಪುರಂದರದಾಸರ ಕೀರ್ತನೆ (ಎಲ್ಲಿ ತುಳಸಿಯ ವನವು) ಗಳೇ ಅಲ್ಲದೆ ತಂದೆ ವೆಂಕಟೇಶವಿಠಲ ಮೊದಲಾದ ಅನೇಕ ಹರಿದಾಸರು ತುಳಸಿಯನ್ನು ಕುರಿತು ಕೀರ್ತನೆ ರಚಿಸಿದ್ದಾರೆ. ಈ ಪೈಕಿ ವಿಜಯದಾಸರ ಕೀರ್ತನೆ ಪ್ರಸಿದ್ಧವಾದುದು. ದೀರ್ಘವಾದುದು. ಇದರಲ್ಲಿ ತುಳಸೀದೇವಿಯ ಮಹಿಮಾತಿಶಯಗಳ ಜೊತೆಗೆ ತುಳಸಿಯನ್ನು ಹೇಗೆ ಆರಾಧಿಸಬೇಕು, ಸೇವಿಸಬೇಕು ಎಂಬ ವಿಷಯಗಳನ್ನು ಹೇಳಿರುವ ರೀತಿ ಗಮನಿಸುವಂಥದ್ದು. ಇಂದೂ ಅದೇ ಆಚಾರಸಂಹಿತೆ ಬಳಕೆಯಲ್ಲಿರುವುದನ್ನು ಕಾಣಬಹುದು. ಹರಿದಾಸರು ಸದಾಚಾರಕ್ಕೆ ಸಂಪ್ರದಾಯಕ್ಕೆ ಕಟ್ಟುಬಿದ್ದವರು ಎಂಬುದನ್ನು ಇದು ತಿಳಿಸುತ್ತದೆ. ತುಳಸಿಯ ಮಹತ್ವ ಮತ್ತು ಅಗತ್ಯ ಎಷ್ಟೆಂದರೆ ದಳವಿದ್ದರೇ ಒಳಿತು ಇಲ್ಲದಿದ್ದರೆ ಕಾಷ್ಠ, ಎಲೆ, ಮೃತ್ತಿಕೆಗಳಿಂದ ಪೂಜೆ ಮಾಡಲುಬಹುದು. ಅದೂ ಸಾಧ್ಯವಿಲ್ಲದಾಗ ತುಳಸಿ ನಿರ್ಮಾಲ್ಯವಾದರೂ ತ್ರಿವಾರದಲಿ ತೊಳೆತೊಳೆದು ಏರಿಸಲುಬಹುದು ಎನ್ನುತ್ತಾರೆ.

ಹೀಗೆ ಅನೇಕ ಬಗೆಯ ಆಚರಣೆಗಳು ದೇವತಾಸ್ತುತಿಗಳಲ್ಲಿ ಕಂಡುಬರುವುದು ವಿಜಯದಾಸರ ಕೀರ್ತನೆಗಳ ವಿಶೇಷಗಳಲ್ಲಿ ಒಂದಾಗಿದೆ.

ಶ್ರೀ ರಾಘವೇಂದ್ರಸ್ವಾಮಿಗಳು ದ್ವಿತೀಯ ಘಟ್ಟದ ದಾಸ ಸಾಹಿತ್ಯದ ಕೇಂದ್ರ ಬಿಂದು. ವಿಜಯದಾಸರಿಂದ ಮೊದಲ್ಗೊಂಡು ಇಂದಿನವರೆಗೆ ಅವರನ್ನು ಸ್ಮರಿಸದಿರುವ ಹರಿದಾಸರೇ ಇಲ್ಲವೆಂದರೆ ತಪ್ಪಲ್ಲ. ಮಾಧ್ವಯತಿಗಳಲ್ಲಿ ಇವರನ್ನು ಕುರಿತು ೩೫೦ಕ್ಕೂ ಹೆಚ್ಚು ಕೀರ್ತನೆಗಳು ರಚಿತವಾಗಿವೆ. ಹರಿದಾಸರು ಇನ್ನಾವ ಯತಿವರೇಣ್ಯರನ್ನು ಕುರಿತೂ ಇಷ್ಟೊಂದು ಸಂಖ್ಯೆಯಲ್ಲಿ ಕೀರ್ತನೆಗಳನ್ನು ರಚಿಸಿಲ್ಲ. ವಿಜಯದಾಸರು ರಾಘವೇಂದ್ರಸ್ವಾಮಿಗಳನ್ನು ಕುರಿತು ೬ ಹಾಡುಗಳನ್ನು ಹಾಡಿದ್ದಾರೆ. ಈ ಕೀರ್ತನೆಗಳಲ್ಲಿ ರಾಘವೇಂದ್ರರ ಗುಣಗಾನದ ಜತೆಗೆ ಅವರ ಮಂತ್ರಾಲಯದ ಮಹಿಮೆಯನ್ನೂ ಹೊಗಳಿದ್ದಾರೆ. 'ಯತಿಗಳ ಶಿರೋರನ್ನ ಯೋಗಸಂಪನ್ನ ಕ್ಷಿತಿಯೊಳಗೆ ನಿನಗೆ ಸರಿಗಾಣೆನೋ' ಎಂದಿದ್ದಾರೆ. ಮಂತ್ರಾಲಯವನ್ನು ಕುರಿತು "ಇಲ್ಲಿ ದಿನದಿನಕತಿಶಯವೆ ಆಗುವುದು ಭೂಸುರತತಿಗೆ ಭೋಜನ ಕಥಾಶ್ರವಣ ಭಾರತ ಪುಣ್ಯಗಳಿಂದೊಪ್ಪುತ ಕ್ಷಿತಿಯೊಳು ಮಂತ್ರಾಲಯ ಗ್ರಾಮಕೆ ಪ್ರತಿಯು ಇಲ್ಲವೆಂದೆನಿಸಿಕೊಂಬುದು" ಎಂದು ಸಾರಿದ್ದಾರೆ.

ಹರಿದಾಸ ಸಾಹಿತ್ಯದಲ್ಲಿ ನಿಂದಾಸ್ತುತಿ ಒಂದು ವಿಶಿಷ್ಟ ಪ್ರಕಾರ. ನಿಂದಾಸ್ತುತಿ ಎಂದರೆ ನಿಂದಿಸಿರುವ ಮಾತುಗಳನ್ನೊಳಗೊಂಡ ಸ್ತೋತ್ರಸಾಹಿತ್ಯ. ನಿಂದೆ, ಸ್ತೋತ್ರ ಇವೆರಡೂ ವಿರುದ್ಧ ಶಬ್ದಗಳೇ. ಆದರೆ ನಿಂದಿಸಿದರೂ, ಗೌರವಕ್ಕೆ ಕುಂದು ತಾರದಂತೆ ಕಥೆಯಿಂದ, ವ್ಯಾಜದಿಂದ ರಚಿಸಿರುವ ಸಾಹಿತ್ಯವೆಂದು ಗೋಕುಲನಾಥರು ವಿವರಿಸಿದ್ದಾರೆ. ಹೊರನೋಟಕ್ಕೆ ನಿಂದೆಯಾಗಿ ಕಂಡರೂ ಒಳನೋಟಕ್ಕೆ ಸ್ತುತಿಯಾಗಿರುತ್ತದೆ. ಎಲ್ಲ ಹರಿದಾಸರೂ ನಿಂದಾಸ್ತುತಿ ರಚಿಸಿಲ್ಲ, ರಚಿಸಿರುವವರಲ್ಲಿ ಅಗ್ರಸ್ಥಾನ ಪುರಂದರದಾಸರದು. ವಿಜಯದಾಸರ ೮ ನಿಂದಾಸ್ತುತಿಗಳು ದೊರೆತಿವೆ. ಸಾಮಾನ್ಯವಾಗಿ ದಶಾವತಾರದ ಪದ್ಯಗಳು ನಿಂದಾಸ್ತುತಿಯಲ್ಲಿ ಅಳವಟ್ಟಿವೆ. ಅದರಲ್ಲೂ ಕೃಷ್ಣಾವತಾರವನ್ನು ಕುರಿತವು ಹೆಚ್ಚು. ಕನ್ನಡದಲ್ಲಿ ಕೃಷ್ಣಗೀತೆಗಳು ಅಧಿಕವಾಗಿವೆ. ಆದರೆ ತಿರುಪತಿಯ ಶ್ರೀನಿವಾಸನನ್ನು ಕುರಿತ ಕೀರ್ತನೆಗಳು ಅತ್ಯಧಿಕವಾಗಿವೆ.

ವಿಜಯದಾಸರ ನಿಂದಾಸ್ತುತಿಗಳಲ್ಲಿ ಪ್ರಸಿದ್ಧವಾದುದು ತಿರುಪತಿಯ ಯಾತ್ರೆಯಲ್ಲಿ ನೂಕಿಸಿಕೊಂಡ, ದೇವದರುಶನ ದೊರಕದ ಸನ್ನಿವೇಶವೊಂದರಲ್ಲಿ

ರಚಿಸಿದ ಕೀರ್ತನೆಯಾಗಿದೆ. ಜಯಮಂಗಳಂ ನಿತ್ಯ ಶುಭಮಂಗಳಂ ಎಂದು ವ್ಯಂಗ್ಯವಾಗಿ ಪ್ರಾರಂಭಿಸಿ ತೊಳಸದಕ್ಕಿಯನು ತಿನ್ನುವವನು ಕಿಲುಬು ತಳಿಗೆಯಲಿ ಉಂಬುವವನು .... ಎಲ್ಲವನು ಕಸುಕೊಂಬ ಕಳ್ಳದೊರೆಗೆ ಎಂದು ಸ್ತುತಿಸುತ್ತಾ ತಮ್ಮ ಅನುಭವವನ್ನು ವರ್ಣಿಸಿದ್ದಾರೆ. ಹೊನ್ನು ಹಣಗಳ ಕೊಂಡು ತನ್ನ ದರುಶನ ಕೊಡದೆ ಬೆನ್ನೊಡೆಯ ಹೊಯಿಸುವ ಅನ್ಯಾಯಕಾರಿಗೆ ಜಯಮಂಗಳಂ ನಿತ್ಯ ಶುಭಮಂಗಳಂ ಎಂದಿದ್ದಾರೆ. ತಿರುಪತಿಯಲ್ಲಾದ ಇನ್ನೊಂದು ಅನುಭವದ ಹಿನ್ನೆಲೆಯಲ್ಲಿ "ನಿನ್ನದರುಶನಕೆ ಬಂದವನಲ್ಲವೊ ಪುಣ್ಯವಂತರ ದಿವ್ಯಚರಣ ನೋಡಲಿಕೆ ಬಂದೆನೊ" ಎಂದಿದ್ದಾರೆ. ಕೇವಲ ದೇವರನ್ನು ಅಲ್ಲ ಹರಿದಾಸರನ್ನೂ ಟೀಕಿಸಿದ್ದಾರೆ. ವಿಜಯದಾಸರು "ಭಕ್ತರನು ನಂಬದಿರು ಭವದೂರನೆ" ಎಂಬ ಕೀರ್ತನೆಯಲ್ಲಿ "ಪಾದ ಇಡುವನಿತರೊಳು ಕುಳಿತು ಆಮೇಲೆ ಸಂಪಾದಿಸುವ ತನ್ನ ತಕ್ಕಷ್ಟು ಧರಣಿಯನ್ನು" ಎಂದು ವಾಮನಾವತಾರವನ್ನು ಹರಿದಾಸರ ಮನೋಭಾವವನ್ನು ಶ್ಲೇಷೆಯಲ್ಲಿ ಚಿತ್ರಿಸಿದ್ದಾರೆ. 'ಪರದೇಶಿ ನೀನು ಸ್ವದೇಶಿ ನಾನು' ಕೀರ್ತನೆಯಲ್ಲಿ ತರ್ಕವನ್ನು ಚೆನ್ನಾಗಿ ತಂದಿದ್ದಾರೆ.

ಹರಿದಾಸರಿಗೆ ಎಲ್ಲ ಪುಣ್ಯಕ್ಷೇತ್ರಗಳು ಆದರಣೀಯವೇ ಆದರೂ ಪಂಚ ಕ್ಷೇತ್ರಗಳು ಮಾತ್ರ ವಿಶೇಷ ಆದರಕ್ಕೆ ಪಾತ್ರವಾಗಿವೆ. ಅವುಗಳೆಂದರೆ ಮಂತ್ರಾಲಯ, ಪಂಡರಾಪುರ, ಉಡುಪಿ, ತಿರುಪತಿ, ಬದರಿ. ಈ ಪೈಕಿ ಉಡುಪಿ ಕೇಂದ್ರಸ್ಥಾನ. ಈ ಕ್ಷೇತ್ರಗಳಲ್ಲಿ ಒಂದೊಂದಕ್ಕೆ ಒಂದೊಂದು ವಿಶೇಷತೆ ಇದೆ. ತಿರುಪತಿ ತಿಮ್ಮಪ್ಪ ಕಾಂಚನ ಬ್ರಹ್ಮ, ಪಂಡರಾಪುರದ ವಿಠಲ ನಾದಬ್ರಹ್ಮ, ಬದರಿನಾಥ ಜ್ಞಾನಬ್ರಹ್ಮ, ಮಂತ್ರಾಲಯದ ರಾಘವೇಂದ್ರರು ಯೋಗಿಬ್ರಹ್ಮ ಅಂತೆಯೇ ಉಡುಪಿಯ ಶ್ರೀಕೃಷ್ಣ ಅನ್ನಬ್ರಹ್ಮ ಎಂದು ಭಕ್ತಾದಿಗಳು ಭಾವಿಸುತ್ತಾರೆ.

ಉಡುಪಿ ಎಂದೊಡನೆ ನೆನಪಾಗುವುದು ಆಚಾರ್ಯ ಮಧ್ವರು, ಶ್ರೀ ಕೃಷ್ಣಮಠಪರ್ಯಾಯ, ಕನಕನಕಿಂಡಿ, ಹರಿದಾಸರ ಕೀರ್ತನೆ. ಎಲ್ಲ ಪ್ರಸಿದ್ಧ ಹರಿದಾಸರಿಗೂ ಪೂಜ್ಯವಾದುದು ಪ್ರಿಯವಾದುದು ಉಡುಪಿಕ್ಷೇತ್ರ ಮತ್ತು ಉಡುಪಿ ಕೃಷ್ಣ ಎಂದರೆ ಅತಿಶಯೋಕ್ತಿ ಅಲ್ಲ. ಉಡುಪಿ ಕೃಷ್ಣನನ್ನು ಕುರಿತು ರಚಿತವಾದ ಇವರ ಕೃತಿಗಳು ಸುಮಾರು ೧೦೩ ಇದ್ದು ಅವುಗಳಲ್ಲಿ ಸಿಂಹಪಾಲು (೯೨) ಕೀರ್ತನೆಗಳೇ ಆಗಿವೆ. ಈ ಕೀರ್ತನೆಗಳಲ್ಲಿ ಉಡುಪಿಯ ಕ್ಷೇತ್ರಮಹಿಮೆ ಪರ್ಯಾಯದ

ವಿವರ, ಮಧ್ವಸರೋವರ ಮಹಾತ್ಮೆ ಮೊದಲಾದ ಸಂಗತಿಗಳು ವ್ಯಕ್ತವಾಗಿವೆ. ಉಡುಪಿ ಕೃಷ್ಣನನ್ನು ಕುರಿತು ಅತ್ಯಧಿಕ ಕೀರ್ತನೆಗಳನ್ನು ರಚಿಸಿರುವ ಹಿರಿಯ ಹರಿದಾಸರಲ್ಲಿ ವಾದಿರಾಜರು ಅಗ್ರಗಣ್ಯರು.

ವಿಜಯದಾಸರು ೧೮ ಕೀರ್ತನೆಗಳನ್ನು ಕೆಲವು ಸುಳಾದಿಗಳನ್ನು ಉಡುಪಿಯ ಶ್ರೀ ಕೃಷ್ಣನನ್ನು ಕುರಿತು ರಚಿಸಿದ್ದಾರೆ.

ಕೃತಜ್ಞತೆ

ಪ್ರಕೃತ ಶ್ರೀ ವಿಜಯದಾಸರ ಕೀರ್ತನೆಗಳ ಸಂಪುಟ ಸಾಮಾನ್ಯರಿಗಾಗಿ ಸಿದ್ಧಪಡಿಸಿರುವ ಸಂಗ್ರಹ. ಪಂಡಿತ ಆವೃತ್ತಿ ಅಲ್ಲ. ಪ್ರತಿಯೊಬ್ಬ ದಾಸರ ಸಮಗ್ರ ಕೀರ್ತನಸಾಹಿತ್ಯ ಒಂದೆಡೆ ಸಿಗುವ ಆಶಯದಿಂದ ಪ್ರಕಟವಾಗುತ್ತಿರುವ ಸಂಗ್ರಹವಿದು. ಆದಕಾರಣ ಇಲ್ಲಿ ವಾದಗ್ರಸ್ತ ವಿಷಯಗಳನ್ನು ಚರ್ಚಿಸಿಲ್ಲ. ಪಾಠಾಂತರಗಳನ್ನು ಕೊಟ್ಟಿಲ್ಲ. ಇತರ ದಾಸಕೃತಿಗಳೊಡನೆ ಅಥವಾ ಅನ್ಯ ಸ್ತುತಿಸಾಹಿತ್ಯದೊಡನೆ ತೌಲನಿಕ ಸಮೀಕ್ಷೆ ನಡೆಸಿ ಗುಣಾವಗುಣಗಳ ಮೌಲ್ಯನಿರ್ಣಯಕಾರ್ಯಕ್ಕೆ ಕೈಹಾಕಿಲ್ಲ. ಜನಸಾಮಾನ್ಯರಿಗೆ ಓದಲು ಸುಲಭವಾಗಿ ಅಗ್ಗದ ದರದಲ್ಲಿ ಒಂದೆಡೆ ಕೀರ್ತನೆಗಳು ಸಿಗಬೇಕು ಎಂದು ಪ್ರಯತ್ನಿಸಿದೆ. ಅವರಿಗೆ ಅರ್ಥೈಸಿಕೊಳ್ಳಲು ನೆರವಾಗುವಂತೆ ಕಠಿಣಶಬ್ದಾರ್ಥ, ಟಿಪ್ಪಣಿಗಳನ್ನು ಕೊಟ್ಟಿದೆ. ಕೀರ್ತನೆಗಳ ಹಿನ್ನೆಲೆಯನ್ನು ದಾಸರ ಜೀವನ ಪರಿಚಯ ಸಾಧನೆಗಳನ್ನು ಪ್ರಾರಂಭದ ಪ್ರಸ್ತಾವನೆಯಲ್ಲಿ ನೀಡಲಾಗಿದೆ. ಅಂಕಿತಪಲ್ಲಟವಾದ ಕೀರ್ತನೆಗಳು ಇತರರ ಹೆಸರಿನಲ್ಲಿ ಸಿಕ್ಕಾಗ ಅದನ್ನು ಉಲ್ಲೇಖಿಸಿದೆ. ಪಾಠಾಂತರಗಳಲ್ಲಿ ಸೂಕ್ತವಾದ ಪಾಠವನ್ನು ಆಯ್ಕೆಮಾಡಿ ಅದನ್ನು ಮಾತ್ರ ಪಠ್ಯಭಾಗದಲ್ಲಿ ಕೊಟ್ಟಿದೆ. ದಾಸಸಾಹಿತ್ಯವು ತನ್ನ ಕಾಲದ ಬದುಕನ್ನು ಒಳಗೊಂಡ ಸಾಹಿತ್ಯ. ಹೀಗಾಗಿ ಆ ಕಾಲದ ಪದಗಳ ಅರ್ಥ ವಿವರಣೆಗಳು ಎಷ್ಟೋ ಕಡೆ ಬಳಕೆಯಲ್ಲಿ ಇಲ್ಲದೆ ಗ್ರಂಥಸ್ಥವಾಗದೆ ಮರೆಯಾಗಿವೆ. ಹೀಗಾಗಿ ಕೆಲವು ಪದ್ಯಗಳನ್ನು ಅರ್ಥೈಸುವುದೂ ಕೆಲವು ಪದಗಳಿಗೆ ಅರ್ಥ ನೀಡುವುದು ಸಾಧ್ಯವಾಗದೆ ಅವುಗಳನ್ನು ಪ್ರಶ್ನಾರ್ಥಕ ಚಿನ್ಹೆಯಿಂದ ಗುರುತಿಸಿದೆ. ತಿಳಿದವರು ಆ ಬಗ್ಗೆ ಬೆಳಕು ತೋರಿಸಬೇಕು.

ವಿಜಯದಾಸರ ಜೀವನವೃತ್ತಾಂತದ ಬಗೆಗೆ ವಿಸ್ತಾರವಾಗಿ ಗ್ರಂಥಗಳು ಪ್ರಕಟವಾಗಿವೆ. ಹಲವಾರು ವಿಚಾರಗಳಲ್ಲಿ ವಿವರಣೆಗಳು ಭಿನ್ನವಾಗಿವೆ. ಅವುಗಳನ್ನಿಲ್ಲಿ ಚರ್ಚಿಸಲು ಹೋಗಿಲ್ಲ. ಸರ್ವಸಮ್ಮತ ಸಂಗತಿಗಳನ್ನು ಆಧರಿಸಿ ಸರಳವಾದ ರೀತಿಯಲ್ಲಿ ದಾಸರ ಪರಿಚಯ, ಸಾಧನೆಯನ್ನು ನಿರೂಪಿಸಲಾಗಿದೆ.

'ಶ್ರೀವಿಜಯದಾಸರ ಕೀರ್ತನೆಗಳು' ಎಂಬ ಈ ಸಂಪುಟದಲ್ಲಿ ವಿವಿಧ ಮೂಲಗಳಿಂದ ೫೪೧ ಕೀರ್ತನೆಗಳನ್ನು ಸಂಗ್ರಹಿಸಿದೆ. ಬಹುಶಃ ಮೊದಲಬಾರಿಗೆ ಕನ್ನಡದಲ್ಲಿ ಈ ಪ್ರಮಾಣದಲ್ಲಿ ವಿಜಯದಾಸರ ಕೀರ್ತನೆಗಳು ಒತ್ತಟ್ಟಿಗೆ ಪ್ರಕಟವಾಗುತ್ತಿವೆ. ಮೊದಲ ಬಾರಿಗೆ ಗಣನೀಯ ಪ್ರಮಾಣದಲ್ಲಿ ಸಂಗ್ರಹಿಸಿ ಪ್ರಕಟಿಸಿದವರು ಗೊರಬಾಳರು ಮತ್ತು ಪಾವಂಜೆಯವರು ಎನ್ನಬಹುದು. ಆನಂತರ ಹಲವಾರು ಮಂದಿ ತಂತಮ್ಮ ಅಭಿರುಚಿ ಅಗತ್ಯಗಳಿಗೆ ತಕ್ಕಂತೆ ಸಂಗ್ರಹಗಳನ್ನು ತಂದಿದ್ದಾರೆ. ಶ್ರೀ ವಿಜಯದಾಸರ ಕೀರ್ತನೆಗಳು ಎರಡು ಬಗೆಗಳಲ್ಲಿ ಪ್ರಕಟವಾಗಿವೆ. ಮೊದಲನೆಯದಾಗಿ ವಿಜಯದಾಸರ ಕೀರ್ತನೆಗಳನ್ನೇ ಪ್ರತ್ಯೇಕವಾಗಿ ಪ್ರಕಟಿಸಿರುವ ಪ್ರಕಟನೆಗಳು. ಎರಡನೆಯದು ಇತರ ಹರಿದಾಸರ ಪದಗಳೊಂದಿಗೆ ಪ್ರಕಟಿಸಿರುವ ಸಂಗ್ರಹಗಳು. ಇನ್ನು ವಿಜಯದಾಸರನ್ನು ಕುರಿತ ಪರಿಚಯ ವಿಮರ್ಶಾಗ್ರಂಥಗಳಲ್ಲಿ ಉದಾಹರಿಸಿರುವ ಕೀರ್ತನೆಗಳು ಗಮನಾರ್ಹವಾಗಿವೆ. ಈ ಮೂರು ಬಗೆಗಳಲ್ಲಿ ಅಲ್ಲದೆ ಪ್ರಕಟಿತ ಹಾಗೂ ಅಪ್ರಕಟಿತ ಭಜನೆಸಂಗ್ರಹದ ಪುಸ್ತಕಗಳಲ್ಲಿ ವಿಜಯದಾಸರ ಕೀರ್ತನೆಗಳು ಸಿಗುತ್ತವೆ. ಈ ಎಲ್ಲ ಮೂಲಗಳಿಂದಲೂ ಸಾಧ್ಯವಾದಷ್ಟು ಕೀರ್ತನೆಗಳನ್ನು ಮತ್ತು ಟಿಪ್ಪಣಿಗಳನ್ನು ಇಲ್ಲಿ ಸಂಗ್ರಹಿಸಿದೆ. ಈ ಎಲ್ಲ ಸಂಗ್ರಹಕಾರರಿಗೂ ನಾನು ಋಣಿಯಾಗಿದ್ದೇನೆ. ಇನ್ನು ಪ್ರಕಟವಾಗದೆ ಕೈಯಲ್ಲಿ ಬರೆದಿಟ್ಟುಕೊಂಡ ಪುಸ್ತಕಗಳಲ್ಲಿ ಮತ್ತು ಕಂಠಸ್ಥಗೊಂಡಿರುವ ಕೀರ್ತನೆಗಳು ಸಾಕಷ್ಟು ಇವೆ ಎನ್ನಿಸುತ್ತದೆ. ಅವುಗಳನ್ನು ಸಂಬಂಧಪಟ್ಟವರು ಉದಾರಮನಸ್ಕರಾಗಿ ಪ್ರಕಟಿಸಲು ಮುಂದೆ ಬರಬೇಕಾಗಿದೆ. ಭಕ್ತಾದಿಗಳು ಈ ರೀತಿ ದಾಸಸಾಹಿತ್ಯ ಪ್ರಕಟಿಸಲು ಅಥವಾ ಪ್ರಕಟಿಸಿರುವವರಿಗೆ ನೀಡಲು ಮುಂದೆ ಬರುವಂತೆ ಮಾಡುವಲ್ಲಿ ಮಠಾಧಿಪತಿಗಳು ಪ್ರಮುಖ ಪಾತ್ರ ವಹಿಸಬೇಕಿದೆ ಎಂದರೆ ತಪ್ಪಾಗದು.

ಈ ಸಂಗ್ರಹವನ್ನು ಸಿದ್ಧಪಡಿಸುವಾಗ ಹಲವರು ಹಲವು ವಿಧಗಳಲ್ಲಿ ನೆರವಾಗಿದ್ದಾರೆ. ಕೀರ್ತನೆಗಳನ್ನು ಅಚ್ಚಿನ ಗ್ರಂಥಗಳಿಂದ ಪ್ರತಿಮಾಡಿಕೊಡುವ ಕಾರ್ಯದಲ್ಲಿ ಡಾ. ಪಿ. ಶಾರದಾ, ಎಂ ಆರ್. ಲಕ್ಷ್ಮೀದೇವಿ, ಹಾ.ಲ. ಮಂಜುನಾಥ್ ನೆರವಾಗಿದ್ದಾರೆ. ಹಲವಾರು ಮಾಹಿತಿಗಳನ್ನು ಪುಸ್ತಕಗಳನ್ನು ಒದಗಿಸುವಲ್ಲಿ ಶ್ರೀ ಎಸ್. ಜಿ. ರಾ ಮಚಂದ್ರರಾವ್, ಡಾ. ಅನಂತ ಪದ್ಮನಾಭರಾವ್, ಡಾ. ಕೆ. ಗೋಕುಲನಾಥ್, ಡಾ. ಶ್ರೀನಿವಾಸ ಹಾವನೂರ ಸಹಾಯಮಾಡಿದ್ದಾರೆ. ಡಾ. ಟಿ. ಎನ್. ನಾಗರತ್ನ ಅವರು ಸಂಪುಟವನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡಿರುವರಲ್ಲದೆ ಕಾಲಕಾಲಕ್ಕೆ ಕಾರ್ಯವನ್ನು ಶೀಘ್ರವಾಗಿ ಮುಂದುವರೆಸಲು ಎಚ್ಚರಿಸಿದ್ದಾರೆ. ಪಾವಂಜೆ ಅವರ ಅಲಭ್ಯ ಸಂಗ್ರಹವೊಂದನ್ನು ನೆರಳಚ್ಚು ಪ್ರತಿ ಮಾಡಿಸಿ ನೀಡಿದ್ದಾರೆ. ಇವರೆಲ್ಲರಿಗೂ ನಾನು ಋಣಿಯಾಗಿದ್ದೇನೆ. ಈ ಸಂಪುಟವನ್ನು ಸಂಪಾದಿಸಲು ಅವಕಾಶ ಮಾಡಿಕೊಟ್ಟ ಸಮಗ್ರ ದಾಸ ವಾಙ್ಮಯ ಪ್ರಕಟಣಾ ಸಮಿತಿ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರಿಗೂ ನಾನು ಕೃತಜ್ಞನಾಗಿದ್ದೇನೆ. ದಾಸ ಸಾಹಿತ್ಯದ ಬಗ್ಗೆ ಸದಾ ಕಾರ್ಯನಿರತರಾಗಿರುತ್ತಾ, ಆಸಕ್ತರಿಗೆ ತಮ್ಮ ಕೈಲಾದ ಎಲ್ಲ ನೆರವನ್ನು ಬೇಸರ ಮಾಡಿಕೊಳ್ಳದೆ ನೀಡುತ್ತಿರುವ ನಲ್ಮೆಯ ಡಾ. ಶ್ರೀನಿವಾಸ ಹಾವನೂರ, ಡಾ. ಟಿ ಎನ್ ನಾಗರತ್ನ, ಮತ್ತು ಡಾ. ಅನಂತಪದ್ಮನಾಭರಾವ್ ಅವರನ್ನು ವಿಶೇಷವಾಗಿ ನೆನೆಯುತ್ತೇನೆ.

ವಿಜಯದಾಸರ ಕೀರ್ತನೆಗಳ ಸಂಪುಟ ಹರಿದಾಸಸಾಹಿತ್ಯ ಪ್ರೇಮಿಗಳಿಗೆ ಕೀರ್ತನಪ್ರಿಯರಿಗೆ ಉಪಯುಕ್ತವಾದೀತೆಂದು ನಂಬಿದ್ದೇನೆ. ಸಹೃದಯರು ನೀಡುವ ಎಲ್ಲ ಸಲಹೆ ಸೂಚನೆಗಳಿಗೂ ಸ್ವಾಗತವಿದೆ.

ಪ್ರೊ. ಜಿ. ಅಶ್ವತ್ಥನಾರಾಯಣ

ಸಂಪಾದಕರು

ಕೀರ್ತನೆಗಳ ಕ್ರಮಸೂಚಿ

ಭಾಗ-೧ (ಕೀರ್ತನೆ ೧-೩೦೯)

ಕೀರ್ತನೆ ಸಂಖ್ಯೆ	ಕೀರ್ತನೆಯ ಮೊದಲ ಸಾಲು	ಪುಟ ಸಂಖ್ಯೆ

(ಆ) ಶ್ರೀ ವೆಂಕಟೇಶ್ವರ

(ಇ) ಶ್ರೀನರಸಿಂಹ

(ಈ) ಶ್ರೀ ರಾಮ

(ಉ) ಶ್ರೀ ಕೃಷ್ಣ

ವಿಜಯದಾಸರ ಕೀರ್ತನೆಗಳು

ಭಾಗ–೧

ಕೀರ್ತನೆ ೧ ರಿಂದ ೩೦೯ ರವರೆಗೆ

(ಕೀರ್ತನೆ ೩೧೦ ರಿಂದ ೫೪೦ ಕ್ಕೆ ಭಾಗ–೨ ನೋಡಿ)

ಅನುಬಂಧಗಳು

೧. ಕಠಿಣಶಬ್ದಗಳ ಅರ್ಥ
೨. ಟಿಪ್ಪಣಿಗಳು
೩. ಅಂಕಿತನಾಮಸೂಚಿ
೪. ಕೀರ್ತನೆಗಳ ಅಕಾರಾದಿ

ಅನುಬಂಧ-೧

ಕಠಿಣ ಶಬ್ದಗಳ ಅರ್ಥ

ಅಂಗವಟಿ	ಅತಿಚೆಲುವೆ
ಅಂಘ್ರಣಿ	ಪಾದಧೂಳು
ಅರ್ಕ	ಸೂರ್ಯ
ಅಕ್ಷಯ ಮೆರೆ	ಅಕ್ಷಯ ವಸ್ತ್ರ
ಅವಸರಮನಿಯೊಳಗೆ	ಅಡಿಗೆ ಮನೆಯೊಳಗೆ
ಅಷ್ಟ ಸಂಪನ್ನೆ	ಅಷ್ಟಗುಣಯುತೆ
ಅಸುರೆಯ ಕೂಡಿದ	ಹಿಡಂಬಿಯ ವರಿಸಿದ ಭೀಮ
ಅಳವಲ್ಲ	ಸಾಧ್ಯವಲ್ಲ
ಆಗಾಮಿ	ಮುಂದಿನಜನ್ಮದಲ್ಲಿ ಅನುಭವಿಸುವ ಕರ್ಮಗಳು
ಇಂದುರವಿನೇತ್ರ	ಚಂದ್ರ, ಸೂರ್ಯರೇ ಕಣ್ಣಾಗಿ ಉಳ್ಳವನು
ಇಮ್ಮಹಿಷೇರ ಕೂಡಿ	ಇಬ್ಬರು ರಾಣಿಯರ ಸಹಿತ
ಉಮೆಯ ಪತಿ	ಶಿವ
ಉರಗಗಿರಿ	ಶೇಷಾಚಲ
ಉರುಹ	ನೀಡು
ಊರ್ಣಸ್ರು ವಿಚಿತ ವಸನ	ಚಿತ್ರಾಲಂಕಾರಗಳಿಂದ ಕೂಡಿದ ಉಣ್ಣೆ ಶಾಲು
ಎರಡೆರಡು ಲಕ್ಷದಿಪ್ಪತ್ತೈದು ಸಾವಿರ	೪ ಲಕ್ಷ ೨೫೦೦೦
ಎಸು	ಎಷ್ಟು
ಏಸುಬಗೆ	ನಾನಾ ರೀತಿಯಲ್ಲಿ
ಕಕ್ಕಡ (ಕರ್ಕಡೆ)	ದೀವಟಿಗೆ
ಕಣ್ಣಿಲ್ಲದವಳು	ಅಂಜನಾದೇವಿ
ಕುಂದ್ಯರನು	ದುಃಖಿಗಳನ್ನು
ಕುವರತನು	ಹುಡುಗತನದ ರೂಪುಳ್ಳವನು
ಕೇಸಕ್ಕಿ	ಕೆಂಪು ಅಕ್ಕಿ
ಕೈಕಾಣಿಕೆ	ಉಡುಗೊರೆ
ಕ್ಷೀರವಾರಿಧಿ ಕನ್ನಿಕೆ	ಶ್ರೀ ಲಕ್ಷ್ಮಿ, ಹಾಲಿನ ಕಡಲಲ್ಲಿ ಅವತರಿಸಿದವಳು
ಕ್ಷೀರಾಂಬುಧಿ	ಹಾಲಿನ ಕಡಲು
ಕ್ಷೋಣಿ	ಪ್ರಪಂಚ
ಗರುವ ರಹಿತ	ವಿನಯ
ಗಿರಿಯೊಡತಿಯಪತಿ	ಕೈಲಾಸ ಪರ್ವತದ ಒಡತಿ ಉಮೆಯ ಪತಿ– ಶಿವ
ಗುರುತಲ್ಪದವನ ಕಾಲದಲ್ಲಿ	ಚಂದ್ರವಂಶದಲ್ಲಿ
ಘಸಣಿ	ಕೋಟಲೆ

ಅ. ಶ್ರೀ ಗಣೇಶಸ್ತುತಿ

೧

ಗಜವದನ ಪಾಲಿಸೊ
ಗಜವದನ ಪಾಲಿಸೊ ಪ

ತ್ರಿಜಗದೊಡೆಯ ಶ್ರೀ ಭುಜಗಭೂಷಣ
ಗಜವದನ ಪಾಲಿಸೊ ಅ ಪ

ಭಕ್ತಿಯೊಳು ಭಜಿಪೆನು ರಕ್ತಾಂಬರಧರ
ಮುಕ್ತಿಪಥವ ತೋರೊ ಶಕ್ತಿ ಸ್ವರೂಪನೇ ೧

ಏಸು ದಿನಕೆ ನಿನ್ನ ವಾಸವ ಪೊಗಳುವೆ
ಲೇಸಪಾಲಿಸೊ ನಿತ್ಯವಾಸವನುತ ೨

ಪೊಡವಿಯೊಳಗೆ ನಿನ್ನ ಬಿಡುವರ್ಯಾರೊ ಎನ್ನ
ಕಡುಹರುಷದಿ ಕಾಯೋ ವಿಜಯ ವಿಠ್ಠಲದಾಸ ೩

೨

ಜಯ ಜಯ ಮೂಷಕಗಮನಾ ಜಯ ಜಯ ಗಜಾನನಾ
ಜಯ ಜಯ ನಾಗಾಭರಣಾ ಜಯ ಏಕದಂತ ಜಯ ಜಯ ಪ

ಮತಿಯ ಕೊಡು ಪಾರ್ವತಿಯ ನಿಜ ತನುಜನೆ
ಬಿಡದೆ ನಿನ್ನನು ನಾನು ನುತಿಸುವೆ ಕ್ಷಿತಿಯೊಳಗೆ
ಶ್ರೀ ಲಕುಮಿ ಪತಿಯ ಕೊಂಡಾಡಿ ಸದ್ಗತಿಯ
ಪಡೆಯುವದಕ್ಕೆ ಸಾರಥಿಯಾಗು ದೇವಾ ೧

ಆಕಾಶದಭಿಮಾನಿ ಅಂಗಜನ ಚಾಪ
ನಿರಾಕರಿಸಿ ಬಿಸುಟ ಲಂಬೋದರನೆ
ಏಕ ಪಿಂಗಾದಿಗಳ ಪ್ರಿಯ ಹಸ್ತಚತುಷ್ಟ
ಲೋಕದೊಳು ಭಜಿಸುವರ ವಿದ್ಯಾದಾ ನಿಧಿಯೆ ೨

ಸೀತಾರಮಣನಿಂದ ಪೂಜಿತನಾಗಿ
ವನಧಿ ತೀರದಲ್ಲಿ ಮೆರೆವ ಗಣೇಶಾ
ಸೇತುಮಾಧವ ವಿಜಯವಿಠ್ಠಲರೇಯನ
ದೂತನು ನೀನೆ ಪಾಶಾಂಕುಶಧರನೆ ೩

೩

ಶರಣು ಗಜಮುಖ ಆಖುವಾಹನ ಶರಣು ಸುರಗಣ ಸೇವಿತ
ಶರಣು ಸಕಲಾಭೀಷ್ಟದಾಯಕ ಶರಣು ವಿಘ್ನ ವಿನಾಯಕ ೧

ಹೇಮಖಚಿತ ಕಿರೀಟ ಕುಂಡಲ ಕಾಮಿತಾ ಫಲದಾಯಕ
ಅಮಿತ ಸೌಲಭ್ಯ ಪ್ರಬಲ ಶಾಸ್ತ್ರೋದ್ಧಾಮ ವಿದ್ಯಾಶರನಿಧೇ ೨

ಪಾಶ ಮೋದಕ ಪರಶುಧರ ಫಣಿಭೂಷ ಪಾರ್ವತಿನಂದನ
ವಾಸವಾರ್ಚಿತ ವಿಜಯವಿಠ್ಠಲನ ದಾಸ ಭೋ ಗಣನಾಯಕ ೩

೪

ಅಂಜಿಪ ಕ್ರೋಧವ ಬಿಡಿಸೊ ಗುಲಗಂಜಿ ಮಾಧವಾ
ಕಂಜದಳ ಲೋಚನ ಕುಂಜರ ಪರಿಪಾಲಾ ಪ

ಧರ ಸುದರುಶನ ಕೌಮೋದರೆ ಧರ ಸಂಕರುಷಣ
ಪರಮ ಮಂಗಳ ಚತುರ ಹಸ್ತ ಪಂಪಾ
ಪುರಧೀಶ ಶಿವನುತ ಕರುಣಸಾಗರ ದೇವಾ
ಗರುಡಗಮನ ಸುಂದರಧರ ಧರಶಾಯಿ
ಧರಧರವರ್ಣ ಭೂಧರಧರ ಮಹಿಮಾ ೧

ಕೇಶವಾಚ್ಯುತ ಕೃಷ್ಣ ಹೃಷಿಕೇಶ ಮಹಾಪ್ರೀತ
ಲೇಸು ದಕ್ಷಿಣ ವಾರಣಾಸಿಯೆ ಇದು ಸರ್ವ
ದೇಶದೊಳಹುದೆಂದು ದಾಸರಿಗೆ ಉಪದೇಶ ಪೇಳುವ
ದೋಷವ ಕಳೆಯುತ ವಾಸುದೇವ ತುಂಗಾವಾಸ ವಿಲಾಸ ೨

ವಂದನೆ ಮಾಡುವೆ ಹಸ್ತ ಮುಗಿದು
ವಂದನೆ ಬೇಡುವೆ ಎಂದಿಗೆಂದಿಗೆ ಪರರ ಪೊಂದಿಸಿ ಬೇಡುವ
ಮಂದವೆ ಕೊಡದಿರು ಇಂದೆನ್ನ ಬಿಡದಿರು
ಇಂದು ವದನ ಸಿರಿ ವಿಜಯವಿಠ್ಠಲ ಮು
ಕುಂದ ಲಕುಮಿಪತಿ ನಂದನ್ನ ಕಂದಾ ೩

ಆ. ಶ್ರೀಹರಿ ಸಂಕೀರ್ತನೆ

(ದೇವತಾಕಕ್ಷೆ)

(ಅ) ಶ್ರೀಹರಿ

೫

ಅನಂತಗಿರಿ ಯಾತ್ರೆ ಮಾಡಿ ಜನರು
ಅನಂತ ಜನುಮದ ಪಾಪ ಸಂಹರವು ಪ

ಇಲ್ಲಿ ಕುರುರಾಯ ಜನ್ಮಾಂತರದು ಪಾಪ
ನಿಲ್ಲದೆ ಮಾಡಿದಾ ನಡತಿಯಿಂದಾ
ಎಲ್ಲ ಕಾಲದಲಿ ದರಿದ್ರನಾಗಿದ್ದು ಶ್ರೀ
ವಲ್ಲಭನ ಒಲಿಸಿ ಮುದಂಬರೀಷ ನೃಪನಾದಾ ೧

ಚಂಡಶಾಸನನೆಂಬ ನೃಪತಿ ದುರ್ಮತಿಯಲಿ
ಮಂಡಲದೊಳಗಿರಲು ಸರ್ಪ ಕಚ್ಚಿ

ಕಂಡು ಗೃಧ್ರವು ಅವನ ಉಂಗುಷ್ಟ ಭವನಾಶಿ
ಕುಂಡದಲಿ ಬಿಸುಡೆ ದಶರಥ ಭೂಪತಿಯಾದಾ ೨

ಹೇಳಲಳವೆ ಇನ್ನು ಈ ಕ್ಷೇತ್ರದ ಮಹಿಮೆ
ಕೇಳಿದಾಕ್ಷಣ ಮುಕ್ತಿ ಸಿದ್ಧವಕ್ಕೂ
ಶ್ರೀಲೋಲ ನರಸಿಂಹ ವಿಜಯವಿಠ್ಠಲರೇಯೇನ
ವಾಲಗವ ಕೈಕೊಂಡ ಮನುಜಂಗೆ ಬಲು ಸಾಧ್ಯ ೩

೬

ಅನಂತಗಿರಿ ವಾಸ ಕೊಡು ಎನಗೆ ಲೇಸಾ
ಎನ್ನಂತರಂಗದಲ್ಲಿಪ್ಪ ಜಗದಪ್ಪಾ ಪ

ಬಂದೆ ನಿಂದೆ ನಿಂದೆ ತಲೆವಾಗಿ ವಂದೆ
ವಂದನೆ ಮಾಡಿದೆ ಕೃಪೆಮಾಡು ಎಂದೆ
ಕುಂದ್ಯರನು ನೋಡು ಜಗತ್ರಯದ ತಂದೆ
ಹಿಂದೆ ನೊಂದದರಿಂದ ಗತಿಕಾಣೆ ಮುಂದೆ ೧

ಕತ್ತಲೆಯೊಳು ಬಿದ್ದೆ ಸಂಸಾರದಿಂದ
ಸುತ್ತಿದೆ ಪರಿಪರಿ ಒದಗುವ ಬಂಧಾ
ಮೊತ್ತದಲ್ಲಿಗೆ ಸೇರಿಯಿದ್ದದ್ದರಿಂದ
ಚಿತ್ತದಲ್ಲಿ ನಿನ್ನ ಮರೆದೆ ಗೋವಿಂದಾ ೨

ರಕ್ಷಿಸುವುದು ತಾರಕ್ಷ್ಯ ತುರಂಗ
ಅಕ್ಷಯ ಮರೆಕೊಡು ಭವಭಯಭಂಗಾ
ಲಕ್ಷ್ಮೀನಾಯಕ ನೀ ಭಕ್ತಜನ ಸಂಗ
ಮೋಕ್ಷದಾಯಕ ವಿಜಯವಿಠ್ಠಲ ನರಸಿಂಗಾ ೩

೭

ಅಪ್ಪನ ನೋಡಿರೊ ವರಗಳ
ತಪ್ಪದೆ ಬೇಡಿರೋ
ಸರ್ಪನಮೇಲೆ ಉಪ್ಪವಡಿಸಿ
ಮುಪ್ಪು ಇಲ್ಲದೆ ಭಕ್ತರನ ಪೊರೆವಾ ಪ

ಇಂದ್ರ ನೀಲಿದ ರತನೋ ಕಾಂತಿ ಚಂದ್ರಬಿಂಬ ವದನೋ
ಚಂದ್ರಿಕೆಯ ಪೋಲಿಪ ಮುಖವೊ
ಬಲುವಾ ನಂದಗಡಲ ಸುಖವೊ
ಮುಂದಿನ ಬೆಳಸುವ ಮಿಂಚೋ
ತೂಗುವ ಸುಳಿಗುರುಳ ಚುಂಚೊ
ಒಂದೊಂದೊ ದಕ್ಕನಂತಾದ
ಸುಂದರದವತಾರ ಮಂದರಧರನೋ ೧

ಅರಳಿದ ಸಂಪಿಗೆ ತೆನೆಯು ನಾಸಾ ಕೊನೆಯಲ್ಲಿ ಮಣಿಯು
ತರುಳ ಹಾರವೋ ಮುಂದಲೆಯಲ್ಲಿ ಅರಳೆಲೆ ವೈಯಾರವೋ
ಎರಳಿಯ ಗಂಗಳೋ ನೊಸುಲಲಿ
ತಿಲಕಾಂಬರದ ಬಿದಿಗೆ ತಿಂಗಳೊ
ಪರಿಪರಿ ನಗೆ ಸಾವಿರ ಮಿಹಿರನಂತೆ
ಕಿರಣವ ಮಿಗೆ ಮಕರ ಕುಂಡಲವೊ ೨

ಬಿಲ್ಲು ಬಾಗಿದ ಪುಬ್ಬೊ ಮುಡಿಯಲಿ ಕುಸುಮ ವನದ ಹಬ್ಬೊ
ಗಲ್ಲದ ಚಿಬವೊ ಕಮಠದ ಬೆನ್ನೊ ಹೋಲಿಕೆ
ಬಲು ಚನ್ನೊ ಪಲ್ಲು ಪಂಙ್ತಿಗೆ ಹಾಕಿದ ಕರಿಯು
ಅಧರಾಮೃತದ ಸುರಿಯು ಅಲ್ಲಲ್ಲಿಗೆ ಕಿರಿಬೆವರಿಡೆ
ನಿಲ್ಲದೆ ವೀಳ್ಯದ ಜೊಲ್ಲಿನ ಧಾರೆಯು ೩

ಬಾಳಿದಿಂಡಿನ ತೋಳು ಕಟ್ಟಿದ ತಾಯಿತಗಳೇಳು
ಕೀಲು ಕಡಗ ಝಣವೊ ದ್ವಾರೆ ಘಟ್ಟಿ ಕಂಕಣವೋ
ನೀಲದುಂಗುರ ಹರಳೊ ಮುಂಗೈ ಸರಪಳಿಯ ಬೆರಳೊ
ಏಳು ಗೂಳಿಯ ನಯತೋಳಿಲಿ ಬಿಗಿದ
ಬಾಲಲೋಲ ಗೋಪಾಲನೊ ೪

ಪನ್ನಲಗ ಮುರಿಗ್ಯೂರಕ್ಷಿಯ ಮಣಿಯು ಥೋರ ದಾಸರಿಗೆ
ಚಿನ್ನದ ಸರವೊ ರೇಶಮಿಗೊಂಡೆ ಕೌಸ್ತುಭ ಶೃಂಗಾರವೊ
ರನ್ನದ ಮಾಲೆ ತುಲಸಿ ಪದಕ ಹಾಕಿದ ಎಣ್ಣಿನುಲೊ
ಅಣ್ಣಣ್ಣ ಹೊನ್ನಿನ ಗುಬ್ಬಿ ಎನುತ ಗೋಪಿ ಮನ್ನಿಸುತಲಿ ೫

ಹುಲಿಯುಗುರೂ ಮುತ್ತಿನ ಮಾಲಿಕಿಯು ಪೂಸಿದ ಗಂಧಗರೊ
ವೀಳೆಯರುಣನೊ ಅಂಗೈಯ ಗೆರೆಯು ವಿಸವ ಲಕ್ಷಣನೊ
ಪೊಳೆವ ಪವಳವೊ ಪೋಣಿಸಿಯಿದ್ದ ವೈಜಯಂತಿ ಸುಳ್ಳುವೊ
ನಲಿನಲಿನಲಿದು ವಲಿದಾದೆನುತ
ಒಲಿಸಿದಳೊ ಮಗನ ಯಶೋದೆ ೬

ಕಂಬು ಕೊರಳೊ ಮೂರೇಖಿಯು ಅಂಗೈಯಿವರಿಗೆ ಮರುಳೊ
ತುಂಬಿ ಸೂಸುವ ಹೊಳೆಯು ಜಠರದ ನಾಭಿ ತ್ರಿವಳಿಯು
ಅಂಬಿನ ತೆರೆಯು ಯೆನಲು ಮಿನುಗುವ
ಬಿಸಲಿನ ಘನ ಹರಿಯು
ಭೊಂ ಭೊಂ ಭೊಮೆಂದು ಕೊಂಬಿನ ಊದು
ಎಂಬೊ ನುಡಿಯಲಿ ರಂಬಿಸಿ ಕೃಷ್ಣನ ೭

ಕಮಲದ ಮಗ್ಗೊ ಉಂಗುರ ನಡುವಿದು ಅಲಂಕಾರದ ಸುಗ್ಗೊ
ಅಮಮ ಧೊರೆಯು ನಾದದ ಘಂಟ್ಯೊ
ಮಣಿಶಿಂಗನ ಮರಿಯು
ಸಮಸಮವಾತೊಡೆ ಬಾಳಿಯ ಸ್ತಂಭೊ
ಜಾನು ಕನ್ನಡಿ ಕ್ರಮವೊ
ಧಿಮಿ ಧಿಮಿ ಎಂದು ರಂಗನ ಕುಣಿಯೆಂದು ನಿಮನಿಮಗೆಲ್ಲ ೮

ಕಾಲಲಿಯಿಟ್ಟ ಗೆಜ್ಜೆ ಅಂದಿಗೆ ತಪ್ಪು ತಪ್ಪು ಹೆಜ್ಜೆ
ನೀಳದ ದಂತೊ ಜಂಘ ಸರಪಳಿಯ ಗಗ್ಗರಿಯ ಯಿಂತೊ
ಸಾಲಾಂಗುಲಿಯು ವೀರ ಮುದ್ರಿಕೆ ನಖ ಕೇದಿಗೆ ಮುಳೆಯು
ಲಾಲಿ ಲಾಲಿ ಕಂದ ಎನುತಲಿ ಶ್ರೀ ಲಕುಮಿ ಲೋಲನ ಎಬ್ಬಿಸಿ ೯

ನೆರೆದವರಿಗೆ ತರುಳರನೆಲ್ಲಾ ಕರೆದು ಸುತ್ತಲು ನಿಲಿಸಿ
ಹರಿಹರಿ ಎಂದು ಹರದಾಡುತಲಿ
ಪರಿಪರಿಯಿಂದ ಮಾತನು ಅಪ್ಪನೆ ಸರಿಯಾಗಿ ಕುಣಿಯೆಂದು
ಪರಮ ಸಂಭ್ರಮದಿಂದ ಕರೆಕರೆದು ವಿಜಯವಿಠ್ಠಲನ
ತರಕಿಸಿ ಸಂತತ ಉಡಿಯಲಿ ಎತ್ತಿ ೧೦

೮

ಆನಂದಾ ಆನಂದಾ ಮತ್ತೆ ಪರಮಾನಂದಾ
ಆನಂದನನಂದನೊಲಿಯೆ ಏನಂದದ್ದೆ ವೇದ ವೃಂದಾ ಪ

"ಅ" ಮೊದಲು "ಕ್ಷ"ಕಾರಾಂತ ಈ ಮಹಾವರ್ಣಗಳೆಲ್ಲ
ಸ್ವಾಮಿಯಾದ ವಿಷ್ಣುವಿನ ನಾಮವೆಂದು ತಿಳಿದವರಿಗೆ ೧

ಪೋಪದು ಬರುತಿಪ್ಪುದು ಕೋಪಶಾಣಿ ಮಾಡುವುದು
ರೂಪ ಲಾವಣ್ಯವು ಹರಿವ್ಯಾಪಾರವೆಂದವರಿಗೆ ೨

ಜಲ ಕಾಷ್ಠ ಶೈಲ ಗಗನ ನೆಲ ಪಾವಕ ವಾಯು ತರು
ಫಲಪುಷ್ಪ ಬಳ್ಳಿಲಿ ಹರಿ ಒಳಗೆ ವ್ಯಾಪ್ತನೆಂದವಗೆ ೩

ತಾರೊ ಬಾರೊ ಬೀರೊ ಸಾರೊ ಮಾರೊ ಕೋರೊ ಹಾರೊ
ಹೋರೊ ಸೇರೊ ಕೋರೊದೆಂಬ ದಿಶಾಪ್ರೇರಣೆ ಎಂದವರಿಗೆ ೪

ಮಧ್ವಶಾಸ್ತ್ರ ಪ್ರವಚನ ಮುದ್ದುಕೃಷ್ಣನ ದರುಶನ
ಸಿದ್ಧ ವಿಜಯವಿಠ್ಠಲನ ಪೊಂದಿ ಕೊಂಡಾಡುವವರಿಗೆ ೫

೯

ಆವ ಬಗೆಯಿಂದ ಸಲಿಗೆಯನಿತ್ತಿಯೊ
ಮಾವಮರ್ದನ ರಂಗ ನಿನ್ನ ದಯಾ ತಿಳಿಯದು ಪ

ಅಂದರೆ ಆನಂದ ಅನಂದದೇ ಅನಾನಂದ
ನಿಂದದೆ ಗೋಕುಲ ನಿಲದದೆ ವ್ಯಾಕುಲ
ಬಂದದೆ ಪುರುಷಾರ್ಥ ಬಾರದಿದ್ದರೆ ವ್ಯರ್ಥ
ಮಂಥರಧರ ನಿನ್ನ ಮನಸು ಬಂದದ್ದೆ ಸರಿ ೧

ಕೊಟ್ಟದ್ದೆ ಪುರುಷಾರ್ಥ ಕೊಡದಿಪ್ಪದೆ ಅನರ್ಥ
ಅಟ್ಟಿ ಬರುವ ಪಾಪ ಸುಟ್ಟು ಬಿಡು ನಿರ್ಲೇಪ
ತಟ್ಟಿದುದೆ ವೇದಾರ್ಥ (ತಟ್ಟದದೆ) ಮಿಥ್ಯ
ವಿಠ್ಠಲ ನಿನ್ನ ಭಕ್ತರಿಗೆ ನೀ ಬಲು ಸುಲಭಾ ೨

ಹರಿ ನಿನ್ನ ಶರಣರ ಮನಸ್ಸು ಆವರಕಾದ
ದೆರಗಲು ಆಕ್ಷಣವೆ ಸಿದ್ಧ ಮಾಳ್ಪೆ
ಕರುಣ ನಿಧಿಯೆ ನಮ್ಮ ವಿಜಯವಿಠ್ಠಲ ನಿನ್ನ
ಸರಿಯಾದ ದೇವರನು ಕಾಣೆ ತ್ರಿಭುವನದಲ್ಲಿ ೩

೧೦

ಆವರೋಗವೆ ಯೆನಗೆ ದೇವ ಧನ್ವಂತ್ರೀ ಪ

ಸಾವಧಾನದಿಯೆನ್ನ ಕೈಪಿಡಿದು ನೋಡೋ ಅ ಪ

ಹರಿಮೂರ್ತಿ ಕಾಣಿಸದು ಎನ್ನ ಕಂಗಳಿಗೆ
ಹರಿಕೀರ್ತನೆ ಕೇಳದೆನ್ನ ಕಿವಿಗಳಿಗೆ
ಹರಿಯ ಶ್ರೀಗಂಧವಾಘ್ರಾಣಿಸದೆನ್ನ ನಾಸಿಕವು
ಹರಿಯಪ್ರಸಾದ ಜಿಹ್ವೆಗೆ ಸವಿಯಾಗದು ೧

ಹರಿಪಾದ ಪೂಜಿಸೆ ಹಸ್ತಗಳು ಚರಿಸದು
ಹರಿಗುರುಗಳಂಘ್ರಿಗೆ ಶಿರ ಬಾಗದು
ಹರಿಯ ಸೇವೆಗೆ ಯೆನ್ನ ಅಂಗಗಳು ಚಲಿಸದು
ಹರಿಯಾತ್ರೆಗೆನ್ನ ಕಾಲುಗಳೇಳದೋ ೨

ಅನಾಥಬಂಧು ಶ್ರೀವಿಜಯವಿಠ್ಠಲರೇಯ
ಯೆನ್ನ ಭಾಗ್ಯದ ಸ್ವಾಮಿಯಾಗಿ ನೀನೊ
ಅನಾದಿಕಾಲದ ಘನರೋಗವನೆ ಬಿಡಿಸು
ನಿನ್ನ ಉಪಕಾರವ ನಾನೆಂದಿಗೂ ಮರೆಯೇ ೩

೧೧

ಆವಾವ ಬಗೆಯಿಂದ ಹರಿಗರ್ಪಿಸೊ
ಭಾವ ಶುದ್ಧನಾಗಿ ಮುಖ್ಯತ್ವ ವಹಿಸದೆ ಪ

ನೋಡುವ ನೋಟಗಳು ಹರಿಯೆ ನೋಡಿದನೆನ್ನಿ
ವೋಡುವ ಆಟಗಳು ಹರಿಯೆ ವೋಡಿದನೆನ್ನಿ
ಆಡುವ ಮಾತುಗಳು ಹರಿಯೆ ಆಡಿದನೆನ್ನಿ ೧

ನಡಿವ ನಡಿಗೆ ಎಲ್ಲ ಹರಿಯೆ ನಡೆದನೆನ್ನಿ
ಕೊಡುವ ದಾನಗಳು ಹರಿಯೆ ಕೊಟ್ಟನೆನ್ನಿ
ಒಡನಾಡುವ ಲೀಲೆ ಹರಿಯೆ ಆಡಿದನೆನ್ನಿ
ಪಿಡಿವ ಚೇಷ್ಟೆಗಳೆಲ್ಲ ಹರಿಯೆ ಪಿಡಿದನೆನ್ನಿ ೨

ಕೇಳುವ ಶಬ್ದಗಳು ಹರಿಯೆ ಕೇಳಿದನೆನ್ನಿ
ಹೇಳುವ ವಿಧವನಿತು ಹರಿಯೆ ಎನ್ನಿ
ಮಾಲೆ ಧರಿಸುವುದು ಹರಿಯೆ ಧರಿಸಿದನೆನ್ನಿ
ಮೇಲು ಸುಖ ಬಡುವುದು ಹರಿಯೆ ಎನ್ನಿ ೩

ವಾಸನೆ ಕೊಂಬುವದು ಹರಿಯೆ ಕೊಂಡ ಎನ್ನಿ
ಭೂಷಣವಿಡುವುದು ಹರಿಯೆ ಎನ್ನಿ
ಲೇಸು ಬಯಸುವುದು ಹರಿಯೆ ಬಯಿಪನೆನ್ನಿ
ಗ್ರಾಸ ಮೆಲುವದೆಲ್ಲ ಹರಿಯೆ ಎನ್ನಿ ೪

ಸತಿಯ ಕೂಡುವದೆಲ್ಲ ಹರಿಯೆ ಕೂಡಿದನೆನ್ನಿ
ಹಿತವಾಗಿಪ್ಪದು ಹರಿಯೆ ಎನ್ನಿ
ಸುತರ ಪಡೆದಾದಲ್ಲಿ ಹರಿಯೆ ಪಡೆದನೆನ್ನಿ
ಪ್ರತಿಕೂಲವಾಗುವುದೆ ಹರಿಯೆ ಎನ್ನಿ ೫

ಬಳಗ ಸಾಕುವುದೆಲ್ಲ ಹರಿಯೆ ಸಾಕಿದನೆನ್ನಿ
ಸುಲಭನಾದರೆ ಹರಿಯಾದನೆನ್ನಿ
ಗಲಭೆ ಮಾಡುವುದೆಲ್ಲ ಹರಿಯೆ ಮಾಡಿದನೆನ್ನಿ
ಸುಳಿದಾಡುವುದೆಲ್ಲ ಹರಿಯೆ ಎನ್ನಿ ೬

ಏನೆಂಬೆ ಹರಿ ಲೀಲೆ ನಿರ್ದೋಷ ನಿಸ್ಸಂಗ
ಅನಂತಕಾಲಕ್ಕೂ ಎಲ್ಲಿದ್ದರು
ಜ್ಞಾನಮಯ ಕಾಯ ವಿಜಯವಿಠ್ಠಲರೇಯ
ನಾನಾ ವ್ಯಾಪಾರಗಳ ಮಾಳ್ಪನೆನ್ನಿ ೭

೧೨

ಇಂದಿರಾದೇವಿಯ ರಮಣ ಬಾ
ವೃಂದಾರಕ ಮುನಿವಂದ್ಯ ಬಾ
ಸಿಂಧುಶಯನ ಗೋವಿಂದ ಸದಮಲಾ
ನಂದ ಬಾ ಮಾವನ ಕೊಂದ ಬಾ ಗೋಪಿಯ
ಕಂದ ಬಾ ಹಸೆಯ ಜಗುಲಿಗೆ ಶೋಭಾನೆ ೧

ಕೃಷ್ಣವೇಣಿಯ ಪಡೆದವನೆ ಬಾ
ಕೃಷ್ಣನ ರಥ ಹೊಡೆದವನೆ ಬಾ
ಕೃಷ್ಣೆಯ ಕಷ್ಟವ ನಷ್ಟವ ಮಾಡಿದ
ಕೃಷ್ಣ ಬಾ ಯದುಕುಲ ಶ್ರೇಷ್ಠ ಬಾ ಸತತ ಸಂ
ತುಷ್ಟ ಬಾ ಉಡುಪಿಯ ಕೃಷ್ಣ ಬಾ
ಹಸೆಯ ಜಗುಲಿಗೆ ಶೋಭಾನೆ ೨

ಎಲ್ಲರೊಳು ವ್ಯಾಪಕನಾಗಿಪ್ಪನೆ
ಬಲ್ಲಿದ ಧೊರೆಯೇ ಜ್ಞಾನಿಗಳರಸನೆ
ಎಲ್ಲಿ ನೋಡಲು ಸರಿಗಾಣೆ ವಿಜಯವಿ-
ಠ್ಠಲ ಬಾ, ಅಪ್ರತಿಮಲ್ಲ ಬಾ ನೀ-
ನಲ್ಲದಿಲ್ಲ ಬಾ, ಭಕುತವತ್ಸಲ ಬಾ,
ಹಸೆಯ ಜಗುಲಿಗೆ ಶೋಭಾನೆ ೩

೧೩

ಇಂದು ನೋಡಿದೆ ಇಂದಿರೇಶ
ಮುಕುಂದನ ಮುದ್ದು ರೂಪವ ಕಳೆದೆ ಸಂತಾಪವ ಪ

ಪಂಚ ವರ್ಣದ ಪಕ್ಕಿ ಪೆಗಲಲ್ಲಿ
ಮಿಂಚಿನಂದದಿ ತೋರುತಾ ವರಗಳ
ಬೀರುತಾ ವೊಡನಿಪ್ಪ ಮಾರುತಾ ೧

ಝುಗಝುಗಿಪ ಪದಯುಗಳ ಬಿಗಿದಪ್ಪಿ
ತೆಗೆಯದಲೆ ಮನಪಾಡಿದೆ ಕುಣಿ ಕುಣಿ
ದಾಡಿದೆ ಸಂತರ ಸಂಗ ಬೇಡಿದೆ ೨

ಧನ್ಯನಾದೆನೊ ದಾನವಾರಿಯ ಘನ್ನ ವೈಭೋಗ ಕಂಡೆ ನಾ
ಪುಣ್ಯವನು ಕೈಕೊಂಡೆ ನಾ ನಾಮಾಮೃತ ಉಂಡೆ ನಾ ೩

ಏನು ಪೇಳಲಿ ಗುರುಗಳ ಕೃಪೆ
ಸ್ವಾನೆ ನಿರುತ ಕರಗರವದು ಅಹಂಮತಿ
ಮರೆವದು ಸುರಗಣ ಪೊರೆವುದು ೪

ಕಮಲಹರ ಶಿರ ವಿಜಯವಿಠ್ಠಲ
ಕಮಲಲೋಚನಾಭಾಸನ ಪನ್ನಗನಗ
ವಾಸನಾಗುಣ ಮಂದಹಾಸನಾ ೫

೧೪

ಇಂದು ನೋಡಿದೆ ಗೋವಿಂದನಾ ಸರ್ವ
ಸುಂದರಸಾರ ವೆಂಕಟ ರಮಣನಾ ಪ

ಭಾಗೀರಥಿಯ ಪೆತ್ತವನಾ ಭವ
ರೋಗವ ಕಳೆವ ರಾಜೀವನೇತ್ರನಾ
ಸಾಗರದೊಳಗೆ ಒಪ್ಪುವನಾ ಭಕ್ತ
ಕೂಗಲು ನಿಲ್ಲದೆ ಒದಗಿ ಬರುವನಾ ೧

ನಿಲ್ಲದೆಳಿಪಿಗೆ ಪೊಳೆದನಾ ಗೋ
ಪಾಲಕರಿಗೆ ವೈಕುಂಠ ತೋರಿದನಾ
ನೀಲಾದೇವಿಗೆ ಒಲಿದವನಾ ಭೂ
ಪಾಲಗೆ ಮೆಚ್ಚಿ ಸತ್ವರವನಿತ್ತವನಾ ೨

ವಿಶ್ವ ಮಂಗಳದಾಯಕನಾ ಅಹಿ
ವಿಷ್ವಕಸೇನರಿಂದ ಪೂಜೆಗೊಂಬುವನಾ
ವಿಶ್ವರೂಪ ವಿಲಕ್ಷಣನಾ ಸರ್ವ
ವಿಶ್ವ ಪರಿಪಾಲ ಪ್ರಣತಾರ್ತಿ ಹರನ ೩

ಸುರ ಶಿರೋಮಣಿ ಸದ್ಗುಣನಾ ಸು
ದರಶನ ಶಂಖ ಭಜಕರಿಗೆ ಕೊಟ್ಟವನಾ
ನಿರುತ ಆನಂದ ಭರಿತನಾ ದಿವ್ಯ
ಮಿರುಗುವಾಭರಣದಿಂದಲಿ ನಿಂದಿಹನಾ ೪

ಶಾಮವರ್ಣ ಚತುರ್ಭುಜನಾ ನಿಜ
ಕಾಮಿನಿ ಸಂಗಡ ನಲಿದಾಡುವನಾ
ಹೇಮ ಗಿರಿಯಲಿದ್ದವನಾ ದೇವ
ಸ್ವಾಮಿ ತೀರ್ಥವಾಸ ವಿಜಯವಿಠ್ಠಲನಾ ೫

೧೫

ಇಂದು ಸಾರ್ಥಕವಾಯಿತು ಎನ್ನ ಜನನಾ
ಚಂದ್ರ ಪುಷ್ಕರಣಿಯ ವಾಸ ರಂಗನ್ನ ಕಂಡು ಪ

ಸುತ್ತೇಳು ಪ್ರಾಕಾರಗೋಪುರ ಮಹಾದ್ವಾರ
ರತ್ನದ ಕವಾಟ ತೋರಣಗಳು
ಕತ್ತಲೆ ಹರನಂತೆ ಕಣ್ಣಿಗೆ ತೋರುತಿದೆ
ತುತ್ತಿಸಲಳವೆ ಅನಂತ ಜನುಮಕೆ ೧

ಸಾಲು ಬೀದಿಗಳು ಒಂದೊಂದರ ಮಧ್ಯದಲಿ
ಸಾಲು ಮಂಟಪ ಮುತ್ತಿನ ಚಪ್ಪರಾ
ಕೀಲುಮಣಿಗಳಿಂದ ಬಿಗಿದ ಸೊಬಗು ಹೊಂ
ಬಾಳೆಸ್ತಂಭಗಳೆಡಬಲದಲ್ಲಿ ಒಪ್ಪಲು ೨

ಮುಂದೆ ಗರುಡಗಂಭ ಪವಳದ ಗವಾಕ್ಷಿ
ಹಿಂದೆ ನೆರೆದ ಬಲು ಪರಿಯಂಗಡಿ
ಸಂದಣಿಯಿಂದ ಭೂಸುರರು ಸ್ತೋತ್ರವ ಪೇಳೆ
ಒಂದೊಂದು ಬಗೆಯಲ್ಲಿ ವಂದಿಸುವುದು ಕಂಡು ೩

ಚಂದನ್ನನಿಂದೆ ಪೋಗಾಡಿದ ಸರೋವರ
ಒಂದು ಸುರವನ್ನೆ ವೃಕ್ಷದಲ್ಲಿ
ಮಿಂದು ಸಜ್ಜನರು ಕೈಗಳ ಮುಗಿದು ನಮೊ
ಎಂದು ಕೊಂಡಾಡುವರು ವೇಗದಲ್ಲಿ ೪

ಪ್ರಣವಾಕಾರವಾದ ವಿಮಾನ ಅದರ ಮೇಲೆ
ಮಿನುಗುವ ವಾಸುದೇವಾದಿಗಳ
ಮನದಣಿಯ ಕೊಂಡಾಡಿ ಮುದದಿಂದ ಪಾಡುತ್ತಾ
ಫಣಿ ತಲ್ಪನಾಥ ಶ್ರೀ ಪರಮಪುರುಷನ ಕಂಡು ೫

ಕಮನೆಯ ಮುಕುಟ ಕಸ್ತೂರಿ ತಿಲಕ ನಾಶಿಕ
ಕಮಲಾಕ್ಷ ಕುಳಿರತೆರದಿ ಕದಪು
ಅಮಲಗೂದಲು ಕರ್ಣ ಕುಂಡಲ ಉರದಲ್ಲಿ
ರಮಣಿ ಕೌಸ್ತುಭ ಹಾರ ಪದಕ ಪಾವನ ಪಾದಾ ೬

ನಸುನಗೆ ಚತುರ್ದಶ ಲೋಕವ
ಬಿಸಜ ಕರಗಳು ಭೂಷಣದಿಂದಲಿ
ಬಿಸಜ ಭವನ ಪಡೆದು ನಾಭಿ ವಸನಕಟಿ
ಮಿಸುಣಿಪ ವಡ್ಯಾಣ ಸರ್ವ ಲಕ್ಷಣನಾ ೭

ಕಾಲ ಕಡಗ ಪೆಂಡೆ ಪೊಂಗೆಜ್ಜೆ ಅಂದಿಗೆ
ವಾಲಾಯ ಪದತಳದಲಿ ರೇಖೆ
ವಾಲಗ ಸಿರಿದೇವಿ ಪ್ರೀತಿಯಿಂದಲೆ ಮಾಡೆ
ಕಾಲಕಾಲಕೆ ಸುರರು ಸಮ್ಮುಖದಲಿ ನುತಿಸೆ ೮

ಉಭಯ ಕಾವೇರಿ ನಡುವೆಯಿದ್ದು ದಕ್ಷಿಣ
ಅಭಿಮುಖವಾಗಿ ಪವಡಿಸಿದ ವಿ
ಭೀಷಣದ ವರದ ರಂಗ ಮಂದಿರ ನಿಲಯಾ
ವಿಬುಧೇಶ ವಿಜಯ ವಿಠ್ಠಲ ರಂಗನ ಕಂಡು ೯

೧೬

ಈತನೀಗ ವಿಜಯ ವಿಠ್ಠಲಾ
ಈತನೀಗ ವಿಜಯ ವಿಠ್ಠಲಾ
ಮಾತು ಮಾತಿಗೆ ನೆನಸಿದವರ
ಪಾತಕಗಳ ಪರಿದು ಯಮನ
ಯಾತನೆಯನು ಕಳೆದು ಪೊರೆವಾ ಪ

ಕರೆದರೊಂದೆ ನುಡಿಗೆ ಬಂದು
ಕರುಣದಿಂದ ಮುಂದೆ ನಿಂದು
ಕರವ ಪಿಡಿದು ಅಂದು ಅಭಯ
ಕರವ ಪಾಲಿಸಿದ ದಯಾಸಿಂಧು
ಪರಿಪರಿಯಿಂದಲಿ ಹಿಂದು ಮುಂದು
ದುರಿತದಿಂದ ನೊಂದು ಬಂದು
ಇರಲು ದಾಸರ ದಾಸರನೆಂದು
ಮೊರೆ ವಿಚಾರಿಸಿ ಸಾಕಿದನಿಂದು ೧

ಅಚ್ಯುತಾನಂತನೆಂಬ ನಾಮಾ
ಅಚ್ಚು ಸುಧೆಯೆನಗೆ ನೇಮಾ
ನಿಚ್ಚ ಉಣಲಿಕಿತ್ತ ಪ್ರೇಮಾ
ಚಚ್ಚಲದಲಿ ಪೂರ್ಣಕಾಮಾ
ಹೆಚ್ಚಿ ಬಪ್ಪ ಮದದಾ ಸ್ತೋಮಾ
ನುಚ್ಚು ಮಾಡಿ ಬಿಡುವ ಭೀಮಾ
ನಿಚ್ಚ ಮನದ ಕುಮುದ ಸೋಮಾ
ಸುಚ್ಚರಿತ ಸಾರ್ವಭೌಮಾ ೨

ಮೊದಲೆ ಗುರು ಪುರಂದರದಾಸರಾ
ಹೃದಯದೊಳಗೆ ನಿಂದಾ ಶೃಂಗಾರಾ
ಉದಧಿಯೋ ಇದು ಬಣ್ಣಿಸಿಬಲ್ಲಿರಾ
ತ್ರಿದಶರೊಳಗೆ ಕಾಣೆ ಜ್ಞಾನರ
ಸದಮಲಾನಂದ ಪೂರ್ಣ ಇಂದಿರಾ
ಸದನಾ ಪ್ರತಾಪಗುಣ ಪಾರಾವಾರಾ
ಚದುರ ವಿಜಯವಿಠ್ಠಲ ಗಂಭೀರಾ
ಪದೋಪದಿಗೆ ಎನ್ನಯ ಮನೋಹರಾ ೩

೧೭

ಎಂದೊಡನಾಡುವೆ ಎಂದರ್ಥಿಬಡುವೆ
ಎಂದಿಗೆ ತರ್ಕೈಸಿ ಸಂತೋಷಬಡುವೆ ಪ

ಉತ್ಸವ ಮಂಟಪದೊಳಗೆ ಕುಳಿತು ಭಕ್ತ
ವತ್ಸಲನೆಂದು ನುತಿಸಿಕೊಂಬನ ಕೂಡ ೧

ಸಕಲ ಭೂಷಿತನಾಗಿ ಅಜಹರ ಸುರಮುನಿ
ನಿಕರ ಕೈಯಿಂದ ಸ್ತುತಿಸಿಕೊಂಬನ ಕೂಡ ೨

ಆಪೋಹಿಷ್ಠಾ ಮಯೋಭುವನೆಂಬೋ ಮಂತ್ರ
ಆ ಪುರೋಹಿತರಿಂದ ಕಲಿತುಕೊಂಬನ ಕೂಡ ೩

ನಾಲ್ವತ್ತುಮೂರು ಪದಂಗಳು ಮಾಡೆಂದು
ಹೇಳಿದ ಹೇಮಾದ್ರಿ ಶಿಖರಾಕಾರನಕೂಡೆ ೪

ದಂಡಿಗೆ ಕರೆದಲ್ಲಿ ಕೊಟ್ಟು ಅಮೃತದ ಕರ
ಮಂಡೆಯಲ್ಲಿಟ್ಟ ಮಹಮಹಿಮನ ಕೂಡ ೫

ಪಲ್ಲಕ್ಕಿ ಏರಿ ಪವಳಿಯ ಸುತ್ತಿ
ಸಗ್ರ್ರಗೆ ನಿಲ್ಲದೆ ಗುಡಿಪೊಕ್ಕ ನಿರ್ಮಳನ ಕೂಡ ೬

ವಾರಶನಿ ಚತುರ್ದಶಿ ಕೃಷ್ಣಪುಷ್ಯದಿ
ಈ ರೀತಿಯಲಿ ಕೂಡ ಇಂದಿರೇಶನ ಕೂಡ ೭

ರೌದ್ರಿ ಸಂವತ್ಸರ ಅರ್ಧರಾತ್ರಿಯಲಿ
ಭದ್ರ ಮೂರುತಿಯಾದ ಭವಹರ ಕೂಡ ೮

ಗುರುಪುರಂದರ ಉಪದೇಶನ ಬಲದಿಂದ
ಸಿರಿ ವಿಜಯವಿಠ್ಠಲನ ಚರಣ ತರ್ಕೈಸಿ ೯

೧೮

ಎಲ್ಲಡಗಿದನೊ ಹರಿ ಎನ್ನಯ ಧೊರಿ ಪ

ಎಲ್ಲೆಲ್ಲಿ ಪರಿಪೂರ್ಣನೆಂಬೊ ಸೊಲ್ಲನು ಮುನ್ನಾ
ಅಲ್ಲಲ್ಲಿ ಪುಸಿಮಾಡಿ ಮಲ್ಲಮರ್ದನ ಪುಲ್ಲಲೋಚನ ಹರಿ ಅ ಪ

ಶರಣೆಂದವರ ಕಾಯ್ವ ಕರುಣಾ ಸಮುದ್ರನು
ಕರುಣನ ಅರಿಯದೆ ಹರಿಣಾಂಕ ನಿಭವಕ್ತ್ರ ೧

ಕರಿರಾಜನ ಮೊರೆ ಕೇಳಿ ತ್ವರಿತದಿಂದ
ಗರುಡನೇರಿ ಬಂದ ಗರ್ವರಹಿತ ದೇವ ೨

ವರ ಭುಜದಲಿ ಶಂಖ ಚಕ್ರವ ಧರಿಸಿದ
ಪರಮ ಸುಂದರಮೂರ್ತಿ ಪರಮೇಷ್ಠಿ ಜನಕನು ೩

ವನಜ ಮಲ್ಲಿಗೆ ಜಾಜಿ ವನದಲ್ಲಿ ಚಲಿಸುವ
ವನಿತೆಯರಾಟಕ್ಕೆ ಮನಮೆಚ್ಚಿ ನಡೆದಾನೊ ೪

ಗೋವುಗಳ ಹಿಂಡು ಗೋಪಾಲರನು ಕಂಡು
ಕಾವ ವಿಷಯಕ್ಕಾಗಿ ಕಮಲಲೋಚನ ಹರಿ ೫

ಇನ ಚಂದ್ರ ನಿಭವಕ್ತ್ರ ಕನಕಾಂಬರಧರ
ವಿನಯದಿಂದಾಡುತ್ತ ಮುನಿಗಳಲ್ಲಿಗೆ ದೇವ ೬

ಗಜ ಧ್ರುವ ಬಲಿ ಪಾಂಚಾಲಿ ವರದನೆಂಬ
ನಿಜವಾದ ಬಿರುದುಳ್ಳ ವಿಜಯವಿಠ್ಠಲರೇಯ ೭

೧೯

ಏನು ಪೇಳಲಿ ತೀರ್ಥಪತಿಯ ಮಹಿಮೆ
ಮಾನವರಿಗೆ ಯಿಲ್ಲಿ ಮುಕ್ತಿ ಏಳಲವಯ್ಯಾ ಪ

ಕಾಸಿಯೊಳು ಮರಣ ಮುಕ್ತಿಯೆಂದು ಪೇಳುವದು
ದೇಶದೊಳು ಪುಸಿಯಲ್ಲ ಸಿದ್ಧವೆನ್ನಿ
ಈಶನುಪದೇಶದಿಂದಲಿ ವಿಗತ ಜನನಾಗಿ
ಶ್ರೀ ಶಕ್ತಿ ವೇಣಿಮಾಧವನ ಸನ್ನಿಧಿ ಗೈಯ್ವಾ ೧

ನಿರುತ ವ್ಯಭಿಚಾರಿ ವಿಪ್ರನ ಕೆಡಿಸಿ ಕಾಸಿಯಲಿ
ಇರಲು ಕಾಲಾಖ್ಯ ಉರಗನು ಕಚ್ಚಲು
ಪರಮಭೀತಿಯಿಂದ ಅವಳ ವಸನವ ತಂದು
ವರ ತ್ರಿವೇಣಿಯೊಳಗೆ ತೊಯಿಸಲು ಗತಿಸಾರ್ದರು ೨

ಇಲ್ಲಿಗೆ ನಡೆತಂದು ಸ್ನಾನವಂದೆ ಮಾಡಲು
ನಿಲ್ಲದೆ ಸನ್ಮುಕ್ತಿ ಧರನಾಗುವಾ
ಬಲ್ಲಿದಾ ವಿಜಯವಿಠ್ಠಲವೇಣಿ ಮಾಧವನ
ಸಲ್ಲಲಿತ ಪಾದವನು ಕಾಂಬ ಪ್ರಾಣೇಂದ್ರಿಯದಲಿ ೩

೨೦

ಏನೆಲವೊ ದೇವ ವೈಕುಂಠನಾಥಾ
ನೀ ನಾರಿ ವೇಷವನು ಧರಿಸಿದ ಬಗೆ ಪೇಳೋ ಪ

ದೈತ್ಯರುರುಬಿಗೆ ದೇವ ತತಿಗಳು ತಲ್ಲಣಿಸಿ
ಮಿತ್ರ ಭಾವದ ಅವರ ಕೂಡಲಿಟ್ಟು
ಇತ್ತಂಡದ ನಡುವೆ ಸುಧೆಯ ಬಡಿಸುವೆನೆಂದು
ಮಿತ್ರವೇಷ ಧರಿಸಿ ಸುರರ ಸಲಹಿದಾ ಬಗೆಯೊ ೧

ಶಿವಗೆ ವೃಕಾಸುರನು ಬೆಂಬಿಡದೆ ತನ್ನುರಿ ಕ
ರವನಿಡುವೆನೆಂದು ಬರಲಾಗಲೂ
ಅವನೀಶ ಭವಹರ ಕೇಶವ ನೀನೆ ಗತಿ ಎನಲೂ
ಯುವತಿ ವೇಷವಧರಿಸಿ ಶಿವನ ಸಲುಹಿದ ಬಗೆಯೊ ೨

ಅಂದು ಮಾಡಿದ ಚರಿತೆ ಭಕ್ತಜನರು ಬಂದು
ಒಂದು ದಿನ ನೋಡಿದವರಲ್ಲವೆಂದೂ
ಇಂದು ಸತಿ ವೇಷವನು ಧರಿಸಿ ತೋರಿಸಿದೆಯೊ
ಪುರಂದರದಾಸರಿಗೆ ಒಲಿದ ವಿಜಯವಿಠ್ಠಲ ಚೆಲುವಾ ೩

೨೧

ಒಂದೇ ನಾಮದಲಡಗಿದವೊ ಅಡಗಿದವೋ ಆ ಪ

ನಂದದಿಂದುಸುರುವ ಅಖಿಳ ವೇದಗಳು ಅ ಪ

ಒಂದೇ ನಾಮವೆ ಪ್ರಹಲ್ಲಾದನ್ನ ರಕ್ಷಿಸಿತು
ಒಂದೇ ನಾಮವೆ ಅಜಾಮಿಳಗೆ ವೊಲಿದಿತು
ತಂದೆ ತಾಯ ಬಿಟ್ಟ ಕಂದ ಧ್ರುವರಾಯಗೆ ಆ
ನಂದ ಪದವಿಯಿತ್ತ ಅದ್ಭುತ ಮಹಿಮೆಯು ೧

ಮಚ್ಛಾದ್ಯನಂತಾವತಾರಾ
ಸ್ವಚ್ಛ ಅಷ್ಟಾದಶ ಪುರಾಣ ಅಮೃತದ ಸಾರಾ
ಕಚ್ಛಪ ತ್ರಿಜಗಕೆ ಆಧಾರ ತನ್ನ
ಸ್ವೇಚ್ಛೆಯಿಂದಲಿ ತಾ ಮಾಡೋ ವ್ಯಾಪಾರಾ ೨

ಒಬ್ಬರಿಂದಲಿ ತನಗಿಲ್ಲ ತಾ
ನೊಬ್ಬನೆ ಜೀವರ ರಕ್ಷಿಪನೆಲ್ಲಾ
ಕಬ್ಬುಬಿಲ್ಲಿನ ಪಿತ ವಿಜಯವಿಠ್ಠಲರೇಯ– ವೈ
ದರ್ಭೆಯ ರಮಣನ ಸುಗುಣಗಳೆಲ್ಲಾ ೩

೨೨

ಒಡಿಯಾ ನಿನ್ನಡಿಗಳಿಗೆ ಬಿಡದೆ ನಾ ನಮೋ ಎಂಬೆ
ಕೊಡು ಎನಗೆ ದೃಢ ಪದವಿ ಕಡಲಶಯನಾ ಪ

ಪಿತನ ತೊಡಿಯ ಮೇಲೆ ಕುಳಿತಿರಲು ಮಲತಾಯಿ
ಅತಿ ರೋಷದಿಂದವನ ಹೊಯಿದೆಬ್ಬಿಸೆ
ಖತಿಯಿಂದ ವನಕೆ ಪೋಗಿ ನಿನ್ನ ಪೂಜಿಸಲು
ಮತಿವಂತನ ಮಾಡಿ ಧ್ರುವಪದವಿ ಕೊಡಲಿಲ್ಲವೆ ೧

ತಂದೆ ಬಾಧಿಸೆ ಧೃತಿಗೆಡದೆ ನರಹರಿ ಗೋ
ವಿಂದ ನಾರಾಯಣ ಕೃಷ್ಣ ವಿಷ್ಣು
ಇಂದಿರಾರಮಣ ಇನಕುಲತಿಲಕ
ಎಂದೆನಲು ಕಂದನಿಗೆ ಕೈವಲ್ಯಪದವಿ ಕೊಡಲಿಲ್ಲವೇ ೨

ಜಾತಿಧರ್ಮವ ಬಿಟ್ಟು ಅಜಮಿಳನು ಚಂಡಾಲ
ಜಾತಿ ವಧುವಿಗೆ ಸೋತು ಕೆಟ್ಟು ಯಮನ
ದೂತರನ ನೋಡಿ ಕಂಗೆಟ್ಟು ಮಗನನು ಕರಿಯೆ
ಪ್ರೀತಿಯಲಿ ವೈಕುಂಠ ಪದವಿ ಕೊಡಲಿಲ್ಲವೇ ೩

ವನಿತೆ ಪತಿವ್ರತವಾನಂತನನುಚರಿಸಿ ಬಂದಿರಲು
ಮನದ ಖೇದವ ತಾಳಿ ಹರಿದು ಬಿಸುಟತೆ
ಮುನಿಪುಂಗ ಅಡವಿಯನು ತೊಳಲಿ ನೆಂದು ಬಿದ್ದಿರಲು
ಪುನರ್ವಸು ಸ್ಥಾನವು ಕೊಡಲಿಲ್ಲವೆ ೪

ಶೌರ್ಯದಲಿ ಅಬ್ಧಿಯನು ಹಾರಿ ಲಂಕೆಯ ಸುಟ್ಟು
ಧೂರ್ಯದಲಿ ರಕ್ಕಸರನೊರಿಸಿ ಬಿಸುಟೂ
ಕಾರ್ಯದಲಿ ಹನುಮಂತ ನಿನ್ನ ಮೆಟ್ಟಿಸೆ ಒಲಿದು
ಸೂರ್ಯಭಾಂದವಗೆ ಜನಪದವಿ ಕೊಡಲಿಲ್ಲವೆ ೫

ಸೋದರಗೆ ಬುದ್ದಿಯನು ಪೇಳೆ
ಕೇಳದೆಯಿರಲು ಪಾಧಾರಿ ದಾಟಿ ನಿಮ್ಮ ಸೇವಿಸಿ
ಕಾದಿ ರಾವಣನ ಛೇದಿಸಿ ಲಂಕಾಪುರ ಪದವಿ
ಆ ದಿನಪ ಶಶಿವುಳ್ಳ ಪರಿಯಂತ ಕೊಡಲಿಲ್ಲವೆ ೬

ಚಿತ್ತದೊಳು ಆವಾಗ ನಿನ್ನ ಧ್ಯಾನವ ಮಾಡಿ
ವಿತ್ತಾದಿ ದಾನಗಳು ಮಿತಿಯಿಲ್ಲದೇ
ಅತ್ಯಂತ ಕೊಡುವವನ ಮೂರು ಪಾದವ ಬೇಡಿ
ಭಕ್ತಗೆ ನಲಿದು ಸುರಪದವಿ ಕೊಡಲಿಲ್ಲವೆ ೭

ಮಾನಿನಿಯ ಸೀರಿಯನು ಸಭೆಯೊಳಗೆ ದುರುಳರು ಅಭಿ
ಮಾನ ಭಂಗವ ಮಾಡಿ ಸುಲಿವುತಿರಲು
ಶ್ರೀನಾಥ ಕೇಶವ ಮುಕುಂದನೆಂದು ಮೊರೆ ಇಡೆ
ನೀನರಿತು ಅಕ್ಷಯಾಂಬರ ಕೊಡಲಿಲ್ಲವೆ ೮

ಬಡತನ ಉಳ್ಳವನಾಗಿ ಕ್ಲೇಶದಲಿ ಸುಧಾಮ
ನಡುಗುತಲಿ ನಿನ್ನ ಪಟ್ಟಣಕೆ ಬರಲು
ಹಿಡಿತುಂಬಿ ಅವಲಕ್ಕಿಗೆ ಸಂತೃಪ್ತನಾಗಿ
ಕಡೆಯಿಲ್ಲದೈಶ್ವರ್ಯ ಪದವಿ ಕೊಡಲಿಲ್ಲವೆ ೯

ಸರಸಿಯೊಳು ಬಾಲಕನ ನೆಗಳಿ ಪಿಡಿದು ನುಂಗೆ
ಗುರುದಕ್ಷಿಣವ ಬೇಡೆ ಸಾಂದೀಪನು
ಭರದಿಂದ ಪೋಗಿ ಕೃತಾಂತನೊಳು ಭೂ
ಸುರಗೆ ಸುಪುತ್ರ ಪದವಿ ಕೊಡಲಿಲ್ಲವೆ ೧೦

ಭುಜಕರೆಲ್ಲರು ನಿನಗೆ ಭಾಗ್ಯವನು ಕೊಡಲಿಲ್ಲ
ಭಜಿಸಿದರವರು ತಮ್ಮ ತಕ್ಕ ತೆರದಿ
ಭಜಿಸುವೆನು ನಿನ್ನ ತಕ್ಕಂತೆ ದೃಢ ಪದವಿಕೊಡು
ಸುಜನವಂದಿತ ಸಿರಿ ವಿಜಯವಿಠ್ಠಲನೆ ೧೧

೨೩

ಕಂಡೆ ಕಮಲನಾಭನ ಕಣ್ಣಾರೆ
ಪುಂಡರೀಕನ ಪಾಲಿನ
ಪಂಡರಿವಾಸನ ಸಕಲ – ಬ್ರೊ
ಮ್ಹಾಂಡವ ಧರಿಸಿದನಾ ಪ

ಸುಲಭ ದೇವರ ದೇವ ನಾನಾ – ಪರಿ
ಮಳ ತುಲಸಿಗೆ ವಲಿವನ
ಕಲಿಕಾಲ ಸಲಹುವನ ಭವದ – ಸಂ
ಕಲೆ ಪರಿಹರಿಸುವನ ೧

ಲಿಂಗ ಸಂಗವನೀವನ
ಜಗದಂತರಂಗ ಮೋಹನರಾಯನ
ಮಂಗಳ ದೇವೇಶನ ಸಿರಿಪಾಂಡು
ರಂಗ ನೆನಸಿಕೊಂಬನ ೨

ಜಗದ ಸಚ್ಚರಿತ ನಾನಾ
ವನದಿ ಬಿಗಿದ ಪರಾಕ್ರಮನಾ
ನಗವನೆತ್ತಿದ ಧೀರನಾ ತನ್ನನು
ಪೊಗಳಲು ಹಿಗ್ಗುವನಾ ೩

ಯಾದವ ಶಿರೋರನ್ನನ
ಕೊಳಲು ಊದುವ ಚೆನ್ನಿಗನಾ
ಆದಿ ಪರಮ ಪುಂಸನ ಸರ್ವ
ವೇದ ನಿಕರಮಯನಾ ೪

ಇಟ್ಟಿಗೆಯಲಿ ನಿಂದನ ವರಂಗಳ
ಕೊಟ್ಟರೆ ತಪ್ಪದವನ
ಅಟ್ಟಿ ಖಳನ ಕೊಂದನಾ ವಿಜಯ
ವಿಠ್ಠಲ ಜಗದೀಶನಾ ೫

೧೪

ಕಾಶಿಯ ಹಾದಿಯಲಿ ಕೇಶವನಿದ್ದಾನೆ ರಾಮರಾಮ
ಕೇಶವನ ದಯದಿ ಕಾಶಿಯಾತ್ರೆಯ ಕಂಡೆ ರಾಮರಾಮ ೧

ಬದರಿಕಾಶ್ರಮದಲ್ಲಿ ನಾರಾಯಣನಿದ್ದಾನೆ ರಾಮರಾಮ
ಬದರಿಕಾಶ್ರಮ ಕಂಡೆ ನಾರಾಯಣನ ದಯದಿ ರಾಮರಾಮ ೨

ಪ್ರಯಾಗ ನದಿಯಲ್ಲಿ ಮಾಧವನಿದ್ದಾನೆ ರಾಮರಾಮ
ಪ್ರಯಾಗ ನದಿ ಮಿಂದೆ ಮಾಧವನ ದಯದಿ ರಾಮರಾಮ ೩

ಗೋಕುಲದಲ್ಲಿ ಶ್ರೀ ಗೋವಿಂದನಿದ್ದಾನೆ ರಾಮರಾಮ
ಗೋಕುಲವನು ಕಂಡೆ ಗೋವಿಂದನ ದಯದಿ ರಾಮರಾಮ ೪

ವಿಷ್ಣು ತೀರ್ಥದಲಿ ಶ್ರೀವಿಷ್ಣುವಿದ್ದಾನೆ ರಾಮರಾಮ
ವಿಷ್ಣು ತೀರ್ಥದಿ ಮಿಂದೆ ವಿಷ್ಣುವಿನ ದಯದಿಂದ ರಾಮರಾಮ ೫

ಮತ್ಸ್ಯತೀರ್ಥದಲ್ಲಿ ಮಧುಸೂದನನಿದ್ದಾನೆ ರಾಮರಾಮ
ಮತ್ಸ್ಯತೀರ್ಥದಿ ಮಿಂದೆ ಮಧುಸೂದನನ
ದಯದಿ ರಾಮರಾಮ ೬

ತ್ರಿವೇಣಿಯಲ್ಲಿ ತ್ರಿವಿಕ್ರಮನಿದ್ದಾನೆ ರಾಮರಾಮ
ತ್ರಿವಿಕ್ರಮನ ದಯದಿ ತ್ರಿವೇಣಿಯಲ್ಲಿ ಮಿಂದೆ ರಾಮರಾಮ ೭

ವಾಮನ ನಮ್ಮನು ಒಲಿದು ಕಾಯುವನಂತೆ ರಾಮರಾಮ
ವಾಮನನ ದಯದಿ ಭೂವೈಕುಂಠವ ಕಂಡೆ ರಾಮರಾಮ ೮

ಶ್ರೀಧರ ನಮ್ಮ ಹೃದಯದಲ್ಲಿದ್ದಾನೆ ರಾಮರಾಮ
ಶ್ರೀಧರನ ದಯದಿಂದ ಹೃದಯವಾಸನ ಕಂಡೆ ರಾಮರಾಮ ೯

ಋಷಿಗಳಾಶ್ರಮದಲ್ಲಿ ಹೃಷಿಕೇಶನಿದ್ದಾನೆ ರಾಮರಾಮ
ಹೃಷಿಕೇಶನ ದಯದಿ ಋಷಿಗಳಾಶ್ರಮ ಕಂಡೆ ರಾಮರಾಮ ೧೦

ಪದ್ಮನಾಭದಲ್ಲಿ ಪದ್ಮನಾಭನಿದ್ದಾನೆ ರಾಮರಾಮ
ಪದ್ಮನಾಭನ ದಯದಿ ಪದ್ಮನಾಭನ ಕಂಡೆ ರಾಮರಾಮ ೧೧

ಸಾಧು ಬೃಂದದಲ್ಲಿ ದಾಮೋದರನಿದ್ದಾನೆ ರಾಮರಾಮ
ಸಾಧು ಬೃಂದವ ಕಂಡೆ ದಾಮೋದರನ ದಯದಿ ರಾಮರಾಮ ೧೨

ಸಕಲ ತೀರ್ಥದಲ್ಲಿ ಸಂಕರ್ಷಣನಿದ್ದಾನೆ ರಾಮರಾಮ
ಸಂಕರ್ಷಣನ ದಯದಿ ಸಕಲ ತೀರ್ಥವೆ ಮಿಂದೆ ರಾಮರಾಮ ೧೩

ವಸುಧೇಯ ಮೇಲೆಲ್ಲ ವಾಸುದೇವನಿದ್ದಾನೆ ರಾಮರಾಮ
ವಾಸುದೇವನ ದಯದಿ ವಸುಧೆಯೆಲ್ಲವ ಕಂಡೆ ರಾಮರಾಮ ೧೪

ವೃದ್ಧಗಂಗೆಯಲ್ಲಿ ಪ್ರದ್ಯುಮ್ನನಿದ್ದಾನೆ ರಾಮರಾಮ
ಪ್ರದ್ಯುಮ್ನನ ದಯದಿ ವೃದ್ಧಗಂಗೆಯ ಮಿಂದೆ ರಾಮರಾಮ ೧೫

ಅಲಕನಂದೆಯಲ್ಲಿ ಅನಿರುದ್ಧನಿದ್ದಾನೆ ರಾಮರಾಮ
ಅಲಕನಂದನೆ ಮಿಂದೆ ಅನಿರುದ್ಧನ ದಯದಿ ರಾಮರಾಮ ೧೬

ಪುಣ್ಯಕ್ಷೇತ್ರದಲ್ಲಿ ಪುರುಷೋತ್ತಮನಿದ್ದಾನೆ ರಾಮರಾಮ
ಪುಣ್ಯಕ್ಷೇತ್ರವ ಕಂಡೆ ಪುರುಷೋತ್ತಮನ ದಯದಿ ರಾಮರಾಮ ೧೭

ವೈತರಣಿಯಲ್ಲಿ ಅಧೋಕ್ಷಜನಿದ್ದಾನೆ ರಾಮರಾಮ
ವೈತರಣಿದಾಟಿದೆ ಅಧೋಕ್ಷಜನ ದಯದಿ ರಾಮರಾಮ ೧೮

ನಿರ್ಮಲ ಗಂಗೆಲಿ ನರಸಿಂಹನಿದ್ದಾನೆ ರಾಮರಾಮ
ನಿರ್ಮಲ ಗಂಗೆಯ ಮಿಂದೆ ನರಸಿಂಹನ ದಯದಿ ರಾಮರಾಮ ೧೯

ವೈಕುಂಠಗಿರಿಯಲ್ಲಿ ಅಚ್ಯುತನಿದ್ದಾನೆ ರಾಮರಾಮ
ವೈಕುಂಠಗಿರಿ ಕಂಡೆ ಅಚ್ಯುತನ ದಯದಿ ರಾಮರಾಮ ೨೦

ಜಾಹ್ನವಿಯಲ್ಲಿ ಜನಾರ್ದನಿದ್ದಾನೆ ರಾಮರಾಮ
ಜನಾರ್ದನನ ದಯದಿ ಜಾಹ್ನವಿಯಲಿ ಮಿಂದೆ ರಾಮರಾಮ ೨೧

ಉಡುಪಿ ಕ್ಷೇತ್ರದಲ್ಲಿ ಉಪೇಂದ್ರನಿದ್ದಾನೆ ರಾಮರಾಮ
ಉಡುಪಿ ಕ್ಷೇತ್ರವ ಕಂಡೆ ಉಪೇಂದ್ರನ ದಯದಿ ರಾಮರಾಮ ೨೨

ಹರಿಯುವ ನದಿಯಲ್ಲಿ ಶ್ರೀ ಹರಿಯಿದ್ದಾನೆ ರಾಮರಾಮ
ಹರಿಯ ದಯದಿಂದ ಹರಿವ ನದಿಯ ಮಿಂದೆ ರಾಮರಾಮ ೨೩

ಕೃಷ್ಣಯೆಂದರೆ ಕಷ್ಟವು ಪರಿಹಾರ ರಾಮರಾಮ
ಕೃಷ್ಣನ ದಯದಿ ಸಕಲ ಕಷ್ಟ ಬಿಟ್ಟಿತು ರಾಮರಾಮ ೨೪

ಭಕ್ತಿಲಿಪ್ಪತ್ನಾಲ್ಕು ನಾಮ ಪೇಳುವರಿಗೆ ರಾಮರಾಮ
ಭುಕ್ತಿ ಮುಕ್ತಿಯ ನೀವ ವಿಜಯವಿಠ್ಠಲರೇಯ ರಾಮರಾಮ ೨೫

೨೫

ಕ್ಷಿತಿಪರನ ಸ್ಮರಿಸಿ ಜನರು
ಕ್ಷಿತಿಪರನ ಸ್ಮರಿಸಿ ನಿಮಗಪವಿಜಯವೆಂದಿಗೆ ಇಲ್ಲ–ಸು
ಪಥವಾಗಿಪ್ಪದನುದಿನ ಸಂಚರಿಪ
ಮಾರ್ಗತಪನಾಬ್ಜವಂಶದಲಿ–ದಿ
ಪುತರಾದ ವರನೆ ಕೃಪವನಧಿ ಹರಿವೊಲಿವಾ ಪ

ಬಲಿ ವಿಭೀಷಣ ರಂಧ್ರಗಣ ರಂತಿರೇವತ
ಮಲಯಧ್ವಜ ರಾಮಭೋಜಾ ಯದು
ಬಲಗಿರಿಕ ಗಾಂಧಾರ ಗಯಸೇತು ಈಶ್ವರ
ಕುಲಿಶಧ್ವಜ ಸಗರ ವೀರಾ
ನಳ ಹರಿಶ್ಚಂದ್ರ ಚಂದ್ರಕಾಂತ ಆಕಾಶ
ಸುರಭ ಶಶಿಬಿಂದು ಮಾಂಧಾತ ಧ್ರುವ ಶಿವಪ್ರಿಯ
ಛಲಭರತ ಆಷ್ಮಾಕ ವಾಲಿ ಲೋಹಿತನೃಗಸು
ಬಲ ಕುಕ್ಷಿ ಯದು ಭೂಷಣ ೧

ವಸುಪ್ರದ ಸುಖವೀರ್ಯ ಯದು ಕುರು ಋತುಪರ್ನ
ವಸುಧರ್ಮ ಖಟ್ವಾಂಗ ಧೃತರಾಷ್ಟ್ರ ಸೌವರ್ನ
ಶಿಶುಪಾಲ ಪವನದೇವಕ ಜನಕವೈದರ್ಭ
ಅಸಮಂಜ ಸಂಜನಾಭಾ
ವಸುದತ್ತ ಸೌಗಂಧಿಮಣಿ ಮುಕ್ತಕೇಸರೆ
ನಿಸಿದಮಣಿ ವಾಹನಾ ಮಹವೀರ್ಯ ಕ್ಷೇಮಕ
ಕುಶಿಕ ಕುಂಡಿನ ಹಸ್ತಿ ಸಂಪಾತಿ ಮಧುಪುರು
ವಸು ಅರಿಹಹೇಮಗರ್ಭ ೨

ಕುಕುಸ್ಥ ಇಕ್ಷ್ವಾಕು ಮರುತ ಮುನಿಚೈತ್ರರಥ
ವಿಕುಕ್ಷಿ ಸುರಥ ಆರಾವಾಚಿ ಶೃತಿ ಕೀರ್ತನ
ಹುಶದಿಪ್ತಕೇತ ಸುವ್ರುತವಿಭಾವ ಸು

ಶಕುತಿ ಶಿಖಿ ಸಾರ್ವಭೌಮಾ
ಸುಖಿಸೇನ ಭಗೀರಥ ಅಜಮಾನು ಸ್ವರ್ಭಾನು
ಮಖಪತೀ ಮಾಂಧಾಂತ ಧಾತ ವಿಧಾತ ಕ್ರಥ
ಕುಕುರ ಕುಂಡೋದರ ತ್ರಯಗರ್ಭ ದೀರ್ಘಾಯು
ರುಕ್ಮಾಂಗದ ವಿರಾಜ ೩

ಪುರಮೀಢ ಸುಮೀಢ ಭದ್ರಾಶ್ವ ರಮಣಕಾ
ಹರಿಧರ್ಮನೇತ್ರ ಸುನೇತ್ರಕೇತುಮಾಲ
ಪುರೋರವ ಮಿತ್ರಮನ ಜಯಸೇನ ಶುಭವರ್ಮ
ಧರಯತೀ ಪುಣ್ಯದ್ರವಿಣೌ
ಕರವೀರ ಸಾವೀರ ಪೌಷ್ಯಕೇಸರಿ ಸಿಂಗ
ಮರುರುಕ್ಷ ಪ್ರದೀಪ ದಿಲೀಪ ಅಷ್ಟಕಕಂಪ
ಅರಣಿ ಭೂಮನ್ಯು ಪ್ರಥಮಾಹವೀರ್ಯ
ಸುರದತ್ತ ಹರಿವೀರಮನ್ಯು ವಿಶ್ವಾ ೪

ಸುಮತಿ ಸುಂಹರ ರಘು ಮುಚಕುಂದ ದಶರಥ
ಸುಮನ ದುಷ್ಯಂತ ಸಂಯಾತಿ ಹಂಸಧ್ವಜ
ದಮಯಂತ ನೀಲಾಂಗ ಧರ್ಮಾಂಗದ
ಶಮಲ ವಿಮರ ರವಿಕಾಂತ ನಹುಷ
ದ್ರುಮಿಳ ಪದ್ಮಾಶತಾಯುಧ ಮಯೂರಧ್ವಜ
ಪ್ರಮಿಲ ಕೀರ್ತಿವಾನ ತೊಂಡವಾನ ವಿದಗರ್ಭ
ಅಮಿತ ಪರಾಕ್ರಮ ನಭಾಗಂಬರೀಷ
ಸೌಮಿತ್ರ ಕಾರ್ತವೀರ್ಯಾ ೫

ಜನಮೇಜಯ ಪರಮೇಷ್ಟಿ ದೀರ್ಘಾಂಗ ಪ್ರಶ್ಯಧರ
ಮಣಿಗ್ರೀವ ಭೃಗುದೇವದತ್ತ ಪ್ರಿಯನಾವರ್ತ
ಮಣಿನಾಭ ಚೋಳ ತ್ರಿಶಂಖ ಶಂಖಣ ಶಂಖ
ಮಣಿಕೇತ ಪಾಂಚಜನ್ಯ
ಧನಂಜಯ ಕಾಶಿ ಸುಕಾಂತಕುಶ ಕುಶನಾಭ

ಮಣಿಸೇನ ಪಾಂಡವ ಜಂಬುನದಿ ದಿವ್ಯರಥ
ವನ ಕಕ್ಷಸೇನ ಜಾಕ್ಷಿತ ಪರಿಕ್ಷಿತ ದೃಂಹ್ಯ
ಅನು ಅನಾಯುಪದಾತೀ ೬

ಹರಿಶ್ರವ ಉತ್ತಾನಪಾದ ಕುಂಡಲಗಜ
ಯವನಾಶ್ವರಾಜ ನೀಲಧ್ವಜ ಸುರವೃತ್ತ
ಕವೇರ ಆಯು ದೃಢಾಯು ವಿಶಾಲ ಪ್ರತಿ
ಶ್ರವ ಚಿತ್ರವೀರ್ಯ ಸುಭಗಾ
ಕವಿವಂಗ ಅಂಗ ಕೋಶಲ ಹೇಮಗರ್ಭ ಶುಚಿ
ಶ್ರವ ಇಳಾವರ್ತ ವಿದುರ ತ್ರಯಗರ್ಭಧೃತ
ಸವಿರಜಾಮೀಢ ವಿಕುಂಠ ಸುರಭೀ ಸೂ
ಹವಿ ಅಭಿರಾಜ ಸುಹಿಜಾ ೭

ಶಿಂಧು ಶುಭವರ್ನ ಸಿರ್ಯಾತಿ ಯಯಾತಿ ಸತ್ಯ
ಸಂಧ ರೋಹಣ ಸಾಹದೇವ ವಾಜೀ
ನಂದನ ಸುಮನ್ಯು ಸ್ವರ್ಭಾನು ಪಿಪ್ಪಲರವಿ
ಬಿಂದು ದ್ಯುಮನಿ ಹಂಪಾತಿ
ಚಂದ್ರಹಾಸ ಅಶ್ವವಂತ ಶಬಲಾಶ್ವ ಅಣು
ಚಂದ್ರವರ್ಣ ಚಪನ ಸತ್ಯ ಸಯಾತಿ ಬಲ
ವೃಂದ ತಾಮ್ರಧ್ವಜ ವೃಷ್ಣಿ ಸುಹೋತ್ರ ದೇವ
ವೃಂದ ವಿಷ್ಣುವರ್ಧನ ೮

ಎಂತು ಹೇಳಲಿ ಕ್ಷಿತಿಪರಾಯರ ಪೆಸರುಗಳ
ಸಂತತದಲಲ್ಲೆಣಿಸಿದರೆ ಪಾರಗಂಡವರಾರು
ಚಿಂತನೆಗೆ ತೋರಿದುದು ಸಾರಿದೆನು ಚನ್ನಾಗಿ
ಸಂತರು ಕೇಳಿ ಲಾಲಿಸೀ
ಪಿಂತೆ ಬಲು ಜನನದಾ ದುರಿತೌಘ ಪೋಗುವದು
ಸಂತೋಷವಾಗುವುದು ಪಠಿಸಿದ ಜನಕೆ ನಿತ್ಯ
ಕಂತುಪಿತ ವಿಜಯವಿಠ್ಠಲನ ಚರಣಾಂಬುಜವ
ಸಂತತಿ ಸಹಿತ ಕಾಂಬರೂ ೯

೨೬

ಕೂಗಿತು ತಾಮ್ರದ ಚೂಡ
ಕ್ಷೀರಸಾಗರಶಯನನಲ್ಲದಿಲ್ಲಹ ಪರ ಇಲ್ಲೆಂದು ಪ

ಪಕ್ಕಗಳೆರಡು ಚಪ್ಪರಿಸಿ ಡಂಗುರುವ ಹೊಯ್ಯೆ
ಸೂಕ್ಕಿದವರ ಎದೆ ಜರ್ಝರಿಸೆ
ರೆಕ್ಕಿಯ ಮುಖವೆತ್ತಿ ಹರಿಸರ್ವೋತ್ತಮನೆಂದು
ಕೊಕ್ಕಟೆ ಕೊಕ್ಕಟೆ ಕೊಕ್ಕಟ್ಟೆ ಕೋ ಎಂದು ೧

ಒಂದು ಝಾವದಿ ಓಂಕಾರನೆಂದು ಕೂಗೆ
ಇಂದಿರಾಪತಿ ವಿಧಿಜನಕನೆಂದೂ
ಸಂದೇಹಪಡಬೇಡಿ ಸಕಲಾಂತರ್ಯಾಮಿ ಶ್ರೀ
ಬಿಂದುಮಾಧವನಲ್ಲದಿಹಪರವಿಲ್ಲವೆಂದು ೨

ಎರಡು ಝಾವದಿ ಪುರುಷೋತ್ತಮನೆಂದು
ಗರುಡಾಚಲ ನರಸಿಂಹನೆಂದು
ಮೂರನೆ ಝಾವಕ್ಕೆ ವೀರನಾರಾಯಣ
ಹರಿಗಯಾಗದಾಧರನಲ್ಲದಿಲ್ಲವೆಂದು ೩

ನಾಲ್ಕನೆ ಝಾವದಲಿ ಬದರಿವರನಿಲಯ
ಏಕೋ ನಾರಾಯಣ ದೇವನೆಂದು
ಶ್ರೀ ಕಂಚಿವರದನೆ ಐದನೆ ಝಾವಕ್ಕೆ
ಗೋಕುಲಪತಿಯಲ್ಲದಿಹಪರ ಇಲ್ಲವೆಂದು ೪

ಯಾಮ ಆರರೊಳು ವ್ಯಾಸಮೂರ್ತಿ ಎಂದು
ರೋಮಕೋಟಿ ಬ್ರಹ್ಮರುದ್ರರೆಂದು
ಸಾಮಗಾಯನ ಕಾವೇರಿ ರಂಗೇಶ
ಸ್ವಾಮಿ ಅಳಗಿರಿ ತಿಮ್ಮನಲ್ಲದಿಲ್ಲವೆಂದು ೫

ಏಳು ಝಾವದಿ ವೇಣಿಮಾಧವನೆಂದು
ಮೇಲಗೋಟೆ ಚಳ್ಳಾಬಳ್ಳನೆಂದು
ಶ್ರೀಲೋಲ (ಆಯೋಧ್ಯಾ) ರಘುರಾಮ ಗಂಡಕಿ
ಸಾಲಿಗ್ರಾಮನಲ್ಲದಿಲ್ಲಹ ಪರ ಇಲ್ಲೆಂದು ೬

ಝಾವ ಎಂಟರೊಳು ಶ್ವೇತ ವರಾಹನೆಂದು
ಮಾವ ಮರ್ದನ ಜನಾರ್ದನನೆಂದು
ಶ್ರೀ ಉಡುಪಿಯ ಕೃಷ್ಣ ವಿಜಯವಿಠ್ಠಲ ತಿಮ್ಮ
ದೇವನಲ್ಲದೆ ಬೇರೆ ಇಹಪರ ಇಲ್ಲವೆಂದು ೭

೨೭

ಕೂಗೆಲೋ ಮನುಜ ಕೂಗೆಲೋ ಪ

ಸಾಗರಶಯನನೆ ಜಗಕೆ ದೈವವೆಂದು ಅ

ಅಚ್ಯುತಾನಂತ ಗೋವಿಂದ ಮಾಧವ ಕೃಷ್ಣ
ಸಚ್ಚಿದಾನಂದೈಕ ಸರ್ವೋತ್ತಮ
ಸಚ್ಚರಿತ ರಂಗ ನಾರಾಯಣ ವೇದ
ಬಚ್ಚಿಟ್ಟವನ ಕೊಂದ ಮತ್ಸ್ಯ ಮೂರುತಿಯೆಂದು ೧

ನರಹರಿ ಮುಕುಂದ ನಾರಾಯಣ ದೇವ
ಪರಮ ಪುರುಷ ಹರಿ ಹಯವದನ
ಸಿರಿಧರ ವಾಮನ ದಾಮೋದರ ಗಿರಿ
ಧರಿಸಿದ ಸುರಪಾಲ ಕೂರ್ಮ ಮೂರುತಿಯೆಂದು ೨

ಪುರುಷೋತ್ತಮ ಪುಣ್ಯಶ್ಲೋಕ ಪುಂಡರೀಕ
ವರದ ಅಪಾರ ಸದ್ಗುಣನಿಲಯ
ಮುರುಮರ್ದನ ಮಂಜು ಭಾಷಣ ಕೇಶವ
ನಿರ್ಮಲ ದೇವ ಭೂವರಾಹಮೂರುತಿ ಯೆಂದು ೩

ನಿಗಮವಂದಿತ ವಾರಿಜನಾಭ ಅನಿರುದ್ಧ
ಅಘನಾಶ ಅಪ್ರಾಕೃತ ಶರೀರ
ಸುಗುಣ ಸಾಕಾರ ಜಗದತ್ಯಂತ ಭಿನ್ನ
ತ್ರಿಗುಣರಹಿತ ನರಮೃಗ ರೂಪಾನೆಂದು ೪

ವಟಪತ್ರಶಯನ ಜಗದಂತರ್ಯಾಮಿ
ಕಟಕ ಮುತ್ತಿನಹಾರ ಕೌಸ್ತುಭ ವಿಹಾರ
ತಟಿತ್ಕೋಟಿ ನಿಭಕಾಯ ಪೀತಾಂಬರಧರ
ನಿಟಿಲಲೋಚನ ಬಾಲವಟು ಮೂರುತಿಯೆಂದು ೫

ವಿಷ್ಣು ಸಂಕರುಷಣ ಮಧುಸೂದನ ಶ್ರೀ
ಕೃಷ್ಣ ಪ್ರದ್ಯುಮ್ನ ಪ್ರಥಮ ದೈವವೆ
ಜಿಷ್ಣು ಸಾರಥಿ ರಾಮ ಅಚ್ಯುತಾಧೋಕ್ಷಜ
ಸೃಷ್ಟಿಗೊಡೆಯ ಭಾರ್ಗವ ಮೂರುತಿಯೆಂದು ೬

ಇಭರಾಜ ಪರಿಪಾಲ ಇಂದಿರೆಯರಸ
ನಭ ಗಂಗಾಜನಕ ಜನಾರ್ದನನೆ
ವಿಭುವೇ ವಿಶ್ವರೂಪ ವಿಶ್ವನಾಟಕ ಋ
ಷಭ ದತ್ತಾತ್ರೇಯ ಶ್ರೀ ರಾಮಮೂರುತಿಯೆಂದು ೭

ವೈಕುಂಠ ವಾಮನ ವಾಸುದೇವ ರಂಗ
ಲೋಕೇಶ ನವನೀತ ಚೋರ ಜಾರ
ಗೋಕುಲವಾಸಿ ಗೋವಳರಾಯ ಶ್ರೀಧರ
ಏಕಮೇವ ಶ್ರೀ ಕೃಷ್ಣ ಮೂರುತಿಯೆಂದು ೮

ಹೃಷಿಕೇಶ ಪರಮಾತ್ಮ ಮುಕ್ತಾಮುಕ್ತಾಶ್ರಯ
ಅಸುರ ಭಂಜನ ತ್ರಿವಿಕ್ರಮ ಕಪಿಲ
ಕುಸುಮ ಶರನಯ್ಯ ಶಾರ್ಙಧರಾಚಕ್ರಿ
ವಿಷಹರ ಧನ್ವಂತ್ರಿ ಬೌದ್ಧ ಮೂರುತಿಯೆಂದು ೯

ಸರ್ವನಾಮಕ ಸರ್ವಚೇಷ್ಟಕ ಸರ್ವೇಶ
ಸರ್ವಮಂಗಳ ಸರ್ವಸಾರ ಭೋಕ್ತ
ಸರ್ವಾಧಾರಕ ಸರ್ವ ಗುಣಗಣ ಪರಿಪೂರ್ಣ
ಸರ್ವ ಮೂಲಾಧಾರ ಕಲ್ಕಿ ಮೂರುತಿಯೆಂದು ೧೦

ಈ ಪರಿ ಕೂಗಲು ಆಪತ್ತು ಪರಿಹಾರ
ಅಪಾರ ಜನ್ಮ ಬೆಂಬಿಡದಲೆ ಸಪ್ತ
ದ್ವೀಪಾಧಿಪ ನಮ್ಮ ವಿಜಯವಿಠ್ಠಲರೇಯ
ಅಪವರ್ಗದಲ್ಲಿಟ್ಟು ಆನಂದಪಡಿಸುವ ೧೧

೨೮

ಚಿನ್ಮಯ ಚಿದಾನಂದ ನೀನೆ
ಸನ್ನುತಾಂಗಿಯ ರಮಣ ಸಕಲ ಲೋಕಕೆ ಕರುಣ ಪ

ಭೃಗು ಮುನಿಪ ಹರಿಹರಾ ಹಿರಣ್ಯಗರ್ಭಾ
ದಿಗಳ ವೆಗ್ಗಳವ ನೋಡಲಿ ಬಂದ್ಯೋ
ಮಿಗಿಲಾದ ಪರದೈವ ಹರಿಯೆಂದು ಕೊಂಡಾಡೆ
ಗಗನ ವಾಸಿಗಳು ಪೂಮಳೆಗರಿಯೆ ಹರುಷದಲಿ ೧

ಮಡುವಿನೊಳ್ ಕರಿರಾಜ ಸಿಕ್ಕಿ ಸಾವಿರದ ವರುಷ
ಬಿಡದೆ ನಕ್ರನ ಕೂಡ ಕಾದಿ ಸೋತು
ಒಡಿಯರಾರುಂಟೆ ತ್ರಿಮೂರ್ತಿಗಳೊಳಗೆನಲು
ಮೃಡನಜರು ಬೆರಗಾಗಿ ಸಾಮಜನ ಪಾಲಿಸಿದೆ ೨

ಸೃಷ್ಟಿಜಲ ಮುಸುಕಿ ಬ್ರಹ್ಮಾಂಡ ಪ್ರಳಯಕಾಲದಲಿ
ನಿಟಿಲಾಕ್ಷ ಮೊದಲಾದ ದೇವತೆಗಳು
ಜಠರದೊಳು ಜಗಕರ್ತನೆಂದೆನಿಸಿದೆ
ವಟಪತ್ರಶಯನ ಸಿರಿವಿಜಯವಿಠ್ಠಲರೇಯಾ ೩

೨೯

ಜಾಣ ನಿನಗೆ ಸರಿಗಾಣೆ
ಪ್ರಮಾಣ ಕೊಟ್ಟ ತರುವಾಯ ತಪ್ಪುವ ನೀನಲ್ಲ ಪ

ಅಸುರ ತಾರಕನು ಸುಮನಸರ ಬಳಲಿಸುತಿರಲು
ಬಿಸಿಗಣ್ಣವನ ತಪಸು ಹಾನಿಮಾಡಿ
ಶಶಿವದನೆ ಪಾರ್ವತಿಯಲ್ಲಿ ಗರ್ಭವನಿಡಿಸಿ
ಹಸುಳೆ ಕೈಯಿಂದ ರಾಕ್ಷಸನ ಕೊಲ್ಲಿಸಿದೆ ೧

ಶಂಬರ ದೈತ್ಯಜನ ವರದಿಂದ ಅನಿಮಿಷ-ಕ
ದಂಬವನು ಸೋಲಿಸಿ ಮೆರೆವುತಿರಲು
ಅಂಬುತನಯುದರದಲ್ಲಿ ಹೊಕ್ಕು ಬೆಳೆದದು ಬಂಡು
ಅಂಬರರು ನಲಿಯೆ ವನಶಿರವ ಚಂಡಾಡಿದಾ ೨

ಮನಮುಟ್ಟಿ ನಿನ್ನನು ವಂದನೆಮಾಡಿ ನರಗೆ
ಮನದ ತಾಪವ ಬಿಡಿಸಿ ಮುಕ್ತಿ ಕೊಡುವಾ
ಘನ ಕೃಪಾನಿಧಿ ಸಿರಿ ವಿಜಯವಿಠ್ಠಲರೇಯನ
ಅನುಸರಿಸಿ ಬಾಳುವಂತೆ ಏಕಚಿತ್ತವನೀವಾ ೩

೩೦

ತರತಮದಿ ಶರಣು ಮಾಡುವೆ ನಿಮಗೆ
ಕರಣಶುದ್ಧಿಯಲ್ಲಿ ಕರುಣ ಮಾಡಿ ಎನ್ನ ಪರಿಪಾಲಿಸಬೇಕು
ನಿರುತ ಬಿಡದೆ ಮನ ಸಿರಿಹರಿ
ಚರಣಕ್ಕೆ ಎರಗುವಂತೆ ವರಭಕುತಿಯಲ್ಲಿ ಪ

ಸಿರಿ ಪರಮೇಷ್ಠಿ ವಾಯು ಸರಸ್ವತಿ ಭಾರತೀ
ಗರುಡ ಉರಗ ಈಶ ಹರಿ ಸತಿಯರು ಮೂ

ರೆರಡು ಜನರು ಆ ತರುವಾಯ ಸೌಪರ್ಣಿ
ವರವಾರುಣಿ ಗಿರಿಜೆ ಸಿರಿ ಮತ್ತೆ ಇಂದ್ರ ಕಾಮ
ಮರುತಾಹಂತಾರನ ಸ್ಮರಿಸುತಲೆ ಮನು
ಗುರು ದಕ್ಷನೆ ಶಚಿ ಮರುತ ಪ್ರವಾಹ ಮೂ
ವರು ಸನಕಾದ್ಯರು ದುರಿತಶಾಸನ ಶಶಿ
ತರಣಿ ಶತರೂಪ ವರುಣ ನಾರದರ ೧

ಮುನಿಗಳ ಶ್ರೇಷ್ಠ ಭೃಗು ಅನಲ ಪ್ರಸೂತಗಾಧಿ
ತನುಜ ವಾರಿಜಾಜನ್ನತನಯರು ವೈವಸ್ವತ
ಎಣಿಸಿ ಹತ್ತನೆಯ ಸೂರ್ಯ ಅನಿಮಿಷ ಗುರು ಸ್ತ್ರೀ
ದನು ಪ್ರವಾಹವೆಂಬ ಅನಿಲನ್ನ ತಳೋದರಿ
ಅನಿಲದೇವಜ ಅಶ್ವಿನಿ ದೇವತೆಗಳು ಅನಳಾಕ್ಷಸುತ
ಧನಪತಿ ಪ್ರಹ್ಲಾದ ಗುಣಿಸುವೆ ವಸು ಏ
ಳನು ದಶರುದ್ರರು ಇನಿತರೊಳಗೆ ಒಬ್ಬನ ಬಿಟ್ಟನು ದಿನ ೨

ದಶ ವಿಶ್ವದೇವತರು ಸ್ವಶನರೊಳಗೆಗೀರ್ವರ
ಪ್ಸರರು ತೆಗೆದು ಮತ್ತೆಣಿಸಿ ನಾಲ್ವತ್ತೇಳರನ್ನ
ರಸದ್ಯುನವಕೋಟಿ ತ್ರಿದಶರೂಪ ಪಿತ್ರರೂ
ಎಸವ ಸೋಮ ಪುನರ್ವಾಪಸರಿಪಶತಸ್ಥರು
ನಸುನಗೆ ಕರ್ಮಜ ಋಷಿ ಈರ್ವರು ಮನು
ಹಸನಾದತಿ ಚತುರ್ದಶ ಇಂದ್ರರ ಮಧ್ಯ
ಕುಶಲ ಸಪ್ತರಿಗೆ ತುತಿಸೆ ಕಾಲಕಾಲದಿ ೩

ಗಂಧರ್ವರೆಂಟು ಏಳುಮಂದಿ ಪಿತರುಗಳು
ಮಾಂಧಾತ ಬಲಿ ಶಶಿಬಿಂದುವೆ ಪ್ರಿಯವ್ರತ
ರಿಂದಲಿ ಪರೀಕ್ಷಿತ ನಂದ ಕಕುಸ್ಥ ಗಯ
ಕುಂದದೆ ಯದುಕುಲದಿಂದ ಬಂದ ಹೈಹಯನು
ಚಂದ್ರನ ಮಡದಿ ಏಳೊಂದನೆ ಸೂರ್ಯನು

ಮಂದಹಾಸಾಂಬುಜ ಬಾಂಧವನಸತಿ
ಮಂದಾಕಿನಿ ರವಿನಂದನ ರಾಣಿ
ಕಲದರ್ಪನಸೂಸೆ ವೃಂದಾರಕರಿಗೆ ೪

ಸದಮಲ ಸ್ವಾಹಾದೇವಿ ಬುಧಾ ಉಷಾದೇವಿ ಶನಿ
ಮುದದಿಂದ ಪುಷ್ಕರ ಸಹೃದಯ ತುಂಬರರಿಂದ
ಮೊದಲಾಗಿ ನೂರುಮಂದಿ ತ್ರಿದಶ
ಗಂಧರ್ವರು ಚದುರೆ ಊರ್ವಸಿ ರಂಭೆ
ಮನದನ್ನ ಸೋಲಿಪ ಬಿಂಕದ ಅಪ್ಸರರು
ಅದಿತಿ ಕಶ್ಯಪದಿತಿ ಹದಿನಾರು ಸಾವಿರ
ಬುಧನ ಮಕ್ಕಳು ತಪೋನಿಧಿಗಳು ಎಂಭತ್ತು
ತದುಪರಿ ಅಜಾನಜ ತ್ರಿದಶರು ಓಜಸ್ತರೆದರಾಗಿ ನಾನಿಂದು ೫

ಹರಿಭಕ್ತರಾದ ಅಪ್ಸರ ಸ್ತ್ರೀಯರು ಕೆಲಕೆಲವು
ಮರಳೆ ಚಿರಾಖ್ಯನಾಮದಿರುತಿಪ್ಪ ಪಿತೃಗಳು
ಪರಿಪರಿ ನೂರುಕೋಟಿ ಪರಮಋಷಿಗಳಿಗೆ
ಸುರ ಗಂಧರ್ವರ ವಿಸ್ತರ ಮನುಜ ಗಂಧರ್ವ
ಧರಿಣಿಜಾಕವಿ ಮೇಲರಿದು ಜಯಂತಗೆ
ಕರ ಮುಗಿವೆ ಕ್ಷಿತಿಪರನು ಕೊಂಡಾಡುತ
ಇರುಳು ಹಗಲು ಉತ್ತಮರ ಮನುಜರ ಪಾಡಿ
ನಿರುತ ಜಂಗಮ ಸ್ಥಾವರಗಳ ನೋಡುತ ೬

ಭುಜಗಶಯನನಿಂದ ಸೃಜಿಸಿದ್ದ ಸರ್ವರಿಗೆ
ನಿಜವಾಗಿ ಶಿರವಾಗಿ ಭಜಿಸುವೆ ಚನ್ನಾಗಿ
ತ್ರಿಜಗದೊಳಗೆ ಎನ್ನ ರಜ ತಾಮಸ ಗುಣದ
ವೃಜವೆ ಓಡಿಸಿ ನಿತ್ಯಸುಜನ ಮಾರ್ಗವ ತೋರಿ
ರಜನಿ ಚರಾಂತಕ ವಿಜಯವಿಠ್ಠಲನ್ನ
ಭಜಿಪೆನದಕೆ ನಿಮ್ಮ ನಿಜವ್ಯಾಪಾರದಿ
ಸೃಜಿಸಿ ಕೊಡುತ ಧರ್ಮ ವೃಜಗಳೊದಗಿಸುತ್ತ
ಕುಜನ ಮತದ ಮೇಲೆ ಧ್ವಜವೆತ್ತಿಸುವುದು ೭

೩೧

ತಿಳಿವರು ಮನುಜರು ತಿಳಿದೊಮ್ಮೆ ತಿಳಿಯರು
ನಳಿನಾಕ್ಷ ನಾಶರಹಿತನಲ್ಲದಿಲ್ಲವೆಂದು ಪ

ಅರ್ಕಜಂಬುಜ ಬಲ್ಲ ....
ಮಾರ್ಕಂಡೆಯ ಮುನಿ ಬಲ್ಲ ಮಹಿ ಬಲ್ಲಳು
ಅರ್ಕ ತನುಜ ಬಲ್ಲ ಅಂಬರೀಷ ಬಲ್ಲ ದೇ
ವರ್ಕಳವೊಡಿಯ ಮಾಧವನಲ್ಲದಿಲ್ಲವೆಂದು ೧

ವಾಯುನಂದನ ಬಲ್ಲವಾ............. ಯತಿ ಬಲ್ಲ
ಕಾಯಜ ಹರ ಬಲ್ಲ ಕರಿ ಬಲ್ಲನೊ
ರಾಯ ಧರ್ಮಜ ಬಲ್ಲ ರಾಜ ರಾಜನು ಬಲ್ಲ
ಮಾಯಾರೂಪತಾಳಿ ಹರಿಯಲ್ಲದಿಲ್ಲವೆಂದು ೨

ಗರುಡದೇವನು ಬಲ್ಲ ಗಂಗಾತನಯ ಬಲ್ಲ
ಉರಗಾಧಿಪತಿ ಬಲ್ಲ ಉಮೆ ಬಲ್ಲಳು
................ಶರಣರಣ್ಣಪ್ಪ ಪರಮಾತ್ಮ –ಇಂ
ದಿರಾಪತಿಯಲ್ಲದಿಲ್ಲವೆಂದು ೩

ಪಾರಾಶರನು ಬಲ್ಲ ಪ್ರಹ್ಲಾದ ಭಕ್ತ ಬಲ್ಲ
ನಾರದಮುನಿ ಬಲ್ಲ ನರಬಲ್ಲನು
ವಾರಿಜಸಖ ಬಲ್ಲ ವಶಿಷ್ಠ ತಪಸಿ ಬಲ್ಲ
ಧಾರುಣಿಕರ್ತೃ ಶ್ರೀಧರನಲ್ಲದಿಲ್ಲವೆಂದು ೪

ಬಲಿಚಕ್ರವರ್ತಿ ಬಲ್ಲ ಭೃಗುಋಷೇಶ್ವರ ಬಲ್ಲ
ಕಳಸಸಂಭವ ಬಲ್ಲ.................. ಬಲ್ಲನು
ಗಿಳಿಮುಖದವ ಬಲ್ಲ ಗೌತಮ ಮುನಿ ಬಲ್ಲ
ಇಳಿಗೆ ಆಧಾರ ಶ್ರೀಕೃಷ್ಣನಲ್ಲದಿಲ್ಲರೆಂದು ೫

ಉದಧಿರಾಯನು ಬಲ್ಲ ಉದ್ಧವ ಯದು ಬಲ್ಲ
ವಿಧುಶೇಖರ ಬಲ್ಲ ವಿದುರ ಬಲ್ಲ
ಸುದತಿದ್ರೌಪದಿ ಬಲ್ಲಳು ಸುಧನ್ವ ತಾ ಬಲ್ಲ
ಪದುಮನಾಭನೆ ಪರಗತಿಯಲ್ಲದಿಲ್ಲವೆಂದು ೬

ಜನಕರಾಜನು ಬಲ್ಲ ಜಾಹ್ನವಿನದಿ ಬಲ್ಲಳು
ದನುಜೋತ್ತಮ ಬಲ್ಲ ವಾಲ್ಮ್ಯ ಬಲ್ಲ
ಅನುಸಾಲ್ವಪತಿ ಬಲ್ಲ ಅಜಮಿಳನು ಬಲ್ಲ
ಜನಸ್ಥಿತಿಲಯ ಜನಾರ್ದನ ಅಲ್ಲದಿಲ್ಲವೆಂದು ೭

ಜಮದಗ್ನಿ ಬಲ್ಲ ಜಾತವೇದಸ ಬಲ್ಲ
ಸಾಮಾವರ್ತಿ ಬಲ್ಲ ಶಶಿ ಬಲ್ಲನು
ಆ ಮಹಾಕಪಿ ಬಲ್ಲ ಅಕ್ರೂರನು ಬಲ್ಲ
ರೋಮ ರೋಮ ಬ್ರಹ್ಮಾಂಡ ರಾಮನಲ್ಲದಿಲ್ಲವೆಂದು ೮

ದಾಸ ಪುಂಡ ಪುಂಡರೀಕ ಬಲ್ಲ
ದಾ.................. ವಂದಾರವ ಬಲ್ಲ
ಶೇಷ ವಿರೋಧಿ ಸಿರಿ ಬಲ್ಲಳು
.... ಆಶಾ ಶ್ರೀಶ ವಿಜಯವಿಠ್ಠಲೇಶನಲ್ಲದಿಲ್ಲವೆಂದು ೯

೩೨

ದೇಶದೊಳಗೀ ಕ್ಷೇತ್ರ ಬಲು ಉತ್ತಮಾ
ದಾಸೋಹಂ ಎಂದೆನಲು ಗತಿಗೆ ಪಥವ ಕೊಡುವ ಪ

ಹರಿಸರ್ವೋತ್ತಮನೆಂದು ನೆರಪಿದಂಥ ಮುನಿ
ವರನ ಶಾಪದಲಿ ಪಾವಕನು ಬಂದು

ಪರಮತಪ ಮಾಡಿದನು ವರವಿತ್ತ
ಹರನೊಲಿದು ಧರೆಯೊಳಗೆ ಈ ದೇವನಿ
ಪುಷ್ಕರಣಿ ಎನಿಸುವುದು ೧

ದಿವಿಜರಿಗೆ ಸೋತು ದಾನವರು ಶುಕ್ರಗೆ ಹೇಳಿ
ಶಿವನೊಲಿಸೆ ಅಮೃತವ ಮಾಳ್ಪೆನೆಂದು
ಕವಿ ಇಲ್ಲೆ ತಪಮಾಡೆ ಅಂದು ಸುರಧೇನು ವಾ
ಸವನ ಕೈಕೊಳಲು ಶ್ರೀರಾಮನಿಂದಲಿಗತಿ ೨

ರಾಯ ಋಷಿಗಾಧೇಯು ಬ್ರಹ್ಮತ್ವಗೋಸುಗ
ಗಾಯತ್ರಿ ಒಲಿಸಿದನು ಈ ಸಿಲೆಯಲೀ
ಆಯು ಉಳ್ಳದರೊಳಗೆ ಇಲ್ಲಿ ಕುಳಿತು ಬಂದು
ಗಾಯತ್ರಿ ಮಂತ್ರವನು ಜಪಿಸೆ ನರನು ಮುಕ್ತಾ ೩

ಅಗಸ್ತೀಶ್ವರವಿಡಿದು ರಾಮಲಿಂಗ ಪರಿಯಂತ
ಬಗೆಬಗೆ ತೀರ್ಥ ಎರಡೊಂದು ಪದ್ಮ
ಮಿಗೆ ಷೋಡಶಕೋಟಿ ಅರವತ್ತು ಸಾವಿರ
ಸೊಗಸಾಗಿವಿಪ್ಪವಿಲ್ಲಿ ಕಾವೇರಿ ಮಧ್ಯದಲ್ಲಿ ೪

ರಾಮನಾಥನ ಪುರವೆಂಬೊ ಪೆಸರೆ ಉಂಟು
ವ್ಯೋಮಕೇಶನು ನಾಲ್ಕು ಹೆಸರಿನಿಂದಾ
ತಾ ಮಹೋತ್ಸವದಿಪ್ಪ ವಿಜಯವಿಠ್ಠಲನಂಘ್ರಿ
ತಾಮರಸ ಧ್ಯಾನವನು ಮಾಡುತ ಭಕ್ತರ ಪೊರೆವಾ ೫

೩೩

ದೋಷ ದೂರ ಜನಾರ್ದನ ದೋಷ ದೂರಾ ಪ

ದೋಷ ದೂರ ಎನ್ನ ಸಾಕುವುದು ಪರಾಶರವರದಾ ಅ

ಬಲು ಕಾಲಗಳಿಂದ ನೆಲೆಯ ಕಾಣದೆ ನಿನ್ನ
ಚೆಲುವ ಚರಣ ದ್ವಂದ್ವ ನೆಳಲನಾಶ್ರೈಸಿದೆ ೧

ಕಂಡೆ ನಾ ನಿನ್ನಯ ಪುಂಡರೀಕ ಪಾದ
ಚಂಡಾಘ ತಿಮಿರ ಮಾರ್ತಾಂಡ ಮುರವೈರಿ ೨

ಅಜಗೆ ಪ್ರಸನ್ನ ವಿರಜಭಾಗ್ಯ ಸಂಪನ್ನ
ವಿಜಯಮೂರುತಿ ನಮ್ಮ ವಿಜಯವಿಠ್ಠಲರೇಯ ೩

೩೪

ನಮೋ ನಮೋ ನಾರಾಯಣ ನಮೋ ಶ್ರುತಿ ನಾರಾಯಣ
ನಮೋ ಬಾದರಾಯಣ ನರನ ಪ್ರಾಣ ಪ

ಶಿವನ ಮೋದದಲಿ ಪಡೆದೆ ಶಿವರೂಪದಲಿ ನಿಂದೆ
ಶಿವನೊಳಗೆ ಏರಿದೆ ಶಿವನಿಗೊಲಿದೆ
ಶಿವಗೆ ನೀ ಮಗನಾದೆ ಶಿವ ತಾತನೆನೆಸಿದೆ
ಶಿವನ ಮಗನಾ ಪಡೆದೆ ಶಿವನ ಕಾಯ್ದೆ ೧

ಶಿವಗೆ ಸಹಾಯಕನಾದೆ ಶಿವನ ಕಂಗಡಿಸಿದೆ
ಶಿವನ ಧನುವನು ಮುರಿದೆ ಶಿವನೊಲಿಸಿದೆ
ಶಿವನ ಜಡ ಮಾಡಿದೆ
ಶಿವನ ಒಡನೆ ಬಂದೆ ಶಿವಮುನಿಗೆ ಉಣಿಸಿದೇ ಕೇಶವನೆನಿಸಿದೇ ೨

ಶಿವನ ಜಡೆಯೊಳಗಿದ್ದ ಶಿವಗಂಗೆಯ ಪೆತ್ತೆ
ಶಿವನ ಕೂಡಲಿ ಕಾದಿದವನ ಭಾವ
ಶಿವ ಭಕ್ತನ್ನ ನಿನ್ನವನಿಂದ ಕೊಲ್ಲಿಸಿದೆ
ಶಿವನ ಶೈಲವನೆತ್ತಿದವನ ವೈರಿ ೩

ಶಿವ ನುಂಗಿದದ ನುಂಗಿದವನ ಒಡನಾಡುವ
ಶಿವ ಪರಾಶಿವ ನಿನ್ನ ಶಿವ ಬಲ್ಲನೇ

ಶಿವ ಕೊಳದವರ ಉದ್ಧವ ಮಾಡುವೆನೆಂದು
ಯವೆ ಇಡುವನಿತರೊಳಗೆ ಧವಳ ಹಾಸಾ ೪

ಶಿವನ ಮೇಲಿದ್ದ ಸಹಭವೆ ರಮಣ ಸರ್ವದಾ
ಶಿವನೊಳಗಿಳಿದ ಶಿಷ್ಯನಿವ ಹರಾತೀ
ಶಿವ ಭೂಷಣ ತಲ್ಪ ಶಿವ ಸಮಾನಿಕ ರೂಢ
ಶಿವನ ಮನೆ ತೊಲಗಿಸುವ ಶಿವ ಬಾಂಧವಾ ೫

ಶಿವನ ಧೊರಿಯೆ ಜ್ಞಾನ ಶಿವ ಹಚ್ಚುವದೆ ಕೊಡು
ಶಿವಮಣಿ ಎನಿಸುವ ಸ್ತವ ಪ್ರಿಯನೇ
ಶಿವನು ವಾಹನ ವೈರ ಶಿರವ ತರಿಸಿದೆ ದೇವ
ಶಿವ ಪ್ರತಿಷ್ಠಿಸಿದೆ ಶಿವಗೆ ಕಾಣಿಸದಿಪ್ಪೆ ೬

ಶಿವನ ಸೋಲಿಸಿದವನ ಜವಗೆಡಿಸಿದೆ
ಶಿವನು ಕುದರಿಯ ಹೆರವ
ಅವನು ಕಾಯಿದ ಗೋವ
ಶಿವನವತಾರ ಶಸ್ತ್ರವನು ಹಳಿದೆ ೭

ಶಿವನರ್ಧನಾಗಿ ದಾನವನು ಕೊಂದ ಮಹಿಮಾ
ಶಿವಋಷಿ ಪೇಳಿದ ಯುವತಿ ರಮಣಾ
ಶಿವನ ವೀರ್ಯವ ಧರಿಸಿದವನ ಮುಖದಲಿ ಉಂಬ
ಅವರ ಬೆಂಬಲವೇ ಯಾದವಕುಲೇಶಾ ೮

ಶಿವಗೆ ತ್ವಂಚ ಬಾಹುಯೆಂದು ಪೇಳಿ ಮೋಹ
ದಿವಿಚಾರಿಗಳ ತಮಸಿಗೆ ಹಾಕುವೆ
ಶಿವಮೂರುತಿ ನಮ್ಮ ವಿಜಯವಿಠ್ಠಲರೇಯ
ಶಿವನಾಳು ಮಾಡಿ ಆಳುವ ದೈವವೇ ೯

೩೫

ನಾಮತ್ರಯ ನೆನೆಯಿರೊ
ಕಾಮಕ್ರೋಧವು ಹರಿದು ಬೈಲಾಗಿ ಪೋಗುವುದು ಪ

ಅಚ್ಯುತಾ ಅಚ್ಯುತಾ ಎಂದು ಸ್ಮರಣೆಯನು ಮಾಡಿದರೆ
ದುಶ್ಚರಿತವೆಂಬ ಮಹ ಕಾನನಕ್ಕೆ
ಕಿಚ್ಚಾಗಿ ದಹಿಸುವುದು ನಿಮಿಷದೊಳಗೆ ಶುದ್ಧ
ನಿಚ್ಚಳವಾಗಿದ್ದ ಸುಜ್ಞಾನ ಪಾಲಿಪದು ೧

ಅನಂತ ಅನಂತ ಎಂದು ಮನದಲ್ಲಿ ನೆನೆಯೆ
ನಾನಾ ಭವಬಂಧ ದುಷ್ಕರ್ಮದಿ
ಹೀನಾಯವನು ಕಳೆದು ಹಿತದಿಂದಲಿ ವೊಲಿದು
ಆನಂದ ಆನಂದವಾದ ಫಲ ಕೊಡುವುದು. ೨

ಗೋವಿಂದ ಗೋವಿಂದ ಎಂದು ಧ್ಯಾನವ ಮಾಡೆ
ಗೋವಿಂದ ಕಡೆಹಾಕಿ ಸಾಕುವದು
ದೇವೇಶ ಶಿರಪತಿ ವಿಜಯವಿಠ್ಠಲೇಶನ
ಸೇವೆ ಸತ್ಕಾರ್ಯದಲಿ ಪರಿಪೂರ್ಣವಾಗಿಹುದು ೩

೩೬

ನಿನಗಿಂತ ಅಧಿಕರು ನಿನ್ನಯ ಭಕುತರು
ಇದಕೆ ಅನುಮಾನಗೊಳಬೇಡ ಅಂಬುಧಿಶಯನ ಪ

ಪದಿನಾಲ್ಕು ಲೋಕಗಳು ಪೊತ್ತೆನೆಂದೆನಬೇಡ
ಅದುಸಹಿತ ನಿನ್ನನು ಹೃದಯದೊಳಗೆ
ಹುದುಗಿಕೊಂಡಿಪ್ಪರೋ ಪದುಮನಾಭನೆ ಕೇಳೊ
ಇದರಿಂದ ಸರಿಮಿಗಿಲು ಆರೊ ಜನದೊಳಗೆ ೧

ವನಜಾಂಡಗಳೆಲ್ಲ ಪೊತ್ತೆನೆಂದೆನಬೇಡ
ಕೊನೆಯ ನಾಲಿಗೆಯಲ್ಲಿ ನಿನ್ನ ನಿಲಿಸಿ
ಅಣುಮಾತ್ರ ಭಾರ ಇಲ್ಲದಂತಿಪ್ಪರೊ
ಫಣಿಶಯನ ಅಧಿಕಸಮರಾರೊ ಜಗದೊಳಗೆ ೨

ಅಣುಮಹತ್ತು ಆದೆನೆಂದೆನೆಬೇಡವೊ
ಗಣನೆ ಇಲ್ಲದೆ ನಿನ್ನ ಕರದಿ ಮುಚ್ಚಿ
ಫಣಿ ಆಹಾರಗಾಮಿ ನಾ ವಿಜಯವಿಠ್ಠಲ ನಿನಗೆ
ಮಣಿದು ಲೆಕ್ಕಿಸರೋ ನಿನ್ನನು ಮೆಚ್ಚಿದಾಳುಗಳು ೩

೩೭

ನಿನಗೆ ಅಂಜುವನಲ್ಲ ನೀರಜಾಕ್ಷ ಪ

ಮನವಚನ ಕಾಯದಿಂ ನಿನ್ನವರಿಗಂಜುವೆನು ಅ

ರಾಗದಿಂದಲಿ ಇಂದ್ರದ್ಯುಮ್ನ ಭೂಪಾಲಕನು
ಯೋಗ ಮಾರ್ಗದಿ ನಿನ್ನ ಭಜಿಸುತಿರಲು
ಯೋಗ ಕುಂಭೋದ್ಭವನು ಬಂದು ಶಾಪವೆ ಕೊಡಲು
ಆಗ ಮೌನದಲವನನೊಪ್ಪಿಸಿದ ಬಗೆ ಬಲ್ಲೆ ೧

ಗುಣವಂತರೀರ್ವರು ಜಯವಿಜಯರು ನಿನ್ನ
ಅನುಗಾಲ ಬಾಗಿಲನು ಕಾಯುತಿರಲು
ಸನಕಾದಿಗಳು ಬಂದು ಶಪಿಸಲಾಕ್ಷಣದಲ್ಲಿ
ಸನುಮತದಲವರ ನೀನೊಪ್ಪಿಸಿದ ಬಗೆಬಲ್ಲೆ ೨

ನೃಗರಾಯ ಪುಣ್ಯ ಬರಬೇಕೆನುತ ವಿಪ್ರರಿಗೆ
ನಿಗಮೋಕ್ತಿಯಿಂದ ಗೋದಾನ ಕೊಡಲು
ಜಗಳ ಪುಟ್ಟಿತು ನೋಡು ಅನ್ಯೋನ್ಯರೊಡಗೂಡಿ
ಮಿಗೆ ಶಾಪ ಕೊಡಲವನನೊಪ್ಪಿಸಿದ ಬಗೆ ಬಲ್ಲೆ ೩

ಉಣಲಿತ್ತರೆ ಉಂಡು ಪೋಗಲೊಲ್ಲದೆ ಒಂದು
ತೃಣದಲ್ಲಿ ಗೋವನ್ನೆ ರಚಿಸಿ ನಿಲಿಸಿ
ಮುನಿಪ ಗೌತಮನಿಗೆ ಗೋಹತ್ಯವನು ಹೊರಿಸಿ
ಕ್ಷಣದೊಳಗೆ ಅವನ ನೀನೊಪ್ಪಿಸಿದ ಬಗೆ ಬಲ್ಲೆ ೪

ಅನಪರಾಧಿಗಳಿಗೆ ಇನಿತಾಯಿತೋ ದೇವ
ಎನಗೆ ತನಗೆಂಬುವರಿಗಾವ ಗತಿಯೊ
ಮಣಿದು ಬೇಡಿಕೊಂಬೆ ವಿಜಯವಿಠ್ಠಲರೇಯ
ನಿನಗಿಂತ ಭಕುತಿ ನಿನ್ನವರಲ್ಲಿ ಕೊಡು ಎನಗೆ ೫

೩೮

ನೀನೆ ದೀನಜನ ಬಂಧೂ ದಯಾರಸ ಸಿಂಧೂ ಪ

ದಿವಿಜರ ಸಮುದಾಯವಿದ್ದರೇನು
ಅವನ ವ್ಯಾಳೆಗೆ ಒದಗಲಿಲ್ಲಾ
ಅವನಿವಲ್ಲಭ ಅವ್ಯಯವೆಂದರೆ
ಅವಸರಕ್ಕೊದಗಿ ಕಾಯದೇ ಕೃಷ್ಣಾ ೧

ಭೂತ ಪರಿವಾರವಿದ್ದರೇನು
ಆತನ ಅಭಂಗಕ್ಕೆ ಒದಗಲಿಲ್ಲಾ
ಪೂತಾತ್ಮ ಪುರುಷೋತ್ತಮನೆಂದರೆ
ಚಾತುರ್ಯದಿಂದ ಸಲಹಿದೆ ಕೃಷ್ಣಾ ೨

ಚತುರಾಸ್ಯಾದಿಗಳು ಇದ್ದರೇನು
ಶ್ರುತಿಯಹಾನಿರೆ ಒದಗಲಿಲ್ಲಾ
ಚತುರಾತ್ಮ ಸಿರಿಪತಿ ಉರಗಾದ್ರಿ
ಪತಿ ವಿಜಯವಿಠ್ಠಲನೇ ಕಾಯ್ದ ಕೃಷ್ಣಾ ೩

೩೯

ನೆನೆದು ನೆನೆಸಿ ನಿಮ್ಮ
ತನುಮನದಲ್ಲಿ ಯೋಚನೆ ಮಾಡೀ
ಎಣಿಸಿ ಗುಣಿಸಿ ಮನಸಿಜನ್ನ ಜನಕನ ಲೀಲೆ ಪ

ನರನಾರಾಯಣನೀತ ಕೃಷ್ಣ
ಹರಿ ಹೃದ್ಭಾನು ಕಪಿಲನೀತ
ಹರಿನಾರಾಯಣನೀತ ಯೋಗೀ
ಶ್ವರ ತಾಪಸ ವೈಕುಂಠನೀತ
ಹರನಸಖ ಸ್ವಧಾಮನೀತ
ತುರಗವದನನೀತ ದಯಾ
ಕರುಣಿ ಸಾರ್ವಭೌಮನನೀತಾ ೧

ಅಜಿತಯಜ್ಞನಾಮನೀತ
ಅಜಗೆ ಪೇಳಿದ ಹಂಸನೀತ
ಸುಜನಪಾಲ ವ್ಯಾಸ ವೀ-
ರಜ ಮಹಿದಾಸ ದತ್ತನೀತ
ನಿಜ ಮಹಿಮ ಧನ್ವಂತ್ರಿ ಈತ
ತ್ರಿಜಗವಳೆದುಪೇಂದ್ರನೀತ
ಭಜಕರೊಡಿಯ ವಿಷಕ್ಸೇನ ಭುಜಗಶಾಯಿವಿಭುವೆ ಈತ ೨

ಚಲುವ ಧರ್ಮಶೇತು ಈತ
ಬಲುವುಳ್ಳ ಶಿಂಶುಮಾರನೀತ
ಪೊಳೆವ ಮತ್ಸ್ಯ ಕೂರ್ಮವರಹ
ಲಲಿತನರಸಿಂಹನೀತ
ಬಲಿಗೊಲಿದ ವಾಮನ್ನನೀತ

ಕುಲವೈರಿ ರಘರಾಮನೀತ
ಕಳುವು ಮಾಡಿದನೀತ ಬತ್ತಲೆ
ಕಲಕಿ ರೂಪನಾದನೀತಾ ೩

ಪುರುಷನಾಮಕನೀತ–ವಿ
ಸ್ತರ ವಾಸುದೇವ ಜಯಪತಿ ಸುಂ
ದರ ಪ್ರದ್ಯುಮ್ನ ಈತ ನಿರಂತರ ಅನಿರುದ್ಧನೀತ ಚ
ತುರ ವಿಂಶತಿ ಮೂರುತಿಯೇ ಈತ
ಮೆರೆವ ಅಜಾದಿ ನಾಮಕನೀತ
ವರ ಪಂಚಮೂರುತಿಯೇ ಈತಾ
ಎರಡೈದು ಮೇಲೊಂದನೀತ ೪

ಪರಿಪರಿ ರೂಪ ಉಳ್ಳನೀತ
ಹೊರಗೆ ಒಳಗೆ ವ್ಯಾಪ್ತನಾಗಿ
ಸರಿಸರಿ ಬಂದ ತೆರದಿ ಜಗವ
ಸರಸದಲಿ ಆಡಿಪನೀತ
ಸ್ಮರಣೆ ಮಾಡಲು ಸಕಲ ಇಷ್ಟವ
ಕರೆದು ಕೊಡವನೀತ
ಶಿರಿಯರಸ ವಿಜಯವಿಠ್ಠಲನೀತ
ಮರಣ ಜನನರಹಿತ ನೀತ ೫

೪೦

ನೆನೆಬೇಕು ನೆನೆಬೇಕು ಶ್ರೀಹರಿಯ ಪ

ನೆನೆಬೇಕು ಹರುಷದಿಂದಲಿ ಶ್ರೀ ಹರಿಪಾದಂಗಳ
ನಿರುತದಿಂದ ಭಜಿಸಲು ದುರಿತ ನಿವಾರಣ ೧

ಅಖಿಳಾಂಡಗಳನ್ನು ಉದರದಿ ಧರಿಸಿದ
ನಿಖಿಳ ಲೋಕದಿ ವ್ಯಾಪ್ತ ಶ್ರೀಹರಿಯೆನುತಾ ೨

ಸಂತತ ಚಿಂತೆಯ ಸಂತಾನ ಬಿಡಿಸುವ
ಚಿಂತನೆ ಶ್ರೀ ವಿಜಯವಿಠ್ಠಲನಡಿಗಳ ೩

೪೧

ನೆನೆಸು ಮನವೆ ನಲಿವಿನಿಂದಲಿ
ನೆನೆಸು ಮನವೆ ನಲಿವಿನಿಂದಲಿ
ಮನಸಿಜನ್ನ ಪೆತ್ತ ಹರಿಯ
ವನಜ ಚರಣವನ್ನು ಹೃ
ದ್ವನಜದೊಳಗೆ ನಿಲಿಸಿ ನಗುತ ಪ

ಪ್ರಳಯದಲ್ಲಿ ವರ ರಮಾ ಕ
ಳವ ತಾಳಿ ಲೀಲೆಯಲ್ಲಿ
ಪೊಳವ ಕಂಗಳಿಂದ ಕಿಡಿ
ಗಳನು ತೋರಿ ಕುಣಿವುತ
ಜಲಜ ಪೀಠ ಸುರಪ ಪುಲಿದೊ
ಗಲ ವಸನ ಉಳಿದ ಸುರರ
ಅಳಿದು ಏಕಮೇವನಾಗಿ
ನಲಿವ ನಾರಸಿಂಹನೆಂದು ೧

ಜರಾಮರಣರಹಿತ ಸುಜ
ನರನ ಕಾಯ್ದು ಕರುಣದಲ್ಲಿ
ಜರಿದು ಅದ್ರಿಯಲ್ಲಿ ದನುಜರನ್ನು ಶೀಳಿ ವೇಗ ನಿ
ರ್ಜರರ ಪೊರೆದು ನಿಗಮತತಿಗೆ
ಪರಮನೆಂದೆನಿಸಿ ಚರಿಸುತಿಪ್ಪ
ಅರುಣಪ್ರಭೆಗೆ ಕೋಟಿ ಮಿಗಿಲು
ಪರಮಪುರುಷ ಸಿರಿಧರನ್ನ ೨

ಕೆಡದೆ ಪರಮ ಭಕುತಿ ಮಾರ್ಗ
ವಿಡಿದು ಗರ್ವವೆಂಬ ಕವಚ
ತೊಡದೆ ದುರುಳ ಚೇತನಕ್ಕೆ
ಕೊಡದೆ ಮನಸು ವಿನಯದಿಂದ
ಕಡಲಶಯನನಾದ ಒಡಿಯ ವಿಜಯವಿಠ್ಠಲನ್ನ
ಬಿಡದೆ ನುಡಿಯೆ ಬಂದ ಅವ
ಘಡವ ದಾಟಿಸು ವೊಲಿದು ಕಾಯುವಾ ౩

೪೨

ನೋಡಿದ್ಯ ರಂಗೈಯನ ನೋಡಿದ್ಯ ಪ

ನೋಡಿದ್ಯ ಮನವೆ ನೀನಿಂದು ಕೊಂ-
ಡಾಡಿದ್ಯ ಎದುರಲ್ಲಿ ನಿಂದು ಆಹ ಮಾ-
ತಾಡಿದ್ಯ ವರಗಳ ಬೇಡಿದ್ಯ ನಿನ್ನೊಳು
ಕೂಡಿ ನಲಿನಲಿದಾಡುವ ಶ್ರೀ ರೂಪ ಅ.ಪ.

ಚರಣತಳದಲ್ಲಿ ಕೆಂಪು- ಶುದ್ಧ
ಅರವಿಂದ ಧ್ವಜ ವಜ್ರಸೊಂಪು- ಸ್ತುತಿ
ಪರಿಗೆ ಸುರಂಘ್ರಿಪ ತಂಪು- ನೋಡ-
ಲರಸಿ ಕಾಣದೊ ವೇದಗುಂಪು, ಆಹ
ಹರಡಿ ಹಿಂಬಳೆ ಸಾಲ್ಬೆರಳ್ಗೈದರ ಮೇಲೆ
ಸುರುಚಿರ ರೇಖೆ ಚಂದ್ರಮನ ಸೋಲಿಪ ನಖ ೧

ಸರಸ ನೂಪುರ ಗೆಜ್ಜೆ ಪೆಂಡ್ಯ – ಹೊನ್ನ
ಸರಪಳಿ ಪಾಡಗ ಕಂಡ್ಯ – ಹಿಂದೆ
ಧರೆಗೆ ಮುಟ್ಟಿದ ಜಡೆಗೊಂಡ್ಯ – ಇದು
ತರುಣಿ ಎನ್ನದಿರು ಕಂಡ್ಯ – ಆಹ

ಬೆರಳಲ್ಲಿ ಇಟ್ಟ ಸುಂದರ ಪಿಲ್ಲಿಮೆಂಟಿಕೆ
ಕಿರಿಪಿಲ್ಲಿ ಅಡಿಮೆಟ್ಟು ಮೆರೆವ ಕಾಲುಂಗರ ೨

ಝಣ ಝಣ ಗೆಜ್ಜೆನಾದ – ವನ್ನು
ಎಣಿಸಲಾರದು ನೋಡಿ ವೇದಾ – ನಂತ –
ಗುಣಗಳುಭೈರಿಸುವ ಮೋದ – ಇದು
ಅಣುರೇಣು ತೃಣಕಾಷ್ಠ ಭೇದ, ಆಹ
ಪ್ರಣತಾರ್ತಿ ಹರವಾದ ಮಿನುಗುವ ಜಾನುದ –
ರ್ಪಣ ನಾಚಿಪ ಜಂಘೆ ಎಣೆಗಾಣೆ ಸ್ತ್ರೀರೂಪ ೩

ಊರುದ್ವಯಂಗಳು ರಂಭಾ – ಸ್ತಂಭ
ಚಾರು ಪೊಕ್ಕುಳ ಸುಳಿಗುಂಭ – ತಂತ್ರಾ –
ಸಾರೋಕ್ತದಿ ಪೂಜೆಗೊಂಬ – ವಿ
ಸ್ತಾರ ಮಹಿಮೆ ಗುಣತುಂಬ, ಆಹ
ನಾರಿ ಲಾವಣ್ಯದ ಪಾರ ಮೀರಿದ ಕಾಂತಿ
ಆರಾರ ಮನಸಿಗೆ ತೋರದ ಪೆಣ್ಣಿನ ೪

ಉದಯರಾಗದ ದಿವ್ಯವಸನ – ಮೇಲೆ
ಉದರ ತ್ರಿವಳಿ ಬಂದಿ ಹಸನ – ಕೇಳು
ಮುದದಿಂದ ವಡ್ಯಾಣ ಬೆಸನ – ನೋಡು
ಯದುಕುಲ ಜಾತ ಮಾನಿಸನ, ಆಹ
ಮದಕರಿಯಂದದಿ ವಲಿದೊಲಿದಾಡಲು
ಮದನಾರಿ ಮರುಳಾದ ಅದುಭುತ ಚರಿಯನ್ನ ೫

ದೋರ್ಯ ಹರಡಿ ಕೈಕಟ್ಟು – ಚೂಡ್ಯ
ಈರೈದುಂಗುರವುಳ್ಳ ಬೆಟ್ಟು – ಬಂ –
ಗಾರ ಕಂಕಣ ಬಳೆಯಿಟ್ಟು – ಶೃಂ
ಗಾರ ಹಣೆಗೆ ಹಚ್ಚಿ ಬೊಟ್ಟು, ಆಹ
ಗೀರು ಗಂಧವು ಗಂಬೂರ ಕರ್ಪೂರ ಕ–
ಸ್ತೂರಿ ಲೇಪನ ಶೃಂಗಾರ ತ್ರಿವಳಿಯ ೬

ತಾಯಿತು ಮುತ್ತ ಕಟ್ಟಾಣಿ - ತೋಳ
ತಾಯಿತ ಬಂಧುರ ಮಣಿ - ವಂಕಿ
ಕೇಯೂರ ಪಲ್ಲವ ಪಾಣಿ - ಉ
ಪಾಯದಲ್ಲಿ ಘಟ್ಟಿ ಕಾಣಿ, ಆಹ
ನೋಯದೆ ಸುರರಿಗೆ ಪೀಯೂಷ ವುಣಿಸಿ ದೈ-
ತೇಯರ ಮಡುಹಿದ ಮಾಯದ ಕನ್ನಿಕೆ ೭

ಸರಿಗೆ ಮುತ್ತಿನ ಚಿಂತಾಕ - ಕುಚ-
ವೆರಡರ ಮೇಲೆ ಕಂಚುಕ - ತೊಟ್ಟ
ಭರದಿ ತೂಗುವ ಪಚ್ಚೆಪದಕ - ಕೆಳಗೆ
ಹರಿ ನಡುಕಿಂಕಿಣಿ ಕನಕ, ಆಹ
ಹರಳು ಕೆತ್ತಿದ ಚಿತ್ತರ ಮಾಟ ಕಟಿಸೂತ್ರ
ಧರೆಗೆ ಶೋಭಿಪ ಸೀರೆ ನೆರೆಯ ವೈಭವವನು ೮

ರನ್ನ ಪವಳ ಸರ ಥಳಕು - ಜೋಡು
ಕನ್ನಡಿ ಹಾಕಿದ ಮಲಕು - ನೋಡು
ಅನ್ನಂತ ಸೂರ್‍ಯರ ಝಳಕು - ಲೋಕ
ಚನ್ನಾಗಿ ತುಂಬಿದ ಬೆಳಕು
ರನ್ನ ತ್ರಿವಳಿ ಹೇಮ ಸಣ್ಣ ಮುತ್ತಿನ ಮೋ
ಹನ್ನ ಏಕಾವಳಿ ಚಿನ್ನದ ಸರಗಳು ೯

ಸಿರಿವತ್ಸ ಕೌಸ್ತುಭ ಹಾರ-ವೊಪ್ಪೆ
ಉರ ವೈಜಯಂತಿ ಮಂದಾರ - ಮೇಲೆ
ತರುಣ ತುಲಸಿ ಜನಿವಾರ - ಇಟ್ಟು
ವರಭುಜಕೀರ್ತಿ ಕುಂಜರ, ಆಹ
ಕರದಂತೆರಡು ತೋಳು ಎರಡೊಂದಾರು ಸಾ-
ವಿರ ರೂಪನಾಗಿ ಶರೀರದೊಳಿಪ್ಪನ ೧೦

ಸಕ್ಕರೆ ತುಟಿ ಕೂರ್ಮ ಕದಪು – ಕಣ್ಣಿ–
ಗಿಕ್ಕಿದ ಸೊಬಗಿನ ಕಪ್ಪು – ತಲೆ –
ಹಿಕ್ಕಿ ಬಾಚಿದ ಕೇಶ ಥಳಪು – ಸರ್ವ
ದಿಕ್ಕು ಮೋಹಿಸುವಂಥ ವಲಪು, ಆಹ
ಲಕ್ಕುಮಿ ದೇವಿಯ ಲೆಕ್ಕಿಸದೇ ಮಗನ
ಪೊಕ್ಕುಳಿಂದಲಿ ವೆತ್ತ ಅಕ್ಕಜದಬಲೆಯ ೧೧

ಸೂಸುವ ದಾಡಿಯ ದಂತ – ಪಙ್ತಿ–
ನಾಸ ಮೂಗುತಿಯಿಟ್ಟ ಶಾಂತ – ಸುಖ
ಲೇಸು ಹಾಸ ಜಗದಂತ – ರಂಗ
ಭಾಸ ಮಿಗಿಲು ಚಂದ್ರಕಾಂತ, ಆಹ
ಸುಷುಪ್ತಿಯಲ್ಲಿ ಭೂಶ್ವಾಸ ಬಿಡುವರನ್ನು
ಲೇಸಾಗಿ ಸಲಹುವ ದೋಷನಾಶನ ರೂಪ ೧೨

ಎಸೆವ ಪಂಜರದೋಲೆ ಕಿವಿಯ–ಹೊನ್ನ
ಕುಸುಮ ಕೂಡಿದ ಬಾವಲಿಯ – ತಿದ್ದಿ
ಕುಸುರಿಯಿಕ್ಕಿದ ಸರಪಣಿಯ – ಚಿನ್ನ
ಸೋಸಲು ಕುಂಕುಮ ರ್‍ಯಾಕಟೆಯ, ಆಹ
ಎಸಳು ಕೇದಿಗೆ ಬಹು ಕುಸುಮವ ಮುಡಿದದ್ದು
ವಶವಲ್ಲ ಚೌರಿ ಅರಸಿನ ಪೂಸಿದ ಹೆಣ್ಣ ೧೩

ಭ್ರೂಲತೆ ವಲಯ ಕಪೋಲ – ಪೊಸ–
ಮೌಳಿ ಕೈಯಲ್ಲಿ ಕಡೆಗೋಲ – ನೇಣು
ಪಾಲಯ ಪಿಡಿದ ಸುಶೀಲ – ಧರೆಯ –
ನಾಳಿದ ಭಕ್ತವತ್ಸಲ, ಆಹ
ಶೂಲಿಯ ನೆಲೆಸಿದ ಖೂಳನ ಸದೆದು ಹಿ–
ಯ್ಯಾಳಿಸಿ ಮೆರೆದ ಗೋಪಾಲನೆಂಬ ಹೆಣ್ಣ ೧೪

ರಜತ ಪೀಠ ಪುರಾಧೀಶ – ನಂದ
ವ್ರಜದೊಳಾಡಿದ ಸರ್ವೇಶ – ನಮ್ಮ
ವಿಜಯವಿಠ್ಠಲ ನಾರಿವೇಷ – ತನ್ನ
ನಿಜಭಕ್ತ ಮಧ್ವಮುನೀಶ, ಆಹ
ಭಜನೆ ಮಾಡಲು ಮೆಚ್ಚಿ ತ್ರಿಜಗ ಮಧ್ಯದಲಿ
ನಿಜ ಪದವಿಯನಿತ್ತು ಸುಜನರಿಗೊಲಿದನ್ನ ೧೫

೪೩

ನೋಡಿದೆನೊ ಸಿರಿ ಪಾಂಡುರಂಗನಾ
ಪಾಡಿದೆನೊ ಜಗದಂತರಂಗನ
ಕೂಡಿದೆನೊ ಮನ ಖಗ ತುರಂಗನ
ಬೇಡಿದೆನೊ ಗುಣಾಂತರಂಗನಾ ಪ

ಕಪಿಲ ವಿಭುಹರಿ ಸಾರ್ವಭೌಮ ಸು
ತಪನಂದನ ಕೃಷ್ಣ ಕೃಷ್ಣ ಗೀರ್ವಾಣ
ತಪಯಜ್ಞ ಜಿತದತ್ತ ಧನ್ವಂತ್ರಿ
ತಪನಿವಾಸ ವಿನುತ ವೃಷಭ ಹಯ
ಲಪನ ವೈಕುಂಠ ಹಂಸ ತಪನಾ
ಕುಪಿತ ಜಿತ ಮುನಿ ನರನಾರಯಣ
ಅಪರಿಮಿತ ರೂಪ ಧರಿಸಿದಾನಂದ
ವಿಪುಳದೊಳಗೀ ಗುಪಿತ ಮಹಿಮನ ೧

ಮುನಿವನ ಜಿತ ಚಿತ್ತ ಶುದ್ಧದಿ
ಜನನಿ ಜನಕನ ಚರಣ ಸೇವೆಯ
ಅನುದಿನದಿ ಘನವಾಗಿ ಮಾಡುತ
ಗುಣಗಳಿಂದಲಿಯಿರಲು ಇತ್ತಲು
ಮುನಿ ನಾರದನು ಗಾಯನವ ಗೈಯುತ

ಇನಿತು ಸೋಜಿಗ ನೋಡಿ ತನ್ನಯ
ಜನಕಗರುಹಲು ನಗುತಲಾ
ಮನದಿ ಕೈಕೊಂಡ ಮೂಲ ಮೂರ್ತಿಯ ೨

ನುಡಿದ ಮಾತಿಗೆ ತೂಗಿ ಮಸ್ತಕ
ಪೊಡವಿಯೊಳು ನೀನವತರಿಸಿ ಆ
ದೃಢ ಬಕುತನಿಗೆ ದರುಶನವೆ ಇ
ತ್ತಡಿಗಡಿಗೆ ಸುಖಬಡಿಸಿ ಅಲ್ಲಲ್ಲಿ
ಬಿಡದೆ ನಿಲ್ಲುವೆ ನಿಮ್ಮ ಸಹಿತಲಿ
ಕೊಡುವೆ ವರಗಳ ವಿನುತ ಕಳುಹಿದ
ಒಡನೆ ಸಲ್ಲಿಪೆನೆಂದ ಯಮುನಾ
ತಡಿಯ ಜನಿಸಿದ ಜಗನ್ಮೋಹನಾ ೩

ಉದಭವಿಸಿ ಕಿಶೋರತನದಲಿ
ನಿಧಿಯ ನೋಡುವೆನೆನುತ ಗೋವುಗಳ
ಮುದದಿ ಮೇಯಿಸಿಕೊಳುತ ಕಾವುತ
ಒದಗಿ ಗೋವಳರೊಡನೆ ಬಂದನು
ಮೃಡ ವಿಧಿ ಸಂಭವಾದ್ಯ ಭಕ್ತನ
ಎದುರಲಿ ನೋಡಿದನು ಹೋ ಹೋ
ಇದೇ ಸಮಯವೆಂದು ನಿಂದಾ ಹಿಂಭಾ
ಗದಲಿ ಭಕ್ತಿಗೆ ಮೆಚ್ಚಿ ಬಲು ವೇಗಾ ೪

ತಿರುಗಿ ನೋಡದಲಿರಲು ಭಕುತನ
ಮರಳೆ ಮಾತಾಡಿಸಲು ಇಟ್ಟಿಗೆ
ಭರದಿ ಹಿಂದಕೆ ಒಗಿಯೆ ವಿಠ್ಠಲ
ಹರುಷದಲಿ ವಶವಾಗಿ ನಿಲ್ಲಲು
ಕರುಣರಸ ಸಂಪೂರ್ಣ ದೇವನ
ನಿರೀಕ್ಷಿಸಿದ ಜಯವೆಂದು ಪೊಗಳಿ
ವರವ ಬೇಡಿದ ಪುಂಡರೀಕನು ಗಿರಿಯನೆತ್ತಿದ ಗೋಕುಲೇಶನ ೫

ಭಕುತ ಮನೋರಥ ಎನ್ನ ಪೆಸರಿಲಿ
ಪ್ರಕಟವಾಗಲಿ ಕ್ಷೇತ್ರ ಸರ್ವದ
ಸಕಲ ಲೋಕದೊಳಗೆ ನೀನೆ
ಮುಕುತಿ ಕೊಡುತಲಿ ಇಲ್ಲೆ ನಿಲುವದು
ಅಖಿಳ ಬಗೆಯಿಂದ ಭಜನೆಗೊಳುತ ನೀ
ರುಕ್ಮಿಣಿಪತಿ ಒಲಿದು ಪಾಲಿಸಿ
ವ್ಯಕುತವಾದನು ಪೂರ್ವಮುಖನಾಗಿ
ಸುಖವಯೋನಿಧಿ ಮೆರೆಯುತಲಿ ಇಂದೂ ೬

ಕ್ರೋಶ ಯೋಜನ ಯೋಜನತ್ರಯ
ದೇಶ ಪರಿಮಿತ ಕ್ಷೇತ್ರವಿಪ್ಪುದು
ವಾಸ ಒಂದಿನಮಲ ಮನುಜರನ
ಲೇಸು ಪುಣ್ಯಗಳೆಣಿಸಿ ಸರಸಿ
ಜಾಸನನು ಬೆರಗಾಗಿ ನಿಲ್ಲುವ
ದೋಷ ವರ್ಜಿತ ಹರಿಯ ನೆನೆಸುತ
ಆ ಸೇತು ಮಧ್ಯದಲಿ
ವಿಶೇಷವಾಗಿದ್ದ ಈ ಕ್ಷೇತ್ರ ಮೂರ್ತಿಯಾ ೭

ನಂದಾ ಮಂದಾಕಿನಿ ಮಧ್ಯಾಹ್ನಕೆ
ನಿಂದಿರದೆ ಬರುತಿಪ್ಪ ಪ್ರತಿದಿನ
ಚಂದ್ರಭಾಗಾ ಪ್ರಸೂನುವತಿ ಅರ
ವಿಂದ ಕುಂಡಲ ಚತುರ ದಿಕ್ಕಿನಲಿ
ಪೊಂದಿಪ್ಪವು ಓರ್ವನಾದರು
ಮಿಂದು ತೀರ್ಥದಲಿ ಆ
ನಂದ ಸತ್ಕರ್ಮ ಚರಿಸಲಾಕ್ಷಣ
ಇಂದಿರೇಶನು ಒಲಿವ ನಿಶ್ಚಯಾ ೮

ದ್ವಾರಸ್ಥ ಜಯ ವಿಜಯ ನಾರದ
ಭಾರತಿ ಪಂಚ ಕೋಟಿ ದೇವರು
ಶ್ರೀರಮಣಿ ಮಿಕ್ಕಾದ ಜನರೆಲ್ಲ

ಈರೆರಡು ದಿಕ್ಕಿನಲಿಯಿಹರು
ಸುತ್ತಲಿ ಪಾಡುತ್ತ ಕುಣಿಯುತ್ತ
ಹಾರುತಲಿ ಹಾರೈಸಿ ನಾನಾ ವಿ
ಹಾರದಲಿ ಪುರಿ ಪ್ರದಕ್ಷಣಿ ವಿ
ಸ್ತಾರ ಮಾಡುತಲಿಪ್ಪ ಸೊಬಗನಾ ೯

ಎರಡು ವಿಂಶತಿ ಗುದ್ದು ಮೊಳವೆ
ಕರಿಸಿ ಕೊಂಬೊದೊಂದೆ ನಿಷ್ಕವು
ಇರದೆ ಇವು ನಾನೂರುಯಾದಡೆ
ವರಧನಸ್ಸು ಪ್ರಮಾಣವೆನಿಸೊದು
ಗುರುತು ತಿಳಿವದು ಇಂಥ ಧನಸ್ಸು
ಅರವತ್ತು ಪರಿಮಿತಾ ಈ ಭೀಮಾ
ಸರಿತೆಗಳು ಪರಿಪರಿ ತೀರ್ಥಗಳಕ್ಕು
ನಿರೀಕ್ಷಿಸಿ ವಂದನೆಯ ಮಾಡುತಾ ೧೦

ಜ್ಞಾತಿ ಗೋತುರ ಹತ್ತದೊಂದೆ
ಮಾತು ಮನ್ನಿಸಿ ಕೇಳಿ ಸುಜನರು
ವಾತದೇವನ ಕರುಣತನವನು
ನೀತಿಯಲಿ ಪಡಕೊಂಡು ಸತ್ವದಿ
ಜ್ಞಾತ ಅನುಷ್ಠಾನದಲಿ ನಡೆದು ಪು
ನೀತ ಮಾನವ ಬಂದರಾದಡೆ
ಆತುಮದೊಳು ಹರಿ ಪೊಳೆದು ಬಲು
ಕೌತುಕವ ತೋರಿಸುವ ರಂಗನಾ ೧೧

ಶಯ್ಯಾ ಹರಿ ದಿನದಲಿ ಮಾನವ
ಕಾಯ ನಿರ್ಮಳನಾಗಿ ಫಂಡರಿ
ರಾಯ ರಾಜೀವನೇತ್ರ ತ್ರಿಭುವನ
ನಾಯಕನ ಕ್ಷೇತ್ರಕ್ಕೆ ಮನಮುಟ್ಟಿ
ಗಾಯನವ ಮಾಡುತಲಿ ಬಂದ ನಿ

ರ್ಮಾಯದಲಿ ಕೊಂಡಾಡಿ ದಮ್ಮಯ್ಯ
ಕೈಯ ಪಿಡಿಯನೆ ಕರುಣದಿಂದ ಸಾ
ಹಾಯವಾಗುವ ವಾಣಿ ಜನಕನಾ ೧೨

ಮಕುಟ ಕುಂಚಿ ಕುಲಾಯ ಕುಂತಳ
ಮಕರ ಕುಂಡಲ ಮಣಿ ಕಿರಣ ಸ
ನ್ಮುಖ ಮುಕರ ಸೋಲಿಸುವ ಕಾಂತಿ ಚಂ
ಪಕ ನಾಸಿಕ ಮುಖ ಮೃಗನಾಭಿ ಸಣ್ಣ ತಿ
ಲಕ ಕೌಸ್ತುಭಗಳ ತುಲಸಿ ಮಾಲಿಕಾ
ನಖ ಪದಕ ಕಟೆಕಂಬು ಕರದ್ವಯ
ಅಕಳಂಕ ನಖ ಪಾದ ಭೂಷಣ ಮಾ
ಣಿಕ ಇಟ್ಟಿಗೆ ಮೇಲೆ ನಿಂದ ವಿಠ್ಠಲನ ೧೨

ಸಂಗಮ ಸುರ ಮಥನ ಕಾಳಿಂಗ
ಭಂಗ ಭಾವುಕ ಭಕ್ತಜನಲೋಲ
ಶೃಂಗಾರಾಂಬುಧಿ ರೋಮ ಕೋಟಿ ಕೋಟಿ
ಲಿಂಗಧರ ಗೌರೀಶ ಸುರಪ
ನಂಗ ಮಿಗಿಲಾದ ಮುನಿವಂದಿತಾ ಮಾ
ತುಂಗ ವರದ ಗೋವಿಂದ ವರದೇಶ
ಸಂಗ ನಿಃಸಂಗ ಸುಪ್ರಸನ್ನ ನೀ
ಲಾಂಗ ಗತಿ ಎಂದು ತುತಿಗೆ ಅನುದಿನ ೧೪

ಪೇಳಲೊಶವೇ ಲೋಹದಂಡಿ ಹಿ
ಯ್ಯಾಳಿ ಕ್ಷೇತ್ರದ ಮಹಿಮೆ ಸಾವಿರ
ನಾಲಿಗಿಂದಲಿ ಪೊಗಳಿ ಸುಮ್ಮನೆ
ವ್ಯಾಳಪತಿ ಬೆರೆಗಾಗಿ ನಿಲ್ಲುವ
ಸಲಿಗೆ ನಾ ಮಾಳ್ಪರು ವಿಲಿಂಗರು
ಮೇಲು ಮೇಲೀ ಭುವನದೊಳಗಿದ್ದು
ಹೇಳಿ ಕೇಳಿದ ಜನರಿಗಾನಂದಾ
ಬಾಲಾ ವಿಜಯವಿಠ್ಠಲರೇಯನಾ ೧೫

೪೪

ನೋಡಿ ನಾ ಧನ್ಯನಾದೆನೊ ತೋತಾದ್ರೀಶನ
ನೋಡಿ ಧನ್ಯನಾದೆ ನಾಡೊಳು ತನಗೆಲ್ಲಿ
ಈಡಿಲ್ಲೆನಿಸುವನ ನೋಡಿ ಧನ್ಯನಾದೆನೊ ಪ

ಆರೊ ಮಹಾರೂಪ ಬಂದು ಏಕಾಂತದಲ್ಲಿ
ಆರಾಧಿಸಿದಾತನಂದು ಭಕುತಿ ಬಿಡದೆ
ವಾರವಾರಕ್ಕೆ ಗತಿಯೆಂದು
ಈ ರೀತಿಯಲ್ಲಿ ಇರೆ ತೋರಿದ ಕರುಣ ನಿನ್ನಾ ೧

ಭಕುತನ್ನ ತಪಸಿಗೊಲಿದು ವೇಗದಿಂದಲಿ
ಲಕುಮಿ ರಮಣ ಸುಳಿದು ಬೇಡಿದಂಥಾ
ಧಿಕವಿತ್ತು ರೋಷವಳಿದು ಸುಖದ ಭಾರತ ಪೇಳೊ
ದಕ್ಕೆ ಮುನಿ ಮಾಡಿದ ದಾನಾ ೨

ಧರಿಗೆ ದಕ್ಷಿಣ ದಿಕ್ಕಿಲಿ ಮಾಹೇಂದ್ರಿ ಮಹಿ
ಧರನ ಸಮೀಪದಲ್ಲಿ ಪ್ರತಿದಿನ
ಮೆರೆವ ವೈಭೋಗದಿಂದಲಿ
ಕರುಣಿ ವಿಜಯವಿಠ್ಠಲ ವರಧೇನು ಎನಿಸುವನಾ ೩

೪೫

ನೋಡು ನೋಡು ಗರುಡಗಮನನೆ
ಮಾಡು ದಯವನು ವೇಗದಿ ಪ

ಪಾಡುವೆ ಆನಂದದಲಿ ನಿನ್ನನು
ಕೊಂಡಾಡುವೆನು ನಿನ್ನ ಮೂರ್ತಿಯಾ ಅಪ

ಮಂಗಳಾಂಗನೆ ಮನ್ಮಥನ ಪಿತ
ಸಂಗೀತ ಸುರಲೋಲನೆ

ಕಂಗಳಬ್ಬರ ತೀರುವಂತೆ
ಚರಣಂಗಳನೆ ತೋರೋ ವಿನಯದಿ ೧

ಪರಮ ಪುರುಷನೆ ಪುಣ್ಯ ಶ್ಲೋಕನೆ
ದುರುಳ ದೈತ್ಯರ ದಲ್ಲಣ
ಮರಿಯಲೀಸದೆ ನಿನ್ನ ಚರಣ
ಸ್ಮರಣೆ ಒದಗಿಸೊ ವದನಕೆ ೨

ವಂದನೆಯು ಗೋವಿಂದ ಗೋಪಾಲಾ
ಮಂದರಧರ ಮಾಧವಾ
ಇಂದು ವಿಜಯವಿಠ್ಠಲ ನಿನ್ನ
ಸಂದರ್ಶನವ ಕೋರುತಾ ೩

೪೬

ಪರದೇಶಿ ನೀನು ಸ್ವದೇಶಿ ನಾನು ಪ

ಪರಮ ಭಾಗವತರ ಬಾ ಹೋಗಿ ಕೇಳೋಣ ಅ

ಎನಗೆ ಜನಕನು ನೀನು ನಿನಗಾವ ಜನಕನೊ
ಜನನಿ ಇಂದಿರೆದೇವಿ ನಿನಗಾವಳೊ
ವನಜಪೀಠನು ಭ್ರಾತ ನಿನಗಾವ ಭ್ರಾತನೊ
ಇನ ಸೋಮ ಮಾತುಳರು ನಿನಗಾವ ಮಾತುಳನೊ ೧

ಸುರನದೀ ಅಗ್ರಜಳು ನಿನಗೆ ಅಗ್ರಜಳಾರು
ಶರನಿಧಿ ಭಾವ ನಿನಗಾರು ಭಾವ
ಸ್ಮರನು ಕಿರಿ ಸಹಭವನು ನಿನಗೆ ಸಹಭವನಾರೊ
ಸುರರು ಬಂಧುಗಳೆನಗೆ ನಿನಗಾರು ಬಾಂಧವರೊ ೨

ವರ ಇಳಾ ಸಾಮಾತೆ ನಿನಗೆ ಸಾಮಾತೆ ಯಾರೊ
ಮರುತ ದೇವರು ಗುರು ನಿನಗಾರು ಗುರುವೊ
ಸಿರಿಯರಸ ವಿಜಯವಿಠ್ಠಲರೇಯನೆ ನಿನ್ನ
ಚರಣ ಸೇವಕ ನಾನು ನೀನಾರ ಸೇವಕನೊ ೩

೪೭

ಪ್ರಥಮ ದೈವವೇ ಪಂಢರಿರೇಯಾ
ಪೃಥ್ವಿಯೊಳಗೆ ಭಾಗೀರಥಿಗೆ ಪಥವ ಕೋರೊ ಪ

ಸಕಲಭಯನಾಶ ಸಾತ್ವಿಕ ಮೂರುತಿ
ಭಕ್ತಜನಪೋಷಕ ನೀನಲ್ಲವೆ
ತ್ವಕ್ಕು ಇಂದ್ರಿಯಗಳು ನಿನ್ನಾಧೀನವೋ
ಅಖಿಳ ಬಗೆಯಿಂದ ಮಾತು ಮನ್ನಿಸಿ ಕಾಯೊ ೧

ಸರ್ವರಂತರಿಯ ಸಿದ್ಧ ಫಲದಾಯಕ
ಸರ್ವರಲಿ ಸ್ವಾಮಿಯೆಂದೆನಿಪ
ಸರ್ವ ವಿಘ್ನೋಪ ಶಾಂತಾ ವೇದಾಂತನೆ
ಗೀರ್ವಾಣ ಮುನಿಸುತ ಗಿರಿಧರ ದೇವಾ ೨

ಸಾಧು ಮೂರುತಿ ಸಿದ್ಧ ಫಲದಾ
ಬೋಧ ಕೀರುತಿ ಆದಿಪರಬೊಮ್ಮ
ವಿಜಯವಿಠ್ಠಲರೇಯಾ ನೀನು
ಈ ಜಗದೊಳು ಭೀಮಾ ಕೀರನಿವಾಸಾ ೩

೪೮

ಪಾಂಡುರಂಗನ ಈಕ್ಷಿಸುವ ಸುಖವೇ ಸಾಕೊ
ಅಪಾರ ಮಹಿಮ ಅನಂತಾನಂತ ರೂಪನಾ ಪ

ಶಶಿ ನಖ ನಾಲ್ಬೆರಳು ಎರಡು ಜಾನು ಜಂಘೀ
ಎಸೆವ ಊರು ಕಟಿ ನಾಭಿ ಉದರ ಉರುತರ ಕಂಠಾ

ಮಿಸಣಿಪ ವದನ ನಾಸ ಕದಪು ಕರ್ಣ ನಯನಾ
ನೊಸಲು ಶಿರ ಜಗವ ವ್ಯಾಪಿಸಿದ ರಕ್ಕಸ ಹರನಾ ೧

ಮಕುಟ ಮಣಿ ಕುಂಡಲ ತಿಲಕ ಸರಿಗೆ ಕೌಸ್ತುಭ
ವಿಕಸಿತ ಕಮಲ ತುಲಸಿಹಾರ ಮುತ್ತಿನಸರ ಪ
ದಕ ಅಂಗದ ಕಂಕಣ ಮುದ್ರೆ ಕಟಿಸೂತ್ರ
ಸುಖದಂದಿಗೆ ಪೆಂಡೆಗೆಜ್ಜೆ ಸುಕುಮಾರನಾ ೨

ಶ್ರುತಿ ತತಿಗೆ ದೂರ ಉನ್ನತ ಲೀಲ ಸಾಕಾರ
ಸತತ ಭಕ್ತರಾಧಾರ ಅಪ್ರಾಕೃತ ಶರೀರ
ಯತಿಗಳ ಮನೋಹರ ಮತಿಗೆ ಅಗೋಚರ
ಪತಿತಪಾವನ ಸಿರಿ ಪತಿ ವಿಜಯವಿಠ್ಠಲನಾ ೩

೪೯

ಪಾದಾ ಭಕ್ತರನ ಪೊರೆವ ಪಾದಾ
ಪಾದಾ ಸಿರಿದೇವಿ ಉರದಲ್ಲಿ ಒಪ್ಪುವ ಪಾದಾ ಪ

ಧರಣಿಪತಿ ಬಲಿಯನ್ನು ನೆಲಕೆ ಒತ್ತಿದ ಪಾದಾ
ಸುರನದಿಯ ಹರುಷದಲಿ ಪಡೆದ ಪಾದಾ
ಧುರದೊಳಗೆ ಪಾರ್ಥನ ಶಿರವ ಕಾಯ್ದ ಪಾದಾ
ಸುರರು ಸನಕಾದಿಗಳು ವಂದಿಸುವ ಪಾದಾ ೧

ಕೋಪದಲಿ ಉರಗನ ಪೆಡೆಯ ತುಳಿದ ಪಾದಾ
ತಾಪಸರ ಮನಕೆ ನಿಲಕದ ಪಾದಾ
ಭೂಪ ಕೌರವನ ತಲೆಕೆಳಗೆ ಮಾಡಿದ ಪಾದಾ
ಕಾಪಾಲಿ ಪೂಜಿಸುವ ಕಡು ದಿವ್ಯ ಪಾದಾ ೨

ಹಸುಳೆತನದಲಿ ಶಕಟಾಸುರನನೊದೆದ ಪಾದಾ
ಋಷಿಪತ್ನಿ ಶಾಪ ವಿಶ್ಯಾಪ ಪಾದಾ
ವಿಷ ಕರ್ತು ರಿಪು ವಿನಾಶ ಕರದಿ ಮೆರೆವ ಪಾದಾ
ವಸುಧಿಯೊಳು ವಿಜಯವಿಠ್ಠಲನ ಪಾದಾ ೩

೫೦

ಪಾಲಿಸೆನ್ನನು ದೇವಾ ಪರಮ ಪುರುಷಾ
ಭೂಲೋಲ ಶ್ರೀ ಮುಷ್ಣನಿಲಯ ಶ್ವೇತ ವರಹಾ ಪ

ಸ್ವಾಯಿಚ್ಛೆಯಲಿ ಬಂದು ಮೆರೆದು ಮಹಾಕೀರ್ತಿಯನು
ಪಯೋನಿಧಿಸುತೆಯಿಂದ ತುತಿಸಿಕೊಳ್ಳುತಾ
ಜಯಜಯದೇವನಾಶ್ರಯ ಕಾಮಧೇನು ನೀ
ದಯಮಾಡಿ ನೋಡುವದು ದಾಸ ನೆನೆಸುವದು ೧

ಚಿತ್ತಾವಧಾರು ಪರಾಕು ಬೊಮ್ಮಾಂಡವನು
ಹೊತ್ತು ನಸುನಗು ನಾಗಾರಿಗಮನಾ
ಮುತ್ತು ಮಣಿ ಮಯದಾಭರಣದಿಂದೆಸೆವ ದೇ
ವೋತ್ತಮನೆ ದಾನವರ ಬಲವಳಿದಾ ಧೈರ್ಯ ೨

ನಿತ್ಯ ಪುಷ್ಕರಣಿಯಲಿ ನಿರುತ ಪೂಜೆಯಗೊಂಡು
ಪ್ರತ್ಯಕ್ಷವಾಗಿ ವರಗಳನೀವುತ
ಸತ್ಯ ಸಂಕಲ್ಪ ಸಿರಿ ವಿಜಯವಿಠ್ಠಲ ವರಹ
ಭೃತ್ಯನೆನೆಸಿ ನಿನ್ನ ಸ್ತೋತ್ಯದೊಳಗಿಡು ದೇವಾ ೩

೫೧

ಪಾಲಿಸೊ ಪತಿತಪಾವನ್ನಾ ನಿನ್ನ
ಪಾಲಿಗೆ ಬಂದೆ ಮೋಹನ್ನಾ –ಆಹಾ
ಪಾಲಾಬ್ಧಿಶಾಯಿ ಗೋಪಾಲರೊಡೆಯಾ ಲೋಕ
ಪಾಲಕ ವಿನುತಾ ಗೋಪಾಲ ಫಾಲಾಕ್ಷನೆ ಪ

ಬಂದೆನೊ ನಿನ್ನ ಹಂಬಲಿಸಿ ನಾನು
ನೊಂದು ಸಂಸ್ಕೃತಿಯಲ್ಲಿ ಸೂಸಿ ಈಸಿ
ಮುಂದಣ ನೆಲೆಗಾಣೆ ಗುಣಿಸಿ ಏನೇ
ನೆಂದು ಪೇಳಲೊ ವಿಸ್ತರಿಸಿ –ಆಹಾ
ಮಂದರಧರ ನಿನ್ನ ಮಂದಿರದ ದಾಸಿ
ಕಂದನು ನಾನೆಲೊ ಕಣ್ತೆರೆದು ನೋಡೊ ೧

ಪೊಂದಿದೆ ಭಾರವವೊಹಿಸು ಪ್ರತಿ
ಬಂಧಕವ ಪರಿಹರಿಸು ನಿನ
ಗೊಂದಿಸುವೆ ಕೊಡು ಲೇಸು ಅತ್ಯಾ
ನಂದದಲ್ಲಿ ಚಿತ್ತವಿಡಿಸು –ಆಹಾ
ಇಂದಿರಾ ಮಂದಿರಾ ಸುಂದರ ಯೋಜನ
ಗಂಧಿಯ ಬಸುರಿಲಿ ಬಂದ ಭವದೂರಾ ೨

ನಿಂದ್ಯ ಕರ್ಮವು ಮಾಡಿದವನ ದೂತ
ರಿಂದ ತರಿಸಿದೆ ತ್ರಿಭುವನಾ ಜಯ
ವೆಂದು ಕೊಂಡಾಡಲು ಜವನಾ ಭೀತಿ
ಯಿಂದ ಮಾಡಿದ ನಿನ್ನ ಸ್ತವನಾ –ಆಹ
ಒಂದಾನಂತವಾಗಿ ದ್ವಂದ್ವಪಾಪಗಳಿಗೆ
ನಿಂದಿರಬಲ್ಲವೆ ಸಂದರುಶನವಾಗೆ ೩

ಕಂದುಕ ಪುಟಿ ಸೂತ ಬಳುಕಿ ದೈತ್ಯ
ವೃಂದ ಮೋಹಕವಾಗಿ ಸಿಲುಕಿ ಸುರ
ಸಂದೋಹಕೆ ನೀನೆ ಥಳಿಕಿ ನಿಜ
ವೆಂದು ಮಾನವರಿಗೆ ಬಳಿಕಿ –ಆಹಾ
ಎಂದೆಂದಿಗೆ ಸಿದ್ಧಾಗಂಧಮಾತುರ ಕಳೆ
ಗುಂದದೆ ಮತಿ ಕೊಡು ನಂದಕಾನಂದ ಹಸ್ತನೆ ೪

ಹಂದಿ ನಾಯಿ ನರಿ ರಾಸಾ ಜನ್ಮ
ಬಂದರೆ ಎನಗದು ಹರುಷಾ ಬಹು

ಮುಂದುಂಟು ರಹಸ್ಯಾ ಮನಸಾಪೇಕ್ಷಾ
ಸಂದೇಹ ಮಾಡಿಸೊ ಶ್ರೀಶಾ –ಆಹಾ
ಚಂದ ಚಂದದಿ ಯೋನಿ ಸಂದೀದ ಕಾಲಕ್ಕು
ಒಂದು ವಿಂಶತಿ ಮತ ಹೊಂದಿಸದಿರು ಹರಿ ೫

ಅಂಧಃಕಾರದೊಳೆನ್ನ ತಂದೆ ಇದ
ರಿಂದ ನಿನಗೇನೊ ಮುಂದೆ ಲಾಭ
ಬಂದಾದರೂ ಇಲ್ಲಾ ಇಂದೆ ಸುಖ
ಸಾಂದ್ರ ಕಡಿಮೆನೊ ಮುಂದೆ –ಆಹಾ ೬

ಇಂದಿರಾವರ ರಾಮ ಶಾಮಾ ರಾಮ
ಚಂದ್ರ ಚತುರ ಸಾರ್ವಭೌಮಾ ದಿವ್ಯ
ಚಂದನ ಸಿರಿ ಉರಪ್ರೇಮಾ ಮುಚ
ಕುಂದ ಪಾಲಕ ನಿಸ್ಸೀಮಾ –ಆಹಾ
ಇಂದ್ರಿಯಂಗಳು ತನು ಸಂಬಂಧದೆಡೆಗೆ ಪೋಪಾ
ತೊಂದರೆ ಬಿಡಿಸೊ ಗೋವಿಂದ ಗೋವಳರಾಯಾ ೭

ದುಂದುಭಿ ಭೇರಿಯ ರಭಸಾ ಮಹಾ
ಸಿಂಧೂರ ವಿಚಿತ್ರ ಕೋಶಾ ದುರ್ಗಾ
ಬಂಧುರಾ ನೆರೆದ ವಿಶೇಷಾ
ಮಂತ್ರಿ ಮಂದಿ ಪರಿವಾರ ಭೂಷಾ –ಆಹಾ
ಬಿಂದು ಮಾತುರ ಇವು ಮುಂದಿನ್ನೈಶ್ವರ್ಯ ಸಿದ್ಧಾ
ಕುಂದಗೊಡದೆ ಬೊಮ್ಮನಂದದಿ ಪಥತೋರಿ ೮

ಹಿಂದಣ ಬಲವನ್ನು ಕಾಣೆ ನಾನು
ಅಂದು ನುಡಿದದ್ದು ಮಾಣೆ ಅನು
ಬಂಧಗಳಿಗೆ ಕಾಮಧೇನೆ ಸತ್ಯ
ವೃಂದಾವನ ಪತಿ ನೀನೆ –ಆಹಾ
ನಂದತೀರ್ಥರಿಗೆ ಆನಂದ ಕೊಡುವ ಪೂರ್ಣ ಸನಕಸ
ನಂದನ ಮನೋಹಂಸಾ ೯

ಸಂದಣೆ ತೊಲಗದೆಂಬಿಯಾ ಆಹಾ
ಬಂದರೆ ಬರಲಿ ಎಂಬಿಯಾ ಇದೇ
ಸಂದಲಿ ಅನುಗಾಲ ನ್ಯಾಯಾ ಅನು
ಸಂಧಾನ ನಿನ್ನಲಿ ಪ್ರೀಯಾ –ಆಹಾ
ಇಂಧನದೊಳು ವಾಯು ವ್ಯಾಪಿಸಿದದ
ರಂದದಿ ಸರ್ವಾಂಗಾ ನಿಂದಿಹ ನಿರ್ದೋಷಾ ೧೦

ಕಂದರ್ಪ ಕೋಟಿ ಲಾವಣ್ಯ ಅರ
ವಿಂದ ನಯನ ಗುಣ ಗಣ್ಯ ದೀನ
ಮಂದಾರ ಸತತ ತಾರುಣ್ಯ ಸರಿ
ಬಂದಂತೆ ಮಾಡೊ ಕಾರುಣ್ಯ –ಆಹಾ
ವಂದೆದ್ಯೆವವು ನಾನೆಂದ ಮುರಾರಿಯ
ಕೊಂದು ಬಿಸುಟಾಧೀರ ನಂದಕುಮಾರಕ ೧೧

ಇಂದ್ರಿಯಂಗಳ ಗಾತ್ರಾ ಪ್ರಾಣಾ ಸರ್ವ
ರಂಧ್ರವು ಸುಜನಂಘ್ರಿ ತ್ರಾಣಾವಾಗಿ
ಕುಂದಣ ಪುಟದಂತೆ ವರಣಾ ಕಂಬು
ಕಂಧರ ಪೊಳಿಯಲಿ ವಚನಾ –ಆಹಾ
ಸಂದರ್ಭವಾಗಿ ಏನೆಂದದೆ ಸಚ್ಛಾಸ್ತ್ರ
ವೊಂದಿಬರಲಿ ಮುಕುಂದಾ ಮುದ್ದುರಂಗಾ ೧೨

ಅಂದಿಗೆ ಪೊಂಗೆಜ್ಜೆ ಮೆರೆಯೆ ತಂದೆ
ಯೆಂದು ಕುಣಿಯೊ ಎನ್ನ ಧೊರಿಯೆ
ವಾದ್ಯಾ ಧಿಂ ಧಿಂ ಧಿಮಿಕೆಂದು ಮೊರೆಯೆ ಮೇಲೆ
ವೃಂದಾರಕ ಪುಷ್ಪಗರಿಯೆ –ಆಹಾ
ಇಂದಿನ ಉತ್ಸಾಹ ಇಂದ್ರಾದ್ಯರು ಪೂತು
ರೆಂದು ಪೊಗಳೆ ನಗೆಯಿಂದ ನೋಡುವದೆ ೧೩

ಮಧ್ವರಮಣ ಪಾಪಿ ಭಕ್ತಿ ಜ್ಞಾನ
ಸದ್ಧರ್ಮ ವೈರಾಗ್ಯಯುಕ್ತಿ ಕೊಡು

ನಿದ್ರಾಹಾರಾ ಮತ ಭುಕ್ತಿ ಇತ್ತು
ಮುದ್ರಧಾರನಾ ಮಾಡಿ ಮುಕ್ತಿ –ಆಹಾ
ನಿರ್ಧಾರಮಾರ್ಗವ ಬದ್ಧದಿ ತೋರಯ್ಯಾ
ರುದ್ರವಂದಿತ ಸಮುದ್ರಸುತೆಯ ಪತಿ ೧೪

ಬಂಧೂರ ಕೀರ್ತಿ ಸಂಪನ್ನಾ ಕರಿ
ಬಂಧ ವಿಮೋಚನ್ನ ನಾ
ರಂದ ವರದ ಸುಪ್ರಸನ್ನಾ ಶತಾ
ನಂದ ಕಾನನವಾಸಾ ಘನ್ನಾ –ಆಹಾ
ಸಿಂಧುಜನಕನೆ ಪರಂಧಾಮತ್ರಯ ಸತ್ಯ
ಸಂಧ ವಿಜಯವಿಠ್ಠಲೆಂದು ವದನ ಎನ್ನಾ ೧೫

೫೨

ಪೊಗಳಬಲ್ಲನೆ ನಾ ನಿನ್ನ ಪೊಗಳಬಲ್ಲನೆ
ನಿನ್ನ ಬಗೆ ಬಗೆ ರೂಪಗಳ
ಸುಗುಣ ಸಂಪೂರ್ಣ ಉರಗ ಶಯ್ಯ ರಂಗಯ್ಯಾ ಪ

ದಿತಿಸುತ ಸೋಮಕ ಶ್ರುತಿತತಿ ಕದ್ದೊಯ್ಯೆ
ಶತಧೃತಿ ತಲೆವಾಗಿ ಚತುರತೆಯಿಂದಲಿ
ಮತಿಪತಿ ಮತ್ತಿತಾ ಪ್ರತಿಪತಿ ಕಲ್ಪಕ್ಕೆ
ಗತಿಸ್ಥಿತಿ ನೀನೆಂದು ಅತಿ ತುತಿಸಲು ಸಂ
ತತ ಹಿತ ಹಿರಿದಾಗಿ ಪ್ರತಿಯಿಲ್ಲವೆನಿಸಿದ್ದು
ರಿತ ಪುಂಜದಾನವನ ತರಿದೊಟ್ಟಿ
ಮತ್ಸ್ಯಾಕೃತಿಯಾ ಜಯ ಜಯವೆನುತಿರೆ ತ್ರಿಭುವನಾ ೧

ಕೃತು ಭುಕು ದೇವಾರಿತತಿ ಸಂಗತಿಯಿಂದ
ಮತಿ ಏಕರಾಗಿ ಸಂಮತದಿಂದ ನಡೆದು ಪ
ರ್ವತವ ಕಿತ್ತಿ ತಂದು ಉ

ನ್ನತವಾದ ಕ್ಷೀರೋದ ಪತಿಯೊಳಗಿಟ್ಟು
ಅತಿಬಲದಿಂದ ನಗುತ ಮಥಿಸಲು ಮಹಾ
ಕ್ಷಿತಿಧರ ಮುಣಗಿ ಪೋಗೆ ಹಾಹೋ ಎಂದು
ಗತಿಗೆಟ್ಟ ಯೆಲ್ಲ ಕೂಗೆ ಕೇಳುತ ಬಂದು
ಅತುಳ ಕಮಠನಾಗಿ ಪೊತ್ತೆ ಭಳಿರೆ ಮಿಗೆ ೨

ಗತಮಂದ ಮಾರೀಚ ಸುತ ಹೇಮನೇತುರಾ
ಕ್ಷಿತಿಯ ಕದ್ದೊಯಿದು ದುರ್ಮತಿಯಿಂದ ವಿಬುಧರ
ಖತಿಗೊಳಾಗೈಸಿ ಹಿಗ್ಗುತಲವ ತಿರುಗುತ್ತ
ಪ್ರತಿಕೂಲನಾಗಿ ಸುವ್ರತಗಳ ಕೆಡಿಸುತ್ತ ಮಿತಿ ಮೀರಿ
ಪಾತಾಳ ವಾಸವಾಗಿರಲು ಅದ್ಭುತ ಕಿಟಿ ರೂಪವಾಗಿ
ದೈತ್ಯನ ಕೊಂದು ಸತಿಯಾದಂತದಲಿ ತೂಗಿ ತ
ರುತಲಿರೆ ಸತತಮರರು ಪಾಡೆ ಏನೆಂಬೆ ಶಿರವಾಗಿ ೩

ಚತುರ ಮೊಗನವರನುತಿಸಿ ಪಡೆದು ಪ್ರಾಗ
ರ್ವಿತನಾಗಿ ನೀಲಲೋಹಿತನ ಭಕುತಿಯಿಂದ
ತತುವೇಶಜನರ ಶಕುತಿ ಕುಂದಿಸಿ ತಾನೆ
ರತುನ ಗರ್ಭದೊಳು ದೇವತಿಯೆಂದು ಸಾರಿ ಬಾ
ಳುತ್ತ ತನ್ನಾತ್ಮಜ ಭಾಗವತನ ಭಾಧಿಸಿ ಶಿರಿ
ಪತಿಯ ತೋರೆಂದು ಕೊಲ್ಲೆ ಪ್ರಹ್ಲಾದ
ಗತಿಯೆಂದು ವಂದಿಸಲೆ ಕಂಭದಿ ಬಂದು
ಹತಗೈದೆ ಖಳನ ಸುರರು ಪೂಮಳೆ ಚೆಲ್ಲೆ ೪

ಸುತಳ ಲೋಕಕ್ಕೀಶ್ವರ ಶತಕೃತ ಕವಿಯ ರಚಿಸಿ
ಸಿತನಾಗಿ ರಥ ನನ್ನ ಚ್ಯುತ ಪದಸ್ಥನ ಮಾಡಿ
ಸತುವ ಮಾರ್ಗದಲಿ ಪೂರಿತ ಭಾಗ್ಯತನದಲ್ಲಿ
ಕೃತಕಾರ್ಯನಾಗಿರೆ ರಿತಮದದಲಿ ತಾ
ನುತಿಸಲಾದಿತಿಯ ಗರ್ಭದಲ್ಲಿ ಜ

ನಿತಳಾಗಿ ಕಿತವ ರೂಪದಲಿ ಬಂದು ಆ ದ್ವಾರದಲಿ
ವಿತರಣೆ ನೆವದಿ ನಿಂದು ಭೂಮಿಯ ಕೊಂಡಜ
ತತಿ ವಿಕ್ರಮತೀರಿತವಾದ ದಯಾಸಿಂಧು ೫

ಕೃತವೀರ್ಯ ಸೂನು ಪೂಜಿತನಾಗಿ ಮುನಿಯಿಂದ
ಕತಕತ ಕುದಿದು ಅಮೃತದಾಯಿ ಯಾವೈಯ್ಯ
ಪಿತನಗೋಸುಗ ಉಗ
ಳುತ ರೋಷ ಕಿಡಿಗಳಾದ ಈರೈದು ಬಾಹೋ
ನ್ನತ ಕಡಿದು ವಿಂಶತಿ ಏಕಸಾರಿಗೆ
ದ್ವಿತೀಯ ಜಾತಿಯವನ ಹತವ ಮಾಡಿದ ಗಂಭೀರಾ ನಿ
ರುತ ಸತ್ಯವತಿ ನಂದನಕುವರ ಪರುಶ ಪಾಣಿ
ಮೃತ ಜೀವಿಗಳ ಬದುಕಿಸಿದ ಮಹಾಧೀರಾ ೬

ಚತುರಾತ್ಮ ಹರಿದೈವ ವೈವಸ್ವತ ಮನುಕುಲೋದ್ಭವನಾ
ಶತಿವಾರು ಧನದಲಿ ಉತ್ಪತ್ತಿಯಾಗಿ ಅನುಜ
ಸಹಿತ ಪೋಗಿ ಮುನಿಯ ವಾ
ರುತಿಯ ಮನ್ನಿಸಿ ಶಿಲಿ ಸತಿಯಳ ಮಾಡಿ ಭೂ
ಪುರವಸಾರಿ ಪಿತನಾಜ್ಞ ತಿಳಿದು ಮಾ
ರುತಿಯಿಂದ ಕಪಿಯ ವಿಗತಸಂತಾಪನ ಮಾಡಿ
ಸೇತುವೆ ಕಟ್ಟಿ ಪತಿತರ ಶಿರ ಚೆಂಡಾಡಿ ಲಂಕಾನಗರ
ಹಿತದಿಂದ ಭಕ್ತಗೆ ಪಟ್ಟಗಟ್ಟಿದ ನೋಡಿ ೭

ಶತ್ರಪತ್ರಾರುಣ ದಳಾಯುತ ನಯನಾದೇವ।
ತತಿ ವಂದ್ಯ ಗೋಕುಲ ಸ್ಥಿತಿ ಉದ್ಧಾರಕ ।
ಶತಕೃತ ಭಂಗ ಬಲಾ । ಚರಿತಪೂರ್ಣ ಕಂಸಾರಿ
ಯುತ ಷೋಡಶಾಖ್ಯ ಯುವತಿಯರ ತಂದ ಅ।
ಪ್ರತಿಮಲ್ಲ । ರತಿಪತಿ ಪಿತ ಫಲ್ಗುಣಗೆ ಭಾ ।
ರತದಿ ಸಾರಥಿ ಎನಿಸಿ ಕಾಳಗದೊಳು ।
ಧೃತರಾಷ್ಟ್ರಜರ ಕೊಲ್ಲಿಸೆ ಸಭಯಲ್ಲಿ ಪರೀ ।
ಕ್ಷಿತಿನ ಉಳಿಹಿ ಕೀರುತಿ ಪೊತ್ತ ಗುಣರಾಶಿ ೮

ವ್ರತದಿಂದ ಖಳರು ಧರಿತ ಸತ್ಕರ್ಮವ ಮಾಡೆ ।
ಗತಿಗೆಟ್ಟು ಸುರರ ಉಕುತಿಯಿಂದ ಕೈಮುಗಿದು ।
ತುತಿಸಲಾಕ್ಷಣ ಅಪ್ರಾಕೃತ ಕಾಯ ಶಿಶುವಾಗಿ ॥
ಶ್ರುತಿ ಸರ್ವದಲಿ ಅನೃತವೆಂದು ತಿಳುಪಿ ಉ ।
ಚಿತ ಮಾರ್ಗದ ಬಿಡಿಸಿ ನಿ ।
ರ್ಜಿತ ಕಾರು ಪಾರ್ವತಿ ಪತಿಗೆ ಮಾರ್ಗಣವೆನಿಸಿ
ತ್ರಿಪುರಾರಿಗೆ ಹುತಗೈಸಿ ಶಿವನ ಗೆಲಿಸಿ
ವಿವಶಳನೆ ಪತಿವ್ರತೆಯರ ಲಜ್ಜೆಗೊಳಿಸಿದೆ ವಂಚಿಸೀ ೯

ಚತುರ ವರ್ಣಾಶ್ರಮ ಮತಿಶೂನ್ಯರಾಗಿ
ವಿಹಿತ ಧರ್ಮ ಮರೆದು ।
ಮಮತೆ ಜಾತಿ ಸಂಕರ ।
ವ್ರತದಲ್ಲಿ ನಾನಾ ದುಷ್ಕೃತ ತುಂಬಿರಲು ದೇವತೆಗಳು ಮರುಗಿ ಅ ।
ರತರಾಗಿ ತುತಿಸಿ ತ್ವರಿತ ಸ್ವಭಾವದಲ್ಲಿ ನಿ ।
ಸಿತ ಖಡ್ಗಧರಿಸಿ ರಾ
ವುತನಾಗಿ ತುರಗವೇರಿ ಉದ್ಭಟ ದುರುಳತೆಯರ ಕಡಿದ ಶೌರಿ ।
ಕಲಿಕೆಯೆ ಸುಕೃತ ನೆನೆವವರಿಗೆ ಭವಸಾಗರ ತಾರಿ ೧೦

ಶ್ರುತಿ ಶೀರ್ಷ ಶ್ರುತಿ ಉಪ ।
ಕೃತಿನಯ ಪಂಚಮ ಶ್ರುತಿ ಪಂಚರಾತ್ರಾ ಸಂ ।
ಹಿತ ರಾಮಾಯಣ ಭಾಗ
ವತ ಮೂಲ ರಹಸ್ಯ । ತತುವಾದಿನಾಮನು ।
ಶ್ರುತಿಕಲ್ಪ ಕಥೆ ಸರ್ವ ಪ್ರತಿಪ್ರತಿ ವರ್ಣ ಸಂತತಿಯಲ್ಲಿ ನೀನೆ ವ್ಯಾ ।
ಪುತಮೂರ್ತಿ ಸಪ್ತ ಸಮುತ ಭುವನೇಶನೆಂದು ಅಚೌಧ್ಯರೊ
ಪ್ಪುತ ಕೊಂಡಾಡುವರು ನಿಂದು । ಭಕುತಪೂ
ಜಿತ ಕಾಯಾ ವಿಜಯವಿಠ್ಠಲನೆ ಪಾಲಿಸೊ ಇಂದು ೧೧

೫೩

ಬಂದರು ಹರಿಯ ವಾಲಗಕೆ ಭಕ್ತ ।
ವೃಂದ ಸಹಿತ ಸುರ ಶ್ರೇಷ್ಠ ಮೊದಲಾದವರು ಪ

ನಾಗಜ ನಾಗಾರಿ ಸುತ ಬಂದ ।
ನಾಗ ಚರ್ಮಾಂಬರ ನಾಗಾರಿ ಬಂದಾ ।
ನಾಗಾನ ಧನು ಬಂದ ನಾಗಪುಂಗವ ಬಂದ ।
ನಾಗಾರಿ ಗಮನ ಬಂದ । ನಾಗ ಬಂದಾ ॥ ೧

ನಾಗಶಯ ಮುಖವಾದ ನಾಗವಾಹನ ಮಿತ್ರ ।
ನಾಗ ಚರ್ಮಾಂಬರ ಸಖನು ಬಂದಾ ।
ನಾಗಾರಿ ಸುತೆಯಳನಾಳಿದವನು ಬಂದಾ ।
ನಾಗ ಭಕ್ಷಕನು ನಾಗಾರಿ ಬಾಂಧವ ಬಂದಾ ॥ ೨

ನಾಗದ್ವೇಷಿಕನು ನಾಗಾನಾದನನುಜ ।
ನಾಗಕೇತನನ ಕೊಂದಗ್ರಜನು ಬಂದಾ ।
ನಾಗಶಯನ ಸಿರಿ ವಿಜಯವಿಠ್ಠಲರೇಯ ।
ನಾಗವಾಹನನಾಗಿ ಬರುವ ಸಂಭ್ರಮದೊಳು ॥ ೩

೫೪

ಬಂದು ನಿಂದಾ । ಕಣ್ಣ ಮುಂದೆ । ಬಂದು ನಿಂದಾ ಪ

ಬಂದು ನಿಂದಾ ಭಾಗವತರ ಪ್ರಿಯಾ ।
ಕಂದರ್ಪಜನಕ ಶ್ರೀ ಕರುಣಾಸಾಗರ ಮೂರ್ತಿ ಅಪ

ಕುಟಿಲ ಕುಂತಲ ದೇವ । ವಟು ವೇಷದಿಂದಲಿ ॥
ನಟನೆ ಮಾಡುತ ದಿವ್ಯ । ಪಟುತರದಲಿ ತಾನು ೧

ಮುರಳಿನೂದುತ್ತ । ಮರುಳುಗೊಳಿಸಿ ಜನರ ॥
ಕೊರಳ ಪದಕಹಾರ । ಧರಿಸಿ ತಾ ನಲಿಯುತ ೨

ಸುಜನರ ಪೊರೆಯುವ । ಕುಜನರ ತರಿಯುವ ।
ವಿಜಯ ಸಾರಥಿ ದಿವ್ಯ । ವಿಜಯವಿಠಲರೇಯಾ ೩

೫೫

ಬಂದು ನಿಲ್ಲೋ । ಕಣ್ಣ ಮುಂದೆ ಪ

ಬಂದು ನಿಲ್ಲೋ ನಿನ್ನ ಪಾದಕ್ಕೆ ವಂದಿಪೆ
ಇಂದಿರೆಯರಸಾ ಗೋವಿಂದ ಮುಕುಂದಾ ನೀ ಅ.ಪ.

ಅರಳಿದ ಕೆಂದಾ । ವರೆಯ ಧಿಕ್ಕರಿಸುವ
ಚರಣಾರವಿಂದವ । ನಿರುತ ತೋರು ನೀನು ೧

ನೀಲಾಲಕ ಭ್ರಮರ । ಕುಂಡಲ ಮಂಡಿತ ॥
ಮೇಲಾದ ರಾಕೇಂದು । ಮುಖವ ತೋರಿಸುತಲೀ ೨

ಪದುಮನೇತ್ರನೆ ನಿನ್ನ । ಸದನವೆನುತಯೆನ್ನ ॥
ಹೃದಯದೊಳಗೆ ನಿಂತು ನಾ । ಮುದದಿ ಭಜಿಸುವಂತೇ ೩

ಕರಿಯ ಮೊರೆಯ ಕೇಳಿ । ಕರುಣದಿಂ ಬಂದಂತೆ ॥
ಕರೆದಾಗ ನಿನ್ನ ದಿವ್ಯ । ಚರಣಾವ ತೋರಿಸುತಾ ೪

ಅಜಭವಾದಿಗಳಿಗೆ । ನಿಜಪದವನಿತ್ತಂತೆ ॥
ಭಜಿಪ ಭಕ್ತರಿಗೊಲಿವ । ವಿಜಯವಿಠ್ಠಲರೇಯಾ ೫

೫೬

ಬಂದು ನಿಲ್ಲೋ ದಯಾನಿಧೇ ಬಂದು ನಿಲ್ಲೋ ಪ

ಬಂದು ನಿಲ್ಲೋ ನಿನಗೊಂದಿಸುವೆನು ಗೋ
ವಿಂದ ಗೋವಳರಾಯ ಸಂದೇಹಗೊಳಿಸದೆ ಅ.ಪ

ಸದೋಷಕ ನಾನು ಸದಾ ನಿರ್ಮಲ ನೀನು
ಪದೆಪದೆಗೆ ಪೇಳುವುದುಚಿತವಲ್ಲ ೧

ಮನದೊಳು ಪೊಳದು ಚಿಂತನೆಗೆ ನೆಲೆಯಾಗಿ
ಘನಮಹಿಮನೆ ಮಧ್ವಮುನಿ ಮನ ಮಂದಿರ ೨

ಕಡೆಗೋಲು ನೇಣಪಿಡಿದ ಪರಮಾನಂದ
ಉಡುಪಿಯ ಶ್ರೀ ಕೃಷ್ಣ ವಿಜಯವಿಠ್ಠಲರೇಯ ೩

೫೭

ಬಂದೆ ನಾ ನಿಂದೆ ಇಂದೇ । ವಂದಿಸಿದೆನೊ ವಂದೆ ।
ಬಿಂದು ಮಾಧವ ತಂದೆ । ಆನಂದ ಇಂದಿರೇಶ ಬಂದೆ ಪ

ಪುರುಹೂತ ಜಾತ ಸೂತ । ಸರಸಿಜ ತಾತಾ ।
ಪರಮ ಪುರುಷ ಖ್ಯಾತ । ಸರವಂದ್ಯ ದೈತ್ಯ ಘಾತಾ । ಹಾಹಾ
ಚರಣವ ನಿರುತರ ನೆರೆನಂಬಿದೆ । ದು
ಸ್ತರ ಭವಶರಧಿ ಉತ್ತರಿಸೊ ಉರಗಶಾಯಿ ೧

ಕರಿ ಪಾಶ ನಾಶ ಈಶಾ । ವರ ಮೂರ್ತಿ ವರದೇಶಾ
ಶರಣರ ಪರಿತೋಷಾ । ತರತಮ್ಯ ಜ್ಞಾನ ಕೋಶ । ಹಹ ।

ಪುರಹರಗೀಕಾಶಿಪುರ ಕರುಣಿಸಿದ ಸುಂ ।
ದರಗಾತುರ ಗೋತುರ ಧರ ಧರಣೀಶಾ ೨

ಅವಿಮುಕ್ತಿ ಕ್ಷೇತ್ರವಾಸಾ । ನವನವ ಗುಣಭೂಷಾ ।
ಅವಿಕಾರ ನಾನಾ ವೇಷಾ ।
ರವಿಜವನ ಪೊರೆವ ಮಿರುವ ಮಹಸತ್ಕಥಾ
ಶ್ರವಣವೆ ಕೊಡು ಕೇಶವ ವಿಜಯವಿಠ್ಠಲಾ ೩

೫೮

ಬಾರೊ ಭಕ್ತರ ಮನಮಂದಿರಕೆ ।
ಶ್ರೀ ರಮಣ ಪ್ರಯಾಗವೇಣಿ ಮಾಧವರಾಯಾ ಪ

ಅಂಬುಧಿ ಚರನೆ ಬಾರೊ ।
ಅಂಬುಧಿ ಮಥನ ಬಾರೊ ।
ಅಂಬುಜಾಕ್ಷಿಯ ತಂದ ರ ।
ಕ್ತಾಂಬು ಪಾನನೆ ಬಾರೊ । ೧

ಅಂಬುಪೆತ್ತವನೆ ಬಾರೊ ।
ಅಂಬುಧಿ ತೊಲೆಗಿನ ।
ಅಂಬುಧಿ ಬಂಧನ ಬಾರೊ ।
ಅಂಬೆ ಕಾಯ್ದವನೆ ಬಾರೊ । ೨

ಅಂಬಾರ ಪುರಾಲಯ ನ ।
ರಾಂಬು ಹಯಗಮನ ಪೀ
ತಾಂಬರ ವಿಜಯವಿಠ್ಠಲ ।
ಎಂಬ ವೆಂಕಟರಾಯ ಬಾರೊ । ೩

೫೯

ಬೆಳಗಿನ ಝಾವದಿ ಬಾರೊ ಹರಿಯೆ, ನಿನ್ನ ಪ

ಚರಣ ತೊಳೆದು ಜಲಪಾನ ಮಾಡುವೆನೊ ಅ.ಪ.

ನೀರೊಳು ನಿನ್ನನು ಕಾಂಬೆ ಗಿರಿ
ಭಾರಪೊತ್ತರೆ ನಗುವಳೊ ನಿನ್ನ ರಂಭೆ
ಮೋರೆ ತಗ್ಗಿಸಿದರೇನೆಂಬೆ ಅಲ್ಲಿ
ನಾರಸಿಂಹನಾಗಿ ಪೂಜೆಯ ಗೊಂಬೆ ೧

ಬಲಿಯದಾನವ ಬೇಡಿದ್ದೆಲ್ಲ ನೀ
ಛಲದಿ ಕ್ಷತ್ರಿಯರ ಸಂಹಾರ ಮಾಡೆದ್ಯಲ್ಲ
ಛಲವಂತ ನಿನಗೆದುರಿಲ್ಲ ನೀ
ನೊಲಿದ್ಹನುಮನಿಗೆ ಅಜಪದವನಿತ್ಯೆಲ್ಲ ೨

ರುಕ್ಮಿಣೀಶಗೆ ಸಮರಿಲ್ಲ ಕೃಷ್ಣ
ಬಿಮ್ಮನೆ ತ್ರಿಪುರ ಸತಿಯರಪ್ಪಿದ್ಯೆಲ್ಲ
ಬ್ರಹ್ಮಾದಿಗಳು ಸಮರಲ್ಲ ಬಲು
ಹಮ್ಮಿಲಿ ಹಯವೇರಿ ವಿಜಯವಿಠ್ಠಲ ೩

೬೦

ಭಕುತ ಜನ ಮುಂದೆ ನೀನವರ ಹಿಂದೆ ಪ

ಯುಕುತಿ ಕೈಗೊಳ್ಳದೊ ಗಯ ಗದಾಧರನೆ ಅ ಪ

ಕಟ್ಟೆರಡು ಬಿಗಿದು ನದಿ ಸೂಸಿ ಪರಿಯುತ್ತಿರೆ ।
ಕಟ್ಟಲೆಯಲಿ ಹರಿಗೋಲು ಹಾಕಿ ॥
ನೆಟ್ಟನೆ ಆಚೆಗೀಚೆಗೆ ಪೋಗಿ ಬರುವಾಗ ।
ಹುಟ್ಟು ಮುಂದಲ್ಲದೆ ಹರಿಗೋಲು ಮುಂದೆ ? ೧

ಕಾಳೆ ಹೆಗ್ಗಾಳೆ ದುಂದುಭಿ ಭೇರಿ ತಮಟೆ ನಿ- ।
ಸ್ಸಾಳ ನಾನಾವಾದ್ಯ ಘೋಷಣಗಳು ॥
ಸಾಲಾಗಿ ಬಳಿವಿಡಿದು ಸಂಭ್ರಮದಿ ಬರುವಾಗ ।
ಆಳು ಮುಂದಲ್ಲದೆ ಅರಸು ತಾ ಮುಂದೆ? ೨

ಉತ್ಸಾಹ ವಾಹನದಿ ಬೀದಿಯೊಳು ಮೆರೆಯುತಿರೆ ।
ಸತ್ಸಂಗತಿಗೆ ಹರಿದಾಸರೆಲ್ಲ ॥
ವತ್ಸಲ ಸಿರಿ ವಿಜಯವಿಠ್ಠಲ ವೆಂಕಟಾಧೀಶ
ವತ್ಸ ಮುಂದಲ್ಲದೆ ಧೇನು ತಾ ಮುಂದೆ ? ೩

೬೧

ಭಕುತಿ ಸುಖವೊ ರಂಗ ಮುಕುತಿ ಸುಖವೊ ಪ

ಭಕುತಿ ಸುಖವೊ ಮುಕುತಿ ಸುಖವೊ ।
ಯುಕುತಿವಂತರೆಲ್ಲ ಹೇಳಿ ಅ.ಪ.

ಭಕುತಿ ಮಾಡಿದ ಪ್ರಹ್ಲಾದ ।
ಮುಕುತಿಯನ್ನು ಪಡೆದುಕೊಂಡ ।
ಮುಕುತಿ ಬೇಡಿದ ಧ್ರುವರಾಯ ।
ಯುಕುತಿಯಿಂದ ಹರಿಯ ಕಂಡ ೧

ಭಕುತಿ ಮಾಡಿದ ಅಜಮಿಳನು ।
ಅಂತ್ಯದಲಿ ಹರಿಯ ಕಂಡ ।
ಮುಕುತಿ ಬೇಡಿದ ಕರಿರಾಜ ।
ದುರಿತಗಳನು ಕಳೆದುಕೊಂಡ ೨

ಭಕುತಿ ಮುಕುತಿದಾತ ನಮ್ಮ ।
ಲಕುಮಿಯರಸ ವಿಜಯವಿಠ್ಠಲ ॥
ಶಕುತನೆನುತ ತಿಳಿದು ನಿತ್ಯ ।
ಭಕುತಿಯಿಂದ ಭಜನೆ ಮಾಡಿರೊ ೩

೬೨

ಭಜಿಸಿದ್ಯಾ ಈ ಭಾಗ್ಯನಿಧಿಯಾ
ಭಜಿಸಿದ್ಯಾ ಈ ಭಾಗ್ಯನಿಧಿಯಾ ನೋಡು
ತ್ರಿಜಗವಂದಿತ ಗುಣಾಂಬುಧಿಯಾ ಹಾಹಾ
ಸುಜನರ ಹೃದಯ ಪಂ
ಕಜ ಕರ್ಣಿಕೆವಾಸಾ ಅಜಸುರಾರ್ಚಿತ ಪಾದಾ
ರಜತಮೋ ದೂರನ್ನ ಪ

ಮಣಿಮಯ ಖಚಿತ ಕಿರೀಟ ಚಂದ್ರ
ಮನ ಸೋಲಿಸುವ ಲಲಾಟ
ಸಣ್ಣ ಫಣಿ ಕಸ್ತೂರಿ ನಾಮಾ ಮಾಟಾ
ನಮ್ಮನು ನೋಡುವ ವಾರೆ ನೋಟಾ ಹಾಹಾ
ಕನಕ ಮಕರ ಮೋಹನ ಕುಂಡಲ ಕರ್ಣ
ಮಿನುಗುವ ಕದಪು ಆವಿನ ಸೋಲಿಸೆ ನಿತ್ಯಾ ೧

ಭೃಂಗ ಕುಂತಳ ಕೇಶಾ ಪುಬ್ಬು ಅಂಗಜ ಚಾಪಾ ವಿಲಾಸ ಉ
ತ್ತುಂಗ ಚಂಪಕ ಕೋಶಾ ನಾಸಾರಸಾ
ರಂಗುದುಟಿಯ ಮಂದಹಾಸಾ ಹಾಹಾ ತಿಂಗಳ ಎಳೆ ಬೆಳ
ದಿಂಗಳಾ ಮೀರೆ ಭೂ ಮಂಗಳಾಕೃತಿ ತಿರುವೆಂಗಳ ಸ್ವಾಮಿಯ ೨

ಪರಿಮಳ ವೀಳ್ಯೆ ಕರ್ಪುರಾ ವಿಟ್ಟಾ
ಕರಿಡಿಗೆ ಬಾಯ ಮಧುರಾ ವಾಣಿ
ಸ್ವರನಾದಾ ಜಲಧಿ ಗಂಭೀರಾ ದಂತ
ಪರಿಪಜ್ತೌ ಸಮ ವಿಸ್ತಾರ ಹಾಹಾ ಮಿರುಗುವಾನಂತ ಚಂ
ದಿರ ತೇಜಾಧಿಕ ಮುಖಾ ಪರಿಪರಿ ವೇದಾವು
ಚರಿಸುವ ಚತುರನ್ನ ೩

ಬಕುಳಾರವಿಂದ ಮಲ್ಲಿಗೆ ಕುರುವಂಕ
ಪನ್ನೇರು ಸಂಪಿಗೆ ಪೊಂಗೇ
ತಕಿ ಮರುಗ ಶಾವಂತಿಗೆ ಭೂ ಚಂಪಕೆ
ಜಾಜಿ ಇರುವಂತಿಗೆ । ಹಾಹಾ ।
ಸಕಲವು ತುರುಬಿರೆ ಮುಕುಳಿತಾ ವಿಕಸಿತಾ
ಮಕರಂದಾ ಮಾರಂದೋದಕ ಸುರಿಯಲಿಂದು ೪

ಕಡಗ ಕಂಕಣ ಮುದ್ರೆ ಬೆರಳಾ ಪಾಣಿ
ನಿಡಿದೋಳು ಕಕುಭುಜಾ ಕೊರಳಾ ಸ್ಕಂಧಾ
ಪಡಿಸಪ್ತ ಪರ್ಣಾದಿ ಸರಳಾ ಬೆನ್ನು
ಮುಡಿಯಲಿಟ್ಟಾ ಮಣಿ ಹರಳಾ । ಹಾಹಾ।
ಜಡಿತದ ಪವಿ ಅಳವಡಿಸಿದ ಕೇಯೂರ
ಒಡನೆ ತಾಯಿತ ಕೀರ್ತಿ ವಡಿವೇಲಿ ಮೆರೆವನ್ನ ೫

ಕರತಳ ರೇಖೋಪರೇಖಾ ಕಾಂತಿ ಅರುಣ
ಸುರವಿ ಮಯೂಖಾ
ಬೇರೆ ಪರಿಶೋಭಿಸುವ ಹಸ್ತಶಾಖಾ
ಮೇಲು ಧರಿಸಿದ ಚಕ್ರಾದಿ ಶಂಖಾ । ಹಾಹಾ ।
ಸರಿಗೆ ಕೌಸ್ತುಭ ಮಣಿ ಸಿರಿವತ್ಸ ವನಮಾಲಾ
ಉರವೈಜಯಂತಿ ಮಂದಾರ ಹೀರ ಹಾರನ್ನ ೬

ಮುತ್ತು ವೈಢೂರ್ಯ ಪ್ರವಳಾ ಪಚ್ಚೆ ಕೆತ್ತಿದ ಪದಕ ನ್ಯಾವಳಾ
ಸುತ್ತಸುತ್ತಿದ ಸನ್ನುಡಿವಾಳಾ ಈತಾ
ಸ್ತುತಿಪ ಜನಕೆ ಜೀವಾಳಾ । ಹಾಹಾ ।
ಪ್ರತ್ಯೇಕವಾಗಿ ತೂಗುತಿಹ ಸರಗಳು
ತತ್ತುಲಸಿಧಾಮ ಚಿತ್ರವಾಗಿರೆ ಬಲು ೭

ಪುಣುಗು ಕೇಶರಗಂಬೂರ ಗೋರೋ
ಚನ ನಖ ಚಂದನಾ ಅಗರಾ ಪಚ್ಚೆ
ತೆನೆ ಮೃಗನಾಭಿ ಪನ್ನೀರಾ ವ್ಯಾಳಾ
ಘನ ಪರಿಮಳ ಗಂಧ ಸಾರಾ । ಹಾಹಾ ।

ತನುವಿಗೆ ತನುವು ಲೇಪನವಾದಾ ಸೊಗಸು ವಾ
ಸನೆ ಸುತ್ತ ಘಮಘಮ ತನರು ಹಾವಳಿ ತಿಳಿ ೮

ತ್ರಿವಳಿ ಉಪಗೂಢ ಜಠರಾ ಅಖಿಳಾವನಿ ಧರಿಸಿದ ಧೀರಾ ನಾಭಿ
ಸುವರ್ಣ ಕುಸುಮ ಮಂಜೀರಾ
ಮೃಗ ದೇವ ಉಡಿ ಉಡದಾರಾ । ಹಾಹಾ ।
ಭವಕಿಂಕಿಣಿ ತಳಲಾವಿ ವಸನ ಬಿರು
ದಾವಳಿ ತೊಡರು ದೈತ್ಯಾವಳಿ ಹರನನ್ನಾ ೯

ಊರು ಜಾನು ಜಂಘೆ ಗುಲ್ಫಾ ವಿಚಾರಿಸೆ ಕ್ರಮಾತು ಅಲ್ಪಾ ತನ್ನ
ತೋರುವ ಜನರಿಗೆ ಅಲ್ಪಾ ಗುಣ ಸಾರಮಾಡಿಪ್ಪ
ಸಂಕಲ್ಪಾ । ಹಾಹಾ।
ವಾರಣಾ ಕರದಂತೆ ಹಾರೈಸುಯಿಂತು ನೂ
ಪುರ ಕಡಗ ಗೆಜ್ಜೆ ಚಾರು ಚರಣ ಪೆಂಡೆ ೧೦

ಮೃದುದಳಾಂಗಲ ನಖ ಭಾಸಾ ರಕ್ತ ಪದತಳಧ್ವಜ
ವಜ್ರಾಂಕುಶ ಚಕ್ರ
ಪದುಮಾದಿ ಚಿಹ್ನ ನಿರ್ದೋಷ
ಸುಧಿಯಾ ಸುರಿವ ಪೀಠ ಸರಸಾ । ಹಾಹಾ ।
ತ್ರಿದಶನಾಯಕ ಶಿವ ವಿಧಿಗಳ ಮುಕುಟ
ಪಾದದಲಿ ಸಮ್ಮರ್ದವಾದುದು ನೋಡಿ ತರುವಾಯಾ ೧೧

ಭಾನು ಶಶಿವರ್ಣ ಪಾದಾ ಪಾಪಕಾನನ
ದಹಿಸುವ ಪಾದಾ ಕಾಮ
ಧೇನು ಚಿಂತಾಮಣಿ ಪಾದಾ ಬಲು
ಕಾನನ ದಹಿಸುವ ಪಾದಾ । ಹಾಹಾ ।
ಅನಂತ ದಿನಕ್ಕೊಮ್ಮೆ ನೀನೇ ಗತಿಯೆಂದಾ
ಮಾನವಗೆ ಬಂದು ಕಾಣಿಸಿಕೊಂಬನ್ನ ೧೨

ಅಪದಕ್ಷ ಸಾರಾಧ್ಯಕ್ಷ ಸರ್ವವ್ಯಾಪಕ ಕರುಣಿಕಟಾಕ್ಷ ಜಾಗ್ರತ್
ಸ್ವಪ್ನದಲ್ಲಿ ಪ್ರಾಜ್ಞಾದಕ್ಷ ನಿಜ ಆಪನ್ನರಿಗೆ ದಾವಾ ವೃಕ್ಷ । ಹಾಹಾ ।
ರೂಪ ರೂಪಾಂತರ ವ್ಯಾಪಾರ ಮಾಳ್ಪನ್ನ
ಆಪಾದ ರತುನ ಮೌಳಿಪರಿಯಂತರಾ ೧೩

ಹಿಂದಣ ಅನುಭವ ಧ್ಯಾನಾ ವೇಗ ತಂದು
ಸಂಪಾದಿಸು ಜ್ಞಾನಾ ಭಕ್ತಿ
ಯಿಂದ ಮುಂದಕೆ ನಿದಾನಾ ಚಿತ್ತಯಿಂದಾ
ಕೊಂಡಾಡು ಮುನ್ನಿನಾ । ಹಾಹಾ ।
ಬಂಧನ ಹರಿಸಿ ಆನಂದವ ಕೊಡುವ ಮು
ಕುಂದ ಅನಿಮಿತ್ತ ಬಂಧು ವೆಂಕಟನ್ನ ೧೪

ಭುಜಗಾದ್ರಿನಿಲಯಾ ಗೋಪಾಲಾ ನಿತ್ಯ
ಭಜಿಸುವ ಜನರಿಗೆ ಶೀಲಾ ಪುಣ್ಯ
ವ್ರಜ ಪಾಲಿಸುವ ವಿಶಾಲಾ ಇತ್ತು
ನಿಜರೊಳಗಿಡುವ ಈ ಕೂಲಾ । ಹಾಹಾ ।
ವ್ರಜದಲಿ ಪುಟ್ಟಿದಾ ಸುಜನಾಂಬುಧಿ ಸೋಮ
ವಿಜಯವಿಠ್ಠಲರೇಯಾ ಗಜರಾಜವರದನ್ನಾ ೧೫

೬೩

ಮನ್ನಿ ಮನ್ನಿಗೆ ಉಣ್ಣ ಬಂದಾ ।
ತನ್ನವರೊಳಗಿದ್ದ ಸರ್ವ ಸಾರಭೋಕ್ತಾ ಪ

ಭಕುತರಗೋಸುಗ ಭಕುತಿಯ ಕೈಕೊಂಡು
ಕರುಣಾಂಬುಧಿ ಇಂದು ೧

ಭೂವದರೊಳಗಿದ್ದು ದೈತ್ಯರ ಗೆದ್ದಂತೆ ।
ಆವಿಷ್ಣುವಾಗಿ ಮನ್ನಣೆಯ ಕೈಕೊಳುವಲಿ ೨

ನಂಬಿದ ದಾಸರ್ಗೆ ಪ್ರಾರಬ್ಧ ಕರ್ಮವು ।
ಉಂಬೋದು ಬಿಡದಂದು ತದಾಕಾರ ರೂಪದಿ ೩

ಅವರವರ ಯೋಗ್ಯತೆ ಫಲ ಕೊಡುವೆನೆಂದು ।
ದಿವಿಜರ ಒಡಗೂಡಿ ದಿನ ಪ್ರತಿದಿನದಲ್ಲಿ ೪

ತನ್ನ ಸಂಕಲ್ಪವು ಸಿದ್ಧಿ ಮಾಡುವೆನೆಂದು
ಘನ್ನತೆಯಲಿ ನಮ್ಮ ವಿಜಯವಿಠ್ಠಲಸ್ವಾಮಿ ೫

೬೪

ಯೆಂದಿಗಾಹುದೋ ನಿನ್ನ ದರುಶನಾ ।
ಇಂದಿರೇಶ ಮುಕುಂದ ಕೇಶವಾ ಪ

ಗಾನಲೋಲನೇ ದೀನ ವತ್ಸಲಾ ॥
ಮಾನದಿಂದಲೀ ನೀನೆ ಪಾಲಿಸೋ ೧

ಯಾರಿಗೆ ಮೊರೆಯಿಡುವೆ ಶ್ರೀ ಹರೀ ॥
ಸಾರಿ ಬಂದು ನೀ ಈಗಲೇ ಪೊರೀ ೨

ಗಜವ ಪಾಲಿಸೋ ಗರುವದಿಂದಲೀ ॥
ಭುಜಗಶಯನ ಶ್ರೀ ವಿಜಯವಿಠಲಾ ೩

೬೫

ಯೆಲ್ಲಿ ಭಯಗಳು ಹರಿಯ ಭಕುತರಿಗೆ ಇಲ್ಲಾ ।
ಇಲ್ಲವೋ ಕಾಣೋ ಯೆಂದಿಗಾದರು ಮರುಳೆ ಪ

ಹುಲಿ ಇಲಿಯಾಗುವದು ತೋಳ ಕೋಳ್ಯಾಗುವುದು ।
ಕಲಿ ಬಂದು ಹಿತ್ತಿಲನ್ನೀಗ ಬಳಿವಾ ॥

ಮೂಲ ಮಹಾಚೋರ ಚೊಚ್ಚಿಲ ಗೌಡಿಮಗನಾವಾ ।
ಜಲಜಾಕ್ಷನ ಕೃಪೆಯ ಪಡೆದ ದಾಸರಿಗೆ ೧

ಕರಡಿ ಕರು ಆಗುವದು ಉರಿ ಮಂಜು ಆಗುವದು ।
ಕರಿ ನಾಯಿ ಆಗುವದು ಕಂಡವರಿಗೆ ॥
ಭರದಿಂದ ಸುರಿವ ಮಳೆ ನಿಲ್ಲೆನಲು ನಿಲುವದು ।
ನರಹರಿಯ ನಾಮಗಳ ನಂಬಿ ಪಠಿಪರಿಗೆ ೨

ಫಣಿ ಸರವೆ ಆಗುವದು ದಣುವಾಗುತಿಹ ಮಾರ್ಗ
ಕ್ಷಣದೊಳಗೆ ಪೋದಂತೆ ಕಾಣಿಸುವದು ॥
ಘನ ಪಾಷಾಣಗಳು ತೃಣ ಸಮವು ಯೆನಿಸುವವು
ವನಜಾಕ್ಷನ ಕೃಪೆಯ ಪಡದ ದಾಸರಿಗೆ ೩

ಕ್ಷುಧೆ ತೃಷೆಯಾಗದು ಕ್ಷುದ್ರ ಸಂಗ ಬಾರದು ।
ಪದೇ ಪದೆಗೆ ರೋಗಗಳು ಬೆನ್ನಟ್ಟವು ॥
ಉದಯಾಸ್ತಮಾನವೆಂಬೋ ಭಯವು ಸುಳಿಯದು ।
ಪದುಮನಾಭನ ಕೃಪೆಯ ಪಡೆದ ದಾಸರಿಗೆ ೪

ಬಾರವು ಭಯಗಳು ಬಂದರು ನಿಲ್ಲವು ।
ಹಾರಿ ಹೋಗುವವು ದಶದಿಶಗಳಿಗೆ ॥
ಘೋರ ದುರಿತಾರಿ ಶ್ರೀ ವಿಜಯವಿಠಲನಂಘ್ರಿ ।
ಸೇರಿದಾ ಜನರಿಗೆ ಇನಿತಾಹುದುಂಟೇ ೫

೬೬

ಯೇನು ಕರುಣಾಳೋ ದೇವವರೇಣ್ಯ
ಯೇನು ಭಕುತರಧೀನನೋ ಪ

ನಾನು ಎಂಬೋದು ಬಿಡಿಸಿ
ಕನ್ನಯ್ಯ ಧ್ಯಾನವಿತ್ತ ನಾರಾಯಣಾ ಅ.ಪ.

ಅನಂತಾನಂತ ಜನುಮದಲ್ಲಿ ಅನ್ನೋದಕ ಕಾಣದಿದ್ದ ದರಿ
ದ್ರನ್ನ ಕರವನೆ ಪಿಡಿದು ಮೃಷ್ಟಾನ್ನ ಭೋಜನ ಮಾಡಿಸಿ
ಸಂಪನ್ನವಾಗಿದ್ದ ಮತಿಯನಿತ್ತು ಪ್ರಸನ್ನನಾಗಿ
ಒಡನೆ ತಿರುಗೂವ
ಕನ್ನಿ ಸಂಕಲ್ಪ ಕೆದುರುಗಾಣದೆ ಘನ್ನ ಮೂರುತಿ ಕೇಶವಾ ೧

ಪಾವಮಾನಿಯ ಮುಖವೆ ಪೊಂದಿಸಿ
ಪಾವನವ ಮಾಡಿದನು ಬಲು ಕೃ
ಪಾವಲೋಕನ ಪರಮ ಸೂರ್ಯರ್ ರಾವಣಾಸುರ ಮರ್ದನಾ
ಆವ ಪರಿಯಲಿ ನುಡಿದ ಕವನವ ಕವಿ ಮನ್ನಿಸಿ ತಪ್ಪನೆಣಿಸದೆ
ದೇವ ಜಗತ್ರಯ ಜಿತ ಕರಣ ವಸುದೇವ ದೇವಕೀನಂದನಾ ೨

ಲೇಶವಾದರು ಪುಣ್ಯಮಾಡದೆ
ದೋಷರಾಶಿಯೊಳಿದ್ದು ಅನುದಿನ
ಮೋಸಗೊಳಿಸುವ ಭವವನಧಿ ಮಧ್ಯ ಈಶ ಕಡಕಾಣಲಾರದೆ
ಕ್ಲೇಶದಲಿ ಸಂಚರಿಸುತ್ತಿಪ್ಪ ಮಾನೀಶ ಪಶುವನು ನೋಡಿ ವೇಗದಿ
ಲೇಸು ಕೊಡುವೆನೆಂದು ಆನಂದ ದಾಸರೊಳಗಿದ್ದ ನರಹರೀ ೩

ಬಿಂಬ ಕ್ರಿಯಾದ ಮಾರ್ಗವನೆ ಕೋರಿ
ಡಂಬಕಾ ಭಕುತಿಯನೆ ಬಿಡಿಸೀ
ಉಂಬೊ ಪಾಪವ ತೊಲಗಿಸೀ ಮನ
ವೆಂಬೋದೆ ನಿರ್ಮಲ ಮಾಡೀ
ಹಂಬಲಿಸಿ ತನ್ನ ಪಾದ ಪದುಮದ
ಇಂಬು ಬಯಸುವ ಸುಖವೆ ಪಾಲಿಸಿ
ಅಂಬರದಿ ನಿಜರೂಪ ತೋರುವ
ಪೊಂಬುಡೆಧರ ಗೋವಿಂದಾ ೪

ಜಪತಪಾನುಷ್ಠಾನ ನಾನಾ ವುಪವಾಸ ವ್ರತದಾನ ಧರ್ಮಗ
ಳಪರಿಮಿತವಾದ ಯಾಗ ಕನ್ಯಾದಾನ ನಾನಾಲೋಚನ
ಅಪರಿಮಿತವಾಗಿ ಮಾಡಲೊಮ್ಮೊಮ್ಮೆ
ಸ್ವಪನದಲಿ ಕಾಣಿಸುವ ತಾನೆ
ಕೃಪಣರಿಗೆ ವಲಿದಲ್ಲದೆ ಬಿಡ ಚಪಲ ವಿಜಯವಿಠಲಾ ೫

೬೭

ಯೇನೆಲವೊ ದೈವಾ ವೈಕುಂಠನಾಥ
ನೀ ನಾರಿವೇಷವನು ಧರಿಸಿದ ಬಗೆಯೇನೊ ಪ

ದೈತ್ಯರು ಎರಗಿ ದೇವತತಿಗಳು ತಲ್ಲಣಿಸೆ ।
ಮಿತ್ರಭಾವದಲಿವರು ಕೂಡಲಿಟ್ಟು ।
ಇತ್ತಂಡದ ನಡುವೆ ಸುಧೆಯ ಬಡಿಸುವೆನೆಂದು ।
ಮಿತ್ರವೇಷವ ಧರಿಸಿ ಸುರರ ಸಲಹಿದ ಬಗೆಯ ೧

ಶಿವಗೆ ವೃಕಾಸುರನು ಬೆಂಬಿಡದೆ ತನ್ನುರಿ ।
ಕರವ ನೀಡುವೆನೆಂದು ಬರಲಾಗಲು ॥
ಅವನೀಶ ಭವಹರ ಕೇಶವ ನೀನೆ ಗತಿಯೆನಲು ।
ಯುವತಿ ವೇಷವ ಧರಿಸಿ ಶಿವನ ಸಲಹಿದ ಬಗೆಯಾ ೨

ಅಂದು ಮಾಡಿದ ಚರಿತೆ ಭಕ್ತಜನರು ಬಂದು ।
ಒಂದೊಂದನ ನುಡಿದರನ ಲೀಲೆಂದು ।
ಇಂದು ಸತಿವೇಷವನು ಧರಿಸಿ ತೋರಿದಿಯೋ ಪು
ರಂದರ ದಾಸರಿಗೊಲಿದೆ ವಿಜಯವಿಠಲ ಚಲುವಾ ೩

೭೮

ರಂಗಾದುರಿತ ಮದಭಂಗಾ । ನಿತ್ಯ ನಿಸ್ಸಂಗಾ ಪ

ಅಂದು ದಶಕಂಧರನ ಮಂದಿರದೊಳಗೆ ಸೇರಿ।
ಇಂದ್ರಾದಿಗಳು ಬಿದ್ದಿರೆ ಬಂದು ದಯದಿಂದ ಸಲುಹಿದಾ ೧

ಸಿಂಧುವಿನೊಳಗೆ ಸುರರು ಮಂದರಗಿರಿಯ ಕಟಿಯ ।
ಕುಂದದೆ ಸುಧೆಯನೆರೆದ ನಂದ ವಿಗ್ರಹ ಗೋವಿಂದಾ ೨

ಇಂದು ಪುಷ್ಕರಣಿ ಕಾವೇರಿ । ದ್ವಂದ್ವ ತೀರವನಿರುತ ವಾಸಾ ।
ಕಂದರ್ಪಜನಕ ರಂಗ ಮಂದಿರ ವಿಜಯವಿಠ್ಠಲಾ ೩

೭೯

ವಂದಿಸು ವಂದಿಸು ಗುಣವ ಕೊಂಡಾಡಿ ಅರ
ವಿಂದನಾಭನ ಮೂರ್ತಿ ನೋಡಿ । ಹಾಹಾ । ಆ
ನಂದ ಸಿಂಧುವಿನೊಳು ಪೊಂದು ಒಂದೆ ಭಕ್ತಿಯಿಂದ
ಇಂದುವಿನಂದದಿಪ್ಪನಾ ಪ

ಓಂಕಾರ ಪ್ರತಿಪಾದ್ಯನೀತಾ ಅಕಳಂಕ ಅಪ್ರಾಕೃತನೀತಾ ಬಿರು
ದಾಂಕ ಅಖಂಡವ್ಯಾಪುತ ತನ್ನ ಸಂಕಲ್ಪಕ್ಕೆ
ಮೀರಾಜಾತಾ । ಹಾಹಾ।
ಪಂಕಜಸಖ ಕೋಟಿ ಸಂಕಾಶ ಸುರಗಣ
ಲಂಕಾರವಾಗಿಪ್ಪ ವೆಂಕಟರಮಣನ್ನ ವಂದಿಸು ೧

ಪ್ರಳಯದಲ್ಲಿ ವಟಪತ್ರದಲ್ಲಿ ಮಲಗಿಪ್ಪ ಭುವನ ಪವಿತ್ರ ನಿತ್ಯ
ಬಲು ಲೀಲಾಚಿತ್ರ ವೈಚಿತ್ರ ಕರ್ಮ
ನೆಲೆಗೊಳಿಸುವ ಶ್ರೀ ಕಳತ್ರ ॥ ಹಾಹಾ ॥
ಪೊಳೆವ ಏಳು ಕೋಟಿ ನಿಲವು ಪರಿಮಿತಾ
ತಲುವರಿಯಾದ ವಿಮಲಜ್ಞಾನ ಪೂರ್ಣನ್ನ ವಂದಿಸು ೨

ನಿರ್ವಿಕಾರ ನಿರ್ಗುಣಾ ದೇವ ಓರ್ವನಹುದೊ
ಕಲ್ಯಾಣಾ ಮೂರ್ತಿ
ಸರ್ವರೊಳಗೆ ಬಲು ಜಾಣಾನಾಗಿ
ಸರ್ವದಾ ಚರಿಪ ಪ್ರವೀಣಾ ॥ಹಾಹಾ ॥
ಊರ್ವಿ ಭಾರಕರಾದ ಪೂರ್ವ ದೇವರುಗಳ
ಗರ್ವಹರನ ಒಂದು ದೂರ್ವಿಗೆ ಒಲಿವನ್ನ ವಂದಿಸು ೩

ಕಾಲನಾಮಕ ಭಗವಂತಾ ವೇಗ ಪೇಳಿಸುವನು ಏಕಾಂತಾತತ್ತ್ವ
ಕೇಳು ಮನವೆ ನಿಶ್ಚಿಂತಾದಲ್ಲಿ ಹೇಳುವೆ ಮುಂದೆ
ವೃತ್ತಾಂತಾ । ಹಾಹಾ ।
ಶ್ರೀಲಕುಮಿಗೆ ತಾನು ವಾಲಯ ಪ್ರೇರಿಸಿ
ಮೇಲುಪದಗಳಿಂದ ವಾಲಗಗೊಂಡನ್ನ ವಂದಿಸು ೪

ಪುರುಷ ನಾಮಕ ನಾರಾಯಣಾ ತನ್ನ
ಶರಣರಿಗೆ ಪಂಚಪ್ರಾಣಾನಾಗಿ
ಪೊರೆವನು ಬಿಡದನುದಿನಾ ಇದೆ
ಸ್ಥಿರವಾಗಿ ತಿಳಕೊಂಡು ಧ್ಯಾನಾ । ಹಾಹಾ ।
ತರಳ ಯವ್ವನ ವೃದ್ಧ ಪರಿಯಂತ ಮಾಡಲು
ಎರಡೊಂದು ಪರಿಯಲ್ಲಿ ಮಿನಗುವ ದೇವನ್ನ ವಂದಿಸು ೫

ಒಂದೊಂದು ಅವಯವದಿಂದ ತತ್ವ
ಮಂದಿಯ ಪಡೆದ ಗೋವಿಂದ ಅವ
ರಿಂದ ಸ್ತುತಿಸಿ ಕೊಂಡಾನಂದ ಬಂದು
ಕುಂದದೆ ವರ್ಣಿಪ ಛಂದಾ । ಹಾಹಾ ।
ಎಂದಿಂಗೆಂದೀಗೆ ಗುಣವೃಂದ ಎಣಿಪರಾರು
ತಂದೆ ಎಂದೆಂದಿಗೂ ಸುಖ ತಂದು ಕೊಡುವನ್ನ ವಂದಿಸು ೬

ಅನಿರುದ್ಧ ಪ್ರದ್ಯುಮ್ನ ಸಂಕರುಷಣ ವಾಸುದೇವ ನಿಃಶಂಕ
ತನ್ನ ನೆನೆದವರಿಗೆ ನಿರಾತಂಕ । ಹಾಹಾ ।
ತನಗೆ ತಾನೆ ಬಿಜ್ಜಣನಾಗಿ ಜೀವರ
ಕ್ಷಣ ಬಿಡದಲೆ ಕಾರಣನಾಗಿ ಇಪ್ಪನ್ನ ವಂದಿಸು ೭

ಕಾರ್ಯಕಾರಣ ರೂಪದಿಂದ ಸರ್ವಕಾರ್ಯ
ಮಾಡಿಸುವ ಮುಕುಂದ ಸ್ವರ್ಣ
ವೀರ್‍ಯವಿಟ್ಟನು ವೇಗದಿಂದ ಪದ್ಮ
ಭಾರ್ಯಳಲ್ಲಿ ದಯದಿಂದ । ಹಾಹಾ ।
ಮರ್ಯಾದಿಯಲಿ ಸುರ ವೀರ್ಯಾಂಡಾ ಪುಟ್ಟಿಸಿ
ಪರ್ಯಾಯದಲ್ಲಿ ತಾತ್ಪರ್ಯ ನುಡಿಸುವನ್ನ ೮

ಮೀನ ಕಮಠ ಕಿಟಿ ಮನುಜ ಸಿಂಗ ದಾನ ಪಿಡಿದ ಭೃಗು
ತನುಜ ಸೀತಾ ಪ್ರಾಣೇಶ ಬಲಭದ್ರಾನುಜ
ಅಭಿಮಾನಗೇಡಿ ದುಷ್ಟದನುಜ । ಹಾಹಾ ।
ಶ್ರೇಣಿಯ ವ್ರತವ ಕ್ಷೀಣವಗೈಸಿನ್ನು
ಜಾಣರ ಕಾಯಿದ ಅನಾಥ ಮಿತ್ರನ್ನ ವಂದಿಸು ೯

ಕಪ್ಪು ಕೂಡಿದ ಐದು ಮೂರ್ತಿ ಮತ್ತೆ
ಒಪ್ಪುವ ಚತುರ ವಿಂಶತಿ ಮುಂದೆ
ಇಪ್ಪವು ಈರೈದು ಶತಿಹೆಚ್ಚೆ ತಪ್ಪದೆ ಸಾಸಿರ ಮೂರ್ತಿ । ಹಾಹಾ ।
ಅಪ್ಪುತ ವಿಶ್ವಾದಿ ಅಪಾರಾ ಅಜಿತಾದಿ
ಗಪ್ಪ ನನ್ನಯಗಳು ಜಪ್ಪುತಜಾದಿಯ ವಂದಿಸು ೧೦

ಎಸೆವ ಕಪಿಲ ವೇದವ್ಯಾಸಾ ತಾಪಸ ವೃಷಭ ಮಹಿದಾಸಾ ರಂ
ಜಿಸುವ ಸಾರ್ವಭೌಮ ಹಂಸಾ ದಿವ್ಯ
ಪೆಸರಾದ ವೈಕುಂಠಾಧೀಶಾ । ಹಾಹಾ ।
ಕುಶಲ ಹಯಮೊಗ ಅಸುರರ ಮೋಹ ಕ
ಲಶ ತಂದ ಧನ್ವಂತ್ರಿ ಋಷಿದತ್ತ ಕೃಷ್ಣನ್ನ ೧೧

ನಾರಾಯಣ ವಿಷ್ವಕ್ಸೇನಾ ಗುಣ ಸಾರಾ ಹರಿ ರುದ್ರಪ್ರಾಣಾ ಶಿಂಶು
ಮಾರವಿದ್ಭಾನು ಗೀರ್ವಾಣ ಪಟ
ಸಾರಿದ ಯಜ್ಞನಿದಾನಾ । ಹಾಹಾ ।
ಕಾರುಣ್ಯನೇಕಾವತಾರ ಜಡ ಜೀ
ವರ ಸಂಗಡ ವಿಸ್ತಾರವಾಗಿಪ್ಪನ್ನ ವಂದಿಸು ೧೨

ಇಂತು ಬಲ್ಲಿದ ಸಿರಿ ಅರಸಾ ತನ್ನ ಅಂತು
ತೋರನು ವಂದು ದಿವಸಾ ಎಲ್ಲ
ಸಂತರಿಗೆ ನಾಮ ತರಸಾ ದುಷ್ಟ ಚಿಂತೆಯಲ್ಲಿ
ಭಕ್ತರಿರಸಾ । ಹಾಹಾ ।
ನಿಂತು ನಿರ್ಮಳ ಸ್ವಾತಂತ್ರತನಾದಲ್ಲಿ
ತಂತು ನಡಿಸುವ ಆದ್ಯಾಂತ ಸತ್ ಚಿತ್ತನ್ನ ವಂದಿಸು ೧೩

ಅಷ್ಟ ಕರ್ತೃತ್ವ ಷಡ್ಗುಣ್ಯ ಭೂತಿ ಇಷ್ಟದಲ್ಲಿಪ್ಪ ನಿರ್ಗುಣಾ ಸರ್ವಾ
ಭೀಷ್ಟವ ಕೊಡುವ ಸತ್ರಾಣಾ ತನ್ನ ನಿಷ್ಠೆ
ಉಳ್ಳವರಿಗೆ ಕರುಣಾ । ಹಾಹಾ ।
ತುಷ್ಟಾಗಿ ಇಟ್ಟ ಅನಿಷ್ಟ ಪಾಪ ಪುಣ್ಯ
ನಿಷ್ಟವ ಮಾಡಿ ವಿಶಿಷ್ಟನ ಪೊರೆವನ್ನ ೧೪

ಎರಡೈದಾವರಣಾ ಬೊಮ್ಮಾಂಡ ಮಾಡಿ
ತರತಮ್ಯ ಗುಣ ಥಂಡ ಥಂಡಾದಿಂದ
ವಿರಚಿಸಿದನು ಉದ್ದಂಡಾ ಆವಾ
ತರುವಾಯ ಉಪಾಯ ಕಂಡಾ । ಹಾಹಾ ।
ಪರಮೇಷ್ಠಿಯ ತನ್ನ ಹಿರಿಯಮಗನ ಮಾಡಿ
ಪರಿಪಾಲಿಪ ಚತುರ ಭುವನೇಶನ ವಂದಿಸು ೧೫

ವಿರಾಟರೂಪವ ಧರಿಸೀ ಅದೇ ಶರೀರದಲ್ಲಿ
ಸುರರ ಧರಿಸಿ ತಂದು
ವಾರಿಜ ಭವದೊಳು ಹೊರಿಸೀ ಪೋಗಿ
ಆರು ತಿಳಿಯದಂತೆ ಮೆರೆಸೀ । ಹಾಹಾ।
ಕೀರುತಿಯನು ಸರ್ವ ಭಾರ ಕರ್ತನಾಗಿ
ಕ್ರೂರರಿಗೆ ಸುಕುತಾರವಾಗಿದ್ದನ್ನ ವಂದಿಸು ೧೬

ಅವರವರೋಗ್ಯತ ನೋಡಿ ಸುಕೃತ
ದುಷ್ಕರ್ಮಗಳು ನೀಡಿ ಮುಕ್ತಿ
ಭವತಮನಸಿನಲ್ಲಿ ಕೂಡಿ ಚರಿ
ಸುವ ಸಂಬಂಧವ ಮಾಡೀ । ಹಾಹಾ ।
ತ್ರಿವಿಧ ಜೀವರ ಸಾಕುವ ವೈಷಮ್ಯವಿಲ್ಲ
ದವನಾಗಿ ಸಾಮರ್ಥನವ ನವ ಮಾಯನ್ನ ವಂದಿಸು ೧೭

ನಿತ್ಯಾನಿತ್ಯ ಪದಾರ್ಥದಲ್ಲಿ ವ್ಯಾಪ್ತ ಸತ್ಯ ಸಂಕಲ್ಪ ವೇದದಲ್ಲಿ ಕೇಳು
ಅತ್ಯಂತ ಮಹಿಮಾ ಎಲ್ಲೆಲ್ಲಿ ತನ್ನ
ಸ್ತೌತ್ಯಮಾಳ್ಪರ ಬಳಿಯಲ್ಲಿ । ಹಾಹಾ ।
ಭೃತ್ಯನಾಗಿ ನಿಂದಾಗ ನಿತ್ಯವೊಲಿದು ಅಪ
ಮೃತ್ಯು ಪರಿಹರಿಸುವ ಮುತ್ಯನ್ನ ಕಾಯಿದನ್ನ ವಂದಿಸು ೧೮

ದ್ರವ್ಯಕರ್ಮಾದಿ ವಸ್ತಾವಾ ಇವು ಅವ್ಯಯ ಹರಿ ವಿಸ್ತಾವಾ ತೋರಿ
ಹವ್ಯಾದಿ ಯಜ್ಞ ಪ್ರಸ್ತಾವಾ ರಚಿಸಿ ದಿವ್ಯ
ಮೂರುತಿ ತನ್ನ ಸ್ಥಾವಾ । ಹಾಹಾ ।
ಭವ್ಯ ಲೋಕಕೆ ಸಂಜ್ಞೆ ಇತ್ತು
ಸೇವ್ಯಮಾನನಾದ ಅವ್ಯಕ್ತವಾಸಾ ಸವ್ಯದಲ್ಲಿಪ್ಪನ್ನ ವಂದಿಸು ೧೯

ಶಬ್ದ ಸ್ಪರ್ಶ ರೂಪ ರಸ ಗಂಧ ಅಬ್ಧಾವು ಮತ್ತೆ ಪ್ರಕಾಶಾ ವಾಯು
ನಿಬ್ಬಡಿಯಾದ ಆಕಾಶವಾಯು
ಶಬ್ದ ಹಸ್ತಂಘ್ರಿಲೇಶಾ । ಹಾಹಾ ।
ಇಬ್ಬಗಿ ಗುಹ್ಯವು ಶಬ್ದಗ್ರಹ ಚಕ್ಷು
ತಬ್ಬು ಜಿಹ್ವೆ ಘ್ರಾಣಗಬದಿ ಮಾಳ್ಪನ್ನ ವಂದಿಸು ೨೦

ಪಿತಾಮಹಾ ಸುರಪಾಲಾ ದಿಗ್ದೇವತಿಗಳು
ರವಿ ವಾಯು ಶೀಲಾ ಗಂಗಾ
ಪ್ರತಿವೇದ್ಯರು ಸ್ವಾಹಾಲೋಲಾ ಅಜಾಸುತ
ಜಯಂತನು ಕಮಲಾ । ಹಾಹಾ ।
ಪಿತಸ್ವಯಂಭುವಾ ಬೃಹಸ್ಪತಿ ಪಂಚಪ್ರಾಣರು
ಮತಿಪ್ರದಾ ಪ್ರವಾಹಾಹುತವಾದ್ಯಾರಿಷ್ಟನ್ನ ವಂದಿಸು ೨೧

ತತುವಕದಭಿಮಾನಿ ದೇಹಾ ಉಂಟು
ತತುವೇಶ ಜೀವರ ಸ್ನೇಹ ಸಿರಿ
ಪತಿತಾನೆ ಪ್ರವೇಶ ಮೋಹಾದಲ್ಲಿ ಪ್ರತಿದಿನ
ವಾಸ ಸಂದೇಹಾ । ಹಾಹಾ ।
ಸತತ ಮಾಡಲಿ ಸಲ್ಲಾ ಚತುರ ಬಗೆ ತಿಳಿ
ದಿತರ ವ್ಯಾಕುಲ ಬಿಟ್ಟ ಮತಿಯಾಗಿ ಮೋದನ್ನ ವಂದಿಸು ೨೨

ಪಂಚಭೇದಾರ್ಥವ ತಿಳಿಯೋ ದುಷ್ಟ
ಪಂಚೇಂದ್ರಿಯಗಳ ಅಳಿಯೊ ಜ್ಞಾನಿ
ಪಂಚೆಯಲ್ಲಿ ಪೋಗಿ ಸುಳಿಯೋ । ಹಾಹಾ ।
ಮಿಂಚಿನಂದದಿ ಲೋಕಾಸಂಚಾರ ಮಾಡುತಾ
ಕೊಂಚೆದವನಾಗಿ ಚಂಚಲಾ ತೋರಿ ಹರಿಯಾ ವಂದಿಸು ೨೩

ಕಲಿ ನಾಲ್ವರಿಗೆ ಪ್ರವೇಶಾ ಇಲ್ಲಾ
ಉಳಿದವರಿಡಿದು ಗಿರೀಶನೊಳು
ನೆಲೆಯಾಗಿಪ್ಪ ದಾನೀಶಾ ಶಬ್ದಾ
ಬಳಲೀಸುವದಕವ ಹೇಸಾ । ಹಾಹಾ ।
ಜಲಜಜಾಂಡದ ಮಧ್ಯ ಬಲು ದುಃಖಕೆ ವೆಗ್ಗಳ ಶಿರೋಮಣಿ
ಇವನ್ನಾಳದನ್ನ ಒಡಿಯನ್ನ ವಂದಿಸು ೨೪

ಮುಕ್ತಿಲಿ ತಾರತಮ್ಯವೆನ್ನು ಆಸಕ್ತನಾಗಿ ಕೇಳು ಇನ್ನು ಇಂಥಾ
ಉಕ್ತಿಗೆ ಕೇಡಿಲ್ಲಾವೆನ್ನ ಕಾವಾ ಶಕ್ತಿವಂತನು ನಮ್ಮನ್ನ । ಹಾಹಾ ।
ರಿಕ್ತವೃತ್ತಿಯಲ್ಲಿ ವಿರಕ್ತನಾಗು ದು
ರೂಕ್ತಿಯ ತೊರೆದು ವಿಮುಕ್ತನಾಗು ಹರಿಯಾ ವಂದಿಸು ೨೫

ಹರಿವುಂಡ ಎಂಜಲಾ ಉಂಡು ಮತ್ತೆ
ಹರಿವುಟ್ಟ ಉಡುಗೆ ಕೈಕೊಂಡು ಉಟ್ಟ
ಹರಿ ನಿರ್ಮಾಲ್ಯವೆ ಗಂಡು ತೆರನಾಗಿ
ಮುಡಿದಿದ್ದ ಹಿಂಡು ।ಹಾಹಾ ।
ದುರಿತಗಳ ಗೆದ್ದು ಹರಿ ಮಾಯಾವಿಡಿದು ವು
ಚ್ಚರಿಸು ನಾಮಂಗಳು ನಿರುತರಾ ರಂಗನಾ ವಂಧಿಸು ೨೬

ಚತುರ್ವಿಧ ಅರ್ಚಕರು ಶುದ್ಧದಾರುತಿಗಳು
ಜಗದೊಳಧಿಕರು ಎನ್ನು
ಸತತ ನುಡಿವರು ಶೋಧಕರು ಜ್ಞಾನಿ –
ಗತಿಶಯನೆಂದು ಧಾರ್ಮಿಕರು । ಹಾಹಾ ।
ಕ್ಷಿತಿಯೊಳು ಕೇವಲ ರತಿಪತಿಜನಕಂಗೆ
ಹಿತವಾಹಿಯಿಪ್ಪ ಸಮ್ಮತವೆಂದು ಕೃಷ್ಣನ್ನ ವಂದಿಸು ೨೭

ನಿಷ್ಠೆಯಿಂದಲಿ ಕೃಷ್ಣ ಕೃಷ್ಣನೆಂದು ಮೂರು
ಸಾರಿ ಕೂಗಿ ಸಾರಿ ಪೇಳಿ
ದಷ್ಟಮಾತುರದಲ್ಲಿ ಮಾಡಿ ಓಡಿ
ನಷ್ಟವಾಗೋವು ಹೆದರಿ । ಹಾಹಾ ।
ಗಟ್ಯಾಗಿ ದೊರಕೋದು ಇಷ್ಟು ಪುಣ್ಯದಲ್ಲಿ ಸಂ
ತುಷ್ಟನಾಗುವಾ ಸಿದ್ಧಾ ವೃಷ್ಟಿಕುಲಜನ್ನ ವಂದಿಸು ೨೮

ರಥಕೆ ಕುದರಿಯಂತೆ ಕಟ್ಟೇ ಭಕ್ತ
ಪಥವ ಪಿಡಿಸಿದನಾ ಅಟ್ಟೇ ಬಿಟ್ಟ
ವ್ಯಥಿಯ ಮಾಡಿದ ಮೊಳೆ ತಟ್ಟಿ
ಮನ್ಮಥ ಪಿತನಾದಡಿ ಗುಟ್ಟೀ । ಹಾಹಾ ।
ಸಥೆ ಇತ್ತದು ನೋಡು ಪೃಥ್ವಿಯೊಳಗೆ ಖಗ
ರಥನ ಕಾರುಣ್ಯಕೆ ಪ್ರತಿಯಿಲ್ಲ ಪೊರೆವನ್ನ ವಂದಿಸು ೨೯

ಕೊಟ್ಟಾರೆ ತಪ್ಪಾದದೇನು ಬಲು
ದುಷ್ಟ ಜನಾ ತಿಮಿರಭಾನು ನಿತ್ಯಾ
ನುಷ್ಠಾನ ಮಾಡೋದು ನೀನು ಹರಿ
ಪಟ್ಟಣ ಇಲ್ಲಿಗೆ ಗೇಣು । ಹಾಹಾ ।
ಕೊಟ್ಟಿದ್ದು ಉಂಡು ವಿಶಿಷ್ಟನಾಗಿ ಬಾಳು
ಕಟ್ಟಕಡೆಯಲಿ ನಿಷ್ಠನಾಗಿ ಹರಿಯಾ ವಂದಿಸು ೩೦

ಜ್ಞಾನವಿಲ್ಲಾ ಮುಕ್ತಿ ಇಲ್ಲಾ ಇದು ಅನಂತಕಾಲಕೆ ಬಲ್ಲಾದೆನ್ನ
ಸ್ನಾನಾದಿಗಳ ಮಾಡೆ ಎಲ್ಲಾ ಪುಣ್ಯ
ತಾನುಂಟಾ ಸಂಪದವಿಲ್ಲಾ । ಹಾಹಾ ।

ನಿನ್ನೊಳಗೆ ನೀನು ಧೇನಿಸು ಅನುಭವ
ಮಾನವನಾಗದೆ ಕಾಣಿಸ ಹರಿಯನ್ನ ವಂದಿಸು ೩೧

ಅಜಗೆ ನಿರ್ಮಳವಾಗಿ ಪೊಳೆವಾ
ಬೊಮ್ಮಜಗೆ ಕನ್ನಡಿಯಂತೆ ಸುಳಿವಾ ಸುರ
ವ್ರಜಕೆ ತರಣಿಯಂತೆ ನಿಲುವಾ ಮನುಜರಿಗೆ
ಮಿಂಚಿನ ತೆರೆವೀವಾ । ಹಾಹಾ ।
ಸುಜನರಿಗೆ ತನ್ನ ಭಜನಿಯ ಪಾಲಿಸಿ
ನಿಜರೂಪ ಕೊಡುವಾ ವಿರಜನದಿಯ ಪೆತ್ತನ್ನಾ ವಂದಿಸು ೩೨

ಹದಿನಾಲ್ಕು ಲೋಕದ ಮಧ್ಯದಲ್ಲಿ
ಅಧಿಕವಾಗಿವೆ ಅಭೇದ್ಯಾ ಮೂರು
ಸದನಗಳುಂಟು ಅನಾದ್ಯಾ ಕಾಲ
ಹದುಳವಾಗಿಪ್ಪವು ಸಾಧ್ಯಾ । ಹಾಹಾ ।
ಮೊದಲು ಮುಕ್ತಿಗೆ ಪೋದಾ ಪದುಮ ಭವಾದ್ಯರು
ಇದೆ ಪದವಿಯಲಿ ತೋಷದಲ್ಲಿ ಇಪ್ಪದು ನೋಡಿ ವಂದಿಸು ೩೩

ಜೀವರ ಪ್ರಮಾಣೆಂದೆ ಲೋಕ
ಜೀವನು ತಮಗೆ ತಾವಂದೆ ಹೀಗೆ
ಭಾವಿಸು ಮರ್ಯಾದಿಯೆಂದೆ ಸಿದ್ಧಾ
ಶ್ರೀವರ ಮಾಡಿದೆ ಅಂದೆ । ಹಾಹಾ ।
ಆವಾವಾ ಸ್ಥಾನದಿ ಅವರವರಾ ಇಟ್ಟು
ಸೇವಿಯ ಕೊಂಬ ಪಾವನ ಮೂರುತಿಯ ವಂದಿಸು ೩೪

ಮೊರೆ ಇಟ್ಟು ಬೇಡಲು ಕೊಡನು
ಅವಾಕರದಾ ಮಾತಿಗೆ ವಡಂಬಡನು ಬಲು
ಪರಿತೋರಲು ದಯವಿಡನು ತನ್ನ
ಸರಿಬಂದರೆಯಲ್ಲಿ ಬಿಡನು । ಹಾಹಾ ।
ತುರುಬು ಹಿಡಿದು ತುಪ್ಪಾ ಸುರಿಸುವವಲ್ಲೆನೆಂದರೆ ಕೇಳಾ
ಶರಣಗೆ ಶರಣನಾಗಿಪ್ಪನ್ನ ವಂದಿಸು ೩೫

ಭಾಸುರ ದೀನ ಮಂದಾರಾ ರತ್ನ
ರಾಶಿ ಹಗಲು ಬೇಗ ಬಾರಾ ನಿನ್ನ
ದಾಸನೆಂದರೆ ಕೆಲಸಾರಾ ಅಂದಾ
ಮೀಶೆಕೂಟ್ಟಿಸಿಕೊಂಡ ಧೀರಾ । ಹಾಹಾ ।
ಏಸು ಬಗೆಯಲ್ಲಿ ವರ್ಣಿಸಬಲ್ಲೆನು ಮಾನಿಸ
ವೇಷನ ಧರಿಸಿದ ಸುಲಭನ್ನವಂದಿಸು ೩೬

ಗಲಭೆ ಇದೇನು ಎಂಬ ಸುಳಾದಿ
ವಲಿಸಿದನು ನೋಡಿಲೇಸು ನಮಗೆ
ಕೆಲಕಾಲ ಕೊಟ್ಟು ಮನ್ನಿಸು ಲಾಲಿ ಸಲಹುವ
ದಾಸರಾ ನೆನೆಸು। ಹಾಹಾ ।
ಬಳಲಿದ್ದು ಕರಿಯಾ ಹುಯ್ಯಾಲಿಗೆ ಬಂದೊದಗಿದ
ನಳಿನನಾಭನ ದಯಾ ಜಲನಿಧಿ ಎಂದು ಇಂದು ವಂದಿಸು ೩೭

ಎಂಭತ್ತು ನಾಲುಕು ಲಕ್ಷಾ ಯೋನಿ ಇಂದಾಗಿ
ಮಾಡಿದಾ ದಕ್ಷಾ ತಾನೆ
ಡಿಂಭಾದೊಳಗೆ ನಿಂತು ದೀಕ್ಷಾ ಬದ್ಧ
ಎಂಬೋದು ತಿಳುಪುವಧ್ಯಕ್ಷಾ । ಹಾಹಾ ।
ಕುಂಭಿಣಿಯೊಳಗೆಲ್ಲಾ ಉಂಬೋದ ತಪ್ಪಿಸಿ
ಬೆಂಬಿಡದಲೆ ಸರ್ವ ತುಂಬಿಕೊಂಡಿಪ್ಪನ್ನ ವಂದಿಸು ೩೮

ಇದರೊಳು ಭೂಸುರ ಬಿಂಬಾವನ್ನ
ಅಧಿಕ ಮಾಡಿದನು ಕಂಸಾಸುರನ
ವಧೆ ಮಾಡಿದಾ ಸುರೋತ್ತಂಸಾ ತನ್ನ ಪದವ
ನಂಬಲು ಪಾಪಧ್ವಂಸಾ । ಹಾಹಾ ।
ದುರುಳ ಕೇಶಕೆ ವಪ್ಪಿದರೆ ವೈಷ್ಣವ ಸಾರಾಹೃದ
ಯಿರ ಬಳಿಯಲ್ಲಿ ನಿಧಿಯಾಗಿ ಸುಳಿವನ್ನ ವಂದಿಸು ೩೯

ಜೀವರ ಕೈಸಾಧನವಾ ನಿತ್ಯ
ಶ್ರೀವರ ತಾನೆ ಮಾಡಿಸುವ ಸಿದ್ಧಾ
ಭಾವದಲ್ಲಿ ಪ್ರೇರಿಸುವಾ ವೇಗ ಕೈವಲ್ಯದಲ್ಲಿ
ಪೊಂದಿಸುವ । ಹಾಹಾ ।
ಪಾವನ ಮೂರುತಿ ದೇವಶಿಖಾಮಣಿ
ಪಾವಿನ ತುಳಿದ ಶ್ರೀ ಗೋಪಾಲರಾಯನ್ನ ವಂದಿಸು ೪೦

ಅಜಭವಸುರ ಮುಖ್ಯರಿಂದ ನೋಡಿ
ಭಜನೆ ಮಾಡಿಸಿ ಕೊಂಬನಂದಾ ಗುಣ
ವ್ರಜರಾಸಿವುಳ್ಳ ಗೋವಿಂದಾ ಜಯ
ವಿಜಯನಾದ ಪರಾಭಂದಾ । ಹಾಹಾ
ಯಜನಾದಿಯಲಿ ತಾನೆ ಯಜನನಾಗಿ ವಿ
ರಜಕರ್ಮ ಕೈಕೊಂಬ ವಂದಿಸು ೪೧

ಡಿಂಭಾದೊಳಗೆ ಪ್ರಾಜ್ಞ ಮೂರ್ತಿ ನಾಮಾ
ಎಂಬೊ ಜನರಿಗೆ ಸತ್ಕೀರ್ತಿ ಬಲು
ತುಂಬಿ ತುಳುಕುವ ಪೂರ್ತಿ ಉಂಟು
ಬೆಂಬಿಡುವುದು ಮಹಾ ಅರ್ಥಿ । ಹಾಹಾ ।
ಕೊಂಬುವ ಕೊಡುವರ ಉಂಬುವ ಉಡುವರ
ಇಂಬು ತೋರುವ ಪೀತಾಂಬರಧರನ್ನ ವಂದಿಸು ೪೨

ಅಪ್ರಾಕೃತ ಇದ್ದಾ ಧಾತಾ ಮತ್ತೆ ಅಪ್ರಾಕೃತ
ಮನಿಯಾತಾ ಮೇಲು
ಅಪ್ರಾಕೃತ ಶ್ರೀ ಉಳ್ಳಾತಾ ನಾಮಾ
ಅಪ್ರಾಕೃತ ಕಾಯನೀತಾ । ಹಾಹಾ ।
ಅಪ್ರತಿಹತ ಸದಾ ಸ್ವಪ್ರಕಾಶ ನಾನಾ ಪ್ರಕಾರಾ ಮಾಯಾ
ಅಪ್ರಮೇಯನ ನೋಡಿ ವಂದಿಸು ೪೩

ಸಕಲ ದೋಷಕ ಪ್ರಾಯಶ್ಚಿತ್ತಾ ಜೀವರಖಿಳ
ಭಿನ್ನನ ಪಾದಾ ಚಿತ್ತದಲ್ಲಿ
ಅಕುಟಿಲನಾಗಿ ನಿರುತಾ ಇಟ್ಟು
ಸುಖಿಸುವುದು ಪುಣ್ಯ ಮೊತ್ತಾ । ಹಾಹಾ ।
ವಿಕಳವಿಲ್ಲದೆ ಬಂದು ಮುಕುತಿಗೆ ಸಾಧನ
ಭಕುತಿ ತಂದು ಕೊಟ್ಟ ಅಕಳಂಕ ಮಾಳ್ಪನ್ನ ವಂದಿಸು ೪೪

ಕುಜನ ಪರ್ವತ ಕುಲಿಶಾ ನೀರಜನಾಭಾ ನಿಸ್ಸಂಗ ಲೇಸಾ ನಮ್ಮ
ಭುಜಗ ಗಿರಿಯ ಶ್ರೀನಿವಾಸಾ ಪೂರ್ಣಾ
ರಜನೀಶವದನ ಸರ್ವೇಶಾ । ಹಾಹಾ ।
ವಿಜಯನಗರಿಯಲ್ಲಿ ನಿಜದಾಸರ ಕೈಯ
ಭಜನೆ ಕೈಕೊಂಡ ವಿಜಯವಿಠ್ಠಲನ್ನ ವಂದಿಸು ೪೫

೭೦

ವರ್ಣಿಸಲರಿಯೆ ನಿನ್ನ । ವರ್ಣಿಸಲರಿಯೆ ಗು ।
ಣಾರ್ಣವ ಹರಿಯೆ ಸೂ । ವರ್ಣ ಗಿರೀಶ ಸು ।
ಪರ್ಣ ಗಮನ ರಂಗಾ ಪ

ಮಣಿಮಯ ಮುಕುಟ ಕಾಂ । ಚನದ ಕುಂಡಲ
ಕರ್ಣ । ಫಣಿಯ ಕಸ್ತೂರಿ ನಾಮ ।
ಮಿನುಗುವ ಹಸ್ತ ಕಂಕಣ ಬೆರಳುಂಗರ ।
ಎಣಿಗಾಣೆ ಕೊರಳ ಮುತ್ತಿನಹಾರ ಕೌಸ್ತುಭ ।
ಮಣಿರಿಪುಗಳದಲ್ಲಣ ಕಂಬು ಸೂದರು ।
ಶನ ಭುಜಕೀರ್ತಿ ಭೂ । ಷಣವಾದ ಶಿರ ಉರುವ ಒಪ್ಪಲು ಕಿಂ ।
ಕಿಣಿ ಕನಕಾಂಬರವ ಪೂಸಿದ ಗಂಧ ।
ಪುನುಗು ಜವ್ವಾದಿಯಿಂದೆಸೆವ ಸುರತರುವೆ ೧

ಸುಳಿನಾಭಿ ಉದರ ತ್ರಿವಳಿ
ಕಾಂಚಿದಾಮ ಥಳಿ । ಥಳಿಸುವ ಪದಕ ನ್ಯಾ ।
ವಳ ಸರ ಸರಿಗೆ ಪ । ವಳದುಟಿ ಬಾಯ
ತುಂಬಲು ಸೂಸುತಿರೆ ದಂತಾ ।
ವಳಿ ದಾಳಿಂಬರದ ಬೀಜ । ಎಳನಗೆ
ಮಾತಾರಗಿಳಿಯಂತೆ ಶೋಭಿಸಿ ।
ಹೊಳೆವ ಕಪೋಲ ಸುತ್ತಲು ಬೆಳಗುವ ಕಂಗಳ ನಾಸಕಾಂತಿ ।
ಸುಳಿಗುರುಳು ತಿಂಗಳನಂದದಿ ಮೊಗ ।
ಚಲುವ ದೇವರ ದೇವ ಸಿರಿ ತಿರುವೆಂಗಳಾ ೨

ವರ ಚತುರ್ಭುಜ ಕಟಿ । ಕರ ಅಭಯ ಹಸ್ತ
ಎರಡೇಳು ಲೋಕ ಜಠರದೊಳಡಗಿರೆ ।
ಕಿರಿದೊಡೆದರ್ಪಣ । ತೆರದಿಂಮೊಪ್ಪು ಜಾನು
ಕರಿ ಪಲ್ಲಿನಂತೆ ಸುಂದರ ಜಂಘೆ ಗುಲ್ಫ ವಿ ।
ಸ್ತರ ಪಾದ ನಖ ಸಾ । ಲ್ಬೆರಳು ಪಾದತಳ ಪರಿ ।
ಪರಿ ರೇಖೆಗಳ ಕಾಲಿಂದಿಗೆ ।
ಬಿರಿದಿನ ಪೆಂಡೆಗಳ ತೊಡರನಿಟ್ಟು ।
ಮೆರೆವ ಪರಮಪುರುಷ ನಿತ್ಯ ಮಂಗಳಾ ೩

ನಮೊ ನಿರಯ ದೂರ ಕಮಲನಾಭನೆ ಉ ।
ತ್ತಮ ಜನ ಮನೋರಥ ।
ಅಮರೇಶ ಪರಬೊಮ್ಮ ।
ರಮೆ ಮನೋವಲ್ಲಭ ಸಮರದೊಳುಳಿಹಿದಾ ।
ಗಮ ಸಿದ್ಧಾಂತನೆ ವಿ । ಕ್ರಮದಾನವ ಹರ ।
ಅಮಲ ಸುಖಸಾಂದ್ರ ದ್ಯುಮಣಿ
ಕೋಟಿ ಪ್ರಕಾಶಾ । ವೆಂಕಟೇಶಾ ।
ಅಮಿತ ಮಹಿಮ ಸರ್ವೇಶಾ । ಅಪ್ರಾಕೃತ ।
ಪ್ರಮೆಯಭರಿತನಾದ । ಕುರುವಂಶ ವಿನಾಶಾ ೪

ಭೂಗೋಳದೊಳಗಿದರಾಗಮ ತಿಳಿ । ದುರಗ ಗಿರಿ ಯಾತ್ರೆಗೆ ।
ಭೋಗದಾಶೆಯ ಬಿಟ್ಟು । ವೇಗದಿಂದಲಿ ನಿಜ ।
ಭಾಗವತರ ಸರಿಯಾಗಿ ಪೂರ್ವದ ಭವ
ರೋಗವ ನೀಗುತ್ತ । ಆಗಲೀಗೆನ್ನದೆ ।
ಸಾಗಿ ಬರಲು ಚನ್ನಾಗಿ ಜ್ಞಾನವ ನೀವುತ್ತ ಸಾಕುವಂಥ ।
ಯೋಗಿ ನಾರದನ ಪ್ರೀತ ತಿರುಮಲೇಶಾ ।
ಶ್ರೀ ಗುರು ವಿಜಯವಿಠ್ಠಲ ಭಕ್ತರ ದಾತಾ ೫

೭೧

ವ್ಯಾಪಾರ ಉದ್ಯೋಗವನು ಮಾಡುವೆ ।
ಭೂಪಾಶದೊಳಗೆ ಎಲ್ಲರಿಗೆ ಬಲ್ಲಿದನಾಗಿ ಪ

ಮುರಾರಿ ನಾಮವೆಂಬೊ ಮುಂಡಾಸವನೆ ಸುತ್ತಿ ।
ಅರವಿಂದನಾಭವೆಂಬೊ ಅಂಗಿಯ ತೊಟ್ಟು ॥
ನರಹರಿನಾಮವೆಂಬೊ ನಡುಕಟ್ಟನೆ ಸುತ್ತಿ ।
ಕರುಣಾಸಾಗರನೆಂಬೊ ಕಠಾರಿಯನು ಸಿಕ್ಕಿಸಿ ೧

ಕಮಲನಾಭವೆಂಬೊ ಕಮಲದಾನಿ ಪಿಡಿದು ।
ತಿಮಿರದೋಷವೆಂಬೊ ಪಾಯಿಪೋಸು ಮೆಟ್ಟಿ ॥
ಶಮೆದಮೆಯೆಂಬೊ ಪರಿಚಾರಕರ ಒಡಗೊಂಡು
ಗಮಿಸಿದ್ದೆನೊ ಹರಿದಾಸರಿದ್ದ ಚಾವಡಿಗೆ ೨

ಪೋಗಿ ನಮಸ್ಕಾರವೆಂದು ತಲೆಬಾಗಿ ನಿಲ್ಲಲು ।
ಭಾಗವತರು ಕರೆದು ಇಂಬನಿತ್ತು ॥
ಯೋಗಕ್ಷೇಮವೆಲ್ಲ ವಿಚಾರಿಸಿ ಪ್ರೀತಿಯಲಿ ।
ಈಗಳೆ ಕುಳಿತ ಅಚ್ಯುತನ ತೋರಿದರು ೩

ಕಂಡು ಕರವನು ಮುಗಿಯೆ ಕರುಣಾಸಾಗರನೆಂಬೊ ।
ಮಂಡಲಾಧಿಪನು ಕರೆದು ಮನ್ನಿಸಿ ॥
ಗಂಡುಗಲಿಯಾಗೆಂದು ಸಂಚುಗಾರಿಕೆ ತುಲಸಿ ।
ದಂಡೆ ಕೊರಳಿಗೆ ಹಾಕಿ ದಾಸರೊಳಗಿರಿಸಿದನು ೪

ಘನವಾದ ಉದ್ಯೋಗ ದೊರಕಿತು ನನಗಿನ್ನು ।
ಅನುಮಾನವಿಲ್ಲವು ಎಂದೆಂದಿಗೂ ॥
ದಿನದಿನಕೆ ಹರಿನಾಮವೆಂಬೊ ಲೆಖ್ಖ–।
ವನು ಬರೆದು ತ್ರಿಲೋಕದರಸನಿಗೆ ಒಪ್ಪಿಸಿದೆ ॥ ೫

ಬರೆದು ಲೆಖ್ಖವ ನೋಡಿ ದಯಾಪಯೋವಾರಿಧಿ ।
ಹರುಷದಿಂದಲಿ ಎನಗೆ ಸಂಬಳಕ್ಕೆ ॥
ಬರೆಸಿ ಕೊಟ್ಟನು ಸನದು ಕೇಶವಾದಿಯಂಬೊ ।
ವರಹಗಳು ಎಂದಿಗಾದರು ಅಳಿವಿಲ್ಲದೆ ॥ ೬

ಈಸು ದಿನ ಉದ್ಯೋಗ ಹೀನನಾಗಿ ನೊಂದೆ ।
ದಾಸರಾ ದಯದಿಂದ ದೊರೆಕಿತಿಂದು ॥
ಏಸು ಜನ್ಮದ ಸಂಚಿತ ಕರ್ಮ ಓಡಿಸಿ ।
ಶ್ರೀಶ ವಿಜಯವಿಠ್ಠಲನಲ್ಲಿ ಬಾಳಿದೆನೊ ॥ ೭

೭೨

ವಿಜಯವಿಠ್ಠಲ ನಾಮ
ಭಜಿಸಿದಾ ಮಾನವಗೆ ಸತತ ಸಂಪದವಕ್ಕು ಪ

ಕಾಯ ಶುಚಿಯಾಗುವದು ಕಠಿನತನ ಪೋಗುವದು
ಆಯು ಹೆಚ್ಚುವುದು ನಿಯೋಗಿ ಯಾಹಾ
ನಾಯಿ ಮೊದಲಾದ ಪ್ರಾರಬ್ಧ ಜನುಮಗಳಿರಲು
ಬಾಯಿಲಿಂದಾಕ್ಷಣ ತೀರಿ ಪೋಪವು ಕೇಳಿ ೧

ದ್ವೇಷಿಗಳು ಎಲ್ಲ ಬಾಂಧವರಾಗಿ ಇಪ್ಪರು
ದ್ವೇಷ ಪುಟ್ಟದು ತನಗೇತರ ಮೇಲೆ
ದೇಶ ಮಧ್ಯದಲಿ ತಾನೆ ಎಲ್ಲಿ ಇದ್ದರೂ
ಕೋಶಾಧಿಪತಿಯಾಗಿ ಸಂಚರಿಸುತಿಪ್ಪರು ೨

ಹೀನ ವಿಷಯಂಗಳಿಗೆ ಅವನ ಮನವೆರಗಿದರೆ
ಕಾಣಿಸುವನು ತಾನೆ ಮುಂದೊಲಿದು
ಏನು ಹೇಳಲಿ ಹರಿಯ ಅನುಕಂಪನಾತನಕೆ
ಏಣಿಸಿ ಪೊಗಳಿದರೆ ಕಾಲ ಕಡೆಗಾಣನು ೩

ದೇವಾದಿ ಮುನಿತತಿಯ ಮೊದಲಾದವರು ನೆನೆದು
ಆವಾವ ಸೌಖ್ಯದಲಿ ಇಪ್ಪರದಕೋ
ಭಾವದಲಿ ತಿಳಿದು ಭಕುತಿಯ ಮಾಡಿರೋ ಜನರು
ಕಾವುತಲಿಪ್ಪ ಸರ್ವಾಶ್ರಯನಾಗಿ ಹರಿ ೪

ಕಂಡವಗೆ ದೊರಕದು ಈ ನಾಮ ಜಪಿಸಿದರು
ಕಂಡವಗೆ ಬಲು ಸುಲಭ ಭಯವೆಯಿಲ್ಲಾ
ಮಂಡಲವ ಚರಿಸಿ ನಾನಾ ವ್ರತ ಮಾಡದಿರಿ
ಕೊಂಡಾಡು ವಿಜಯವಿಠ್ಠಲನ ಆಸರ ಸೇರಿ ೫

೭೩

ವಿಜಯವಿಠ್ಠಲ ವಿಜಯವಿಠ್ಠಲ
ವಿಜಯವಿಠ್ಠಲ ಶ್ರೀ ವಿಜಯವಿಠ್ಠಲ ಪ

ವನಚರ ನಗಧರ ಅವನಿಯ ಉದ್ಧಾರ
ಹನನ ಮಾಡಿದಿಯೊ ಕಾನನ ವೇಗದಿ ಭು–
ವನ ದಾನದ ನೆವನನು ಮಾಡಿ ಗಂಗೆಯ ಹ –
ವಣದಿ ಪಡದೋ ಶ್ರೀ ವಿಜಯವಿಠ್ಠಲಾ ೧

ಛಲದಿಂದ ಕುಲ ಕೋಲಾಹಲ ಮಾಡಿಸಿ ನೀ ತರಿದೆ
ಬಾಲೆಯರ ಬಾಲರ ಬಿಡದೆ
ಸುಲಭದಿ ಕರ್ಣಗೆ ಒಲಿದು ಪೇಳಿದೆ ಆ
ಸುಲಲಿತಾ ಭಾರ್ಗವ ವಿಜಯವಿಠ್ಠಲ ೨

ಶತಮುಖರಿಪು ಲೋಕಪಿತನೊರವಿನಿಂದಲಿ
ಖತಿ ಸಕಲರಿಗೆ ನೀವು ತರಿದಿರಲು
ಪತಿತಪಾವನ ರಾಮ ಅತಿ ವೇಗ ದನುಜನ
ಹತವ ಮಾಡಿದೆಯೊ ಶ್ರೀ ವಿಜಯವಿಠ್ಠಲ ೩

ಬಕಮುಖ ದನುಜರ ಹಕ್ಕಲಗೊಳಿಸಿ ಬಲು
ಯುಕುತಿಯಿಂದಲಿ ಭಕುತರ ಪೊರದೆ
ವಿಕಸಿತ ಕಮಲನಯನ ಕಂಜನಾಭನೆ
ಸಕಲ ಸುರರ ಪಾಲ ವಿಜಯವಿಠ್ಠಲಾ ೪

ರಕ್ಕಸ ಮರ್ದನ ದಿಕ್ಕು ಮೋಹಿಪ ಕೃಷ್ಣ
ರುಕ್ಮಿಣಿ ಪತಿಯಾದಾ ಚಕ್ರಪಾಣಿ
ಉಕ್ಕಿದ ಮಗಧನ ಸೊಕ್ಕು ಮುರಿದು ಕಪಿ
ರೆಕ್ಕ ಆಳ್ವನಿಗೆ ಒಲಿದೆ ವಿಜಯವಿಠ್ಠಲಾ ೫

ರಣದೊಳರ್ಜುನ ಬಾಣ ಧನು ಕೆಳಗಿಡಲಾಗಿ
ಘನವಾದ ವಿಶ್ವರೂಪವ ತೋರಿದೆ
ದಿನಮಣಿ ಕೋಟಿ ಅಧಿಕ ಕಾಂತಿ ನರಹರಿ
ವನಜ ಸಂಭವನಯ್ಯ ವಿಜಯವಿಠ್ಠಲಾ ೬

ವನಿತೆಯರ ವ್ರತ ಭಂಗವ ಮಾಡಿ
ದಾನವರ ಮೋಹಿಸಿದೆಯೊ ಪವನನೊಡಿಯಾ
ಉನುಮತ ಜನ ಕುಲ ಸನುಮತ ಶಾಸ್ತ್ರವ ವ-
ದನದಲಿ ಮೆದ್ದಿಯೊ ವಿಜಯವಿಠ್ಠಲಾ ೭

ರಜೋತಮ ಗುಣವನು ಭುಂಜಿಸುತ
ಕುಜನರ ವ್ರಜ ಭೂಮಿ ನಿಜವಾಗಿ ವ್ಯಾಪಿಸಿರೆ

ಸುಜನಪಾಲ ನೀನು ವದಗಿ ವಾಜಿಯನೇರಿ
ಭಜನಗೈಸಿದ ವೇಗ ವಿಜಯವಿಠ್ಠಲಾ ೮

ಗೋಕುಲದಲಿ ಅನೇಕ ಲೀಲೆಯ ತೋರಿ
ಬೇಕಾದ ವರ ಪುಂಡರೀಕಗಿತ್ತೆ
ಸಾಕಾರ ಗುಣ ಪೂರ್ಣ ವೇಣುಗೋಪಾಲ ವಿ
ವೇಕವ ಕೊಟ್ಟ ಕಾಯನ್ನ ವಿಜಯವಿಠ್ಠಲಾ ೯

೭೪

ಶರಣು ಶ್ರೀ ವೈಕುಂಠನಾಮಕ ಶರಣು ಶ್ರೀ ಪುರುಷೋತ್ತಮ
ಶರಣೂ ಶ್ರೀಧರ ಗರುಡವಾಹನ ಶರಣು ವೇಂಕಟನಾಯಕ ಪ

ಪರಮಪದ ಗೋವಿಂದ ಮಾಧವ
ಪದುಮಯನಾಭ ಜನಾರ್ದನ
ಧರಣಿಧರ ಕರಿವರದ ವಾಮನ ವೈರಿಹರ ಬಲಿಭಂಜನ ೧

ಜಲಜನೇತ್ರ ಮುಕುಂದ ಮುರಹರ ಜ್ವಲಿತ ಚಕ್ರಗದಾಧರ
ಜಲಧಿಶಯನ ಉಪೇಂದ್ರ ಅಚ್ಯುತ ಶೈಲಧರ ನಾರಾಯಣ ೨

ಆದಿಯೋಗಿ ಮುನೀಂದ್ರ ವಂದಿತ ನಿಖಿಳ ಸುರಗಣ ಸೇವಿತ
ವೇದವೇದ್ಯ ವಿರಿಂಚಿ ಸನ್ನುತ ವಿಜಯವಿಠ್ಠಲ ನಮೋ ನಮೋ ೩

೭೫

ಶ್ರೀಪತಿಯ ನೈವೇದ್ಯ ಕೊಡುವದು
ಧೂಪದಾಂತರ ಭೂಮಿಶೋಧನ
ಆಪದಿಂ ಮಂಡಲವ ಮಾಡುತ ರಂಗವಲಿ ಹಾಕಿ
ಸೂಪ ಅನ್ನವು ಅಗ್ನಿಕೋಣದಿ
ಆ ಪರಮ ಅನ್ನವನು ಈಶಾ
ನ್ಯಾಪೆಯಾಲೇಹಗಳ ನೈರುತದಲಿ ಇಟ್ಟು ತಥಾ ೧

ವಾಯುದಿಶದಲಿ ಉಪಸುಭೋಜ್ಯವು
ವಾಯಸಾನ್ನದ ಮಧ್ಯ ಘೃತಸಂ
ಸ್ತೂಯಮಾನ ನಿವೇದನವು ಈ ಕ್ರಮದಿ ಹೀಂಗಿಟ್ಟು
ಬಾಯಿಯಿಂದಲಿ ದ್ವಾದಶ ಸ್ತುತಿ
ಗಾಯನದಿ ನುಡಿಯುತಲಿ ಈ ಕಡೆ
ಆಯಾ ಅಭಿಮಾನಿಗಳು ದೇವತೆಗಳನು ಚಿಂತಿಸುತ ೨

ಓದನಕ ಅಭಿಮಾನಿ ಶಶಿಪರ
ಮೋದನಕ ಅಭಿಮಾನಿ ಭಾರತಿ
ಆದಿವಾಕರ ಭಕ್ಷ ಕ್ಷೀರಾಬ್ಧೀಜೆ ಸರ್ಪಿಯಲಿ
ಸ್ವಾದುಕ್ಷೀರಕ ವಾಣಿ ಮಂಡಿಗಿ
ಲೀ ದ್ರುಹಿಣನವನೀತ ಪವನಾ
ದಾದಧಿಗೆ ಶಶಿವರುಣ ಸೂಪಕೆ ಗರುಡ ಅಭಿಮಾನಿ ೩

ಶಾಕದಲಿ ಶೇಷಾಮ್ಲ ಗಿರಿಜಾ
ನೇಕನಾಮ್ಲದಿ ರುದ್ರಸಿತದಲಿ
ಪಾಕಶಾಸನ ಶೇಷುಪಸ್ಕರದಲ್ಲಿ ವಾಕ್ಪತಿಯೂ
ಈ ಕಟು ಪದಾರ್ಥದಲಿ ಯಮ ಬಾ
ಹ್ಲೀಕ ತಂತುಭದಲ್ಲಿ ಮನ್ಮಥ
ನೇಕ ವ್ಯಂಜನ ತೈಲ ಪಕ್ವದಿ ಸೌಮ್ಯನಾಮಕನೂ ೪

ಕೂಷುಮಾಂಡದ ಸಂಡಿಗಿಲಿ ಕುಲ
ಮಾಷದಲಿ ದಕ್ಷ ಪ್ರಜಾಪತಿ
ಮಾಷ ಭಕ್ಷದಿ ಬ್ರಹ್ಮಪುತ್ರನು ಲವಣದಲಿ ನಿಋತಿ
ಈ ಸುಫಲ ಷಡ್ರಸದಿ ಪ್ರಾಣ ವಿ
ಶೇಷ ತಾಂಬೂಲದಲಿ ಗಂಗಾ
ಆ ಸುಕರ್ಮಕೆ ಪುಷ್ಕರನು ಅಭಿಮಾನಿ ದೇವತೆಯೂ ೫

ಸಕಲ ಭಕ್ಷ್ಯಗಳಲ್ಲಿ ಉದಕದಿ
ಭುಕು ಪದಾರ್ಥಕೆ ವಿಶ್ವ ಮೂರುತಿ
ಮುಖದಲೀ ನುಡಿ ಅಂತಿಲೀ ಶ್ರೀ ಕೃಷ್ಣ ಮೂರುತಿಯ
ನಖ ಚತು ಪದಾರ್ಥದಲಿ ಆ ಸ
ಮ್ಯಕು ಚತುರವಿಂಶತಿ ಅಭಿಮಾ
ನಿಕರ ಚಿಂತಿಸಿ ಸರ್ಪಿ ಸಹ ಶ್ರೀ ತುಳಸಿಯನು ಹಾಕಿ ೬

ಕ್ಷೀರ ದಧಿ ಕರ್ಪೂರ ಸಾಕ
ಜೀರ ಪನಸ ಕಪಿಥ್ಥ ಪಣ್ಣದ
ಕ್ಷೀರಸಾಲ ದ್ರಾಕ್ಷ ತಾಂಬೂಲದಲಿ ಚಿಂತನೆಯೂ
ಪೂರ ಶಂಖದಿ ಉದಕ ಓಂ ನಮೊ
ನಾರೆಯಣಾ ಅಷ್ಟಾಕ್ಷರವು ತನ
ಮೋರೆ ಮುಚ್ಚಿ ಶತಾಷ್ಟವರ್ತಿಲಿ ಮಂತರಿಸಿ ತೆರೆದೂ ೭

ಸೌರಭೀ ಮಂತ್ರದಲಿ ಪ್ರೇಕ್ಷಿಸಿ
ತೋರಿ ತೀವ್ರದಿ ಮುದ್ರಿ ನಿರ್ವಿಷ
ಮೂರೆರಡು ಮೊದಲಾಗಿ ಶಂಖವು ಅಂತಿಮಾಡಿ ತಥಾ
ಪೂರ್ವ ಆಪೋಶನವು ಹೇಳಿ ಅ
ಪೂರ್ವ ನೈವೇದ್ಯವು ಸಮರ್ಪಿಸಿ
ಸಾರ್ವಭೌಮಗ ಉತ್ತರಾಪೋಶನವು ಹೇಳಿ ತಥಾ ೮

ಪೂಗ ಅರ್ಪಿಸಿದಂತರದಿ ಅತಿ
ಬ್ಯಾಗದಲಿ ಲಕ್ಷ್ಯಾದಿ ನೈವೇ
ದ್ಯಾಗ ಅರ್ಪಿಸಿ ತಾರತಮ್ಯದಿ ಉಳಿದ ದೇವರಿಗೆ
ಸಾಗಿಸೀ ಶ್ರೀ ಹರಿಯ ಸಂಪುಟ
ದಾಗ ನಿಲ್ಲಿಸಿ ವೈಶ್ವದೇವವು
ಸಾಗಿಸೀ ಶ್ರೀ ವಿಜಯವಿಠಲನ ಧೇನಿಸುತ ಮುದದಿ ೯

೭೬

ಶ್ರೀಮದನಂತನೀತಾ ಶ್ರೀಮದನಂತನೀತಾ ।
ಸೀಮರಹಿತಾ ಮಹಿಮನೀತಾ ।
ನಾಮ ನೆನೆಯೆ ಒಲಿದು ನಿಷ್ಕಾಮ ಫಲವ ನೀವಾನೀತ
ಶ್ರೀಮದಾನಂತನೀತನು ಪ

ಆದಿದೈವನೀತಾ ಜೀವಾದಿಗಳಿಗಭಯದಾನೀತಾ ।
ಶ್ರೀಧರಣಿ ದುರ್ಗಾರಮಣನಾದಾತನೊದಾನೀತಾ ।
ವೇದಪಾಲಕನೀತಾ ಸನಕಾದಿಗಳಿಗೆ ಪ್ರೀತಾನೀತಾ ।
ಕ್ರೋಧ ದೈತ್ಯರ ಸದೆದು ನಿತ್ಯ ಸಾಧುಗಳ ಕಾಯಿದನೀತಾ ೧

ಗಜವರದನೀತಾ ಗಂಗಜನ ಮನೋಭೀಷ್ಟನೀತಾ ।
ಗಜ ರಜಕ ಬಿಲ್ಲು ಮಲ್ಲರ ವ್ರಜನನಾಳಿದ ದಿಟ್ಟನೀತಾ ।
ತ್ರಿಜಗ ವಂದಿತಾನೀತಾ ಅಂಗಜನ ಪೆತ್ತ ಪ್ರೇಮನೀತಾ ।
ವಿಜಯಸಾರಥಿ ಈತಾ । ಪಂಕಜ ಬಾಂಧವನ ಭಾಸನೀತಾ ೨

ಕಪಟನಾಟಕನೀತಾ ಕರಡಿ ಕಪಿಗಳನಾಳಿದನೀತಾ ।
ಕಪಿಲಮುನಿಯಾಗಿ ತಾಯಿಗೆ ಉಪದೇಶವ ಪೇಳಿದನೀತಾ ।
ಅಪಾರ ಮಹಿಮನೀತಾ ಅಂದು
ದ್ರುಪದಸುತೆಯ ಕಾಯದನೀತಾ
ಸ್ವಪ್ನ ಸುಷುಪ್ತಿ ಜಾಗ್ರದಾವಸ್ಥೆಗೆ ಗುಪುತವ್ಯಾಪಕ ಗುಣನೀತಾ ೩

ಪರಮ ಪುರುಷನೀತಾ ದಶಶಿರನ ಕುಲವನಳಿದನೀತಾ ।
ಗಿರಿಯಲಿ ಧರಿಸಿ ಲೋಕವ ಪೊರೆವ ವಿಶ್ವಾಧಾರನೀತಾ ।
ಹರನ ವೈರಿಯ ಕೊಂದನೀತಾ । ನಿರುಪಮ ಮೂರುತಿನೀತಾ ।
ಸುರರಿಗೆ ಉಣಿಸಿದನೀತಾ । ತರಳ ಲೀಲೆಯ ತೋರಿದನೀತಾ ೪

ಭೂಮಿಯರಸನೀತಾ ಸಾಲಿಗ್ರಾಮ ನುಂಗಿದನೀತಾ ।
ದಿವಾಕರ ಮುನಿಗೆ ಒಲಿದನೀತಾ । ಶಾಮವರ್ಣ ಕಾಯನೀತಾ ।
ಹೋಮ ನಿತ್ಯ ಜಪತಪಾದಿಗೆ ನೇಮಪ್ರಕಾರ ಚೇಷ್ಟಕನೀತಾ ।
ಸಾಮ ಲೋಲ ವಿಜಯವಿಠ್ಠಲ ತಾಮರಸನಾಭನೀತಾ ೫

೭೭

ಸತ್ಯವತಿಸೂನು ವೇದವ್ಯಾಸ ಲಕುಮಿಶಾ ।
ನಿತ್ಯ ನಿನ್ನ ನೆನೆಸುವ ಭೃತ್ಯರೊಡನೆ ಪೊಂದಿಸು ದೇವ ಪ

ಮೊದಲು ಸರ್ಪ ವಾಸುಕಿ ಇಲ್ಲಿ ಮದನಾರಿಯ ವಲಿಸಿ । ತನ್ನ
ಬದುಕುವಗೋಸುಗ ಉಪಾಯದಲಿ ನಿಂದರೆ ।
ಅದರ ತರುವಾಯ ಸ್ಕಂದ ತ್ರಿದಶ ವೈರಿ ತಾರಕನ್ನ ಸದೆದು ।
ಇಂದ್ರಾದ್ಯರ ಕೂಡ ಮುದದಿಂದ ಸ್ಥಿರವಾಗಿ ಮೆರೆದ ೧

ಷಣ್ಮೊಗನು ಸತತ ತಾನು ಅನ್ನದಾನ ಮಾಡುತ ಹಾ ।
ವನ್ನನಾಗುದಕ್ಕೆ ಪ್ರಸನ್ನ ಮೋದದಲಿ ।
ನಿನ್ನ ಪೊಲಿಸಿಲ್ಲಿಗೆ ಬಾಹಾ । ದೆನ್ನ ಭಕುತಿಗೆ ಮೆಚ್ಚಿ ।
ಮುನ್ನಿನಾಗಮವನ್ನೆ ಹೇಳಿದ ವಾಸುದೇವ ೨

ಕಲಿಯುಗದೊಳಗೆ ವಿಪ್ರಕುಲದಲಿ ಮಾರುತಿ ಎನಿಸಿ ।
ಬಲು ಮಾಯಿಗಳ ಮೋಹನ ಶಾಸ್ತ್ರವಳಿದು ಬದರಿಯ ।
ಬಳಿಗೆ ಬಂದು ಶಿಲಾಪ್ರತಿಮೆಗಳನೆ ಪಡೆದು ತಂದು ।
ಇಲ್ಲಿ ನೆಲೆ ಮಾಡುವ ಸುಜನರಿಗೆ
ಪೊಳೆವಂದದಲಿ ಇಳೆಯೊಳಗೆನಲು ೩

ಅಂದಿನಾರಭ್ಯ ಪಾರ್ವತಿನಂದನ ಕುಕ್ಕೆಪುರದಲ್ಲಿ ।
ನಿಂದು ಸರ್ವರಿಂದ ಪೂಜೆ ಚಂದದಿ ಕೊಳುತಾ ।

ಮಂದ ಕುಷ್ಟರೋಗಗಳ ಹಿಂದುಮಾಡಿ ಓಡಿಸಿ । ಗೋ
ವಿಂದ ನಿನ್ನ ಪಾದ ಧ್ಯಾನದಿಂದ ಲೋಲಾಡುತಲಿರೆ ೪

ಮರುತದೇವ ಸಂಪುಟಾಕಾರವಾದ ನೀನದರೊಳು ।
ಚಾರು ಸಿಲೆ ರೂಪವಾದ ಪಾರಾಶರ ಋಷಿ ।
ಧಾರುಣಿಗೆ ರಹಸ್ಯವ ತೋರಿಕೊಳುತಲಿ ।
ಕುಮಾರಧಾರಿವಾಸವಾದ ಕು । ಮಾರ ಗೊಲಿದ ವಿಜಯವಿಠ್ಠಲಾ ೫

೭೮

ಪ್ರಥಮ ವಚನ

ಸರಸೀರುಹಾಕ್ಷ ಕೃಷ್ಣನ । ಚರಣ ಅರುಣಾರ್ಣವ
ಕಾಂತಿಯಿಂದಿರುವ ।
ಪರಮ ಸುಂದರ ರೇಖೆ ಧ್ವಜ ವಜ್ರಾಂಕುಶ ಶಂಖ ।
ಚಕ್ರ ಪದುಮ ಗದೆ ।
ವರಚಿಹ್ನೆಯಿಂದಿರುವ । ಕಿರಿಗೆಜ್ಜೆಗಳ ಛಾಯ
ಅದರೊಳಗೆ ಬಿದ್ದಿರುವ
ಪರಮಪವಿತ್ರ ತ್ರ್ಯುಬುಗಳ ತೆಗೆದು ।
ನೇತ್ರದೊಳಗೊತ್ತಿ । ಪರಿಮಳವಾದ ಗಂಧಗಳಿಂದ ಅಲಂಕೃತ ।
ಸಿರಿದೇವಿ ವರದೊಡೆಯ ಮೇಲಿದ್ದು । ಕರಕಮಲದಲೊತ್ತುವ ।
ಚರಣ ದರುಶನವೆನಗಾಯಿತು ಇಂದಿನ
ದಿನವೆ ಪರಮ ಪುಣ್ಯೋದಯ ಪ

ವಿತ್ರತರ ಗಂಗೆ ಮೊದಲಾದ ನದಿಗಳು ಜನಿಸಿಹ ಪಾದ ।
ಸರಸೀರುಹ ಸರಸದಿಂ ಕೊಂಡಾಡಿ ।
ವರಬೇಡಿ ಹಾಡಿ ಅದರೊಳು ಬಿದ್ದು
ನೆರಳಿ ಮರಳೀ ಸೌಖ್ಯದಾನಂದ ।
ಶರಧಿಯೊಳು ಮುಣುಗಿ ಮುಣುಗಿ ಏಳುತ ।

ಕರವೆರಡು ಜೋಡಿಸಿ ಪರಿಮಿತಿಯಿಲ್ಲದ
ಸೌಖ್ಯದಾನಂದ ಭಕ್ತಿಭಾವಗಳಿಂದ
ಕರುಣಾಳು ಕೃಷ್ಣ ತ್ವರಿತದಲಿ ತನ್ನ ಸೇವಕ ಜನರೊಳಗೆ ।
ಸೇರಿಪ್ಪ ನಾ ಅರಿಯನು ನಾನೊಂದು ಸ್ತೋತ್ರ ಮಾಡುವದಕ್ಕೆ ।
ವರವ್ರಜ ತರುಣಿಯರು ಏನು ಪುಣ್ಯವ ಮಾಡಿದರೊ ।
ಸರುವದಾ ಹರಿಯನ್ನು ಕಾಣುವರು ಕಂಗಳಲಿ ।
ಪರಿಹಾಸ್ಯ ನುಡಿಯಲ್ಲ । ಪರಮ ಪವಿತ್ರರಿಗೆ ದೊರೆ ।
ಸಿರಿ ವಿಜಯವಿಠ್ಠಲನು । ಕರವಿಡಿದು ಎನ್ನಭೀಷ್ಟವನಿತ್ತು ।
ಪರಿಪಾಲಿಸಬೇಕೆಂದು ಭಕ್ತ ಕೇಳಿದನು ೧

ದ್ವಿತೀಯ ವಚನ

ಜಲಜನಾಭನ ರಥದ ದಡದ ಮೇಲೆ ನಿಲ್ಲಿಸಿ ।
ಜಲದೊಳಗೆ ತಾ ಮುಳುಗಿ ಅಕ್ರೂರ ಕಣ್ಣು ತೆರೆಯೆ ।
ಕಲುಷವರ್ಜಿತನಾದ ಕೃಷ್ಣ ।
ಹಲಧರನ ಸಹ ಮೇಳ ಸಂಭ್ರಮದಿ । ಜಲದೊಳಗೆ ತಾ ಕಂಡು ।
ಕಲಕಲನೆ ಚಿಂತಿಸಿ ಕರುಣಸಾಗರನಾದ ಕೃಷ್ಣಗೆ ।
ನಾ ಪೇಳಿದ ಮಾತು ನಡಿಸಿ ।
ಬಲವಂತದಲಿ ಬಿದ್ದ ಭವರೋಗ ವೈದ್ಯನ ಮಾತೆ ।
ಲಲನಾಮಣಿಗೆ ಏನು ಹೇಳುವೆನು ।
ಸುಲಭವಾಗಿ ಎಮಗೆ ಅಭೀಷ್ಟಪ್ರದವಿದು ।
ಬಾಲಕರು ಸುಲಲಿತಾಂಗೇರು ಸುಂದರರು
ಎಂದೆನುತ ತಂದೆ ನಂದಗೋಪನು ।
ಕೇಳೆ ಮಂದಮತಿ ಏನು ಪೇಳುವೆನು ಎನುತಲಕ್ರೂರ
ಯೋಚಿಸಿ ಮನದಲಿ ಚಿಂತೆಯಗೊಂಡು ।
ಹನುಮೇಶ ವನಜಾಕ್ಷ । ಘನಮಹಿಮ ಎನ್ನ ಮನದ ಚಿಂತೆಯನು
ಹನನವ ಮಾಡಿ ಎನ್ನ ಕೈಪಿಡಿಯಲಾಗದೆ ಈಗ ಎನುತ ।
ಮೇಲೇಳೆ ಸನಕ ಸನಂದನ ಸನತ್ಕುಮಾರ ಸಹ ।

ವನಜ ಸಂಭವ ಜನಕ ವೈಕುಂಠಪತಿ ಕೃಷ್ಣ ।
ಕನಕ ರಥದ ಮೇಲೆ ನಿಂತಿದ್ದು ತಾ ಕಂಡು ।
ಕರವೆರಡು ಜೋಡಿಸಿ । ಭರದಿ ಭಕ್ತಿಯಗೊಂಡು ।
ನರಜನ್ಮ ಹುಳು ನಿನ್ನ ಮಹಿಮೆಗಳ ಅರಿಯದೆ ।
ಜಲದೊಳಗೆ ನೀ ಬಿದ್ದಿ ಎನುತಲೀ ಯೋಚಿಸಿದೆ ।
ಪರಮಗುಣ ಪರಿಪೂರ್ಣ ಪತಿತಪಾವನ ಎನ್ನ ।
ಚರಣದ ಮಹಿಮೆಗಳ ।
ಅರಿಯಳು ಸಿರಿದೇವಿ ನರರೊಳಗೆ ಬಲುಹೀನ
ನಾ ನಿನ್ನ ಮಹಿಮೆಗಳ
ಅರಿತು ಪೇಳುವದಕ್ಕೆ ಅರಹ । ನಲ್ಲವೊ ಕೃಷ್ಣ
ಮರಣದಲಿ ಅಜಮಿಳಗೆ
ವಲಿದಿಯಂತೆ ನೀ ಎನಗೆ ತ್ವರಿತದಲಿ ಜ್ಞಾನವನು
ದಯಮಾಡ ಬೇಕೈ ।
ಗಜರಾಜ ಅರ್ಭಕ ಧ್ರುವರಾಯ ನಿಜಜ್ಞಾನಿ
ಪ್ರಹ್ಲಾದ ನಿಜಮುನಿ ಶುಕಾಚಾರ್ಯರಂತೆ ।
ಭಜಿಸುವ ನಾನಲ್ಲ । ಅಜಜನಕ ಅಪ್ರಾಕೃತ
ಅಕಲಂಕ ಚರಿತ ಅಮರೇಂದ್ರ ವಂದಿತ ।
ಭುಜಗಶಯನ ಭೂಸುರವಂದ್ಯ ಭುವನತ್ರಯ
ಪಾಲಾ ವಿಜಯನ ರಥವನ್ನು ಸಾರಥಿಯಾಗಿ
ವಿಜಯ ಪಾರ್ಥರಿಗಿತ್ತು ಪರಿಪಾಲಿಪಾ
ದಯಾಸಮುದ್ರ ವಿಜಯವಿಠ್ಠಲನೇ ೨

ತೃತೀಯ ವಚನ

ಅರವಿಂದನಾಭ ಕೃಷ್ಣ ಅಖಿಲಜನ ಪರಿಪಾಲ । ಕೃಪಾ ಸಮುದ್ರ ।
ಶರದಿಂದು ನಿಭವಕ್ತ್ರ ರಾಜೀವದಳ ನೇತ್ರ ಲಕ್ಷ್ಮೀ ಕಳತ್ರ ।
ಪರಿಪಾಲಿಸಬೇಕೆನ್ನ । ಪಾವನ ಚರಿತ್ರ ।
ಸುರಪತಿಗೆ ಅಸುರರ ಬಲನೀಗಿ ಆ । ವಿರಂಚಿ ಬಳಿಗೆ ।
ಶರಣೆಂದು ವರವೊಂದು ಕೇಳಿದೆ ವೈಕುಂಠಪತಿ ಕೃಷ್ಣ ।

ತರಳನಾಗವತರಿಸಿ । ಸರ್ವಜನ ಕಂಟಕ ಕಂಸಾದಿಗಳ ಗೆಲಿದು ।
ಹರುಷದಿಂದೆನಗೆ ದರುಶನವ ಕೊಟ್ಟ । ಪರಮಾತ್ಮ ನಿನ್ನ ಪಾದ ।
ಸರಸಿಜದೊಳು ಚಿತ್ತವಿರುವಂದದಲಿ ।
ಪರಮ ದಯಾಕರ ನಿನ್ನ ಮಹಾ ಮಹಿಮೆಗಳ ।
ಅರಿತವರಿಲ್ಲವೊ ಈ ಭುವನತ್ರಯದೊಳಗೆ
ಗರ್ವಿಷ್ಠನಾಗಿ ಮಲಗಿದವನಲ್ಲಿ ।
ಕರಿರಾಜವರದ ಕಾಮಿತ ಫಲಪ್ರದ
ತರಳತನವನು ಬಿಟ್ಟು ವೈಕುಂಠದೊಳಗೆ
ಮೆರೆದ ಸಂದರುಶನ । ಭರದಿ ಭಕ್ತಿಭಾವದಲಿ
ಕೇಳ್ವ । ತ್ವರಿತದಲಿ ದಯಮಾಡಿ ।
ಭರದಿ ಪಾಲಿಸಬೇಕೆನ್ನ । ಭಕ್ತಜನ ವತ್ಸಲನೆ ಎನಲಾ ಮಾತಿಗೆ ।
ಮನುಮಥಜನಕ ಇನ । ಚಂದ್ರ ನೇತ್ರ ಇಂದಿರೆ ಅರಸ ।
ಹನುಮೇಶ ಕನಕಮಯವಾದ ಪೀತಾಂಬರ । ಜನಿವಾರ ।
ಅನೇಕ ಅತರಿಗಳ ಗೆಲಿವ ಕನಕಮಯ । ಕಿರೀಟ ಚತುರ್ಭುಜ ।
ವನಮಾಲೆ ಹಾಟಕದ । ಕಟಕ ರತ್ನಮಯದುಂ । ಗುರ
ಪನ್ನಗಶಯ್ಯ ಉನ್ನತೋನ್ನತ ಮಹಿಮ
ಕನಕಾಂಗಿ ಯಶೋದೆಗೆ । ತೋರಿದ ವಿಶ್ವರೂಪಪ್ರದ
ಅನಿಮಿಷರ ಅರಸ ಅಹಿವೈರಿ ವಾಹನ
ಅಚ್ಯುತ ಆನಂದ । ಗಿರಿ ನಿಲಯ ।
ಘನಘನ ಶಾರಂಙ್ಗಪಾಣಿ ವಿಜಯವಿಠ್ಠಲರೇಯ ತೋರಿದನು
ತನ್ನ ಚರಣ ಸೇವಕನಾದ ಮುಚಕುಂದ
ಚಕ್ರವರ್ತಿಗೆ ತನ್ನ ನಿಜರೂಪವ ೩

ಚತುರ್ಥ ವಚನ

ಆನಂದತೀರ್ಥ ಮುನಿವಂದ್ಯ । ಜ್ಞಾನಿಗಳ ವಲ್ಲಭ ।
ದೀನಜನ ಮಂದಾರ ನಾ । ನಿನ್ನ ಮೊರೆಹೊಕ್ಕು ಧೇನಿಸಲರಿಯೆ ।
ಆನೆಯನು ಆದರದಿ ಕಾಯ್ದ ಶ್ರೀನಿವಾಸ ।

ಸಾನುರಾಗದಿ ಪ್ರಹ್ಲಾದಗೊಲಿದ ಶ್ರೀನಿಧಿ ನರಸಿಂಹ ।
ಅನಾದಿ ಕಾಲದಿ ತಂದೆ ಬಂಧು ಬಳಗವು ಎಂದೆ ।
ಮಾನಿನಿ ದ್ರೌಪದಿ ಮೊರೆ ಇಟ್ಟಾಗ ಧ್ವನಿ ಕೇಳಿ ।
ಮಾನಿನಿ ಮಣಿ ಲಕುಮಿಗ್ಹೇಳದೆ ।
ಆನಂದಮಯನು ಅಕ್ಷಯವಿತ್ತು ಆಗ ಪರಿಪಾಲಿಸಿದಿ ಅದರಂತೆ ।
ಮಾನಹೀನನೆಂದು ನಿರಾಕರಿಸದೆ । ಧ್ಯಾನಕ್ಕೆ ಒಳಗಾಗಿ ।
ಮೌನಿಜನರನು ಕಾವ ಕ್ಷೋಣೀಶ ಮಾಣಿಕ್ಯ ಮಕುಟ ಕುಂಡಲಧರ ।
ಅಣಿ ಮುತ್ತಿನ ಹಾರ ವನಮಾಲಿ ಸಿರಿ ತುಳಸಿ ।
ಪರಿಮಳ ಸಿರಿಗಂಧ ಉದರದಲಿ ಬೆಳಗುವ ।
ಉಪೇಂದ್ರ ನಾಮ ಕೃಷ್ಣ ಉರಗೇಶಶಯನಾ ।
ನಿನ್ನ ದಾಸರದಾಸನೆಂದೆನುತ । ಕಾಣಿಸಿ ನಿನ್ನ ನಿಜರೂಪ ।
ಎನ್ನ ಹೃದಯ ಪದಕದೊಳಗಿಟ್ಟು ಸಾನುರಾಗದಿ
ನಿನ್ನ ಸ್ತೋತ್ರ ಮಾಡುವ ಭಕ್ತಗಣದೊಳಗೆ ನಿಲ್ಲಿಸೊ ।
ನಿನ್ನ ಮತ್ತೊಂದು ಪದಾರ್ಥ ಕೇಳುವವನಲ್ಲ ।
ತೀರ್ಥ ತೀರ್ಥಗಳಲ್ಲಿ ಮುಳುಗಿ ಬಂದವನಲ್ಲ ।
ಸಾರ್ಥಕವಾದಂಥ ಕೃತ್ಯ ಮಾಡುವನಲ್ಲ ।
ಸಾಧುಜನಸಂಗದಲಿ ಸೇರಿ ಪಾಡಿದವನಲ್ಲ ।
ಈ ನುಡಿ ಸತ್ಯವೇ ಲೇಸು ಪುಸಿಯಲ್ಲ । ಮಲ್ಲಮಲ್ಲರ ಗೆಲಿದ
ಮಾಧವನು ನೀನಲ್ಲದೆ ಇನ್ನೊಂದು ದೈವವಿಲ್ಲದ ಮಧ್ವ
ಮುನಿ ಹೃದಯಾಟ್ಟ ಪೀಠದೊಳು ವಾಸ ಮಾಡುವ ದೊರೆ
ಉದ್ಧರಿಸಬೇಕೆನ್ನ ವಿಜಯವಿಠ್ಠಲನೆ ೪

ಐದನೇ ವಚನ

ಹರಿ ನಿನ್ನ ಚರಣ ಸೇವಕರ ಸೇವಕನೆನುತ ।
ಕರಿಯಬೇಕೆನ್ನ ಹಿರಿಯರೂ ।
ಮರಣಕಾಲಕ್ಕೆನಗೆ ಮತ್ತೋರ್ವ ವಿಷಯದಲಿ
ಇಡಲಾಗದ ಮನಸು ಸರ್ವದಾ ನಿನ್ನ ।

ಚರಣಾರವಿಂದ ದ್ವಂದ್ವದಲಿ । ಭರದಿಂದ ಮುದ್ರೆಯನಿಟ್ಟ ।
ಕಾಗದದಂತೆ ಹತ್ತಿರಿರಬೇಕೆನುತ ತುತಿ ಮಾಡುವೆ ನಿನ್ನ ।
ಅರವಿಂದ ಗೋವಿಂದ ಮುಕುಂದ
ಮುಚಕುಂದ ವರದ ನಿತ್ಯಾನಂದ ವಿಗ್ರಹ ।
ಸರಸಿರುಹಾಕ್ಷ ಸಜ್ಜನ ಪರಿಪಾಲಾ ।
ಅರವಿಂದಾಸನನಯ್ಯ ಅಮರೇಂದ್ರ
ಪೂಜ್ಯ ಅವಗುಣ ವರ್ಜ ಅಕಳಂತ ।
ಚರಿತ ಆದಿಪುರುಷ ಮಧ್ಯಾಂತರಹಿತ
ಮಹಾನುಭಾವ ಮಧ್ವೇಶ ।
ಕರಿರಾಜ ಪರಿಪಾಲ ಕಂಸಮರ್ದನ ಕೃಷ್ಣ
ಕರುಣಾಳು ನೀನಲ್ಲದಿನ್ನೋರ್ವ ದೊರೆಯಿಲ್ಲ ।
ಈ ನುಡಿಯು ಪುಸಿಯಲ್ಲ ।
ಭರದಿಂದ ನೀ ಪರಿಪಾಲಿಸಬೇಕಲ್ಲದೆ ಕರ
ಪಿಡಿದು ಕಾಯ್ವರನ ಕಾಣೆ
ನಿನ್ನಾಣೆ ಹೇ ಚಕ್ರಪಾಣಿ । ನಾ ನಿನ್ನ
ಚರಣಾವಿಂದವನು ಭಜಿಪ ವೀಣೆ । ಈ
ಕ್ಷೋಣಿಯೊಳಗೆನ್ನ ನರಜನ್ಮವು ಬಾರದೆ ಪರಿಪಾಲಿಸಬೇಕೆನ್ನ ।
ಪರಮ ಪವಿತ್ರ ಪಂಕೇರುಹನೇತ್ರ ಸಂಕಟಗಳ ಕಳೆದು ।
ಸೌಖ್ಯಪದ ವೈಕುಂಠದೊಳಗೆನ್ನ ನಿಲ್ಲಿಸೊ ।
ಭರದಿಂದ ನಿನ್ನ ನಾಮದ ಭಂಡಾರ ಕದ್ದ ಕಳ್ಳನೆನೆಸಿ ।
ಚರಣದ್ವಯಗಳಿಗೆ ಭಕ್ತಿಸಂಕುಲ ಹಾಕಿ
ಅರವಿಂದನಾಭ ನಿನ್ನ ಅಮರನೇ ವೈಕುಂಠ ।
ಕಾರಾಗೃಹದೊಳಗೆ ವಾಸ ಮಾಡಿಸು ದೇವ ಕೋಟಿ ।
ವರುಷಕೆ ಇದುವೆ ಎನಗೆ ಹರುಷ ಆನಂದಮಯ ।
ವರವ ಕೊಡುವದಕ್ಕರಹ ಪುರುಷ ನೀನಲ್ಲದೆ
ಇನ್ನೋರ್ವನಿಲ್ಲ ವಿಜಯವಿಠ್ಠಲನೇ ೫

೭೯

ಸಲಹೊ ಸಾತ್ವಿಕ ದೈವವೆ ಕಾಗಿನೆಲೆಯಾದಿ ಕೇಶವ
ನೀಲದ ವರ್ಣ ಆದಿಕೇಶವಾ ಪ

ಕನಕ ಕಾಮಿನಿ ಕುಂಭಿಣಿಯಿಂದ ಬರುವ ಚಿಂತೆ ।
ಕನಸಿನೊಳಗಾದರೂ ದೂರಾಗಲಿ ।
ಕನಕೋದರಗೆ ಸಾಮ್ಯವಾದ ಜೀವನದಲ್ಲಿ ।
ಕನಲದೆ ಭಕುತಿ ಇರಲಿ ಎಂದೆಂದಿಗೆ ।
ಮನವು ನಿನ್ನಾಧೀನ ದೇವರದೇವ ೧

ಕನಕ ನಯನ ಮಯನ ಕಂಡವರಿಗೆ ಜ್ಞಾನ ।
ಕನಕವರುಷವ ಕರೆವ ವಾಸುದೇವಾ ।
ಕನಕಕೇಶಪ್ರಿಯ ಕಾಮಿತಫಲದಾಯಕ ।
ಕನಕ ಪರ್ವತದಿಂದ ಬಂದ ಗೋವಿಂದ ವ ।
ಚನವೇ ನಿನ್ನಾಧೀನವೋ ದೇವರ ದೇವ ೨

ಕನಕ ಮಾಲಿಗೆ ಒಲಿದ ಕಮಲದ ಲೋಚನ ।
ಕನಕಾಂಬರಧರಾನಂದ ಮೂರ್ತಿ ।
ಕನಕಕಾಯ ನಮ್ಮ ವಿಜಯವಿಠ್ಠಲರೇಯ ।
ಕನಕರಿಸುವಾಗ ನಿನ್ನ ಧ್ಯಾನವೆ ಕೊಡು ।
ತಮವೆ ನಿನ್ನಾಧೀನವೊ ದೇವರದೇವ ೩

೮೦

ಸುರನದಿ ಪೆತ್ತವನೆ ನಿನಗೆ ಮಜ್ಜನವೆ ।
ಪಾಲಾರಮನೆಮಳುವನೇ ನಿನಗೀ ಕ್ಷೀರಾಭಿಷೇಕವೇ ?
ಸರಸಿಜಕುಸುಮ ಗಂಧಾ ಪರಿಮಳದಿಂದ
ಮೊಡೆದಾ ದೈವವೇ । ಅವರೆ

ಯೊಳಗಿನ ಕುಸುಮ ನಿನಗೆ ಮೆಚ್ಚೆ ।
ಎರಡು ಕಂಗಾಳಿಂದ ಲೋಕ ಬೆಳಗಿಸುವವನ
ವಿರಚೇ ಶಿವ ದೀಪದಿಂವೆಗ್ಗಳವೇನೊ ನಿನಗೆ । ೧

ಕರದೊಳಗೆ ಮುನಿಗೆ ರಸಾಯನವುಳ್ಳ ಶ್ರೀ ತೋರಿ
ಶಿರವನೆ ತರಿಸಿ ತೊಲಗಿದ ಪದಾರ್ಥದಿಂದೇನಯ್ಯಾ । ಹಂಸ ಕು
ಬೇರ ನಿನ್ನವರಾಗಿದೆ । ಬರಿದೆಯಲಾ ಯೆನ್ನ ಸುವರ್ಣ ಪುಷ್ಪವೆ ।
ಪರಿಪರಿಗಾಯನ ನಾರದಾದ್ಯರು ಪಾಡೆ
ಪೊಗಳಬಲ್ಲನೆ ನಿನ್ನನಗಣಿತ ಸ್ತೋ
ತ್ರಗಳಿಂದಯೀ ಹೇಳಿಕೆಯೇನೋ ।
ಸುಗುಣ ಸುಹಸವಲ್ಲ ವಿಜಯವಿಠ್ಠಲದೊರೆಯೆ ।
ನಿನಗೆರಗಿ ಕೈಮುಗಿವೆನೊ ತರಳತನದಲ್ಲಿ ನಾನು ೨

೮೧

ಸೇತು ಮಾಧವರಾಯನಿಗೆ । ನೀನೆ । ಪ್ರೀತಿಯಾದವಾ ।
ಭೂತಳದೊಳಗತಿ ಖ್ಯಾತಿ ಮಾರುತಿ ದೇವಾ ಪ

ಪಾತಕಹರ ಪಾವನ ನಾಮ ಶ್ವೇತ ಶರೀರ ।
ಭೂತನಾಥನ ಪ್ರಿಯಾ ಭುಜಗಾಧಿಪಶಯ್ಯಾ ।
ಮಾತು ಮಾತಿಗೆ ನಗುತ ನೋಡುವ ದೇವ ೧

ಭಕುತಿಕೊಡು ಬೇಗ ಎನಗೆ ಶ್ರೀ ಲಕುಮಿಪತಿ ಈಗ ।
ಅಕಳಂಕ ಚರಿತ ಅತ್ಯದ್ಭುತ ಮುಖ
ವಿಕಸಿತ ಮಹಾಕೃತು ಮಹಿಮಾ ೨

ಆದಿದೈವನೆ ಸಕಲ ಜೀವಾದಿ ಭೇದವೆ ।
ಯಾದವ ಕುಲಮಣಿಯಾದ ಅಣೋರಣಿ ।
ಮಾಧವ ವಿಜಯವಿಠ್ಠಲ ರಘುರಾಮಾ ೩

೮೨

ಹರಿ ಎಂಬ ನಾಮ ಎರಡಕ್ಷರವ
ಸ್ಮರಿಸುವಾಲೋಚನಿಗೆ ದುರಿತ ಕಾನನ ಛೇದ ಪ

ವೇದರಾಶೀ ಎಂಬ ಭೂಸುರನು ಯಮಪುರದ
ಹಾದಿಯಲಿ ಪೋಗುತಿರೆ ಎಡಬಲದಲಿ
ಬಾಧೆ ಬಡುವ ಪಾಪಿ ಜೀವರಾಶಿಯ ನೋಡಿ
ಮಾಧವಾ ಹರಿ ಎನಲು ಮುಕ್ತರಾದರು ಎಲ್ಲಾ ೧

ಮತ್ತೆ ಪುಷ್ಕರನೆಂಬ ಹರಿಭಕ್ತ ಬರಲಾಗಿ
ಮೃತ್ಯು ನಡುಗೀ ನಿಂದು ಪೂಜೆ ಮಾಡೀ
ಉತ್ತಮಗೆ ಅಲ್ಲಿದ್ದ ನರಕಗಳು ತೋರಿಸೆ
ಬತ್ತಿ ಪೋದವು ಹರಿ ಎಂಬ ಶಬ್ದವ ಕೇಳಿ ೨

ಕೀರ್ತಿ ಮಾನವನೆಂಬೊ ಭೂಪಾಲ ಯಮಪುರದ
ಆರ್ತಿಯನು ಕಳೆದ ಶ್ರೀಹರಿಯ ವೊಲಿಸೀ
ವಾರ್ತೆಯನು ಕೇಳಿ ಅಂತಕ ಬಂದು ಕಾದೆ ಸ
ಮರ್ಥನಾಗದೆ ಪೋದ ಏನೆಂಬೆ ಜಗದೊಳಗೆ ೩

ಹದಿನಾರು ಸಾವಿರ ತರುಣಿಯರು ಅಸುರನ್ನ
ಸದನದಲಿ ಸೆರೆಬಿದ್ದು ಹರಿಯ ತುತಿಸೇ
ಮುದದಿಂದ ಹರಿಪೋಗಿ ಖಳನ ಕೊಂದು ಆ
ಸುದತಿಯರಿಗೆ ತನ್ನ ಅಂಗಸಂಗವನಿತ್ತ ೪

ಕಂಡವರ ಮನೆ ಉಂಡು ಚಾಂಡಾಲರ ಕೂಡ
ಮಂಡಲದೊಳಗೆ ಪಾತಕನಾದರೂ
ಗಂಡುಗಲಿ ವಿಜಯವಿಠ್ಠಲ ಹರೆ ಹರೇ ಎಂದು
ಕೊಂಡಾಡಿದರೆ ಮುಕುತಿ ಸುರರಿಗಿಂತಲೂ ವೇಗ ೫

೮೩

ಹರಿ ಪರದೈವ ಚತುರ್ದಶ ಲೋಕಕೆ ।
ಉರಗನ ಮುಂಡಿಕೆ ತುಳುಕಿ ಪೇಳುವೆ ನಾನು ಪ

ಮುನಿಗಳೆಲ್ಲ ನೆರೆದು ಸದ್ವರವ ಮಾಡುತಲಿ ।
ಮನ ಬಂದ ಹಾಗೆ ಅರ್ಪಿಸುತಿರಲು ।
ಮುನಿ ನಾರದನು ಕೇಳೆ ಭೃಗು ಮುನಿಯನು ಕಳುಹಿ ।
ವನಜನಾಭನೆ ದೈವವೆಂದು ನಿರ್ಣೈಸಿದರು ೧

ದುರ್ವಾಸ ಮುನಿಪಗೆ ಚಕ್ರ ಎಡೆಗೊಂಡಿರಲು ।
ಉರ್ವಿಯನು ತಿರುಗಿದನು ಅಜ ಗಿರೀಶಾ ॥
ಗೀರ್ವಾಣರಾದ್ಯರು ಪರಿಹರಿಲಾರದಿರೆ ।
ಸರ್ವೋತ್ತಮನೆ ಒಬ್ಬ ಹರಿಯೆಂದು ಸಾರಿದರು ೨

ಜೀವನದೊಳಗೆ ಕರಿ ಬಾಧೆಯನು ಬಡುತಲಿ ।
ಕಾವವಾತನೆ ದೈವ ಎಂದು ಕೂಗೆ ॥
ನಾವು ತಾವು ಎಂದು ಎಲ್ಲರು ಸುಮ್ಮನಿರೆ ।
ತಾವ ಕಾಕ್ಷನೆ ಕಾಯ್ದಾ ಪರದೇವತೆ ಎಂದು ೩

ಹಯಮುಖನು ವೇದಗಳು ಕದ್ದೊಯೆ ಸಕಲರು ।
ಭಯಬಿದ್ದು ನಿತ್ರಾಣರಾಗಿರಲು ॥
ಜಯದೇವಿ ರಮಣನು ವೇದವನು ತಂದು ಜಗ ।
ತ್ರಯಕೆ ಒಡೆಯನೆನೆಸಿಕೊಂಡ ಪರನೆಂದು ೪

ಮೊದಲು ನಿರ್ಣಯವಾಗಿ ಇರಲಿಕ್ಕೆ ಮಂದಮತಿ ।
ಮದಡ ಮನುಜರೆಲ್ಲ ನೆಲೆಗಾಣದೆ ॥
ಮದನ ಪಿತ ವಿಜಯವಿಠ್ಠಲನ ಒಲಿಸಿಕೊಳ್ಳದೆ ।
ಮದ ಗರ್ವದಲಿ ನುಡಿದು ನರಕದಲ್ಲಿ ಬೀಳುವರೂ ೫

೮೪

ಹರಿಯೆ ದುರಿತ ಗಜಕೇಸರಿಯೆ ತ್ರಿಲೋಕದ
ದೊರೆಯೆ ನಿನಗಾರು ಸರಿಯೆ ಭಾಗ್ಯದ ಸಿರಿಯೆ ।
ಕರುಣವ ಮಾಡಿ ಪರಿಯಲಿ ಸಾರಂಗ ।
ಧರನೆ ಧರಣಿಧರ ವರ ಪರಿಯಂತಾ ಪ

ಭೂಮಿಯೊಳಗೆ ಉತ್ತಮ ನೆಲಾ ನೀಡೆಂದು ।
ಹೇಮ ಮುನೀಶ್ವರ ಕಾಮಿಸಿ ಹರಿಪಾದ ।
ತಾಮರಸ ಹೃದಯಧಾಮದೊಳಗೆ
ನೀ ನೇಮ ನಿತ್ಯದಲ್ಲಿ । ತಾ ಮನೋರಥನಾಗಿ ॥
ಸಾಮಜವರದನ ನಾಮವ ನೆನೆಯಲು ।
ಸೋಮ ಸಹೋದರೆ ಹೇಮ ತೀರಥದೊಳು ।
ತಾ ಮನಗೊಂಬ ನಾಮನೆ ಪಡೆದು ೧

ಮಂಗಳಾಂಗಿಯೇ ಬರಲು ರಂಗರಾಯನು ಸಾ ।
ರಂಗ ಶರವೇ ಪಿಡಿದು ಶೃಂಗಾರ ಮಯದಿಂದ । ಬಂಗಾರ ರಥ ತು ।
ರಂಗಗಳ ಸಮೇತ ಭುಜಂಗಶಯನನಾಗಿ ಕಂಗೊಳಿಸುತ್ತಲೂ ।
ತಿಂಗಳ ನಂದಾದಿ ಕಂಗಳಿಗೊಪ್ಪಲು ।
ತುಂಗ ಮಹಿಮ ವಿಹಂಗಾದಿಗಳಿಂದ
ಹಿಂಗದಲೆ ಸೊಗಸಂಗಳ
ಕೈಕೊಳ್ಳುತ್ತಿಂಗಿತದಲಿ ನೀಲಾಂಗ ನಿರ್ದೋಷಾ ೨

ಜಯ ಕುಂಭಘೋಣನಿಲಯಾನೆನೆಸುವ ಉ ।
ಭಯ ಕಾವೇರಿ ನಿವಾಸಾ । ಭಯ ಕೃದ್ಭಯನಾಶ ।
ದಯಾಪಯೋನಿಧಿ ಸಾದಯ ವಿಮಲ ನಯನ ।
ತ್ರಯ ಗುಣವಿರಹಿತಾ ವಿಯದ್ಗಂಗಾನದಿ ತಾತಾ ।
ಪಯೋನಿಧಿಸುತೆ ಧರುಣಿಯ ಎಡಬಲದಲ್ಲಿ
ಜಯ ಜಯವೆನುತಿರೆ ಪ್ರಿಯನಾಗಿ ಕೇಳುತಾ ।
ನಯನ ಮೀತಾರ ಪಾಲಯಪಾವನದೇವಾ ।
ದಯಮುಖ ಹರಾ ವಿಜಯವಿಠ್ಠಲಪರಾ ೩

೮೫

ಹರಿಯೆ ಸ್ವತಂತ್ರ ಚತುರದಶ ಭುವನಕೆ ।
ಪರಮೇಷ್ಠಿ ಶಿವಾದ್ಯರಾತಗೆ ದಾಸರೆನ್ನು ಪ

ಹರಿಹರರ ಒಂದೇ ಸ್ಥಾನದಲಿ ಕಾಣುವೆನೆಂದು ।
ಪರಮ ಭಕುತಿಯಿಂದ ಕ್ರೋಧಮುನಿಪ ॥
ಧರಣಿಯೆಲ್ಲ ತಿರುಗಿ ಶುಕ್ಲವತೀ ತೀರಕೆ ಬರಲು ।
ವಸಂತ ಕಾಲದಂತೆ ಪೊಳಿಯೇ ೧

ತಪಸಿ ತಪವನೆ ಮಾಡುತಿರಲು ಖರಾಟಖಳ ।
ಉಪಹತಿ ಕೊಡುತಿಪ್ಪ ವರಬಲದಿ ॥
ವಿಪುಳದೊಳಗಿವಗೆಲ್ಲಿ ಎದುರಾರು ಇಲ್ಲದಿರೆ ।
ಸುಪರ್ಣಾದಿ ಮೊರೆ ಇಡಲು ಬೊಮ್ಮಗೆ ೨

ತಲೆದೂಗಿ ಪರಮೇಷ್ಠಿ ಹರಿಯ ಬಳಿಗೆ ಬಂದು ।
ಖಳನ ಕೋಲಾಹಲವ ಬಿನ್ನೈಸಲು ॥
ಪುಲಿತೊಗಲಾಂಬರನ ಸಹಿತ ಸರ್ವೋತ್ತಮನ ।
ಒಲಿಮೆಯಿಂದ ಬಂದು ಸುಳಿದರಾಗಂದು ೩

ದಾನವನ ಕೊಂದು ದೇವತೆಗಳ ಸುಖಬಡಿಸಿ ।
ಜ್ಞಾನಕ್ರೋಢಮುನಿ ಮನಕೆ ಪೊಳೆದು ॥
ಆನಂದದಿಂದಲಿ ನಿಂದು ಮೆರೆದ ಲೀಲೆ ।
ಏನೆಂಬೆನಯ್ಯ ಹರಿಹರ ವಿಚಿತ್ರಾ ೪

ಶಿವನ ಸಾಲಿಗ್ರಾಮದೊಳಗೆ ಪ್ರವಿಷ್ಠ ಕೇ।
ಶವನು ತಾನೆ ಕಾಣೊ ಸ್ವಾತಂತ್ರನು ॥
ಇವರು ಶಂಕರನಾರಾಯಣನೆಂಬೊ ಪೆಸರಿನಲಿ ।
ಅವನಿಯೊಳು ಪ್ರಖ್ಯಾತರಾಗಿ ನಿಂದಿಹರೋ ೫

ಹೀನ ಮಾನವರು ಇವರಿಗೆ
ಐಕ್ಯ ಪೇಳುವರು ಕಾಣುತಲಿದೆ

ಎರಡು ಮೂರುತಿಗಳು ನೋಳ್ಪರಿಗೆ ।
ಶ್ರೀ ನಾರಾಯಣಗೆ ಈಶ ಸಮನೇ ೬

ಚಕ್ರ ಶಂಖ ಗದೆ ಪದುಮ ಹರಿಗೆ ನೋಡು ।
ಮುಕ್ಕಣ್ಣಗೆ ಡಮರುಗ ತ್ರಿಶೂಲವು ॥
ಮುಖ್ಯ ದೇವತಿ ಹರಿ ಅವಾಂತರ ಶಿವನು ।
ಶಕ್ರಾದ್ಯರೊಲಿದು ಭೇದವನು ಪೇಳುವರು ೭

ಸತ್ಯಂ ವದವೆಂಬ ಶ್ರುತಿವರದು ಪೇಳುತಿದೆ ।
ಭೃತ್ಯ ರುದ್ರನು ಕಾಣೊ ಲಕುಮಿವರಗೆ ॥
ಸತ್ಯದಲಿ ಸಿದ್ಧವಯ್ಯ ಎಂದು ತಿಳಿದು ।
ಸ್ತೋತ್ರ ಮಾಡಿದವಗೆ ವೈಕುಂಠ ಪದವಿ ೮

ಕ್ರೋಢ ಪರ್ವತವಿದೆ ತೀರ್ಥ ಪಾವನಕರ ।
ನಾಡೊಳಗೆ ಕ್ಷೇತ್ರ ಉತ್ತಮ ಮಾನವಾ ॥
ಪಾಡಿದರೆ ವಿಜಯವಿಠ್ಠಲರೇಯ ಒಲಿದು ।
ಕೂಡಾಡುವನು ದೃಢ ಭಕುತಿಯಿತ್ತು ಅನುದಿನಾ ೯

೮೬

ಹರಿಹರ ಸಲಹಯ್ಯಾ ಪರಮ
ಕರುಣವ ಮಾಡಿ ಶರಣು ಹೋ ।
ಶರಣು ಹೋಗುವೆ ನಿಮ್ಮ ಚರಣ ಕಮಲಕೆ ।
ಎರವು ಮಾಡಿದೆ ನಿರುತಾ ಪ

ಮೂರು ನಗರ ದಹನಾ । ತಾರಕ್ಷ ವಾಹನಾ ।
ತರುಣ ಚರ್ಮಾಂಬರ ಪೀತಾಂಬರಧರ ಶ್ರೀ ಸತಿರಮಣಾ ।
ಚಾರು ಚಂದ್ರಮೌಳಿ । ಶೌರಿ ಕೌಸ್ತುಭಮಾಲಾ ।
ಮಾರಜನಕ ಕು । ಮಾರನಪಿತ ಗಂಗಾಧರ ಧರ ಧರ ೧

ಶೂಲ ಡಮರುಗ ಹಸ್ತ । ಮೂಲೋಕ ಮೀರಿದವಸ್ತಾ ।
ಕೈಲಾಸವಾಸ ವೈಕುಂಠ ಪುರಾಧೀಶ ಕಾಲಾ ಕಾಲ ನಿಯಾಮಕ ।
ತ್ರಿಲೋಚನ ಕಮಲಾಕ್ಷಾ । ನೀಲಕಂಧರ ನಿತ್ಯ ।
ಪಾಲಸಾಗರಶಾಯಿ ನಂದಿಗಮನ ಕಾ । ಪಾಲಿ ಅಭಯ ಪಾಣಿ ೨

ಭಸಿತ ಭೂಷಿತ ರುದ್ರ । ಎಸವ ಗುಣ ಸಮುದ್ರ
ವಿಷಧರ ಭೂಷಣ ಕಸ್ತೂರಿ ತಿಲಕ ರಂ ।
ಜಿಸುವ ಜಡೆಮುಕುಟ । ಪಶುಪತಿ ಪಿನಾಕಿ ।
ಅಸುರಾರಾತಿ ವಿವೇಕಿ ।
ಅಸಮ ಸುದರುಶನ ರುಂಡಮಾಲಾಧೀಶ ಪಾಲ ಗೋಪಾಲ ೩

ಭೂತ ಪ್ರಮಥರೊಡೆಯಾ । ಭೂತೇಶಾದಿಗಳೊಡೆಯಾ ।
ಶ್ವೇತ ಶರೀರ ನೀಲ । ಗಾತುರ ಸದ್ಯೋಜಾತಾ ಜಾತರಹಿತಾ ।
ಜ್ಯೋತಿರ್ಮಯರೂಪಾ । ಭೀತಿ ಶೂನ್ಯ ಪ್ರತಾಪಾ ।
ಆತುಮ ಅಂತರಾತುಮ ಪರಮೇ ।
ಶ ತಾಮಸ ಖ್ಯಾತಿ ಮಂಗಳಕೀರ್ತಿ ೪

ತಂತ್ರ ಮಂತ್ರಕ್ಕೆ ಸಿಲುಕಾ । ಅಂತರಂಗ ನಿಯಾಮಕಾ ।
ಎಂತೆಂತು ತಿಳಿದರೆ । ಅಂಥಂಥ ಗತಿಯನ್ನು ।
ಸಂತತ ಕೊಡುವನೆ ಚಿಂತಿಪೆ ವರಹನ್ನ । ದಂತಜ ತೀರದಲ್ಲಿ ।
ನಿಂತು ವರವನೀವ । ವಿಜಯವಿಠ್ಠಲ ಗುಹಾ
ಕಾಂತಾರ ನಿವಾಸಾ ೫

೮೭

ಹರೇ ವಿಠ್ಠಲಾ ಪಾಂಡುರಂಗ
ಪರಿಪಾಲಯ ಕಂಸಾರೆ ಪ

ಕರಕಮಲದ್ವಯ ಕಟಿಯ ಮ್ಯಾಲೆಯಿಟ್ಟ ।
ಪರಮ ಪುರುಷ ಶೌರೇ ಮುರಾರೇ ಅ.ಪ.

ಜಲಜಭವಾದಿ ಸುರಸನ್ನುತ ಪಾದ ಜಲಜನಾಭನಾದ
ಕಲುಷ ದೂರ ಕರುಣಾಕರ ರಂಗ
ಸುಲಲಿತ ಮಹಿಮ ಹರೇ ಮುರಾರೆ ೧

ಪುಂಡಲೀಕ ವರದಾತ ಮುಕುಂದ ಕುಂಡಲಿಶಯನ ಹರೇ ।
ಅಂಡಜವಾಹನ ಅಪ್ರಾಕೃತಕಾಯ
ಕುಂಡಲಧರ ಹರೇ ಮುರಾರೇ ೨

ದಿಟ್ಟತನದಿ ಹರಿಭಕ್ತ ಕೊಟ್ಟ ಇಟ್ಟಿಗಿ ಮೇಲೆ ನಿಂದ ದೇವ
ಸೃಷ್ಟಿಗೊಡೆಯ ಶ್ರೀ ವಿಜಯವಿಠ್ಠಲ
ದುಷ್ಟಕುಲಾಂತಕನೇ ಶ್ರೀ ಕೃಷ್ಣ ೩

೮೮

(ಆ) ಶ್ರೀ ವೆಂಕಟೇಶ್ವರ

ಅಭಯ ಗಿರಿಯವಾಸ ಶ್ರೀನಿವಾಸನು ನಮಗೆ ।
ಶುಭವೀವ ನಿರುತ ಮಂದಹಾಸನೊ ಪ

ಧೇನಿಪರ ಮನಕೆ ಚಿಂತಾಮಣಿಯೋ ಸ್ವಾಮಿ ।
ನೀನೆ ಗತಿಯೆಂಬರಿಗೆ ಹೊಣೆಯೋ
ಜ್ಞಾನಮಯ ಸಂದಣಿಯೊ ಪುಣ್ಯ
ಕಾನನ ನಿವಾಸ ಸುರಖಣಿಯೊ ೧

ಶರಣರಿಗೆ ವಜ್ರ ಪಂಜರನೋ ದುಷ್ಟ
ದುರುಳ ದೈತ್ಯರಿಗೆ ಝುರ್ಝುರನೊ
ದುರಿತ ಕದಳಿಗೆ ಕುಂಜರನೊ ಸ್ವಾಮಿ
ಉರಗತಲ್ಪನಾದ ಸಿರಿವರನೊ ೨

ಪರಮೇಷ್ಟಿ ಶಿವರೊಳಗಿಪ್ಪನೋ ಇಂದು
ಮರುತನ ಪೆಗಲೇರಿ ಬಪ್ಪನೊ
ಶರಣರಿಗೊರವೀಯೆ ತಪ್ಪನೋ ನಮ್ಮ
ಸಿರಿ ವಿಜಯವಿಠ್ಠಲ ತಿಮ್ಮಪ್ಪನೊ ೩

೮೯

ಇಂಥಾ ಪ್ರಭುವ ಕಾಣೆನೋ ಈಜಗದೊಳ-
ಗಿಂಥಾ ಪ್ರಭುವ ಕಾಣೆನೋ ಪ

ಇಂಥಾ ಪ್ರಭುವ ಕಾಣೆ ಶಾಂತ ಮೂರುತಿ ಜಗ-
ದಂತರಂಗನು ಲಕ್ಷ್ಮೀಕಾಂತ ಸರ್ವಾಂತರ್ಯಾಮಿ ಅ.ಪ.

ಬೇಡಿದಿಷ್ಟವ ಕೊಡುವ-ಭಕ್ತರ ತಪ್ಪು
ನೋಡದೆ ಬಂದು ಪೊರೆವ
ಗಾಡಿಕಾರನು ಗರುಡಾ -
ರೂಢ್ಯ ಗುಣವಂತ ಮಹಾ
ಪ್ರೌಢ ಪ್ರತಾಪಿ ಜಗದಿ
ಗೂಢದಿಂ ಸಂಚರಿಪ

ಪಾಡಿ ಪೊಗಳಿ ಕೊಂಡಾಡುವವರ ಮುಂ-
ದಾಡುತಲಿಪ್ಪನು ನಾಡೊಳಗಿದ್ದರು
ಕೇಡಿಗನೇ ನಾಡಾಡಿಗಳಂದದಿ
ಈಡುಂಟೇನೋ ಈ ವೆಂಕಟಗೆ-ಇಂಥಾ ೧

ನಿಗಮ ತತಿಗಳರಿಯದ- ನೀರಜಭವಾ-
ದ್ಯಗಣಿತ ಸುರರು ಕಾಣದ
ಜಗದೊಡೆಯನು ಭಕ್ತ-
ರುಗಳಿಗೊಲಿದು ತ್ರಿಸ್ಥಾ-
ನಗಳತ್ಯಜಿಸಿ ಕಲಿ
ಯುಗದಿ ಭೂಮಿಗೆ ಬಂದು

ಅಗಣಿತ ಸುಗುಣಾರ್ಣವ- ಶ್ರೀ ಹರಿಯೇ
ಜಗದೊಳು ಸೇವಾದಿಗಳನು ಕೊಳುತಿಹ

ಅಘಹರ ಮೋಕ್ಷಾದಿಗಳನೆ ನೀಡುತ
ನಗೆಮೊಗದಲಿ ಚನ್ನಿಗನಿಂತಹನೊ - ಇಂಥಾ ೨

ಭಾರ್ಗವಿ ಭೂಮಿವಲ್ಲಭ - ಭವದೂರ ಭಕ್ತ
ವರ್ಗಕೆ ಇವಸುಲಭ
ನಿರ್ಗುಣ ನಿರ್ವಿಕಾರ-
ಸ್ವರ್ಗದೈಶ್ವರ್ಯದಿಂದಾ-
ನರ್ಘ್ಯದ ಪದವನೀವ
ದೀರ್ಘಾಯುವಂತನೀತ

ಭಾರ್ಗವರಾಮ ನೃಪರ್ಗಳನೆಲ್ಲರ -
ಣಾಗ್ರದಿ ಜಯಿಸಿದ ಉಗ್ರಪ್ರತಾಪಿ
ಅಗ್ರಗಣ್ಯ ಸದ್ವಿಗ್ರಹ ಶ್ರೀಮದ -
ನುಗ್ರಹ ಮಾಡುತ ದುರ್ಗುಣ ಕಳೆವ ೩

ನಿರ್ದುಃಖಾನಂದ ಭರಿತಾ - ನಿರ್ವಾಣ ಸುಖಕೆ
ಆರ್ದ್ರಹೃದಯ ತೋರುತ
ನಿದ್ರೆಯೊಳಿದ್ದವಗು -
ಪದ್ರಬಡಿಸಿ ದೈತ್ಯ
ಕ್ಷುದ್ರನಂಕೊಲಿಸಿ ಸು
ಭದ್ರ ಜಗಕೆ ಇತ್ತ

ನಿರ್ದಯನಲ್ಲ ಸಮುದ್ರಶಯನ ಗೋ-
ವರ್ಧನ ಗಿರಿಯನು ಉದ್ಧರಿಸಿದ ಯದು
ವರ್ಧನ ದನುಜ ವಿಮರ್ದನ ಲಕ್ಷ್ಮೀ ಜ -
ನಾರ್ದನ ವರ ಶೇಷಾದ್ರಿ ನಿವಾಸ - ಇಂಥಾ ೪

ವಾರಿಜಾಸನ ಮನೋಜಾ ಈರ್ವರು ಸುತರು
ಸುರತರಂಗಿಣಿ ತನುಜಾ
ಪುರವೇ ವೈಕುಂಠ ಇಂದ್ರಾದ್ಯ

ಮರರು ಕಿಂಕರರು
ಗರುಡವಾಹನ ಉರಗ
ಪರಿಯಂಕ ನಿಷ್ಕಳಂಕ

ಸರಿದೊರೆಗಳ ನಾನರಿಯೆನು ವೆಂಕಟ
ಗಿರಿಯಲಿ ಇರುತಿಹ ಕರುಣೆಗಳರಸನೆ
ಮರೆಯದೆ ಸಲಹೋ ಶರಣಾಗತರನು
ಮರುತಾಂತರ್ಗತ ಸಿರಿ ವಿಜಯವಿಠ್ಠಲಾ – ಇಂಥಾ ೫

೯೦

ಇಕೋ ಈತ ವೆಂಕಟೇಶನೊ । ಭವದ ।
ಸಿಕ್ಕು ಬಿಡಿಸಿ ನೆನದವರಿಗೆ ಸಿಕ್ಕಿ ಮನದಿಂದಗಲದಿಪ್ಪಾ ಪ

ಕರುಣ ಅರುಣ ಕಿರಣ ಪೋಲುವ ।
ಚರಣ ಧರಣಿ ತರುಣಿ ಸ್ಮರಿಸಿ ।
ಕರುಣಗಡಲಾ ।
ಧರಣಿಯಿಂದ ಉದ್ಧರಣೆ ಮಾಡಿದೆ ಪರಣನೀತ ೧

ಮಂಡಿಯ ಮಂಡನ ।
ಕುಂಡಲ ಕಾಂತಿ ।
ಗಂಡ ಸ್ಥಳದಲಿ ಮಿರುಗೆ ತುಲಸಿ ।
ದಂಡೆ ಕೌಸ್ತುಭ ಭೂಷಣ ಕಾಲ । ಪೆಂಡೆಯಿಟ್ಟು ನಂದನೀತ ೨

ತಂ (ತು) ವಾಹನ ಆ ಖಂಡಲ ಇಕ್ಷುಕೋ ।
ದಂಡ ಪರಮೇಷ್ಠಿ ।
ತೊಂಡರ ನಲಿದು ಕೊಂಡಾಡೆ ಚಂದಿರ ಮಂಡಲದೊಳು ಉ।
ದ್ದಂಡನಾಗಿಯಿಪ್ಪಾ । ಪುಂಡ ದೈವನೀತ ೩

ಪಂಜಿನಸಾಲು ಪರಂಜಳಿ ವಾದ್ಯ ವಿ ।
ರಂಜಿಸಲು ಜ್ಞಾನ ।
ಪುಂಜ ನಾರದ ಜಯ ಜಯ ಪೇಳಲು ।
ಕಂಜಲೋಚನ ನಿರಂಜನ ದಾನವ ಭಂಜನ ಈಶಾ ೪

ಕರದ ಜನಕೆ ಸುರಧೇನು ಇದು ।
ನಿರುತದಲ್ಲಿ ಪೊರೆವ ಭಕ್ತರ ।
ಕರಿಯ ಕಾಯ್ದ ವಿಜಯವಿಠ್ಠಲ ।
ಪರಮ ಪುರುಷ ತಿರುಮಲನೀತ ೫

೯೧

ಇದೇ ರಾಮನಿಧಿ ನೋಡು ಎದುರಿಗಿರುತಿರೆ
ಹೃದಯವೆಂಬೊ ಸದನದಲ್ಲಿ ಕದವು ತೆಗೆದಿದೆ ಪ

ದಾರಿಯಲ್ಲಿ ಆರು ಛತ್ರ ಭೂರಿ ಭೋಜನ
ಊರೊಳಲ್ಲಿ ಪ್ರಣವ ಶಬ್ದ ಭೋರೆಗುಟ್ಟುತ
ನೂರು ಕೋಟಿ ಸೂರ್ಯ ಕಿರಣ ತೋರುವಾ ಪ್ರಭೆ
ಸೂರೆ ಮಾಡಿಕೊಳ್ಳಿರೋ ಪಾರವಿಲ್ಲದಾ ೧

ಅಷ್ಟದಳದ ಮಂಟಪದ ಪೆಟ್ಟಿಗೆಯಲೀ
ಸೃಷ್ಟಿಗೊಡೆಯ ಹರಿಯ ನಾಮ ಅಂಕಿತವಾದ
ಕಟ್ಟಳೆಯಿಲ್ಲದ ನಾಣ್ಯಗಳನು ಕಟ್ಟರೀಸಿದೆ
ಹುಟ್ಟ ತಿರುಕರೆಲ್ಲ ಬಂದು ಕಟ್ಟಕೊಳ್ಳಿರೋ ೨

ಅಂಕೆ ಮಾಡುವರಿಲ್ಲವಿದಕೆ ಶಂಕೆ ಬ್ಯಾಡಿರೋ ಅ–
ಹಂಕೃತಿಯ ತೊರೆದು ಕಾಲ್ಗೆ ಗೆಜ್ಜೆ ಕಟ್ಟಿರೋ
ಶಂಖ ತಾಳ ಮದ್ದಳೆಯು ಝೇಂಕೃತಿಯಿಂದಾ
ವೆಂಕಟಾಚಲ ನಿಲಯಕಾಯೊ ವಿಜಯವಿಠ್ಠಲ ೩

೯೨

ಎಂತು ನಿನ್ನ ಮೆಚ್ಚಿಸುವೆನೊ ಎಲೊ ವೆಂಕಟಾ
ಸಂತತ ಬಿಡದೆ ಎನ್ನ ಅಂತರಂಗದಲ್ಲಿ ಇರೊ ಪ

ಕುಣಿದು ನಿನ್ನ ಮೆಚ್ಚಿಸುವೆನೆ ।
ಫಣಿಹಾರನೈಯನನ ಜನಕಾ ।
ಮಣಿದು ನಿನ್ನ ಮೆಚ್ಚಿಸುವೆನೆ ।
ಸನಕಾದಿಗಳ ಸುಪ್ರೇಮಾ ೧

ಅನ್ನವಿತ್ತು ಮೆಚ್ಚಿಸುವೆನೆ ।
ಘನ್ನ ನಿತ್ಯ ತೃಪ್ತ ನೀನು ।
ಹೆಣ್ಣನಿತ್ತು ಮೆಚ್ಚಿಸುವೆನೆ ।
ಹೆಣ್ಣುರೂಪ ನೀನೆ ಸ್ವಾಮಿ ೨

ಅಪ್ಪ ನಿನ್ನ ಮೆಚ್ಚಿಸುವೆನೆ ।
ದರ್ಪಾಕ ಬೊಮ್ಮನ ತಂದೆ ।
ಅಪ್ಪ ನಿನ್ನ ಮೆಚ್ಚಿಸುವೆನೆ ।
ಸುಪ್ರಾಣಿ ರಮೆಯರಸಾ ೩

ಪಾಲು ಕುಡಿಸಿ ಮೆಚ್ಚಿಸುವೆನೆ ।
ಪಾಲಸಾಗರ ಸದನ ನೀನು ।
ಮಾಲೆ ಹಾಕಿ ಮೆಚ್ಚಿಸುವೆನೆ ।
ಮಾಲೆ ಕೌಸ್ತುಭ ಭೂಷಣಾ ೪

ಸೇವೆ ಮಾಡಿ ಮೆಚ್ಚಿಸುವೆನೆ ।
ಪಾವಮಾನಿ ತಾತ ನೀನು ।
ಆವದೊ ಕಾಣೆನೋ ಎನ್ನ
ಕಾವುದು ವಿಜಯವಿಠ್ಠಲಾ ೫

೯೩

ಎಚ್ಚರಿಕೆ ಎಚ್ಚರಿಕೆ ಎಲೋ ದೇವ ।
ಎಚ್ಚರಿಕೆ ಎಚ್ಚರಿಕೆ ।
ಅಚ್ಚ ಕಲ್ಯಾಣ ಮೂರುತಿ ತಿರುವೆಂಗಳಾ ಪ

ಅಜ ದ್ವಿಜಗಜ ಅಜಾಮಿಳ ಪರಿಪಾಲನೆಯಾ ।
ದ್ವಿಜ ರಾಜಾಂಗಾ ಗಂಗಜ ಭಕ್ತವರದನೆಯಾ ।
ಗಜ ಕುಜ ದನುಜ ಭೂ ಭುಜರ ಸಂಹಾರನೆಯಾ ।
ನಿಜ ಭಜಕರ ಪಂಕಜ ಹೃದಯಾರ್ಕನೆಯಾ ೧

ಪರತರ ಪರಮಾತ್ಮ ಪರಮೇಷ್ಠಿ ವಂದನೆಯಾ ।
ಕರುಣ ಶರಧಿ ತಾರಾ ಕರುಗಳ ಕಾಯಿದನೇಯಾ ।
ಎರಡೇಳು ಲೋಕ ಪೊರೆವಾ ಭಾರಣ ಹರಿಯಾ ।
ಶರಣು ಹೊಕ್ಕೆನು ಎನ್ನ ಮೊರೆ ವಿಚಾರಿಸೊಯಾ ೨

ಜಯ ಜಯಾ ಚಿತ್ತಾವಾಧಾರು ಪರಾಕ್ರಮಯಾ ।
ಭಯ ನಿವಾರಣ ನಿಜ ಭಂಟರಿಗೆ ಬಂಟಯಾ ।
ನಯ ಮೂರುತಿ ನಮ್ಮ ವಿಜಯವಿಠ್ಠಲರೇಯಾ ಯಾ ।
ತ್ರಿಯಗುಣ ವಿರಹಿತ ಶೇಷಗಿರಿವಾಸಯಾ ೩

೯೪

ಕಾವನಯ್ಯಾ ಜಗವನನುದಿನ ।
ದೇವ ತಿರುಪತಿಯ ದಾಸಾ ಶ್ರೀ ವಲ್ಲಭವೆಂಕಟೇಶಾ ಪ

ತರಳ ಉತ್ತಾನಪಾದಿಯ ನೋಡು ।
ಕರಿಯ ನೋಡು ಮಂದ ಕಾಯನ್ನ ।
ಕುರೂಪಿಯಾದ ಕುಬಜೆ ವೃಭಿ ।
ಚರಿಯ ಅಜಮಿಳನ ಕಾಯದ ೧

ಬಡವನಾಗಿದ್ದ ಸುಧಾಮ ಕೊಲೆ
ಗಡಿಕನಾದ ಕಿರಾತನ್ನ ನೋಡು ।
ನಡತೆ ತಪ್ಪಿದ ಸುಗ್ರೀವ ಕುಲವ ।
ಕಡಿದ ಪಾರ್ಥನ್ನ ಕಾಯದಾ ೨

ಇಟ್ಟಿಗೆ ವಗೆದ ಪುಂಡಲೀಕನ ।
ಬೆಟ್ಟಲೆ ಬೆಟ್ಟವ ನೆತ್ತಿಸಿದವನಾ ।
ಪೆಟ್ಟನು ಫಣಿಗೆಯಿಟ್ಟ ಭೀಷ್ಮನ ।
ಕಟ್ಟಿಬಿಗಿದ ಗೋಪಿಯ ಕಾಯದಾ ೩

ಜನನ ನೋಡು ವಿದುರನ್ನ ಕ
ರುಣಿ ಎಂಬೆನೆ ರುಕುಮಾಂಗದ ।
ಮನೆ ಉಳ್ಳವರೆ ಸನಕಾದಿಗಳು ।
ಮಣಿಹಾಕಿಸಿದ ಭೂಪತಿಯ ಕಾಯದಾ ೩

ಶಕುತಿ ಮಿಕ್ಕಾದ ಕರ್ಮಗಳು ನೋಡಾ ।
ಭಕುತಿಗೆ ಮಾತ್ರ ಸಿಲುಕುವವನು ।
ಭಕುತವತ್ಸಲ ಶ್ರೀನಿವಾಸಾ ।
ಅಕಳಂಕ ರೂಪ ವಿಜಯವಿಠ್ಠಲ ೫

೯೫

ಗಿರಿಯ ತಿಮ್ಮಪ್ಪ ವಾಹನಗಳೇರಿ ನಿತ್ಯಾ
ಮೆರೆದು ಚತುರ ಬೀದಿ ತಿರುಗಿ ಬಪ್ಪುದು ನೋಡೆ ಪ

ಸರಸಿಜಭವಾಗ್ರಜರುಳಿದವಾರು
ವರ ಸಕಲ ಮನೋಭೀಷ್ಟ ಕೈಕೊಳುತಾ
ನೆರೆದು ಸುತ್ತಲು ತಮ್ಮ ಭಕುತಿಯಲಿ ಸೂಸುತ್ತ
ಹರುಷ ವಾರಿಧಿಯಾಳು ಮುಳಗಿದಟ್ಟಿಡಿಯಿಂದಾ ೧

ಎತ್ತಿದ ಸತ್ತಿಗೆಯಿಂದ ಪೀಯೂಷ
ಸುತ್ತಲುದರೆ ಬಿಂದುಗಳೊಂದು
ಮುತ್ತಿನ ಸೂರ್ಯಪಾನಾ ಪತಾಕೆಗಳು ಬೀ
ಸುತ್ತಲಿಪ್ಪದು ಚಾಮರ ಪಂಜುಗಳೆಸೆಯೆ ೨

ದಂಡಿಗೆ ತಾಳ ಬೆತ್ತವ ಪಿಡಿದು ನಿಂದು
ತಂಡ ತಂಡದಲಿಂದ ಮಹಿಮೆಯನ್ನು
ಕೊಂಡಾಡುತ ಮನ ಉಬ್ಬಿ ಮಹೋತ್ಸವದಲ್ಲಿ
ತೊಂಡರು ಹರಿದಾಡಿ ಹಾಡಿ ಪಾಡುತಲಿರೆ ೩

ಪವನ ಗರುಡ ಶೇಷ ಸಿಂಹ ಮಂಟಪ ಮತ್ತೆ
ರವಿ ಶಶಿ ತುರಗ ಅಂದಣ ಮಿಕ್ಕಾದ
ನವರಾತ್ರಿಯೊಳಗೆಲ್ಲ ವಾಹನನಾದ ಅಂ
ದವನಾರು ಬಣ್ಣಿಪರು ಸಕಲ ಭೂಷಿತವಾಗೆ ೪

ಚಿನುಮಯ ರೂಪ ವಿಚಿತ್ರ ಮಹಿಮ ದೇವ
ನೆನೆದವರ ಹಂಗಿಗೆ ಸಿಲುಕುವಾ
ಘನಗಿರಿ ತಿರ್ಮಲ ವಿಜಯವಿಠ್ಠಲರೇಯಾ
ದನುಜದಲ್ಲಣನೆಂಬೊ ಬಿರಿದು ಪೊಗಳಿಸುತ್ತ ೫

೯೬

ಗಿರಿರಾಜ ಚಿತ್ತ ಉದಾರ ಜೀಯಾ ನಾ ನಿನ್ನ ಪಾದ
ಕ್ಕೆರಗಿ ಯಾಚಿಸುತಲೆ ಮುಗಿವೆನು ಕೈಯ್ಯಾನೆರೆ ನಂಬಿದವರನು
ಎರವು ಮಾಡಲು ನಿನಗೊಳತೇನಯ್ಯಾ ಪಿಡಿ ಬೇಗನೆ ಕೈಯ್ಯ
ಕರದಶಿಗಳರಸನೆ ಕಾಮಿತ ಫಲದನೆ ಕರಿರಾಜನ
ಭೀಕರ ಹರ ವೆಂಕಟ ಪ

ಅಪಾರ ಮಹಿಮಾ ಆಪದ್ಬಂಧೋ ಆಪನ್ನರ ಪಾಲಿಪ
ವ್ಯಾಪಾ ನಿನಗಲ್ಲದೆ ಮತ್ತೊಂದು ಕಾಣೆನೊ ಜಗದೀ

ಭೂಪಾನೆ ಭೂಮ್ನ ಗುಣಗಣಸಿಂಧೋ ಸ್ವಾಮಿಯೆ ಎನಗಿಂದು
ಪಾಪದ ಪರ್ವತ ಲೇಪವಾಗದಂತೀ
ಪರಿಪಾಲಿಸು ಶ್ರೀಪತಿ ಅಂಜನ ಗಿರಿರಾಜ ೧

ಕಲಿಯುಗದೊಳಗೀ ಪರ್ವತಕೆಲ್ಲಿ ಸರಿಗಾಣೆನು ಯೆಂದು
ನೆಲಸಿದೀ ನೀನೆ ಈ ಸ್ಥಳದಲ್ಲಿ ವೈಕುಂಠಕಿಂತ
ನೆಲೆಯು ವೆಗ್ಗಳವೆಂದು ನೀ ಬಲ್ಲೀ ಅದಕಾರಣ ಇಲ್ಲೀ
ಜಲಜ ಭವಾದ್ಯರು ಪೊಲಿದೊಲಿಯುತ
ತಲೆಯಾಗುವರಯ್ಯಾ ಭಳಿರೆ ಕಾಂಚನ ೨

ತರುಜಾತಿ ಮೃಗಪಕ್ಷಿಗಳಾಕಾರ ಮೊದಲಾದ ರೂಪದಿ ।
ನೂರಾರು ಕಿನ್ನರು ತಮ್ಮ ಪರಿವಾರ ಒಡಗೂಡಿ ನಿನ್ನ
ಚರಣಾರಾಧನೆ ಮಾಡಿದ ವಿಸ್ತಾರ ಈ ಬಗೆ ಶೃಂಗಾರ
ದೊರೆತನ ಠೀವಿಗೆ ಧರಣೀ ಮಂಡಲದಿ
ಸರಿಗಾಣೆನೊ ಹೇ ತಿರುಪತಿ ವೆಂಕಟ ಗಿರಿರಾಜ ೩

ಹದಿನಾಲ್ಕು ಲೋಕದ ಭಾಗ್ಯಗಳಲ್ಲಿ ಅಮರತತಿಗೆ ಕೊಟ್ಟ
ವಿಧವೆಲ್ಲಾ ಪ್ರತ್ಯಕ್ಷವು ಪುಸಿಯಲ್ಲ ನಾನವರ ನೋಡೆ
ಅಧಮಾಧಮನು ನೀನೆ ಬಲ್ಲೆಲ್ಲಾ ಎನ್ನ ಯೋಗ್ಯತಯ
ಹದುಳವೇನಿಹುದು ಒಡಗೂಡಿಸದಲೆ
ಒದಗಿ ಪಾಲಿಸೋ ವಸುಮತಿ ಧರ ಫಣಿ ೪

ಸುವರ್ಣ ಮುಖರಿತೀರ ನಿವಾಸ ನವರಾತ್ರಿಯಲ್ಲೀ
ಆವ ಬ್ರಹ್ಮೋತ್ಸವ ನೋಡಲು ಶ್ರೀಶ ಸಂಪದವನಿತ್ತು ಮೊ
ರವಾನು ಕಲುಷದ ಭಯ ಬರಲೀಸ ಶ್ರೀನಿವಾಸ
ಶ್ರೀವರ ಭೂಧರ ವಿಜಯವಿಠ್ಠಲ ಪಾರಾವರೇಶ
ಭೂದೇವರ ವರದ ೫

೯೭

ತಿಮ್ಮ ನಿನ್ನಯ ಪಾದ ಒಮ್ಮೆಗಾದರು ನೆನೆದು
ಕರ್ಮ ಪೋಪುವುದು ಎಂತೊ
ಇಮ್ಮನಾವಾಗುವುದು ವ್ಯಾಮೋಹ ಸಂಗತಿಗೆ
ಕಮ್ಮಗೋಲನ ಬದುಕೀಲಿ ರಂಗಾ ಪ

ಹಾಳ ಹರಟೆಗೆ ಮನಾ ಹೇಳಿಸಿಕೊಳದೆವು
ಬ್ಬಾಳುತನದಿಂದ ಕುಳಿತು
ಕೇಳುವುದು ಕಿವಿಗೊಟ್ಟು ಅವರ ಕಿಂಕರನಾಗಿ
ಹೇಳು ಇನ್ನೊಮ್ಮೆ ಎನುತಾ
ಲಾಲಿಸಿ ಗತಿ ತಪ್ಪದಂತೆ ಜೋಡಿಸಿ ಮಾತು
ಪೇಳುವೆನು ಕೈತಿರುವುತಾ
ಶ್ರೀಲೋಲ ನಿನ್ನ ಕೀರ್ತನೆಗೆಯಿಲ್ಲದೊಂದು
ಕೀಳು ವಾರ್ತೆಯ ತಾಹದೊ ಮನಸು ೧

ಧರೆಯನಾಳುವವನ ಸಮ್ಮುಖದಲ್ಲಿ ನಿಂದು
ಕರವೆರಡು ನೊಸಲಿಗೆ ಚಾಚಿ
ಕರುಣಿಸುವದೆಂದು ಮೊಗವೆತ್ತಿ ಪೊಗಳುವೆ ನಿನಗೆ
ಸರಿ ಮಿಗಿಲು ಯಿಲ್ಲವೆಂದೂ
ಮರಿಯದಲೆ ಸಲಹುವದು ಮಹಾತ್ಮನಹುದೆಂದು
ನರನಾಲಿಗೆ ತುತಿಸಿತು
ಹರಿ ನಿಮ್ಮಯ ನಾಮವೆ ನೆನೆವೆ ನಾನೆನ್ನಲು
ಮರಪು ಬಂದೊದಗಿಹದೊ ರಂಗಾ ೨

ಹಸಿವೆ ತೃಷೆಯಿಂದ ಉಳ್ಳವರ ಮನೆಗಳ ಕಾಯಿದು
ಬಿಸಿಲು ಬೆಳದಿಂಗಳೆನ್ನದೆ
ದೆಸೆಗೆಟ್ಟು ಚಾಲ್ವರಿದು ವಿಷವನುಂಡವನಂತೆ
ಕುಸಿದು ಕನಿಷ್ಠನಾಗಿ
ರೆಸೆದು ಹದಿನಾರು ಪಲ್ಲುಗಳು ಅವರ ಕೊರಳ

ಹಿಸುಕಿ ಹಿಂಸೆಗಳ ಬಿಡಿಸಿ
ಹಸನಾಗಿ ನಿನ್ನ ನಾಮಾಮೃತವನುಣದೆ ನಾ
ಮುಸುರೆ ಎಂಜಲು ಸವಿದೆನೊ ರಂಗಾ ೩

ಹೊನ್ನು ಹಣದ ಆಸೆಗೆ ಹಲಬರನ ಅನುಸರಿಸಿ
ಅನ್ನಿಗರ ಕೊಂಡಾಡುತ
ಎನ್ನಯ್ಯ ಎನ್ನೊಡಿಯ ಎನ್ನ ಸಾಕುವ ತಾತ
ಎನ್ನ ಕುಲ ಉದ್ಧಾರಕಾ
ಸನ್ನುತಿಸಿ ನಾ ನಾಕ ಬಗೆಯಿಂದ ಮರಿಯದಲೆ
ಕುನ್ನಿಯಂತೆ ಕಾಯಿದೆನೊ
ಪನ್ನಂಗ ಶಯನನೆ ನಿನ್ನ ಮಹಿಮೆಗಳನ್ನು
ಅನ್ನದಲೆ ನರಕಿಕ್ಕಿಳಿದೇ ಸ್ವಾಮಿ ೪

ಒಂದು ದಿನವಾದರೂ ಸಂತೋಷದಿಂದಲಿ ಜಿಹ್ವೆ
ಯಿಂದ ಹರಿ ರಾಮಕೃಷ್ಣ
ಇಂದಿರಾರಮಣ ಶರಣಾಗತವತ್ಸಲ
ಕಂದರ್ಪನಯ್ಯ ಕಮಲಬಾಂಧವ ಕುಲಾಗ್ರಣಿ
ಎಂದು ಸ್ಮರಿಸದೆ ಘೋರ
ಅಂಧ ಕೂಪದಿ ಹೊರಳಿದೆ
ಮಂದಮತಿಗೊಂದು ಗತಿಯಿಲ್ಲ ವಿಜಯವಿಠ್ಠಲ
ತಂದೆ ನೀನೆ ಕಾವುದೋ ಹರಿಯೆ ೫

೯೮

ತಿರುದುಂಬುವ ನೀನು ತಿರುಮಲೇಶಾ
ಮರುಗಲ್ಯಾತಕೆ ಇನ್ನು ಮನಸಿನೊಳಗೆ ಪ್ರತಿದಿನವು ಪ

ಬಲಿರಾಯ ಬಲು ದಾನವನು ಮಾಡುತಿರಲಾಗಿ
ಇಳಿಯ ಸುರವೇಷವನು ಧರಿಸಿ ಪೋಗಿ

ಹಲುಬಿ ಬಾಯಿದೆರದು ತ್ರಿಪಾದ ತಿರಕೆ ಕೊಂಡು
ನಿಳಿಯ ಬಾಗಿಲ ಕಾಯ್ದೊ ನಿಗಮ ಕುಲದಾತಾರಾ ೧

ಗೋಪಳ್ಳಿಯಲಿ ಜನಿಸಿ ಗೋವುಗಳ ಕಾವುತ್ತ
ಗೋಪಾಲತತಿ ವಡನೆ ವಡನಾಡುತ
ತಾಪಸರು ಯಜ್ಞ ಕರ್ಮಾದಿಗಳು ಮಾಡುತಿರೆ
ಶ್ರೀಪತಿ ಅನ್ನ ತಿರಿದುಂಡು ಕ್ಷುದಿಯನ್ನ ಕಳೆದೆ ೨

ಅಂದು ಈ ಪರಿಯ ಯಾಚಕ ವೃತ್ತಿಯನು ಮಾಡಿ
ಇಂದೆನ್ನ ಹೃತ್ಕಮಲದೊಳಗೆ ಬಂದೂ
ನಿಂದು ಮನೆಮನೆ ತಿರದುಂಬುವ ನೀನಲ್ಲವೆ
ಸಂದೇಹವೇಕೆ ಎನಗೆ ವಿಜಯವಿಠ್ಠಲರೇಯಾ ೩

೯೯

ದೋಷವರ್ಜಿತ ಬಾರೈ ವೆಂಕಟೇಶಾ
ಶ್ರೀನಿವಾಸ ವಾಸವಿಸೂನು ಪ

ಚರಣರಹಿತ ಪತಿ ತ್ಯಜನೆ ತಥ
ಚರಣಪಾಣಿ ಪರಮಾನಂದಾ
ಚರಣಾಯುಧನಾದವಗೆ ಸೋಕಿದಳ
ಚರಣದಿ ಪಾವನಗೈಸಿದೆ ದೇವಾ ೧

ಪತಿ ಗುರು ಪಿತೃ ಪಿತಾಮಹಾ ದೈ
ವತ ಗುರೋರ್ಗುರು ಸ್ವಶುರ ಜಾರಾ
ಅತಿಶಯ ಭೂತಿರಭೂತಿ ಎಂದು ಸಂ
ತತ ಉಪಾಸ್ಯತನಾಗಿ ಮೆರೆವನೆ ೨

ಪಂಚಾದಿಗ್ಬರಸ್ಮಿಗಳಲ್ಲಿ ಪೂಜೆ
ಪಂಚ ರೂಪದಿ ಕೊಂಬನಾಡಿಸ್ಥ

ಪಂಚಜನ ಪಂಚಮೊಗವೇಶ ತಾಳಿದ
ಪಂಚ ಕುಸುಮಸಾರ ಮಧು ವಿದ್ಯಮೂರ್ತಿ ೩

ಹೃದಯಾಖ್ಯಪುರ ಪಂಚದ್ವಾರದಲಿ ನೀ
ವಿಧಿ ಭವರಿಂದಾರ್ಚನೆ ಗೊಂಬೆ
ಪದುಮಾಷ್ಟ ದಳದಲಿ ಪ್ರಹರೇಯ ತಿರುಗುವ
ಸುದರುಶನಾಬ್ಜಾದಿ ಅಷ್ಟಬಾಹು ಚನ್ನಾ ೪

ಆನಂದೋತ್ಕೃಷ್ಟ ಜ್ಞಾನ ಪೂರ್ಣ
ಗುಣಪೂರ್ಣ ಐಶ್ವರ್ಯಾಸಂತ ಮೋದಾ
ಗಾನೆ ತ್ರಾಣ ಕರ್ತೃ ಪ್ರಣವ ತ್ರಿಚರಣಸ್ತಾ
ಎಣಿಸುವೆ ಷಟುಚತು ತ್ರಿಭಿರೂಪಾತ್ಮಾ ೫

ಪದ್ದುಮ ಶಾಂತಸಿಂಹ ಅನಿರುದ್ಧ
ಪ್ರದ್ಯುಮ್ನ ಸಂಕರುಷಣ ವಾ
ಸುದೇವ ನಾರಾಯಣ ರೂಪಗಳಿಂದ
ಹೃದ್ಗತನಾಗಿ ಒಪ್ಪುವ ಮಹಾಮಹಿಮಾ ೬

ಗೋಕುಲನಾಥ ಗೋವಿಂದ ತಿರುಮಲ
ಕಾಕೋದರಾದ್ರಿನಿಲಯ ಸ್ವಾಮಿ
ಲೋಕಪಾಲಕ ಸಿರಿ ವಿಜಯವಿಠ್ಠಲ ಪ
ರಾಕು ಈ ರಥದೊಳು ಕುಳ್ಳಿ ವೇಗಸಾಗಿ ೭

೧೦೦

ನಿನ್ನ ಅರುಸುತನಕ್ಕೇನೆಂಬೆನೊ ವೆಂಕಟೇಶಾ
ಘನ್ನಗಿರಿಯ ವಾಸ ಕಮಲಾಸನ ಜನಕ ತಿರುಮಲೇಶಾ ಪ

ಹರುವ ಸರ್ಪಯಿರುವ ಚೋರ
ಮುರುವ ಮೀರಿ ಬರುವ ಶರಧಿ ಉರೆವ ಕಿಚ್ಚು

ಕರೆವ ಮೃತ್ಯು ಸುರಿವ ಮಳೆ ಬಿರುವನೆಲ್ಲ
ಹೊಡೆವ ದೈತ್ಯಾ ತೊರೆವ ಸನ್ಯಾವ
ಮೇರೆ ತಪ್ಪಿ ಭರದಿ ತನಗೆ ಇದಿರು
ಬಂದವ ಕಾಣುತತಿ ಹರಿಯ
ನಾಮ ಮುಟ್ಟುವ ದೇವ ಶ್ರೀನಿವಾಸಾ ೧

ಸೃಷ್ಟಿ ಜನರಿಗೊಂದು ಆಳು
ಕೊಟ್ಟು ವೇಗದಿಂದ ಕರಿಯ
ಲಟ್ಟಿದವರ ಕಾಣೆನಯ್ಯಾ
ಎಷ್ಟೆಷ್ಟು ದೂರದಿಂದಲಿ
ಕಟ್ಟಿಕೊಂಡು ಹೊನ್ನು ಹಣಗಳ ತಮಗೆ ತಾನೆ
ಅಟ್ಟಹಾಸದಿಂದ ಮಂಗಳವ ಪಾಡಿ ಪೊರ
ಮಟ್ಟ ಒಪ್ಪ ತಿರುವೆಂಗಳಾ ೨

ಹದಿನೆಂಟು ಜಾತಿಯವರು
ಒದಗಿ ಮುದದಿಂದ ಕುಣಿದು
ಪದೋಪದಿಗೆ ಹಾಡಿ ಪಾಡುತ
ಹದುಳವಾದ ಪಂಚವಾದ್ಯ
ಎದುರುನಿಂದು ಧ್ವನಿಯ ಮಾಡುತಾ
ದಾಸರೆಂಬೊ ಅಟ್ಟಹಾಸದ ಮಾತು ನುಡಿಯುತ್ತ
ನಿತ್ಯ ನಿನ್ನ ಮದುವೆಯೆಂದು ಸುಖವು ಸುರಿಯುತ್ತಾ ೩

ಎಲ್ಲರಿಲ್ಲಿಗೆ ಬಂದರೇನು ಯಿಲ್ಲ ಪು
ಣ್ಯಲೇಶ ಮಾತ್ರ ಸಲ್ಲದಯ್ಯಾ ಮುಕ್ತಿಗವರು
ಇಲ್ಲೆ ಸುಖವು ಬಟ್ಟು ಕಡಿಗೆ
ಎಲ್ಲೆಲ್ಲಿ ಜನಿಸಿ ಬಹು ಭವದ
ಪಲ್ಲಡಿಯೊಳಗೆ ಜನಿಸಿ ಜ್ಞಾನ
ವಿಲ್ಲದೆ ಸಲ್ಲುವರು ದುರಿತವ ವಹಿಸಿ ೪

ಮನುಜರೆಣಿಕೆ ಏನು ಮತ್ತೆ
ವನಜ ಸಂಭವ ಈಶ ಮುಖ್ಯ
ಅನಿಮಿಷರೆಲ್ಲ ಬಂದು ಭಯದಿ
ಮನಸಿನಲಿ ನಿನ್ನ ಅರಸುತನದ ಶೌರ್ಯ
ವನ್ನು ಎಣಿಸುತ ನೆಲೆಗಾಣದೆ
ಮಣಿದು ನಮಸ್ಕರಿಸುತಾ ವಾಲ್ಗೈಸುತಾ
ಹೊಣಿಯೊ ವಿಜಯವಿಠ್ಠಲ ಎನುತಾ ೫

೧೦೧

ನಿನ್ನ ದರುಶನಕೆ ಬಂದವನಲ್ಲವೊ
ಪುಣ್ಯವಂತರ ದಿವ್ಯ ಚರಣ ನೋಡಲಿ ಬಂದೆ ಪ

ಎಲ್ಲೆಲ್ಲಿ ನಿನ್ನ ವ್ಯಾಪ್ತತನವಿರಲಿಕ್ಕೆ
ಇಲ್ಲಿಗೆ ಬರುವ ಕಾರಣವಾವುದೊ
ಸೊಲ್ಲಿಗೆ ಕಂಭದಲಿ ತೋರಿದ ಮಹಾಮಹಿಮ
ಅಲ್ಲಿ ಇಲ್ಲೇನಯ್ಯ ಬಲ್ಲ ಭಜಕರಿಗೆ ೧

ಕರೆದಾಗಲೆ ಓಡಿ ಬಂದೊದಗುವ ಸ್ವಾಮಿ
ಮರಳಿ ಗಾವುದ ಎಣಿಸಿ ಬರಲ್ಯಾತಕೊ
ನೆರೆ ನಂಬಿದವರಿಗೆ ಆವಲ್ಲಾದರೇನು
ಅರಿದವರ ಮನದೊಳಗೆ ನಿಂದಾಡುವ ಚಂದವಾ ೨

ಕಠಿನವೊ ನಿನ್ನ ಭಕುತರನ ನೋಡುವ ಲಾಭ
ಸಟೆಯಲ್ಲಾ ವೇದಗಳು ಸಾರುತಿವಕೊ
ವಟು ಮೊದಲಾದ ವೈಷ್ಣವಾಗ್ರೇಸರಂಘ್ರಿ
ತ್ರಿಟಿಯಾದರೂ ಎನಗೆ ಸೋಕಲು ಗತಿಗೆ ದಾರಿ ೩

ಧ್ಯಾನಕ್ಕೆ ಸಿಲುಕುವನೆ ನಿನ್ನ ಕಾಣಲಿಬಹುದು
ಜ್ಞಾನಿಗಳು ಎಂತು ಬರುವರೊ ಅಲ್ಲಿಗೆ

ಅನಂತ ಜನುಮದಲ್ಲಿ ಜಪ ತಪ ಹೋಮ ವ್ರತ
ಏನೇನು ಮಾಡಿದರು ಇಷ್ಟು ಜನ ಕೂಡುವದೇ ೪

ನೀನಿದ್ದ ಸ್ಥಾನದಲಿ ಸಕಲ ಪುಣ್ಯಕ್ಷೇತ್ರ
ನೀನಿದ್ದ ಸ್ಥಾನದಲಿ ಸರ್ವತೀರ್ಥ
ನೀನಿದ್ದ ಸ್ಥಾನದಲಿ ಸಮಸ್ತ ತಾತ್ವಿಕರು
ನಾನಿತ್ತ ಬರುವುದು ನಿನಗೆ ತಿಳಿಯದೆ ಸ್ವಾಮಿ ೫

ಇದನೆ ಲಾಲಿಸು ಜೀಯಾ ನಿನ್ನದೊಂದೇ ಮೂರ್ತಿ
ನಿದರುಶನವಲ್ಲದೆ ಮಿಗಿಲಾವುದೊ
ಪದೋಪದಿಗೆ ಮದ್ವಮತ ಹೊಂದಿದ ಸುಜನರ
ಹೃದಯದೊಳಗಾನಂತಪರಿ ನಿನ್ನ ರೂಪಗಳು ೬

ಭಳಿರೆ ತಿರುಮಲರಾಯ ನಿನ್ನ ಕರುಣಾ ರಸಕೆ
ನೆಲೆಗಾಣೆನೆಲೆ ಸೆರೆಹೊರೆಯೊಳು
ವೊಲಿದು ಭಕುತರಿಗಾಗಿ ಮದುವೆ ಹಮ್ಮಿಕೊಂಡೆ
ಸುಲಭ ದೇವರದೇವ ವಿಜಯವಿಠ್ಠಲ ವೆಂಕಟಾ ೭

೧೦೨

ನಿನ್ನ ನೋಡಲಿ ಬಂದೆ ನಿತ್ಯ ತೃಪ್ತಾ
ಅನ್ಯರಿಂದಲಿ ಎನಗೆ ಏನು ಪ್ರಯೋಜನವೊ ಪ

ದರುಶನಕೆ ಬಂದವ ನಾನಲ್ಲವೆಂದು ನಾನಂದು
ಹರಿ ನಿನಗೆ ನುಡಿದದ್ದು ಮನಸ್ಸಿನೊಳಗೆ
ಇರುತಿಪ್ಪದೇನಯ್ಯಾ ಬಿನ್ನಪವೆ ಲಾಲಿಸು
ಶರಣ ಜನರ ಅಭಿಪ್ರಾಯವೊಂದು ಬಗೆ ಇಪ್ಪದೊ ೧

ನಿರುತ ವ್ಯಾಪ್ತತ್ವ ಕರುಣತ್ವ ಅಣುಮಹತ್ತು
ಸರುವ ಚೇತನ ಜಡ ಮತ್ತೆ ಮತ್ತೆ
ಪರಿ ಪರಿಯಿಂದಲಿ ನಿನ್ನಲಿ ಉಂಟು ನಿನ್ನ
ವರ ಮೂರ್ತಿಗಳ ಪೇಳದೆ ಇದಷ್ಟು ವಿನಯದಲಿ ೨

ಧ್ಯಾನಕ್ಕೆ ನೀನು ಪ್ರಧಾನನೆಂದು ನುಡಿದೆ
ಆನಂದಮತಿ ಕೊಡುವ ಅಪ್ರಮೇಯ
ಕ್ಷೋಣಿಜನಕಿಂತ ದ್ವಾರದವರು ವೆಗ್ಗಳವಾಗೆ
ಏನೆಂಬೆ ತಿರುವೇಂಗಳೇಶ ನಿನ್ನಾಟಕ್ಕೆ ೩

ಮಿಕ್ಕ ಮಂದಜನಕೆ ನಿನ್ನ ಭಕುತರ ಮೇಲೆ
ಭಕುತಿ ಪುಟ್ಟುವುದಕ್ಕೆ ನಾ ಪೇಳಿದದ್ದು
ಅಕಟಕಟ ನಿನ್ನ ದೊರೆತನಕೆ ಏನೆಂಬೆ
ತಕ್ಕ ಮಾತುಗಳೇನೊ ಆಲೋಚಿಸಿ ನೋಡೆ ೪

ಹೊನ್ನು ಹಣ ತೂಗಬೇಕಾದರೆ ಮೊದಲಿಗೆ
ಚಿನ್ನ ಹಾಕುವರೇನೊ ಚಿನ್ಮಯರೂಪ
ಮುನ್ನೆ ನಿನ್ನವರ ದರುಶನವಾದ ಮೇಲೆ ಪಾ
ವನ್ನ ಶಾರೀರನೆ ನಿನ್ನ ಕಾಂಬುವದುಚಿತ ೫

ಜರೆಮರಣರಹಿತ ಸುಜನರ ಪರಿಪಾಲಾ ನಿ
ರ್ಜರಗಣಕೆ ನಿತ್ಯ ವಜ್ರಪಂಜರಾ
ಜರಗೆ ವರವಿತ್ತ ದನುಜರ ವಂಶನಾಶಾ ನಿ
ರ್ಜರ ನದಿ ಜನಕಾಂಬುಜ ರವಿ ನಯನ ದೇವಾ ೬

ಸ್ಥೂಲಮತಿಯಿಂದ ಪೇಳಿದೆನೆಂದು ಚನ್ನಾಗಿ
ಲಾಲಿಸು ಲಲಿತಾಂಗಿ ಲಕುಮಿ ರಮಣಾ
ನೀಲಗಿರಿ ನಿವಾಸ ವಿಜಯವಿಠ್ಠಲ ವೆಂಕಟ
ವಾಲಗವ ಕೈಗೊಳ್ಳು ಎನ್ನ ಯೋಗ್ಗಿತವರಿತು ೭

೧೦೩

ನಿನ್ನ ಮಹಿಮೆ ಇದೇನೊ
ಕನ್ನಗಾರರ ಗುರುವೆ ಅಳಗಿರಿ ತಿಮ್ಮರಾಯಾ ಪ

ಕ್ಷೋಣಿಯೊಳಗುಳ್ಳವರು ಕ್ಷಿಪ್ರದಲ್ಲಿ
ನಿನ್ನ ಕಾಣಿವೇನೆಂಬ ತವಕದಲಿ ಬರಲು
ಮಾಣದಲೆ ಅವರ ವಸನ ಸುಲಿಸಿ ತಡೆಯದೆ
ಮಾನವನು ಕೊಂಬ ಅಭಿಮಾನಗೇಡಿ ೧

ಬ್ರಹ್ಮಾದಿಗಳು ಇಲ್ಲಿ ಸುಲಿಸಿಕೊಳಬೇಕೆಂದು
ಹೆಮ್ಮೆಯಿಂದಲಿ ನೋಡಿ ಹಿಗ್ಗುವರೋ
ಹಮ್ಮಿನದೇವ ನಿನ್ನ ಸೋಜಿಗವೆ ತಿಳಿಯದು
ಈ ಮ್ಮಹಿಯೊಳಗೆ ಇಂಥ ಸುಮ್ಮಾನವೇನೊ ೨

ಹಲವು ಕೇಳಿದರೇನು ನೀಚೋಚ್ಚ ಎಣಿಸಲೆ
ಒಲಿಸಿದವರಿಗೆ ನೀನು ಒಲಿದು ಎಲ್ಲಾ
ಸುಲಿಗೆಯನು ಯಿತ್ತು ಸಂತತಲವರ ಪಾಲಿಪ
ಬಲು ದೈವ ವಿಜಯವಿಠ್ಠಲ ಅಳಗಿರಿ ತಿಮ್ಮಾ ೩

೧೦೪

ನಿನ್ನ ಮಾತಿಗೆ ಮೆಚ್ಚುವನಾವಾವಾ
ಪನ್ನಗಾದ್ರಿ ನಿವಾಸಾ ಪರಾಕು ಎಲೊ ಎಚ್ಚರಿಕೆ ಪ

ಅಂತರ ಬಾಹೀರ ವ್ಯಾಪ್ತಾ ಆಪ್ತನೆಂಬುವ
ಎಂತಾಗುವದೆಂದು ನುಡಿಯದಿರಿ
ಕಂತುವಿನ ಪಿತ ನಿನಗೆ ನಮೊ ನಮೊ ಬಿನ್ನೈಪೆ
ಸಂತು ಧ್ರುವರಾಯನು ಸಂತತ ಇದಕೆ ಸಾಕ್ಷಿ ೧

ಒಂದೆ ರೂಪದಲಿ ಪೂಜೆಯಗೊಂಬೆ ಎನಗೆ ಮ
ತ್ತೊಂದು ರೂಪಕೆ ಶಕ್ತಿ ಇಲ್ಲೆನ್ನದಿರು
ಸಂದೇಹ ಎನಗಿಲ್ಲ ಎಲ್ಲಿದ್ದರು ದೇವ
ನಂದನಂದನ ಇದಕೆ ರಾಯ ಬ್ರಾಹ್ಮಣ ಸಾಕ್ಷಿ ೨

ಬದಿಯಲಿದ್ದರೆ ಇಷ್ಟೆ ಮುಂದೆ ಬರುವ ಆಪತ್ತು
ಒದಗಿ ಕಳೆವೋಪಾಯ ಕಡಿಮೆನ್ನದಿರೊ
ಮುದದಿಂದ ನಿನ್ನಂಘ್ರಿಗೆರಗುವೆನು ಗತಿಪ್ರದಾ
ಕವನದೊಳು ಬದುಕಿ ನರಧ್ವಜನೆ ಸಾಕ್ಷಿ ೩

ಆಪತ್ತು ಕಳೆವೆ ಬೇಡಿದ ಭೋಜನ ಕೊಡುವೆ
ಈ ಪರಾಕ್ರಮ ನಿನಗಲ್ಲೆನ್ನದಿರು
ಶ್ರೀಪತಿ ನಿನ್ನ ಲೀಲೆಗೆ ಬೆರಗಾಗುವೆನೊ
ತಾಪಸರ ಮಧ್ಯದಲಿ ದುರ್ವಾಸಮುನಿ ಸಾಕ್ಷಿ ೪

ನಾನಾ ಭಕ್ತರು ಇನಿತು ಸಾಕ್ಷಿಯಾಗಿರಲಿಕ್ಕೆ
ಏನು ಸೋಜಿಗವೆಂಬೊ ಸೋಗು ಯಾಕೆ
ಜ್ಞಾನ ಪರಿಪೂರ್ಣ ಸಿರಿ ವಿಜಯವಿಠ್ಠಲರೇಯಾ
ನಾನು ಬೇಡುವದೇನು ಸರ್ವಪ್ರೇರಕೆ ಪ್ರೀಯಾ ೫

೧೦೫

ನಿನ್ನ ಮೂರುತಿ ನಿಲ್ಲಿಸೊ ವೆಂಕಟಸ್ವಾಮಿ ಪ್ರ
ಸನ್ನ ವದನ ಭುಜಗನ ಗಿರಿಯ ತಿಮ್ಮಾ ಪ

ಪೊಳೆವ ಕಿರೀಟಕುಂಡಲ ಕರ್ಣ
ಪಣೆಯಲ್ಲಿ ತಿಲಕ ಬಿಲ್ಲಿನ ಪುಬ್ಬು
ಸುಳಿಗೂದಲಿಂದೊಲಿವ ೧

ಕದಪು ಕೂರ್ಮನಂತೆ ಸುಧೆಯ ಸುರಿವ ವದನ
ಅಧರ ನಾಸಿಕ ಕಪೋಲ
ಮುದ್ದುನಗೆಯಿಂದೊಲಿವ ೨

ಕೊರಳ ತ್ರಿರೇಖೆ ಉಂಗುರ
ಬೆರಳ ಶಂಖ ಸುದರಶನ ಕಟಿ ಅಭಯ
ಕರ ಚತುಷ್ಟಯಿಂದೊಲಿವ ೩

ಶ್ರೀವತ್ಸ ಕೌಸ್ತುಭ ನ್ಯಾವಳ ವೈಜಯಂತ
ಆವಾವಾಸರ ಉದರ
ತ್ರಿವಳಿಯಿಂದೊಲಿವಾ ೪

ಬಡ ನಡು ನಾಭಿಯು ಉಡುದಾರ ಪೊಂಬಟ್ಟೆ
ಉಡಿಗೆ ಕಿಂಕಿಣಿಗಂಟೆ
ನುಡಿ ತೊಡರಿಂದೊಲಿವಾ ೫

ಊರು ಜಾನು ಜಂಘೆ ಚಾರುಪೆಂಡೆ ನೂಪುರ
ಘೋರಗರೆವ ಗೆಜ್ಜೆ
ತೋರುತ್ತ ನಲಿದೊಲಿವಾ ೬

ಧ್ವಜ ವಜ್ರಾಂಕುಶ ಸರ
ಸಿಜ ರೇಖಿಯ ಚರಣ
ವ್ರಜನಂದ ಬಾಲಕ ವಿಜಯವಿಠ್ಠಲ ತಿಮ್ಮಾ ೭

೧೦೬

ನೋಡ ಬಂದೆನೋ ನಿತ್ಯ ಪಾಡಿದವರ ಪ್ರಾಣ
ಮಾಡು ಕಾರುಣ್ಯವ ಮಾತಾಡು ಮನ್ನಿಸಿ
ರೂಢಿಯೊಳಗೆ ನಿನಗೀಡುಗಾಣೆನೊ ಕರ
ಪಿಡಿವ ತಾರಾಕ್ಷರೂಢ ವೆಂಕಟರಾಯ ಪ

ನಾನಾ ಪೂರ್ವ ಉತ್ತರ ಯೋನಿ ಮೊಗದಿಂದ ವೃದ್ಧ
ಹಾನಿ ದೇಹವ ತೆತ್ತು. ನಾನು ನಿನ್ನದು ಎಂದು
ಹೀನ ಮತಿಯಿಂದಪಮಾನಕೊಳಗಾಗಿ
ಏನು ಕಾಣದೆ ಪಾಪ ಕಾನನದೊಳು ಬಿದ್ದು
ಜ್ಞಾನರಹಿತನಾದೆ ಕಾಣೆ ಲಾಭಕೆ ಮದ್ದು-
ನೀಯಳ ಕಳಕೊಂಡ ಮಾನವನಂತೆ ನಿತ್ರಾಣಗೆಟ್ಟೆನೊ ಈ
ಕ್ಷೋಣಿಯೊಳಗೆ ಪುಟ್ಟಿದಾಗ ವಿನೋದಿಯೆ ನೀನೆ ಗತಿ ಎಂದು ೧

ನಿಚ್ಚಳ ಮನ ದೊರಿಯೆ ನಿತ್ಯ ನಿನ್ನ ನಂಬಿದೆ
ಬೆಚ್ಚಿಸಲಾರೆ ಬಲು ಅರ್ಚನೆ ಬಗೆಯಿಂದ
ಮುಚ್ಚಿದಾವರ್ಕ ದೇಹ ಬಿಚ್ಚಿಯಿಟ್ಟು ದೇವಾ
ಅಚ್ಚನಾಗ್ರಹದಿಂದ ಅಚ್ಯುತಾ ಶರಣೆಂದು
ಬೆಚ್ಚಿದವರ ಪ್ರಾಣ ಹೆಚ್ಚಿನ ದೈವವೆ ಎಚ್ಚರವುಳ್ಳಾಗ
ಅಚ್ಯುತಾ ಅಚ್ಯುತಾ ಚಚ್ಚರಾ ನಾಮಗಳುಚ್ಚರಿಸುವ ಧ್ಯಾನ
ಬಿಚ್ಚದೆ ಒದಗಲಿ ಇಚ್ಛಾಕ ಮೂರುತಿ ೨

ಧನ್ಯ ಸ್ವಾಮಿ ಕಾಸಾರಾಪುಣ್ಯ ಕಾನನವಾಸಾರಣ್ಯಗಳೆಲ್ಲಾದಿ ಅಲ್ಲ
ನಿನ್ನ ಭಕ್ತರ ಕುಲಕೆ ಮಾನ್ಯರಹಿತನೆ ತಾ-
ರುಣ್ಯಗಾತುರ ಸತ್ಕಾರುಣ್ಯ ನಿಧಿ ಮದನ ಲಾ-
ವಣ್ಯ ಕ್ಷೀರವಾರಿಧಿ ಕನ್ಯ ಭೂ ಸತಿಪತಿ
ಅನ್ಯಥಾ ಸತ್ಪಂಥ ಶೂನ್ಯ ನೀನೆಲೊ ದುರಿತಾ-
ಗಣ್ಯರ ಹೋತ್ರನೆ ಪುಣ್ಯ ಶ್ಲೋಕ ಸಿರಿ ವಿಜಯವಿಠ್ಠಲ ಹಿ-
ರಣ್ಯೋದರ ಪಿತ ಸನ್ಯಾಯದಿಂದಲಿ ೩

೧೦೭

ನೋಡಿದೆ ಗಿರಿಯ ತಿರ್ಮಲನ ನಿತ್ಯ
ಮೂಡಲ ದಿಕ್ಕಿನಲಿಪ್ಪ ನಿರ್ಮಲನಾ ಪ

ನೀರೇರ ಕೂಡಾಡಿದವನಾ ದೇವ
ನೀರೊಳಗೆ ಸದನವ ಬಿಗಿದವನಾ

ನೀರದ ಶ್ಯಾಮ ವರ್ಣನನಾ ಭವ
ನೀರಜ ಭವವಂದ್ಯಾ ದಯಾಸಾಗರನಾ ೧

ನೀರು ಪಾದದಲಿ ಪೆತ್ತವನಾ ಮಹಾ
ನೀರು ದಾಟಿ ಮಕ್ಕಳ ತೋರಿದವನಾ
ನೀರಧಿ ಬಿಗಿದ ಪ್ರಬಲನಾ ಅಂದು
ನೀರುಪತಿಯ ಭಂಗವ ಮಾಡಿದವನಾ ೨

ನೀರು ಕಟದ ನಿಃಸಂಗನಾ ಸರ್ವ
ನೀರು ಸೇದುವನಾಗಿ ಜಗವ ಸುತ್ತುವನ
ನೀರೊಳಗಾಡುವ ನಿಜನಾ
ಓರ್ವ ನೀರೇಳ ನಾರಿಯ ಮಾಡಿದ ಗುಣನಾ ೩

ನೀರಜೋದರ ನಿರ್ಮೋಹನನಾ ಏಳು
ನೀರಜ ದಳದಲ್ಲಿ ಪೊಳೆವ ಚನ್ನಿಗನಾ
ನೀರು ಬಯಲು ಮಾಡಿದವನಾ ಅನ್ನ
ನೀರೊಳಗಿದ್ದು ಜಗವ ಪೊತ್ತವನಾ ೪

ನೀರಜಪಾಣಿ ವಲ್ಲಭನಾ ತೇಜ
ನೀರನ್ನ ತತ್ವ ವ್ಯಾಪಿಸಿಕೊಂಡವನಾ
ನೀರೆ ಗತಿಯ ಮಾಡಿದವನಾ ನಮ್ಮ
ನೀರಜಾದ್ರಿ ತಿಮ್ಮ ವಿಜಯವಿಠ್ಠಲನಾ ೫

೧೦೮

ನೋಡಿದೆ ನಾ ನೋಡಿದೆ
ಮೂಡಲಗಿರಿಯ ವಾಸನ ಯಾತ್ರಿಯ
ಮಾಡಿದೆ ನಾ ಮಾಡಿದೆ ಪ

ಬೆಟ್ಟವ ಕಂಡೆನು ಸೋಪಾನಂಗಳು
ನಿಟ್ಟುಸುರಿಕ್ಕದೆ ಏರಿದೆ ಕಟ್ಟ

ಕಡಿಯಣ ಗೋಪುರ ಶಿಖರ
ದಿಟ್ಟಿಸಿ ಕಣ್ಣಿಲಿ ನೋಡಿದೆ ೧

ಈ ಸಮಸ್ತರ ಗುರುವಾದ ಭಾರತಿ
ಈಶನ ಪಾದಕ್ಕೆ ಎರಗಿದೆ
ಕ್ಲೇಶನ ಕಳೆದು ಎದುರಾಗಿ ಪೊಳೆವ
ಶ್ರೀಶನ ಮಹದ್ವಾರ ನೋಡಿದೆ ೨

ಬಲವಾಗಿ ಬಂದು ಸ್ವಾಮಿ ಪುಷ್ಕರಣಿ
ಒಳಗೆ ವರಹನ ನೋಡಿದೆ
ಜಲದಲಿ ಮಿಂದು ವೇಗದಲಿ ತಿರುವೆಂ
ಗಳ ದೇವನ ನೋಡ ಸಾಗಿದೆ ೩

ಗುಡಿಯ ಪೊಕ್ಕೆನು ಗರುಡಗಂಬದ
ಸಡಗರವನು ನಾ ನೋಡಿದೆ
ಒಡನೆ ಪ್ರಾಣಾಚಾರದವರು
ಪಡೆದ ವರಗಳ ಕೇಳಿದೆ ೪

ಮುನ್ನ ಅವಸರ ಮನಿಯೊಳಗೆ
ಅನ್ನಪೂರ್ಣೆಯ ನೋಡಿದೆ
ಚನ್ನಾಗಿ ಮಂಟಪದೊಳು ಶ್ರೀನಿವಾ
ಸನ್ನ ಮೂರುತಿಯ ನೋಡಿದೆ ೫

ತೊಟ್ಟಲ ತೀರ್ಥವ ಕೊಂಡು ಪ್ರಸಾದ
ಇಟ್ಟು ಮಾರುವದು ನೋಡಿದೆ
ಇಷ್ಟ ಭಕ್ತರು ಸಮ್ಮುಖದಲಿ
ಮುಟ್ಟಿ ಪಾಡುವದು ನೋಡಿದೆ ೬

ದ್ವಾರಪಾಲಕರಿಗೆ ಸಾಷ್ಟಾಂಗದಲಿ ನಮ
ಸ್ಕಾರವನು ಮಾಡಿದೆ

ಘೋರನೆ ಕಟಾಂಜನದ ಫಲ್ಗುಣಿ ಬಂ
ಗಾರ ಬಾಗಿಲವ ನೋಡಿದೆ ೭

ಇಂದು ರವಿ ಶತಕೋಟಿ ತೇಜದ
ಇಂದಿರೇಶನ ಪಾದಾರ
ವಿಂದ ಯುಗ್ಮವ ಪುಳಕೋತ್ಸಹದಿಂದ
ಸಂದರುಶನ ನಾ ಮಾಡಿದೆ ೮

ಇಟ್ಟಿದ್ದ ಅಂದಿಗೆ ಉಟ್ಟ ಪೀತಾಂಬರ
ಕಟ್ಟಿದ್ದ ಧಟ್ಟಿ ವಢ್ಯಾಣ
ಝುಟಿ ಕಂಕಣಾಕಾರದಾಲಾಯುಧ
ಇಟ್ಟ ಕಸ್ತೂರಿಯ ನೋಡಿದೆ ೯

ಮಾಸದಾ ಪೂವು ಪೂಸಿದ ಗಂಧ
ಭೂಷಣಾ ನಾನಾ ಪರಿವಿಧ
ಏಸು ಬಗೆಯಲ್ಲಿಟ್ಟು ಶ್ರೀನಿ
ವಾಸನ ಶೃಂಗಾರ ನೋಡಿದೆ ೧೦

ಜಯಜಯ ಜಗದೀಶ ಜಗನ್ನಿವಾಸ
ಜಯ ಜಯ ಲಕುಮಿ ಪರಿತೋಷ
ಜಯ ಜಯ ವಿನಾಶ ಜಯ ಜಯ ಸರ್ವೇಶ
ಜಯವೆಂದು ಸ್ತೋತ್ರವ ಮಾಡಿದೆ ೧೧

ಕೇಸಕ್ಕಿ ದಧ್ಯೋದನ ಪರಮಾನ್ನ
ದೋಶಿ ಬಿಸಿಬಿಸಿ ಮನೋಹರ
ಲೇಸಾಗಿ ಚತುರ್ವಿಧ ಪ್ರಸಾದವನ್ನು
ಈಸು ಅವಸರ ನೋಡಿದೆ ೧೨

ಕರ್ಪೂರದಾರತಿ ವಪ್ಪಿನಿಂದಲಿ ತಂದು
ತಪ್ಪದಲಿ ಬೆಳಗೋದು ನೋಡಿದೆ
ರೆಪ್ಪೆಯವಿ ಹಾಕದೆ ಮನದಣಿಯ ತಿ
ಮ್ಮಪ್ಪನ ವಿಗ್ರಹ ನೋಡಿದೆ ೧೩

ಹಿಮಋತು ಪ್ರಥಮ ಮಾಸ ದಶಮಿ
ಹಿಮಕರ ವಾರದದಿನದಲ್ಲಿ
ಕ್ರಮದಿಂದಲಿ ಪೋಗಿ ಬಿಂಬ ಮೂರುತಿಯ
ವಿಮಲ ಚಾರಿತ್ರವ ನೋಡಿದೆ ೧೪

ಶತ ಅಪರಾಧವ ಮಾಡಲು ಕಳೆದು
ಗತಿಯನೀವ ಇಂದಿರಾ
ಪತಿ ವಿಜಯವಿಠ್ಠಲ ಪುರಂದರನ ಸಂ
ಗತಿಯಲ್ಲಿ ಸತತ ಸಾಕಿದಾ ೧೫

೧೦೯

ನೋಡಿದೆನು ತಿರುವೆಂಗಳೇಶನಾ
ಮಾಡಿದೆನು ಭಕುತಿಯಲಿ ವಂದನೆ
ಬೇಡಿದೆನು ಕೊಂಡಾಡಿ ವರಗಳ
ನಾಡೊಳಗೆ ಈಡಿಲ್ಲದಪ್ಪನಾ ಪ

ಘನಸುಂದರ ಜ್ಞಾನ ತೀರ್ಥ ಆನಂದ
ಕನಕ ಮುಕ್ತ ವೈಕುಂಠ
ಧನ ವರಹಾ ವೈರಾಗ್ಯನಿಲಿ ರ
ತುನ ಚಂದ್ರಮ ವರಧರ್ಮ ನಾರಾ
ಯಣ ಭಕುತಿ ಶ್ರೀಕಾಂತಿ ಬ್ರಹ್ಮಾ
ರುಣ ವೃಷಭ ಶ್ರುತಿ ಗರುಡ ಸರ್ಪ
ಜನತ ಪೂಜಿಪ ಸುರ ಸುಧಾನಂತ
ಇನಿತು ಪೆಸರುಳ್ಳ ಪುಷ್ಕರಾದ್ರಿಯಾ ೧

ಖಗನ ಪೆಗಲಲಿ ನಗವ ತಂದ
ಜಗದೊಳು ಸುವರ್ಣಮುಖರಿ ನಿ
ಮ್ನಗ ತೀರದಲಿ ಸ್ಥಾಪಿಸಿದ ಸುತ್ತಲು
ಝುಗಝುಗಿಸುದೆ ನೋಳ್ಪ ಜನರಿಗೆ
ಅಗಣಿತ ಅಗಾಧಗಳು ತೆಗೆದು
ಹಿಮ್ಮೊಗವಾಗಿ ಪೋದವು
ಯುಗ ಯುಗ ಕಥಾಭೇದ ಬಗೆಬಗೆ
ಪೊಗಳಿದರೆ ನೆಲೆಗಾಣೆ ಅನುದಿನಾ ೨

ಸರಸ್ವತಿಗೆ ಮುನಿಯಿಂದ ಶಾಪವು
ಬರಲು ಭರದಲಿ ಬಂದು ವಿರಜಾ
ಸರತಿಯೊಳು ಬೆರಸಿದಳ್ ತಪದಲಿ
ಹರಿಯ ಕರುಣವ ಪಡೆದು ಪ್ರತಿದಿನ
ಸ್ಮರಸಿದವರಿಗೆ ಪುಣ್ಯವೀವುತ
ಸರುವ ಸರೋವರಧಿಕವೆನಿಪ ಸುಂ
ದರ ಸ್ವಾಮಿ ಪುಷ್ಕರಣಿಯನು ತ್ರಿ
ಕರಣ ಬಲು ಒಂದಾಗಿಬಿಡದಲೆ ೩

ಎರಡೈದು ಪ್ರಾಕಾರ ಗೋಪುರಾ
ಎರಡೈದು ದ್ವಾರಗಳು ಕಟ್ಟಿದಾ
ಮಿರುಗುವತಿ ಮಹಾ ಮಕರ ತೋರಣ
ಧರೆಗೆ ಮಟ್ಟಿದ ಎಡಬಲದ ಪೂ
ಸರಗಳೊಪ್ಪಲು ದ್ವಾರಪಾಲಕರಿ
ರುತಿಪ್ಪರಲ್ಲೆಲ್ಲಿ ಕಾವುತಾ
ತರುಚರಾದಿಯ ನಿಕರ ತುಂಬಿರೆ
ಪರಿಪರಿಯ ಮಂಟಪಗಳಿಂದಾ ೪

ಭಂಗರಹಿತ ಬಂಗಾರಮಯವಾದಾ
ತುಂಗ ಆನಂದ ನಿಲಯ ವಿಮಾನಾ
ಕಂಗಗಳಿಗೆ ಬಲು ತೇಜಃಪುಂಜದಿ

ಹಿಂಗದಲೆ ಗೋಚರಿಸುತದೆ ನರ
ಸಿಂಗ ಮೂರ್ತ್ಯಾದಿಗಳು ಪ್ರಾಣ ಭು
ಜಂಗಧರಾದಿ ದಿಕ್ಪಾಲರೆಲ್ಲರು
ಸಂಗ ಮತಿಯಲಿ ವಾಸವಾಗಿರೆ
ಮಂಗಳಾಂಗ ಪ್ರಿಯಾಂಗ ಪ್ರಿಯನಾ ೫

ಮುಕ್ತಿ ಬೀದಿಗಳೆರಡು ವಿ
ರಕ್ತಿ ಜ್ಞಾನ ಸತ್ಕರ್ಮ ಬಲು ದೃಢ
ಭಕ್ತಿಯೋಗವು ಯಾವ ತ್ಯಾಗ ಸಂ
ವ್ಯಕ್ತ ರಾಗವು ಈಪರಿ ಸು
ಉಕ್ತಿ ದ್ವಾದಶ ಸಾಲ ಬೀದಿಗ
ಳುಕ್ತ ಜನ ಸಂಚರಿಸುತ್ತಿಪ್ಪರು
ಶಕ್ತನೊಬ್ಬನೆ ಜಗದೊಳೀತನೆ
ವ್ಯಕ್ತ ಅವ್ಯಕ್ತದಲಿ ಚಿತ್ರವಾ ೬

ಲೋಕೇಶ ಲೋಕಪಾಲಕರು ಖಗ
ಕಾಕೋದರ ಗಂಧರ್ವ ಸನಕಾದಿ
ಲೋಕ ಚಕ್ಷು ಸೀತಾಂಶು ಉದಿಸಿದರು
ಏಕಾಂತನು ವಾಯುನಂದನ
ಪಾಕಶಾಸನ ಸೌಮ್ಯ ಗುರು ಕವಿ
ನಾಕಜನ ಮಿಗಿಲಾದ ಭಕ್ತರು
ಏಕಗುಣವಾರಂಭಿಸಿ ಅ
ನೇಕ ಗುಣದಲಿ ಭಜಿಸುತಿಪ್ಪುದಾ ೭

ಮೂರು ಪ್ರಸಾದ ಮಹಿಮೆಯ
ಸಾರಿದರೆ ನೆಲೆದೋರದು ಕಂ
ಸಾರಿ ಚಿನ್ಮಯ ಲೀಲೆಗೆ ಮತ್ತಾರಾದರು ಗಣ್ಯಮಾಳ್ಪರೆ
ಧಾರುಣಿಲಿ ಮಧ್ಯದಲಿದಕೆ ಎ
ದಿರುಗಾಣೆನು ಎಲ್ಲಿ ಚರಿಸಲು

ಮಾರುತನು ತಾನೊಬ್ಬ ಬಲ್ಲ ವಿ
ಸ್ತಾರವಿದರ ವಿಚಾರ ಮತಿಯಲಿ ೮

ಧೀರ ಜಗದೋದ್ಧಾರ ರಿಪು ಸಂ
ಹಾರ ನಾನಾವತಾರ ನವನೀತ
ಚೋರ ಜಾರ ಶಿರೋಮಣಿ ಶ್ರೀ
ನಾರಿಯರರಸನೆ ತಾ ಭಕ್ತ ಚ
ಕೋರ ಚಂದ್ರಮ ಪೂರ್ಣ ಸುಂದರ
ಸಾರ ಭವಾರ್ಣವತಾರ ಕಾರಣ
ವೀರ ವಿತರಣ ಶೂರನೆನಿಪನ್ನ
ದ್ವಾರದಲಿ ಬಂದು ಸ್ತುತಿಸಿದೆನು ನಿಂದೂ ೯

ಈ ವೈಲಕ್ಷಣವುಳ್ಳ ದೊರೆತನ
ಈ ವೈಭವ ಸರ್ವೋತ್ತಮನೆಂಬದು
ಈ ವೈಭೋಗ ಸಾಕಲ್ಯವಾಗಿದೆ
ಈ ವೈಯಾರವು ಈತಗಲ್ಲದೆ
ಈ ವೈಕುಂಠನ ನೋಡುವುದು ಮಹಾ
ಈ ವೈದಿಕದ ಭಾಗ್ಯಕ್ಕೆಣೆಯೆ
ಈ ವೈಧಾತ್ರಿಗೆಯಿವನು ಪೇಳಿದ
ಈ ವೈಚಿತ್ರವ ಕೇಳಿ ಮನದಲಿ ೧೦

ರನ್ನಮಯ ಕಿರೀಟ ಕುಂಡಲ
ಕರ್ಣ ಕಸ್ತೂರಿನಾಮ ಪಣೆಯಲಿ
ಕೆನ್ನೆ ಚಂಪಕ ನಾಸದಂತ ಪ್ರ
ಸನ್ನ ವದನಾಂಭೋಜಲೋಚನಾ
ಚಿನ್ನಸರ ಉಡುದಾರ ಸರಿಗೆ ಮೋ
ಹನ್ನ ಪೀತಾಂಬರ ನೂಪುರಗೆಜ್ಜೆ
ಸನ್ನಿಧಿಗೆ ನಡೆತಂದು ದೇವವರೇ
ಣ್ಯನಂಘ್ರಿಯ ನೆನೆದೆ ಚೆನ್ನಾಗಿ ೧೧

ಮೆರೆವ ಉತ್ಸವ ವಾಹನಂಗಳು
ನೆರೆದ ಪ್ರಜೆದಟ್ಟಡಿಯಾಗಿದೆ ನೋಡಿ
ಎರಡೊಂದು ವಿಧದವರುಯಿಲ್ಲಿಗೆ
ಬರುವರ್‍ಯೆ ಅವರವರ ತಕ್ಕದು
ಹರಿಯ ಫಲವನು ಕೊಡುವನಿಲ್ಲದೆ
ಅರಮರೆ ಇಲ್ಲಿದಕೆ ಎಂದಿಗು
ಮೊರೆವ ನಾನಾ ವಾದ್ಯ ರಭಸ ವಿ
ಸ್ತರಿಸ ಬಲ್ಲೆನೆ ನೂತನೂತನಾ ೧೨

ರಥದ ಸಂಭ್ರಮವಾರು ಬಲ್ಲರು
ಪ್ರತಿಗಾಣೆ ಈ ಪೃಥ್ವಿಯೊಳಗೆ ಅ
ಪ್ರತಿ ಸಾಹಸಮಲ್ಲ ತನ್ನಯ
ಸತಿಯೊಡನೆ ಪರುಠವಿಸಿ ಪೊಳೆವುತ್ತ
ಚತುರ ಬೀದಿಯ ಸುತ್ತಿ ಸುಮನಸ
ತತಿಯ ಸಂಗಡ ಬರುವ ಭರ ಉ
ನ್ನತವ ಗುಣಿಸುತ್ತ ನಲಿನಲಿದು ಅ
ಚ್ಯುತನ ಕ್ರೀಡೆಯ ಸ್ಮರಿಸಿ ನಮೋ ಎಂಬೆ ೧೩

ರಾಜರಾಜೇಶ್ವರ ನಿರಂತರ
ರಾಜಿಸುತಿಪ್ಪ ಬಗೆಬಗೆ ಸಂಪೂಜೆಯಲಿ ರಾಜೋಪಚಾರದಿ
ಮೂಜಗದೊಳು ಈ ನಿಧಿಯಲಿದ್ದ
ಸೋಜಿಗವೆ ಮತ್ತೆಲ್ಲಿಯಿಲ್ಲವು
ರಾಜಶೇಖರ ಬಲ್ಲವನೊಬ್ಬನೆ
ಮಾಜದಲೆ ಸಜ್ಜನರು ಸತ್ಕರ್ಮ
ಬೀಜಮಂದಿ ಮಾಡಿಬಿಡಲೆ ೧೪

ದರ ಸುದರಶನ ಪಾಣಿ ತನ್ನ ಸಂ
ದರುಶನವೆಮಗಿತ್ತು ಘನ ಆ
ದರ ಪಾಲಿಸಿ ಸಂಚಿತಗಾಮಿ

ಪರಿಸಿ ಪ್ರಾರಬ್ಧವೇ ತೀರಿಸಿ
ಕರುಣದಿಂದಲಿ ದಿವ್ಯರೂಪದ
ಗುರುತು ತೋರುವ ಅಂತರಂಗದಿ
ಪರಮಪಾವನ ವಿಜಯವಿಠ್ಠಲ
ಪೊರೆವ ಪ್ರೀತಿಲಿ ಬಂದು ಮರಿಯದೆ ೧೫

೧೧೦

ಪಾಲಿಸೊ ಶ್ರೀನಿವಾಸ ಪಾಲಿಸೊ ಶ್ರೀನಿವಾಸ
ಪಾಲಾಬ್ಧಿಶಯನ ಕಾಪಾಲಿಯ ಕಾಯ್ದ ಗೋ
ಪಾಲ ಹರಿ ವಿಶ್ವರೂಪ ಲೋಕಾಧೀಶ
ಪಾಲಯವಾಗೆನ್ನ ಪಾಲಿಲಿದ್ದ ಶಿಶುಪಾಲಕ ಎನ್ನ ಕಾಯನ್ನಾ ಪ

ಮನೆ ನಿನಗಾಗಿ ದೇಹಾ ಸುಮ್ಮನೆ ಪೇಳುವುದಿಲ್ಲ ಹ
ಮ್ಮನೆ ಬಿಡಿಸುವುದು ಘಮ್ಮನೆ ಬಂದು ಒಲಿದು ನಿ
ಮ್ಮನೆ ಭಕ್ತರ ಕೂಡ ನೆಮ್ಮನೆ ಕೊಟ್ಟ ಬಲನ ತ
ಮ್ಮನೆ ನಡಿಸುವುದು ತಿಮ್ಮನೆ ಅಜಿತಾನಂತ ನಾ
ಮನೆ ನಾನೆಂಬದರ ಮನೆಯಲ್ಲಿ
ಸಾರ್ವಭೌಮನೆಯಾಗಿ ಪುಟ್ಟಿ ಭೀ
ಮನೆ ಗುರು ನಿತ್ಯಾ ಸಮನೆ ಎಂದು ಪೇಳಿದಾ
ಮನೆಯಲ್ಲಿ ಇಡು ಮಾಮನೆಯುಳ್ಳಾ ಮಹಿಮನೆ ವೆಂಕಟೇಶಾ ೧

ಮನ ದುರ್ವಿಷಯಕೆ ಗಮನವಾಗಿ ಪೋಗುತಿದೆ
ಮನಸಿಜ ಜನಕ ಕರುಣಿಸಿ ಅಧಮನ ಕಾಯಬೇಕು
ಕಾಮನ ಸಂಬಂಧವುಪಶಮನ ಮಾಡು ಬೇಗ ಸುಧಾ
ಮನ ಮಿತ್ರ ಪವಿತ್ರ ಸುಮ್ಮನಸಕೊಡಿಯಾ ವಾ
ಮನ ಮೂರುತಿಯೆ ಮನಸಂಹಾರ ಬಮ್ಮನ ಬಿಡಿಸಿದಾ ಹಿ
ಮನ ಭಾವನೆ ನಿನ್ನ ಮನನಾದಿ ದಿನಯಸ್ತ
ಮಾನ ಪರಿಯಂತ ನೇಮನ ಚಿಂತಿಸುವಂತೆ ೨

ಜನನ ಮರಣ ಶೂನ್ಯಾ ಜನಕಾದ್ಯನಂತಗಂಗ
ಜನಕಾಯಿದಾನಾದಿ ದೈವ ಅ
ಜನನಯ್ಯ ಸ್ವರ್ಣ ಕಾಯಂ ಜಿನೆ ಪುತ್ರಪ್ರಿಯ್ಯಾ ದುಷ್ಟ
ಜನಮರ್ದನಾ ಬಲು ಯೋಜನ ಮೆರೆವ ದೇವ ಸು
ಜನಪಾಲ ಗುಣಶೀಲಾ ಜನುಮ ಜನುಮಕ್ಕು –
ಜನಮತಿ ಕಳೆದು ರಂ
ಜನವಾದಾ ಜ್ಞಾನ ಪುಂಜಿನ ಮಾಡು ದನುಜ ಭಂ
ಜನ ಅತಿ ಭೋಜನ ವಿಜಯವಿಠ್ಠಲ
ನಿರಂಜನ ನಿರ್ಮಳ ಅಂಜನ ಗಿರಿವಾಸಾ ೩

೧೧೧

ಬಲ್ಲವಾಗಿಲ್ಲೆ ಪರಮಾತ್ಮಾ
ಎಲ್ಲೆಲ್ಲಿ ನೋಡಿದರು ಅಲ್ಲಲ್ಲಿ ಇರುತಿಪ್ಪ ಪ

ನೋಡಿದವೆಲ್ಲ ಶ್ರೀಹರಿಯ ಪ್ರತಿಮೆಗಳೆಂದು
ಆಡಿದವೆಲ್ಲ ಹರಿಯ ರೂಪವೆಂದು
ಮಾಡಿದದ್ದೆಲ್ಲ ಶ್ರೀಹರಿಯ ಸೇವೆ ಎಂದು
ಕೂಡಿದದ್ದೆಲ್ಲ ಹರಿ ಭಕ್ತರೆಂದು ೧

ತಾಪತ್ರಯಗಳೆಲ್ಲ ಮಹಾ ತಪಸು ಎಂದು
ರೂಪಗಳೆಲ್ಲ ಹರಿಕಾಂತಿ ಎಂದು
ಪೋಪದು ಬರುವುದೆಲ್ಲ
ವ್ಯಾಪಾರ ಹರಿ ಅಧೀನವೆಂದು ೨

ತಾರತಮ್ಯಕಿದು ಪರಲೋಕದಿ ಸರಿಯಿಲ್ಲ
ಸಿರಿ ಹರಿಯದೊರೆ ತನಗೆ ಎಂದೆನುತಾ
ಇರುಳು ಹಗಲು ಏಕ ಭಕ್ತಿಯಿಂದಲಿ ನಿತ್ಯ ಕಾಲಕಾಲಕೆ
ಹರಿಯ ವ್ಯಾಪಾರ ಸ್ಮರಿಸುತ್ತ ಓಡ್ಯಾಡುತ ೩

ಒಲಿಸಿ ಒಲಿಸಿ ಒಲಿದು ಒಲಿದು
ಖಳರೊಳಗಾಡದಲೆ ವಿಜಯವಿಠ್ಠಲ ವೆಂಕಟ
ಶೈಲ ನಿವಾಸಾ ಸರ್ವೋತ್ತಮನೆ ಗತಿ ಎಂದು ೫

೧೧೨

ಬಾ ಬಾ ಭಕುತರ ಹೃದಯ ಮಂದಿರ
ಬಾ ಬಾ ಜಗದೋದ್ಧಾರ ಪ

ಬಾ ಬಾ ವೇಂಕಟಾಚಲ ವಿಹಾರ
ಬಾ ಬಾನೇಕಾವತಾರ ಧೀರ–ಶೂರ ಅ.ಪ.

ದಕ್ಷ ಕಮಲಾಕ್ಷ ರಾಕ್ಷಸ ಕುಲ ಶಿಕ್ಷ
ಲಕ್ಷ್ಮಣನಗ್ರಜ ಲಕ್ಷ್ಮೀವಕ್ಷ
ಪಕ್ಷಿವಾಹನ ಪೂರ್ಣಲಕ್ಷಣ ಸರ್ವೇಶ
ಮೋಕ್ಷದಾಯಕ ಪಾಂಡವ ಪಕ್ಷ
ಅಕ್ಷಯವಂತ ಸೂಕ್ಷ್ಮಾಂಬರ ಧರಾ–
ಧ್ಯಕ್ಷ ಪ್ರತ್ಯಕ್ಷದ ದೈವ
ಅಕ್ಷತನಾರೇರ ತಕ್ಷಣದಲಿ ತಂದ
ಅಕ್ಷರ ಪುರುಷ ಗೋವಿಂದ ೧

ಜಾಂಬೂನಾದಾಂಬರ ಸಾಂಬಜನಕ–ನೀ
ಲಾಂಬುದ ವರ್ಣಸುಪೂರ್ಣ
ಸಾಂಬವಿನುತ ಸುಗುಣಾಂಬುಧಿ ನಾನಾ ವಿ
ಡಂಬನ ತೋರಿದ ಮಹಿಮ
ಕಾಂಬುವೆ ನಿನ್ನ ಚರಣಾಂಬುಜ ಮನದೊಳು
ಜಾಂಬುವಂತನ ಪರಿಪಾಲಾ ವಿ–
ಶ್ವಂಭರಂಬರಗ್ಗಣಿಯ ಪಡೆದ ವೃ–
ತ್ತುಂಬರೇಶಾಂಬುಧಿ ಶಾಯಿ ೨

ತಾಳ ಜಾಗಟೆ ಮದ್ದಳೆ ದುಂದುಭಿ ಭೇರಿ
ಕಾಳೆ ಹೆಗ್ಗಾಳೆ ತಮ್ಮಟೆ ನಿ–
ಸ್ಸಾಳೆ ಪಟಹ ತಂಬೂರಿ ಪಣವ ಕಂಸಾಳೆ
ಕಂಬುಡಿಕ್ಕಿ ವಾದ್ಯ
ಸೂಳೈಸುತಲಿರೆ ಭಾಗವತರು ಸಂ
ಮೇಳದಿ ಕುಣಿದೊಲಿದಾಡೆ
ಸಾಲುಪಂಜಿನ ಗುಂಜಿ ಛತ್ರ ಚಾಮರ ಧ್ವಜ
ಢಾಲುಗಳು ಒಪ್ಪಿರಲು ೩

ಹಂಸವಾಹನ ಕ್ರತುಧ್ವಂಸಿ ಸುಮನಸೋ
ತ್ತಂಸ ಕೃಶಾನು ಪಾಪಿಗಳ
ಹಿಂಸೆಯ ಗೊಳಿಸುವ ಪಾಂಸರಕ್ಕಸಪಾಳಿ
ಕೌಂಶಿಕಾಪತಿಯು ಧನವ
ಅಂಶಮಾಲಿ ಸೋಮಕಂಶಿಕಮುನಿ ಪರಮ
ಹಂಸರು ಅಲ್ಲಲ್ಲಿ ನಿಂದು
ಸಂಶಯ ಮಾಡದೆ ಸಮ್ಮೊಗರಾಗಿಹರು
ಕಂಸಾರಿ ತ್ರಿಗುಣಾತೀಶ ೪

ಮೂರು ನಾಮಂಗಳ ಧರಿಸಿದ ದಾಸರು
ವೀರ ಮಾರುತಿ ಮತದವರು
ಸಾರುತ್ತ ಬೊಮ್ಮಾದಿ ಸುರರುಗಳನ್ನು
ತಾರತಮ್ಯದಿಂದ ತಿಳಿದು
ಬಾರಿಬಾರಿಗೆ ನಿಮ್ಮ ಹಾರೈಸಿ ಆನಂದ
ವಾರಿಧಿಯಲಿ ಮಗ್ನರಾಗಿ
ತಾರರು ಮನಸಿಗೆ ಮುರಡು ದೇವತೆಗಳ
ಸಾರ ಹೃದಯರು ನಿಂದಿಹರು ೫

ಅಂದು ಬಲೀಂದ್ರನ್ನ ದ್ವಾರದಿ ನೀನಿರೆ
ಮಂದಮತಿಯು ರಾವಣನು
ಬಂದು ಕೆಣಕೆ ನಗುತ ಮಹಾಲೀಲೆ
ಯಿಂದಲಿ ನೀನಾ ಖಳನ

ಒಂದು ಶತಯೋಜನ ತಡಮಾಡದಲೆ ನೀ
ಹಿಂದಕ್ಕೆ ಬೆರಳಲ್ಲಿ ಒಗೆದೆ
ಇಂದು ನಿನಗೆ ಈ ರಥವ ನಡೆಸುವುದು
ಅಂದವಾಗಿಹುದೇನೊ ದೇವ ೬

ಬಂಗಾರ ರಥದೊಳು ಶೃಂಗಾರವಾದ ಶ್ರೀ
ಮಂಗಳಾಂಗ ಕಳಿಂಗ
ಭಂಗ ನರಸಿಂಗ ಅಂಗಜ ಜನಕ ಸಾ-
ರಂಗ ರಥಾಂಗ ಪಾಣಿ
ಸಂಗ ನಿಸ್ಸಂಗ ಮಾತಂಗ ವಿಹಂಗ ಪ್ಲ-
ವಂಗ ನಾಯಕ ಪರಿಪಾಲ
ಸಂಗೀತ ಲೋಲ ಗೋಪಾಂಗನೆಯರ ಅಂತ-
ರಂಗ ಸಂತಾಪ ವಿದೂರ ೭

ತಡಮಾಡಲಾಗದೊ ಪೊಡವೀಶ ನೀನಿಂದು
ತಡೆಯದಲೆ ಪೊರಟರೆ
ತಡೆವರಿನ್ನಾರೈಯ ವಡೆಯ ವೇದವೇದ್ಯ
ಕಡೆಗಣ್ಣಿನಿಂದ ನೋಡಿದಲೆ
ನಡೆವುದು ನುಡಿವುದು ಅಡಿಗಡಿಗೆ ನೀನು
ಬಿಡದೆ ಒಳಗೆ ಹೊರಗಿದ್ದು
ಸಡಗರ ದೈವವೆ ನುಡಿಯ ಲಾಲಿಸುವುದು
ವಡನೊಡನೆ ಪಾಲಿಸುತ್ತ ೮

ಹತ್ತವತಾರದ ಹರಿಯೆ ಘನಸಿರಿಯೆ
ಮತ್ತೊಬ್ಬರನು ಹೀಗೆ ಕರೆಯೆ
ಭೃತ್ಯರ ಸಂಗಡೋಡ್ಯಾಡುವ ದೊರೆಯೆ ಎ-
ನ್ನತ್ತಿಲಿ ಆಡುವ ಮರಿಯೆ
ಚಿತ್ತದೊಲ್ಲಭ ನಮ್ಮ ವಿಜಯವಿಠ್ಠಲರೇಯ
ಎತ್ತನೋಡಲು ನಿನಗೆ ಸರಿಯೆ
ಅತ್ತಿತ್ತ ಪೋಗದೆ ಇತ್ತ ಬಾರೈಯ ಎ-
ನ್ನತ್ತಿಲಿ ವೆಂಕಟದೊರೆಯ ೯

೧೧೩

ಬಾರಯ್ಯ ತಿಮ್ಮಯ್ಯಾ ತೋರಯ್ಯಾ ಮುಖವನು ।
ತಾರಯ್ಯಾ ಒಂದು ಚುಂಬನ ಕರುಣ ।
ಬೀರಯ್ಯಾ ನಮ್ಮ ವಶಕೆ ಪ

ಶೋಭಾನೆ ॥ ನಿಲ್ಲು ನಿಲ್ಲೆಲೊ ದೇವಾ ।
ಎಲ್ಲಿ ಪೋಗುವಾ ನೀನು ಸಲ್ಲದು ನಿನ್ನ ಚೋರಂಗ
ಲೀಲಿಗೆ ಪಳ್ಳಿಸೋಕುದೆ ಇಲ್ಲ ಇಲ್ಲದೆ ೨

ನೀರೊಳು ಈಸುವ ನಾರಿಯೆರ ಶೀರೇ
ಹಾರಿಸಿ ವೈದು ಮರನೇರಿ । ಹಾರಿಸಿ ಮರನೇರಿದ ಸಣ್ಣ ।
ಪೋರ ಬುದ್ಧಿಗಳ ಬಿಡವಲ್ಲಿ ೩

ತುರುಕರಗಳ ಕಾಯ್ದು । ಚರಿಸಿದೆ ಅಡವಿಯ ।
ಪರಸತಿಯರ ವ್ರತಗಳ । ಪರಸತಿಯರ ವ್ರತಗಳ ಕೆಡಿಸಿದ ।
ಪರಮಾತ್ಮನಿಗೆ ಎಣೆಯುಂಟೆ ೪

ಕೇಸಕ್ಕಿ ತಿರುಮಲ ಲೇಸಯ್ಯಾ ನಿನ್ನ ಗುಣ ।
ಕಾಸುಕಾಸಿಗೆ ಬಿಡದಲೆ । ಕಾಸುಕಾಸಿಗೆ ಬಿಡದೆ ।
ಬಡ್ಡಿಕೊಂಬ ಆಶೆಗಾರನು ಬಹು ಸೂರಾಳೊ ೫

ಅಣಕವಾಡಲಿ ಬೇಡ ಕೆಣಕಿದರೆ ನಿನ್ನ ।
ಹೊಣಿಕೆ ಹಾಕುವೆ ಹಿಡತಂದು ।
ಹೊಣಿಕೆಹಾಕುವೆ ಹಿಡತಂದು ಎನ್ನಯ ।
ಮನವೆ ನಿನ್ನಯ ಚರಣಕ್ಕೆ ಶೋಭಾನೆ ೬

ಬೆಟ್ಟದ ಕೊನೆ ಏರಿ ಎಷ್ಟು ದೂರ ಓಡೀ ।
ಗಟ್ಯಾಗಿ ನಿನ್ನ ಚರಣದ । ಗಟ್ಯಾಗಿ ನಿನ್ನ ಚರಣದ ಕೊನಿಯ ಉಂ
ಗುಷ್ಟ ಕಚ್ಚದಲೆ ಬಿಡೆ ನಾನು ೭

ಹಿಂದೆ ಯಾರು ಏನು ತಂದು ಕೊಟ್ಟರೋ ನಿನಗೆ ।
ಇಂದು ನಾನೇನು ಕೊಡಲಿಲ್ಲ ।
ಇಂದು ನಾನೇನು ಕೊಡಲಿಲ್ಲವೆಲೋ ತಂದೆ ।
ಕಣ್ಣಿರದು ನೋಡೊ ಕಮಲಾಕ್ಷ । ಶೋಭಾನೆ ೮

ಭಕ್ತನ ನುಡಿಕೇಳಿ ಚಕ್ಕನೆ ಬಿಗಿದಪ್ಪಿ ।
ತೆಕ್ಕಿಸಿದಾ ವಿಜಯವಿಠ್ಠಲ ಎನ್ನ
ಅಕ್ಕರವೆಲ್ಲ ತೀರಿಸಿದಾ । ಶೋಭಾನೆ ೯

೧೧೪

ಬಾರಯ್ಯ ಶ್ರೀನಿವಾಸ ಭಕ್ತರ ಬಳಿಗೆ ಪ

ತೋರಯ್ಯ ನಿನ್ನ ದಯ ತೋಯಜಾಂಬಕನೆ ಅ.ಪ.

ದುರುಳರ ತರಿವಂಥ ವರಚಕ್ರಧಾರಿ
ಪರಮಾತ್ಮ ಪರಬೊಮ್ಮ ಪರರಿಗುಪಕಾರಿ ೧

ಅರಣ್ಯದಿ ಮೊರೆಯಿಟ್ಟು ಕರಿರಾಜಗೊಲಿದಿ
ತರಳ ಪ್ರಹ್ಲಾದನ್ನ ವೈರಿಯ ಮುರದಿ ೨

ವರ ಷೋಡಶ ಗಿರಿಯಲ್ಲಿ ನಿರುತ ನೀನಿರುವಿ
ಹರಿದಾಸರು ಕರೆದರೆ ಎಲ್ಲಿದ್ದರೆ ಬರುವಿ ೩

ಅನಂತನಾಮನೆ ನಿನ್ನ ಅನಂತ ಸದ್ಗುಣವ
ನೆನೆವರಿಗೊಲಿವಂಥ ಪವಮಾನನೀಶಾ ೪

ಅಜಭವಾಧಿಪ ನೀನು ವಿಜಯಸಾರಥಿಯೇ
ತ್ರಿಜಗವಂದಿತ ಈಶ ವಿಜಯವಿಠ್ಠಲನೇ ೫

೧೧೫

ಬಾರೋ ಮನೆಗೆ ಬಾರೋ ವೆಂಕಟರಮಣಾ ಪ

ಕಂಸಾಸುರಮರ್ದನನೆ ಬಾರೊ ।
ಕೌಶಿಕಯಜ್ಞಪ ಬಾರೊ ।
ಹಂಸಡಿಬಿಕನಂತಕ ಬಾರೊ ।
ಹಂಸವಾಹನನ ಪಿತನೆ ಬಾರೊ ೧

ಸಾಸಿರ ಮುಖನ ಪೆತ್ತವನೆ ಬಾರೊ ।
ಸಾಸಿರ ಗಣ್ಣಿನ ಅನುಜ ಬಾರೊ ।
ಸಾಸಿರ ವದನ ಶಯನ ಬಾರೊ ।
ಭೂಸುರರಿಗೆ ಪ್ರಿಯನೆ ಬಾರೊ ೨

ವಾರಿಧಿಯೊಳು ಪೊಕ್ಕವನೆ ಬಾರೊ ।
ವಾರಿಧಿಯ ಮಾನಭಂಗನೆ ಬಾರೊ ।
ವಾರಿಧಿಸುತೆಯ ಪಡೆದ ಕರುಣಾ – ।
ವಾರಿಧಿ ಸಿರಿ ವಿಜಯವಿಠ್ಠಲ ಬಾರೊ ೩

೧೧೬

ಬೇಡುವೆ ಇದನಾ ಜೀಯ್ಯಾ ವೆಂಕಟಾರಾಯ
ಮಾಡು ಕರುಣವ ಫಲದಾಯ ಪ

ಯತಿರತುನತಿ ದಶಮತಿ ಮತದಲಿ ಸ
ನ್ನತಿ ಹಿತ ಭಕುತಿಲಿ ಪ್ರತಿದಿನ ಸ
ದ್ಗತಿ ಪಥ ಚತುರತೆ ತತುವೇಷ ತತಿಸಮ್ಮತ
ಹಿತವಾಗಿಪ್ಪ ಸುಖಮತಿಯನೀಯೋ ೧

ಬಲಬಲ ಬಲರಿಪು ವೊಲಿದೊಲಿದು ಗಿರಿಯಲಿ
ಬಲುವೊಲಿಮೆಲಿ ವೊಲಿಸಬಾರದೇ

ಕಳವಳಿಸಲು ಬಲಗುಂದಿ ನಲವು ನಿ
ಶ್ಚಲವಾಗಿ ಬಲವಾಗಿ ಗಿರಿಯೆಳದೆಲೊ ಸಲಹಿದಿ ೨

ತ್ರಿಜಗವೀರ ಧ್ವಜ ಸುಜನರ ನಿಜಪದ
ರಜರಜವಾದರು ಭಜಿಸುವ ಸರ್ವದ
ವ್ರಜಗಳ ಸಂಗ ದ್ವಿಜನರವಿ ಈ ಮತದಿ
ಸೃಜಿಸುವದು ಸಿರಿ ವಿಜಯವಿಠ್ಠಲರೇಯಾ ೩

೧೧೭

ಭಕ್ತಜನ ಸಂರಕ್ಷಣ ಪ

ಭಕ್ತಜನ ಸಂರಕ್ಷ ಭವದುರಿತ ಸಂಹಾರಿ
ಭಕ್ತರಾ ಸುರಧೇನು – ತರುವೆ ಚಿಂತಾಮಣಿಯೆ
ಭಕ್ತರಾಧೀನನೆಂಬುವ ಬಿರುದು ಅನುಗಾಲ
ಪೊತ್ತ ತಿಮ್ಮಪ್ಪ ಏಳೊ ಅ.ಪ.

ಅಂಬರವು ತಾಂಬ್ರಮಯವಾಗೆ ಗರುಡಾಗ್ರಜನು
ಇಂಬಿನಲಿ ತಲೆದೋರೆ ಕಿರಣಗಳು ಹರಹಿದುವು
ಅಂಬುಜ ವಿರೋಧಿ ಕಳೆಗುಂದಿ
ತಾರಾ ನಿಕರವಂಬರದಿ ರೂಹುಮಾಸೆ
ಕುಂಭಿಣಿಯ ಮುಸುಕಿರ್ದ ಕತ್ತಲೆ ಪರಿದು ಪೋಗೆ
ಅಂಬುಜದಳಕ್ಕೆ ಮರಿದುಂಬಿಗಳು ಎರಗಿದವು
ತಾಂಬ್ರ ಚೂಡವು ಧ್ವನಿಮಾಡಿ ಕೂಗಿತು
ಸರಸಿಜಾಂಬಕ ಮಂಚದಿಂದೇಳೊ ೧

ಉದಯ ಪರ್ವತಕೆ ರಥನೂಕಿದನು ಮಾರ್ತಾಂಡ
ಉದಧಿತೆರೆ ತಗ್ಗಿದುವು ಉರಗ ಪೆಡೆಯೆತ್ತಿದನು
ಗದಗದನೆ ನಡುಗಿ ದಾನವರು
ಭಯದಿಂದ ಅಡಗಿದರು ದಶದಿಕ್ಕಿನೊಳಗೆ

ತ್ರಿದಶರಬ್ಬರಿಸಿ ಆನಕ ದುಂದುಭೀ ಶಂಖ
ಧಂ ಧಂ ಧಣಾ ಸರಿಗಮಪದನೀ ಯೆಂದೆನುತ
ವದರುತ್ತ ಸುಮವರ್ಷವನು ಸುರಿಸಿ
ತುರೆಸಿದರು ಸದಮಲಾನಂದ ತಿಮ್ಮಾ ೨

ನಾರಿಯರು ಬಂದು ಅಂಗಳ ಬಳಿದು ಗಂಧದಾ
ಸಾರಣಿಯದೆಳೆದು ಮುತ್ತಿನ ರಂಗವಾಲೆ ವಿ-
ಸ್ತಾರದಿಂದಲಿ ಪಂಚವರ್ಣಿಗೆಯ
ನಿಟ್ಟು ಹೊಸತೋರಣ ಮಕರ ಕನ್ನಡಿ
ದ್ವಾರದಲಿ ಬಿಗಿದರ್ಥಿಯಲಿ ಗೊಲ್ಲ ಕಟ್ಟಿಗೇ-
ಕಾರ ಪರಿವಾರದವರೆಲ್ಲ ವೊಪ್ಪುತಿದಾರೆ
ದ್ವಾರಕರು ಸಾರಿದರು ಭಟರು
ಹೊಗಳಿದರು ಕಂಸಾರಿ ಕೋನೇರಿವಾಸ ೩

ನೃತ್ಯಗಾರರು ಬಂದು ತತ್ಥಿಗಿಣಿ ತಕ್ಥೈಯ
ತಿತ್ತಿರಿ ಮೃದಂಗ ಜೊತೆ ತಪ್ಪದಂದದಿ ತಾಳ
ಬತ್ತೀಸರಾಗದಲಿ ಎತ್ತಿ ಧ್ವನಿತೋರುತ್ತ ನೃತ್ಯ ಪಾಡುತ್ತ ಕುಣಿಯೆ
ಮುತ್ತೈದೆಯರು ಬಂದು ಮುತ್ತಿನಾರತಿ ಪಿಡಿದು
ಮಿತ್ರಭಾವದಿ ನಿಮ್ಮ ಅಡಿಗಳಿಗೆ ಹರಿವಾಣ
ಎತ್ತುವೆವು ಎಂದೆನುತ ಕಾದು ನಿಂದೈದಿ
ನೋಡುತ್ತಿದಾರೆ ಸರ್ವೇಶ ೪

ಕಾದೋದಂ ವಿಮಲ ಕಮ್ಮೆಣ್ಣಿ ಕಸ್ತೂರಿ
ಸ್ವಾದು ಜವ್ವಾಜಿ ಚಂದನ ಗಂಧ ದ್ರವ್ಯಗಳ
ಆದರಿಸಿ ಪಿಡಿದ ದರ್ಪಣ ಹೇಮ ಗದ್ದುಗೆಯ
ಪಾದುಕಾ ಪಟ್ಟುವಸನ
ಈ ಧರೆಯ ಮೇಲಿರ್ದ ಉಡಿಗೆ ತೊಡಿಗೆಯು ಕರ್ಪು
ರಾದಿ ತಾಂಬೂಲ ನಿರ್ಮಲ ದಾದಿಯರು ಪಿಡಿದು
ಕಾದು ನಿಂದೈದಾರೆ ಹೊನ್ನ ಬಾಗಿಲ
ಮುಂದೆ ಆದಿಹರಿ ಪರಮಪುರುಷ ೫

ದಂಡಿಗೆ ಶಂಖತಾಳ ತಂಬೂರಿ ಜಾಂಗಟೆಯ
ಗೊಂಡು ನಿನ್ನಯ ಪರಮ ಪ್ರೀತ್ಯರ್ಥ ದಾಸರು
ಹಿಂಡು ಹಿಂಡಾಗಿ ಸಮ್ಮೊಗವಾಗಿ ನಿಂದು
ಬೊಮ್ಮಾಂಡ ಕಟಹ ಬಿಚ್ಚುವಂತೆ
ತಂಡ ತಂಡದಿ ಗೆಜ್ಜೆಕಟ್ಟಿ ಅಭಿನಯ ತಿರುಹಿ
ಕೊಂಡಾಡೆ ಶಬ್ದ ಪ್ರತಿ ಶಬ್ದವಾಗುತಿದೆ ಭೂ-
ಮಂಡಲಾದೊಳಗೆ ಈ ಸೊಬಗು
ಬಲ್ಲವರಾರು ಕುಂಡಲಗಿರಿವಾಸ ತಿಮ್ಮಾ ೬

ಗೋತ್ರಾರಿ ಹರಿಧರ್ಮ ಪುಣ್ಯಜನಪನು ವರುಣ
ವೀತಿಹೋತ್ರನ ಸಖನು ಯಕ್ಷೇಶ ಕೈಲಾಸ-
ಪತಿ ಸೂರ್ಯ ಅತ್ರಿ ನಂದನರು ವಾಹನವೇರಿ
ಚಿತ್ತದಲಿ ಮುಖ್ಯರಾದ
ಮೈತ್ರಾವರುಣಿ ಜಾಮದಗ್ನಿ ಕಶ್ಯಪ ವಿಶ್ವ -
ಮಿತ್ರ ಸನಕಾದಿಗಳು ನಾರದರೆ ಮೊದಲಾಗಿ
ಸ್ತೋತ್ರವನು ಮಾಡುತಲಿದ್ದಾರೆ ಲಕ್ಷ್ಮೀಕಳತ್ರ ಜಗದ್ಭರ್ತ ತಿಮ್ಮಾ ೭

ನಿಚ್ಚ ಏಳುವ ಸಮಯ ಮೀರಿತೋ ಇಂದೀಗ
ಎಚ್ಚರಿಕೆ ಪುಟ್ಟದೇ ಎಲೋ ದೇವ ಶ್ರೀದೇವಿ
ಮೆಚ್ಚುಗೊಳಿಸುತ್ತ ಬಿಗಿದಪ್ಪಿ ರತಿಕ್ರೀಡೆಯಲಿ
ಮೆಚ್ಚಿಸಿದ ಮಹಸರಸವೆ
ಮುಚ್ಚಟೆಯಿದೇಂ ತಿಳಿಯಲಾಗದೆ ಸ್ವಾಮಿ
ಕಚ್ಚಿತನ ಸೊಲ್ಲು ಕರ್ಣಕೆ ಬೀಳದಾಯಿತೆ
ಹೆಚ್ಚಿನಾ ಪದವಿ ಮತ್ತೇನು ಬಂದಿತೊ
ಕಾಣೆ ಸಚ್ಚಿದಾನಂದಾತ್ಮಕ ೮

ನಿದ್ರೆಗೆವೆ ಹಾಕದಿರೊ ನೀರೊಳಗೆ ನೀನಿರೊ ಉ-
ಪದ್ರ ಭೂಮಿಗೆ ಕಳೆಯೊ ಕಶ್ಯಪನ ಸುತನಳಿಯೊ ಸ-
ಮುದ್ರ ರಾಣಿಯ ಪಡೆಯೊ ರಾಯರಾಯರ
ತಡೆಯೊ ಮುದ್ರೆ ಭೂಮಿಜೆಗೆ ಕಳುಹೊ
ಅದ್ರಿಯುದ್ಧರಿಸೊ ಮುಪ್ಪುರವ ಸಂಪರಿಸೊ ಕಲಿ-
ಕ್ಷುದ್ರ ಕಳೆ ನಿದ್ರೆ ಸಾಕೆಂದು ಶುಕ್ತಿ ಸಾರುತಿದೆ
ಭದ್ರಮೂರತಿ ವಿಜಯವಿಠ್ಠಲ
ವೆಂಕಟಕಾದ್ರವೇಯ ಹಾಸಿಗೆಯಿಂದೇಳು ೯

೧೧೮

ಭಜಿಸಿದ್ಯಾ । ವೆಂಕಟನಾ ನೀ । ಭಜಿಸಿದ್ಯಾ ಪ

ಭಜಿಸಿದ್ಯ ಈ ಭಾಗ್ಯನಿಧಿಯ । ನೋಡು ।
ತ್ರಿಜಗವಂದಿತ ಗುಣಾಂಬುಧಿಯಾ ॥ಆಹ॥
ಸುಜನರ ಹೃದಯ ಪಂಕಜ ಕರ್ಣಿಕೆ ವಾಸ ।
ಅಜ ಸುರಾರ್ಚಿತ ಪಾದರಜ ತಮದೂರನ್ನ ಅ.ಪ.

ಮಣಿಮಯ ಖಚಿತ ಕಿರೀಟ ಚಂದ್ರ
ಮನ ಸೋಲಿಸುವ ಸುಲಲಾಟ । ಚನ್ನ ।
ಫಣಿಗೆ ಕಸ್ತೂರಿನಾಮ ಮಾಟ । ನ
ಮ್ಮನು ಪಾಲಿಸುವ ವಾರೆನೋಟ ।ಆಹ।
ಕನಕ ಮೋಹನ ಕುಂಡಲಾ ಕರ್ಣ
ಮಿನುಗುವ ಕದವು ಆವಿನ ಸೋಲಿಪ ನಿತ್ಯಾ ೧

ಭೃಂಗಕುಂತಳ ನೀಲಕೇಶ । ಹುಬ್ಬು ।
ಅಂಗಜ ಚಾಪ ವಿಲಾಸ । ಉ ।
ತ್ತುಂಗ ಚಂಪಕ ಕೋಶನಾಸ । ರಸ

ರಂಗು ತುಟಿ ಮಂದಹಾಸ ॥ ಆಹ ॥
ತಿಂಗಳು ಯೆಳೆ ಬೆಳದಿಂಗಳು ಮೀರಿ ಭೂ
ಮಂಗಳ ಕೃತಿ ತಿರುವೆಂಗಳ ಸ್ವಾಮಿಯ ೨

ಪರಿಮಳವೀಳ್ಯ ಕರ್ಪೂರ । ಇಟ್ಟು ।
ಕರಡಿಕೆ ಬಾಯ ಮಧುರ । ವಾಣಿ
ಸ್ವರನಾದ ಜಲಧಿ ಗಂಭೀರ । ದಂತ
ಪರಿಪಙ್ಕ್ತಿಸಮ ವಿಸ್ತಾರ ॥ಆಹ ॥
ಮಿನುಗುವನಂತ ಚಂದಿರ ತೇಜಾಧಿಕ ಮುಖ
ಪರಿಪರಿ ವೇದ ಉಚ್ಚರಿಸುವ ಚತುರಾರ ೩

ಬಕುಳಾರವಿಂದ ಮಲ್ಲೀಗೆ । ಅದು ।
ಕುರುವಕ ಪನ್ನೀರು ಸಂಪಿಗೆ ।
ಭೂಚಂಪಕ ಜಾಜಿ ಯಿರುವಂತಿಗೆ ।
ಪೂಕೇತಕಿ ಮರುಗ ಶಾವಂತಿಗೆ ॥ಆಹ॥
ಸಕಲ ಪೂತರುವಿರೆ ವಿಕಸಿತ ಮುಕುಳಿತ
ಮಕರಂದ ಮೊರದ್ವಂದ್ವ ಕಸ್ತೂರಿಯ ನಿಂದು ೪

ಕರತಾಳರೇಖೋಪರೇಖ । ಕಾಂತಿ ।
ಅರುಣಸಾರಥಿ ಮಯೂಖ । ಬೇರೆ ।
ಪರಿ ಶೊಭಿತ ಹಸ್ತ ಶಂಖ । ಗದೆ ।
ಧರಿಸಿದ ಚಕ್ರ ನಿಶ್ಶಂಕ ॥ ಆಹ ।
ಸರಿಗೆ ಕೌಸ್ತುಭಮಣಿ ಸಿರಿವತ್ಸವನ ಮಾಲೆ
ಉರ ವೈಜಯಂತಿ ಮಂಜರಹೀರ ಹಾರನ್ನ ೫

ಕಡಗ ಕಂಕಣ ಮುದ್ರೆ ಬೆರಳ । ಪಾಣಿ ।
ನಿಡಿತೋಳ ಕಕುಭುಜಿ ಕೊರಳ ಸ್ಕಂಧ
ವಿಡಿ ಸಪ್ತವರಣ ವಿಸರಳ । ಬೆನ್ನು ।
ಮುಡಿಯವಿಟ್ಟ ಮಣಿಹವಳ ॥ಆಹ ।

ಝುಡಿತದ ಪವಳ ವಡಸೀದ ಕೇಯೂರ
ವಡನೆ ಕಾಯಿಕ ಕೀರ್ತಿ ವಡಲೀಲಿ ಮೆರೆವನ್ನ ೬

ಮುತ್ತು ವೈಢೂರ್ಯ ಪ್ರವಾಳ । ಪಚ್ಚೆ ।
ಕೆತ್ತಿದ ಪದಕನ್ಯಾವಳ ಸುತ್ತ
ಸುತ್ತಿದ ಸನ್ಮುಡಿವಾಳ । ಇತ್ತ
ತುತಿಪ ಜನಕೆ ಜೀವಾಳ ॥ಆಹ ॥
ಪ್ರತ್ಯೇಕವಾಗಿ ತೂಗುತ್ತಿಹ ಸರಗಳ
ಸುತ್ತುಲಸಿಯ ಮಾಲೆ ಚಿತ್ರವಾಗಿರೆ ಬಹಳ ೭

ಪುಣುಗು ಕೇಸರಿ ಅಂಬರ । ಗೋರೋ
ಚನ ನಖಚಂದ ನಗಾರು । ಪೆಚ್ಚಿ ।
ತೆನೆ ಮೃಗನಾಭಿ ಪನ್ನೀರ । ವೆಳ ।
ಘನಪರಿಮಳ ಗಂಧಸಾರ ॥ಆಹ ॥
ತನುವಿಗೆ ತನುವು ಲೇಪನವಾದ
ಸೊಗಸು ಸಲಿಸುತ್ತ ಒಪ್ಪುವ ಘನರುಹ ತ್ರಿವಳಿಯಾ ೮

ತ್ರಿವಳಿ ಉಪಗೂಢ ಜಠರ । ಅಖಿ ।
ಳಾವನೀ ಧರಿಸಿದಾ ಧೀರಾ । ಮೇಲೆ ।
ಸುವರ್ಣ ಕುಸುಮ ಮಂದಿರಾ ।
ಮೃಗದೇವ ಉಡಿನಡು ಧಾರಾ ॥ಆಹ ॥
ಭಾವ ಕಿಂಕಿಣಿ ತೋಳಲಿವಾಸನಾ ಬಿರು
ದಾವಳಿಕೊಂಡರು ದೈತ್ಯಾವಳಿ ಹಾರನ್ನಾ ೯

ಊರು ಜಾನು ಜಂಘ ಗುಲ್ಫ । ವಿ
ಚಾರ ಶಕ್ರ ಮಾತು ಅಲ್ಪ । ಎನ್ನ
ತೋರುನೆಯ ಅಗ್ರ ಸ್ವಲ್ಪ । ಗುಣ ।
ಸಾರಮಾಡಿಪ್ಪ ಸಂಕಲ್ಪ ॥ಆಹ ॥
ವಾರಣಕರದಂತೆ ಹಾರೈಸು ಈ ತನೂ
ಪುರ ಕಡಗಾ ಗೆಜ್ಜೆ ಚಾರುಚರಣ ಪೆಂಡ್ಯಾ ೧೦

ಮನು ಶಶೀವರ್ಣ ಪಾದ । ಪಾಪ
ಕಾನನ ದಹಿಸುವ ಪಾದ । ಕಾಮ
ಧೇನು ಚಿಂತಾಮಣಿ ಪಾದ । ಬಹು
ಜ್ಞಾನಾನಂದಪ್ರದ ಪಾದ ॥ಆಹಾ॥
ಅನಂತ ಚಿನ್ಮಯ ಒಮ್ಮೆ ನೀನೇ ಗತಿಯೆಂಬ
ಮಾನವಗೆ ಬಂದು ಕಾಣಿಸಿಕೊಂಬನ ೧೧

ಮೃದುತಾಳಾಂಗುಲಿನಿಸಿ ಭಾಸ । ರಕ್ತ
ಪದತಳ ಧ್ವಜ ವಜ್ರಾಂಕುಶ । ಚಕ್ರ
ಪದುಮ ಚಿಹ್ನೆ । ನಿರ್ದೋಷ ।
ಸುಧಿ ಸುಧ ಕಥಾಪಾಠ ಸರಸ ॥ಆಹ॥
ತ್ರಿದಶನಾಯಕ ಶಿವ ವಿಧಿಗಮುಗುಟ
ಪಾದದಲಿ ಸಮರ್ಥವಾದರು ನೋಡು ತರುವಾಯ ೧೨

ಆಪದ್ರಕ್ಷಕ ಸುರಾಧ್ಯಕ್ಷ । ಜಗ ।
ದ್ವ್ಯಾಪಕ ಕರುಣಾಕಟಾಕ್ಷ । ಜಾಗ್ರತ್ ।
ಸ್ವಪ್ನದಲಿ ನೀನೆ ದಕ್ಷಾ । ನಗೆ ।
ಆಪನ್ನರಿಗೆ ನೀನೆ ವೃಕ್ಷಾ ॥ಆಹ ॥
ರೂಪರೂಪಾಂತರ ವ್ಯಾಪಾರ ಮಾಳ್ಪನ್ನ
ಆಪಾದ ಮೌಳಿ ಪರಿಯಂತರ ನೀನು ೧೩

ಹಿಂದಾಣ ಅನುಭವ ಧಾನ್ಯ । ಲೋಹ ।
ತಂದು ಸಂಪಾದಿಸೋ ಜ್ಞಾನ । ಭಕ್ತಿ ।
ಯಿಂದ ಮುಂದಕೆ ನಿಧಾನ । ಚಿತ್ತ ।
ಯಿಂದು ಕೊಂಡಾಡೋ ಮುನ್ನೀನ ॥ಆಹ॥
ಬಂಧನ ಹರಿಸಿ ಆನಂದಾವ ಕೊಡುವ ಮು–
ಕುಂದ ಅನಿಮಿತ್ತ ಬಂಧು ವೆಂಕಟನಾ ನೀ ೧೪

ಭುಜಗಾದ್ರಿ ನಿಲಯ ಗೋಪಾಲ । ನಿತ್ಯ ।
ಭಜಿಸುವ ಜನರಿಗೆ ನೀಲ । ಪುಣ್ಯ ।
ವ್ರಜವ ಪಾಲಿಸುವ ವಿಶಾಲ । ವಿತ್ತು ।
ನಿಜದೊಳಗಿಡುವ ಈ ಕೋಲ ॥ಆಹ॥
ವ್ರಜದಲ್ಲಿ ಪುಟ್ಟಿದ ಸುಜನಾರಾಂಬುಧಿ ಸೋಮ ।
ವಿಜಯವಿಠ್ಠಲರೇಯ ಗಜರಾಜವರದನ್ನ ೧೫

೧೧೯

ಭಳಿರೆ ತಿರುಪತಿ ತಿಮ್ಮಾ ।
ಛಲ ಮಾಡುವ ಲೀಲೆಗಳರಿನ್ನಾರನು ಕಾಣೆನೊ ।
ಇಳಿಯೊಳಗೆ ಬಿರಿದು ಸಲ್ಲುವದು ನಿಜ ಭಕ್ತವ ।
ತ್ಸಲನೆಂಬೊ ನಾಮವನು ಧ್ವಜವೆತ್ತಿ ಮೆರವುವದೊ ಪ

ಅತಿಶ್ರೇಷ್ಠನಾಗಿ ಕೀರ್ತಿ ಪಡೆದು ಪಸರಿಸಿ ।
ಪ್ರತಿಯಿಲ್ಲ ಎನಿಸಿಕೊಂಬೆ ನಾ ।
ಸತತವನು ಪರರಾಶೆ ಮಾಡದಲೆ ।
ಚತುರತನ ಚತುರೋಪಾಯದಿ ಬಾಳುವೆ ।
ಕ್ಷಿತಿಯೊಳಗೆ ಅಭಿಮಾನ ಕ್ಷಿತಿಯಾಗದಂತೆ ಸು ।
ಮತಿಗಳಿಂದಲಿ ಬದುಕುವೆ । ಸುತ ಸಹೋದರ ನಡುವೆ ।
ಲತೆವೊಲು ಬೆಳದು ಬಲು ।
ಅತುಳ ಬಲವಂತನೆನೆಸುವೆನೆಂದು ಇದ್ದೆನಲ್ಲನೆ ೧

ಜಡದೇಹವನು ಮೆಚ್ಚಿ ಮುಪ್ಪು ದೂರೆಂತೆಂದು ।
ಕಡು ಸಾಹಸವ ತಾಳಿದೇ ಒಡಿಯರಾರೆನಗಿಲ್ಲ ಒಬ್ಬರಿಗೆ ।
ಒಡಿಯನೆಂದು ಎಡೆಎಡೆಗೆ ಪೇಳಿಕೊಂಬೆ ।
ಮಡಗಿ ಧನವನು ಧರ್ಮ ಕೊಡದತೀ ಕೃಪಣನಾಗಿ ।
ಅಡಿಗಡಿಗೆ ಉಬ್ಬೈಸುವೆ ।
ಪಡವೆ ಸಂಸಾರವೆಂಬೊ ಅಹಂಕಾರವನು ತಾಳಿ ।
ಎಡಹಿ ಮುಂಗಾಣದ ಅಧಮನಂತೆ ಇದ್ದೆನಲ್ಲದೆ ೨

ಪುರುಷ ಪಟಾಂತ್ರದವನಾಗಿ ಎಲ್ಲ । ಧಿಕ್ಕರಿಸಿ ನಿರಾಕರಿಸುವೆ ।
ಜರೆದು ನಿಷ್ಕರುಣದಲಿ । ವರ ಅಭ್ಯಾಗತಿಗಳನು ।
ಪುರುಳಗೆಡಿಸಿ ನೋಡುವೆ ।
ಗುರು ಹಿರಿಯರನು ಮರುಗುವಂತೆ ಕೇಡು ನುಡಿದು ಉ ।
ತ್ತರ ಅನುತ್ತರನಾಡುವೆ ।
ಪರಿಪರಿಯ ಮಾಯದ ಶರಧಿಯೊಳು ಬಿದ್ದು ಲಜ್ಜೆ
ಉರಿಯೊಳಗೆ ಪೊಕ್ಕಂತೆ ಮರುಗುತ್ತಿದ್ದನಲ್ಲವೆ ೩

ಅಪರಾಧವೇನಯ್ಯಾ ವಿಪರೀತ ತೋರದೆ । ಅ ।
ಪರಿಮಿತ ಪರಮಹಿಮನೆ ।
ಕಪಟ ನಾಟಕನೆಂಬ ಪೆಸರುಂಟು ಮಡದಿ ।
ಉಪಕಾರಕ್ಕಪಕಾರವೊ ।
ಚಪಳನಜಮಿಳಗಂದು ಮತಿಸುಳೂದಿಂದಲಿ ।
ನಿಪುಣತನವಿರಲಿಲ್ಲವೊ । ಸಪುತೆರಡು
ಲೋಕದೊಳಗಾನೆಂದು ಇದ್ದೆನಿಲ್ಲವೊ ।
ವಿಪುಳ ವೈಕುಂಠ ತೊಲಗಿಸದೆ ಸುಮ್ಮನಿರಬಲ್ಲನೆ ೪

ಪರದೈವ ನಾನೆಂದು ಪೇಳುವರ ಗಂಡನೆ ।
ಸರಿಗಾಣೆ ಈ ಮಹಿಯೊಳು ।
ಕರುಣದಳತಿಯಲಿ ಕಿಂಕರರ ಪತಿ ।
ಕರಿಸಿ ನಿಜಕರವ ಪಿಡಿಯಾಡದೆ ।
ಹರಸುರಪ ಪರಮೇಷ್ಠಿ ನರ
ಹರಿದು ತಲ್ಲಣಿಸಿ ನೆರದು ಭೀಕರಗೊಂಬರು ।
ಪರಮಾಣು ರೂಪ ಭಕ್ತರ ಪರುಶ ।
ಸಿರಿ ವಿಜಯವಿಠ್ಠಲ ವರ ವೆಂಕಟನೆ । ಶರಣಜನ ಪರಿವಾರ ೫

೧೨೦

ರಥವನೇರಿದ ರಥಗಾತ್ರ ಪಾಣಿ ।
ರಥಪತಿ ದಶರಥ ಸುತ ದಶರಥ ನೃಪ ಭಾಗೀ ।
ರಥಿ ವಿನುತಾ ಸು । ರಥನಯ್ಯ ಮನೋರಥ ದೇವ ಪ

ಸುರಪಥ ಪಿತಾ ಕರಿ ಭಯಂಕ
ಹರ ಹರಿಣಾಂಕಾ ।
ಕಿರಣಶತ ಧಿಕ್ಕರಿಸುವ ದೇವಾ ॥
ವರಮಣಿ ಭಕ್ತ ವರದಾಯುದಧಿ ತುರಗವು ।
ಪರತರ ತಮ ತರರಸ ।
ಪರಮ ಮಂಗಳ ಪುರುಷ ಪ್ರಧಾನಂ ।
ತರ ಪ್ರವಿಷ್ಠ ಭಾ ।
ಸುರ ಕೀರ್ತಿಹರ ನಿರುತ ಪ್ರದರು ಸುರಪತಿ ೧

ಮಣಿಪ್ರಚುರ ಮುತ್ತಿನ ಮುಕುಟ ಸು ।
ಫಣಿ ಕಸ್ತೂರಿ ಕಂಕಣ ಕೇಯೂರ ಕಾಂ।
ಚನ ಸರಿಗೆಯು ಘನ ಶ್ರೀ ವತ್ಸಲಾಂಛನ
ಕೌಸ್ತುಭ ಸೂರ್ಯನಗೆಲ್ಲೆ ।
ವನಮಾಲೆ ಹರಿಮಣಿ ಪದಕ ಪಾ ।
ವನ ಪೀತಾಂಬರ ಮಿನಗುವ ಕಾಂಚಿ ।
ಝುಣ ಝುಣ ಮಹಾ ।
ಧ್ವನಿ ಚರಣ ಭೂಷಣವಾಗಿಯೂ ಮಾ ।
ನಿನಿ ಕೂಡಾ ೨

ಎತ್ತಿದ ಶ್ವೇತಾತಪತ್ರ ಚಾಮೀಕರ ।
ಸತ್ತಿಗೆ ಪತಾಕಿ ವಿತ್ತ ನೋಡಿದರಾಗತ್ತಾ ನಭ ತುಳುಕುತ್ತಲಿರೆ ಧ್ವಜ ।
ಮಾತ್ರ ಬಂದಾಗಿ ತೂಗುತ್ತಿರಲು ।
ಸುತ್ತಲು ಊದುವ ತುತ್ತುರಿ ಶಂಖ ।
ವತ್ತಿ ಬಾರಿಸುವ ಮತ್ತೆ ವಾದ್ಯಗಳು ।

ತುತ್ತಿಸುವ ಮುನಿ ।
ಉತ್ತಮ ಜನ ಬಾ ।
ಗುತ್ತ ವಡನೆ ಬರುತಿರಲು ೩

ವಸು ರುದ್ರಾದಿತ್ಯ ವಸುಜನರ ಪಾ ।
ಲಿಸುವೆನೆಂದು ದರಶನವು ಸರಸಿಜಗದಾಧರಿಸಿಕೊಂಡು ಅಷ್ಟ
ರಸ ನಾಮಕ ಹರುಷದಿಂದ ।
ನಸುನಗುತ ನೀಕ್ಷಿಸಿಕೊಳುಂತ ಆ ।
ಲಸ ಮಾಡದೆ ರಂ ।
ಜಿಸುವ ಲೀಲಾಮಾನಸ ವಿಗ್ರಹ ಮೆ ।
ಚ್ಚಿಸಿದ ಜನರ ।
ವಶವಾಗಿಪ್ಪ ರಾಕ್ಷಸ ರಿಪು ೪

ದಯ ವನಧಿ ಚಿನ್ಮಯ ಉ ।
ಭಯಾ ಭಯ ಹಾರೆ । ಪಯೋವಾರಿ ನಿಧಿ ।
ಶಯನ ಚತುರ್ಬೀದಿಯಲಿ ತಿರುಗಿ ।
ಪ್ರೀಯದಿಂದಲಿ ಸ ।
ತ್ಕಿಯವಂತ ಜಯ ಜಯ ಪ್ರದಾ ।
ಜಯಾ ರಮಣ ವಿಜಯ ಸಾರಥಿ ನಿ ।
ರಯ ವಿದೂರ ವಿಜಯವಿಠ್ಠಲ ಸಾ ।
ಹಾಯವಾಗುವ ಗಿರಿಯ ವೆಂಕಟರಾಯ ಬಂದಾ ೫

೧೨೧

ವಿಗ್ರಹವನು ನಿಲಿಸೊ ವೆಂಕಟ ಗಗ– ಪ

ನಾಗ್ರಕ್ಕೆ ಬೆಳೆದು ಗಂಗೆಯ ಪಡೆವ ನಿನ್ನ ಅ.ಪ.

ರನ್ನದ ಮಕುಟ ಸುವರ್ಣ ಕುಂಡಲ ತೇಜ
ಚೆನ್ನ ಗಂಡಸ್ಥಳದಿ ತೂಗಿ ಪೊಳೆವ ನಿನ್ನ ೧

ಕೊರಳ ತ್ರಿರೇಖೆಯು ಉರು ಕೌಸ್ತುಭಹಾರ
ಉರದಲ್ಲಿ ಶ್ರೀ ವತ್ಸಧರಿಸಿ ಮೆರೆವ ನಿನ್ನ ೨

ಕುಕ್ಷಿಯೊಳಗೆ ಲಕ್ಷ ಲೋಕವನಡಗಿಸಿ ಅ-
ಪೇಕ್ಷೆಯಿಂ ಸುಜನರ ರಕ್ಷಿಸುವ ನಿನ್ನ ೩

ನಖದೊಳನಂತ ಬ್ರಹ್ಮಾಂಡವನಡಗಿಸಿ
ಮಕ್ಕಳಾಟಿಕೆಯಂತೆ ಮರುಳುಮಾಡುವ ನಿನ್ನ ೪

ಉತ್ಪತ್ತಿ ಸ್ಥಿತಿ ಲಯ ಕಾರಣಕರ್ತ, ಜ-
ಗತ್ಪತಿ ವಿಜಯವಿಠ್ಠಲ ವೆಂಕಟ ೫

೧೨೨

ವೆಂಕಟ ಬಾರೋ ರಿಪುಸಂಕಟ ಬಾರೊ
ಕಿಂಕರಿಗೊಲಿದ ನಿಶ್ಶಂಕ ಬಾರೋ ಪ

ಪೊಂದೇರಿನೊಳಗೆ ಭೂಮಿ ಇಂದಿರೆಗೂಡಿ
ಚೆಂದದಿಂದಲೊಪ್ಪುತಿಹ ಇಂದುವದನ
ಮಂದರೋದ್ಧಾರನೆ ಮಹಾನಂದ ಮೂರುತಿ
ವೃಂದಾರಕ ವಂದ್ಯ ಪಾದ ವಂದಿಪನೆಂದು ೧

ಲೌಕೀಕ ವಿಲಕ್ಷಣ ಅನೇಕ ಏಕ
ಸಾಕಾರ ವಿಗ್ರಹ ಪುಣ್ಯಶ್ಲೋಕ ವಿಭುವೆ
ಪ್ರಾಕೃತ ರಹಿತಗಾತ್ರ ಲೋಕಪಾವನ
ಶೋಕ ಮೂಲ ನಾಶನ ವಿಶೋಕ ಜನಕ ೨

ಅಂಗ ಅಂಗೀ ಭಾವದಿಂದ ಅಂಗದೊಳಿದ್ದು
ಸಂಗಡ ತಿರುಗುವೊ ನೀಲಾಂಗ ನಿಸ್ಸಂಗ
ಡಿಂಗರಿಗ ಹೃತ್ಕಮಲ ಭೃಂಗ ಜಗದಂತ-
ರಂಗ ರಂಗರಾಜ ಸುಖಸಂಗ ಅನಂಗ ೩

ಆಪ್ತಕಾಮ ಅಮೃತಾಂಗ ಗುಪ್ತಮಹಿಮ
ತಪ್ತಕಾಂಚನ ಸನ್ನಿಭ ವ್ಯಾಪ್ತ ನಿತ್ಯಾ
ತೃಪ್ತ ತೃಣ ಬೊಮ್ಮಾದಿ ನಿರ್ಲಿಪ್ತವಾಸ
ಸಪ್ತ ಸಪ್ತ ಲೋಕೇಶ ಅತೃಪ್ತ ಲೀಲ ೪

ಆಗಮ ನಿಗಮಖಣಿ ಅಗಣಿತ ಬಂಧು
ಅಗನಾಗ ಧಾರಕನೆ ನಾಗ ಭಂಜನ
ಆಗಸದಂಗಾಂಗುಷ್ಟದಿಂದ ಪೆತ್ತನೆ
ಆಗಲೀಗಲೆನ್ನದಲೆ ಸಾಗಿ ಬೇಗದಿ ೫

ನಿರ್ದೋಷ ವಸ್ತು ನೀನೆಂದು ನಿರ್ಧಾರ ಮಾಡೆ
ಪೊದ್ದಿಪ್ಪವು ನಿನ್ನಲಿ ನಾಲ್ಕು ನಿರ್ದೋಷಂಗಳು
ಭದ್ರ ಫಲದಾಯಕ ಸಮುದ್ರಶಯನ
ಮಧ್ಯಜೀವಿ ವಂದ್ಯ ಸುಪ್ರಸನ್ನ ಮೋಹನ್ನ ೬

ಜೀವಾಭಿಮಾನಿ ಗಿರೀಶ ದೇವ ದೇವೇಶ
ಜೀವರಾಶಿಗಳ ಸ್ವಾಭಾವ ಪ್ರೇರಕ
ಜೀವನನಾಗಿ ನಮ್ಮ ಕಾವುತಲಿಪ್ಪ ರಾ–
ಜೀವ ನಯನ ವಿಜಯ ವಿಠ್ಠಲ ಪೂರ್ಣ ೭

೧೨೩

ವೆಂಕಟಾಚಲ ನಿಲಯ ಪಿಡಿಯೆನ್ನ ಕೈಯ
ಪಂಕಜಾಲಯ ಸುಪ್ರೀಯ ಪ

ಪಂಕಜಭವ ಅಹಿ ಕಂಕಣನುತ ಪದ–
ಪಂಕಜ ತೋರೊ ಮೀನಾಂಕನ ಜನಕ ಅ.ಪ.

ಪತಿತ ಪಾವನ ಮೋಹನ, ಪಾಲಿಸೊ ಎನ್ನ
ಸತತ ಬಿಡದೆ ನೋಡೆನ್ನ

ಹಿತರಹಿತರಾದವರನ್ನ ಪೊರೆದಳಿದೆ ಘನ್ನ
ನತಜನರಿಗೆ ಪ್ರಸನ್ನ
ಕ್ರತುಭುಜ ದಿತಿಸುತ ತತಿಸಂಗತಿಯಲಿ
ಮಥಿಸಲು ವನಧಿಯ ಅತಿ ಸಮ್ಮತಿಯಲಿ
ಚತುರ ಧರಿಸಿ ಪರ್ವತ ಸುರತತಿಗ–
ಮೃತ ವುಣಿಸಿದ ಶಾಶ್ವತಗತಿನಾಥ ೧

ಸತಿಯ ಕಾಯಿದ ವಿನೋದ ಸಾಮಜವರದ
ಚತುರದಶ ಲೋಕಾಧಿನಾಥ
ಗತಿ ನೀನೆ ಮಹಾಪ್ರಸಾದ ಪರಮಮೋದ
ಅತಿಶಯದಿ ಪೊಳೆವ ಪಾದ
ಶತಪತ್ರವು ಹೃದ್ಗತವಾಗಲಿ ಉ–
ನ್ನತ ಮಹಿಮನೆ ಕೀರುತಿವಂತನೆ ಅ–
ಪ್ರತಿಭಾರತಮಲ್ಲ ಮೂರವತಾರಗೆ
ಅತಿಪ್ರಿಯನೆನಿಪ ಮೂರತಿ ಚತುರದೇವ ೨

ಸ್ಥಿತ ಮನ ಮಾಡೋ ಭವಭಂಗ ಸಂಗ ನಿಸ್ಸಂಗ
ಚ್ಯುತಿ ದೂರ ಶೌರೀ ಕಾಳಿಂಗ–
ಮಥನ– ದುರಿತ ಮಾತಂಗ–ಮರಿಗೆ ಸಿಂಗ
ತುತಿಪೆ ಕರುಣಾಂತರಂಗ
ಕ್ಷಿತಿಯೊಳಗಹಿ ಪರ್ವತನಿವಾಸನೆ
ಖರೆಗೊಳಿಸುವ ದುರ್ಮತಿಯನು ತೊಲಗಿಸಿ
ತ್ವತು ಪಾದದಲಿಡು ಮತಿಯಲ್ಲದೆ ತಿರು –
ಪತಿ ವಿಜಯವಿಠ್ಠಲ ಇತರವನರಿಯೆ ೩

೧೨೪

ವೆಂಕಟಾಚಲನಿಲಯಾ ಎನ್ನ ಒಡೆಯ ಪ

ವೆಂಕಟಾಚಲನಿಲಯಾ ವಿಧಾತೃಸಂತರೊಡೆಯಾ ।
ಪಂಕಜಮುಖಿ ರಮಣ ಪಾವನಚರಣಾ ಅ.ಪ.

ಉದಯವಾಗದ ಮುನ್ನ ಉದರ ಪೋಷಣೆ ಚಿಂತೆ ।
ಅದರ ಮೇಲೆ ಧಾನ್ಯ ಧನದ ಚಿಂತೆ ॥
ಮದನ ಯೌವನದ ಚಿಂತೆ ಮತ್ತೆ ಸತ್ವದ ಚಿಂತೆ ।
ಹೃದಯದಲಿ ನಿಮ್ಮ ಚಿಂತೆಯನು ಮಾಡದಲೆ ಕೆಟ್ಟೆ ೧

ಮಂದಗಮನೆಯರಾಶೆ ಮೇದಿನಿ ಆಳುವ ಆಶೆ ।
ನಂದನರ ಆಶೆ ನಾನಾ ಆಶೆಯು ॥
ಬಂಧುಬಳಗದ ಆಶೆ ಭಾಗ್ಯವುಳ್ಳವನಾಶೆ ।
ಒಂದು ದಿನ ನಿಮ್ಮಾಶೆಯನು ಮಾಡದಲೆ ಕೆಟ್ಟೆ ೨

ಎದುರುಯಿಲ್ಲವೆಂಬೊ ಗರ್ವ ಎದೆಯ ಬಿಗುವಿನ ಗರ್ವ ।
ವದನನಿಷ್ಠುರ ಗರ್ವ ವಿದ್ಯ ಗರ್ವವು ॥
ಉದಧಿಶಯನ ನಮ್ಮ ವಿಜಯವಿಠ್ಠಲರೇಯಾ ।
ಮದ ಗರ್ವದಿಂದ ನಿನ್ನ ನೆನಹು ಮಾಡದೆ ಕೆಟ್ಟೆ ೩

೧೨೫

ವೆಂಕಟಾಚಲನೆ ಬಾರೊ ಶಂಕರಾಭರಣ ಶಾಯಿ ।
ಕಿಂಕರರಿಗೊಲಿದ ನಿಃಶಂಕ ಬಾರೊ ಪ

ಪೊಂದೇರಿನೊಳಗೆ ಭೂಮಿ ಇಂದಿರೆ ಕೂಡ ।
ಚಂದದಿಂದಲೊಪ್ಪುತಿಹ ಇಂದುವದನಾ ॥
ಮಂದರೋದ್ಧಾರನೆ ಮಹನಂದ ಮೂರುತಿ ।
ವೃಂದಾರಕ ವಂದ್ಯಪಾಲ ವಂದಿಪೆ ನಿಂದು ೧

ಲೌಕಿಕ ವಿಲಕ್ಷಣ ಅನೇಕ ಏಕಾ ।
ಸಾಕಾರ ವಿಗ್ರಹ ಪುಣ್ಯಶ್ಲೋಕ ವಿಭುವೆ ॥
ಪ್ರಾಕೃತ ರಹಿತಗಾತ್ರ ಲೋಕಪಾವನ ।
ಶೋಕ ಮೂಲನಾಶನ ಅಶೋಕ ಜನಕಾ ೨

ಆಗಮ ಮಣಿ ಕಣಿಯೆ ಅಗಣಿತ ಬಂಧು ।
ಆಗನಾಗಧಾರಕನೆ ನಾಗ ಭಂಜನಾ ॥
ಆಕಾಶ ಗಂಗೆಯ ಅಂಗುಷ್ಟದಿ ಪೆತ್ತನೆ ।
ಆಗಲೀಗಲೆನ್ನದಲೆ ಸಾಗಿ ವೇಗದಿ ೩

ಅಂಗ ಅಂಗಿ ಭಾವದಿಂದ ಅಂಗದೊಳಿದ್ದು ।
ಸಂಗಡ ತಿರುಗುವ ನೀಲಾಂಗ ನಿಃಸಂಗಾ ॥
ಡಿಂಗರಿಗೆ ಹೃತ್ಕಮಲ ಭೃಂಗ ಜಗದಂತ ।
ರಂಗ ರಂಗರಾಜ ಸುಖಸಂಗ ನಿಸ್ಸಂಗಾ ೪

ಆಪ್ತಕಾಮಿ ಅಮೃತಾಂಗ ಗುಪ್ತ ಮಹಿಮ ।
ತಪ್ತ ಕಾಂಚನ ಸನ್ನಿಭ ವ್ಯಾಪ್ತ ನಿತ್ಯಾ ॥
ತೃಪ್ತ ತೃಣ ಬೊಮ್ಮದಿ ನಿರ್ಲಿಪ್ತ ವ್ಯಾಪ್ತಾ ।
ಸಪ್ತ ಸಪ್ತ ಲೋಕೇಶ ಅತೃಪ್ತ ಲೀಲಾ ೫

ನಿರ್ದೋಷ ವಸ್ತುವಿನಿಂದ ನಿರ್ಧರ ಮಾಡೆ ।
ಪೊಂದಿಪ್ಪವು ನಿನ್ನಲಿ ನಾಲ್ಕು ನಿರ್ದೋಷಂಗಳೂ ॥
ಭದ್ರ ಫಲದಾಯಕ ಸಮುದ್ರಶಯನಾ ।
ಮಧ್ಯಜೀವಿ ವಂದ್ಯ ಸುಪ್ರಸಿದ್ಧ ಮೋಹನ ೬

ಜೀವಾಭಿಮಾನಿ ಗಿರೀಶ ದೇವ ದೇವೇಶಾ ।
ಜೀವ ರಾಶಿಗಳ ಸ್ವಭಾವ ಪ್ರೇರಕಾ ॥
ಜೀವನವಾಗಿ ನಮ್ಮನು ಕಾವುತಿಪ್ಪ ।
ರಾಜೀವ ನಯನ ವಿಜಯವಿಠ್ಠಲ ಪೂರ್ಣಾ ೭

೧೨೬

ವೆಂಕಟಾಚಲ ಪಂಕಜ ಪತಿ ।
ಪಂಕಜ ಸಖ ಸಂಕಾಶಾನೇಕಾ ।
ಸಂಕಟಳಿದು ನಿಃಶಂಕನ ಮಾಡೊ ।
ಅಂಕೆಯವನೆಂದು ॥ ಪ

ಬಂದೆ ಎದುರಿಲಿ ನಿಂದೆ ಸಿರಬಾಗಿ ।
ಒಂದೆ ವಂದನೆಯೆಂದೆ ಲೋಕದ ತಂದೆ ಮನಸಿಗೆ ।
ತಂದೆ ನಿನಗ ಇಂದೆ ಅಂದದನು ।
ಹಿಂದೆ ಯೆಸಗಿದ ದ್ವಂದ್ವ ಪಾಪಕೆ ಒಂದೆ ನಿನ್ನಂಘ್ರಿ ।
ಸಂದೇ ನಾರದೆ ಮುಂದೆ ಬಾರದೆ
ಎಂದೆಗೆಂದಿಗೆ ಮುಂದೆ ಜನನಗಳು ೧

ನೋಡು ಎನ್ನ ಕೂಡಾಡು ದಯವನ್ನು ।
ಮಾಡು ಮುದದಿಂದಲಾಡು ಮಾತನು । ನೀಡು ಕರುಣವ ।
ಜೋಡು ತೊಡುವೆನು ಮೂಢನೆಂದೆನದೆ
ಹೋಡುಗಾರರು ಬೀಡಿನೊಳಗಿದ್ದು ।
ಕಾಡುವದು ನಾನಾಡಲೇನು ।
ಈಡು ನಿನಗೆಲ್ಲಿ ನಾಡೊಳು ಕಾಣೆ ಮೂಡಲಾದ್ರಿ ನಿಲಯಾ ೨

ಸಾರಿದೆನೊ ಮನಸಾರ ನಿನ್ನಂಘ್ರಿ ಸಾರಾ।
ಸಾರವೆಂಬದಾಸಾರವನು ನೂಕಿ ।
ಸಾರ ಹೃದಯರ ಸಾಲೆಲಿರಸೆನ್ನ ।
ಸಾರೆಗರೆಯೊ ಕಂಸಾರಿ ಪ್ರತಿದಿನ । ಸಾರಥಿಯಾಗೊ ಸಾರಿಸಾರಿಗೆ ।
ಸಾರಬೋಕ್ತಾ ವಿಜಯವಿಠ್ಠಲ ಕೆಲಸಾರದೆ ಸಾರಲಿರೊ ೩

೧೨೭

ವೆಂಕಟೇಶ ಜಗದೀಶ । ವೆಂಕಟೇಶ ॥
ವೆಂಕಟೇಶ ಜಗದೀಶ ಸದರುಶನ ।
ಶಂಖಪಾಣಿ ಅಕಳಂಕ ಚರಿತಾ ಪ

ನಭಾಸ್ಥಾನನರಸಿಜನಾಭ ಭಜಕರ ಸು ।
ಲಭಾ ವಸುಧಾ ಶ್ರೀ ದುರ್ಗಾವ ।

ಲ್ಲಭಾ ಭಸುಮಾಸುರನ ಕೊಂದು ಭಸ್ಮ
ಭೂಷಣನ ಪಾಲಿಸಿದ ಪಾವನಕಾಯ ।
ವಿಷವಕ್ಷಜದ ಅಸುರೆಯ ಮಡುಹಿ
ದಾಸರುಗಳ ಕಾಹುವ ಶೇಷಭೂಷಾ ೧

ದತ್ತ ವೈಕುಂಠ ಮಹಿದಾಸ ಹಯಗ್ರೀವ ಹಂಸಾ ।
ಸತ್ಯಪತಿ ಸೂನು ತಾಪಸಾ । ಚಿತ್ತಜಪಿತ ದೇವೋತ್ತಮ ಆಗಮಾ ।
ಸ್ತೋತ್ರವಿನುತ ಜಗವ ಸುತ್ತಿಪ್ಪ ಸುರಗಂಗೆ । ಪೆತ್ತೆ ಮಂದರಗಿರಿ ।
ಪೊತ್ತನೆ ಅಮರರ । ವಿತ್ತ ಸಂಪತ್ತು ಇತ್ತಾ ೨

ಅಜಿತ ನಾರಾಯಣಾ ವಿಷ್ವಕ್ಸೇನ । ಗಜವರದ ಹರಿವಿದ್ಧಾನು ।
ಸುಜನಪಾಲ ಪಂಕಜದಳ ಲೋಚನ ।
ತ್ರಿಜಗದ್ದೈವವೆ ದನುಜಕುಲ ಮರ್ದನ ।
ಅಜಕಾನನ ವಾಸ ವಿಜಯವಿಠ್ಠಲ ರವಿತೇಜ ವಿದ್ವದ್ ರಾಜಾ ೩

೧೨೮

ವೆಂಕಟೇಶನ ನಂಬಿರೊ ನೀವೆಲ್ಲರೂ । ವೆಂಕಟೇಶನ ನಂಬಿರೋ ॥
ವೆಂಕಟೇಶನ ನಂಬಿ । ಮಂಕುಜನರೆ ನಿಮ್ಮ ।
ಸಂಕಟ ಪರಿಹರಿಸಿ ತ । ನ್ನಂಕಿತವ ನೀವ ಪ

ಗುಣ ಒಂದು ನೋಡಿದಿಯಾ ಅಜಮಿಳ ।
ಗುಣವೇನು ಮಾಡಿದನು ।
ಗುಣ ಶಿರೋಮಣಿ ಮ । ರಣ ಬಂದಾಗ ಸ್ಮ ।
ರಣೆ ಇತ್ತು ಅವನ ನಿ । ರ್ವಾಣಕ್ಕೆ ಕರಿಸಿದಾ ೧

ಕುಲ ಒಂದು ನೋಡಿದಿಯಾ । ವಿದುರ ತಾನು
ಕುಲದಲ್ಯಾತರವನು ।

ಕುಲಶಿಖಾಮಣಿ ।
ನಿಳಗೆ ಪೋಗಿ ಕುಡತಿ ಪಾಲಿಗೆ ಅವನಿಗೊಲಿದು ನಿ ।
ಶ್ಚಲ ಭಾಗ್ಯವನಿತ್ತ ೨

ಗುಣ ಒಂದು ನೋಡಿದಿಯಾ । ವಾಲ್ಮೀಕಿ ।
ಗಣದ ಕೂಟದವನೆ ।
ಅಣೋರಣಿ ದೇವ ಕ । ರುಣ ಮಾಡಿ ಅವಗೆ ಚ ।
ರಣವನ್ನು ತೋರಿ ಆ । ಕ್ಷಣದಲ್ಲಿ ಸಾಕೀದ ೩

ಪತಿವ್ರತರ ನೋಡಿದಿಯಾ । ಗೋಪಿಯರು
ಪತಿ ಧರ್ಮದಲ್ಲಿ ಇದ್ದರೇ ।
ಪತಿತಪಾವನ ಸಂಗತಿಯಲ್ಲಿ ಆ ನಾರಿಯರಿಗೆ ।
ಅತಿಶಯವಾದ ಸದ್ಗತಿಯ ಕರುಣಿಸಿದ ೪

ಗುಣಿ ಕುಲ ಗಣ ಮಿಕ್ಕಾದ ವ್ರತಂಗಳು ।
ದಣಿದು ಮಾಡಲಿಬೇಡಿರೊ ।
ಬಣಗುದೈವದ ಗಂಡ ವಿಜಯವಿಠ್ಠಲನ್ನ ।
ಮನದೊಳು ನೆನೆದರೆ ನೆನೆಸಿದ ಫಲನೀವಾ ೫

೧೨೯

ವೆಂಕಟೇಶನೆ ಬಲ್ಲ ಪರಮ ಪಾತಕೀಯಾ ।
ಕಿನ್ನೇಶ ಮುನಿದು ಬಂದೇನು ಮಾಡುವನು ಪ

ಚಿತ್ತದೊಲ್ಲಭನ ಸಮ್ಮತದಲ್ಲಿ ನಾರಿಯು ।
ಅತ್ತವಿತ್ತ ಊರು ಸುತ್ತುತಿರಲು ।
ಸುತ್ತಯಿದ್ದ ಬಂಧು ಬಳಗದವರು ಕೂಡಿ ।
ಮುತ್ತಿಕೊಂಡು ಅವಳನೇನು ಮಾಡುವರು ೧

ಕದ್ದು ತಂದಾ ಒಡವೆ ರಾಜ್ಯವಾಳುವನಿಗೆ ।
ತಿದ್ದುವಾ ಸರಿಪಾಲು ಲಂಚಕೊಟ್ಟು ।
ಇದ್ದವನು ಹಗಲಿರಳು ಕದ್ದರೆ ಆ ಊರು ।
ಎದ್ದು ಹಿಡಿದವರೆಲ್ಲ ಏನು ಮಾಡುವರು ೨

ತೊತ್ತಿನ ಮೇಲೆ ಒಡೆಯನ ದಯವಿರೆ ।
ತೊತ್ತು ಗರ್ತಿಗೆ ಅಂಜಿ ನಡಕೊಂಬಳೆ ।
ಕರ್ತೃ ಶ್ರೀ ವಿಜಯವಿಠ್ಠಲ ವೆಂಕಟೇಶನ ।
ಚಿತ್ತದಿ ನೀನಿರೆಯನೆವುಂಟೆ ೩

೧೩೦

ವೆಂಕಟೇಶ ಮಂತ್ರ ಒಂದೇ
ಸಂಕಟ ಪರಿಹರಿಸಿ ಸಂಪದವಿಯ ಕೊಡುವ ಪ

ಬಲನ ಭೂಸುರಹತ ಪೋಗಾಡಿದ ಮಂತ್ರ ।
ಬಲಿಯ ಕನಕ ಸ್ತೇಯ ಕಳದ ಮಂತ್ರಾ ॥
ಬಲವಂತ ವೃಷಭನ್ನ ಸಂಹರಿಸಿದ ಮಂತ್ರಾ ।
ಕಲಿಯುಗದೊಳಗಿದೆ ಸಿದ್ಧ ಮಂತ್ರಾ ॥ ೧

ವೃದ್ಧ ಬ್ರಾಹ್ಮಣಗೆ ಪ್ರಾಯವನು ಕೊಟ್ಟ ಮಂತ್ರಾ ।
ಶುದ್ಧನ್ನ ಪರಿಶುದ್ಧ ಮಾಳ್ಪ ಮಂತ್ರಾ ।
ಉದ್ಧರಿಸಿ ಕಾವ್ಯನ್ಯೊಂಚಿ ? ಮಾಡಿದ ಮಂತ್ರಾ ।
ಶ್ರದ್ಧೆಯನು ಪಾಲಿಸುವ ಸುಲಭ ಮಂತ್ರಾ ೨

ಗುರು ತಲ್ಪಕನ ದೋಷ ನಾಶನ ಮಾಡಿದ ಮಂತ್ರಾ ।
ಹರನ ಸುತ ಬರಲವನ ಪೊರೆದ ಮಂತ್ರಾ ।
ಸ್ಮರಿಸಲಾಕ್ಷಣ ಒಮ್ಮೆ ಮುಂದೆ ನಿಲುವ ಮಂತ್ರಾ ।
ಅರಸರಿಗೆ ವಲಿದಿಪ್ಪ ಆದಿ ಮಂತ್ರಾ ೩

ಅಜ ಭವಾದಿಗಳಿಗೆ ಪಟ್ಟಗಟ್ಟಿದ ಮಂತ್ರಾ ।
ಗಜ ಮೊದಲಾದವರ ಕಾಯ್ದ ಮಂತ್ರಾ ।
ರಜ ದೂರವಾಗಿದ್ದ ರಮ್ಯವಾದ ಮಂತ್ರಾ ।
ಕುಜನ ಕುಲವನಕೆ ಕುಠಾರ ಮಂತ್ರಾ ೪

ಪ್ರಣವ ಪೂರ್ವಕದಿಂದ ಜಪಿಸಲು ವೊಲಿವ ಮಂತ್ರಾ ।
ಅಣು ಮಹದಲೀ ಪರಿಪೂರ್ಣ ಮಂತ್ರಾ ।
ಫಣಿಶೈಲ ನಿಲಯ ಸಿರಿ ವಿಜಯವಿಠ್ಠಲನ ಮಂತ್ರಾ ।
ಕ್ಷಣ ಕ್ಷಣಕೆ ಬಲ್ಲವರಿಗೆ ಪ್ರಾಣ ಮಂತ್ರಾ ೫

೧೩೧

ವೆಂಕಟೇಶಾಯ ನಮೊ ವಿಜಯವಿಠ್ಠಲನೆ ನಮೊ ।
ಪಂಕಜಾತ್ಮಕ ಪಶುಪತಿ ಗುರು ನಮಿತ ಪಾದಾ ।
ಪಂಕಜವ ಪೊಗುಳವೆನು ಪರಿಪಾಲಿಸೆನ್ನ ।
ಕಿಂಕರನ ಕಿಂಕರರಿಗೆ ಕಿಂಕರನೆಂದೆನಿಸೊ ಪ

ಶೌರ್ಯದಲಿ ತತ್ಸರ್ವ ಜನ್ಮದಲಿ ನಾನಾಶ (ಕ)
ಕಾರ್ಯವಾಕಾರ್ಯವನು ತಿಳಿಯಲೊಲ್ಲದ ಕಾಮಾ ।
ತೂರ್ಯದಲಿ ಪಾಪಗಳೆ ರಚಿಸಿ । ಬೆಂಬಿಡದದೆ ಬಲು ।
ಧೈರ್ಯವಂತನು ನೀನಾಗಿ ।
ಧೈರ್ಯವಾಗಿದ್ದಾಗ ಜಡಜೀವ ಜಂತುಗಳು ।
ವೀರ್ಯದಲಿ ಪೊಕ್ಕು ದುಃಖಾತಿಶಯದಲಿ ।
ದುರ್ಯೋನಿ ಮುಖದಿಂದ ಜನನ ಜನಿತನಾದೆ ।
ಮರ್ಯಾದೆಗಳು ಇಲ್ಲದೆ ಹರಿಯೇ ೧

ಕ್ಷಿತಿಯೊಳಗೆ ಬಂದು ಕಾಮ ಕ್ರೋಧ ಸಂಮೋಹ
ಶ್ರುತಿ ವಿಭ್ರಮ ಬುದ್ಧಿನಾಶ ರಾಗದ್ವೇಷ ।
ಪಥದಲಿ ವಿಷಯೇಂದ್ರಿಗಳು
ಆತ್ಮವಶವಾಗಿ ಹಿತದ ಪ್ರಸಾದದಿಂದ ।

ಮಿತಿಯಿಲ್ಲದಲೆ ಸರ್ವ ದುಃಖ ಬರಲಿ
ಗತಿ ಅದರಿಂದ ಈ ಸಂಖ್ಯೆಯಿಂದಲಿ ।
ಹತವಾಗಿ ಪೋಗಿ ಮರಳೆ ದೇಹವನು ।
ತೆತ್ತು ಗತಿ ಪುಣ್ಯವಂತನ್ಯೆದೆ ೨

ಇಂದಿಗಾ ಇವನ ಮನೆ ತಂದೆ ತಾಯಿಯ ದಿವಸ ।
ಇಂದಿಗಾ ಇವನ ಮನೆ ಹತ್ತ ಹತ್ತನೆ ದಿವಸ ।
ಇಂದು ಗ್ರಹ ಯಜ್ಞ ಹವ್ಯ ಕವ್ಯ ಜಾವಳ ।
ಇಂದಿಗಾ ಮದುವೆ ಮುಂಜಿ ।
ಇಂದು ನಿಮ್ಮನೆ ಪ್ರಸ್ತವೆಂದು ಕೇಳುತಾ ಪೋಗಿ ।
ಬಂದವರನನ್ನುಸರಿಸೆ ಬಾಗಿಲಾ ಮುಂದೆ ಕುಳಿತು ।
ನಂದನರ ಸಹಿತ ಕೆಡ । ತಿಂದು ಕಾಲವ ಕಳೆದು
ನೊಂದೆ । ಬಂದೆನೊ ಕೊನೆಯಲಿ ೩

ಆರಾದರೂ ಬಂದು ಕಾಸು ಕೊಡದಿದ್ದರೆ ।
ದೂರುವೆನೊ ನೂರಾರು ಕೇರಿ ಕೇರಿಯ ತಿರಗಿ ।
ಸಾರೆ ಅವರಲ್ಲಿದ್ದ ಅವಗುಣಂಗಳ ಎತ್ತೆ ।
ಬೀರುವೆನು ಬೀದಿಯೊಳಗೆ ।
ವಾರಣದಿಂದಲಿ ಕರೆದು ಆವನಾದರು ಬಂದು ।
ಶಾರೆ ಭತ್ತವ ಕೊಡಲು ಕೊಂಡಾಡುವೆ ಕುಲ ಉ ।
ದ್ಧಾರಕನು ಇವನೆಂದು ಕಂಡಲ್ಲಿ ಪೊಗಳುತಲಿ ।
ಪೋರ ಬುದ್ಧಿಗಳ ಬಿಡದೆ ೪

ಪರವಣಿ ಪುಣ್ಯಕಾಲಾ ದಿವಸ ಬಂದರೆ ತಿಳಿದು ।
ಪರಮಾರ್ಥವೆಂದರಿದು ಉತ್ತಮರ ಬಾ ಎಂದು ।
ಕರೆದು ತುತ್ತನ್ನ ಮೇಲೊಂದು ದಕ್ಷಿಣೆ ಕಾಸು ।
ಹರುಷದಿಂದಲಿ ಕೊಡದಲೆ ಪರರ ಹಳಿಯುತ್ತ ಏನೇನು ।

ದೊರಕಿದ ಹಣ ಶರಗಿನಲಿ ಮುಡಿ
ಇಟ್ಟುಕೊಂಡು ಮನಿಗೆ ಬಂದು ।
ಪರರರಿಯದಂತೆ ಮಂಚದ ಕೆಳಗೆ ಹೂಳಿ ಈ ।
ಪರಿಯಿಂದ ದಿನ ಹಾಕಿದೆ ೫

ತೊತ್ತು ಓರ್ವೆಯಲ್ಲಿ ಈ ಹೊತ್ತು ಪೋಗಾಡಿಸಿದೆ ।
ಉತ್ತಮರ ಬಳಿಯಲಿ ಕುಳಿತು
ಸತ್ಕಥೆಗೆ ಕಿವಿ ಇತ್ತು ಕೇಳದಲೆ ಕೆಲಸಾರೆ ಬೇಸರಿಕೆಯಲಿ ।
ಅತ್ತಲಿತ್ತಲು ವ್ಯರ್ಥ ಸುತ್ತಿ ಸುಮ್ಮನೆ ಸುದ್ದಿ ಬರಿಗಂಟುಸಟೆ ।
ಮಾತು ಎತ್ತುವನೊ ಅನ್ನಿಗರನ ನ ।
ಡತೆ ನುಡಿತಿಯಲ್ಲ ಮತ್ತೆ ಎನ್ನವಗುಣಂಗಳ ।
ಎಣಿಕೆ ಮಾಡದಲೆ ।
ಉನ್ಮತ್ತದಲಿ ಕೆಟ್ಟೆನಯ್ಯಾ ೬

ಆದದ್ದೆಲ್ಲಾಯಿತು ಹಿಂದೆ ಪರಿಯಂತ ।
ವೇದನೆ ಬಟ್ಟೆನೊ ದುಷ್ಟ ಹಾದಿಯಲಿ ಸಿಗಬಿದ್ದು ।
ಈ ದುರಾಚಾರಗಳ ಗಣನೆ ಮಾಡದೆ ಇನ್ನು ।
ಕಾದುಕೊ ಕಮಲನಾಭಾ ।
ಹೋದಪರಾಧಗಳ ನೋಡದಲೆ ದಯದಿಂದ ।
ಆದರಿಸಿ ನಿನ್ನ ದಾಸರ ಸಂಗತಿಯನಿತ್ತು ।
ಆದಿ ಪರಮ ಪುರುಷ ವಿಜಯವಿಠ್ಠಲ ನಿನ್ನ ।
ಪಾದವನು ಕಾಣಿಸಯ್ಯಾ ೭

೧೩೨

ವೆಂಕಟೇಶ್ವರಾ ನಿತ್ಯ ನಿಜಾಲಂಕಾರ ಶರೀರಾ ।
ಲಂಕ ಜನರ ಕ । ಳಂಕ ಮತಿದೂರಾ ಪ

ವಿಭುವೆ ಇಭರಾಜಾ ವರದಾ ಸಾರಾ । ನಭರತುನ ತೇಜಾ ।
ಅಭಯ ಮೂರುತಿ ಸು । ಲಭ ದಾಯಕ ।
ವಿಬುಧವಂದಿತ ಸರ್ವಾ । ಶುಭಗುಣಶೀಲಾ ೧

ಹೂವ್ವಿನಂಗಿಯ ತೊಟ್ಟು ಮೆರೆವಾ ಶ್ರೀವರ ಗಿರಿಯಾ ।
ಭಾವಕ್ಕೆ ಬಿಗಿದಪ್ಪಿ ತಾ ವೊಪ್ಪುತಿಹ ।
ಲೋಕ ಪಾವನ ಸ್ವತಂತ್ರ ಗೋವುಗಳ ಕಾಯ್ದಾ ೨

ವರಪರ್ವತ ವಾಸಾ ವಾಸುದೇವಾ ।
ಶರಣರ ಪರಿತೋಷ ಪರಮ
ಮಂಗಳವೀವ ವಿಜಯವಿಠ್ಠಲರೇಯಾ ।
ಗರುವ ದೇವರ ದೇವ ಜ್ಞಾನಾನಂದ ಪರಿಪೂರ್ಣ ೩

೧೩೩

ಶರಣು ಗಿರಿಯ ತಿಮ್ಮಾ । ಶರಣು ಪುರುಷೋತ್ತಮಾ ।
ಶರಣು ಮಹಾ ಮಹಿಮ । ಶರಣು ಪರಬೊಮ್ಮಾ ।
ಪರಿಹರಿಸುವದು ಹಮ್ಮಾ ಪ

ಸ್ಮರ ಕೋಟಿ ಲಾವಣ್ಯ । ನಿರುತ ದೇವ ವರೇಣ್ಯಾ ।
ಕರಿರಾಜನ ಭಂಗ । ಹರಿಸಿದ ಶಿರಿ ರಂಗ ।
ಸುರವಿನುತ ವಿಹಂಗ । ತುರಗ ತುರಗ ವದನ ।
ಪರಮ ವಾರಿಜ ಸದನ । ಕರ ಮುಗಿವೆನ್ನೈಯಾ ।
ಕರದ ಮಾತಿಗೆ ಜೀಯಾ । ಭರದಿಂದ ಕೊಡು ಮತಿಯಾ ೧

ಆದಿ ಮೂಲನೆ ನೀನು ಸಾಧುಗಳ ಸುರಧೇನು ।
ಪಾದದಲಿ ಪೆಣ್ಣಾ ।
ಮೋದದಲಿ ಪೆತ್ತ ಚಿಣ್ಣಾ । ನಾದ ಬಲು ಪಾವನ್ನಾ ।
ಭೇದಾರ್ಥ ಜ್ಞಾನ । ಆದರಿಸೆ ಅನುದಿನಾ ।
ನೀ ದಯದಲಿ ಕೊಡು । ಈ ದೇಹ ನಿನ್ನ ಬೀಡು ।
ಯಾದುದೆ ಇತ್ತ ನೋಡು ೨

ಜಲದೊಳಗಾಡಿದೆ । ಚಲಕೆ ಬೆನ್ನ ನೀಡಿದೆ ।
ನೆಲ ಬಂದು ನೆಗಹಿದೆ । ಖಳನನ್ನ ಕೆಡಹಿದೆ ।
ಇಳಿಯ ಮೂರಡಿ ಮಾಡಿದೆ । ಕುಲವ ಕೊಡಲಲಿ ಹಾರ ।
ತಲೆ ಜಡೆ ಜಾರ ಚೋರ । ಅಳಿದೆ ಮುಪ್ಪುರು ಶೂರಾ ।
ವಿಜಯವಿಠ್ಠಲ ಪಾರಾ । ಫಲವೀವೆ ಧರಣೀಧರಾ ೩

೧೩೪

ಶರಣು ಶೇಷಾಚಲ ನಿವಾಸಗೆ । ಶರಣು ವರಹ ತಿಮ್ಮಪ್ಪಗೆ ।
ಶರಣು ಅಲಮೇಲುಮಂಗ ರಮಣಗೆ
ಶರಣು ತಿರುವೆಂಗಳೇಶಗೆ ಪ

ಧರಣಿಧರ ಗೋವಿಂದ ಮಾಧವ ।
ನರಹರಿ ಮಧುಸೂದನಾ ।
ಮುರಹರ ಮುಕುಂದ ಅಚ್ಯುತ ।
ಗಿರಿಜನುತ ನಾರಾಯಣಾ ೧

ಕ್ಷೀರ ವಾರಿಧಿಶಯನ ವಾಮನ ।
ಮಾರ ಜನಕ ಗೋಪಿ ಜನ ।
ಜಾರ ನವನೀತ ।
ಚೋರ ರಿಪು ಸಂಹಾರ ಹರಿ ದಾಮೋದರ ೨

ಗರುಡಗಮನನೆ ಗರಳ ತಲ್ಪನೆ ।
ಕರುಣಾಳುಗಳ ಒಡೆಯನೆ ।
ಉರಗ ಗಿರಿ ಸಿರಿ ವಿಜಯವಿಠ್ಠಲನ ।
ಚರಣ ಕಮಲಕೆ ನಮೋ ನಮೋ ೩

೧೩೫

ಸಿಂಗನಾ ಏರಿದ ನರಸಿಂಗ ತೋಮರವ ಪಿಡಿದು ।
ರಂಗ ವೈಭೋಗದಿಂದ । ನಲಿದು ಚತು ।
ರಂಗ ಬೀದಿಯೊಳು ಮೆರೆದಾ ಪ

ಮುತ್ತಿನ ಕಿರೀಟ ಮೇಲೆ ಎತ್ತಿದ ಸತ್ತಿಗೆ ಪೊಳೆಯ ।
ಸುತ್ತ ಮುತ್ತ ಬೊಮ್ಮಾದಿಗಳು । ವಾಹನ ರಥ ।
ಹತ್ತಿ ಬರುವ ಪುರದ ಜನಗಳು ೧

ಸನಕಸನಂದನ ಸನತ್ಸುಜಾತ ಸನತ್ಕುಮಾರ ।
ಮುನಿವರರು ವೇದ ಘೋಷಣೆ ಉಚ್ಚರಿಸುತ್ತ ।
ಅನಿಮಿಷರಾಗಿ ಇಚ್ಛೈಸುತಾ ೨

ಗಂಧರ್ವಾದಿ ಗಾಯನಾ ನಾರಂದನು ಪಾಡುತ್ತ ಬರೆ ।
ಇಂದು ಮೌಳಿ ಮುಂದೆ ಕುಣಿಯುತಾ । ತಕ್ಕಥೈ
ಎಂದು ತುಂಬರನು ಹಾಡಿ ಪಾಡುತಾ ೩

ವೇಶ್ಯ ಜನರು ರಂಭೆ ಊರ್ವಶಿ ಪಾತ್ರ ಮಾಡುತಿರೆ ।
ದಾಸಾನುದಾಸರು ಪಾಡುತಾ । ಸಲಹೊ ಶ್ರೀನಿ
ವಾಸನೆಂದು ಬೇಡಿಕೊಳುತಾ ೪

ಮಂಗಳಪಾಂಗ ಸಾಂಗೋಪಾಂಗದಿಂದ ಒಪ್ಪೆ ಅಲಮೇ
ಲ್ಮಂಗ ವಿಜಯವಿಠ್ಠಲ । ತಿರುಪತಿ ತಿರು
ವೆಂಗಳೇಶ ಶ್ರೀ ವೆಂಕಟೇಶಾ ೫

೧೩೬

ಶ್ರೀನಿವಾಸನ ಕ್ಷೇತ್ರ ಎಂಥಾದೊ
ಮಾನಿಸರಿಗೊಶವಲ್ಲ ಪೊಗಳಿ ಪೇಳುವುದು ಪ

ಮೇಧಾದಿ ಮುನಿ ತನ್ನ ತಪೋಸಿದ್ಧಿಗೆ ಸರ್ವ ।
ಮೇದಿನಿ ತಿರುಗಿ ಬರುತಲಿ ಇತ್ತಲು ।
ಸಾಧನಕೆ ಸೌಮ್ಯವಾದ ಭೂಮಿಯನು ನೋಡಿ ಇವ ।
ಮಾಧವನ ಒಲಿಸಿದನು ಮಣಿ ಮುಕ್ತಿ ತೀರದಲಿ ೧

ನೆಸಗಿದ ತಪಕೆ ಮೆಚ್ಚಿ ಹರಿ ಒಲಿದ ತೀವ್ರದಲಿ ।
ಬಿಸಿಜದಳ ಲೋಚನೆ ಲಕುಮಿಯಿಲ್ಲೀ ॥
ಎಸೆವ ಮಂಜರಿ ವೃಕ್ಷದಲಿ ವಾಸವಾಗಿ ।
ವಸುಧಿಯೊಳು ವಾಸವಾಗಿ ಅಗ್ರದಲಿ ಮೆರೆದನು ೨

ಪರಮೇಷ್ಠಿ ಬಂದು ಈ ಕ್ಷೇತ್ರದಲಿ ನಿಂದು ಚ
ತುರ ಮೂರ್ತಿಗಳ ಭಜಿಸಿ ವರ ಪಡೆದ
ಧರೆಯೊಳಗೆ ಆವನಾದರೆ ಬರಲು ನೀನೊಲಿದು
ಪರಮ ಗತಿ ಕೊಡು ಎಂದು ಸ್ತುತಿಸಿದನು ಹರಿಯ ೩

ಇಲ್ಲಿಗೆ ಬಂದು ಸತ್ಕರ್ಮವನು ಮಾಡಿದಡೆ ।
ಎಲ್ಲ ಕ್ಷೇತ್ರದಲಿ ಮಾಡಿದ ಫಲಕಿಂತ ।
ಎಳ್ಳಿನಿತು ಮಿಗಿಲೆನಿಸಿ ಪುಣ್ಯ ತಂ । ದುಣಿಸುವುದು ।
ಎಲ್ಲೆಲ್ಲಿ ಇದ್ದರು ಸ್ಮರಣೆ ಮಾಡಿರೊ ಜನರು ೪

ಸುಗಂಧ ಪರ್ವತವಾಸ ಪುರುಷೋತ್ತಮ ।
ನಿಗಮಾದಿಗಳಿಗೆ ಅತಿದೂರತರನೋ ।
ಸುಗುಣನಿಧಿ ವಿಜಯವಿಠ್ಠಲರೇಯ ಸರ್ವದ ।
ಗಗನದಲಿ ಪೊಳೆವನು ಬ್ರಹ್ಮಾದಿಗಳ ಸಹಿತಾ ೫

೧೩೭

ಶ್ರೀ ವನಜಲೋಚನ ಭವ ಮೋಚನಾ ।
ಭಾವಿಸುವೊದು ಸೂಚನಾ ।
ಪಾವನರಂಗಾ । ಜೀವಾಂತರಂಗ । ಜೀವ ತುರಂಗಾ ।
ಗ್ರೀವ ರಿಪು ಭಂಗಾ । ದೇವ ಎನ್ನಯ ।
ಹೃದ್ಭಾವರೆಯಲಿ ನಿಲ್ಲು ।
ಆವಾವ ಬಗೆ ಸು । ರೂಪ । ಆವಾಗ ತೋರುತ ಪ

ನಂದನಂದನಾ ಆನಂದಾ । ನಾಗನಾ । ಬಂಧಾ ।
ಹಿಂದುಗೈಸಿದ ಮುಕುಂದಾ । ಅಂದು
ಬೀಡಾದೆಕ್ಕೆಂದಾ । ದಾ ಖಳನ ಕೊಂದೆ ।
ನಂದವ್ರಜದ ಗೋವಿಂದಾ । ಯಶೋದೆ ಕಂದಾ ।
ಮಂದನು ನಾನು । ಇಂದೀಗ ನೀನು ।

ಬಂದು ಸುರಧೇನು । ಪೊಂದು । ಇನ್ನೇನು ।
ಮುಂದಣ ಇಹಸುಖ । ಒಂದು ವಲ್ಲೆನು ಸಖ ।
ಕಂದ ನಂದದಿ ನೋಡು । ಕುಂದದ ವರವ ಕೊಡು ।
ಎಂದೆಂದಿಗೆ ಪದದ್ವಂದಾರವಿಂದಕೆ । ವಂದಿಸುವೆನು ಬಾ ।
ಲೇಂದು ವದನ ಪೊರಿಯೋದೆ ಲೋಕದ ತಂದೆ ೧

ಮಂದರಧರ ಮಾಧವಾ । ಮಹದಾದಿ ದೇವಾ ।
ಅಂದವಾರಿಗೆ ಸಂಜೀವಾ । ಇಂದ್ರತನಯ
ಬೋವಾ । ಇಚ್ಛೈಸಿದರೆ ಕಾವಾ ।
ತಂದೀಯ ತಂದಾ ಪ್ರಭಾವಾ । ಶ್ರೀ ವಾಸುದೇವ ।
ನಿಂದು ಕರೆವೆನು ಒಂದೆ ಮನಸನು ।
ತಂದು ವೇಗಾನು । ಸಂಧಿಸೆಂಬೆನು ।
ಚಂದ ಚಂದದಿ ನಿನ್ನನಂದಕೆ ಹಿಗ್ಗುವೆ ।
ನೊಂದು ಕೂಗಲು ಸೈರಂಧ್ರಿಯ ಸಾಕಿದ ವೃಂದಾವನ ಪತಿ ।
ವೃಂದಾರಕ ಮುನೇಂದ್ರ ಸನಕಸನಂದನ ಯತಿಗಳ
ಬಂಧು । ಅತಿ ದಯಾಸಿಂಧು ॥ ೨

ಶ್ರೀಲತಾಂಗೀಯ ರಮಣಾ ಶೃಂಗಾರ ಚರಣಾ ।
ಮಾಲಾ ಕೌಸ್ತುಭಾ ಭರಣಾ ।
ಶೀಲಾ ಸದ್ಗುಣಗಣ ಸಿದ್ಧಸವ್ಯಾಕಾರಣ ।
ಲೀಲಾವತಾರ ಧಾರಣಾ । ನಾರಾಯಣ
ನೀಲಲೋಹಿತ ಪಾಲಿಪನೆ ಪ್ರೀತ ।
ಮೂಲೋಕದ ದಾತಾ । ಲಾಲೀಸಿ ಮಾತಾ ।
ಪಾಲ ಸಾಗರಶಾಯಿ ಪತಿತ ನರನ ಕಾಯಿ ।
ಮೇಲುಗಿರಿಯಲಿಪ್ಪಾ । ಮೇಲಾದ ತಿಮ್ಮಪ್ಪಾ
ಕಾಲಕಾಲಕೆ ನಿನ್ನಾಳಿನ ಕೂಡಣ । ವಾಲಗ ವೆಂಕಟ ।
ಶೈಲಾ ವಿಜಯವಿಠ್ಠಲಾ । ನೀಯೋ ಗೋಪಾಲಾ ೩

೧೩೮

ಶೇಷವಾಹನನಾಗಿ ಬಂದ । ಶ್ರೀನಿವಾಸ ।
ವಾಸುದೇವ ವಾಸವ ಪ್ರಿಯಾ ಪ

ಅಜಭವ ಸುರ ಮುನಿ । ವ್ರಜ ನಾನಾ ಬಗೆಯಲಿ ॥
ಭಜನೆ ಮಾಡುತ ಬಲು । ನಿಜಮನದಲಿ ನೋಡೇ ೧

ಛತ್ರ ಚಾಮರ ಜನರು । ಸ್ತೋತ್ರ ಸಂಗೀತನಾದ
ಧಾತ್ರಿ ತುಂಬಿರಲು ಸ । ರ್ವತ್ರ ವ್ಯಾಪಕ ದೇವಾ ೨

ಗಂಧರ್ವಗಣನಲು । ವಿಂದ ಪಡಲು ಭೇರಿ ॥
ದುಂದುಭಿವಾದ್ಯ ಆ । ನಂದ ನುಡಿವುತಿರೆ ೩

ಇಕ್ಕಿದ ವರಕಲ್ಪ । ದಿಕ್ಕು ಬೆಳಗುತಿರೆ ।
ಬೊಕ್ಕ ದೈವವೆ ಶುದ್ಧ । ಭಕ್ತರ ಒಡಗೂಡಿ ೪

ಇಷ್ಟ ಮೂರುತಿ ಮನೋ । ಭೀಷ್ಟ ಪಾಲಿಪ ವಿಜಯ ॥
ವಿಠ್ಠಲ ವೆಂಕಟೇಶ । ಬೆಟ್ಟದೊಡೆಯೆಂದು ೫

೧೩೯

ಶುಭವೀವ ನಿರುತದಲಿ ಮಂದಹಾಸಾ ಪ

ಅಭಯಗಿರಿಯ ವಾಸಾ ಶ್ರೀ ಶ್ರೀನಿವಾಸ ಅ.ಪ.

ಧೇನಿಪರ ಮನ ಚಿಂತಾಮಣಿಯೋ । ದೇವ ।
ನೀನೆ ಗತಿಯೆಂಬುವರ ಧಣಿಯೋ ॥
ಜ್ಞಾನಮಯ ಸುಖದ ಸಂದಣಿಯೋ । ಪುಣ್ಯ ।
ಕಾನನವಾಸ ಸುರರ ಖಣಿಯೋ ೧

ಶರಣರಿಗೆ ವಜ್ರ ಪಂಜರನೋ । ದೇವ ।
ದುರುಳರಿಗೆ ವೀರ ಜರ್ಝರನೋ ॥
ದುರಿತಕದಳಿಗೆ ಕುಂಜರನೋ ।
ವರಕಲ್ಪ ಕಲ್ಪ ವಿಚಲನೋ ೨

ಪರಮೇಷ್ಠಿ ಶಿವರೊಳಗೆ ಯಿಪ್ಪ । ದೇವ ।
ಮರುತನ್ನ ಹೆಗಲೇರಿ ಬಪ್ಪಾ ॥
ಶರಣರಿಗೆ ವರವೀಯುತಿಪ್ಪಾ ।
ಸಿರಿ ವಿಜಯವಿಠ್ಠಲ ತಿಮ್ಮಪ್ಪಾ ೩

೧೪೦

ಸಾಗಿ ಬಾರೈಯ ನೀನು, ಗೋವಿಂದ ವೆಂಕಟ ಪ

ಸಾಗಿಬಾರೈಯ ಭವರೋಗದ ವೈದ್ಯನೆ
ಬಾಗಿ ನಿನಗೆ ಚೆನ್ನಾಗಿ ತುತಿಪೆ ನಿಂದು
ಭಾಗೀರಥಿಪಿತ ಭಾಗವತರ ಸಂ
ಯೋಗರಂಗ ಉರಗಗಿರಿ ವೆಂಕಟ ಅ.ಪ.

ರಥದ ಮಧ್ಯದಲಿಪ್ಪನೆ ರಥಾಂಡಜ ವಾಹನನೆ
ರಥಾಂಗಪಾಣಿಯೆ ದಶರಥ ನೃಪಬಾಲ
ಪಾರ್ಥಗೆ ಒಲಿದವನ ರಥವ ನಡಿಸಿ ಅತಿ–
ರಥ ಮಹರಥರ ವಿರಥರ ಮಾಡಿ ಗೆಲಿಸಿದೆ
ಪ್ರಥಮ ದೈವವೆ ಮನ್ಮಥಪಿತ ದೈತ್ಯರ–
ಮಥನ ಭಕ್ತರ ಮನೋರಥನೆ ತಾರಾ–
ಪಥವರ್ಣನೆ ತವ ಕಥಾಶ್ರವಣದಲಿ ಸು–
ಪಥವನು ತೋರಿಸು ಪ್ರಥಮಾಂಗದೊಡೆಯ ೧

ನಿಲ್ಲದೆ ಬರುವುದು ಪುಲ್ಲಲೋಚನೆ ಸಿರಿ-
ವಲ್ಲಭ ಸರ್ವರಿಗು ಬಲ್ಲಿದನೆ ಅಪ್ರತಿ-
ಮಲ್ಲ ಮುರವಿರೋಧಿ ಮೆಲ್ಲಮೆಲ್ಲನೆ ಪಾದ
ಪಲ್ಲವ ತೋರುತ್ತ ಎಲ್ಲಾ ಕಾಲದಿ ನಮ್ಮ-
ನೆಲ್ಲರುದ್ಧರಿಪುದು ಎಲ್ಲಿ ನಿನಗೆ ಸರಿ-
ಯಿಲ್ಲವೊ ನೋಡಲು ಸಲ್ಲುವುದೋ ಬಿರು-
ದಲ್ಲಿಗಲ್ಲಿಗೆ ಗುಣಬಲ್ಲವರಾರಿನ್ನು
ನೆಲ್ಲಕಟ್ಟು ಕೊನೆಯಲ್ಲಿಪ್ಪ ವಿಶ್ವ ೨

ಬೊಮ್ಮ ಮೊದಲು ಮನುಜೋತ್ತಮರು ಕಡೆಯಾಗಿ
ನಿಮ್ಮ ದಾಸರು ಅವರ ಸಮ್ಮಂಧಿಗಳ ಪಾದ-
ನೆಮ್ಮಿಕೊಂಡಿಪ್ಪಂಥ ಧಮ್ಮನು ನಾ ಸರ್ವೋ-
ತ್ತುಮ್ಮಾನೇಕ ಗುಣಮಹಿಮ ವಿಭೂಷಿತ
ರಮ್ಮೆಧರಣಿದೇವಿ ಇಮ್ಮಹಿಷೇರ ಕೂಡಿ
ಸಮುಖನಾಗುತ ಸುಮ್ಮನೆ ಬಾ ಬಾ
ಹಿಮ್ಮೆಟ್ಟದೆ ಸಿರಿ ವಿಜಯವಿಠ್ಠಲ ಅನು-
ಪಮ್ಮಚರಿತ ಪರಬೊಮ್ಮ ತಿರುಮಲೇಶ ೩

೧೪೧

ಸಾಲವ ಕೊಡದಿದ್ದರೆ ನಿನಗೆ ।
ನಾಲಿಗೆಂಬೊದು ಇಲ್ಲೊ ಉತ್ತರಾಡುವುದಕ್ಕೆ ಪ

ಏಸು ದಿವಸದಿಂದ ಎಲ್ಲರ ಸೇವಿಸಿ ।
ಕಾಸು ಕಾಸಿಗೆ ನಾನು ಕೂಡಹಾಕಿ ।
ಲೇಸು ಉಳ್ಳವನೆಂದು ಕೊಟ್ಟರೆ ನೀ ನಿಂತು ।
ಮೋಸಗೊಳಿಸುವರೆ ಕಾಣಿಸಿಕೊಳ್ಳದಲೆ ೧

ಬಡ್ಡಿ ಏನಾಯಿತೊ ಕೊಟ್ಟ ಗಂಟಿಗೆ ನಿನ ।
ಗಡ್ಡ ಬೀಳುವೆನೊ ಸಾಲವ ತೀರಿಸೊ ।
ಖಡ್ಡಿ ಮಾನವನೆಂದು ನೋಡ ಸಲ್ಲಾ ಎನ್ನ ।
ದೊಡ್ಡವರು ಕಂಡರೆ ಅಡ್ಡಗೈಸದೆ ಬಿಡರು ೨

ಗುಣಿಸಿ ನೋಡಿದರೆ ಏನಯ್ಯಾ ಮುತ್ತಯ್ಯಾ ಯಾ
ಕೆ ನಿಲ್ಲದೆ ನಿನಗೆ ಸಾಲವಿತ್ತೆ ।
ಧನವ ಎಣಿಸಲಾಗಿ ನೆಲೆಗಾಣೆಯಿನ್ನು ಸು ।
ಮ್ಮನೆ ಕೂಗದೆ ನಿಂದು ಋಣವ ತಿದ್ದು ಚಲುವಾ ೩

ಸಾಲಾ ಬಂದರೆ ಒಳಿತೆ ಇಲ್ಲದಿದ್ದರೆ ಕೇಳು ।
ಮೇಲೆ ಮೇಲೆ ಬಿದ್ದು ನಿನ್ನ ।
ಕಾಲಿಗೆನ್ನ ಕೊರಳ ಸಂಕಲೆಯಿಂದ
ಕೀಲಿಸಿ ಬಿಡದಲೆ ತೊಲಗ ಬಿಡೆ ದೇವಾ ೪

ಬತ್ತಲಿದ್ದವರಿಗೆ ಭಯವಿಲ್ಲವೆಂಬೊ ಗಾದಿಗೆ ।
ನೆತ್ತಿಯೆತ್ತಿ ಮೋರೆ ತೋರ ಬೇಕೊ ।
ಚಿತ್ತ ನಿರ್ಮಳದಲ್ಲಿ ಇಂದ ಎನ್ನ ।
ಪತ್ತರ ಇದ್ದು ತೀರಿಸಬೇಕೊ ಸರ್ವೇಶಾ ।
ಸುತ್ತಿ ಛಳಿರೆ ಸಂದೇಹ ಬೇಡ ನೀ ಬರೆದ ಬರಹ ನೋಡು ೫

ಬಡತನ ಬಂದರಾಗ ನಾ ನಿನಗೆ ಬಾಯಿ ।
ಬಿಡುವೆನೆ ದೈನ್ಯದಲಿ ಭಾಗ್ಯವಂತಾ ।
ತಡ ಮಾಡಲಾಗದು ಕೊಡು ಎನ್ನ ಒಡಿವೆ ।
ಪೊಡವಿಲಿ ಪರರಿಗೆ ಸಲ್ಲದೊ ಸರ್ವೇಶಾ ೬

ಗತಿಯಿಲ್ಲ ನಾನಪ್ರಮಾಣಿಕ ನಾನಹುದೆಂದು ।
ಸಂತತ ಸಂತರ ಮುಂದೆ ನುಡಿದು ಬಿಡುವೆ ।
ಪತಿತ ಪಾವನ ನಮ್ಮ ವಿಜಯವಿಠ್ಠಲ ನಿನ್ನ ।
ನುತಿಸಿಕೊಳ್ಳುತ್ತ ಕಾಲಕ್ರಮಣ ಮಾಡುವೆ ೭

೧೪೨

ಸೇರಿದೆ ನಿನ್ನ ವೆಂಕಟರನ್ನ ಪಾಲಿಸು ಎನ್ನ ಅ- ।
ಪಾರ ಜನುಮಕ್ಕೆ ನೀನೆ ದೈವವೆಂದು ಪ

ಶೂನ್ಯಜ್ಞನು ನಾನು ಅನ್ಯಾಥಾ ಗತಿ ಅರಿಯೆ ।
ಅನ್ಯರಲ್ಲಿಗೆ ಕೊಡದೆ ಧನ್ಯನ ಮಾಡೊ ಬಿಡದೆ ೧

ಕಲ್ಪತರುವೆ ಎಂದು ವಪ್ಪದಿಂದಲಿ ಬಂದೆ ।
ಆಲ್ಪರಿಯದಂತೆ ನಾಗತಲ್ಪನೆ ಫಲವೀಯೋ ೨

ವರುಷಾವರುಷ ಹೀಗೆ ದರುಶನಕೊಡು ಎನಗೆ ।
ಹರುಷವಾಗಲಿ ಪರಮಪುರುಷ ವಿಜಯವಿಠ್ಠಲಾ ೩

೧೪೩

ಸೌಂದರ್ಯ ಪುರುಷನ ಕಣ್ದೆರದು ನೋಡಿದೆನು ।
ಇಂದೆನ್ನ ಜನುಮ ಸಫಲ ।
ಹಿಂದೆ ಅನಂತೇಶನೆಂದೆಂಬ ನಾಮದಲಿ ।
ಚಂದದಲಿ ಮೆರೆವ ಕಂಬು । ಕಂದರದ । ತಿಮ್ಮನ ಪ

ಮುಕುಟ ಮುತ್ತಿನ ಹಾರ । ಮಕರ ಕುಂಡಲಧಾರ ।
ಮಕ್ಕಳಾ ಮಣಿಸು ಕಾಮದಾ । ಅಕಳಂಕ ತುಲಸಿ ಸರ ।
ಪೊಕ್ಕಳ ಕಮಲ ಸುಂದರ । ಅಕುಟಿಲ ಹೃದಯಮಂದಿರ ।
ಸಕಲಕಾಲದಲಿ ನಿಜ । ಭಕುತರಿಗೆ ಒಲಿದಿಪ್ಪ ।
ಅಖಿಳ ಲೋಕಾಧೀಶ ಮುಕುತಾರ್ಥ ಮುರವೈರಿ ೧

ಉಂಗುರ ಕೈ ಬೆರಳ ಕರ ರ। ಥಾಂಗ ಶಂಖ ಪಾಣಿ
ಮಂಗಳಾಂಗಿಯ ರಮಣಾ ।
ಮುಂಗೈಯ ಕಡಗ ಕಂಕಣ ಬಾಹು ಭುಜಕೀರ್ತಿ ।

ಮುಂಗೈಯ ಫಣಿಯ ತಿಲಕಾ ।
ಬಂಗಾರದಂಬರ ಭವದೂರಾ ಪದದಲ್ಲಿ ।
ಪೊಂಗೆಜ್ಜೆ ಸರ್ವಾಭರಣದಿಂದ ಒಪ್ಪುವಾ ೨

ಪಾಂಡೆ ದೇಶವಾಸಾ ಪಾಂಡವರ ಸಂರಕ್ಷಕ ।
ಚಂಡ ಪ್ರಚಂಡ ಮಹಿಮಾ । ಗಂಡುಗಲಿಗಳ ಗಂಡಾ ।
ಕೊಂಡಾಡಿದವರಿಗೆ ತಂಡ । ತಂಡದ ವರವೀವಾ ।
ಮಂಡಲದೊಳಧಿಕ ಮಂಡೂಕ ವರದ । ಉದ್ದಂಡ ವಿಜಯವಿಠ್ಠಲ।
ಅಂಡಜಗಮನ ಕೃಷ್ಣಾ ತಿಮ್ಮಾ ೩

(ಇ) ಶ್ರೀ ನರಸಿಂಹ

೧೪೪

ನರಸಿಂಹ ವಜ್ರಸಿಂಹ
ಸರಸಿಜನಾಭಾ ದಕ್ಷಿಣ ಶರಧಿನಿವಾಸಾ ಪ

ಹಿರಣ್ಯಕಶ್ಯಪು ತಾ ಪ್ರಹ್ಲಾದನಾ ಬಾಧಿಸಲು
ಪರಿಯ ದೈವವೆ ಮೊರೆಯೋಗಲೂ
ಹಿರಿದಾಗಿ ಕೇಳಿ ಹಿತದಲಿ ಬಂದು ಬೊಬ್ಬಿಡಲು
ಹಿರಣ್ಯಗರ್ಭಾದಿಗಳು ಹಿರಿದು ಚಿಂತಿಸಲೂ ೧

ಭುಗಿಲೆನೆ ಧಿಗಿಲೆನೆ ದಿಕ್ಕಿನಲಿ ಪ್ರತಿ ಶಬ್ದ ಪುಟ್ಟಿತಿರೆ
ಪಗಲಿರಳು ಒಂದೆಂದರು ಸಕಲರೂ
ಝುಗಝುಗಿಪ ಬೆಳಗು ಕವಿದದು ಮೂರು ಲೋಕಕ್ಕೆ
ಉಗುರು ಕೊನೆ ಪೊಗಳಿ ವೇದಗಳು ಬೆರಗಾಗಿ ೨

ರಕ್ಕಸ ನೋಡಲು ಬಗೆದು ಕರುಳು ಕೊರಳಿಗೆ ಮಾಲೆ
ಇಕ್ಕಿ ಭಕ್ತಗೆ ಮೆಚ್ಚಿ ವರವನಿತ್ತಾ
ಕಕ್ಕಸದ ದೈವ ಅನಂತ ಪದುಮನಾಭ
ಮುಕ್ತಿದಾಯಕ ವಿಜಯವಿಠ್ಠಲ ಮಹದಾ ೩

೧೪೫

ನೀಲವರ್ಣ ನಿರುಪಮ
ಶ್ರೀಲೋಲನಲ್ಲೆ ಭಾಮೆ ಅವಲೋಲನಲ್ಲೆ ಭಾಮೆ ಪ

ಲೋಲನೊ ಬಾಲನೊ ಗೋಪಾಲನೊ ನಾನರಿಯೆ ಅ.ಪ.

ಇಂದು ತಮನ ಕೊಂದು ವೇದವ ತಂದವನಲ್ಲೆ ಭಾಮೆ
ಅವತಂದವನಲ್ಲೆ ಭಾಮೆ
ತಂದವನೊ ಬಂದವನೊ ಅದರಂದವನು ನಾನರಿಯೆ ೧

ಅರ್ಥಿಯಿಂದಲಿ ಗಿರಿಯ ಬೆನ್ನಿಲಿ ಪೊತ್ತವನಲ್ಲೆ ಭಾಮೆ
ಅವ ಪೊತ್ತನಲ್ಲೆ ಭಾಮೆ
ಪೊತ್ತವನೊ ತೆತ್ತವನೊ ಅದರರ್ಥವನು ನಾನರಿಯೆ ೨

ಭೂಮಿ ಚೋರನ ಕೊಂದ ವರಾಹ ಸ್ವಾಮಿಯಲ್ಲೆ ಭಾಮೆ
ಅವ ಸ್ವಾಮಿಯಲ್ಲೆ ಭಾಮೆ
ಸ್ವಾಮಿಯೊ ಪ್ರೇಮಿಯೊ ಬಹು ಕಾಮಿಯೊ ನಾನರಿಯೆ ೩

ತರಳ ಪ್ರಹ್ಲಾದನಿಗೊಲಿದ ನರಹರಿಯಲ್ಲೆ ಭಾಮೆ
ಅವ ನರಹರಿಯಲ್ಲೆ ಭಾಮೆ
ನರಹರಿಯೊ ಸಿರಿದೊರೆಯೊ ಆ ಉರವಣಿಗೆಯ ನಾನರಿಯೆ ೪

ನೆಲನ ಈರಡಿ ಮಾಡಿ ಅಳೆದ ಚೆಲುವನಲ್ಲೆ ಭಾಮೆ
ಅವ ಚೆಲುವನಲ್ಲೆ ಭಾಮೆ
ಚೆಲುವನೊ ಮಲೆವನೊ ಅಂಡಲೆವನೊ ನಾನರಿಯೆ ೫

ಕೊಡಲಿ ಮಸೆದು ರಾಯರನೆಲ್ಲ ಕೆಡಹಿದನಲ್ಲೆ ಭಾಮೆ
ಅವ ಕೆಡಹಿದನಲ್ಲೆ ಭಾಮೆ
ಕೆಡಹಿದನೊ ಮಡುಹಿದನೊ ಆ ತೊಡರವನು ನಾನರಿಯೆ ೬

ಸೀತಾ ಚೋರನ ಕೊಂದ ರಘುನಾಥನಲ್ಲೆ ಭಾಮೆ
ಅವ ನಾಥನಲ್ಲೆ ಭಾಮೆ
ನಾಥನೊ ಖ್ಯಾತನೊ ಆ ಮಾತನು ನಾನರಿಯೇ ೭

ಮಾವನ ಕೊಲಲು ಮಧುರೆಗೆ ಪೋದ ದೇವನಲ್ಲೆ ಭಾಮೆ
ಅವ ದೇವನಲ್ಲೆ ಭಾಮೆ
ದೇವನೊ ಭಾವನೋ ಗೋ ಕಾವನೊ ನಾನರಿಯೆ ೮

ತ್ರಿಪುರಾಂಗನೆಯರ ವ್ರತವನಳಿದ ಚಪಳನಲ್ಲೆ ಭಾಮೆ
ಅವ ಚಪಳನಲ್ಲೆ ಭಾಮೆ
ಚಪಳನೊ ವಿಪುಳನೊ ಆ ವಿಪರೀತವ ನಾನರಿಯೆ ೯

ಓಜೆಯಿಂದ ತೇಜಿಯನೇರಿದ ರಾಜನಲ್ಲೆ ಭಾಮೆ
ಅವ ರಾಜನಲ್ಲೆ ಭಾಮೆ
ರಾಜನೊ ಭೋಜನೊ ಆ ಸೋಜಿಗವ ನಾನರಿಯೆ ೧೦

ಸೃಷ್ಟಿಗೆ ಕರ್ತನು ವಿಜಯವಿಠ್ಠಲನಲ್ಲೆ ಭಾಮೆ
ಅವ ವಿಠ್ಠಲನಲ್ಲೆ ಭಾಮೆ
ವಿಠ್ಠಲನಾದರೆ ಇಷ್ಟೊಂದ್ಯಾತಕೆ ದಟ್ಟಡಿಗಳಿಗೊಂದಿಸುವೆ ೧೧

೧೪೬

ಭಳಿರೆ ಭಳಿರೆ ನರಸಿಂಹ ಮಹಾಸಿಂಹ ।
ಮಲಮಲಾ ಮಲತವರ ವೈರಿ ಉರಿಮಾರಿ ಪ

ನಗನಗಾ ನಗನಗಗಳಲ್ಲಾಡೆ ಚತುರ್ದಶ ।
ಜಗಜಗ ಜಗವೆಲ್ಲ ಕಂಪಿಸಿ ಕಂಬನಾಗೆ ॥
ಹಗೆ ಹಗೆ ಹಗೆ ಹಗೆ ಬಲವ ದೆಶೆಗೆಡಿಸಿ ರೋಷಾಗಿಡಿ ।
ಉಗು ಉಗು ಉಗುಳುತ್ತ ಬಂದ ನರಸಿಂಹ ೧

ಬಿಗಿ ಬಿಗಿ ಬಿಗಿದು ಹುಬ್ಬುಗಂಟನೆ ಹಾಕಿ ।
ಹೊಗೆ ಹೊಗೆ ಹೊಗೆ ಸುತ್ತಿ ಸರ್ವರಂಜೆ ॥
ನೆಗ ನೆಗ ನೆಗ ನೆಗದು ಕುಪ್ಪಳಿಸಿ ಅಸುರನ್ನ ।
ಮಗು ಮಗು ಮಗು ಮಗು ಬೇಡಿಕೊಂಡ ನರಸಿಂಹಾ ೨

ಉಗು ಉಗು ಉಗು ಉಗರಿಂದ ಕ್ರೂರನ್ನ ಹೇರೊಡಲ ।
ಬಗ ಬಗ ಬಗ ಬಗದು ರಕುತವನ್ನು ।
ಉಗಿ ಉಗೀ ಉಗೀ ಉಗಿದು ಚಲ್ಲಿ ಕೊರಳಿಗೆ ಕರುಳ ।
ತೆಗೆ ತೆಗೆ ತೆಗೆ ತೆಗೆದು ಇಟ್ಟ ನರಸಿಂಹಾ ೩

ಯುಗ ಯುಗ ಯುಗ ಯುಗದೊಳಗೆ ಪ್ರಣತಾರ್ತಿ ಹರನೆಂದು ।
ಝುಗ ಝುಗಾ ಝುಗಝುಗಿಪ ಮಕುಟ ತೂಗೆ ।
ನಗು ನಗು ನಗು ನಗುತ ಸುರರು ಗಗನದಿ ನೆರೆದು ।
ಮಿಗಿ ಮಿಗಿ ಮಿಗಿ ಮಿಗಿಲೆನೆ ನರಸಿಂಹಾ ೪

ಒಂದೊಂದೊಂದೊಂದು ಮುನಿಗಳಿಗೊಲಿದು ।
ಅಂದಂದಂದಂದದೀಗಾಯತ ವೊಲಿದು ।
ಅಂದಂದಂದವ ಕಾವ ಚೊಳಂಗಿರಿ ।
ಮಂದಿರನೆ ವಿಜಯವಿಠ್ಠಲ ನರಸಿಂಹಾ ೫

೧೪೭

ರಂಗನ ನೋಡಿರೊ ಸಿರಿ ನರಸಿಂಗನ ಪಾಡಿರೊ ।
ಮಂಗಳಮೂರುತಿ ಡಿಂಗರಿಗರ ಹೃಸ್ಸಂಗ ಕರುಣಾತರಂಗಾ ಪ

ತನುಜನ ಜನಕನು ಕೊಲ್ಲಲು
ಮೊರೆಯಿಡಾ ಬಂದ । ಕಂಭದೊಳಿಂದ ।
ಮನುಜಕೇಸರಿ ರೂಪಧರಿಸಿದ ನಿಜ
ಲೋಕಸ್ವಾಮಿ । ಅಂತರ್ಯಾಮಿ ॥

ದನುಜನ ಉದರ ಬಗೆದು
ಕರುಳಮಾಲೆ ಇಟ್ಟಾ । ಕೊರಳೊಳು ದಿಟ್ಟಾ ।
ವನಜ ಭವಾದ್ಯರು ಜಯ
ಜಯವೆನುತಿರೆ ಮೆರೆದಾ । ಪ್ರಹ್ಲಾದವರದಾ ೧

ಮನದಲಿ ಬೇಡಿದ ಭಾಗ್ಯವ
ಕೊಡುವನು ಚಲುವಾ । ಭಕುತರಿಗೊಲಿವ ।
ಅನುದಿನದಲಿ ಅನುಕಂಪನು
ಹರಿ ನಮಗೆಲ್ಲಾ । ಭಕ್ತವತ್ಸಲಾ ॥
ಘನಮಹಿಮನು ಪರಿಪೂರ್ಣ
ಗುಣಾಂಬುಧಿ ತೇಜ । ರಾಜಾಧಿ ರಾಜ ।
ಜನುಮ ಜನುಮದಲಿ ಜನನಾದಿಗಳಿಗೀತ ಮುಖ್ಯ ।
ಕರ್ತನು ಸಖ್ಯ ೨

ಕನಕಮುನೀಶ್ವರ ತಪವನು ಮಾಡಲು ಮೆಚ್ಚಿ । ಬಂದನು ಮೆಚ್ಚಿ ।
ಕನಕ ವರುಷವನು ಗರೆವದು ಅಂದಿನ ದಿನದಿ । ಆನಂದವನಧಿ ।
ಕನಕ ನೃಕೇಸರಿ ಎನಿಸಿದಾ ಅಂದಿನಾರಭ್ಯಾ । ಈತನೆ ಸಭ್ಯಾ ।
ಅಳನಯನ ರೂಪ ಲಿಂಗಾಕೃತಿಯಾ ಪೊಳೆವಾ ।
ನುತಿಸಲು ಸುಳಿವಾ ೩

ಗುಣದಲಿ ತಿಳಿವದು ರುದ್ರಗೆ ಹರಿರೂಪವಿಲ್ಲಾ ।
ಇದು ಪುಸಿಯಲ್ಲಾ ।
ವನಜನಾಭಗೆ ನಾನಾ ರೂಪಗಳುಂಟೆಂದು
ವೇದಾ । ಪೇಳ್ವದು ಮೋದಾ ॥
ಪ್ರಣತನಾಗದ ಇನಿತಾಗದ ಪಾಪಿಷ್ಠ ಮನುಜಾ ।
ಅವನೇ ದನುಜಾ ।
ಗಣನೆಮಾಡದಲಿರಿ ಇವರನು ಸುಜನರು ಇಂದೆ ।
ನಮಗೀತ ತಂದೆ ೪

ಇವನಂತೆ ಒಪ್ಪುವಾ ಪೋಂಪಾ
ನಿಧಿಯೊಳು ಧನದಾ । ದಿಕ್ಕಿಲಗಾಧಾ ।
ಮುನಿಜನ ಸಮ್ಮತ ಶ್ರುತಿ ಉಕ್ತಿಗಳಲ್ಲಿ ಅಕ್ಕು । ಕೇಳೀವಾಕು ।
ಮಣಿದು ನಮಿಸಿ ಒಮ್ಮೆ ಧ್ಯಾನವ
ಮಾಡಲು ಭಕುತಿ । ಉಂಟು ವಿರಕುತಿ ।
ಹನುಮದೀಶ್ವರ ನಮ್ಮ ವಿಜಯ
ವಿಠ್ಠಲ ನರಸಿಂಗಾ । ರಿಪುಗಜ ಸಿಂಗಾ ೫

೧೪೮

ರಂಗ ಮಾನವ ಸಿಂಗನಾದನು ಪ

ರಂಗಮಾನವ ಸಿಂಗನಾಗಲು
ಭಂಗಾರ ಗಿರಿಯ ಶೃಂಗಗಳಲ್ಲಾಡೆ
ಹಿಂಗದೆ ಎಂಟು ಮಾತಂಗ ಸಪುತ ದ್ವೀ–
ಪಂಗಳು ಕಂಪಿಸೆ ವಿಗಡದಿ ಅ.ಪ.

ವನಜ ಭವನಂದನರಾನಂದದಿ
ವನಧಿಯೊಳಿದ್ದ ವನಜನಾಭನ
ವನಜಾಂಘ್ರಿ ದರುಶನಕ್ಕೋಸುಗದಿ
ಘನ ವೈಕುಂಠ ಪಟ್ಟಣ ಸಾರೆ
ವಿನಯರಲ್ಲದ ಜಯನು ವಿಜಯನವ–
ರನು ತಡೆಯಲು ಮುನಿದೀರ್ವರಿಗೆ
ದನುಜಾಂಗದಿಂದ ಜನಿಸಿರೋ ಎಂದು
ಮುನಿಗಳು ಶಾಪವನ್ನು ಈಯೆ ೧

ದಿಕ್ಕು ಎಂಟರೊಳು ಕಕ್ಕಸರೆನಿಸಿ
ದಿಕ್ಕು ಪಾಲಕರ ಲೆಕ್ಕಿಸದಲೇವೆ
ಸೊಕ್ಕಿ ತಿರುಗುವ ರಕ್ಕಸರಾಗಲು
ಮುಕ್ಕಣ್ಣ ಬಲದಿಂದಕ್ಕೆ ಜದಿ
ನಕ್ಕು ಪರಿಹಾಸ್ಯಕಿಕ್ಕಿ ಸರ್ವರನು

ಚಕ್ರವರ್ತಿಯಾಗಿ ವಕ್ರರ ಶೌರ್ಯದಿ
ಮುಕ್ಕಿ ಮುಣಿಗಿ ಧರ್ಮಕೆ ವಿರೋಧಿಸಿ
ಸಿಕ್ಕದಂತಲ್ಲಲ್ಲಿ ತುಕ್ಕುತಿರೆ ೨

ಇತ್ತ ಶಾಪದಿಂದಲಿತ್ತಲೀರ್ವರಿಗಾ
ಪೊತ್ತ ಸುರಾಂಗದಲಿತ್ತಲೋರ್ವವನಿಯು
ಕಿತ್ತು ಒಯ್ಯಲು ಬೆಂಬುತ್ತಿ ಹರಿಯು ಕೊಲ್ಲೆ
ಇತ್ತ ಹಿರಣ್ಯನುನ್ಮತ್ತದಿಂದ
ಸುತ್ತುತಿರುವಾಗ ಪುತ್ರನು ಭಾಗವ
ತ್ತೋತ್ತಮನಾಗಿ ಸರ್ವೋತ್ತಮ ಬ್ರಹ್ಮನ
ಪೆತ್ತ ಹರಿಯೆಂದು ಎತ್ತಿ ಕರವ ಲೋ-
ಕತ್ರಯವರಿವಂತೆ ಬಿತ್ತಿದನು ೩

ಸೊಲ್ಲು ಕೇಳುತಲಿ ಎಲ್ಲೆಲೊ ನಿನ್ನ ದೈ-
ವೆಲ್ಲೊ ಮತ್ತಾವಲ್ಲೆಲ್ಲಿಹನೆನುತಲಿ
ನಿಲ್ಲದರ್ಭಕನ್ನ ಕಲ್ಲು ಕೊಳ್ಳಿ ಮುಳ್ಳು
ಭಲ್ಲೆ ಕರವಾಳ ಬಿಲ್ಲು ನಾನಾ
ಎಲ್ಲ ಬಾಧೆಯನ್ನು ನಿಲ್ಲದೆ ಬಡಿಸೆ
ಎಳ್ಳನಿತಂಜದೆ ಎಲ್ಲೆಲ್ಲಿಪ್ಪನೆಂದು
ಪುಲ್ಲಲೋಚನ ಶ್ರೀ ವಲ್ಲಭ ಎನ್ನಯ
ಸೊಲ್ಲನು ಬೇಗದಿ ಸಲ್ಲಿಸೆನೆ ೪

ಏನು ಕರುಣಾಳೊ ಏನು ದಯಾಬ್ಧಿಯೊ
ಏನು ಭಕ್ತರಾಧೀನನೊ ಏನೇನು
ನಾನಾ ಮಹಿಮನೊ ಏನೇನೊ ಏನೊ-ಈ-
ತನ ಲೀಲೆ ಕಡೆಗಾಣರಾರೊ
ದಾನವಾಭಾಸನ ಮಾನಹಾನಿ ಗೈಯೆ
ಸ್ಥಾಣು ಮೊದಲಾದ ಸ್ಥಾನದಲ್ಲಿ ಸರ್ವ
ನಾನೆ ವ್ಯಾಪ್ತನು ಎಂಬಾ ನುಡಿ ತೋರುತ್ತ
ದೀನರಿಗೆ ದತ್ತ ಪ್ರಾಣನಾಗ ೫

ತುಟಿಯು ನಡುಗೆ ಕಟ ಕಟ ಪಲ್ಲು
ಕಟನೆ ಕಡಿದು ನೇಟನೆ ಚಾಚುತ
ಪುಟಪುಟ ನಾಸಪುಟದ ರಭಸ
ಕಠಿನ ಹೂಂಕಾರ ಘಟುಕಾರ
ನಿಟಿಲನಯನ ಸ್ಫುಟಿತ ಕಿಗ್ಗಿಡಿ
ಮಿಟಿಯೆ ಹುಬ್ಬಿನ ನಿಟಿಲ ರೋಷದಿ
ಮಿಟಿಯೆ ಚಂಚು ಪುಟದಂತೆ ರೋಮ
ಚಟುಲ ವಿಕ್ರಮುದ್ಧಟ ದೈವ ೬

ನಡುಕಂಭದಿಂದ ಒಡೆದು ಮೂಡಿದ
ಕಡು ದೈವವು ಸಂಗಡಲೆ ಚೀರಲು
ಬಡ ಜೀವಿಗಳು ನಡುಗಿ ಭಯವ
ಪಡುತಲಿ ಬಾಯ ಬಿಡುತಿರೆ
ಕಡೆಯೆಲ್ಲೊ ಹೆಸರಿಡಬಲ್ಲವರಾರೊ
ತುಡುಗಿ ದುಷ್ಟನ ಪಡೆದ ವರವ
ಪಿಡಿದು ಅವನ ಕೆಡಿಸಿ ಹೊಸ್ತಿಲೊ-
ಳಡಗೆಡಹಿದನು ಪವಾಡದಲಿ ೭

ವೈರಿಯ ಪಿಡಿದು ಊರುಗಳಲ್ಲಿಟ್ಟು
ಘೋರ ನಖದಿಂದ ಕೊರೆದು ಉದರವ
ದಾರುಣ ಕರುಳಹಾರ ಕೊರಳಲ್ಲಿ
ಚಾರುವಾಗಿರಲು ಮಾರಮಣ
ಸಾರಿಗೆ ಭಕ್ತಗೆ ಕಾರುಣ್ಯಮಾಡಿ ಶ್ರೀ
ನಾರೀಶನಾನಂದದಿ ತೋರುತಿರೆ ಸುರ-
ವರರ್ನೆರೆದು ಅಪಾರ ತುತಿಸಿ ಪೂ-
ಧಾರೆ ವರುಷ ವಿಸ್ತಾರೆರೆಯೆ ೮

ನೃಕೇಸರಿಯಾಗೆ ಭಕುತಗೆ ಬಂದ
ದುಃಖವ ಕಳೆದು ಸುಖವನೀವುತ್ತ
ಅಕಳಂಕದೇವ ಲಕುಮಿಪತಿ ತಾ-
ರಕ ಮಂತ್ರಾಧೀಶ ಸುಕುಮಾರ
ಅಖಿಳ ಲೋಕಪಾಲಕ ಪ್ರಹ್ಲಾದಗೆ
ಸಖನಾಗಿ ಇಪ್ಪ ಸಕಲ ಕಾಲದಿ
ಶಕಟ ಭಂಜನ ವಿಜಯವಿಠ್ಠಲ
ಮುಕುತಿ ಈವ ಭಜಕರಿಗೆ ೯

೧೪೯

ವಂದೇ ಮುಕುಂದ ನಮೊ ।
ವಂದೇ ಮುಕುಂದ ನಮೊ ।
ವೃಂದಾರ ಕೇಶ ನಮೊ ।
ನಂದ ಮೂರುತಿ ಪರಮಾನಂದ ನರಸಿಂಹಾ ಪ

ಬಿಸಿಜಪೀಠನ ವರವ ಪಡೆದು ಮಹಾರಾಜೇಂದ್ರ ।
ವಸುಮತಿಗೆ ತಾನೆ ಸ್ವಾಮಿ ಎಂದು ॥
ಹಸುಳೆಯನು ಬಾಧಿಸಲು ಮೊರೆಯಿಡಲಾಕ್ಷಣ ।
ಮಿಸಣಿಪ ಕಂಭದಿ ಬಂದ ಭಳಿರೆ ನರಸಿಂಹಾ ೧

ರೋಷವನೆ ತಾಳಿ ನಿಟ್ಟುಸುರಗೈಸಿಕೊಳುತಾ ।
ಸೂಸಿ ಕಿಡಿಗಳನುದುರೆ ಕುಪ್ಪಳಿಸುತ ಕಮ ॥
ಲಾಸನಾದ್ಯರ ಪಾಲಿಸಿದ ನರಸಿಂಹಾ ೨

ಅಜವಾಣಿ ನೆಲೆಯಲ್ಲಿ ವಾಸವಾಗಿದ್ದ ನರ ।
ಗಜಪಗೀಯ ಮೊಗನೆ ಆನಂದ ಮಗನೇ ॥
ಭಜಿಸುವನು ಗತಿ ಕೊಡುವ ಜನಮೇಜಯ ನೃಪವರದ ।
ವಿಜಯವಿಠ್ಠಲ ವರದಾತೀರ ನರಸಿಂಹ ೩

(ಈ) ಶ್ರೀರಾಮ

೧೫೦

ಏನು ಕಾರಣ ಮಲಗಿದಿಯೊ
ಶ್ರೀನಾಥ ರಘುಕುಲೋದ್ಭವ ದರ್ಭಶಯನಾ ಪ

ಸೀತೆ ಪೋದಳು ಎಂದು ಚಿಂತೆಯಲಿ ಮಲಗಿದೆಯೊ
ಸೇತುಗಟ್ಟುವದು ಅಸಾಧ್ಯವೆಂದು ಮಲಗಿದೆಯಾ
ಕೋತಿಗಳ ಕೈಯಲೆ ರಣವಾಗದೆಂದು ಮಲಗಿದೆಯಾ
ಪಾತಕ ಹರದೈತ್ಯ ಭಂಜಾ ತಿಳುಪುವದು
ಜ್ಯೋತಿರ್ಮಯರೂಪ ದರ್ಭಶಯನಾ ೧

ವನವಾಸ ತಿರಗಲಾರೆನೆಂದು ಮಲಗಿದೆಯೊ
ವನಧೀಶ ಮಾರ್ಗವನು ಕೊಡನೆಂದು ಮಲಗಿದೆಯೊ
ದನುಜ ಬಲ್ಲಿದನೆಂಬೊ ವ್ಯಾಕುಲದಿ ಮಲಗಿದೆಯೊ
ಜನನ ಮರಣರಹಿತ ರಾಮ ತಿಳುಹುವದು
ಹನುಮ ವಂದಿತ ಪಾದ ಶ್ರೀದರ್ಭಶಯನಾ ೨

ಅನಿಲಾರಿ ಅಹರಗೆ ಕರುಣಿಸಿ ಮಲಗಿದೆಯೊ
ವನಜ ಸಂಭವಗೆ ನೀ ಒಲಿಯ ಬಂದು ಮಲಗಿದಿಯೊ
ಮುನಿಗಳು ಸ್ತೋತ್ರವ ಮಾಡಲು ಹಿಗ್ಗಿ ಮಲಗಿದೆಯೊ
ಜನನಾಥ ಜಾನಕಿಕಾಂತ ತಿಳುಪುವದು
ಎನಗೊಲಿದ ವಿಜಯವಿಠ್ಠಲ ದರ್ಭಶಯನಾ ೩

೧೫೧

ಕಾಮಹರ ಒಬ್ಬ ತಾನೆ ಬಲ್ಲಾ ।
ರಾಮ ರಾಮ ಸೀತಾರಾಮ ರಾಮನಲ್ಲದಿಲ್ಲವೆಂದು ಪ

ಕೈಯಲಿ ಕಿನ್ನರಿ ಧರಿಸಿ ಸಿರಿಮೊಗದಿಂದ ।
ಮೈಯಲಿ ದ್ವಾದಶ ಮಂತ್ರ ಧರಿಸಿ ।
ಕೈಲಾಸಗಿರಿಯಲ್ಲಿ ಪಾರ್ವತಿ ಕೂಡ ಜಗ
ದಯ್ಯನಯ್ಯ ಜಗದೊಡಿಯ ರಾಮನಲ್ಲದಿಲ್ಲೆಂದು ೧

ಫಣಿಯಾಭರಣವು ಪೆಡೆಯೆತ್ತಿ ಇರಲು ।
ಮಣಿ ಮಣಿ ರುಂಡಮಾಲೆ ತೂಗಾಡಲು ।
ಕುಣಿದು ಕಣಕಾಲಿಂದ ಥಕ್ ಥಕ್ ಥೈ ರು
ಕ್ಮಿಣಿ ಪತಿ ಸರ್ವೋತ್ತಮ ರಾಮನಲ್ಲದಿಲ್ಲವೆಂದು ೨

ಕಾಳಕೂಟದ ವಿಷಬಿಂದು ಮಾತುರನುಂಗೆ ।
ತಾಳಲಾರದೆ ತಳಮಳವಗೊಂಡು ।
ಕಾಳಿಮರ್ದನ ಕಮಲಾಯತಾಕ್ಷ ಎನ್ನ ।
ಪಾಲಿಸಿದ ಪರಮಾತ್ಮ ರಾಮನಲ್ಲದಿಲ್ಲವೆಂದು ೩

ಗಜಮುಖ ತಾಳವ ಪಿಡಿದು ತಥೈ ಎನ್ನಿ ।
ಅಜಸುತ ರಿಪು ಮದ್ದಳಿಯೆ ಮುಟ್ಟಿ ।
ಗಜ ಚರ್ಮಾಂಬರ ಗಾಯನವ ಮಾಡುತ-ತ್ರಿ ।
ಜಗಾಧಿಪತಿ । ವಿಷ್ಣು ರಾಮನಲ್ಲದಿಲ್ಲವೆಂದು ೪

ಆರು ಮುಖದವ ಶಂಖವನ್ನು ಊದೆ ।
ಭೈರವ ನಾಗಸ್ವರವ ನುಡಿಸೆ ।
ಚಾರು ಪ್ರಥಮ ಭೂತ ತಲೆ ಚಪ್ಪಳಿಡೇ।
ಧಾರಣಿಧರ ಸೀತಾರಾಮನಲ್ಲದಿಲ್ಲವೆಂದು ೫

ಗೋರಾಜ ಸರಿಗಮಪದನಿಸ ಎಂದು ನಲಿಯೇ ।
ಉರಗಾದಿ ಮೂಷಕಾದಿ ಚಿಗಿದಾಡಲು ।
ವಾರಣದ ಗಂಗೆ ಸಿರದಲಿ ತುಳುಕಲು ।
ನಾರಾಯಣ ಪರದೈವ ರಾಮನಲ್ಲದಿಲ್ಲವೆಂದು ೬

ತುಂಬುರನಾರಂದ ತಂದನ್ನಾತಾ ಎನ್ನೆ ।
ಅಂಬರದಿಂದ ಪೂಮಳೆಗರೆಯೆ ।
ಅಂಬುಜಪತಿ ಶಿರಿ ವಿಜಯವಿಠ್ಠಲ ವಿ
ಶ್ವಂಭರಜಾಂಡಕರ್ತು ರಾಮನಲ್ಲದಿಲ್ಲವೆಂದು ೭

೧೫೨

ಜಾನಕಿರಾಮ ಜಾನಕಿರಾಮ
ಜಾನಕಿರಾಮ ಜಾನಕಿರಾಮ ಪ

ಭಕ್ತರ ನೋಡು ಗೀತವ ಪಾಡು
ನೃತ್ಯವನಾಡೊ ವರಗಳ ನೀಡೋ ೧

ವಾರಿಧಿ ಬಂಧ ವಸುದೇವ ಕಂದ
ಸ್ವಾರಸ್ಯ ತಂದ ಸತ್ಕರುಣದಿಂದ ೨

ಶಿರಿವಾಸ ಸಿರಿದೇವಿ ತೋಷ
ಶಿರಿ ವಿಜಯವಿಠ್ಠಲ ಉದ್ಧವ ಘೋಷ ೩

೧೫೩

ರಂಗನ ನೋಡಿರೈ ಕರುಣಾಪಾಂಗನ ಪಾಡಿರೈ ಪ

ಮಂಗಳ ಮೂರುತಿ ಮನುಕುಲೋತ್ತುಂಗ
ಜಗದಂತರಂಗ ಹೋ ಹೋ ಅಪ

ಶೀಕರೆ ಪುಟ್ಟಿದೆ ಮೇದಿನಿಪಾಲಗೆ ಮೆಚ್ಚಿ-ಬಂದನೊ ಹೆಚ್ಚಿ
ಆತುಮ ಮೂರುತಿ ದಶರಥನಿಗೆ ಮಗನಾದ-
ಲೀಲಾ ವಿನೋದ
ಜ್ಯೋತಿ ಪ್ರಕಾಶನು ಸಾಕೇತಪುರದಲಿ ನಲಿದ-
ಸುತ್ತಿ ಪರಿಗೊಲಿದ
ಭೂತಳದೊಳು ಜಾನಕಿಗೆ ನಾಥನಾಗಿ ಮೆರೆದ-
ಕಾಮಿತಗರೆದ ಹೋ ಹೋ ೧

ಜಲಜಸಂಭವಭವ ಮಿಕ್ಕಾದವರನು ಗರ್ಭ-ದೊಳಿಟ್ಟ ಸರ್ಬ
ಜಲಜಾಯತದಳ ಪೊಕ್ಕಳಿಂದಲಿ
ಅಂದು ಪಡೆದ-ಮಗನಿಗೆ ನುಡಿದ
ಪ್ರಳಯಕಾಲದಿ ವಟ ಪತ್ರದ ಮೇಲ್ ಮಲ-ಗಿದ್ದ ಸುಪ್ರಸಿದ್ಧ
ಪೊಳೆದ ಪ್ರಣವ ವಿಮಾನದೊಳಗಿಂದ
ಬಂದ ಪರಮಾ-ನಂದ ಹೋ ಹೋ ೨

ಬರುತ ವಿಭೀಷಣ ಕಾವೇರಿ ತೀರಕೆ ಬಂದ, ಉತ್ಸಾಹದಿಂದ
ಪರಮ ಪುರುಷ ಲಂಕೆಗೆ ಪೋಗದೆ ನಿಂತ-ಬಲು ಜಯವಂತ
ಧರಣಿಪತಿ ಧರ್ಮವರ್ಮನ ಮಾತಿಗೆ ನಕ್ಕ-ಕೇಳಾವಾಕ್ಯ
ನಿರುತದಿ ದಾಲ್ಭ್ಯ ಮುನೀಶನಿಂದ
ಪೂಜೆಗೊಂಬ ಸರ್ವರ-ಬಿಂಬ ಹೋ ಹೋ ೩

ಲೋಕ ಕಂಟಕ ದಶಕಂಠನ ವಂಶವ ಕೊಂದ -ಈತ ಮುಕುಂದ
ಏಕ ತನ್ನೊಳು ತಾನೆ ಪೂಜೆಯ
ಮಾಡಿಸಿಕೊಂಡ -ಬಲು ಪ್ರಚಂಡ
ನಾಕದ ಜನರೆಲ್ಲ ಜಯ
ಜಯವೆನುತಿರಲಯೋಧ್ಯಾ-ಆಳ್ದ ಅನಾದ್ಯ
ಕೈಕಸೆಸುತ ಭಜಿಸಲು ವಲಿದು ಬಂದನಂದು,
ಕರುಣಾ-ಸಿಂಧು ಹೋ ಹೋ ೪

ದಕ್ಷಿಣ ಮುಖನಾಗಿ ಉರಗನ ಮೇಲ್ ಮಲಗಿಪ್ಪ –
ಮೂಜಗದ್ದಪ್ಪ
ನಕ್ಷತ್ರೇಶ ಸರೋವರತಟ ಪುನ್ನಾಗ–ವೃಕ್ಷದಲ್ಲಿಹ ದಕ್ಷ
ಅಕ್ಷಯ ಮೂರುತಿ ಅಪ್ರಾಕೃತ ಶರೀರ–ಧೃತ ಮಂದಾರ
ಪಕ್ಷಿ ವಾಹನ ನಮ್ಮ ವಿಜಯವಿಠ್ಠಲ ರಾಜ –
ರಾಜಾಧಿರಾಜ ಹೋ ಹೋ ೫

೧೫೪

ರಾಮ ಜಾನಕೀರಮಣ ರಾಜೀವದಳನಯನ
ಧಾಮ ನಿಧಿವಂಶ ಸೋಮನಿಗೆ ಪ

ಪದುಮಶಾಲೆಯೊಳಗೆ ಪದುಮಗದ್ದುಗೆ ಹಾಕಿ
ಪದುಮನಾಭನು ಬಂದು ಕುಳಿತನು
ಪದುನುನಾಭನು ಬಂದು ಕುಳಿತನು ಎಡದಲ್ಲಿ ಪದುಮಾಕ್ಷಿ
ಪದುಮ ಸಾಧನೆ ಲಕುಮಿ ಒಪ್ಪಿದಳು. ೧

ವಾಣಿ ಭಾರತಿ ಖಗಪರಾಣಿ ವಾರುಣಿ ಗಿರಿಜೆ
ಮೀನಕೇತನ ರಾಣಿ ಇಂದ್ರಾಣಿ ಮಿಕ್ಕಾನಲಿದಾಡುತಲಿ
ಮೀನಕೇತನ ರಾಣಿ ಇಂದ್ರಾಣಿ ನಕ್ಕು ನಲಿದಾಡುತಲಿ
ಆನಂದದಿ ಬಂದು ಕುಳಿತರು ತಮ್ಮ ಠಾಣೆಗೆ ೨

ಚಿನ್ನದ ತಳಿಗೇಲಿ ಎಣ್ಣೆ ಅರಿಶಿಣ ಗಂಧ
ಸಣ್ಣ ಕುಂಕುಮ ಜಾತಿ ಕಸ್ತೂರಿ ಪೊಂಗಳಸ
ಸಣ್ಣ ಕುಂಕುಮ ಜಾತಿ ಕಸ್ತೂರಿ ಪೊಂಗಳಸ
ಹೆಣ್ಣುಗಳ ಮಧ್ಯೆ ಇಳಿಸಿದರು ೩

ತಂದೆ ತಾತನ ಬಳಿಯ ಮಂದಾಕಿನಿ ವಾಗ್ವಿಯ–
ರೊಂದಾಗಿ ಒಡಗೂಡಿ ರಂಗಯ್ಯನ ಕೈಗೆ

ಒಂದಾಗಿ ಒಡಗೂಡಿ ರಂಗಯ್ಯನ ಕೈಯೊಳಗೆ
ತಂದು ಅರಿಶಿಣ ಎಣ್ಣೆ ಗಂಧವಿತ್ತು ೪

ತಡಮಾಡಲಾಗದು ಕಡಲಶಯನ ನಿಮ್ಮ
ಮಡದಿಯಂಗಕ್ಕೆ ತೊಡೆವುದೆನಲು
ಮಡದಿಯಂಗಕ್ಕೆ ತೊಡೆವುದು ಎನಲಾಗಿ
ಕಡು ಹರುಷದಿ ಸತಿಯಳ ನೋಡಿದನು ೫

ಎನ್ನರಸಿ ಹೊನ್ನರಸಿ ಪ್ರಾಣದರಸಿ ಪಟ್ಟದರಸಿ ।
ಕನ್ಯೆ ಶಿರೋಮಣಿ ಪಾವನ ದೇಹಿ ॥
ಕನ್ಯೆ ಶಿರೋಮಣಿ ಪಾವನ ದೇಹಳೆ ನಿನ್ನ ।
ಕನ್ನಡಿ ಮುಖವ ತೋರರಿಷಿಣವ ನಾ ಹಚ್ಚುವೆ ೬

ತಂದೆ ನಂದನರಿಗೆ ಬಂಧು ಬಳಗ ಸುತ್ತ ।
ಹೊಂದಿದ ಜನರಿಗೆ ಹಲವರಿಗೆ ॥
ಹೊಂದಿದ ಜನರಿಗೆ ಹಲವರಿಗೆ ಕದನ ।
ತಂದು ಹಾಕುವಳೆಂದು ಹಚ್ಚಿದನು ೭

ತೂಗಿಸಿಕೊಂಬುವಳೆ ದೌತ್ಯಕ್ಕೆ ಸಲ್ಲುವಳೆ ।
ಬಾಗಿಲ ಕಾಯಿಸುವಳೆ ಬಲ್ಲಿದರ ॥
ಬಾಗಿಲಕಾಯಿಸುವಳೆ ಬಲ್ಲಿದರನು ಬಿಡದೆ ।
ಸಾಗರನ ಮಗಳು ಎಂದು ತೊಡೆದನು ೮

ಇಂದಿರಾದೇವಿ ಬಾ ಮಂದಿರಾಂಬುಜ ರಾಮ ।
ಸುಂದರ ಶ್ರೀವಾರಿ ಮಂಗಳಗಾತ್ರೆ ॥
ಸುಂದರ ಶ್ರೀನಾರಿ ಮಂಗಳಗಾತ್ರೆ ಯೆಂದು ।
ಅಂಗಜ ಜನಕನು ನಗುತಲಿದ್ದ ೯

ರಮಣಿಯ ದೇಹಕ್ಕೆ ಕಮಲನಾಭನು ಎದ್ದು ।
ವಿಮಲಕಸ್ತೂರಿ ಗಂಧವರಿಷಿಣ ಎಣ್ಣೆ ॥
ವಿಮಲ ಕಸ್ತೂರಿ ಗಂಧವರಿಷಿಣ ಎಣ್ಣೆಯ ।
ಕ್ರಮದಿಂದ ಲೇಪಿಸಿ ಊಟಣಿಸಾರಿ ೧೦

ಸಾಕಾರಗುಣವಂತಿ ತ್ರಿಲೋಕದ ಜನನಿ ।
ನಾಕಜವಂದಿತಳೆ ನಾಗಗಮನೆ ॥
ನಾಕಜವಂದಿತಳೆ ನಾಗಗಮನೆ ಏಳೂ ।
ಶ್ರೀಕಾಂತನ ಸೇವೆಯ ಮಾಡೆಂದರು ೧೧

ಅಂದ ಮಾತನು ಕೇಳಿ ಗಂಧ ಅರಷಿಣ ಕೊಂಡು ।
ನಿಂದು ಸಮ್ಮುಖದಲ್ಲಿ ರಂಗನ ನೋಡಿ ।
ನಿಂದು ಸಮ್ಮುಖದಲ್ಲಿ ರಂಗನ ನೋಡಿ ಹಿಗ್ಗಿ ।
ಚಂದ್ರವದನೆ ಪತಿಗೆ ಹಚ್ಚಿದಳು ೧೨

ಗೋವಳರ ಎಂಜಲು ಆವಾಗ ತಿಂದವನೆ ।
ಮಾವನ್ನ ಕೊಂದವನೆ ಮಾಯಾಕಾರ ॥
ಮಾವನ್ನ ಕೊಂದವನೆ ಮಾಯಾಕಾರನೆ ನಿನ್ನ ।
ಸೇವೆಗೆ ಶಕ್ತಳೆನುತ ಹಚ್ಚಿದಳು ೧೩

ಬೆಣ್ಣೆ ಮೊಸರು ಕದ್ದು ಹೆಣ್ಣುಗಳ ಕೆಡಿಸಿ ।
ಮುನ್ನೆ ತೊತ್ತಿನ ಮಗನ ಮನಿಯ ಉಂಡ ॥
ಮುನ್ನೆ ತೊತ್ತಿನ ಮಗನ ಮನಿಯಲುಂಡ ಹಿಂದೆ ।
ಹೆಣ್ಣಾಗಿ ಇದ್ದವನೆಂದು ಹಚ್ಚಿದಳು ೧೪

ಎನ್ನರಸ ಚೆನ್ನರಸ ಪ್ರಾಣದರಸ ಪಟ್ಟಣದರಸ ।
ಭಿನ್ನವಖಿಳ ಜೀವಕ್ಕೆನ್ನ ಒಡೆಯ ॥
ಭಿನ್ನವಖಿಳ ಜೀವಕ್ಕೆನ್ನ ಒಡೆಯ ಸಲಹಿಂದು ।
ಚೆನ್ನಾಗಿ ಅರಿಷಿಣ ಗಂಧ ಹಚ್ಚಿದಳು ೧೫

ನಿತ್ಯ ಕಲ್ಯಾಣ ಪುರುಷೋತ್ತಮ ಸರ್ವೇಶ ।
ಸತ್ಯಸಂಕಲ್ಪ ಸಿದ್ಧ ಅಪ್ರಮೇಯಾ ॥
ಸತ್ಯಸಂಕಲ್ಪ ಸಿದ್ಧ ಅಪ್ರಮೇಯನೆಂದು ।
ಮಿತ್ರೆ ಸರ್ವಾಂಗಕ್ಕೆ ಹಚ್ಚಿದಳು ೧೬

ದೇವಿ ದೇವೇಶಗೆ ಈ ಉರುಟಣೆಯಿಲ್ಲ ।
ಆವಾವ ಬಗೆ ಎಲ್ಲ ತೋರಿಸುತ್ತ ॥
ಆವಾವ ಬಗೆ ಎಲ್ಲ ತೋರಿ ವಧು-ವರಗಳಿಗೆ ।
ಹೂವು ಬಾಸಿಂಗವ ರಚಿಸಿದರು ೧೭

ಅಸುರ ವಿರೋಧಿ ವಸುದೇವನಂದನ ।
ಪಶುಪತಿ ರಕ್ಷಕ ಪರಮ ಪುರುಷ ॥
ಪಶುಪತಿ ರಕ್ಷಕ ಪರಮ ಪುರುಷ ಎಂದು ।
ಹಸನಾಗಿ ಲೇಪಿಸಿ ಇತ್ತ ಜನರ ೧೮

ಶೃಂಗಾರವಂತೇರು ರಂಗ ಶ್ರೀಲಕುಮಿಗೆ ।
ಮಂಗಳಾರತಿ ಎತ್ತಿ ಹರಸಿದರು ॥
ಮಂಗಳಾರತಿ ಎತ್ತಿ ಹರಸಿ ದೇವರಮನೆಗೆ ।
ಅಂಗನೆಯಳ ಸಹಿತ ನಡೆಯೆಂದರಾಗ ೧೯

ಎತ್ತಿಕೊಂಡನು ರಂಗ ಚಿತ್ತದ ವಲ್ಲಭೆಯ ।
ಮತ್ತೆ ಸುಗಂಧಿಯರು ಹೊಸ್ತಿಲೊಳಗೆ ॥
ಮತ್ತೆ ಸುಗಂಧಿಯರು ಹೊಸ್ತಿಲೊಳಗೆ ನಿಂದು ।
ಪತ್ನಿಯ ಹೆಸರು ಪೇಳೆಂದರು ಆಗ ೨೦

ಬೇಗ ಮಾರ್ಗವ ಸಾರಿ ತೂಗಲಾರನು ಇವಳ ।
ಸಾಗಿ ಪೋಗುವನೆಂದು ಪೇಳುತಿರಲು ॥
ಸಾಗಿ ಪೋಗುವನೆಂದು ಪೇಳುತಿರಲು ಸ್ತ್ರೀ ಕೂಟ ।
ತೂಗವದೆಂತು ನಾಳೆ ನುಡಿಯೆಂದರು ೨೧

ನಕ್ಕು ಸಂತೋಷದಲಿ ರುಕ್ಮಿಣಿ ಎಂದನು ।
ಅಕ್ಕಯ್ಯ ಪೇಳೆಂದು ಹೆಮ್ಮಕ್ಕಳೆಲ್ಲ ॥
ಅಕ್ಕಯ್ಯ ಪೇಳೆಂದು ಹೆಮ್ಮಕ್ಕಳೆಲ್ಲ ಎನಲು ।
ಚಕ್ರಪಾಣಿ ಎಂದು ಪೇಳಿದಳು ಲಕುಮಿ ೨೨

ಗಂಡ ಹೆಂಡತಿ ಪೋಗಿ ದಂಡ ಪ್ರಣಾಮಮಾಡಿ ।
ಮಂಡಲದ ಚರಿತೆ ತೋರಿದರು ಆಗ ॥
ಮಂಡಲದ ಚರಿತೆ ತೋರಿ ವಧು-ವರಗಳಿಗೆ ।
ಕಂಡವರಿಗೆ ಮದುವೆಯೆನಿಸಿದರು ೨೩

ದಂಪತಿಗಳು ಒಲಿದು ಇಂಪಾಗಿ ಉರುಟಣಿ ।
ಸೊಂಪಾಗಿ ಮಾಡಿದರು ಅನೇಕವಾಗಿ ॥
ಸೊಂಪಾಗಿ ಮಾಡಿದವರ ಕತೆಗಳ ಕೇಳಲು
ಸಂಪತ್ತು ಕೊಡುವನು ವಿಜಯವಿಠ್ಠಲರಾಯಾ ೨೪

೧೫೫

ರಾಮ ರಘುಕುಲಾಬ್ಧಿ ಸೋಮಾ ಪ

ಸಂತತ ಭಕ್ತ ಪ್ರೇಮಾ ಮಂಗಲಧಾಮಾ ।
ಪರಿಪೂರ್ಣ ನಿನ್ನಯ ನಾಮವೆ ಗತಿ ಎನಗೆ ಅ.ಪ.

ಏಸಪರಾಧಗಳೆಣಿಸದೆ ದಯವಿಟ್ಟು ।
ದೋಷದೂರನ ಮಾಡೊ ಕೇಶವ ಕಮಲಾಕ್ಷಾ ೧

ಪ್ರಣವಾಕಾರ ವಿಮಾನ ಮನಿಯಾಗಿಯಿಪ್ಪನೆ ।
ಫಣಿಶಾಯಿ ರಂಗೇಶ ಮಣಿಗಣ ಭೂಷಣನೆ ೨

ಇಕ್ಷ್ವಾಕು ನೃಪವರದ ಸಾಕ್ಷಾತ್ತ ಪರಮಾತ್ಮಾ-।
ಧ್ಯಕ್ಷ ವಿಜಯವಿಠ್ಠಲಾ ರಕ್ಷಿಸು ಬಿಡದೆನ್ನ ೩

೧೫೬

ರಾಮ ರಾಮ ಎಂಬೆರಡಕ್ಷರ ।
ಪ್ರೇಮದಿ ಸಲುಹಿತು ಸುಜನರನು ಪ

ಹಾಲಾಹಲವನು ಪಾನವಮಾಡಿದ ।
ಫಾಲಲೋಚನನೆ ಬಲ್ಲವನು ॥
ಆಲಾಪಿಸುತ್ತ ಶಿಲೆಯಾಗಿದ್ದ ।
ಬಾಲೆ ಅಹಲ್ಯೆಯ ಕೇಳೇನು ೧

ಅಂಜಿಕೆಯಿಲ್ಲದೆ ಗಿರಿಸಾರಿದ ಕಪಿ-।
ಕುಂಜರ ರಮಿಸುತ ಬಲ್ಲವನು ॥
ಎಂಜಲ ಫಲಗಳ ಹರಿಗರ್ಪಿಸಿದ ।
ಕಂಜಲೋಚನೆಯ ಕೇಳೇನು ೨

ಕಾಲವರಿತು ಸೇವೆಯ ಮಾಡಿದ
ಲೋಲ ಲಕ್ಷ್ಮಣನೆ ಬಲ್ಲವನು ॥
ವ್ಯಾಳಶಯನ ಶ್ರೀ ವಿಜಯವಿಠ್ಠಲನ
ಲೀಲೆ ಶರಧಿಯ ಕೇಳೇನು ೩

೧೫೭

ಸಾಕೇತಪುರ ವಾಸಿ ಕಪಟವೇಷ ।
ಶ್ರೀಕಮಲನಾಭನ ನಖದಲಿ ಕಾಶೀ ಪ

ವಿಶ್ವತೋಮುಖ ಬ್ರಹ್ಮ ವಿಶ್ವತೋಚಕ್ಷು ।
ವಿಶ್ವ ವಿಶ್ವಬಾಹು ವಿಶ್ವರೂಪ ರೂಪ ॥
ವಿಶ್ವ ಬ್ರಹ್ಮಾಂಡ ಆಧಾರ ಕಾರಣ ।
ವಿಶ್ವೇಶ್ವರ ಪ್ರಾಣ ಮಂತ್ರ ರಾಮ ರಾಮ ೧

ಮಸ್ತಕಾಂಗುಟ ಪರಿಯಂತ ರೋಮಕೂಪ ।
ವಿಸ್ತಾರ ಮಹಿಮ ಅಗಣಿತ ಕಮಲಜ ।
ಹಸ್ತಿ ಚರ್ಮಾಂಬರರು ಇದ್ದು ನೆಲೆಗಾಣರು ।
ನಾಸ್ತಿ ವಿಷ್ಣು ಪರದೈವ ಇಹಪರದಲಿ ೨

ಕಷ್ಟವಿಲ್ಲದೆ ಮಕ್ಕಳಾಟಕೆ ತ್ವರದಿಂದ ।
ಸೃಷ್ಟಿಸುವ ಕಣ್ಣು ಎವೆ ಹಾಕುವ ॥
ಅಷ್ಟರೊಳನೇಕ ಬ್ರಹ್ಮಾಂಡ ನಾಟಕ ।
ವಿಷ್ಣು ಕರ್ಮಾಣಿ ಪಶ್ಯತೆ ಪಶ್ಯತೆ ३

ನಿತ್ಯ ತೃಪ್ತಿ ನಿರಾಹಾರಿ ನಿತ್ಯಾನಂದ ।
ಮೃತ್ಯು ಹಾ ಕಾಲಪ್ರಮಾಣ ಪುರುಷಾ ॥
ಸತ್ಯ ನಿಗಮಾವಳಿ । ಜ್ಞಾನ ಗಮ್ಯ ಶರಧಿ ।
ಸತ್ಯ ಸಂಕಲ್ಪ ನಿಷ್ಠನಾಹಂತೆ ೪

ಅಜನಯ್ಯ ಅದ್ಭುತ ಮಹಿಮ ಪುರುಷೋತ್ತಮ ।
ಭುಜಧರನಯ್ಯಯಾ । ಅಮಿತಕಾಯಾ ।
ವಿಜಯಸಾರಥಿ ವಿಚಕ್ಷಣ ದೀಪ್ತ ಮೂರುತಿ ।
ಭುಜಗಗಿರಿ ವಿಜಯವಿಠ್ಠಲ ವೆಂಕಟೇಶಾ ೫

(ಉ) ಶ್ರೀ ಕೃಷ್ಣ

೧೫೮

ಅಂಗಿ ಕೊತ್ತೇನೆ । ಗೋಪಿ । ತಿಂಗಲವಾದೇನೆ ।
ತಿಂಗಾದಿ ಪಿದಿದೆನು ಸಲಸಲ ಪೋಗಿ ।
ಗಂಗಿಯ ತಿದೆಯಲ್ಲಿ ಆದಿ ಬಂದೇನು ಪ

ಕುಕುಕೊಲ್ಲೆ । ತಾಯಿಹಾಲು ಕುದಿದೇನು ।
ಗೋಕುಲ ಮಕ್ಕಳ ಕೂದಾ ಕಲಿತು ।
ಕಾಕಾಕೋಲು ಹೊದಾದೆನೆ ೧

ತಂದು ಕೊದು ಬ್ಯಾಗಾ ಕೈಗೆ ಚಿನ್ನಿಕೋಲು ಬೇಕಲ್ಲೆ ।
ಉಂದೇನು ಕಲ್ಲಿಯ ಬುತ್ತಿಯ ಮತ್ತೆ ।
ಹಿಂದಾಕಲುಗಳ ಕಾದು ತಂದೆನೊ ೨

ಅಪ್ಪತ್ತಿಕೊದು ಒಂದು ಮ್ಯಾಲೆ ತುಪ್ಪವು ತೊದಿಯದಕೆ ।
ತಪ್ಪಿಗೆಯಿದಸೆ ಅಪ್ಪಗೆ ಪೇಳಿ
ವಪ್ಪುಗದಲಿ ವುದಿಕಲಿ ಕತ್ತೆ ೩

ಅಮ್ಮ ನೀ ತಿಂದೆನೆ ಯಿತ್ತು ಯೆಂಡೆ ಮೆದ್ದೆನೆ ।
ವಮ್ಮೆ ತತಕು ಮೊಸಲು ಸುರಿದೇನು ।
ತಮ್ಮನ ತೊತ್ತಿಯಿಂದಾ ಯಿಲೆಸೆ ೪

ಈ ಲೀಲೆಯ ನೋಡಿ ಮಗನ ತೋಳಲಿ ಬಿಗಿದಪ್ಪಿ ।
ಮೂಲೋಕದರಸ ವಿಜಯವಿಠ್ಠಲ
ಆಲಯ ಪಾವನವೆಂದಳೆ ಗೋಪಿ ೫

೧೫೯

ಅಣ್ಣನ ತೋರಿಸೆ ಎನಗೆ ।
ತನ್ನ ಮನೆಯಲ್ಲಿ ಬಣ್ಣದ ಭೊಗರಿ ಚಂಡು ಯಿಲ್ಲಾ ।
ಸುಣ್ಣದ ಗಡಿಗೆ ಯಾಕೆ ವಡಿಯಿತು ಪ

ಹಾಸಿಕೆ ಹಾಸಿಕೆ ಎತ್ತ । ಕಾಸೆ ಬಿಸಿ ನೀರು । ದಾಸನ ಕರಿಯೆ ।
ಮೋರಿ ತೊಳಿಯೆ । ಈಸು ಸೊಲ್ಲು ಕೇಳೆ ಗೋಪಿ ೧

ಕುಪ್ಪಸ ಕೊಡಬೇಡ ನೀ । ಅಪ್ಪನ ನೋಡ ಬೇಡ ।
ಚಪ್ಪರದೊಳಗೆ ಕುಳಿತು ಕಾಳು । ಕುಪ್ಪೆ ನಾಡುವ ಈಗ ಪೋಗಿ ೨

ಹೊತ್ತು ಹೋಯಿತು ಮಸರುಕಟಿಯಲಿಲ್ಲ್ಯಾಕೆ ।
ಹತ್ತಿವೆ ಯಾಯಿತು ವೊತಯನೆ ಯಿಂದ ।
ಬಿತಿ ಬಿತಿ ಬೂವಾ ಉಂದೇನು ತುತ್ತು ३

ಅನ್ನಯ್ಯಾ ಬಂದ ತಾರೆ ತನ್ನ ತಲಗೀಯ ।
ನಿನ್ನೆ ಮಾಡಿದ ವಬ್ಬತು ಕೊದು ಎನ್ನ ಬಟ್ಟಲೊಳಗೆ ಹಾಕ ೪

ಹೊಲಗೆ ಅನ್ನಯ್ಯ ಬಿದ್ದಾನೆ ತಲಿಯಲ್ಲೆ ಮನ್ನು ।
ಶಲಗಿಲಿ ವಲಿಗಿಸುವೇಗ ಬಂದು ತೊಲಿಯೆ ಬಿಸಿ ನೀರಿಂದ ಕೆತರು ೫

ಕೆಲಿಗೆ ಹೋದೆನು ಕುಂತಿ ತಾಲೆ ಗೋಪಮ್ಮ ।
ಕಾಲಿಗೆ ಪಾಪೋತು ಆ ಮೆತ್ತನೆ ವಾಲೆಕಂತ ಕೈಯಲಿ ಹಿದಿಸೊ ೬

ತೊದಲ ಮಾತಾ ಕೇಳಿ ಮಗನ ವದನ ಮುದ್ದಾ ।
ಸದಮಲ ಭಾಗ್ಯ ವಿಜಯವಿಠ್ಠಲ ।
ಯದುಕುಲ ಪಾವನ ವೆಂದಳು ಗೋಪಿ ೭

೧೬೦

ಆರಯ್ಯಾ ಕಣ್ಣ ಮುಂದೆ ಬಂದು ನಿಂತಿಯೋ ।
ಸಾರು ನೀನು ಎನಗೆ ಸುಮ್ಮನ್ಯಾತಕೆ ಯಿದ್ದೀ ಪ

ನೀರೊಳು ಮುಣಗೆ ವೇದವ ತಂದಾತನೊ ।
ಭಾರವನು ಪೊತ್ತು ಸುರರ ಕಾಯಿದಾತನೊ ।
ಧಾರುಣಿ ನೆಗಹಿ ಉದ್ಧಾರ ಮಾಡಿದಾತನೊ ।
ಕೂರ್‍ರ ದೈತ್ಯನ ಕೊಂದ ಕುಜನ ಗಿರಿಗೆ ವಜ್ರನೊ ೧

ಗಗನಕೆ ಬೆಳದು ಸುರ ನದಿಯ ಪಡೆದಾತನೊ ।
ಹಗೆಗಳ ಕೊಂದು ಹರುಷಿತನಾದನೊ ।

ಜಗವರಿಯೆ ಶಿಲಿಯ ನಾರಿಯ ಮಾಡಿದಾತನೊ ।
ಮಗನಮಗನ ತಂದ ಮಹಿಮನೊ ೨

ಹರಗೆ ಸಾಯಕವಾಗಿ ಪುರ ಉರಹಿದಾತನೊ ।
ದುರುಳರನ ಕೊಂದ ದುರ್ಲಭದೇವನೊ ।
ಕರಿರಾಜ ವರದ ಶ್ರೀ ವಿಜಯವಿಠ್ಠಲರೇಯ –
ಶರಣರಿಗೊಲಿದು ಬಂದ ಸರ್ವೋತ್ತಮನೊ ೩

೧೬೧

ಆರೀಗ ನೀ ಎನ್ನ ಕಣ್ಣು ಮುಚ್ಚಿದೆಯೊ ಕು– ।
ಮಾರ ಮೌನದಲಿದ್ದಿ ಮಾತನಾಡಯ್ಯಾ ಪ

ಇಂದಿರಾ ಭೂದೇವಿ ಆಳಿದವನೊ ।
ನಂದ ಗೋಕುಲದಲ್ಲಿ ಪುಟ್ಟಿದವನೊ ॥
ಮಂದಿರ ವೈಕುಂಠ ಶ್ರೀನಿವಾಸನೊ । ಕರಿ – ।
ಬಂಧನ ವಿನಾಶದ ವಿಠ್ಠಲನೊ ೧

ಅಂಬರೀಷನ ಶಾಪ ಪರಿಹರನೊ ।
ಶಂಭು ಮೊರೆಯಿಡಲು ಕಾಯಿದವನೊ ॥
ಕಂಭದಿಂದೊಡೆದು ಬಂದವನೊ । ತ್ರಿ –
ಯಂಬಕನ ಭಕ್ತನ ಸಂಹರನೊ ೨

ಬೆರಳಲ್ಲಿ ಬೆಟ್ಟವನೆತ್ತಿದವನೊ ।
ದುರುಳ ಕಾಳಿಂಗನ ತುಳಿದವನೊ ॥
ಒರಳನು ಕಾಲಲ್ಲಿ ಎಳೆದವನೊ ।
ಚೆಲ್ವ ಸಿರಿ ವಿಜಯವಿಠ್ಠಲರಾಯನೊ ೩

೧೬೨

ಆವ ಜನ್ಮದ ಪುಣ್ಯ ಫಲಿಸಿತೆನಗೆ ।
ಈ ಉಡುಪಿ ಕೃಷ್ಣನ ಪ್ರಸಾದ ಭುಂಜಿಸಿದೆ ಪ

ಲವಣವನು ಸವಿದುಣಲು । ಬಲುಜನ್ಮದಲಿ ಯಿದ್ದ
ಭವರಾಸಿಗಳು ಹಾರಿ ಬಯಲಾದವು।
ನವವಿಧ ಭಕುತಿಯಾ ಮಾರ್ಗವನೆ ತಿಳಿದು ಮಾ ।
ನವರೊಳಗೆ ಪರಿ ಶುದ್ಧನಾದೆ ಗುರು ಕರುಣದಲೀ ೧

ಶಾಖಫಲ ಕೈಕೊಳಲು ಅರಿಷಡ್ವರ್ಗಗಳಿಂದ ।
ಶೋಕವನೆ ಬಂದಿರಲು ಬೆನ್ನು ಬಟ್ಟು ।
ಕಾಕೆಟ್ಟು ಪೋಗುವವು ಏನೆಂಬೆ ಸೋಜಿಗವು ।
ಲೋಕದೊಳಗೆ ನಮ್ಮ ಕುಲಗೋತ್ರಜರೆ ಧನ್ಯ ೨

ಸೂಪವನು ಉಂಡರೆ ಮುಂದಟ್ಟಿ ಬರುತ್ತಿಪ್ಪ ।
ಆಪತ್ತು ಕಳವಳಿಸಿ ಹಿಂದಾದವು ।
ಭಾಪುರೆ ಮೋಕ್ಷಮಾರ್ಗಕ್ಕೆ
ಸೋಪಾನ ದೊರಕಿದವು ಏನೆಂಬೆ
ಸೋಜಿಗವು ಬಲು ತೀವ್ರದಲಿ ೩

ಭಕ್ಷ್ಯಗಳು ಮೆಲಲಾಗಿ ಭಕ್ತಿ ಪುಟ್ಟುವದಯ್ಯಾ ।
ಅಕ್ಷಯವಾಗುವದು ಇದ್ದ ಪುಣ್ಯ ।
ಅಕ್ಷರ ವಂಚನಾಗಿ ಸರ್ವದಾ ಮೋಕ್ಷಸಾಧನ
ಮಾಳ್ಪ ಮನಸು ಪುಟ್ಟಿತು ನೋಡಾ ೪

ಓದನವು ಉದರದಲಿ ತುಂಬಲಾಕ್ಷಣದಲ್ಲಿ ।
ಸಾಧುಗಳ ಸಂಗತಿ ಘಟಿಸುವದು । ಭೇದಾರ್ಥ
ಜ್ಞಾನ ಬಂದೊದಗುವದು ಗುರು ಪೂರ್ಣ ।
ಬೋಧರಾ ಮತದಲ್ಲಿ ಲೋಲಾಡುವಾನಂದಾ ೫

ಘೃತ ದಧಿ ತಕ್ರ ಮೊದಲಾದ ವ್ಯಂಜನ ಉಣಲು ।
ಹಿತವಾಗಿ ಸಕಲ ಇಂದ್ರಿಯಂಗಳು ।
ಸತತ ದುರ್ವಿಷಯಕ್ಕೆ ಪೋಗದಲೆ ಆವಾಗ ।
ರತಿಪತಿಪಿತನ ಪದಸೇವೆಯೊಳಗಿಪ್ಪವೊ ೬

ಕೃಷ್ಣ ಸಂದರುಶನ ಮೃಷ್ಟಾನ ಭೋಜನ ।
ಕಷ್ಟನಾಶನ ಸರ್ವ ಕರ್ಮಕಧಿಕಾ ।
ಇಷ್ಟ ಸುಖ ಸೌಖ್ಯಕರ ಮತ್ತಾವಲ್ಲಿ ಕಾಣೆ ।
ಸೃಷ್ಟಿಗೊಡೆಯ ವಿಜಯವಿಠ್ಠಲನು ದಯವಾಗೆ ೭

೧೬೩

ಆವ ತಾ ಸುಖವೊ ಮತ್ತಾವನಂದವೊ ।
ಈ ಉಡುಪಿ ಯಾತ್ರಿ ಮಾಡಿದ ಮನುಜಗೆ ಪ

ಮನದೊಳಪೇಕ್ಷಿಸೆ ಅವನೀಗ ಹದಿನಾಲ್ಕು ।
ಮನುಗಳು ಭೂಮಿ ಆಳುವ ತನಕಾ ।
ಕನಕ ರಜತಪೀಠ ಗೋಕುಲದಿಂದ । ಸ ।
ಜ್ಜನ ಮಾರ್ಗದಲ್ಲಿ ಗುಣವಂತ ನೆನೆಸುವ ೧

ಒಂದು ಹೆಜ್ಜೆಯನಿಟ್ಟು ಸಾಗಿ ಬರುತಲಿರೆ ।
ಅಂದೆ ಸುರರೊಳು ಗಣನೆ ಎನ್ನಿ ।
ಒಂದಕ್ಕೆ ನೂರಾರು ಯಾಗ ಮಾಡಿದ ಫಲ ।
ತಂದು ಕೊಡುವ ಅಜನಾದಿ ಕಲ್ಪ ಪರಿಯಂತ ೨

ಅರ್ಧ ಮಾರ್ಗವು ಬರಲು ಬಂದ ದಿವಸದಲ್ಲಿ ।
ಸಾರ್ಧ ತ್ರಿಕೋಟಿ ದೇವತೆಗಳಲಿ ।
ಊರ್ಧ್ವರೇತಸನಾಗಿ ಮಿಂದ ಫಲವಕ್ಕು ।
ಮೂರ್ಧಾಭಿಷಕ್ತನು ಬ್ರಹ್ಮಾಯ ಪರಿಯಂತ ೩

ಕ್ಷೇತ್ರದ ಬಳಿಗಾಗಿ ಬರಲು ಅವನ ಏಳು ।
ಗೋತ್ರ ನೂರೊಂದು ಕುಲದವರು ।

ಗಾತ್ರವ ಮರೆದು ರೋಮಾಂಚನದಿಂದಲಿ ।
ಪಾತ್ರವನಾಡೋರು ಮೋಕ್ಷಮಾರ್ಗವ ಸಾರಿ ೪

ಸನ್ನಿಧಿಗೆ ಬಂದು ಕರವ ಜೋಡಿಸಿ ನಿಂದು ।
ಸನ್ನುತಿಸಿ ದರ್ಶನ ಮಾಡಲು ।
ತನ್ನ ಕರವ ತಿಳಿದು ಜ್ಞಾನ ಭಕುತಿ ಸಂ ।
ಪನ್ನ ವಿರುಕುತಿಲಿ ಗತಿಗಭಿಮುಖನಾಹ ೫

ಮಧ್ವ ಸರೋವರದಲ್ಲಿ ಸ್ನಾನವಗೈದು ।
ಸಿದ್ಧಾಂತ ಕರ್ಮಗಳನನುಸರಿಸೀ ।
ಶುದ್ಧಾತ್ಮ ಕೃಷ್ಣನ ದೇವಾಲಯವ ಸಾರೆ ।
ಪೊದ್ದಿದಾ ಸತ್ಯಲೋಕದ ಸಭೆಯೊಳಗೆ ೬

ಕೃಷ್ಣ ಕೃಷ್ಣ ಯೆಂದು । ನವ ವಿಧ ಪೂಜೆಯನ್ನು ।
ದೃಷ್ಟಿಯಿಂದಲಿ ನೋಡೆ ಅವನೆ ಮುಕ್ತಾ ।
ಮುಟ್ಟಿ ಪೂಜಿಸುವರ ಸತ್ಪುಣ್ಯ ವಿಜಯ ।
ವಿಠ್ಠಲ ತಾ ಬಲ್ಲ ನರರೆಣಿಸಲಳವಲ್ಲಾ ೭

೧೬೪

ಇಂದು ಬನ್ನಿ ಇಂದಿರೇಶಾ ಇಂದುವಾರದಲಿ ಬಲು ।
ಅಂದದಿಂದ ಮೆರೆವನಂದವ ನೋಡಾ ಪ

ಮುತ್ತಿನ ಕಿರೀಟ ಮೇಲೆ ಸುತ್ತಿದ ಲತೆ ತಳಲು ।
ರತ್ನಗಂಬಳಿ ಕಲ್ಲಿಯ ಬುತ್ತಿ ಪೆಗಲೂ ॥
ತೂತ್ತುತೂರಿ ಎಂದು ಸ್ವರ । ವೆತ್ತಿ ಊದುವ ಕೊಳಲು ।
ಉತ್ತಮ ಶೋಕ್ಲವನು ಮೆರೆಯುತ್ತಲಿಪ್ಪುದು ೧

ಉಂಗುರಗೂದಲು ಪುಬ್ಬು ಸಿಂಗಾಡಿ ಅಂದದಿ ಒಪ್ಪೆ ।
ಅಂಗಾರ ಕಂಕಣ ಮಂಗಳಾಂಗ ನಿಸ್ಸಂಗ ।
ರಂಗ ತುಂಗ ಮಹಿಮ ತಾರಂಗ ಅಂಗುಲಿಲಿ ರತ್ನ ।
ದುಂಗುರವ ಯಿಟ್ಟ ಸುಖಂಗಳ ನೋಡಾ ೨

ಉಂಗುರವ ನಡು ಮೇಲು ಕಂಗಳ ಕುಡಿನೋಟ ।
ಗೋಪಾಂಗನೇರ ಮನಕೆ ಮೋಹಂಗಳ ತೋರೆ ।
ಅಂಗಜನ್ನೆನೆಸಿ ತಾಪಂಗಳು ವೆಗ್ಗಳದಿಂದ ।
ಹಂಗೀಗರಾಗೆ ನಗುವ ಗಂಗಾಜನಕ ೩

ಲೋಕ ಬೆಲೆಗೊಂಬ ಅಲೌಕೀಕ ಮಣಿನಾಸದಲ್ಲಿ ।
ರಾಕಾಬ್ಜಾನಂದದಿ ಮೊಗಾನೇಕ ಲೋಕೇಳಾ ।
ನಾಕಾಜನಾದಿಗೆ ನಿತ್ಯ ಬೇಕೆಂದು ಜಪಿಸಲು
ದೊರಕದ ದೊಂಬಲು ಬಾ ಯದುಕುಲಾಂಬರಾ ೪

ತೂಗುವ ಕುಂಡಲ ಕರ್ಣ ಶ್ರೀಗಂಧ ಪೂಸಿದ ವಕ್ಷ ।
ಪೂಗೊಂಚಲು ಸಣ್ಣನಾಮ ಆ ಗೆಜ್ಜೆಧ್ವನಿ ।
ಆಗಮನ ಸೋಲಿಸೆ ನಾನಾ ಭೋಗಾದಲ್ಲಿಯಿಪ್ಪ । ಮಧ್ವ ।
ಯೋಗಿಪ್ರಿಯಾ ವಿಜಯವಿಠ್ಠಲಾ ಗುಣನಿಧಿ ೫

೧೬೫

ಇದೇ ಭಕುತಿ ಮತಿಗೆ ಮುಕುತಿ ।
ಇದಕ್ಕಧಿಕವಾಗಿಪ್ಪ ವಿಧಿಗಳೆಲ್ಲಿಯಿಲ್ಲಾ ಪ

ರತುನ ಗರ್ಭದೊಳಗೆ ತಿಳಿ ।
ರತುನ ಸಮಕ್ಷೇತ್ರಗಳಿಗೆ ।
ರತುನವೆನ್ನಿ ಯತಿವಂಶ ।
ರತುನ ಮಧ್ವಮುನಿಮಾಡಿದಾ ೧

ಪದ ಜೀವಸ್ತರಿಗದೆ ಪಾ ।
ಪ ಜನರು ಕೃಷ್ಣರಾಯನ ಪಾದವ ನೋಡಿ ನಿತ್ಯಾ ।
ಸಾಧನಿ ಮನ ಮಾಡಿರಯ್ಯಾ ೨

ಏಳು ಒಂದು ಮಠದ ಲೋಕರಂಸೆ ಸದನವೆನ್ನಿ ।
ಪೇಳಲೇನು ಅವರೇ ಯಿಲ್ಲಿ
ಊಳಿಗವ ಮಾಡುತ್ತಿಪ್ಪರು ೩

ಮೇರೊ ಪರ್ವತ ತುಲ್ಯವಿದೆ ।
ವಾರಿಜನೆ ಮದ್ವರಾಯ ।
ಈ ರಜತ ಪೀಠವೆ ಮಂದಿರ ಶತಕೋಟಿ ಎನ್ನೀ ೪

ಮೆರೆವ ಮದ್ವತೀರ್ಥ ಬಾಹಿರ ।
ವರಣ ಉದಕವೆನ್ನಿ ಇಲ್ಲಿ ।
ಚರಿಸುವಂಥ ಸುಗುಣ ತೃಣಾ
ದ್ಯರು ಮುಕುತಿ ಯೋಗ್ಯರಹುದು ೫

ಉಡಪಿ ಯಾತ್ರೆ ಮಾಡಿದವನು ।
ಪೊಡವಿ ತುಂಬ ಯಾತ್ರೆ ।
ಬಿಡದೆ ಚರಿಸಿದವನೆ ಎಂದು ।
ಮೃಡನು ಇಲ್ಲಿ ಸಾರುತಿಪ್ಪಾ ೬

ಉಬ್ಬಿ ಸರ್ವ ಇಂದ್ರಿಯಂಗಳಾ ।
ಹಬ್ಬವಾಗಿ ಸುಖಿಪದಕೆ ।
ಊರ್ಬಿಯೊಳಗೆ ಉಡುಪಿ ಯಾತ್ರೆ ।
ಅಬ್ಬದಲೆ ದೊರಕದಯ್ಯಾ ೭

ಲಿಂಗ ದೇಹ ಭಂಗವಾಗಿ
ಹಿಂಗಿ ಪೋಗದಕೆ ಇದೇ ।
ಅಂಗವಲ್ಲದೆ ಬೇರೆ ಇಲ್ಲ ।
ರಂಗ ಸುಲಭಸಾಧ್ಯಾವಾಹಾ ೮

ನೂರು ಕಲ್ಪಧರ್ಮ
ಮಾರನಯ್ಯ ವಿಜಯವಿಠ್ಠಲನ ।
ಪ್ರೇರಣೆಯಾಗಿ ಉಡುಪಿಗೊಂದು
ಸಾರಿ ತಂದು ಕೊಡುವಾ ೯

೧೬೬

ಈ ವೈಷ್ಣವ ಜನುಮ ಸಫಲವಿಂದು ।
ಈ ಉಡುಪಿ ಯಾತ್ರಿಗಭಿಮುಖವಾದುದು ಪ

ಮನೋವಾಕ್ಕಾಯ ಕರ್ಮಗಳು ಬಲುಪರಿ ಇರಲು ।
ಮನುಜ ಪೋಗುವೆನೆಂದು ಒಮ್ಮೆ ।
ನೆನೆಸಿದ ಕ್ಷಣದಲ್ಲಿ ನಾಕವಾಗೋವು ಸು
ತ್ತನು ಸುತ್ತಿಸುವ ಭವ ವನಧಿಗೆ ಇದೇ ಮೂಲ ೧

ದೇಶದೊಳಗುಳ್ಳ ನಾನಾ ಯಾತ್ರೆ ತೀರಥಾ ।
ಏಸುಬಾರಿ ಪೋಗಿ ಬರಲಿ ಉಂಟೆ ।
ಈ ಸುಲಭ ಯಾತ್ರೆ ಕಂಡವರಿಗೆ ದೊರಿಯದು ।
ಲೇಸಾಗಿ ಕೇಳುವದು ಕುತ್ಸಿತ ಭಾವನೆ ಬಿಟ್ಟು ೨

ಕೃಷ್ಣರಾಯನ ದರುಶನಕೆ ಮನಮಾಡಿದ ।
ಶಿಷ್ಟಾಚಾರಗೆ ಲಿಂಗಕಾಯ ಭಂಗಾ ।
ದಿಟ್ಟ ಮೂರುತಿ ವಿಜಯವಿಠ್ಠಲ ಕರುಣಿ ಜ್ಞಾನ ।
ಕೊಟ್ಟುಪಾಲಿಸುವ ಬಲು ಮೂರ್ಖರಾದರೂ ಸಿದ್ಧ ೩

೧೬೭

ಈ ಸೊಬಗು ಇನ್ನಾವ ಕ್ಷೇತ್ರದಲಿ ಕಾಣೆನಾ ಇಲ್ಲಿ ।
ವಾಸುದೇವ ಮುನಿಯಿದ್ದ ಕಾರಣ ಪ

ರಾಜಧಾನಿಯ ನೋಡೆ ಇಂದ್ರಭವನಕೆ ಮೇಲು ।
ತೇಜದಲಿ ನೋಡೆ ಸೂರ್ಯನದೆ ಸೋಲು ॥

ಪೂಜೆದಲಿ ನೋಡೆ ಸರ್ವ ಧರಣಿಗೆ ಮೇಲು ।
ಭೋಜನದಲಿ ನೋಡೆ ಅಮೃತಕೆ ಮೇಲು ೧

ಉತ್ಸಾಹದಲಿ ನೋಡೆ ನಹಿ ಪ್ರತಿ ನಹಿ ಪ್ರತಿ ।
ಸತ್ಸಂಗತಿಯ ನೋಡೆ ಬುಧ ಸಂಗತಿ ॥
ಸುಚರಿತೆಯ ನೋಡೆ ಶುದ್ಧ ಸತ್ವದ ನೀತಿ ।
ಮತ್ಸರ ಮರೆದು ನೋಡೆ ಇಲ್ಲೆ ಮುಕುತಿ ೨

ಓಲಗದಲಿ ನೋಡೆ ಸತ್ಯಲೋಕಕೆ ಸಮ ।
ಪೇಳುವ ಕೀರ್ತನೆ ನೋಡು ವೇದಸ್ತೋಮ ॥
ಬಾಲ ಉಡುಪಿಯ ಕೃಷ್ಣ ವಿಜಯವಿಠ್ಠಲರೇಯನ ।
ತಿಳಿದ ಮಾನವಗೆ ಫಲವು ನಿಷ್ಕಾಮಾ ೩

೧೬೮

ಊಟವನು ಮಾಡು ಬಾ ಉದಧಿಶಯನಾ ।
ಆಟವನು ಸಾಕುಮಾಡಿ ಅತಿ ವೇಗದಿಂದಲಿ ಪ

ಕಾಯಿಪಲ್ಲೆ ಒಂದೊಂದು ನೂರು ಪರಿ ।
ತೋಯ ಸಂಡಿಗೆ ಪಳದೆ ಹುಳಿ ಸಾರು ॥
ಪಾಯಸ ನೊರೆಹಾಲು ಸಕ್ಕರೆಗೂಡಿಸಿ ।
ತಾಯಿ ದೇವಕಿಯು ಎಡೆಯ ಮಾಡಿದಳು ತಂದು ೧

ಯಾಲಕ್ಕಿ ಹಾಕಿದ ಹೋಳಿಗೆಯು ಪರಿಮಳ ।
ಸಲೆ ಶಾಲ್ಯೋದನ ಕರಿದ ಭಕ್ಷ್ಯಾ ॥
ಮೇಲಾದ ಇಂಗು ಜೀರಿಗೆ ಮೆಣಸಿನ ಹುಗ್ಗಿ ।
ಶ್ರೀ ಲಕುಮಿದೇವಿ ಎಡೆ ಮಾಡಿದಳು ತಂದು ೨

ಕಸಕಸಿ ಎಳ್ಳು ಲಡ್ಡಿಗೆಯು ಅಪ್ಪಾಲು ಅರೆ-।
ರಸ ದೋಸೆ ಬೆಣ್ಣೆ ಸೂಸಲುಕಡಬು ॥
ಹಸನಾಗಿ ಕರಿದ ಹಪ್ಪಳ ಸಂಡಿಗೆ ನಿನ್ನ
ಸೊಸೆ ಸರಸ್ವತಿ ಎಡೆ ಮಾಡಿದಳು ತಂದು ೩

ಕಾದಾಕಳ ತುಪ್ಪ ಅಳಗಳಗ ತಿಳಿತುಪ್ಪ ।
ಮಾಧುರ್ಯವಾಗಿದ್ದ ಜೇನು ಘೃತವು ॥
ಕಾದಾರಿದ ಪಾಲು ಕಟ್ಟುಸುರು ಕೆನೆಮೊಸರು ।
ಭೂದೇವಿ ನಲಿನಲಿದು ಎಡೆ ಮಾಡಿದಳೊ ತಂದು ೪

ಸರಳಿಗೆ ಗೌಲಿ ಬಟಿವೆ ಪರಡಿ ಸಜ್ಜಿಗೆ ।
ಸರಸವಾಗಿದ್ದ ಚಿತ್ರಾನ್ನಂಗಳು ॥
ಪರಿ ಪರಿ ಫಲ ಪಕ್ವಾನ್ನ ಸೋಪಚಾರದಿ ।
ಗಿರಿಜಾದಿಗಳು ತಾವು ಎಡೆ ಮಾಡಿದರೊ ತಂದು ೫

ಖಾರುಳ್ಳ ಪಚ್ಚಡಿ ಹಚ್ಚಗೆ ಹಸಿರು ವರ್ಣದ ।
ವಾರುಣದಿ ಉಪ್ಪಿನಕಾಯಿ ಕೂಟಾ ॥
ನೀರು ಮಜ್ಜಿಗೆ ನಿಂಬೆಹಣ್ಣಿನೆ ಹಿಂಡಿ ।
ಭಾರತೀದೇವಿ ಎಡೆಮಾಡಿದಳೊ ತಂದು ೬

ಉಂಡ ತರುವಾಯದಲಿ ಹರಿಯೇ ಪೀಠದಿ ಕುಳಿತು ।
ಕೊಂಡು ಬಂದ ಗಂಧ ತಾಂಬೂಲವ ॥
ಕೊಂಡು ರಕ್ಷಿಸಿ ಎನ್ನ ಸಿರಿ ವಿಜಯವಿಠ್ಠಲ ।
ಕೊಂಡನಾದ ಪುರಂದರಗೆ ಒಲಿದು ಒಲಿದು ೭

೧೬೯

ಏಳು ಏಳು ಏಳು ಲೋಕದ ಒಡೆಯನೆ ।
ಏಳು ಗೋವಳರಾಯ ಗೋಪೇರಿಗತಿ ಪ್ರಿಯಾ ।
ಏಳು ಅಪ್ರಾಕೃತ ಕಾಯಾ ಸುರಮುನಿ ಗೇಯಾ ।
ಏಳು ಗೋಪಾಲಕೃಷ್ಣ ಪ

ಪುರಂದರನ ದಿಶೆಯಲ್ಲಿ ಗರುಡಾಗ್ರಜನು ಬರಲು ।
ಅರುಣವಾಯಿತು ಗಗನ । ಶರಧಿ ತೆರೆ ತಗ್ಗಿದವು
ಉರಗ ಪೆಡೆ ಪಸರಿಸಿದಾ । ಹರಿದು ಪೋಯಿತು । ಕಾಳ ।

ಸುರ ವೈರಿಗಳು ಅಡಗಲು । ಅರಳಿದವು ಅರವಿಂದ ।
ಪರಮ ಶೋಭನದಿ ಮಧುಕರಗಳು
ಝುಂಕರಿಸಿ ಶುಕಪಿಕ ಮೃಗಾದಿ ಯೆ-।
ಚ್ಚರವಾಗೆ ಕಣ್ದೆರಿಯೆ ಚರಣಾಯುಧನು ಕೂಗೆ ।
ಕರುಣಾಳುಗಳ ದೇವನೆ ೧

ಸುರರು ದುಂದುಭಿ ಭೇರಿ ಮೊಳಗಿದವು । ಮೇರು ಪರ್ವತ
ಮೇರೆ ತಪ್ಪಿ ಬಂದಾ ರಥಸಹಿತ ಭಾಸ್ಕರನು ದಿಶದಿಶೆಗೆ ಕಿರಣಗಳ ।
ಹರಹಿಕೊಳುತಾ । ಹರಿ ಗುರುವೆ ಪೇಳಲಳವೆ ।
ತರುಣಿಯರು ಎದ್ದು ಕಸ್ತೂರಿಯನು
ಕಲಿಸಿ ಮಂದಿರದೊಳಗೆ ಎಳೆಬಾಳೆ ।
ಕರವುಗಳು ಪದ್ದಿ ಕರ್ಪುರದ ಚಳವಳಿದು ।
ಶೃಂಗರಿಸಿದರು ಅರವಿಂದನಾಭ ಚೆಲುವ ೨

ಪರಮ ಮಂಗಳವಾದ ದ್ವಾರ ದ್ವಾರಗಳಿಗೆ ।
ವಿರಚಿಸಿತು ಕಳಿತೆ ತೋರಣ ಕನ್ನಡಿ ಮಲಕು ।
ಭರದಿಂದಲಿ ಬಿಗಿದು ಮೇಲ್ಕಟ್ಟು ಚಿತ್ತರದ ಗೊಂಬೆ ।
ಪರಿಚಾರವು ವಪ್ಪಲು । ಹಿರಿದು ಹೂವಿನ ಮಾಲೆ ಕಟ್ಟಿದವು ।
ಪರಿಮಳದ ದ್ರವ್ಯ ನಿಲುವಾದ ದರ್ಪಣ ಯಣ್ಣಿ ।
ಮಕರವು ತುರ ತೊ
ಗರು ಪೊಗಳು ಕಾದೋದಕವು ತಂದಿರೆ । ಅರಸಾದ ಆದಿದೈವ ೩

ಪರಮ ಭಾಗವತರು ಬತ್ತೀಸರಾಗದಲಿ ।
ಸ್ವರವೆತ್ತಿ ಪಾಡುತಿದೆ । ಸರಿಗಮಪದನಿಸಾ ।
ಸ್ವರಮಂಡಲಾ ತಾಳ ತಂಬೂರಿ ಕಿನ್ನುರಿಗ ಸರವೇಣಿ ನಾನಾ ಗೀತ ।
ಸರಸ ವಿಲಾಸದಲಿ ಸೂತ ಮಾಘದ
ಬಂದಿ ಪರಿ ಪರಿ ಕೊಂಡಾಡುತಿರಲು ।
ವಾರನಾರಿಯರು ಮದ್ದಳೆ ತಾಳ ಗತಿಯಲ್ಲಿ
ಕುಣಿಯುತಿದೆ ಸುರನಿಕರ ಪರಿಪಾಲಿಕ ೪

ಸುರ ನರೋರಗ ಯಕ್ಷಗರುಡ ಸಿದ್ಧ ವಿದ್ಯಾ ।
ಧರ ಸಾಧ್ಯ ಗಂಧರ್ವ ಚಾರಣ ಕಿನ್ನರ ಸಾಮ ।
ಸ್ತರ ಸಹಿತ ಪರಮೇಷ್ಟಿ ವಾಲಗಕೆ ಬಂದು ಎ-
ದುರು ನಿಂದು ತುತಿಪನಾಹಕೊ ಭರಿತಾಭರಣವಿಟ್ಟು ।
ಸರಸ್ವತಿ ಭಾರತಿ ಗಿರಿಜೆ ಸುರನಾರಿಯರು ತಮ್ಮ ।
ಕರದಿಂದಲಿ ಹೊನ್ನ ಹರಿವಾಣ ।
ದಾರುತಿಯ ಪಿಡಿದು ನಿಂದೈಧಾರೆ ಶರಣಾಗತ ವತ್ಸಲಾ ೫

ಕರಿ ತುರಗ ರಥಪಾಯದಳವು ದಟ್ಟಡಿಯಾಗಿ ।
ನೆರದಿದೆ ಸಭೆಯಲಿ ಸಪ್ತಾಂಗದವರುಂಟು ।
ಅರಿ ಶಂಖಗದಾ ಪದುಮಖೇಟ ನಂದನ ಮುಸಲಾ ।
ಪರಶು ನೇಗಲ ಸುಶಕ್ತಿ ಪರಿಪರಿಯ ದಿವ್ಯಾಯುಧವ ತಮತಮಗೆ ।
ಧರಿಸಿ ಸಂತೋಷದಲಿ ದಾತಾರ ನಿನ್ನಯ ಬರುವ ಹಾರೈಸಿ ।
ವೈರಿಗಳು ನೋಡುತಲಿ ಹಾರೆ ಕುರುವಂಶ ವಿನಾಶಕಾ ೬

ಸುರಿಗೆ ಪಾರಿಜಾತದ ಮಲ್ಲಿಗೆ ।
ಸುರವನ್ನೆ ಬಕುಳ ಪಾರಿ ಭದ್ರ ಸಂಪಿಗೆ ।
ಮರುಗ ಮಲ್ಲಿ ಜಾಜಿ ಕಾಂಜಿ ಶಾವಂತಿಗೆ ಕರವೀರ ನಂದಾವರ್ತ ।
ಅರಗುಂದ ಕುಂತಾತಸಿದವನ ಮುಡಿವಾಳ ।
ಈರವಂತಿಕೆ ಕೇತಿಕಾ ಸರ್ವ ಕುಸುಮಗಳಿಗೆ ।
ಶಿರೋರತನವಾದ ಎಳದುಳಸಿ ಹಾರಗಳಿಗೆ ।
ಅರಿಗಳ ಮಸ್ತಕಾಂಕುಶಾ ೭

ಚರಣದಂದಿಗೆ ಪೆಂಡೆ ಪೊಂಗೆಜ್ಜೆ ಮಣಿಮಯದ ।
ಸರಪಳಿಯು ತೊಡೆದು ಬಿರುದಾವಳಿಗಳು ಪೀತಾಂ ।
ಬರದ ನೀಲಿ ಸೆರಗು ಮುಂಗಾಲಿಗಿಳಿಯ ವಿಚಿತ್ರವಾದ
ಕಾಂಚಿ ದಾಮಾ ।
ಸರಿಗೆ ನ್ಯಾವಳಹಾರ ತುಳಸಿ ಕೌಸ್ತುಭ ಪದಕ ।

ಸಿರಿವತ್ಸ ಕನಕಕುಂಡಲ ನೊಸಲ ಮೃಗನಾಭಿ ।
ಕರದಾಭೂಷ ಫಣಿಮಕುಟ ಧರಿಪಾ ದೇವಿ ನಿನ್ನ ।
ದರುಶನ ಭಕ್ತರಿಗೆ ಲಾಭಾ ೮

ಸಿರಿ ಏಳಲೀಸಳೊ ಹತ್ತವತಾರವನು ಧರಿಸಿದ ದಣವಿಕಿಯ ।
ಕರಿ ಕಾಯಲಿ ಬಂದ ಭರದ ಉನ್ನತವು ।
ರಣದೊಳಗೆ ಪಾರ್ಥನ್ನ ರಥದ ತುರುಗವ ನಡಿಸಿದ ಲಜ್ಜೆಯ ।
ಸುರತ ಕ್ರೀಡೆಯಲಿ ಸ್ತ್ರೀಯರೋಳಾದಂಜಿಕಿಯೊ ।
ವರವ ಕೊಡು ಎಂದು ಬಂದು ಮಮ ಭಕ್ತರ ಭಯವೊ ।
ಸಿರಿ ವಿಜಯವಿಠ್ಠಲ ಉಡುಪಿಯ ಕೃಷ್ಣ ನಿನಗೆ ।
ದರಿಲ್ಲವೆಂಬೊ ಘನವೊ ೯

೧೭೦

ಏಳು ಬೆಳಗಾಯಿತು ಯದುಕುಲೋತ್ತಮ ।
ವಾಲಗಕೆ ಪರಮೇಷ್ಠಿ ಹರ ಸುರಪಾಲಕರು ಪ

ಹರ ಸುರಪಾಲಕರು ಬಂದರು ತಮ್ಮಯ
ಆಳುಸಹಿತದಲಿ ರಂಗಾ ಅ.ಪ.

ವೇದವನು ತಮ ಕದ್ದು ಒಯ್ದನು ।
ಆಧಾರಾಗದೆ ಅದ್ರಿ ಮುಣಗಿತು ॥
ಮೇದಿನಿಯ ಬಳಕೊಂಡು ಹೋದನು ।
ಅದಿತಿಯ ಸುತನು ಭಾದಿಗಾಗದಲೆ ಬಂದು ಸಕಲರು ॥
ಆದರಣೆಯಿಂದ ಕೈಯ ಮುಗಿದು ನೀ ।
ದಯಾನಿಧಿ ಎಂದು ಹೊರಗೆ ಕಾದು ಐದಾರೆ ರಂಗ ೧

ಬಲಿಯ ಅಟ್ಟುಳಿ ಹೆಚ್ಚಿತು ವೆ
ಗ್ಗಳಿಸಿದರು ಛತ್ರಿಯರು ಈರ್ಯೆದು ತಲೆಯವನು ॥
ಬಲವಂತನಾದನು ಆರಿಗೊಶವಿಲ್ಲ ।

ಇಳೆಗೆ ಭಾರವು ತೂಕವಾಯಿತು ಕಳ–।
ವಳಗೊಳಲಾರೆವೆನುತಲಿ ಅಳುಕಿ ಭಯದಲಿ ।
ನಿಮ್ಮ ಬಾಗಿಲ ಬಳಿಯ ಸಾರಿದರೊ ರಂಗಾ ೨

ಮೂರು ಪುರದವರೀಗ ನಮ್ಮನ್ನ ಮೀರಿದರು ।
ಕಲಿಪುರುಷ ಸುಜನರ ಮೇರೆದಪ್ಪಿಸಿ ನಡೆಸಿ ॥
ಬಲು ವಿಕಾರ ಮಾಡಿದನು ಈ ರೀತಿ ಶ್ರಮವೆಂದು ।
ಪೇಳಲು ಮಾರಪಿತ ಸಿರಿ ವಿಜಯ– ॥
ವಿಠ್ಠಲ ಕಾರಣಾರ್ಧವ ಕಳೆದು ।
ಮುಂದೆ ಉದ್ಧಾರ ಮಾಡಿದನು ೩

೧೭೧

ಕಾದನಾ ವತ್ಸವ ಹರಿ ಕಾದನಾ ।
ಮೋದದಿಂದ ಮಾಧವ ಪ

ವೇದವೇದ್ಯ ಸಾಧುವಿನುತರಾದಿಕಾ ರಮಣ ಕೃಷ್ಣ ಅ.ಪ.

ಎಳೆಯ ಗರಿಕೆ ಇರುವ ಸ್ಥಳದಿ ನೆರೆದು ವತ್ಸಗಳನೆ ನಿಲಿಸಿ ॥
ಕೊಳಲು ಕೈಲಿ ಪಿಡಿದು ಮುರಲಿಗಾನ ಮಾಡುತ್ತಾ ೧

ತನ್ನ ಶೆರಗು ತೆಗೆದು ಕೃಷ್ಣ ಕರುಗಳನ್ನೆ ಬೆನ್ನೊರಿಸಿ ।
ತಿನ್ನು ತಿನ್ನು ಪುಲ್ಲು ಯೆನುತ ಘನ್ನ ಕರುಗಳೊತ್ತುತ್ತ ೨

ಉಡುಗಳಂತೆ ಕರಗಳು ನಡುವೆ ಚಂದ್ರ ಧರೆಯೊಳು ॥
ಪೊಡವಿಯೊಳಗೆ ಬೆಳಗಲು ಆ ಮೃಡನು ಕೊಂಡಾಡಲು ೩

ಒಂದು ತಿಂಗಳ ಕರುಗಳು ಇಂದಿರೇಶನು ಮೇಯಿಸಲು ।
ಬಂದು ವರುಷ ಕರುಗಳಂತೆ ಆನಂದದಿಂದ ಬೆಳೆದವು ೪

ಕನಕ ರಜತ ಸರಪಳಿ ದನಕರುಗಳ ಕೊರಳಲ್ಲಿ ।
ಇಣಕುವಂತರಳೆಲೆ ಅನೇಕ ನಾದ ಬೆರಳಲಿ ಮಾಡುತ ೫

ಮರದ ನೆರಳು ವೊಳಗೆ ಕೃಷ್ಣ । ಮೆರೆದು ವತ್ಸಗಳನೇ ನಿಲಿಸಿ ।
ಕರೆದ ಪಾಲು ಕರದಿ ಪಿಡಿದು ನೆರೆದು ಬಾಯಲುಣಿಸುತ ೬

ಅಜಗಳ್ಹಾಂಗ ಇದ್ದ ಕರುಗಳು ಗಜಗಳ್ಹಾಂಗ ಆದವು ।
ತ್ರಿಜಗದೊಡೆಯ ವಿಜಯವಿಠ್ಠಲ ವ್ರಜಕೆ ದೊರೆಯಾಳುವ । ೭

೧೭೨

ಕೃಷ್ಣನ್ನ ಬಲೂತ್ಕೃಷ್ಟನ್ನ ವಿ
ಶಿಷ್ಟನ್ನ ಸ್ತುತಿಸಿ ತುಷ್ಟನ್ನ ಪ

ಗೋಪಳ್ಳಿಯೊಳಗಂದು ನಿಂದನ್ನ
ಬಲು
ಗೋಪಿಯರ ಕೂಡ ನಂದನಾ
ಗೋಪಿ ಚಂದನದಿಂದ ಬಂದನ್ನಾ
ನಮ್ಮ
ಗೋಪಾಲ ವಿಷ್ಣು ಗೋವಿಂದನ್ನ ೧

ಅಪಾರ ಮಹಿಮ ನೆನೆಸುವನ್ನಾ
ಭಕುತ
ಗಾಪತ್ತಬರಲು ಮಾಣಿಸುವನ್ನಾ
ತಾಪಸಿಗಳಿಗೆ ಕಾಣಿಸುವನ್ನಾ
ದಶ
ರೂಪವ ಧರಿಸಿ ಜನಿಸುವನಾ ೨

ರಜತಪೀಠ ಪುರವಾಸನ್ನ
ಮಹ
ರಜನೀಚರರ ವಿನಾಶನ್ನ
ತ್ರಿಜಗದೊಳಗೆ ಪ್ರಕಾಶನ್ನ
ನಮ್ಮ
ವಿಜಯವಿಠ್ಠಲ ಮಾನಿಸನ್ನ ೩

೧೭೩

ಕೃಷ್ಣಾರ್ಪಿತವೆಂದು ಕೊಡುಲು ಎ-।
ಳ್ಳಷ್ಟಾದರೂ ಮೇರು ಪರ್ವತ ಮೀರುವದು ಪ

ಗಣ್ಯವಿಲ್ಲದೆ ಶಿಷ್ಯ ಸಹಿತ ಹರರೂಪ ಮುನಿ ಅ-
ರಣ್ಯದಲಿ ಪಾಂಡವರು ಇರಲು ಬಂದು ॥
ಪುಣ್ಯಬೇಕೆಂದೆನಲು ಬಂದು ದಳ ಶಾಖಾ ಕಾ- ।
ರುಣ್ಯದಲಿ ಹರಿ ಎನಲು ಅಪರಿಮಿತವಾದುದು ೧

ಹಸ್ತಿನಾಪುರದಲ್ಲಿ ಸಕಲ ದೇವಾದಿಗಳ ।
ಮಸ್ತಕದ ಮಣಿ ವಿದುರನ ಮನೆಯಲ್ಲಿ ॥
ಹಸ್ತು ಬಂದುದಕೆ ಉಪಾಯವೇನೆಂದೆನಲು ।
ಹಸ್ತದೊಳು ಪಾಲ್ಗುಡತಿಯೆರಿಯೆ ಮಿಗಿಲಾದುದೊ ೨

ಅಣು ಮಹತ್ತಾಗಲಿ ಆವಾವ ಕರ್ಮಗಳು ।
ತೃಣನಾದರರಿತು ಅರಿಯದೆ ಮಾಡಲು ॥
ಕ್ಷಣ ತನ್ನದೆನ್ನದೆ ಅರ್ಪಿತನೆ ನಿಕ್ಷೇಪ ।
ಗುಣನಿಧಿ ವಿಜಯವಿಠ್ಠಲನ ಪುರದಲ್ಲಿ ೩

೧೭೪

ಗೋಪಿದೇವಿ ಎಂತು ಪೇಳಲೆ ನಾನೆಂತು ತಾಳಲೆ ಪ

ಶ್ರೀಪತಿ ಬಂದು ನಿಂದು ಏಕಾಂತವನ್ನ ಆಡುತಾನೆ ।
ಪಾಪ ಇಂಥಾದುಂಟೇನೆ ಕೇಳೆ ಲಕ್ಷ್ಮೀಕಾಂತನೀತನೆ ॥
ಮಂಥನ ಮಾಡುವಲ್ಲಿ ಮಂಥಣಿಯ ಒಡೆದನು ।
ಕುಂತಳವ ಪಿಡಿದು ಎನ್ನ ಕುಳ್ಳಿರಿಸಿದಾ ಕಿರಿಬೆವರನೊರಸಿದಾ ೧

ಚಿಕ್ಕಮಕ್ಕಳ ಕೂಡಿ ಚಕ್ಕನೆ ತಾ ಬಂದು ಬೇಗ ।
ಬೆಕ್ಕು ಕುನ್ನಿ ಮರ್ಕಟವ ತಂದನಮ್ಮಾ ಇದು ಚಂದವೇನಮ್ಮ ॥
ಉಕ್ಕುತಿಹ ಪಾಲ್ಗೊಡಗಳ ಉರುಳಿಸಿದಾ ಸುಮ್ಮನೆ ।
ಚೊಕ್ಕವೇನೆ ಸುಮ್ಮನೆ ಮೊಸರ ಸುರಿದಾ ಮೀಸಲು ಮುರಿದಾ ೨

ರಕ್ಕಸರ ಗಂಡ ನಮ್ಮ ರಾಜ್ಯದೊಳಗಿವಗಿನ್ನು ।
ತಕ್ಕ ಬುದ್ಧಿಯ ಪೇಳುವರದಾರು ಮೀರಿದ ಗೋಪಗೆ ॥
ಸಿಕ್ಕ ಪಿಡಿದೇವೆಂದರೆ ಸಿಕ್ಕನಮ್ಮ ಇವ ಗುಡಿವಡ್ಡಿ ಬೇಡವೇ ।
ಕಕ್ಕಸದಲಿ ಬಲು ಕಕ್ಕಲಾತಿಯಲಿ ೩

ಬಿರಬಿರನೆ ತಾ ಬಂದು ಬೆದರಿ ಎನಗಂದು ।
ಹರವಿಯ ಹಾಲು ಕುಡಿದಾ ತಾ ಎತ್ತ ಓಡಿದನೆ ॥
ವಾರಿಗಣ್ಣಿನಿಂದಲಿ ನೋಡಿ ಒದಗಿ ಬಳಿಗೆ ಬಂದು ।
ತೋರವಾದ ಕುಚಗಳ ಪಿಡಿದಾನೆ ಬಲಿದನೇನೆ ೪

ಹಾರ ಪದಕವು ಹಿಡಿ ಹಿಡಿ ಎಂದು ಎನ್ನ ಕೂಡ ।
ಸರಸವನಾಡಲಿಕ್ಕೆ ಅರಸನೇನೆ ನಮಗೆ ಪುರುಷನೇನೆ ॥
ಪುರುಷರು ಕಂಡರೆನ್ನ ಪರಿಪರಿ ಬಾಧಿಸ್ಯಾರು ।
ತರಳನ ಕರೆದ್ಹೇಳು ತಿದ್ದಿ ನೀನು ಇವಗೆ ಬುದ್ಧಿ ೫

ಚಂಡನಾಡುತಲಿ ಚಿಕ್ಕ ಮಿಂಡಿಯರ ಕಂಡು ತಾನು ।
ಚಂಡು ಅಂತ ಕುಚಗಳ ಪಿಡಿದಾನೆ ಇಂಥದುಂಟೇನೆ ॥
ಭಂಡು ಮಾಡತಾನೆ ಭಂಡಿಯ ಗೋವಳಗಿಂದು ।
ದಂಡಿಸವ್ವಾ ದಂಡವನು ಕೊಡು ನೀನು ೬

ಚಂಡ ಪ್ರಚಂಡನಿವನು ಗೋಪಿಕೆಯರಿಗೆಲ್ಲ ।
ಉದ್ದಂಡನಿವನು ತಂಡ ತಂಡದಲಿ ತುರು– ॥
ಹಿಂಡುಗಳ ಕಾಯುವ ಗೊಲ್ಲಬಾಲಕನಮ್ಮಾ ।
ಪಾಂಡುರಂಗ ವಿಜಯವಿಠ್ಠಲರಾಯ ಬಲು ದಿಟ್ಟನಿವನು ೭

೧೭೫

ಜೋಕುಮಾರನೆಂದು ಪಾಡಿದಳೊ
ಲೋಕಮೋಹಿಸುವಂಥ ಹೋಲಿಕೆಯವನ ಗೋಪಿ ಪ

ಬಾಯಲ್ಲಿ ಬೆಣ್ಣೆ ಬಗೆಬಗೆ ವಯ್ಯಾರ
ಕಾಯ ನೋಡಿದರದು ಬಲು ಕಪ್ಪು
ಮಾಯದ ವೇಷದವ ಮನೆ ಮನೆ ತಿರುಗುವ
ಸ್ತ್ರೀಯರ ಕಾಣುತ ಭಂಡಾಟನಾಡುವ ೧

ವಾವಿಗಳಿಲ್ಲದವಳ ತಾ ಮಾರಿ ಗಂಡು
ಆವಾಗ ಬಂದರಿವ ಇದೆ ತೆರನು
ದೇವದಾನವರೊಳಗಿವನೆ ಬಲು ಚಲುವ
ಕೇವಲ ನಾಚಿಕೆ ತೊರೆದ ಲಂಡನ್ನ ೨

ಅಷ್ಟಮಿ ದಿನದಲ್ಲಿ ಒಬ್ಬರ ವಶನಾಗಿ
ಬುಟ್ಟಿಯೊಳಗೆಯಿದ್ದು ಹೊರಗೆ ಪೋಪಾ
ಪಟ್ಟ ಗುಡುಪಾ ನಮ್ಮ ವಿಜಯವಿಠ್ಠಲರೇಯಾ
ಸೊಟ್ಟವಳನ ಬಿಡದಿಪ್ಪಕುವಲ್ಲಭಾ ೩

೧೭೬

ಜೋ ಜೋ ಹರಿ ಜಾಹ್ನವಿ ಜನಕ
ಮೂಜಗತ್ಪತಿ ಸುರಕುಲ ಸನಕಾ
ದೀಜನ ಮನೋಹರ ಮಾಣಿಕ್ಯ ಕನಕಾ
ವೈಜಯಂತಿ ಹಾರ ಪಾವನ್ನ ಪದಕ ಪ

ಕೇಶಿಭಂಜನ ವ್ಯೋಮಕೇಶ ವಂದಿತ ಪಾದ
ಕ್ಲೇಶನಾಶನ ವಾತೇಶನ ಜನಕ
ಕೇಶರಿರುಹ ಮುಂಜಿಕೇಶನೆ ಕುಂಕುಮ
ಕೇಸರಿಭೂಷಣ ಕೇಶವ ಶೌರಿ ೧

ವಾರುಣಿ ಪತಿನುತ ವಾರುಣನ ಭಯ ನಿ
ವಾರಣಾ ವಾರಣಾಶಿ ಪುರದರಸೆ
ವಾರಣ ನಗರಿಯ ವಾರನಹತಪಲ್ಲ
ವಾರುಣಿ ಪಾಣಿಯೆ ನಾರಾಯಣನೆ ಜೋ ಜೋ ೨

ಮಾದೇವಿ ರಮಣ ಭೂಮಿದೇವಿ ಉದ್ಧಾರ
ಮಾಧುರ್ಯ ವಚನ ಉಮಾದೇವಿ ವಿನುತಾ
ಮಾಧಾರ ಮಹಶೂರ ಮತ್ಕುಲನೆ ಪ್ರೇ
ಮಾದವನನೆ ಹರಿ ಮಾಧವ ರಾಯಾ ೩

ಗೋವಳಿ ಪರಿಪಾಲ ಗೋವಳೇರಾ ಪ್ರಿಯಾ
ಗೋವುಗಳ ಕಾಯಿದ ಗೋವಳರಾಯಾ
ಗೋವರ್ಧನುದ್ಧಾರ ಗೋ ವಿಪ್ರ ಸಂರಕ್ಷ
ಗೋವಿದಾಂಪತಿ ರಂಗ ಗೋವಿಂದ ನಂದ ೪

ಮಧುಕೈಟಭಾಸುರ ಮದಗರ್ವ ಮರ್ದನ
ಮದನ ಜನಕ ನಿತ್ಯ ಮಧುರನ್ನ ಪಾನಾ
ಮಧುರಾಪುರ ಪಾಲ ಮದಗಜ ಹರಣಾ ಶಾ
ಮದವರ್ಣ ಶರೀರ ಮಧುಸೂದನನೆ ೫

ಇಷ್ಟಭಕ್ತರ ಕುಲ ಇಷ್ಟದೈವವೆ ಸರ್ವ
ಇಷ್ಟಾರ್ಥ ಕೊಡುವ ಬಲಿಷ್ಟನು ನಿನ್ನ
ಇಷ್ಟ ಅಷ್ಟಯೆಂದು ತಿಳಿಯಲಿ ವಶವಲ್ಲ
ವಿಷ್ಣು ಸರ್ವೋತ್ತಮ ವಿಶ್ವನಾಟಕನೆ ೬

ಅಕ್ರಮದಲಿ ಸ್ವರ್ಗ ಆಕ್ರಮಿಸಿ ಬಲಿ
ವಿಕ್ರಮನಾಗಿ ಕಾಲಕ್ರಮಣಿ ಮಾಡೆ
ಶಕ್ರಮರ್ಚಿಸೆ ಅನುಕ್ರಮನಾಗಿ ಪ
ರಾಕ್ರಮದಲಿ ಬೆಳದೆ ತ್ರಿವಿಕ್ರಮನೆ ೭

ವಾಮಲೋಚನೆಯರ ವಾಮನ ಕೆಡಿಸಿದೆ
ವಾಮನವಾಶಿಷ್ಟವಾ ಮುನಿವಂದ್ಯ
ವಾಮನದಲಿ ದಾನವಾಮನ್ಯಗಳರನ್ನು ಅ
ವಮಾನ ಮಾಡಿದೆ ಸಿರಿವಾಮನನೆ ೮

ಶ್ರೀಧರ ರಮಣನೆ ಶೃಂಗಾರ ವಾರಿಧಿ
ಶ್ರೀಧನ ಸಂಪತ್ತಾಶ್ರಿತ ಜನರಿಗೆ
ಶ್ರೀಧೇನು ನೀನಯ್ಯಾ ಶ್ರೀ ಕರುಣಾಕರ
ಶ್ರೀದೇವಿ ಉರಭೂಷಾ ಶ್ರೀಧರನಂತಾ ೯

ಋಷಿಕೇಶನ ತಾತ ಋಷಿಜನ ಸಂಪ್ರೀತ
ಋಷಿಕುಲೋದ್ಭವ ಪುರುಷ ರಾಮ ಮಹಾ
ಋಷಿನಾಮಧೇಯನೆ ಋಷಿಪತ್ನಿ ಪಾಲನೆ
ಋಷಿಗಳ ಒಡೆಯನೆ ಹೃಷಿಕೇಶ ದೇವ ೧೦

ಪದುಮಜಾಂಡದಲ್ಲಿ ಪದುಮೆ ಮಾತನು ಕೇಳಿ
ಪದುಮನಾಭಿಯಲ್ಲಿ ಪದುಮಜನ ಪೆತ್ತ
ಪದುಮಾಸ್ಯ ಪದುಮಾಕ್ಷ ಪದುಮಕರನೆ ಪಾದ
ಪದುಮ ಮಿಗಲು ಕಾಂತಿ ಪದುಮನಾಭನೆ ೧೧

ಧಾಮನಿಧಿಕುಲನು ಧಾಮನೆ ನಿರುತ ತ್ರಿ
ಧಾಮನಿವಾಸ ಸುಧಾಮನ ಮಿತ್ರ
ಧಾಮ ಪುಣ್ಯಧಾಮ ಭಕ್ತ ಹೃದ್ವನಜ
ಧಾಮ ಮಧುಕರನೆ ದಾಮೋದರ ಧರ್ಮಾ ೧೨

ಶಂಖ ಸುರಾಹರಾ ನಿಃಶಂಕ ಚರಿತ
ಶಂಖಪಾಣಿ ಶಶಾಂಕ ಸುವದನ
ಸಂಖ್ಯೆಯಿಲ್ಲದೆ ತಾಯಿ ಸಂಕಲೆ ಹರಿಗಡಿದೆ
ಸಂಕರುಷಣನುವುಜ ಸಂಕರುಷಣನೆ ೧೩

ಪ್ರದ್ಯೋತ ಶತತೇಜ ಪ್ರಧಾನ ಮೂರುತಿ
ಪ್ರದ್ವೀಪ ವರ್ಣ ಸುಪ್ರದಾಯಕನೆ
ಪ್ರದೇಶ ಪರಿಮಾಣ ವರಪ್ರದ ಸಿದ್ಧನೆ
ಪ್ರದ್ಯುಕ್ತ ಅವ್ಯಕ್ತ ಪ್ರದ್ಯುಮ್ನ ವಿಶ್ವ ೧೪

ವಾಸುವಾನುಜ ಶ್ರೀನಿವಾಸ ಪುಂಡ್ರೀಕ
ವಾಸುದೇವನ ಶಮನಪುರದಲ್ಲಿ
ವಾಸಮಾಡಿಸಿದಯ್ಯಾ ವಾಸವಾರ್ಚಿತ ಶ್ರೀ
ವಾಸುದೇವ ವಾಸುದೇವ ೧೫

ಅನುಗಾಲವು ನಿನ್ನ ಅನುಸರಿಸಿದೆ ನಾನು
ಅನುಕೂಲವಾಗಿ ಎನ್ನನು ಸಾಕುವುದು
ಅನುಮಾನವ್ಯಾತಕೆ ಅನಿಮಿತ್ತ ಬಂಧು
ಅನುಪಮ ಚರಿತನೆ ಅನಿರುದ್ಧ ಶ್ರೀಶಾ ೧೬

ಪುರುಷ ಪುರುಷ ಶ್ರೇಷ್ಠ ಪುರುಷಾರ್ಥ ಕಾರಣ
ಪುರುಷೇಶ್ವರ ತತ್ಪುರುಷಾದಿ ಪುರುಷ
ಪುರುಷ ಬೀಜ ವೇದ ಪುರುಷ ಪರಮ
ಪುರುಷ ಪುರುಷರು ಮೋಹಿಸುವ ಪುರುಷೋತ್ತಮನೆ ೧೭

ಅಕ್ಷಯ ಬಲ ಸಹಸ್ರಾಕ್ಷ ರಕ್ಷಕ
ಅಕ್ಷರಪರ ಬ್ರಹ್ಮ ಗೀರ್ವಾಣಧ್ಯಕ್ಷ
ಅಕ್ಷಯ ಪಾತ್ರಿಯ ಶಾಖಾದಳವನ್ನು
ಅಕ್ಷಯ ಮಾಡಿದಧೋಕ್ಷಜ ಚಕ್ರಿ ೧೮

ನರಸಖ ನರಹರಿ ನಾರಾಯಣ ವಾ
ನರ ದಳನಾಯಕ ನಾರದ ವಿನುತ
ನರಕ ಉದ್ಧಾರಕ ನರಕಾಂತಕ ಕಿ
ನ್ನರ ಸುರನರೋರಗ ವೃಂದ ನರಸಿಂಹ ೧೯

ಸಚ್ಚಿದಾನಂದಾತ್ಮ ಸಚಲ ವಿಗ್ರಹನೆ
ಸಚ್ಚರಾಚರದೊಳೂ ಗುಣಪರಿಪೂರ್ಣ
ಸಚ್ಛಾಸ್ತ್ರದಲಿ ನಿನ್ನ ಸಾಮರ್ಥ್ಯ ಪರಿಪೂರ್ತಿ
ಸಚ್ಯೂತ ಚುತಿ ದೂರ ಚಿನ್ಮಯ ರೂಪಾ ೨೦

ಜನನ ಮರಣ ನಾಶ ಜನನಾದಿಕರ್ತಾಂ
ಜನಸುತಗತಿ ಪ್ರೇಮಾಂಜನ ಗಿರಿಧಾಮ
ಜನಕವರದ ಸಜ್ಜನರಘದಹನ ದು
ರ್ಜನರ ಕುಲರಾತಿ ಜನಾರ್ದನನೆ ೨೧

ವೀಂದ್ರವಾಹನ ಮಹೇಂದ್ರಧಾರನೆ ಗ
ಜೇಂದ್ರನ್ನ ಬಿಡಿಸಿ ನಕ್ಷೇಂದ್ರನ ಸೀಳಿ ನಾ
ಗೇಂದ್ರ ಶಯನ ಗುಣಸಾಂದ್ರ ಗೋಕುಲ ಚಂದ್ರ
ಇಂದ್ರಮಣಿ ನಿಭ ರಾಮಚಂದ್ರ ಉಪೇಂದ್ರಾ ೨೨

ಹರಿ ಎನುತಾ ಹರಿ ಹರಿದು ಓಡಿ ಬರೆ
ಹರಿದು ಪೋಗಿ ಪರಿಹರಿಸಿದ ಖಳನ
ಹರಿ ಹರಿಯು ನಲಿವನೆ ಹರಿರೂಪ ಪರಿ
ಹರಿನಾಮವೆ ಗತಿ ಹರಿ ಸರ್ವೋತ್ತಮಾ ೨೩

ಕೃಷ್ಣದ್ವಯಪಾಯನ ಉತ್ಕೃಷ್ಟ ಮುನೇಶ
ಕೃಷ್ಟಿಗೆ ಬಂದ ಕಷ್ಟ ಓಡಿಸಿದೆ
ಕೃಷ್ಣವರ್ತ್ಮನೆ ಸಂತುಷ್ಟೀಲಿ ಸುಖಬಡುವ
ಕೃಷ್ಣಾವತಾರ ಕೃಷ್ಣ ಕಮಲೇಶ ೨೪

ನಿನ್ನ ಮಹಿಮೆಯನ್ನು ಬಣ್ಣಿಸಲಳವಿಲ್ಲ
ನಿನ್ನೊಳಗೆ ನೀನು ಬೀಯ ಬೀಜವನು
ಎನ್ನ ಪಾಲಿಸುವುದು ವಿಜಯವಿಠ್ಠಲ ಪ್ರ
ಸನ್ನ ಭಕ್ತರ ವರದ ಬಾಲ ಗೋಪಾಲ ಜೋ ಜೋ ೨೫

೧೭೭

ಡೀ ಡೀ ಅಡೋನೆ ರಂಗ ಡೀ ಡೀ ಆಡೋನೆ ।
ಓಡಿ ಓಡಿ ಬಂದು ತಲಿಗೆ ನೀ ಡೀ ಡೀ ಡೀ ಎಂದು ಪ

ಮರಕತ ನವರತ್ನ ವಜ್ರ ।
ಹರಳು ತೆತ್ತಿಸಿದ ದ್ಯುಮಣಿ ॥
ಕಿರಣ ಮುಕುಟ ಧರಿಸಿದ ಶಿರದಲಿ ।
ಸರಿ ಸರಿ ಸರಿ ಸರಿ ಹಾಯಿದು ೧

ಚಂದ್ರಶೇಖರ ಹಂಸವಾಹನ।
ಇಂದ್ರಾದ್ಯರಾಕಾಶದಲಿ ಧುಂ ಧುಂ ॥
ಧುಂ ಧುಂ ದುಂದುಭಿ ನುಡಿಸೆ ।
ಬಂದೆ ಇಕ್ಕೋ ಬಂದೆ ಬಂದೆನುತ ೨

ಪಿಂತಿರುಗಿ ಪೋಗಿ ನೀನು ।
ಅಂತರಿಸಿ ದೂರದಿಂದ ॥
ನಿಂತು ವಿಜಯವಿಠ್ಠಲರೇಯಾ ।
ಇತ್ತಿಂ ತ್ತಿಂ ತ್ತಿಂ ತ್ತಿಂ ತ್ತಿಂ ತ್ತೆನುತಲಿ ೩

೧೭೮

ತಕ್ಕೋ ಗಂಟ ನಿನ್ನಾಟವ ತಿಳಿಸುವೆ
ಸಖಿಯರ ಕೂಡಿದಂತೆಲ್ಲೊ ಪ

ಠಕ್ಕುಬಿಕ್ಕಿನ ಮಾತುಗಳಾಡಲು
ಯುಕುತಿಯ ನಾ ಕೇಳೆನೆಲವೊ ಅ.ಪ.

ಮದಗಜಮನೇರ ಹೆದರಿಸಿ ಬೆದರಿಸಿ
ಅಧರವ ಸವಿದಂತಲ್ಲೊ
ಸುದತಿಯರೆಲ್ಲರ ಅಂಜಿಸಿ ವಂಚಿಸಿ
ದಧಿ ಘೃತ ಸವಿದಂತಲ್ಲೋ ೧

ಕ್ಷೋಣಿಯೊಳೆಲ್ಲಿಗೆ ಹೋದರು ಎನ್ನಯ
ವೀಣೆಯ ಹೊರಬೇಕಲ್ಲೊ
ಗಾಣದೆತ್ತಿನ ಪರಿಯಲಿ ತಿರುಗುತ
ತ್ರಾಣ ತಪ್ಪಲು ಬಿಡೆನಲ್ಲೊ ೨

ಸಣ್ಣಾಮಾತುಗಳಾಡಲು ಕೇಳುತ
ಚಿಣ್ಣನಂತಿರಬೇಕಲ್ಲೊ
ಘನ್ನ ಮಹಿಮ ಶ್ರೀ ವಿಜಯವಿಠ್ಠಲ
ಇನ್ನೆಂದಿಗೂ ಬಿಡೆನಲ್ಲೊ ೩

೧೭೯

ತಾರೋ ವಸನ–ಎಷ್ಟೋ ವಿನೋದ ಪ

ಕಡಹದ ಮರನೇರಿ ಕಾಡುವುದುಚಿತವೆ
ತಡವಾಗುವುದೈ ಒಡೆಯರುಳ್ಳವರಿಗೆ ೧

ಚಿತ್ತಜನ್ಯೆಯನೆ ಮತ್ತಗಮನೆಯರ
ಬತ್ತಲೆ ನಿಲಿಸುವುದುತ್ತಮವಲ್ಲವೊ ೨

ಪರಮಪುರುಷ ನಿನ್ನವರು ಎಂದಿಗು ನಾವು
ಕರುಣಿಸು ಎಮ್ಮ ಸಿರಿ ವಿಜಯವಿಠ್ಠಲ ೩

೧೮೦

ನೋಡಿದೆನು ಉಡುಪೀ ನಿವಾಸನ
ನೋಡಿದೆನು ಯಾದವೇಶನ
ನೋಡಿದೆನು ಮಾನಿಸ ವೇಷನ
ನೋಡಿದೆನೊ ಲಕುಮೇಶನ ಪ

ಪರಶುರಾಮನು ಭೂಮಿ ಸುರರಿಗೆ
ಸರವು ಧಾರುಣಿ ಧಾರಿಯಾ ಎರದು
ಕೇಸರಗಿರಿಯ ಪಡುಮೂಲ
ಶರನಿಧಿಯನು ಶರದಲೀ
ಭರದಿ ಬಿಡಿಸಿದ ಶೂರ್ಪಕಾರದ
ತೆರದಿ ನೆಲ ನೀ ಧರುಣಿಗೆ
ಪರಮ ಸಾಹಸ ರಾಮಭೋಜನು
ಅರಸನಾದುದು ನೋಡಿದೆ ೧

ಯಾಗಗೋಸುಗ ರಾಮ ಭೋಜನು
ನೇಗಿಲಿಯ ಕೊನೆಯಿಂದಲಿ
ಆಗ ಭೂಮಿಯ ಶೋಧಿಸಲು ಬಂದು
ನಾಗ ಬಂದಿತು ಮೃತವಾಗಿ
ತೂಗಿ ಶಿರವನು ಭೃಗು ಕುಲೇಶಗೆ
ಬಾಗಿ ನೆನೆಯಲು ಸಂಕೇತಾ
ಸಾಗಿ ಭೂಮಿಪಾಲ ರಿಪು
ಚನ್ನಾಗಿ ಒಲಿದದು ನೋಡಿದೆ ೨

ತಿಳುಹಿದನು ಪೂರ್ವದಲಿ ಈ ಫಣಿ
ಖಳನು ಕಾಣೊ ಇವನಿಂದು
ಅಳಿದು ಪೋದದು ಲೇಸು ಭೂಸುರ
ಕುಲಕೆ ಸಂತೋಷವಾಯಿತು
ಒಲುಮೆಯಲಿ ಸತ್ಕಾರ ವಿಧ ವೆ

ಗ್ಗಳವಾಗಿ ಸುಯಾಗವ
ಸುಲಭ ಮನದಲಿ ಮಾಡೆನಲು ನಿ
ಶ್ಚಲ ಭಕುತಿಲಿ ಸ್ತುತಿಸಲು ೩

ಇಂದಿರಾಪತಿ ಕರುಣಿಸೆಂದು
ಅಂದಿಗಾ ರಾಮ ಭೋಜನು
ಒಂದು ಕ್ರೋಶದ ಅಗಲ ರಜತಾ
ಚಂದದಾಸನ ಮಾಡಿಸಿ
ತಂದು ದೇವನ ಕುಳ್ಳಿರಿಸಿ ಆ
ನಂದದಲಿ ಓಲಾಡುತಾ
ಕುಂದದಲೆ ಮೇಧವನು ಮುಗಿಸಿ ಗೋ
ವಿಂದನ ಪ್ರೀತಿಪಡಿಸಿದಾ ೪

ಭೂತಳದೊಳು ರಜತಪೀಠಾಖ್ಯ
ಖ್ಯಾತಿ ಆಯಿತು ಸರ್ವದಾ
ಆ ತರುವಾಯದಲ್ಲಿ ಭಾರ್ಗವ
ಭೂತನಾಥನ ನಂದದಿ
ವಾತ ಭಕ್ಷನ ನಡುವೆ ನಿಂದನು
ಮಾತುಯಿದು ಪುಶಿಯಲ್ಲವೊ
ಪೂತುರೆ ಮೋಹಕವೆ ತೋರಿದ
ಜಾತ ರಹಿತಗೆ ನಮೋ ನಮೋ ೫

ಇಂತು ಈ ಪರಿ ಇರಲು ಗಂಗೆಯ
ಕಾಂತ ಮಹಾ ತಪವನೆ ಮಾಡಿ
ಸಂತತ ಗೋಪಾಲಕೃಷ್ಣನ
ಸಂತೋಷವನು ಬಡಿಸಿದಾ
ಚಿಂತೆಯಲಿ ವಿದೂರನಾದನು
ಮುಂತೆ ನಡೆದ ಕಥೆ ಕೇಳಿ
ಕಂತುಹರನನ ಒಲಿಸಿ ಉಡುಪಾ
ಕಾಂತ ವರವನೆ ಐದಿದಾ ೬

ಮೂರು ಯುಗದಲಿ ಈ ಪರಿಯಾಗೆ
ಮಾರುತ ಮಧ್ಯಗೇಹನ
ಚಾರು ಮನೆಯಲಿ ಜನಿಸಿ ವೈಷ್ಣವಾ
ಚಾರ್ಯ ಈ ದುಶ್ಶಾಸ್ತ್ರವ
ಹಾರಿಸಿದ ಹರುಷದಲಿ ರುಕ್ಮಿಣಿ
ದ್ವಾರಕೆಲಿ ಪೂಜೆ ಮಾಡಿದ
ಮೂರುತಿಯ ಸ್ಥಾಪಿಸಿದ ಲೀಲೆಯು
ಆರು ಬಣ್ಣಿಸಲಾಪರು ೭

ಇದೇ ರಜತಪೀಠ ಅಜಕಾನನವಿದೆ
ಇದೇ ಉಡುಪಿ ಇದೇ ಶಿವಕುಲ್ಲ್ಯ
ಅದರ ಬಳಿಯಲಿಯಿಪ್ಪ ತೀರ್ಥವ
ಅದುಭುತವ ವರ್ಣಿಸುವೆನು
ಇದೇ ಅನಂತ ಸರೋವರವು ಮ
ತ್ತಿದೇ ವಾರುಣ್ಯಚಂದ್ರಮತೀರ್ಥ
ಇದಕೆ ಮಧ್ವಸರೋವರ ವೆಂ
ಬದು ಕಾಣೊ ಶ್ರುತಿ ಉಕ್ತಿಲಿ ೮

ಸಕಲ ದೇಶದ ಜನರು ತ್ರಿವಿಧ
ಸುಖವಾರಿಧಿಯೊಳು ಸೂಸುತಾ
ಅಖಿಳ ವೈಭವದಿಂದ ಬಪ್ಪ
ಅಕಟ ಸಂದಣಿಗೇನೆಂಬೆ
ಮಕರ ರಾಶಿಗೆ ಸೂರ್ಯ ಬಂದ ಕಾ
ಲಕೆ ಕೃಷ್ಣನ ನೋಡುವೆನೆಂದು
ಚಕ್ಕನೆ ನಿಲ್ಲದೆ ಬಂದು ನೆರದಂದು
ಮುಕ್ತಾರ್ಥ ಹರಿಪ್ರೇರಕಾ ೯

ಸಜ್ಜನರ ಸಿರಿಚರಣ ರಜದಲಿ
ಮಜ್ಜನವ ಗೈವುತ
ಹೆಜ್ಜೆಹೆಜ್ಜೆಗೆ ಕೃಷ್ಣ ಕೃಷ್ಣ

ಅಬ್ಜನಾಭ ನಾರಾಯಣ
ಮೂಜಗತ್ಪತೆ ಎಂದು ಸ್ತೋತ್ರ ನಿ
ರ್ಲಜ್ಜನಾಗಿ ಪಠಿಸುತಾ
ರಜ್ಜುಪಾಣಿಯ ಬಹಿರದಿಂದ ನಿ
ರ್ವ್ಯಾಜ್ಯ ಭಕುತಿಲಿ ನೋಡಿದೆ ೧೦

ಮೊದಲು ನಮಿಸಿದೆ ಚಂದ್ರಶೇಖರ
ಪದುಮಗರ್ಭನ ಮಗನೆಂದು
ಅದರ ತರುವಾಯದಲ್ಲಿ ಮಾಯಿಯ
ಸದಬಡೆದ ಪೂರ್ಣಬೋಧರು
ಸದಮಲಾ ಕುಳುತಿಪ್ಪ ಸ್ಥಾನವ
ಒದಗಿ ನೋಡಿ ಕೊಂಡಾಡುತಾ
ಮದನ ಜನಕಾನಂತ ಸ್ವಾಮಿಯ
ಪದಯುಗಳವನು ನೋಡಿದೆ ೧೧

ರತುನ ಗರ್ಭದೊಳಧಿಕವಾದ ತೀ
ರಥವಿದು ಮಧ್ವಾಖ್ಯದಿ
ಸತತ ಬಿಡದಲೆ ಇಲ್ಲಿ ಭಾಗೀ
ರಥಿವಾಸ ನದಿಗಳ ಕೂಡಿ
ನುತಿಸಿ ಮೆಲ್ಲನೆ ಮುಟ್ಟಿ ಮಿಂದು
ಮತ್ತೆ ಕರ್ಮದ ಚರಿಯವ
ಹಿತ ಮನಸಿನಲ್ಲಿ ಮಾಡುವಂಥ
ಕೃತ ಕಾರ್ಯವನು ನೋಡಿದೆ ೧೨

ಅಲ್ಲಿಂದ ನವರಂಧ್ರಗಳು ಕಂಡು
ಫುಲ್ಲಲೋಚನ ಕೃಷ್ಣನ
ಸೊಲ್ಲಿನಿಂದಲಿ ಪಾಡಿ ಭಾರತಿ
ವಲ್ಲಭನ ಕೊಂಡಾಡುತಾ
ಮೆಲ್ಲ ಮೆಲ್ಲನೆ ದ್ವಾರವನೆ ಪೊಕ್ಕು

ನಿಲ್ಲದಲೆ ಸಮೀಪಕೆ
ಬಲ್ಲವನು ಗುಣಿಸುತ್ತ ಭಕುತ ವ
ತ್ಸಲನಂಘ್ರಿ ನೋಡಿದೆ ೧೩

ಮೂರು ಬಗೆ ಭೂಷಣವ ಧರಿಸಿದ
ಮೂರುತಿ ಇದೇ ಕಾಣಿರೊ
ಪಾರುಗಾಣರು ಈತನ ಅವ
ತಾರ ಗುಣಕ್ರಿಯೆ ಮಹಿಮೆಯಾ
ವಾರಿಜೋದ್ಭವ ಶಿವ ಮುಖಾದ್ಯರು
ಸಾರಿ ಹಾಹಾ ಎಂಬರೊ
ಧಾರುಣಿಗೆ ಇದೇ ದೈವ ನವನೀತ
ಚೋರನ ಕೊಂಡಾಡಿದೆ ೧೪

ತ್ರಾಹಿ ತ್ರಯಾವಸ್ಥೆ ಪ್ರೇರಕ
ತ್ರಾಹಿ ತ್ರಯಗುಣ ವಿರಹಿತಾ
ತ್ರಾಹಿ ತ್ರಯಧಾಮ ವಾಸ ಸರ್ವೇಶ
ತ್ರಾಹಿ ತ್ರಯ ರೂಪಾತ್ಮಕಾ
ತ್ರಾಹಿ ತ್ರಯವನು ಗೆದ್ದ ಪ್ರಸಿದ್ಧ
ತ್ರಾಹಿ ತ್ರಯವನು ಕೊಡುವನೆ
ತ್ರಾಹಿ ತ್ರಯಗಣ್ಣ ವನಪಾಲಕ
ತ್ರಾಹಿ ತ್ರಯಲೋಕಾಧಿಪಾ ೧೫

ಪಾಹಿಪರಮಾನಂದ ಗೋವಿಂದ
ಪಾಹಿ ಪರತರ ಪರಂಜ್ಯೋತಿ
ಪಾಹಿ ಪತಿತ ಪಾವನ್ನ ಮೋಹನ್ನಾ
ಪಾಹಿ ಪಾಲಾಂಬುಧಿಶಾಯಿ
ಪಾಹಿ ಜಗದತ್ಯಂತ ಭಿನ್ನಾ
ಪಾಹಿ ನಿರ್ಭಿನ್ನ ಸ್ವರೂಪ
ಪಾಹಿ ನಖಶಿಖ ಜ್ಞಾನ ಪೂರ್ಣನ
ಪಾಹಿ ಎನ್ನಯ ಪ್ರೇಮನೆ ೧೬

ನಮೋ ನಮೋ ಚತುರಾತ್ಮ ಗುಣನಿಧಿ
ನಮೋ ನಮೋ ಪುನ್ನಾಮಕ
ನಮೋ ನಮೋ ವಟಪತ್ರಶಾಯಿ
ನಮೋ ನಮೋ ಪುಣ್ಯಶ್ಲೋಕನೆ
ನಮೋ ನಮೋ ಸಮಸ್ತ ಸರ್ವಗ
ನಮೋ ನಮೋ ಸರ್ವ ಶಬ್ದನೆ
ನಮೋ ನಮೋ ಅವ್ಯಕ್ತ ವ್ಯಕ್ತಾ
ನಮೋ ನಮೋ ನಾರಾಯಣ ೧೭

ಜಯ ಜಯತು ಕರಿವರದ ವಾಮನ
ಜಯತು ನಾರದ ವಂದ್ಯನೆ
ಜಯ ಜಯತು ಪ್ರಹ್ಲಾದ ರಕ್ಷಕ
ಜಯ ಜಯತು ಪಾರ್ಥನ ಸಾರಥೆ
ಜಯ ಜಯತು ಅಂಬರೀಷ ಪರಿಪಾಲಾ
ಜಯತು ಪರಾಶರನುತಾ
ಜಯ ಜಯತು ಪಾಂಚಾಲಿ ಮಾನ ಕಾಯ್ದನೆ
ಜಯ ಜಯತು ಗೋಪಿಕಾ ವಲ್ಲಭಾ ೧೮

ಇನಿತು ಬಗೆಯಲಿ ತುತಿಸಿ ದೇವನ
ಮನದಣಿಯ ಕೊಂಡಾಡುತಾ
ಕ್ಷಣಬಿಡದೆ ತನ್ನ ನೆನೆಸಿದವರಿಗೆ
ಹೊಣೆಯಾಗಿ ಪಾಲಿಸುವನು
ಜನುಮ ಜನ್ಮದಲಿಂದ ಮಾಡಿದ
ಘನದುರಿತ ಪರ್ವತಗಳು
ಚಿನಿಗಡೆದು ಸಾಧನವೆಲ್ಲ ವೇಗ
ತನಗೆ ತಾ ಮಾಡಿಸುವನು ೧೯

ಆದಿನಾರಾಯಣನು ಗೋವಿಂದ
ವ್ಯಾಧ ಭೂಸುರ ವೇಷವು
ಭೇದ ಮಾಡಿದ ನಾರಾಯಣಿ

ಸುಪ್ರಸಾದ ನಿರ್ಮಲರೂಪವು
ಆದಿವಾರವು ವಿಡಿದು ಎರಡು
ಐದು ದಿನ ಪರಿಯಂತವು
ಶ್ರೀಧರೇಶನು ವೇಷ ಧರಿಸಿದ್ದು
ಸಾಧು ಸಂಗಡ ನೋಡಿದೆ ೨೦

ಉದಯಕಾಲದ ಪೂಜೆಯಾಗಲು
ಮುದ ನಿರ್ಮಾಲ್ಯ ವಿಸರ್ಜನೆ
ಇದೆ ಪೂರೈಸಲು ಮತ್ತೆ ಪಂಚ
ಸುಧ ಪೂಜೆ ಉದ್ವಾರ್ಥನೆ
ಒದಗಿಯಾಗಲು ಮೇಲೆ
ಸುಧ ವಿಧುದಂತೆ ಬೆಣ್ಣೆ ಶರ್ಕರ
ಸದತೀರ್ಥ ಅಲಂಕಾರ ಅವಸರ
ಇದೆ ಮಹ ಪೂಜೆ ನೋಡಿದೆ ೨೧

ಗಂಧ ಪರಿಮಳ ತುಲಸಿ ಪುಷ್ಪಾ
ನಂದ ಭೂಷಣ ಧರಿಸಿಪ್ಪ
ಒಂದು ಕೈಯಲಿ ದಾಮ ಕಡಗೋ
ಲಂದದಲಿ ತಾಳಿದಾ
ಮಂದರಿಗೆ ಇದು ಸಾಧ್ಯವಲ್ಲವು
ಮುಂದೆ ಯತಿಗಳು ಮಂತ್ರವ
ಮಂದ ನಗಿಯಲಿ ಪೇಳುತಿಪ್ಪ
ಚಂದವನು ನಾ ನೋಡಿದೆ ೨೨

ಎತ್ತುವ ಧೂಪಾರತಿಗಳು
ಹತ್ತೆಂಟು ಬಗೆ ಮಂಗಳಾ
ರುತ್ತಿ ನಾನಾ ನೈವೇದ್ಯ ಷಡುರಸ
ಮೊತ್ತಂಗಳು ಪರಿವಿಧಾ
ಉತ್ತಮ ಶಾಖಾದಿ ಘೃತದಧಿ
ತತ್ತಕ್ರಫಲ ಪಕ್ವವು

ಸುತ್ತಲು ತಂದಿಟ್ಟು ಅರ್ಪಿ
ಸುತ್ತಲಿಪ್ಪುದು ನೋಡಿದೆ ೧೩

ಮಂತ್ರ ಘೋಷಣೆ ಭಾಗವತಜನ
ನಿಂತು ಗಾಯನ ಮಾಡಲು
ಅಂತವಿಲ್ಲದೆ ವಾದ್ಯಸಂದಣಿ
ಚಿಂತಿಸುವ ನಿಜದಾಸರು
ವಂತು ವಾಳೆಯಿಲ್ಲದಾ ಜನ
ಸಂತೋಷದಲಿ ನಲಿವುತಾ
ತಂತ್ರ ಸಾರೋಕ್ತದ ಪೂಜೆ
ಅತ್ಯಂತವನು ನಾ ನೋಡಿದೆ ೨೪

ತೀರ್ಥ ಪ್ರಸಾದ ಗಂಧ ಅಕ್ಷತೆ
ಅರ್ಥಿಯಲ್ಲಿ ಕೊಡುವರು
ವ್ಯರ್ಥವಲ್ಲಿವು ಇಲ್ಲಿ ಒಂದು ಮು
ಹೂರ್ತವಾದರು ಎಂದಿಗೂ
ಪಾರ್ಥಸಾರಥಿ ಉಂಡ ಶುಭ ಪ
ದಾರ್ಥ ಬಡಿಸಲು ಉಂಡು ಕೃ
ತಾರ್ಥನಾದೆನು ಜ್ಞಾನವಧಿಕ
ಸಾರ್ಥಕರನ ನೋಡಿದೆ ೨೫

ತರಣಿ ಮಕರಕೆ ಬರಲು ಗೋಪಾಲ
ಮೆರೆವ ವೈಭವವೆಂಬೆನೇ
ಉರಗ ಮಂಟಪ ಗಜ ತುರಗ ಹರಿ
ಗರುಡ ಶ್ರೀ ಹನುಮಂತನಾ
ವರ ರೂಢನಾಗಿ ಮೆರೆದು ಆಮೇಲೆ
ಮಿರುಗುವ ರಥವನೇ ಏರಿ
ಪರಮ ವೇಗದಿ ಚತುರ್ವೀಧಿಯ
ತಿರುಗಿ ಬಪ್ಪದು ನೋಡಿದೆ ೨೬

ಓಕಳಿಯ ಸಂಭ್ರಮವೆ ಪೇಳಲು

ಗೋಕುಲಕೆ ಸಮನೆನಿಸಿತು
ವಾಕು ಕೇಳ್ ಸುರ ಮುನಿಗಳೊಡನೆ
ಲೋಕಕ್ಕಾಶ್ಚರ್ಯ ತೋರುತಾ
ಸೋಕಿ ಸೋಕದ ಹಾಸೆ ಓಕುಳೀ
ಹಾಕಿ ಆಡುವ ಲೀಲೆಯ
ಈ ಕಲಿಯುಗದಲ್ಲಿ ಸೋಜಿಗ
ಈ ಕಥೆಯಾದುದು ನೋಡಿದೆ ೨೭

ಸಂಜೆ ವಾಲಗ ಎಡಬಲದಲಿ
ಪಂಜು ಕಟ್ಟಿಕೆಕಾರರು
ರಂಜಿಸುವ ಪಲ್ಲಕ್ಕಿ ಸೇವಿಪ
ರಂಜಳವಾಗಿ ಒಪ್ಪಲು
ಕುಂಜರಾರಿಯ ಪೀಠದಮೇಲೆ
ಕಂಜಲೋಚನ ಕುಳ್ಳಿರೆ ನಿ
ರಂಜನದಲಿ ಪೂಜಿಸುವ ಮತಿ
ಪುಂಜ ಯತಿಗಳ ನೋಡಿದೆ ೨೮

ಶ್ರುತಿ ಪುರಾಣಗಳುಪನಿಕ್ಷತ್ ವೊ
ಸತು ಶಾಸ್ತ್ರ ಪ್ರಬಂಧವು
ಸತತ ಪೇಳುವ ಭಾಗವತ ಸುಸಂ
ಗೀತಿಯಲಿ ರಾಗ ಭೇದವು
ಶ್ರುತಿ ಕಥಾಭಾಗ ಪದ್ಯ ಅಷ್ಟಕ
ಮಿತಿಯಿಲ್ಲದಲಿಪ್ಪ ಪ್ರಸಂಗ
ತತುವ ಮಾರ್ಗದಿ ನುಡಿವ ಬಲು ಉ
ನ್ನತ ಮಹಿಮರ ನೋಡಿದೆ ೨೯

ದಾಸರ ಕೊಡಿಪ್ಪಾಳಿಯ ಸ್ತುತಿ
ವಾಸುದೇವರ ದ್ವಾರದಾ
ಆಸರಿತದಲಿ ನಿಂತು ಮಹಾ ಪ್ರ
ಕಾಶವಂತನು ವೊಳ ಪೋಗೆ

ಲೇಸಾಗಿ ನಮಸ್ಕರಿಸುವಂಥ
ಭೂಸುರರ ಸಮುದಾಯಕ
ಸೂಸಿ ಮಂತ್ರಾಕ್ಷತೆಯ ಪುಷ್ಪ ಯ
ತೀಶ ಕೊಡುವದು ನೋಡಿದೆ ೩೦

ಧಾತ್ರಿಯೊಳಗಿದಕ್ಕೆಲ್ಲಿ ಸಮನಾದ
ಕ್ಷೇತ್ರವನು ನಾ ಕಾಣೆನೊ
ಸ್ತೋತ್ರ ಪಠಿಸುತ ಬಂದು ಕಂಡಾ
ಮಾತ್ರದಲಿ ಕೈವಲ್ಯವು
ಚಿತ್ರ ಚರಿತ್ರ ಮಹಿಮ ಸಿರಿ
ಪಾತ್ರ ವಿಜಯವಿಠ್ಠಲ ವಲಿಯೆ ಈ
ಯಾತ್ರೆ ಫಲವನು ಕೊಡುವನು ೩೧

೧೮೧

ನೋಡಿದೆನೊ ಮನದಣಿಯ ನಳಿನಭವಾದ್ಯರ
ಕ್ರೀಡಾಮೃಗವನೆ ಮಾಡಿ
ಆಡಿಸುವ ವಿಚಿತ್ರ ಮಹಿಮ ಗೋಪಾಲಗ
ಈಡುಗಾಣೆನೊ ಎಲ್ಲೆಲ್ಲಿ ಆವಲ್ಲಿ ಪ

ಕಾಲಲಂದಿಗೆ ಗೆಜ್ಜೆ ಸರಪಳಿ ಉಡುದಾರ
ಮೇಲು ಕಿರಿಗೆಜ್ಜೆ ಘಂಟೆ
ತೋಳು ರಕ್ಷಾಮಣಿ ನಾಗ ಮುರಿಗೆ ಬಂದಿ
ಸಾಲು ತಾಯಿತ ಕಟ್ಟಿರೆ
ನೀಲ ಮಾಣಿಕ ವಜ್ರ ಉಂಗುರದ ಬೆರಳು ಸು
ಫಾಲದಲಿಯಿಟ್ಟ ತಿಲಕಾ
ಲಾಲಿಸುವ ಬಾಲಕರೂಪದಿಂದಲಿ ಪ್ರಾತಃ
ಕಾಲದಿ ಮೆರೆವ ಕೃಷ್ಣನ ಇಂದು ೧

ಮುಂಗೈ ಮುರಾರಿ ಪವಳದ ಬುಲಿಗೆಜ್ಜೆ
ಬಂಗಾರ ಕೊರಳಲ್ಲಿ ಹಾ
ರಂಗಳನು ಶೋಭಿಸುವ ಮಾಗಾಯಿ ಕರ್ಣದಲಿ
ಮಂಗಳ ಉರ ಕೌಸ್ತುಭ
ಕಂಗೊಳಿಪ ಎಣೆನೂಲು ಹುಲಿಯುಗುರು ತಾಳಿಸರ
ಹಿಂಗದಲೆ ಪಚ್ಚೆ ಪದಕಾ
ಶೃಂಗಾರದರಳೆಲೆ ಶಿರದಿ ಜಾವಳ ಜಡೆ
ತುಂಗಭೂಷಣ ಶಾಂತನ ಇಂದು ೨

ಕಣ್ಣಿಗ್ಹಚ್ಚಿದ ಕಪ್ಪು ಮಕರ ಕಡಗೋಲ
ನೇಣನ್ನೆ ಕರದಲಿ ಪಿಡಿದು
ಕೆನ್ನೆ ವದನ ಕಂಠ ಉದರ ಉರ ಪಾಣಿಗಳು
ಬೆಣ್ಣೆ ಮೊಸರಿಲಿ ತೋದಿರೆ
ಚನ್ನನಾಸಾ ಮಣಿತೂಗೆ ಅದರ ಭಾಗ್ಯ
ಬಣ್ಣಿಪಲರಿದು ತಿಳಿದು
ಚಿನ್ಮಯ ವಿಜಯವಿಠ್ಠಲ ವಿಶ್ವರೂಪ ಪಾ
ವನ್ನ ಉಡುಪಿಯ ಕೃಷ್ಣನ ಇಂದು ೩

೧೮೨

ನೋಡಿದೆನು ಯಾದವ ಕೃಷ್ಣನ ।
ಪಾಡಿದೆನೊ ಮನದಣಿಯ ವರಗಳ ।
ಬೇಡಿದಾಕ್ಷಣ ಕೊಡುವ ಜಗತ್ರಯ ।
ವಾಡಿಸುವ ವಾಗೀಶ ಜನಕನ ಪ

ವೇದ ಭೂಧರ ಮೇದಿನಿ ಪ್ರ ।
ಹ್ಲಾದ ಸುರಪನ ಕಾದ ವಂಶವ ।
ಛೇದ ಸಾಗರ । ಹಾದಿ ಬಿಗಿದ ಗೋಯಿದ ಬತ್ತಲೆ ।
ಯಾದ ತುರಗವ । ಬೀದಿ ವದಿಸಿದನೀತ ಹಯಮೊಗ ।

ಬಾದರಾಯಣ ದತ್ತ ವೈಕುಂಠ ।
ಬೋಧ ಮೂರುತಿ ಕಪಿಲ ನಾನಾ ವಿ ।
ನೋದ ರೂಪದ ಆದಿ ದೈವವ ೧

ಜನನಿಗಾಟವ ತೋರಿ ಕಡಗೋ ।
ಲನು ನೇಣರು ಕರದಲಿ ಪಿಡಿದು । ರು
ಕ್ಮಿಣಿಯ ಕೈಯಿಂದ ಪೂಜೆಗೊಂಡರ್ಜು ।
ನನಿಂದಲಿ ಗೋಪಿ ಚಂ ।
ದನದೊಳಡಗಿ ಅಲ್ಲಿಂದ ಆನಂದ ।
ಮುನಿಗೊಲಿದು ಬಲು ವೇಗ ಪಡುವಣ ।
ವನಧಿ ತೀರದಲಿಪ್ಪನಂತಾಸನ ಬಳಿಯ ನಿಂದಿದ್ದ ಚಲುವ ೨

ಸುತ್ತ ಯೋಜನ ಕ್ಷೇತ್ರವಿದರೊಳು ।
ಉತ್ತಮ ವಿಮಾನ ವೇದ ಪ ।
ರ್ವತಗಳು ಅಲ್ಲಲ್ಲಿ ಸರೋವರ ।
ಕತ್ತಲಿಗಭಿಮಾನಿನಿ ದುರ್ಗಾ ।
ಚಿತ್ತಕೊಪ್ಪುವ ಸ್ವರ್ಣ ನದಿಯ ಮಾರುತ
ಸೋಕಲು ದುರಿತ ಪರಿಹರ ।
ಸೋತ್ತಮರಿಗಿದು ಸಿದ್ಧ ಸರ್ವದ ।
ತತ್ತಳಿಪ ಪರತತ್ವ ಹರಿಯ ೩

ತಂತ್ರ ಸಾರೋಕ್ತದಲಿ ಪೂಜೆ ನಿ ।
ರಂತರದಿ ಕೈಗೊಂಬ ಬಲು ಗುಣ ।
ವಂತ ನೀತನ ಹೊಳವು ಪೊಗಳಿದ ।
ರಂತ ಗಾಣವು ಶ್ರುತಿ ಪುರಾಣಗ ।
ಳೆಂತು ಪೇಳಲಿ ಮೆರೆವ ವೈಭವ ।
ಸಂತರಿಗೆ ಅತಿ ಪ್ರಿಯನಾಗಿಪ್ಪ ।
ನಂತ ಕಾಲಕೆ ದೋಷ ದೂರ ನಿಶ್ಚಿಂತ
ನಿತ್ಯ ಸ್ವಾತಂತ್ರ ಪುರುಷನ ೪

ಮಕರ ತಿಂಗಳು ಮೊದಲು ಪಕ್ಷದ ।
ಲಕುಮಿರಮಣನ ದಿವಸದಲ್ಲೀಗ ।
ಭಕುತಿಯಿಂದಲಿ ಬಂದು ವಂದಿಸಿ ।
ಅಕುಟಿಲರ ವೊಡಗೊಡಿ । ನಿಂದು ಗೋ ।
ಳಕವ ಚಿಂತಿಸಿ ಸ್ನಾನ ಒಂದೆ ।
ಸುಖ ತೀರ್ಥ ಸರೋವರದಲಿ ಮಾಡೆ ।
ಸಕಲ ಮನೋಭೀಷ್ಟ ತಾನು ಪಾಲಿಸಿ ।
ಮುಕುತರೊಳು ಪೊಂದಿಸುವ ದಾತನ ೫

ಶುಕ್ರವಾರದ ಪೂಜೆ ನೋಡಲು ।
ವಕ್ರಗತಿಗಳು ಮುಟ್ಟಲಂಜೊವು ।
ಚಕ್ರವರ್ತಿ ತಾನಾಗಿ । ಸಕಲ ಪರಾಕ್ರಮದಲಿ ಚರಿಸಿ ಜಗದೊಳು ।
ಶುಕ್ರ ದೇವಸ್ಥಾನದೊಳು ಕಾ ।
ಲಕ್ರಮಣ ಮಾಡೆ । ಗೋತ್ರದೊಡನೆ ಪೂ
ರ್ಣ ಕ್ರೀಡೆಯಾಡಿಸುತ ಸಲಹುವ ।
ಚಕ್ರಧರ ಅಕ್ರೂರ ವರದನ ೬

ಕಣಿಸಿ ಉಡಿಸುವ ಕುಣಿಸಿ ನೋಡುವ ।
ಕನಸಿನೊಳಗಾವಾಗ ತನ್ನನು ।
ಮನಸಿನಲಿ ಕ್ಷಣ ಬಿಡದೆ ಗುಣಗಳ ।
ಎಣಿಸಿ ಮೈ ಮರೆದಡಿಗಡಿಗೆ ಈ ।
ತನುವೆ ನಿನ್ನಾಧೀನವೆಂದಾ ।
ಜನರಿಗಪವಾದ ಬರಲೀಸನು ।
ಫಣಿಫಣಾದಲಿ ನಾಟ್ಯಮಾಡಿದ ।
ದನುಜದಲ್ಲಣ ವಿಜಯವಿಠ್ಠಲನ್ನ ೭

೧೮೩

ಪೋತರಾಜನಲ್ಲವೋ ನಮ್ಮ ರಂಗ ಪೋತರಾಜನಲ್ಲವೋ
ಭೂತಳದೊಳಜಾತನಾಗಿ ಮೆರೆವ ಪ

ಏಕಾರ್ಣವದೊಳು ಎಲ್ಲರ ವೊಡಲೊಳು
ಸಾಕಿಕೊಳ್ಳುತ ಮೊಂದಲಿಟ್ಟುಕೊಂಡು
ಲೋಕನಾಯಕ ಹರಿವಟದೆಲಿಯ ಮೇಲೆ
ಮಾಕಾಂತಿಯ ಕೂಡ ಮಲಗಿದ ಗುಣನಿಧಿ ೧

ಜಿನಮತದಲಿ ಪುಟ್ಟಿ ದಾನವರು ಸ
ಜ್ಜನಕರ್ಮ ಮಾಡುತಲಿರೆ ವೇಗಾ
ಅನಿಮಿಷರಾಡಿದ ಮಾತಿಗೆ ದೈತ್ಯನ
ಮನವಂಚಿಸಿ ಉಪದೇಶ ಮಾಡಿದ ಹರಿ ೨

ನಂದ ವ್ರಜದಲ್ಲಿ ಪೂತಿನಿ ಶಕಟನ್ನ
ಕೊಂದು ಗಜ ಮಲ್ಲರ ಸವೆದು
ಅಂದವಾಗಿ ಮೆರೆದ ವಿಜಯವಿಠ್ಠಲರೇಯ
ಅಂದು ದೇವಕಿ ಬಾಲಕನಾಗಿ ತೋರಿದಾ ೩

೧೮೪

ಬಂದದೆ ಎನಗೆ ಬರಿದೆ ದೂರು
ಬಂದೊಂದು ಅವಗುಣದವನೆಂಬೊ ಮಾತು ಪ

ಕಾಮಕ್ರೋಧಂಗಳು ಹೆಚ್ಚಿಸಿ ಮನದೊಳು
ತಾಮಸ ಬುದ್ಧಿ ವಿಶೇಷವಾಗಿ
ಕಾಮುಕವಾಗಿ ನಡವಳಿ ನಡಸಿದ ಈ
ಮನದ ಅಧಿಕಾರಿ ಶ್ರೀಕೃಷ್ಣನೊ ನಾನೊ ೧

ಅನ್ಯಾಯ ಅನ್ಯಾಯ ಅಸಡ್ಡಾಳ ಅಪದ್ಧ
ನನ್ನ ನಿನ್ನದು ಎಂಬೊ ಬಡದಾಟವು

ತನ್ನ ಸ್ಮರಣೆ ತಪ್ಪಿ ವಿಷಯಕ್ಕೆ ಎರಗಿಸಿ
ಮುನ್ನ ಮನದ ದಾತಾ ಶ್ರೀಕೃಷ್ಣನೊ ನಾನೊ ೨

ಮನೆ ಮನೆಗಳ ಪೊಕ್ಕು ಮಕ್ಕಳಾಟಿಕೆಯಿಂದ
ವನುರುತರ ರೂಪಿಗೆ ಸೋತು ಆತು
ಕನಿಕರಿಸಿ ಕ್ರಮಗೆಟ್ಟು ತಿರುಗಿಸುವ
ತನವು ಮಾಡಿದಾತಾ ಕೃಷ್ಣನೊ ನಾನೊ ೩

ನೀತಿ ನಿರ್ಣಯ ಮರೆದು ಪಾತಕದೊಳು ಬಿದ್ದು
ಪ್ರೀತಿಯಲಿ ಅತಿಥಿಗಳ ವಂದಿಸದೆ
ಯಾತಕ್ಕೆ ಬಾರದಾ ಚರಿತೆ ನಡೆವಂಥ
ಚೇತನ ಕಲ್ಪಿಸಿದ ಕೃಷ್ಣನೊ ನಾನೊ ೪

ಆವಾವ ದುಷ್ಕರ್ಮಗಳ ಮಾಡಿ ಉತ್ತಮ
ದೇವ ಬ್ರಾಹ್ಮಣರ ಪೂಜಿಸಲಿಲ್ಲವು
ಶ್ರೀ ವಿಜಯವಿಠ್ಠಲ ವೆಂಕಟಗಲ್ಲದ
ಜೀವ ಪುಟ್ಟಿಸಿದಾತ ಕೃಷ್ಣನೋ ನಾನೊ ೫

೧೮೫

ಬಂದು ನಿಲ್ಲೋ ರಮಾಪತೆ ಬಂದು ನಿಲ್ಲೋ ॥
ಬಂದು ನಿಲ್ಲೊ ನಿನಗೊಂದಿಸುವೆ ಗೋ ।
ವಿಂದ ಗೋವಳ ರಾಯ ಸಂದೇಹ ಮಾಡದೆ ಪ

ಸದೋಷಿಗ ನಾನು ಸದಾ ನಿರ್ಮಲ ನೀನು ॥
ಪಾದೋಪಾದಿಗೆ ಬೇಡಿಸುವದುಚಿತವಲ್ಲ ೧

ಮನದೊಳು ಪೊಳದು ಚಿಂತನೆ ನೆಲೆಯಾಗಿ ॥
ಘನಮಹಿಮನೆ ಮಧ್ವಮುನಿ ಮನಮಂದಿರ ೨

ಕಡಗೋಲ ನೇಣ ಪಿಡಿದ ಪರಮಾನಂತ ॥
ಉಡುಪಿನ ಶ್ರೀಕೃಷ್ಣ ವಿಜಯವಿಠ್ಠಲರೇಯಾ ೩

೧೮೬

ಬಡನಡುವು ಬಾಲೆಯರ ಕೂಡಿ । ಪಾ ।
ಲ್ಗಡಲೋಡಿಯನೊಡನೊಡನೆ ।
ಬಿಡದೆ ಆಡಿದರೊ ವಸಂತ ಪ

ಪಾಲ್ಗೆನೆಗಧಿಕ ಮೃದುವಸನಮಂ ಉಟ್ಟು ನು ।
ಣ್ಗೂದಲು ತಿದ್ದಿ ಪಲಪು ಬೈತಲೆ ಸೊಗಸು ।
ಪಾಲ್ಗೊನಿಗೆ ಬಂದಿರಲು । ತುಂಬಿ ಕುಂಕುಮ ಮಿಗೆ ।
ಬಲ್ಕಸ್ತುರಿಯ ತಿಲಕ । ಅರೆರೆ ।
ಕಾಳ್ಗತ್ತಲೆ ಮೀರಿ ತೋರುತಿರೆ ತಿರ್ತಿತಿರಗಿ ।
ವಾಲ್ಗಣ್ಣು ನೋಟ ವೈಯಾರ ಸೋಲ್ದುರುಬು ವಿ ।
ಶಾಲ್ಗೊಂಚಲು ಮುತ್ತುಸುತ್ತು ಸೂಸುತಲಿರೆ
ಪೇಳ್ಗಾಣೆ ಪೆಂಗಳು ಶೃಂಗರಿಸುವ ಮದವೊ ೧

ಸಣ್ಗೊಗ್ಗೆ ಜಗದ ವಿಚಿತ್ರ ಕಂಚುಕವು ಮೋ ।
ಹನ್ಮಾಲೆ ಪದಕ ನ್ಯಾವಳ ಸರಿಗೆಸರ ಮುತ್ತು ।
ಪೊನ್ಮಾಣಿಕದ ವಾಲೆ ಪೊಂಪುಷ್ಪ ಬುಗುಡಿ ಥೋ ।
ರನ್ಮುತ್ತು ನಾಸಾಮಣಿ । ಅರರೆ ।
ಮನ್ಮನೋಹರವಾದ ಕಡಕ ಕಂಕಣ ಮುದ್ರೆ ।
ಸನ್ಮೋಹನಾಂಗಿಯರು ಸರ್ವಾಭರಣವಿಟ್ಟು ।
ಮನ್ಮಥನ ಹಿಡಿದೇಜಿ ಕುಣಿವಂತೆ ಮುಂದೊರಿದು ।
ಕಣ್ಣಂಚಿನಿಂದ ಜಗವೆಲ್ಲ ಬೆಳಗುತಲಿ ೨

ಕರ್ಪೂರದ ವೀಳ್ಯೆಯವ ಮೆಲುತ ನಾನಾ ಬಗೆ ।
ವರ್ಪೂಣವು ಮೃಗನಾಭಿ ಅಗರು ಶಿರಿಗಂಧ ।
ಸಾರ್ಪರಿಮಳ ಸಕಲ ದ್ರವ್ಯದಿಂದೋಕುಳಿಯ ।
ಮಾರ್ಪೆಸರು ಬಾರದಂತೆ । ಅರೆರೆ ।
ಕರ್ಪಾಣಿಯೊಳಗೆ ದ್ವೀಪಾಂತರದ ತರ ನಿಲುವ ।

ದರ್ಪಣವ ಪಿಡಿದು ಸರ್ವಾಂಗ ನೋಡಿಕೊಳುತ ।
ದರ್ಪ ತಗ್ಗಿಸದಲೆ । ಪೊನ್ನುಡೆಗಳ ತುಡುಕಿ ಕಂ ।
ದರ್ಪನಪ್ಪನ ಮೇಲೆ ಗುಪ್ಪಿರರು ಮುದದೀ ೩

ಮೇಲ್ಮೇಲು ಸೊಗಸು ಚನ್ನಿಗರಾಯನಿಲ್ಲ ನಿಲೂ
ನೀಲ್ಮೇಘ ವರ್ಣಾನೆ । ಕಾಲ್ದೆಗೆದು ನಮ್ಮಮ್ಮ ।
ತೋಳ್ಮದವ ತೀರಿಸದೆ ಪೋಗದಿರು ಭಡಭಡಾ ।
ಕಾಲ್ಮೇಲೆ ಕರವ ತೆಕ್ಕೊ । ಅರೆರೆ ।
ತಾಳ್ಮದತಿಗತಿಯಂತೆ ಹೆಜ್ಜೆಯ ನಿಡುತ ।
ಪಾಲ್ಮೊಸರು ಕದ್ದ ಬಗೆ ಎಲ್ಲ ಪೊಸತೆನುತ ಸತಿ ।
ಜಾಲ್ಮೊಗದು ವಾರಿಧಿಯ ಥೆರೆಯಂತೆ ಮೂದಲಿಸಿ ।
ಆಳ್ಮಾತಿಲಿಂದ ಹೈ ಎನುತ ಚಲ್ಲಿದರೂ ೪

ಪೆಣ್ಗಳಿರಾ ನಿಮಗೇಕೆ ಪ್ರಬಲತನವೆಂದೆನುತ ।
ಅಣ್ಗದಾ ಗೋವಳರ ನಡುವೆ ವರ್ಪ್ಪಿರ್ದಸು ।
ವಣ್ಮಾತ್ರ ಪರಮಾತ್ಮನೀಕ್ಷಿಸಿದ ಅವರವರ ।
ಕಣ್ಗೊರಳ ಕುಚ ತೊಡೆಗಳ । ಅರೆರೆ ।
ಬನ್ಗಾಡಿವ ಭಗವಂತ ಹೃತ್ತಾಪ ಹರಿಸುವ ।
ಚಿನ್ಗೋಲಿಯಲಿ ಸಿರಿ । ಸರ್ರನೆ ಓಕಳಿ ಚಲ್ಲೆ ।
ಸಣ್ಗೊಲ್ಲತಿಯರು ಬೆರಗಾಗಿ ಮರಳೆ ಹರಿಯ ।
ಬೆಣ್ಗಳ್ಳನೆಂದು ಮುತ್ತಿದರು ಹಾಸ್ಯದಲಿ ೬

ತೋರ್ಕೈಯ ಬಚ್ಚಿಡದೆ ಪಳ್ಳಿಗನೆ ಠಕ್ಕಿಸದೆ ।
ಮಾರ್ಕರೆದುಕೋ ನಿನ್ನ ಗೆಳೆಯರನ ಒಂದಾಗಿ ।
ಸೂರ್ಕುದೇಗಂತೆ ಸರ್ವೋದ್ಧಾರಗರದ ವೈ ।
ಜೀರ್ಕೋಳಲಿ ತೆರವಿಲ್ಲದೆ । ಅರೆರೆ ।
ಅರ್ಕನರ್ಕಕೆ ವಾರಿ ಇಂಗಿ ಪೋಗುವಂತೆ ।
ನರ್ಕಾಂತಕನ ಕಾಯದೊಳಗೆ ಓಕುಳಿಯಡಗೆ ।
ಅರ್ಕಾದ್ರಿಯಂತೆ ಶಿರಿ ಕೃಷ್ಣರಾಜಿಸುತಿರೆ ।
ತರ್ಕೈಪ ಭರದಿಂದ ನಾರಿಯರು ಇರಲು ೭

ಹಸ್ತ ಲಾಘವ ನೋಡಿ ತಲೆದೂಗಿ ನಕ್ಕು ಸ ।
ಮಸ್ತ ನಾರಿಯರಿಟ್ಟು ಉಟ್ಟ ಮಂಗಳವಸನ ।
ವಸ್ತುಗಳು ಜಿಗಳುವಂತೆ ಓಕುಳಿಯಿಂದ ।
ವಿಸ್ತಾರವಾಗಿ ಉಗ್ಗೆ । ಅರೆರೆ ।
ಕಸ್ತೂರಿಮೃಗದಂತೆ ಸುಳಿಸುಳಿಯ ನಿಂದಿರ್ದ।
ಹಸ್ತಿಗಮನಿಯರೊಡನೆ ಕ್ರೀಡೆಯನು ಪರಾತ್ಪರ ।
ವಸ್ತು ಲಕುಮಿಯ ರಮಣ ಆಡುತಿರೆ ನಾಲ್ಕೈದು ।
ಮಸ್ತಕಾದ್ಯರು ವಿಸ್ತರಿಸಲರಿದೆನಲು ೮

ಸುಕ್ಕದೆ ಕುಚಗುಳುಬ್ಬಿ ಕಕ್ಕಸವಾಗೆ ಹೆಜ್ಜೆ ।
ಇಕ್ಕಲಾರದೆ ವಿರಹತಾಪದಿಂದೀಕ್ಷಿಸುತ ।
ವಖ್ಖಣಿಸುವ ಮಾತು ಹಿಂದಾಗುತಿರೆ ಕಲೆಗ ।
ಳುಕ್ಕೇರಿ ಬೆವರುತಿರಲು । ಅರೆರೆ ।
ಅಕ್ಕಕ್ಕೊ ಎಂದು ಅಕ್ಕೋಜಗೆಗೊಳ್ಳುತ್ತ ತಾ ।
ರಕ್ಕಿಯಂತೆ ಕೃಷ್ಣ ಸುತ್ತ ವಲ್ದರು ।
ಸಕ್ಕರೆದುಟಿ ಚಲುವ ಉಡುಪನಂತೆ ವಪ್ಪೆ ।
ದಕ್ಕಿವನಂತೆ ಸಂತರಿಸುತಲಿ ಇಂದೂ ೯

ಬೆರ್ದೋಕಳಿಯನಾಡಿ ಸರಿ ಮಿಗಿಲು ಎನಿಸಿ ಕೆಲ ।
ಸಾರ್ದಿರ್ದ ನಾರಿಯರ ಶಿರವ ತಡವರಿಸಿ ಶತ ।
ಸಾರ್ದವೆಲೆ ಉಳ್ಳ ಉಡುಗೊರೆನಿತ್ತು ಮನ್ನಿಸಿ ।
ಮೀರ್ದಾಭರಣವ ತೊಡಿಸಿ । ಅರೆರೆ ।
ಸಾರ್ದೆಗೆದು ತರ್ಕೈಸಿ ಪ್ರೀತಿಯಿಂ ಬಿಡಿಸಿ ಮುರ
ಮರ್ದನ ವಿಜಯವಿಠ್ಠಲ ಮೆರೆದ ಗೋಕುಲ ದೊರೆ ।
ಕಾರ್ದೊರಿಯ ತೀರದಲಿ । ಮನುಜಾಕೃತಿ ಲೀಲ ।
ನಿರ್ದೋಷ ಸುಖಪೂರ್ಣ ಸುಜನ ಜನಸಂಗಾ ೧೦

೧೮೭

ಬಣ್ಣಿಸಲಾರೆ ನಿಂದು ಈ ಮೂರುತಿಯ ಬಣ್ಣಿಸಲಾರೆ ನಿಂದು
ಕನ್ಯಾರೂಪವ ತಾಳಿದ ಚನ್ನಿಗ ಕೃಷ್ಣರಾಯನಾ ಪ

ದಾನವರ ಮರಳು ಮಾಡಿ ಮಾಣದೆ ಸುಧೆಯನೆರೆದು
ಆ ನಿರ್ಜರರ ಪಾಲಿಸಿದ ಶ್ರೀ ನಾರಾಯಣಿ ವೇಷವಾ ೧

ಆರಾರು ಸಾವಿರ ಸಕಲ ಶರೀರದ ಎಡಕೆ ಇಪ್ಪ
ಸಾರಸುಂದರವಾಗಿದ್ದ ನಾರಿ ರೂಪಗಳು ಇದೊ ೨

ಭೂತಳದೊಳಗೆ ಜನಕೆ ಮಾತೆಯಾಗಿ ಕಾವುತಿಪ್ಪ
ಜಾತರಹಿತ ವಿಜಯವಿಠ್ಠಲ ಶ್ರೀ ತರಣಿಯಾಳಿದ ಪೆಣ್ಣಿನ ೩

೧೮೮

ಬಿಡು ಬಿಡು ಇನ್ನು ಸೋಗಾಚಾರ ।
ಒಡಿಯ ಬಲ್ಲನು ನಾನು ನಿನ್ನ ವಿಚಾರ ಪ

ತುಡಗತನ ಕಲಿತು ನೆರೆಹೊರೆಯವರ ಮನೆಯಲ್ಲಿ ।
ಗಡಿಗೆ ತುಪ್ಪಾ ಬೆಣ್ಣೆ ಮೊಸರು । ಹಾಲು ।
ಕುಡಿದು ಛೀ ಹಳಿ ಕದ್ದ ಕಳ್ಳನೆನಿಸಿಕೊಂಡ ।
ಪಡಚುತನವಲ್ಲದೆ ಭಾರಕನು ನೀನಲ್ಲ ೧

ಸೀರಯನು ಕದ್ದಂದು ಕಡವಿನ ಮರವನೇರಿ ।
ಊರ ನಾರಿಯರ ಮಾನಕ್ಕೆ ಸೋತು ॥
ಜಾರತನದವನಾಗಿ ತಿರಗಿ ಜಗದಾ ಭಂಡ ।
ಪೋರರಿಗೆ ಪೋರನಲ್ಲದೆ ಹಿರಿಯನಲ್ಲ ೨

ಮುನಿಗಳೆಜ್ಞದಲ್ಲಿ ತಿರಿತಂದು ಗೊಲ್ಲತೆರ ।
ತನುಜರ ಸಂಗಡಲಿದ್ದು ಎಂಜಲುಂಡು ।

ಮನುಜದೇಹವ ತೆತ್ತು ಬಿನಗು ಲೀಲಾಕೃತಿ ।
ದನಗಾವಿ ಎಲ್ಲದೆ ದೊರೆ ಮಗನು ನೀನಲ್ಲ ೩

ಯಾತಕ್ಕೆ ಬಾರದ ಕುನಪೆಣ್ಣಿಗೆ ಮೆಚ್ಚಿ ।
ಮಾತುಳನ ಕೊಂದು ಮುತ್ತೈಯಗೊಲಿದು ।
ಭೀತಿಯಲಿ ಪರರಾಯನ ಮಗಳ ಕೊಂಡು ಬಂದ ।
ಯಾತರ ಪೌರುಷದವನು ಲೋಕದೊಳಗೆಲ್ಲ ೪

ತೊತ್ತಿನ ಮಗನಲ್ಲಿ ವುಂಡು ಬಿಗಿಸಿಕೊಂಡು ।
ಮಿತ್ರಭೇದವನಿಕ್ಕಿ ಬಂಧುಗಳಿಗೆ ।
ತೆತ್ತಿಗನು ನೀನಾಗಿ ವಾಜಿಗಳ ಪಿಡಿದು ।
ಹತ್ಯವ ಮಾಡಿಸಿದೆ ಉತ್ತಮನು ನೀನಲ್ಲ ೫

ಅಣ್ಣ ತಮ್ಮಂದಿರನು ಅಗಲಿಸಿ ವೈರದಲಿ ।
ನುಣ್ಣಗೆ ಒಬ್ಬರೊಬ್ಬರ ಕೊಲ್ಲಿಸಿ ।
ಇನ್ನೇನು ಉಸರುವೆನು ಕಟ್ಟಕಡಿಗೆ ಎಲ್ಲ ।
ನಿನ್ನ ಕುಲವನು ಕೊಂದೆ ಇದು ಪುಶಿಯಲ್ಲ ೬

ತಿಳಿಯಲಾರರು ನಿನ್ನ ಠಕ್ಕು ಠವಳಿಯ ಮಾಯ ।
ಜಲಜ ಸಂಭವ ಶಿವ ಇಂದ್ರಾದ್ಯರು ।
ಸುಲಭ ದೇವರದೇವ ವಿಜಯವಿಠ್ಠಲರೇಯ ।
ವೊಲಿದ ದಾಸರಿಗೆ ಸಂತಾನ ಕುಲದೀಪ ೭

೧೮೯

ಭಕ್ತಜನ ಪಾಲಕ – ಭಕ್ತಿಸುಖದಾಯಕ
ಮುಕ್ತೀಶ ದೀನಬಂಧು ಕೃಷ್ಣ ಪ

ಯುಕ್ತಿಯಲಿ ನಿನ್ನಂಥ ದೇವರನು ನಾಕಾಣೆ
ಸತ್ಯವತಿ ಸುತನೆ ಕಾಯೋ ಕೃಷ್ಣ ಅ.ಪ.

ಆನಂದತೀರ್ಥ ಮುನಿಯ ಧ್ಯಾನಿಪರ ಸಂಗ ।
ಆನಂದದಲಿ ನಿಲಿಸೊ ಕೃಷ್ಣ ॥
ದೀನಜನ ಮಂದಾರ ನೀನೆಂದು ನಂಬಿದೆನೊ ।
ಸಾನುರಾಗದಲಿ ಕಾಯೋ ಕೃಷ್ಣ ೧

ಕೆಟ್ಟ ಜನರ ಸಂಗ ಇಷ್ಟು ದಿನವೂ ಮಾಡಿ ।
ಭ್ರಷ್ಟನಾಗಿ ಪೋದೆನೋ ಕೃಷ್ಣ ॥
ಬೆಟ್ಟದೊಡೆಯನೆ ನಿನ್ನ ಮುಟ್ಟಿ ಭಜಿಸುವ ಭಾಗ್ಯ ।
ಇಷ್ಟಗಳ ಎನಗೆ ಕೊಡಿಸೋ ಕೃಷ್ಣ ೨

ಅಜಜನಕ ಗಜವರದ ಭುಜಗಶಯನನೆ ನಿನ್ನ ।
ಭಜಿಪ ಭಾಗ್ಯವನೆ ಕೊಡಿಸೊ ಕೃಷ್ಣ ॥
ನಿಜವಾಗಿ ನಿನ್ಹೊರುತು ಸಲಹುವರ ನಾ ಕಾಣೆ ।
ವಿಜಯವಿಠ್ಠಲರೇಯ ಕೃಷ್ಣ ೩

೧೯೦

ಮಾತನಾಡೈ ಮನ್ನಾರಿ ಕೃಷ್ಣ ಮಾತನಾಡೈ ಪ

ದಾತನು ನೀನೆಂದು ಬಯಸಿ ಬಂದೆನು ಮಾತನಾಡೈ ಅ.ಪ.

ಊದುವ ಸಿರಿ ಪೊಂಗೊಳಲೊ ಜಗ-।
ದಾಧಾರದ ನಿಜ ಹೊಳೆಯೋ ॥
ಪಾದದ ಪೊಂಗೆಜ್ಜೆ ಥಳಿಲೊ ಸರ್ವ ।
ವೇದಗಳರಸುವ ಕಲ್ಪಕ ಸೆಳಲೊ ೧

ಕಸ್ತೂರಿ ತಿಲಕದ ಮದವೊ ಮ-
ಕುಟ ಮಸ್ತಕದಿ ಝುಗಝುಗವೊ ॥
ವಿಸ್ತರದಿ ಪೊತ್ತ ಜಗವೊ ಪರ- ।
ವಸ್ತುವು ನಂದ ಯಶೋದೆಯ ಮಗುವೊ ೨

ನವನೀತವ ಪಿಡಿದ ಕರವೊ ನವ-।
ನವ ಮೋಹನ ಶೃಂಗಾರವೊ ॥
ಅವತರಿಸಿದ ಸುರತರುವೊ ಶತ-
ರವಿಯಂದದಿ ಉಂಗುರವಿಟ್ಟ ಭರವೊ ೩

ಆನಂದ ಜ್ಞಾನದ ಹೃದವೊ ಶುಭ-।
ಮಾನವರಿಗೆ ಬಲು ಮೃದುವೊ ॥
ಆನನ ಛವಿಯೊಳು ಮಿದುವೊ ಪಾಪ-।
ಕಾನನ ದಹಿಸುವ ಪಾವಕ ಪದವೊ ೪

ತ್ರಿಜಗದಧಿಕ ಪಾವನನೊ ಪಂ-।
ಕಜ ನೇತ್ರೆಯ ನಾಯಕನೊ ॥
ಅಜಭವಾದಿಗಳ ಜನಕನೊ ನಮ್ಮ ।
ವಿಜಯವಿಠ್ಠಲ ಯದುಕುಮಾರಕನೊ ೫

೧೯೧

ಮುರಾರಿಯನೆ ಕೊಂಡಾಡು ಎಲೆ ಮನ ಮುರಾರಿ ಪ

ಮಂದಿಯ ಮತಿಗೆ ಯೆಂದೆಂದು ಮರುಗದೆ ।
ಮುಂದಿನ ಗತಿಯನು ನೋಡು ೧

ಕಾಲನ ದೂತ ಕಾಲಿಗೆ ಬಿದ್ದರೆ ।
ನಾಳೆಗೆ ನಿಲ್ಲೋರೆ ನೋಡು ೨

ರಾಜೀವ ಮುಖಿಯರ ಸೋಜಿಗ ಮೆಚ್ಚಿದೆ ।
ವಿಜಯವಿಠ್ಠಲನ ಬೇಡು ೩

೧೯೨

ಮೊಸರು ತಂದಿನೊ ರಂಗಾ ಮಾರ್ಗವ ಬಿಡೊ ।
ಕಿಸರು ಹೊರಲಿ ಬೇಡ ಕೆಲಕೆ ಸಾರೋ ಪ

ಪಶುಗಾವಿ ನೀ ಎನ್ನ ಹೆಸರುಗೊಳಲಿಬೇಡ ।
ಹಸನಾದ ಮುತ್ತಿನ ಸರಗಳು ಹರಿದಾವೊ ॥
ನಿಶೆಯ ವೇಳೆಯು ಅಲ್ಲಾ ನಿನಗೆ ಬುದ್ಧಿಯು ಸಲ್ಲಾ ।
ವಶಕರವಾಗುವಳೆ ಒಲವು ಇಲ್ಲದೆ ೧

ಎದೆಯ ಮುಟ್ಟಲಿ ಬೇಡ ಎಳೆನಗೆ ನಗಲಿಬೇಡ ।
ಬದಿಬಗಲು ಪಿಡಿದು ನೋಡುವರೆ ಹೀಗೆ ॥
ಕದವ ಮುಚ್ಚಿಕೊಂಡು ಕಾಕು ಎಬ್ಬಿಸುವರೆ ।
ಸದನಕ್ಕೆ ಹೋಗಬೇಕು ಸರಸವೇಕೊ ೨

ಹಿಂದೆ ಬಂದವರು ಏನೆಂದು ಒಲಿದರೊ ಕಾಣೆ ।
ಒಂದಿಷ್ಟು ಚೆಂದವಿಲ್ಲ ಚೆಲುವಿಕೆಯಿಲ್ಲಾ ॥
ಕಂದರ್ಪಕೋಟಿ ತೇಜ ವಿಜಯವಿಠ್ಠಲ ಎನ್ನ ।
ಮಂದಿರಕೆ ಬಾರೊ ನಿನ್ನ ಮನಸು ದಣಿಸುವೆ ೩

೧೯೩

ಮೋಹಿಯಾಲಧರಾ ನಂ ।
ಮನನ ಮೋಹಿಯಲ ಮುರಲಿಧರಾ ಪ

ಗೋಕುಲ ವಾಸಿ ಗೋಪ ವಿಲಾಸಿ ।
ಜನ್ಮಾನಿ ಯಾದವರೈಸಿ ॥ ೧

ಯಮುನಾತ ತೀರಿ ಗೋಧನಚಾರಿ ।
ಖೇಲತನಾನಾ ಪರಿ ೨

ಸುಂದರಶ್ಯಾಮ ಸುಗುಣಾಭಿ ರಾಮ ।
ವಿಜಯವಿಠ್ಠಲ ನಿಜ ಪ್ರೇಮ ಮನ ಮೋಹಿಯಾಲ ೩

೧೯೪

ಯಾವದು ಸುಖವೇ ಮತ್ಯಾನಂದವೇ ಪ

ಈ ಉಡುಪಿಯ ಯಾತ್ರೆ ಮಾಡಿದ ಮನುಜಗೆ ಅ.ಪ.

ಮನದಲಪೇಕ್ಷಿಸೆ ಅವನಿಗೆ ಹದಿನಾಲ್ಕು
ಮನುಗಳು ಭೂಮಿಯನಾಳೋತನಕ
ಕನಕನ ಚಿತ್ತನಾಗಿ ಗೋಕುಲದಿಂದ ಸ
ಜ್ಜನ ಮಾರ್ಗದಲಿ ಗುಣವಂತನೆನಿಸಿಕೊಂಬ ೧

ಒಂದು ಹೆಜ್ಜೆಯನಿಟ್ಟು ಸಾಗಿ ಬರುತಲಿರೆ
ಅಂದೆ ಸುರರೊಳು ಗಣನೆ ಎನ್ನೆ
ಒಂದಕ್ಕೆ ನೂರಾರು ಯಾಗ ಮಾಡಿದ ಫಲ
ತಂದು ಕೊಡುವ ಅಜನಾದಿಕಲ್ಪ ಪರಿಯಂತ ೨

ಅರ್ಧ ಮಾರ್ಗದಿ ಬರಲು ಬಂದು ನಿಲ್ಲಲು ಅವರ
ಸಾಗರದಿ ಕೋಟಿ ಸ್ನಾನ ಮಾಡಲು
ಊರ್ಧ್ವರೇತಸ್ಥನಾಗಿರ್ದ ಫಲವಕ್ಕೆ
ಊರ್ಧ್ವಭೂಷಿತನಾದ ಬ್ರಹ್ಮಯುಗ ಪರಿಯಂತ ೩

ಸನ್ನಿಧಿಗೆ ಬಂದು ಕರವನ್ನೆ ಜೋಡಿಸಿ
ಸನ್ನುತ ಸಾಧನವನು ಮಾಡಲು

ಸನ್ನುತರ ತೆಗೆದು ಜ್ಞಾನ ಭಕುತಿ ಸಂ
ಪನ್ನವಿರಕುತಿಗೆ ಯತಿಗಾದಿ ಮುಖನಾದ ೪

ಶ್ರೀಕೃಷ್ಣ ಕೃಷ್ಣೆಂದು ಕರವ ಜೋಡಿಸಿ ನಿಂದು
ದೃಷ್ಟಿಯಿಂದಲಿ ನೋಡಿದವನೆ ಮುಕ್ತಾ
ಮುಟ್ಟಿ ಭಜಿಸುವರ ಸತ್ಪುಣ್ಯ ವಿಜಯ
ವಿಠ್ಠಲನಾತನೆ ಬಲ್ಲ ಅರುಹಲಳವಲ್ಲ ೫

೧೯೫

ರಂಗನಾಡಿದನೊ ಮನ್ನಾರಿ ಕೃಷ್ಣನಾಡಿದನೊ ।
ರಂಗನಾಡಿದ ಪೊಂಗೊಳವಿಯಲಿ
ಶೃಂಗಾರದಿಂದ ಗೋಪಾಂಗನೆಯ ಕೂಡ ।
ತುಂಗ ವಿಲಾಸ ತಾ ರಂಗ ಕೇಳಿಯಲಿ ।
ಸಂಗೀತ ಪಾಡುತ ಸಾಂಗೋಪಾಂಗದಿಂದಾ ಪ

ಹೋಳಿಯ ಜನಕೋಕುಳಿಯ ಕಲಿಸಿ ।
ಗೆಳೆಯರೊಂದಾಗೆ ಕಳೆಯೆವೇರುತ್ತ ।
ಅಳಿಯ ಗರುಳಬಲಿಯರರಸಿ ।
ಇಳಿಯಾಳಗೋಕುಳಿ ವಸಂತವಾ ।
ಉಳಿಯದಂತೆ ವೆಗ್ಗಳಿಯ ತರಿಸಿ
ಹಳೆಯ ಬೊಮ್ಮನ ಬಳಿಯವಿಡಿದು ।
ಸುಳಿಯಲೊವಸನೆ ರುಳಿಯ ಕೈಸರ ।
ಪಳಿಯ ಚಲುವ ತಿಳಿಯಗೊಡದೆ ೧

ಸಕ್ಕರೆದುಟಿ ಹೆಮ್ಮಕ್ಕಳು ಯೆಲ್ಲರು ।
ನಕ್ಕು ಕೈಯ ಹೊಯಿದ । ಕ್ಕರದಿಂದ ತಾ ।
ವರ್ಕರಾಗಿ ನಿಂದೂ ತೆರ್ಕ್ಕೊರಂಗಯೆಂದು ।
ಜಿರ್ಕೊಳವಿಲಿಂದಲಿಕ್ಕಿದರು ।

ಸೊಕ್ಕಿದಾ ನೆಡಸಿ ಹೊಕ್ಕು ಎರಗಿದಂ ।
ತೊಕ್ಕಟರಾಗಿ ದೇವಕ್ಕಿ ತನುಜನ ಸಿಕ್ಕಿಸಿಕೊಂಡರು ।
ಅಕ್ಕಟಾಬ್ಜಗಬ್ಧಿ ಉಕ್ಕಿದಂತೆ ಮನ । ಉಕ್ಕುತಲಿ ೨

ನಾರಿಯರಿಂದ ಉತ್ತರವ ಲಾಲಿಸಿ ।
ಮಾರನಯ್ಯನು ಕೆನ್ನೀರನು ತುಂಬಿ ಅ ।
ಪಾರನಾರಿ ಪರಿವಾರದವರ ಶರೀರವ ಮೇಲೆ । ವಿ ।
ಸ್ತಾರವಾಗಿ ಕಾರಿ ವಾರಿದನು ನೀರೆರದಂತಾಗೆ ।
ಆರೊಂದು ಬುದ್ಧಿಗೆ ಮೀರಿತಿದೊ ಎಂದು ।
ವಾರುಣಿಪತಿ ಪಂಕೇರುಹಾಭವ ಕಂ ॥
ದರವ ಬಾಗಿಸಿ ಸಾರಿದರು ೩

ಖಗ ಮೃಗ ಧ್ವನಿದೆಗೆದು ಪಾಡಲು ।
ನಗ ಬೆವರಿ ಪನ್ನಂಗ ನೋಡಾಗಲು ।
ಅಗಣಿತ ಮುನಿ ಚಿಗಿದು ಪಾಡಲು ।
ನಗ ಬೆವರಿ ಪನ್ನಂಗ ನೋಡಾಗಲು ।
ಅಗಣಿತ ಮುನಿ ಚಿಗಿದು ಪಾಡಲು ಪೊಗಳ ಬಗೆಯಿಂದ ।
ಗಗನ ಮಣಿ ತಾರೆಗಳು ಚಂದ್ರ ನಗುತ ತಮ್ಮ ಪಥಗಳು ನಿಲಿಸಿ ।
ಮಂಗಳಕರವ ಮುಗಿದು ಸೋಜಿಗ ಜಗದೊಳಗಿದು ಮಿಗಿಲೆನುತಲಿ ೪

ದುಂದುಭಿ ಮೊರಿಯೆ ಧಂ ಧಂ ಧಳಾ ಎಂದು ।
ವೃಂದಾರಕ ವೃಂದ ಚಂದದಿ ಪೂಮಳೆಯಂದುಗರಿಯಲು ।
ಚಂದಣಗಂದಿಯ ಒಂದಾಗಿ ನಿಂದರು ವಂದಿಸುತ ।
ಮಂದಹಾಸನಖ ದುಂದುಭಿ ಓಕಳಿಂದಲೆರಾರೈಪಾ
ಸಿಂಧು ಮೆರೆದ ನಾರಂದವರದ ವಿಜಯವಿಠ್ಠಲ ।
ಪುರಂದರದಾಸರ ಮುಂದಾಡಿದ ॥ ೫

೧೯೬

ರಜತ ಪೀಠದ ಯಾತ್ರೆ ರಜೋತಮ ಗುಣವುಳ್ಳ ।
ಪ್ರಜರಿಗೆ ದೊರಕುವದೆ ।
ತ್ರಿಜಗದೊಳಗೆ ಮುಂದೆ । ಅಜನಾಗಿ ಬಪ್ಪಗೆ ।
ಭಜನೆ ಮಾಡುವಂಥ ಸುಜನರಿಗಲ್ಲದೆ ಪ

ಮಂದಾಕಿನಿ ಮಿಕ್ಕಾದ ನದಿಗಳಲ್ಲಿಗೆ ಪೋಗೆ ।
ಮಿಂದು ನಾನಾ ಕ್ಷೇತ್ರವ ಬಂದೂ ಬಿಡದೆ ತಿರುಗಿ ವೇದ ಶಾಸ್ತ್ರಗಳು ।
ಚಂದದಿ ಓದಿಕೊಂಡು ।
ಕುಂದದೆ ವ್ರತ ಯಾಗ ಯೋಗ ಮಾಡಲೇನು ।
ಬಿಂದು ಮಾತ್ರ ಫಲವಿಲ್ಲ ।
ವೃಂದಾರಕ ಸುರರು ಒಂದಾಗಿ ಒಂದಿನ ।
ಅಂದು ಪೀಯೂಷವ ಕರೆಯೆ ಉಂಡವರಾರು ೧

ಕ್ರೀಡೆಯಲಿ ತ್ರಿಪುಂಡ್ರವ ಧರಿಸಿದ ಮಾನವ ।
ನಾಡೊಳು ಉಡುಪಿ ಯಾತ್ರೆ ಮಾಡಿದರವಗೇನು ಲೇಶ ಸತ್ಕರ್ಮವು ।
ಕೂಡದು ಕೂಡದಯ್ಯಾ ।
ಬಿಡಾಲನಂದದಿ ತಿರುಗಿದಂತಾಗುವದು ।
ಕೇಡಿಗೆ ಗುರಿಯಾಗುವಾ ।
ಜೋಡು ಇಲ್ಲಿಗೆ ಬಂದು ತಿರುಗಿ ಪೋದರೆಯೇನು ।
ಆಡಲೇನದಕೆ ತಿಲಾಂಶ ಸುಖವುಂಟೆ ೨

ತಮೋ ಯೋಗ್ಯ ಉಡುಪಿನ ಯಾತ್ರೆ ಮಾಡಲು ।
ಅಮಿತ ಬಲವಂತನಾಗಿ
ಯಮಗ ಸದೃಶನಾದ ಯವನನಲ್ಲಿ
ಪುಟ್ಟಿ ಆಕ್ರಮಿಸಿ ಪುಣ್ಯವನೆ ಕೆಡಿಸಿ
ತಮಕೆ ಸಾಧನವಾದ ಸುಖಬಟ್ಟು ಬಹುಕಾಲ ।
ರಮಣಿ ಮಕ್ಕಳು ಸಹಿತದಿ ।

ಕ್ರಿಮಿ ಮೊದಲಾದ ನರಕವನುಂಡು ಅವ ನಿತ್ಯ ।
ತಮಸಿನೊಳಗೆ ವಾಸಫಲ ವ್ಯರ್ಥವಾಗದು ೩

ರಾಜಸ ಗುಣದಲ್ಲಿ ಈ ಯಾತ್ರೆ ಮಾಡಲು ।
ರಾಜಕುಮಾರನಾಗಿ ತೇಜೋಮಯಾಭರಣ ।
ಭೂಷಣವನೆ ಯಿಟ್ಟು ।
ವಾಜಿ ಗಜವಾಗಿ ಸೌಖ್ಯ
ಈ ಜಗದೊಳು ಒಟ್ಟು ಪೋಗೋದಲ್ಲದೆ ವಿ ।
ರಾಜಿಸುವದು ಬಲ್ಲದೇ ।
ರಾಜಮಂದಿರಕೆ ನವರತ್ನ ತೆತ್ತಿಸಿದಂತೆ ।
ಈ ಜನದ ಸುಖದ ಫಲ ವ್ಯರ್ಥವಾಗುವದು ೪

ಮುಕ್ತಿಯೋಗ್ಯನು ಬಂದು ಯಾತ್ರೆಯ ಮಾಡಲು ।
ಮುಕ್ತಿ ಉತ್ತಮ ಕುಲದಲ್ಲಿ ।
ವ್ಯಕ್ತನಾಗೀ । ದಿವ್ಯ ಮನದಲ್ಲಿ ವಿರುಕುತಿ ।
ಭಕ್ತಿಜ್ಞಾನದಲಿ ಬಾಳಿ ।
ಶಕ್ತನೆಂದೆನೆ ಸತತ ಶ್ರೀಮದಾರ್ಯರ । ಭಕ್ತಿಲಿ ಲೋಲಾಡುತ ।
ಭಕ್ತವತ್ಸಲ ವಿಜಯವಿಠ್ಠಲ ಕೃಷ್ಣಸಾರ ।
ಭೋಕ್ತನಲ್ಲಿಪ್ಪನು ಫಲ ವ್ಯರ್ಥವಾಗದು ೫

೧೯೭

ರಾಜಕುಲ ವನರಾಶಿ ರಾಜರಾಜೇಶ್ವರಾ ।
ರಾಜೀವ ನಯನ ಯದುರಾಜ ಎಲೊ ಭಾಪುರೆ ಪ

ಗರಳ ಪೇರ್ಮೊಲೆಯಿತ್ತ ಅಸುರಿಯಳ ಸಂಹರಿಸಿ ।
ಮರಳಿ ಅವಳಿಗೆ ಉತ್ತಮ ಗತಿಯನಿತ್ತೆ ।
ದುರಳ ಶಕಟಾಸುರನ ಚರಣ ದುಂಗುಟದಲ್ಲಿ ।
ತರಳಾಟದಿಂದ ಮರ್ದಿಸಿದೆ ಎಲೆ ಭಾಪುರೆ ೧

ಸುರಪ ಗರ್ವಿಸೆ ಸಪ್ತದಿನ ಮಳೆಗರಿಯೆ ವ್ರಜ ।
ಪುರವ ಪಾಲಿಸಿದೆ ಕಾಳಿಂಗನ್ಯೆದು ।
ಸಿರದಲ್ಲಿ ತುಳಿದು ರಮಣ ದ್ವೀಪಕೆ ಕಳುಹಿ ।
ಪರಿಪರಿಯ ಖಳರ ಮರ್ದಿಸಿದೆ ಎಲೊ ಭಾಪುರೆ ೨

ಕರೆಯ ಬಂದಾ ಕ್ರೂರ ಭಕ್ತನಿಗೆ ಯಮುನೆಯಲಿ ।
ಕರುಣದಿಂದಲಿ ನಿಜರೂಪ ತೋರಿ ।
ಭರದಿಂದ ಕರಿರಾಜ ಕರಿಯೆ ಬಿಲ್ಲು ಮಲ್ಲರ
ಮುರಿದು ಧರಿಗೆ ವರಿಸಿದೆ ಕಂಸನ ಎಲೆ ಭಾಪುರೆ ೩

ವನಧಿಯೊಳು ಪುರ ಬಿಗಿದು ಕಾಲಯವನನ ಸದೆದು ।
ಅನಿಲ ಸುತನಿಂದ ಮಾಗಧನ ಕೊಲ್ಲಿಸಿ ।
ವನಿತೆಯರ ಸೆರೆ ಬಿಡಿಸಿ ಸೂತತನವನೆ ವೊಹಿಸಿ ।
ಫಲ್ಗುಣಗೆ ವಿಶ್ವರೂಪವ ತೋರಿದೆ ಎಲೊ ಭಾಪುರೆ ೪

ಗುರು ಭೀಷ್ಮ ಶಲ್ಯ ಶಕುನಿ ಸುಬಲ ಭಗದತ್ತ ।
ತರಣಿಸುತ ದುಶ್ಶಾಸ ಕೌರವೇಶಾ ।
ಎರಡು ಬಲ ವ್ಯಾಜ್ಯದಲಿ ಭೂಭಾರನಿಳುಹಿ ಸಾ ।
ವಿರ ತೋಳ ಖಳನ ಭಂಗಿಸಿದೆ ಎಲೊ ಭಾಪುರೆ ೫

ದ್ವಾರಕಾಪುರದಲ್ಲಿ ನಾರದಗೆ ಸೋಜಿಗವ ।
ತೋರಿದೆ ಒಬ್ಬೊಬ್ಬ ನಾರಿಯಲಿ ।
ನಾರಿಯರ ಕೂಡ ಬಲು ಕ್ರೀಡೆಗಳನಾಡಿ ಅ ।
ವರ ಸಂತಾನವನು ಪಡದೆ ಎಲೊ ಭಾಪುರೆ ೬

ವರ ಚಂದ್ರಹಾಸ ಮಿಗಿಲಾದ ಭೂಪಾಲಕರ ।
ಕರೆಸಿ ಪಾಂಡುವರ ಯಾಗವನೆ ಮುಗಿಸಿ ।
ಹರುಷದಲಿ ಯದುಕುಲವಾಸ ಮಾಡಿದೆ ।
ಪರಮ ಪುರುಷ ವಿಜಯವಿಠ್ಠಲನೆ ಎಲೆ ಭಾಪುರೆ ೭

೧೯೮

ವಿಠ್ಠಲ ವಿಮಲಶೀಲ ಬಾಲಗೋಪಾಲ
ದಿಟ್ಟ ಮೂರುತಿ ಶ್ರೀಲೋಲ ಪ

ಅಟ್ಟುವ ಖಳರೆದೆ ಕುಟ್ಟಿ ಕೆಡಹಿ ಮತಿ
ಗೊಟ್ಟು ಸಲಹೊ ಜಗಜಟ್ಟಿ ಪಂಢರಿರಾಯ ಅಪ

ಯದುವಂಶೋದ್ಭವ ಕೇಶವ ಹೇ ಏಕಮೇವ
ಮಧುವೈರಿ ಮಹಾವೈಭವ
ಸದಮರಾನಂದ ಸ್ವಭಾವ ಮತ್ಕುಲ ದೈವ
ಹೃದಯಾಬ್ಜ ಇನ ಬಾಂಧವ
ವಿಧಿನದಿಪಿತ ನಾರದ ಮುನಿ ಸನ್ನುತ
ಕದನ ಕರ್ಕಶ ವೈರಿ ಸದಮಲಗಾತುರ
ಪದೆ ಪದೆಗೆ ಸಂಪದವಿಯ ಬಯಸುವ
ಮೃದು ಮನದೊಳು ನಿಲ್ಲು ಪದುಮಿನಿ ವಲ್ಲಭ ೧

ತುತಿಪರ ದೇವ ಪ್ರಾರ್ಥಿಪ ನಿತ್ಯ ಪ್ರಭಾವ
ಪತಿತಪಾವನ ಸುರ ಜೀವ
ಅತಿಶಯ ಲೀಲಾಮಾನವ ನರಕಂಠೀರವ
ಚ್ಯುತಿ ಪೂರಾನಾದಿ ಗುರುಗೋವ
ರತಿಪತಿಪಿತ ಶತಕ್ರತು ಸುತ ಸಾರಥಿ
ತುತಿಸುವೆ ಗತಿ ಪಥ ಹಿತವಾಗಿ ತೋರೊ ಮಾ-
ರುತ ಮತ ಶ್ರಿತಜನ ಚತುರರ ಸತತ ಸಂ -
ಗತಿ ಕೊಡು ಮುಕುತಿಗೆ ದಿತಿಸುತ ಮಥನ ೨

ಶರಣು ಶರಣು ಸರ್ವೇಶ ಇಟ್ಟಿಗೆವಾಸ
ದುರುಳರ ಸಂಗ ವಿನಾಶ

ಪರಮ ಪುರುಷ ವಿಲಾಸ ನಿರವಕಾಶ
ವರಪ್ರದ ಪೂರ್ಣಪ್ರಕಾಶ
ಮೊರೆಹೊಕ್ಕೆನೊ ನಿನ್ನ ಚರಣ ಸರಸಿಜವ
ಹರಿಯನ್ನೊಳಗಿಪ್ಪ ಮರವೆ ಕಳೆದು ನಿನ್ನ
ಸ್ಮರಣೆ ಮಾಡುವಂತೆ ಕರುಣದಿಂದಲಿ ನೋಡು
ಧೊರೆ ವಿಜಯವಿಠ್ಠಲ ಪುರಂದರಪ್ರಿಯ ೩

೧೯೯

ಶ್ರೀ ಕಮಲನೇತುರ । ಪುಣ್ಯಗಾತುರ ।
ಸಾಕಾರ ಕ್ಷಣ ಮಾತುರ । ನೀ ಕರುಣದಿಂದ ।
ವಾಕು ಲಾಲಿಸು । ಬೇಕು ವೇಗದಲಿ ।
ಗೋಕುಲಾಂಬುಧಿ ರಾಕಾಂಬುಜ ಲಾ ।
ವಕರ ತೊಲಗಿಸಿ । ಸಾಕುವುದೆನ್ನ ನಿ । ಜಕರ ವಿಡಿದೂ ಪ

ದೇವಕಿ ಗರ್ಭ ಸಂಭೂತ । ನಿತ್ಯ ಅಜಾತಾ ।
ಪಾವನ ಬಲು ಚರಿತಾ । ಕೋವಿದರರಸ ಶತ ।
ಕುಂಭ ಮಕುಟನೀತಾ ।
ಮಾವ ಮರ್ದನ ನಿರ್ಭೀತಾ ॥
ದೇವಮರರ ಕಾ । ವ ಭಕ್ತರ । ಜೀವನೆ ವರ ।
ವೀವನನುದಿನ । ಆವು ಕಾವುತ ಪೋಗಿ ।
ಗೋವಳರೊಡಗೂಡಿ । ಪಾವಿನ ಪೆಡೆ ತುಳಿ ।
ದಾ ವಿಷ ಬಿಡಿಸದೆ ॥
ಶ್ರೀ ವಲ್ಲಭ ನಿನಗಾವವನೆಣೆ ತ್ರಿ ।
ಭುವನದೊಳಗತಿ ।
ಸೇವಕ ಜನರಿಗೆ ಕೈವಲ್ಯವನು ಕೊಡುವಾ ೧

ಪೂತನಿ ಪ್ರಾಣಾಪಹಾರಾ । ಪರಮ ಸುಂದರಾ ।
ಜ್ಯೋತಿರ್ಮಯ ಶರೀರ । ಮಾತಾ ಬಂಧ
ಪರಿಹಾರಾ । ಮರಣಜರ ವಿದೂರಾ ।

ಭೂತಿ ಉಳ್ಳಿಂದ್ರ ಕುಮಾರಾ । ಸೂತ ನೀನಾಗಿ ಭೂತಳದೊಳು ।
ಪಾತಕ ಕುರು । ವ್ರಾತ ಯಮುನೆಯ ।
ಭ್ರಾತನ್ನ ನಗರಿಯ । ಯಾತನಿಗಟ್ಟಿದೆ ।
ಪೂತುರೆ ನಿನ್ನ ಮಾ । ಯಾತನಕೇನೆಂಬೆ ।
ಖ್ಯಾತಿ ಮೂರುತಿ ಬೆನ್ನಾತು ಕಾಯೊ ಪಾರಿ ।
ಜಾತವ ತಂದ । ಮಿತ ಮಹಿಮ ಜಗ ।
ತಾತಾ ಬೊಮ್ಮಾದಿ ವಿನುತಾ ೨

ಈ ಪಡವಲಾಬ್ಧಿ ವಾಸಾ । ಇಂಪಾದ
ತೋಷ ಗೋಪಾಲ ಮಾನಿಸಾ ವೇಷ ।
ಆ ಪಾರ ರತುನ ಭೂಷಾ । ನಂತಪ್ರಕಾಶಾ ।
ತಾಪಸಿಗಳ ವಿಲಾಸಾ ॥
ಕೋಪ ಮೊದಲಾದ ತಾಪತ್ರಯಗಳ ।
ನೀ ಪೋಗಾಡು ಉ ।
ಡುಪಿ ಸದನನೆ ಪಾಪರಹಿತ ಮಧ್ವಪತಿ ಕರದಿಂ ।
ದ ಪೂಜೆಗೊಂಡ ಪ್ರತಾಪನೆ ಜ್ಞಾನದ । ದೀಪ ಬೆಳಗಲಿ ।
ರೂಪವ ತೋರಿಸು ಯದುಪಾ ಎನ್ನ ಸಮೀಪಾ ೩

೨೦೦

ಗೋಪಿಕಾ ಗೀತೆ

ಶ್ರೀ ಲತಾಂಗಿರ ರಮಾಕೃಷ್ಣನು
ಬಾಲ ಲೀಲೆಯ ಜಗಕೆ ತೋರುತ ೧

ಆಡಿಪಾಡುತ ಕೂಡಿ ರಮಿಸುತ
ಗಾಡಿಗಾರನು ಅವಳ ಹೆಗಲನೇರಿಸಿ ೨

ತಾನೆ ಸುಂದರೀ ಎಂದು ಗರ್ವಿಸೆ
ದೀನನಾಥನು ಅದೃಶ್ಯನಾದನು ೩

ಅಗರು ಕಸ್ತೂರೀ ಪೂಸಿ ಹೃದಯಕೇ
ಮೊಗರು ಕುಚಗಳ ಮುಖದ ಕಮಲವು ೪

ಎತ್ತ ಪೋದನೋ ರಂಗ ಎನುತಲಿ
ಚಿತ್ತ ಭ್ರಮೆಯಲಿ ಹುಡುಕುತ್ತಿದ್ದರು ೫

ಎಲ್ಲಿ ಪೋದನೋ ಕೃಷ್ಣ ಎನುತಲಿ
ಮತ್ತೆ ಸಖಿಯರು ಹುಡುಕುತ್ತಿದ್ದರು ೬

ಸುತ್ತ ಗೋಕುಲಾದೊಳಗೆ ಸ್ತ್ರೀಯರೂ
ಮತ್ತೆ ಕೃಷ್ಣನ ಪಾದ ಕಾಣದೇ ೭

ಗಿಳಿಯು ಕೋಗಿಲೇ ಹಂಸ ಭೃಂಗನೇ
ನಳಿನನಾಭನ ಸುಳಿವು ಕಂಡಿರಾ ೮

ಕಂದ ಮೂಲವೇ ಜಾಜಿ ವೃಕ್ಷವೇ
ಇಂದಿರೇಶನ ಸುಳಿವು ಕಂಡಿರಾ ೯

ಇಂದಿರೇಶನು ನಮ್ಮನು ವಂಚಿಸೀ
ಮಂದಭಾಗ್ಯರ ಮಾಡಿ ಪೋರನು ೧೦

ಶ್ರುತಿಗೆ ಸಿಲುಕದ ದೋಷದೂರನೇ
ವ್ರತವ ಕೆಡಿಸಿರೆ ಎಲ್ಲಿಗ್ಹೋಗೋಣ ೧೧

ಇಷ್ಟ ಪರಿಯಲಿ ಸ್ತೋತ್ರಮಾಡಲು
ರಂಗರಾಯನು ಬಂದು ಸೇರಿದ ೧೨

ಬಹಳ ಪರಿಯಲಿ ಸ್ತೋತ್ರಮಾಡಲು
ಕೃಷ್ಣರಾಯನು ಬಂದು ಸೇರಿದ ೧೩

ಮದನನಯ್ಯನಾ ಮುದದಿ ನೆನೆದರೆ
ನದಿಯ ತೀರದಿ ವಿಜಯವಿಠ್ಠಲ ೧೪

ನದಿಯ ತೀರದ ತೀರ್ಥಪಾದರು
ಸಲಿಹ ಭಕುತರ ಪಾಲಿಸೂವನು ೧೫

೨೦೧

ಶ್ರೀಶ ಕೊಳಲನೂದಿದನಂದು ಶ್ರೀಧರನಿಂದು
ವಾಸವ ವಂದಿತ ವಾತಜ ಸೇವಿತ
ವಾಸುಕಿಶಯನನು ವಾರೆ ಸುನೋಟದಿ ಪ

ಬೆರಳ ಸಂದಿಲಿ ಮುರಳಿ ಪಿಡಿದು, ಮುರಾರಿ ತಾನು
ಹರುಷದಿಂದಲಿ ಸ್ವರವ ನುಡಿದು, ವಾರಿಜನೇತ್ರ
ಅರಳು ಮಲ್ಲಿಗೆ ಸರಗಳ ಮುಡಿದು
ಕೊರಳ ಪದಕ ಹಾರ ಕೌಸ್ತುಭ ಶೋಭಿತ
ಮರುಳು ಮಾಡುತ ಮಡದಿಯೆಲ್ಲರ ೧

ಗೌರಿ ಗಾಂಧಾರಿ ಗೌಳಪಂತು ಗೌರೀಶ ಭೂಷಣ
ಶೌರೀ ಸಾರಂಗ ಮೋಹನವಿಂತು ಸಾವೇರಿ ಸುರುಟಿ
ಭೈರವಿ ಬ್ಯಾಗಡೆ ಊದುತ ನಿಂತು
ಮಾರಜನಕ ತಾನಾನಂದದಿಂದಲಿ
ವೀರ ಶ್ರೀ ಕೃಷ್ಣನು ವಿಧವಿಧ ರಾಗದಿ ೨

ನಾರದ ತುಂಬುರ ನಾಟ್ಯವನಾಡೆ, ನಳಿನನಾಭನ
ಗಿರಿಜಾಪತಿಯು ವಂದಿಸಿ ಬೇಡೆ, ಗೋಪಾಲಕೃಷ್ಣನ
ಭಾರತಿಪತಿ ತಾ ಕೊಂಡಾಡೆ
ವರಗುರು ವಂದಿತ ವಿಜಯವಿಠ್ಠಲರೇಯ
ಹರುಷವ ಪಡಿಸುತ ವನಿತೆಯರೆಲ್ಲರ ೩

೨೦೨

ಸಂಪತ್ತು ನಿನಗಿಂದು ಪೊಸದಾಯಿತೆ ।
ಸಿಂಪಿನಲಿ ಪಾಲುಗುಡಿದದು ಮರದಿಯಾ ರಂಗ ಪ

ಪಾಲು ಮೊಸರು ಕದ್ದು ಗೋವಳರೆಂಜಲನುಂಡು ।
ತಾಳ ಫಲಗಳ ಮೆದ್ದದು ಮರದಿಯಾ ॥
ಕಾಲ ಕಾಲಕೆ ಇಲ್ಲಿ ಷಡುರಸಾಯನ ಸವಿದು ।
ಮೇಲಾಗಿ ಪೊಟ್ಟೆಯೆ ಪೊರೆವ ಅತಿಶಯವೇನು ೧

ಕಂಡವರ ಕೈಯ್ಯ ಪಳ್ಳಿಯಲಿ ಹಳ ಹಳ ಎನಿಸಿ ।
ಕೊಂಡು ಭಂಡಾಗಿ ಇದ್ದದು ಮರದಿಯಾ ॥
ತಂಡ ತಂಡದಲಿಪ್ಪ ವೈಭೋಗ ವಾಹನ ।
ತೋಂಡರು ಕರ ಮುಗಿದು ಕೊಂಡಾಡುವ ಭರವೊ ೨

ಮತಿಹೀನ ಖಳಗಂಜಿ ವನಧಿಯೊಳಗೆ ದ್ವಾರ ।
ವತಿಯಲ್ಲಿ ವಾಸವಾದದು ಮರದಿಯಾ ॥
ಪ್ರತಿದಿವಸದಲ್ಲಿ ಸದ್ಭಕ್ತಿಯುಳ್ಳ ಶುದ್ಧ ।
ಯತಿಗಳಿಂದಲಿ ಪೂಜೆ ಕೈಗೊಂಬ ಸಂಭ್ರಮವೊ ೩

ಈ ವೈವಸ್ವತ ಮನ್ವಂತರ ಉಳ್ಳತನಾಕಾ ।
ಈ ವಿಧದ ಕರ್ಮ ತಪ್ಪಲರಿಯದು ॥
ಕೋವಿದರು ಪೇಳುವದು ಪುಸಿ ಎನ್ನದಿರು ದೇವ ।
ಈ ಉಡಪಿನ ಸ್ಥಾನ ನೆಚ್ಚಕೇನೊ ನಿನಗೆ ೪

ಭಕುತಗೆ ಬಂದ ಮಹಾ ಕ್ಲೇಶ ಕಳಿಯದಿರಲು ।
ಭಕುತವತ್ಸಲನೆಂಬ ಬಿರಿದು ಬರಿದೇ ॥
ಮುಕುತೀಶ ಶಿರಿ ಕೃಷ್ಣ ವಿಜಯವಿಠ್ಠಲ । ವಿ ।
ರುಕತಿಯೆ ಇತ್ತರೆ ಕೀರ್ತಿ ಬಾಹದು ನಿನಗೆ ೫

೨೦೩

ಸಕಲ ಕಾಲದಿ ಮಾಡಿದ ಕರ್ಮವು ।
ಭಕುತಿಯಿಂದಲಿ ಬಂದರ್ಪಿತವೆನ್ನಿ ಉಡುಪಿಯಲಿ ಪ

ಯಾತ್ರೆಗಳ ಮಾಡಲಿ ತೀರ್ಥಗಳ ಮೀಯಲಿ ।
ಸ್ತೋತ್ರಗಳ ಮಾಡಲಿ ಕೊಂಡಾಡಲಿ ॥
ನೇತ್ರದಲಿ ನೋಡಿ ಕರಮುಗಿದು ನಮಸ್ಕರಿಸಲಿ ।
ಹೋತ್ರವನು ಮಾಡಿ ಹಿತವಾಗಿ ನುಡಿಯಲಿ ೧

ದಾನವನು ಮಾಡಲಿ ದಾಕ್ಷಿಣ್ಯವಾಗಲಿ ।
ಮೌನವನು ಮಾಡಲಿ ಮಾತಾಡಲಿ ॥
ಕಾನನವ ಸೇರಲಿ ಕಂಡಲ್ಲಿ ತಿರುಗಲಿ ।
ಏನೇನು ಚರಿತೆಗಳ ಮಾಡುತಿರಲಿ ೨

ಪುಣ್ಯವಾದರು ಲೇಸೆ ಪಾಪವಾದರು ಹರಿ ।
ಮನ್ನಿಸಿ ತಾನೀಗ ತೆಗೆದುಕೊಂಡು ॥
ತನ್ನ ಸಮೀಪದಿ ಇಟ್ಟುಕೊಂಡು ಅವನ ।
ಘನ್ನ ಮೂರುತಿ ವಿಜಯವಿಠ್ಠಲ ಪೊರೆವ ೩

೨೦೪

(ಊ) ಶ್ರೀ ಮಹಾಲಕ್ಷ್ಮೀ

ಇಂದಿರೆ ಇಂದೀವರಾಕ್ಷಿ– ಸುಂದರಿ ಅರ–
ವಿಂದ ಮಂದಿರೆ ಪೂರ್ಣೆ । ಪ

ಇಂದುವದನೆ ಅಮರೇಂದ್ರ ವಂದಿತೆ ।
ಸಿಂಧುಸುತೆ ಆನಂದ ಫಲದೆ ಅಪ

ತಾರರಮಣನ ಸೋಲಿಪ ನಖದಕಾಂತಿ ।
ಚಾರು ಚರಣತಳ ವಾರಿಜಾಂಕುಶ ಧ್ವಜ ।

ವಾರಣ ಕನಕ ಮಂಗಳರೇಖೆವೊಪ್ಪೆ । ನೂ–
ಪುರ ಕಡಗ ಪೆಂಡ್ಯೆ ಪರಡೆ ಜಾನು ಜಂಘೆ ।

ಊರು ಕಟಿ ನಾಭಿ ಉದರ ತ್ರಿವಳಿ ।
ಧಾರ ಶೋಭನವಾದ ಹೊನ್ನುಡಿ ।
ಧಾರ ಕಿಂಕಿಣಿ ತೋರಮುತ್ತಿನ–
ಹಾರ ಉರವಿಸ್ತಾರ ಗುಣವಂತೆ ೧

ನ್ಯಾವಳಸರ ಕಂಠಮಾಲೆ ಪದಕ ಕಂಬು –
ಗ್ರೀವ ಸರಿಗೆ ದಿವ್ಯಚಂದನ ಲೇಪಿಸಿ ।
ಪ್ರಾವಡ ಕಂಚುಕ ಹಸ್ತಕಡಗ ಮುದ್ರೆ
ಪ್ರವಳಮಣಿಯು ಕೇಯೂರ ದಂಡೆಯ ಸರ ।

ಬೇವಿನೆಸಳಂತೆ ಪುಬ್ಬು ಥಾಳಿಪ ।
ತಾವರೆಯ ಫಣೆಯೂ ಸಂಪಿಗೆ ।
ಪುವ್ವ ಪೋಲುವ ನಾಸಿಕ ವೇಣಿ ।
ಹಾವಿನಂದದಿ ಒಪ್ಪುತಿರೆ ದೇವಿ ೨

ವಾಲೆಮೂಗುತಿ ಹೊನ್ನಹೂವು ತೂಗುವ ತುಂಬು ।
ಫಾಲ ಕಸ್ತೂರಿನಾಮ ಕದಪು ಮುಂಗೂದಲು ।
ಮೇಲೆ ರ್‍ಯಾಕಟೆ ಚೌರಿ ಮುಡಿದ ಕುಸುಮವು ।
ಸಾಲು ಮುತ್ತಿನ ಜಾಳಿಗೆ ಗೊಂಡ್ಯ ಶಿರದಲ್ಲಿ ।

ಪಾಲ ಸಾಗರ ಶಾಯಿ ವಿಜಯವಿ–
ಠ್ಠಲರೇಯನ ಉತ್ಸಾಹದಲಿ ।
ತೋಳಿನಲ್ಲಿ ಬಿಗಿದಪ್ಪಿ ಪವಳಿಪ ।
ಶ್ರೀ ಲಕುಮಿ ತ್ರೈಲೋಕ್ಯ ಮಾತೆ ೩

೨೦೫

ಕಮಲೆ ನಿನ್ನಯ ಪಾದ ಕಮಲದಲ್ಲೆನಗೆ
ವಿಮಲ ಮತಿಯನಿತ್ತು ಅಮಲನ್ನ ಮಾಡಿಸೇ ಪ

ಗಜರಾಜ ಗಮನೆಯೆ ತ್ರಿಜಗದ್ವಂದ್ಯಳೆಂದು
ಭಜಿಸಿ ನಿನ್ನಯ ಪಾದಾಂಬುಜವ ಆಶ್ರೈಸಿದೇ ೧

ಅಷ್ಟ ಸೌಭಾಗ್ಯ ವಿಶಿಷ್ಟವ ಕೊಟ್ಟು
ಕಷ್ಟವ ತಿಳಿದು ಸಂತುಷ್ಟನ ಮಾಡಮ್ಮ ೨

ಶ್ರೇಷ್ಠನ್ನ ಮಾಡು ಉತ್ಕೃಷ್ಟ ಜ್ಞಾನವನಿತ್ತು
ಶಿಷ್ಟನೆಂದೆನಿಸಿ ಶ್ರೀಕೃಷ್ಣನ್ನ ರಾಣಿ ೩

ಅಜಭವ ಮೊದಲಾದ ದ್ವಿಜರಿಂದ ವಂದಿತಳೆ
ಭಜಿಸಿ ನಿನ್ನಯ ಪಾದಾಂಬುಜವ ಆಶ್ರೈಸಿದೆ ೪

ದ್ವಿಜರಾಜಗಮನಳೆ ಭುಜಗಶಯನನಾದ
ವಿಜಯವಿಠ್ಠಲನಂಘ್ರಿರಜವ ಧರಿಸುವೆ ೫

೨೦೬

ಕಾಯೆ ಕರುಣಾಂಬುಧಿಯೇ ।
ಇಂದಿರಾದೇವಿ ಕಾಯೆ ಕರುಣಾಂಬುಧಿಯೆ ಪ

ಮಾಯೆ ನಾರಾಯಣನ್ನ ಜಾಯೆ ಸತತ ಜ್ಞಾನ ।
ವೀಯೆ ಭಕ್ತರ ಪ್ರೀಯೇ ಅಪ

ಕನ್ಯಾಮಣಿಯೆ ಕಾಮಿನಿ ಮಂಗಳವಾಣಿ ।
ಸನ್ನುತೆ ಲೋಕ ಜನನಿ ।
ನಿನ್ನ ಚರಣಯುಗ್ಮ ।
ವನ್ನೆ ನಂಬಿದೆ ಸುಪ್ರಸನ್ನೆ ಸರ್ವಜೀವರ ।

ಭಿನ್ನೆ ಭಾಗ್ಯಸಂಪನ್ನೆ ॥
ಮನ್ನಿಸಿ ಮುದದಿಂದ ।
ಬಿನ್ನಪ ಲಾಲಿಸು ।
ಚನ್ನೆ ಚಕ್ರ ಪಾಂಚಜನ್ಯ ಧರಾದೇವಿ ೧

ಅತಿದಯವಂತೆ ನೀನೆಂದು ಬೇಗದಿ ಬಂದು ।
ನುತಿಸಿದೆ ದೀನನಾಗಿಂದೂ ।
ಪತಿತರೊಳಿಡದಲೆ ।
ಗತಿಗೆ ಸಮ್ಮೊಗಮಾಡು ।
ತೃತ್ತಿ ಸ್ಥಿತಿ ಲಯಕರ್ತೆ ಅತುಳ ಶೋಭನಮೂರ್ತೆ ।
ಪತಿಯಲಿ ಜನಿಸಿದೆ।
ಪತಿಗೆ ಸತಿಯಾದೆ ।
ಪತಿಯ ಸಂಗಡ ಜ । ನಿತಳಾದ ಚರಿತೆ ೨

ಕುಂಕುವರತ ರಾಜಿತೆ ಧವಳಗೀತೆ ।
ಪಂಕಜಸದನೆ ಖ್ಯಾತೆ ।
ಲೆಂಕಾ ವತ್ಸಲೆ ಸರ್ವಾಲಂಕಾರ ಮಾಯೆ ರವಿ ।
ಸಂಕಾಸೆ ಬಹುಕಾಲ ।
ಸಂಕಟವ ವಿನಾಶೆ ।
ಮಂಕು ಮತಿಹರ ವಿಜಯವಿಠ್ಠಲನ ।
ಸಂಕಲ್ಪಕೆ । ಕ । ಳಂಕವಾಗದಂತೆ ೩

೨೦೭

ಕ್ಷೀರ ವಾರಿಧಿ ಕನ್ನಿಕೆ ಮಾರಜನಕೆ
ಈರೇಳು ಲೋಕನಾಯಿಕೆ ಪ

ವಾರವಾರಕೆ ಆರಾಧಿಪುದಕೆ ಚಾರುಮತಿಯ ಕೊಡು
ದೂರ ನೋಡದಲೆ ಅಪ

ಶ್ರೀಧರಾ ದುರ್ಗಿ ಅಂಭ್ರಣಿ ನಿತ್ಯ ಕಲ್ಯಾಣಿ
ವೇದವತಿಯೆ ರುಕ್ಮಿಣಿ
ವೇದ ವೇದಾಂತದಭಿಮಾನಿ ವಾರಿಜ ಪಾಣಿ
ಆದಿ ಮಧ್ಯಾಂತ ಗುಣಮಣಿ
ಸಾಧು ಜನರ ಹೃನ್ಮಂದಿರ ವಾಸಿನಿ
ಭೇದಗೊಳಿಪ ಕಾಮಕ್ರೋಧಗಳೋಡಿಸಿ
ನೀ ದಯದಿಂದಲೆ ಮುಂದೆ ಗತಿಗೆ ಪಂಚ
ಭೇದಮತಿಯ ಕೊಡು ಮಾಧವ ಪ್ರಿಯಳೆ ೧

ಶ್ರೀ ಮಾಯಾ ಜಯಾ ಕೃತಿ ಶಾಂತಿದೇವಿ ಜಯಂತೆ
ನಾಮದೊಳಪ್ಪ ಗುಣವಂತೆ
ಕೋಮಲವಾದ ವೈಜಯಂತೆ ಧರಿಸಿದ ಶಾಂತೆ
ಸೋಮಾರ್ಕ ಕೋಟಿ ಮಿಗೆ ಕಾಂತೆ
ತಾಮರಸಾಂಬಕೆ ರಮೆ ಲಕುಮಿ ಸತ್ಯ
ಭಾಮೆ ಭವಾರಣ್ಯ ಧೂಮಕೇತಳೆ
ಯಾಮ ಯಾಮಕೆ ಹರಿ
ನಾಮವ ನುಡಿಸಿ ಉತ್ತಮರೊಡನೆ ಪರಿ
ಣಾಮವನೀಯುತ ೨

ಅನೇಕಾಭರಣ ಭೂಷಿತೆ ಧರಣಿಜಾತೆ
ಜ್ಞಾನಿಗಳ ಮನೋಪ್ರೀತೆ
ಆನಂದಲೀಲೆ ವಿಖ್ಯಾತೆ ಆದಿದೇವತೆ
ಗಾನವಿಲೋಲೆ ಸುರನುತೆ ನೀನೇ ಗತಿ ಎನಗಾರನ
ಕಾಣೆನೆ ದಾನಿ ಇಂದಿರಾದೇವಿ
ನಾನಾ ಪರಿಯಲಿ ಶ್ರೀನಿಧಿ ವಿಜಯವಿಠ್ಠಲನ ಮೂರುತಿಯ
ಧ್ಯಾನದೊಳಿಡುವಂಥ ಜ್ಞಾನ ಭಕುತಿ ಕೊಡು ೩

೨೦೮

ಕೊಲ್ಲಾಪುರ ನಿಲಯ ಸರಸಿಜಾಲಯ ಹರಿ
ವಲ್ಲಭೆ ಬಲು ಸುಲಭೆ ಪ

ಮೂಕಾಸುರನ ಕೊಂದು ಮೂಕಾಂಬಿಕೆನಿಸಿದೆ
ಲೋಕ ಜನನಿ ಕಾಮಿನಿಸಾಕಾರ ಗುಣವಂತೆ
ಶ್ರೀ ಕಮಲೆ ಎಲ್ಲಿನಾ ಕಾಣೆ ನಿನಗೆ ಸಮಾ ೧

ಕೋಲ ಮುನಿಗೊಲಿದಮಲ ಮೃಗನಾಭಿ
ಫಾಲೆ ಸಜ್ಜನರ ಪಾಲೆಬಾಲೆ ಜಾತರಹಿತೆ
ಲೀಲೆ ನಾನಾ ಪುಷ್ಪಮಾಲೆ ಕಮಲಹಸ್ತೆ ೨

ಶಿವದುರ್ಗೆ ನೀನೆಂದು ಶ್ರವಣಮಾಡಲು ಮನುಜ
ರವರವ ನರಕದಲ್ಲಿ ಬವಣೆಪಟ್ಟ ಮೇಲೆ
ಸವಿಯದಂತೆ ತಮಸುನಿವಹದೊಳಗೆ ಇಪ್ಪನು ೩

ಕಾಮತೀರ್ಥ ಬಳಿಯ ಪ್ರೇಮದಿಂದಲಿ ನಿಂದೆ
ಸೀಮೆಯೊಳಗೆ ನಿನ್ನಯ ನಾಮಕೊಂಡಾಡಲು
ತಾಮಸಗಳ ಕಳೆದು ನಿಷ್ಕಾಮ ಫಲ ಪಾಲಿಪೆ ೪

ಧರೆಯೊಳು ಷೋಡಶಗಿರಿಯ ಪ್ರಾದೇಶ ಮಂ
ದಿರ ರಚಿಸಿಕೊಂಡು ಇಪ್ಪೆ ವರವ ಕೊಡುವೆ ನಿತ್ಯ
ಸಿರಿ ವಿಜಯವಿಠ್ಠಲನ್ನ
ಪರಮ ಪ್ರೀತಿ ಅರ್ಧಾಂಗಿ ೫

೨೦೯

ಜಗಪತಿಯ ತೋರಮ್ಮ ಎನಗೆ ಕರುಣವ ಮಾಡಮ್ಮ ಪ

ಅಘಗಳ ಕಳೆವ ಅಮೋಘದೇವನ
ಭಕುತರ ಕಾವನ ಎನ್ನಯ ಜೀವನ ಅ

ಮೃಗಲಾಂಛನ ವದನೆ ಮೃದು ಸರಸಿಜ ಸದನೆ
ಹಗಲು ಇರುಳು ನಿನ್ನ ಸಂಯೋಗನ್ನ ಅನಂತ ಭೋಗನ್ನ
ಕಿರೀಟಿಯ ಬೀಗನ್ನ ೧

ಭ್ರಮರ ಕುಂತಳೆ ಜಾಣೆ ಸುಮನ ಕೋಕಿಲಗಾನೆ
ಕಮಲ ತುಳಸಿ ಮಣಿಹಾರನ್ನ ಜಗದಾಧಾರನ್ನ
ದಶಾವತಾರನ್ನ ೨

ಅಜರಾಮರಣ ಸಿದ್ಧಿ ತ್ರಿಜಗದೋಳ್ ಪ್ರಸಿದ್ಧಿ
ವಿಜಯವಿಠ್ಠಲ ಶ್ರೀನಿವಾಸನ ತಿರುವೆಂಗಳೇಶನ
ಜಗವ ಪೋಷನ ೩

೨೧೦

ದೇವಿ ಕಾರುಣ್ಯದಿಂದ ಬಂದು ಎಂದೆಂದು
ಬಿಡದೆಂದು ದಯದಿಂದ ಪಾಲಿಸಿ ನಿಂದು ಪ

ಕಮಲಲೋಚನೆ ಸಾಮಜಯಾನೆ ಶಶಾಂಕ ವದನೆ
ವಿಮಲಾಬ್ಜ ಸದನೆ ಕೋಕಿಲ ಗಾನೆ ಆನಂದಪೂರ್ಣೆ
ನಮೋ ನಮೋ ರಮೆ ಉತ್ತಮೆ ಅನುಪಮೆ
ಶಮೆಕ್ಷಮೆ ಹರಿಗಸಮೆ ಸತತಾಗಮೆ ಗಗನಿಜಿತ
ಯಮೆ ಪರಮೇಶ್ವರಿ ಅ ಉಮೆ ಈ ಪರಾಕ್ರಮೆ ೧

ಲೋಕ ತರುವಾತ ತನಯವಾಕು ಇವು ಮೂರು ಬೇಕು
ಬೇಕೆಂದು ತುತಿಸಿದೆ ಪರಾಕು ಸಂತಾಪ ನೂಕು
ಲೋಕ ಜನನಿಯೆ ವೈದೀಕ ಪ್ರಾರ್ಥನೆ ಇದು
ನೀ ಕೇಳು ಕರುಣದಿ ಸಾಕು ಸಕಲ ತನುಪ್ರಾಕು ಕುರ್ಮದಿ ಬಂದ
ಶೋಕ ಓಡಿಸಿ ಎನ್ನ ಸಾಕು ನೀ ಮನಸು ಹಾಕು ೨

ರಂಗನ ಅರ್ಧಾಂಗಿ ನೀ ರನ್ನೆ ಕ್ಷೀರಾಬ್ಧಿ ಕನ್ನೆ
ಮಂಗಳಾದೇವಿ ಭಾಗ್ಯ ಸಂಪನ್ನೆ ಭಕ್ತ ಸಂಪನ್ನೆ
ತುಂಗ ಗುಣಾಬ್ಧೆ ತರಂಗಳೆ ತರುಣ ಪ್ರಕಾಶಿಸು
ಮಂಗಳಪ್ರದೆ ಭುಜಂಗ ಶಯನ ಸಿರಿ ವಿಜಯವಿಠ್ಠಲನ್ನ
ವಕ್ಷಸಾರಿದ ಸಾಕ್ಷಾದ್ದೇವಿ ೩

೨೧೧

ಪಾಲಿಸೆ ಪದುಮಾಲಯೆ, ನೀನೇ ಗತಿ ಪ

ಬಾಲಕನು ತಾನಾಗಿ ಗೋಪಿಗೆ
ಲೀಲೆಯಿಂದಲಿ ನಂದ ಗೋಕುಲ-
ಬಾಲೆಯರ ಮೋಹಿಸುತ ಅಸುರರ
ಕಾಲನೆನಿಸಿದ ಬಾಲಕನ ಪ್ರಿಯೆ ಅಪ

ಅನ್ಯರ ನೆನೆಯಲೊಲ್ಲೆ ನಿನ್ನಯ ಪಾದ-
ವನ್ನು ನಂಬಿದೆ ನೀ ಬಲ್ಲೆ ತಡಮಾಡದೆ
ಚಿಣ್ಣ ಕರೆಯಲು ಘನ್ನ ಮಹಿಮನು
ಉನ್ನತದ ರೂಪಿನಲಿ ಗುಣಸಂ
ಪನ್ನ ರಕ್ಕಸನನ್ನು ಸೀಳಿದ
ಪನ್ನಗಾದ್ರಿ ನಿವಾಸೆ ಹರಿಪ್ರಿಯೆ ೧

ಅರಿಯದ ತರಳನೆಂದು ಶ್ರೀಪತಿ ಸತಿ
ಕರುಣದಿ ಸಲಹೆ ಬಂದು ಕರುಣಾಸಿಂಧು
ಸರಸಿಜಾಸನ ರುದ್ರರೀರ್ವರ
ವರದಿ ಮೂರ್ಖನು ಸುರರ ಬಾಧಿಸೆ
ಹರಿವರರ ದಂಡೆತ್ತಿ ಬಹುಮುಖ
ದುರುಳನ ಶಿರ ತರಿದವನ ಪ್ರಿಯೆ ೨

ಅಜ ಮನಸಿಜ ಜನನಿ ಅಂಬುಜಪಾಣಿ
ಭುಜಗ ಸನ್ನಿಭವೇಣೀ ನಿತ್ಯ ಕಲ್ಯಾಣಿ
ಕುಜನಮರ್ದನ ವಿಜಯವಿಠ್ಠಲ
ಭಜಿಸಿ ಪಾಡುವ ಭಕ್ತಕೂಟವ
ನಿಜದಿ ಸಲಹುವೆನೆಂಬ ಬಿರುದುಳ್ಳ
ವಿಜಯಸಾರಥಿ ವಿಶ್ವಂಭರ ಪ್ರಿಯೆ ೩

೨೧೨

ಪಾಲಿಸೆ ಯೆನ್ನ ಇಂದಿರಾದೇವಿ, ಪಾಲಿಸೆ ಯೆನ್ನಾ ಪ

ಪಾಲಿಸೆ ನಾ ನಿನ್ನ ಪಾಲಿಗೆ ಬಂದಿರ್ಪೆ
ಶ್ರೀಲೋಲನ ಪದಕೀಲಾಲಜ ತೋರಿ ಅ.ಪ

ಚಿತ್ಪ್ರಕೃತಿ ನಿತ್ಯ ಜಡಪ್ರಕೃತ್ಯಭಿಮಾನಿ
ಸತ್ಪ್ರಮಾಣವಾದ ಕೀರ್ತನೆ ನುಡಿಸುತ್ತ ೧

ಮಂತ್ರಗಳರಿಯೆನು ಮಂದಮತಿಯು ಸ್ವ
ತಂತ್ರದವನಲ್ಲ ಸೃಷ್ಟ್ಯಾದ್ಯಷ್ಟ ಕರ್ತೆ ೨

ಗುಣಪ್ರಕ್ರಿಯೆಗಳ ಅರಿತವುಳ್ಳ ಲ
ಕ್ಷಣವಂತೆ ವಿಜಯವಿಠ್ಠಲನ ನಿಜಾಂಗನೆ ೩

೨೧೩

ಯಲ್ಲರಮ್ಮನಲ್ಲವೆ ಸಿರಿದೇವಿ । ಎಲ್ಲರಮ್ಮನಲ್ಲವೆ ॥
ಬಲ್ಲಿದರಾಗಿಪ್ಪ ಬೊಮ್ಮಾದಿಗಳಿಗೆ ಪ

ಆಲದೆಲೆಯ ಮೇಲೆ ತನ್ನ ಪುರುಷನಂದು ।
ಕಾಲವರಿತು ಪವಡಿಸಿರಲು ॥
ವಾಲಗವನು ಮಾಡಿ ಕೊಂಡಾಡಿ ಜೀವರ ।
ಮೂಲ ಕರ್ಮಂಗಳು ತೀರುವಂತೆ ಮಾಡಿದ ೧

ಆಮೋಘ ವೀರ್ಯ ಗರ್ಭದಿ ಧರಿಸಿ ತಾ ।
ಬೊಮ್ಮಾಂಡವನೆ ಪೆತ್ತ ಲೋಕಾಮಾತಾ ॥
ಸುಮನಸರಿಗೆ ಕಡೆಗಣ್ಣ ನೋಟದಿ ।
ಆ ಮಹಾ ಪದವಿಯ ಕೊಡುವ ಭಾಗ್ಯವಂತೆ ೨

ಎರಡೊಂದು ಗುಣದಲ್ಲಿ ಪ್ರವಿಷ್ಠಳಾಗಿ ಜೀ
ವರ ಯೋಗ್ಯತೆಯಂತೆ ಪಾಲಿಸುತಿಪ್ಪಳು ॥
ಪರಮ ಪುರುಷ ನಮ್ಮ ವಿಜಯವಿಠ್ಠಲನ್ನ ।
ಕರುಣದಿಂದಲಿ ಅನಂತ ಕಲ್ಪಕೆ ನಿತ್ಯ ೩

೨೧೪

ಶ್ರೀ ಮಹಾಲಕುಮಿ ದೇವಿಯೆ,
ಕೋಮಲಾಂಗಿಯೆ ಸಾಮಗಾಯನ ಪ್ರಿಯೆ ಪ

ಹೇಮಗರ್ಭ ಕಾಮಾರಿ ಶಕ್ರಸುರ
ಸ್ತೋಮ ವಂದಿತಳೆ ಸೋಮ ಸೋದರಿಯೆ ಅ

ಬಟ್ಟುಕುಂಕುಮ ನೊಸಲೋಳೆ ಮುತ್ತಿನ ಹೊಸ
ಕಟ್ಟಾಣಿ ತ್ರಿವಳಿ ಕೊರಳೋಳೆ
ಇಟ್ಟ ಪೊನ್ನೋಲೆ ಕಿವಿಯೋಳೆ ಪವಳದ ಕೈಯ
ಕಟ್ಟ ಕಂಕಣ ಕೈಬಳೆ
ತೊಟ್ಟ ಕುಪ್ಪಸ ಬಿಗಿದುಟ್ಟ ಪೀತಾಂಬರ
ಘಟ್ಟಿ ವಡ್ಯಾಣ ಕಾಲಂದಿಗೆ ರುಳಿಗೆಜ್ಜೆ
ಬೆಟ್ಟಿಲಿ ಪೊಳೆವುದು ವೆಂಟಿಕೆ ಕಿರುಪಿಲ್ಲಿ
ಇಟ್ಟು ಶೋಭಿಸುವ ಅಷ್ಟಸಂಪನ್ನೆ ೧

ಸಕಲ ಶುಭಗುಣಭರಿತಳೆ ಏಕೋದೇವಿಯೆ
ವಾಕುಲಾಲಿಸಿ ನೀ ಕೇಳೆ
ನೋತನೀಯನ್ನ ಮಹಲೀಲೆ ಕೊಂಡಾಡುವಂಥ
ಏಕಮನವ ಕೊಡು ಶೀಲೆ
ಬೇಕು ಬೇಕು ನಿನ್ನ ಪತಿ ಪಾದಾಬ್ಜವ

ಏಕಾಂತದಿ ಪೂಜಿಪರ ಸಂಗವ ಕೊಡು
ಲೋಕದ ಜನರಿಗೆ ನಾ ಕರವೊಡ್ಡದಂತೆ
ನೀ ಕರುಣಿಸಿ ಕಾಯೆ ರಾಕೇಂದುವದನೆ ೨

ಮಂದರೋದ್ಧನರಸಿಯೆ ಇಂದಿರೆ ಯೆನ್ನ
ಕುಂದು ದೋಷಗಳಳಿಯೆ
ಅಂದ ಸೌಭಾಗ್ಯದ ಸಿರಿಯೆ ತಾಯೆ ನಾ ನಿನ್ನ
ಕಂದನು ಮುಂದಕ್ಕೆ ಕರೆಯೆ
ಸಿಂಧುಶಯನ ಸಿರಿ ವಿಜಯವಿಠ್ಠಲರೇಯ
ಎಂದೆಂದಿಗೊ ಮನದಿಂದಗಲದೆ ಆ
ನಂದದಿಂದಲಿ ಬಂದು ಮುಂದೆ ಕುಣಿಯುವಂತೆ
ವಂದಿಸಿ ಪೇಳಮ್ಮ ಸಿಂಧುಸುತೆಯಳೆ ೩

೨೧೭

ಶ್ರೀ ವನಿತೆ ವೈನತೇಯ ವಾರುತೆ ದೇವಾದಿ ವರವಿನುತೆ
ಕಾವದು ಯೆನ್ನ ನೀ ವದಿಗಿ ಮುನ್ನೆ ಈವದು ವರ ಆವದುವಲ್ಲೆ
ದೇವಿ ನಿನ್ನಯ ರಾಜೀವ ಚರಣದ
ಸೇವೆಯ ಪಾಲಿಸು ಕೋವಿದರೊಡನೆ ಪ

ಸಮಸ್ತಲೋಕ ವಂದಿತೆ ಸಂತತ ಮತ್ತೆ
ತಾಮಸ ಜ್ಞಾನ ಹರತೆ ಸಾಮಗಾಯನ ಪ್ರೀತೆ ಸಕಲವಿದ್ಯಾತೀತೆ
ರೋಮ ರೋಮ ಗುಣ ಭರಿತೆ
ರಾಮನ್ನ ಪದ ನಾಮವನ್ನು
ನಾ ಮರೆಯದಂತೆ ನೀ ಮನಸು ಕೊಡು
ಹೇಮಾಂಬರೆ ಕಾಂಚಿದಾಮೆ ಅಮಮ ನಿ–
ಸ್ಸೀಮ ಮಹಿಮೆ ಭಕ್ತಸ್ತೋಮ ವನಧಿ ಸೋಮೆ
ಕಾಮ ಜನನಿ ತ್ರಿಧಾಮೆ ಪುಣ್ಯನಾಮೆ
ಕೋಮಲಾಂಗಿ ಸತ್ಯಭಾಮೆ ರಮೆ ಪೂರ್ಣ
ಕಾಮೆ ಸುರಸಾರ್ವಭೌಮೆ ೧

ಚಂದನ ಗಂಧಲೇಪಿನೀ ಚತುರವಾಣೀ
ಮಂದಹಾಸಗಮನೀ
ಗಂಧಕಸ್ತೂರಿ ಜಾಣೆ ಗಂಭೀರ ಗುಣಶ್ರೇಣಿ
ಸಿಂಧುತನಯೇ ಕಲ್ಯಾಣಿ
ಇಂದಿರೆ ಪದ್ಮಮಂದಿರೆ ಕಂಬು
ಕಂಧರೆ ಸರ್ವಸುಂದರೆ ಮಾಯೆ
ಬಂದೆನು ಕರುಣದಲಿಂದ ನೋಡು ಶತ –
ಕಂಧರರಿಪು ಸುಖಸಾಂದ್ರ ನಿರಾಮಯೆ
ಹಿಂದಣ ಕಲ್ಮಷ ವೃಂದಗಳೋಡಿಸಿ
ಇಂದು ದೈನ್ಯದಲಿ ಬಂದು ಮರೆಬಿದ್ದು
ನಿಂದೆ ನಮೋನಮೋ ಯೆಂದೆ ೨

ಘನ್ನ ಲಕ್ಷಣ ಪ್ರತಾಪೆ ನಿತ್ಯ ಸಲ್ಲಾಪೆ
ಅನ್ನಂತಾನಂತ ರೂಪೆ
ಸನ್ನುತಜನ ಸಾಮೀಪೆ ಸಕಲ ಪಾಪ ನಿರ್ಲೇಪೆ
ಕನ್ಯಾಮಣಿಯೆನಿಪೆ ನಿನ್ನ ಕಡೆಗಣ್ಣಿನ ನೋಟ–
ವನ್ನು ಹರಹಿ ಹಿರಣ್ಯಗರ್ಭಾದಿ–
ಯನ್ನು ಅನುದಿನ ಧನ್ಯನ ಮಾಳ್ಪಳೆ
ಅನ್ಯರಿಗೆ ಕಾರ್ಪಣ್ಯ ಬಡದಂತೆ
ಚನ್ನ ವಿಜಯವಿಠ್ಠಲನ್ನ ಪೂಜಿಪ ಗುರು
ರನ್ನೆ ಪುರಂದರರನ್ನ ಪೊಂದಿಸು ಸಂ–
ಪನ್ನೆ ಯೆನ್ನ ಪ್ರಾಸನ್ನೆ ೩

೨೧೬

ಸೀತೆಯ ಭೂಮಿಜಾತೆಯ ಜಗ–।
ನ್ಮಾತೆಯ ಸ್ಮರಿಸಿ ವಿಖ್ಯಾತೆಯ ಪ

ಕ್ಷೀರ ವಾರಿಧಿಯ ಕುಮಾರಿಯ ತನ್ನ ।
ಸೇರಿದವರ ಭಯಹಾರಿಯ ॥

ತೋರುವಳು ಮುಕ್ತಿಹಾರಿಯ ಸರ್ವ ।
ಸಾರ ಸುಂದರ ಶ್ರೀನಾರಿಯ ೧

ಈಶಕೋಟಿಯೊಳ್ ಗಣನೆಯ ಸ್ವಪ್ರ-।
ಕಾಶವಾದ ಗುಣಶ್ರೇಣಿಯ ॥
ಈಶಾದ್ಯರ ಪೆತ್ತ ಕರುಣಿಯ ನಿ-।
ದೋಷ ವಾರಿಧಿಕಲ್ಯಾಣಿಯ ೨

ವಿಜಯವಿಠ್ಠಲನ್ನ ರಾಣಿಯ ಪಂ-।
ಕಜಮಾಲೆ ಪಿಡಿದ ಪಾಣಿಯ ॥
ವಿಜಯಲಕ್ಷ್ಮಿ ಗಜಗಮನೆಯ ನಿತ್ಯ ।
ಸುಜನವಂದಿತೆ ಅಹಿವೇಣಿಯ ೩

(ಖ) ಬ್ರಹ್ಮ

೨೧೭

ವಾಣಿಯರಸ ಪರಮೇಷ್ಠಿ ನಿರುತನಿಷ್ಠಿ
ಮಾಣದೆ ಕೊಡು ಮನಮುಟ್ಟಿ ಪ

ನಾನಾ ನಾಡಿನೊಳು ನೀನೆ ಪಿರಿಯನೆಂದು
ಆನಂದ ಮತಿಯಿಂದ ಗಾನವ ಮಾಡುವೆ ಅ.ಪ.

ಪುರುಷನಾಮಕ ವಿಧಾತ ಹಂಸವರೂಥ
ಸರಸಿಜ ಗರ್ಭ ಶಿವತಾತ
ಪರಮ ಗುರುವೆ ವಿಖ್ಯಾತ ಪೂರ್ವ ಮಾರುತ
ತಾರತಮ್ಯದೊಳುನ್ನತ
ಹರ ಸಿರಿ ದೇವಿಯ ಚರಣ ರಜವನ್ನು
ಪರಮಾಣು ಪ್ರದೇಶ ವರ ಶಬ್ದ ಪಿಡಿದು
ತರುವಾಯ ಬಹುವಿಧ ಪರಿ ಪರಿಯಿಂದಲಿ
ಸ್ಮರಿಸಿಕೊಳ್ಳುತ ಮೈಮರೆವ ಶತಾನಂದ ೧

ಜಗವ ಪುಟ್ಟಿಸುವ ಮಹಾಧೀರ ತತ್ವಶರೀರ
ಮಗುಳೆ ಅನಿರುದ್ಧಕುಮಾರ
ಝುಗಿಝುಗಿಪ ಮಕುಟಧರ ಜೀವನ್ನೋದ್ಧಾರ
ನಿಗಭಿಮಾನಿ ಚತುರ–ಮೊಗನೆ ಪ್ರಬಲ ಅಹಿಗರುಡಾದ್ಯರಿಗೆಲ್ಲ
ಮಿಗಿಲಾಗಿಪ್ಪನೆ ಅಗಣಿತ ವಾಕ್ಯನೆ
ಹಗಲಿರುಳು ಮನಸಿಗೆ ಸುಖವಾಗುವ
ಬಗೆ ಕರುಣಿಸು ನಮ್ಮಗೆಗಳ ಕಳೆದು ೨

ವಾರಿಜಾಸನ ಲೋಕೇಶ ಭಕುತಿವಿಲಾಸ
ಚಾರುಸತ್ಯ ಲೋಕಾಧೀಶ
ಸಾರಹೃದಯ ವಿಶೇಷ ಮಹಿಮನೆ ದೋಷ
ದೂರ ನಿರ್ಮಲ ಪ್ರಕಾಶ
ಧಾರುಣಿಯೊಳಗವತಾರ ಮಾಡದ ದೇವ
ಸಾರಿದೆ ನಿನ್ನಂಘ್ರಿವಾರಿಜಯುಗಳವ
ಸಾರಿಸಾರಿ ವಿಜಯವಿಠ್ಠಲನ್ನ
ಆರಾಧಿಪುದಕೆ ಚಾರುಮತಿಯ ಕೊಡು ೩

(ಖ) ಬ್ರಹ್ಮ
೨೧೮

ಆಂಜನೇಯಾ ಕುಂತಿತನಯಾ ।
ಕಂಜಲೋಚನ ಪ್ರಿಯಾ । ಮಧ್ವಾಖ್ಯರಾಯಾ ।
ಸಂಜೀವಧರಣ ಧನಂಜಯ ಪೂರ್ವಜ ।
ಅಂಜದ ದುರ್ವಾದಿ ಭಂಜ ಪ್ರಭಂಜನ ಪ

ಯಾಗಾಭಿಮಾನಿಗಳನು । ಯೋಗದಿಂದಲಿ ಪಡೆದಾ ।
ಆಗಮತತಿ ವಂದ್ಯ ಅನಿಂದ್ಯಾ । ಭಾಗತ್ರಯದಲ್ಲಿ ವಿ ।
ಭಾಗ ಮಾಡಲು ಅಂದು । ನಾಗಭೂಷಣನ
ಪೆತ್ತಾಸೆ ಚಿತ್ತ । ಭಾಗವೆ ನಿನ್ನ ವೈ ।
ಭೋಗದ ಚರಣಕೆ । ಸಾಗರ ಹಾರಿದ ಹೇ ಗುಣಪೂರ್ಣನೆ ।
ರಾಗ ಭಕುತಿಯಿಂದ ಭೋಗದೊಳಗೆ ಮೇಲು ।
ಬಾಗಿಲ ಸಾರುವ ವೇಗವನೀಯೋ ೧

ನಿತ್ಯ ಪ್ರವಾಸ ರೂಪಾ । ವ್ಯಕ್ತಿ ಜ್ಞಾನ ಪ್ರತಾಪಾ ।
ಸತ್ಯಮೂರ್ತಿ ಈ ವಾರ್ತಿ ।
ಸುತ್ತು ತುಂಬಿದೆ ಕೀರ್ತಿ ಇತ್ತು ಸಂತತಾ ।
ಸ್ಫೂರ್ತಿ ಕಿತ್ತಿ ಬಿಸಾಟು ಪಂಕಾ । ನಿಷ್ಕಲಂಕಾ ।
ಹೊತ್ತು ಹೊತ್ತಿಗೆ ನಿನ್ನ ತುತ್ತಿಸುವೆನೊ
ರಿಪುಬಲ । ಕತ್ತರಿಸಿದಿ ಭೀಮಾ ।
ಚಿತ್ತದೊಳಗೆ ಹರಿ । ಉತ್ತಮತರ ತಮ
ಉತ್ತಮನೆಂಬೋದೀ ಉತ್ತರ ಬರಲಿ ೨

ಪರಿಪರಿ ಸಾಮರ್ಥ್ಯ ದುರುಳ ಸಮೂಹವೆಂಬೋ ।
ಸ್ಮರನಾ ನಿನ್ನಯ ಮೈಗೆ ಈ ಕೈಗೆ । ಭರದಿಂದ ಸೋಂಕಲು ।
ವರಗಲ್ಲಿನ ಮೇಲೆ ವರಸಿದಂತಾಗುವದೊ ಇದಹುದೋ ।
ಧರೆಯೊಳು ಸುಜನರ । ಕರದು ಸುಜ್ಞಾನವ ।
ಅರುಹಿದ ಆನಂದ । ವರ ಮುನಿಯೇ ವಿ ।
ಸ್ತರ ಕರುಣಾಂಬುಧಿ ವಿಜಯವಿಠ್ಠಲನ್ನ
ಚರಣವ ತೋರಿಸಿ ತೊರೆಯಯ್ಯಾ ಪ್ರಾಣಾ ೩

೨೧೯

ಈತನೀಗ ಭಾರತೀಶನು ತನ್ನ ಪ್ರೀತಿಸುವರ ।
ಮನದ ಮಾತು ಸಲಿಸಿ ಮುಕುತಿ ಈವ ಪ

ಶರಧಿ ಜಿಗಿದು ಹಾರಿ ಲಂಕಾಪುರವ ಶೋಧಿಸಿ ।
ಹರಿಯ ರಾಣಿಗೆ ಕುರುಹನಿತ್ತು ಮರಗಳುರುಹಿ ॥
ಮುರಿದು ಧರೆಗೆ ವರಿಸಿದಾತಾ ಅಪ

ಧುರದೊಳಕ್ಷನ ಹರಣವಳಿದು ।
ಗುರುವರ್ಧತ್ತುಶಿರನ ಜರಿದು ॥
ಸರ್‍ರನೆ ನಗರ ಉರುಪಿ ಮರಳಿ ।
ಹರಿಯ ಚರಣಕ್ಕೆರಗಿದಾತಾ ೧

ಕುರುನಿಕರ ಕರುಬಿ ಬೊ-।
ಬ್ಬಿರಿದು ನಿಂದುರವಣಿಸಿ ಎದುರಾ-॥
ದರಿಗಳ ಶಿರ ತರಿದು ತಳೋ-।
ದರಿಯ ಹರುಷಬಡಿಸಿದಾತಾ ೨

ಕರಿಯ ತೆರದಿ ದುಷ್ಟ ಸಂಕರನು ।
ತಿರುಗಲವನ ಮುರಿದು ಮತ್ತೆ ॥
ಮರುತಮತದ ಬಿರುದನೆತ್ತಿ – ।
ಪರನೆ ವಿಜಯವಿಠ್ಠಲನೆಂದಾ ೩

೨೨೦

ಎಂತು ವರ್ಣಿಪೆ ನಮ್ಮಮ್ಮಾ ।
ಯಂತ್ರೋದ್ಧಾರಕನಾಗಿ ಮೆರೆವನಾ ಪ

ಕೋತಿ ರೂಪದಲಿ ಬಂದು ।
ಭೂತಳಕೆ ಬೆಡಗು ತೋರಿ ॥
ಈ ತುಂಗಭದ್ರೆಯಲ್ಲಿ ।
ಖ್ಯಾತಿಯಾಗಿಪ್ಪ ಯತಿಯಾ ೧

ಸುತ್ತಲು ವಾನರ ಬದ್ಧ ।
ಮತ್ತೆ ವಲಯಾಕಾರ ಮಧ್ಯ ॥
ಚಿತ್ರಕೋಣ ಅದರೊಳು ।
ನಿತ್ಯದಲಿಯಿಪ್ಪ ಯತಿಯಾ ೨

ವ್ಯಾಸ ಮುನಿರಾಯರಿಂದ ।
ಈ ಶಿಲೆಯೊಳಗೆ ನಿಂದು ॥
ಶ್ರೀಶ ವಿಜಯವಿಠ್ಠಲನ್ನ ।
ಏಸು ಬಗೆ ತುತಿಪನ್ನ ೩

೨೨೧

ಏನು ಪವಮಾನಿ । ಏನು ಪವಮಾನಿ ।
ಈ ನಿಧಿಯಲಿ ಬಂದು ನಿಂದ ಕಾರಣ ।
ಮಾಣದೆ ಪೇಳು ನಿ । ದಾನದಿಂದಲಿ ।
ಮಾನಸದಲಿ । ದಾನವಾರಿಯ ।
ಧ್ಯಾನ ಮಾಡುವ ಜಾಣ ಜಗದ ಪ್ರಾಣ ಸುಂದರಾ ।
ನಾನಾ ಮಹಿಮಾ ಗುರುವೆ ಪ

ಕೇಸರಿನಂದನ ಪಾಶವಿನಾಶ ನಿರ್ದೋಷ ।
ದಾಸರನ ಪಾಲಿಸುವ ವಾನರೇಶನೆ ಭಾರತೀಶ ಈಶಾ ।
ಶೇಷಾದ್ಯರಿಗುಪದೇಶದ ಕರ್ತಾ ।
ಲೇಸು ಸದ್ಗುಣಗಣ ಕೋಶ
ಸರಸಿಜಾಸನ ಪದವಿಗೆ ಸೇರುವಾತಾ ॥
ದೇಶದೊಳು ಬಲುಭೂಷಣ ಪಾಕಶಾಸನ ಶರದ ಶರೀರ ।
ದಾಶರಥಿ ಪಾದಾಸರವಿಡಿ ।
ದೇಸು ಬಗೆಯಲಿ ।
ಮೋಸ ಪೋಗದಾಯಾಸಬಡದಲೆ ।
ಮೀಸಲ ಮನ ಸೂಸು ವನರಾಸಿ ಲಂಘಿಸಿ ೧

ವಾಸವವಿನುತಾ ನೀನಾ । ಕಾಶಕ್ಕೆ ಅಡರಿ
ಪರಿಸರ ಪೋಗಲಾಸಮಯದಲ್ಲಿ ।
ದ್ವೇಷವನು ತಾಳಿ ರಕ್ಕಸಿ ಬರಲವಳ ಸೀಳಿ ।
ಮೈನಾಕೆಂಬ ಶೈಲ ಮನ್ನಿಸಿ
ಭಾಸುರ ಲಂಕೆ । ಯ ಶೋಧಿಸಿದನಾ ಗೋ ।
ಸಾಸಿರವಿತ್ತು ಕೂಸಿನಂದದಲಿ ॥
ಭಾಷಿಯನಾಡಿ ಪದ್ಮಾಸನಿಗೆ ಸಂ ।
ತೋಷವ ಪೇಳದ

ಪ್ರಕಾಶಿತ ದುಃಗುರ ಭೂಸುತೆಗೆ ಯಿತ್ತು
ರೋಷದಲ್ಲಿ ವನಸಮುದಾಯವ
ಸವರಿ ಫಲ ಸವಿದು ಖಳನ ನಗುತ ।
ನಾಶಗೊಳಿಸಿದ ಸಮರ್ಥನೆ ೨

ಹಿಂದೆ ಪ್ರಳಯದಲ್ಲಿಂದಿರೇಶನು ಸುರ್ವ್ಯಂದ ಉದರದೊಳು ।
ಪೊಂದಿಟ್ಟುಕೊಂಡು ಆಗ ।
ಅಂದು ನೀನೊಬ್ಬನೇ ಮಂದನಾಗದೆ ನಯದಿಂದಲಿ ಎಚ್ಚತ್ತು ।
ಪೊಂದಿಕೊಂಡು ಇದ್ದೆ ।
ಇಂದು ಕದನದೊಳು ಇಂದ್ರಜಿತನು ಕರದಿಂದ ಸೆಳೆದ ಶರ ।
ದಿಂದಲಿ ಸಿಗಿಬಿದ್ದು ।
ಬಂಧಿಸಿಕೊಂಡಂಜಿನಿಂದಂತೆ ಮೈದೆಂದಿಗಿಲ್ಲದಂತೆ ನಂದವ ತೋರಿದೆ
ಇಂದು ಮೌಳಿಯ ಪೊಂದಿದದಶ ।
ಕಂಧರನ ಮೊಗ ಮುಂದೆ ಭಂಗಿಸಿ ।
ಬಂದು ಗುದ್ದಿಲಿನೊದ್ದನು ಅವನಿರೆ ।
ಮಂದಹಾಸದಲಿಂದ ನಗುತ ೩

ಪುರವನುರುಹಿ ಅಸುರರ ಸದೆದು ತೀ ।
ವರದಿಂದ ಶರಧಿಯ ಮರುಳೆ ಹಾರಿ ಬಂ ।
ದುರವಣಿಯಿಂದ ಶ್ರೀ ।
ಹರಿ ಚರಣಕ್ಕೆರಗಿ ಪೊಡಮಟ್ಟು ।
ಕರವನೆ ಮುಗಿದು ।
ಗುರುತು ಚೂಡಾಮಣಿ ಇಡೆ ಮುಂದೆ ವಿವರಿಸಿದೆ । ರಿಪುಗಳಾ ।
ಗರದ ವಿಸ್ತಾರ ।
ಸುರರು ಭಾಪುರೆ ಎಂದಂಬರದಲಿವಾದ್ಯ ।
ಬೆರೆದಲ್ಲಿ ಮೊರೆಯಾಗಿ ಅರಮರೆಯಿಲ್ಲದೆ ।
ಕರಡಿ ವಾನರ ನೆರೆಸಿ ಗಿರಿಗಳ
ತರಿಸಿ ಮಾರ್ಗವಸರದಲಿ ವಿಸ್ತರಿಸಿ ।
ಧುರದೊಳಗರಿಗಳಿಂದಲಿ ಮರಣವಾದವರನ ಎಬ್ಬಿಸಿ ೪

ಪಾತಾಳದೊಳು ಹತ್ತು ತಲೆಯವನಿರಲು ಕಾತುರದಿಂದ ಹೋ
ಮಾತುರಕಾರ್ಚಿಸೆ ।
ಮಾತು ಮುಂಚದ ಮುನ್ನ ಭೀತಿ ಇಲ್ಲದೆ ಪೋಗಿ ।
ಪಾತಕನವಧಾನ ।
ಧಾತುಗೆಡಿಸಿದೆ ।
ದಾತಗೆ ದಿವ್ಯವರೂಥವೆಂದೆನಿಸಿ ವಿ।
ಧೂತ ರಾವಣನ ವಿ ।
ಪಾತನ ಗೈಸಿದೆ ।
ಪ್ರೀತಿ ಬಡಿಸಿ ನಿಜಾರಾತಿ ವಿಭೀಷಣಗೆ ತಪ್ಪದೆ ಲಂಕಾ ।
ನಾಥನ ಮಾಡಿ ನೀ ।
ನೀತೆರದಲಿ ಸೇತುಪತಿ ಸಾಕೇತಪುರಿ
ರಘುನಾಥನ ಯಡೆ ನೀ ತೆಗೆದುಂಡೆ ।
ಶ್ರೀ ತರುಣೇಶ ವಿಜಯವಿಠ್ಠಲನ ದೂತಾ ಹನುಮಾ ೫

೨೨೨

ಏನು ಸೇವಿಸಿದೆ ಗುರು ಯೆಲೊ ಮಾರುತಿ ।
ಭಾನು ವಂಶೋತ್ತಮನೆ ನಿರುತ ಧಾರ್ಮಿಕನೆಂದು ಪ

ಪೋತತನದಲಿ ಸೇರಿ ಅರ್ಕಜನ ಕರೆತಂದು
ಮಾತಾಡಿಸಿ ಕೊಟ್ಟು ಮುದದಿ ಉದಧಿ ।
ಭೀತಿ ಇಲ್ಲದೆ ಹಾರಿ ಲಂಕಾಪುರವ ದಹಿಸಿ ।
ಸೀತೆ ವಾರ್ತೆಯ ತಂದು ಪೇಳಿದಕೆ ಸುಫಲಾ ೧

ಕೋತಿಗಳ ಕೂಡಿಕೊಂಡು ವನಧಿ ತೀರದಲಿಳಿದು
ಭೂತಳವ ತಿರುಗಿ ಪ್ರತಾಪದಿಂದ ।
ಗೋತುರೋನ್ನತ ತಂದು ತಡಿಯದೆ ಪ್ರಖ್ಯಾತದಿ ।
ಸೇತುವಿಯ ಕಟ್ಟಿ ಕುಣಿದಾಡಿದದುಕೇನು ಫಲಾ ೨

ಅಂದು ವಿಂಶತಿ ಹಸ್ತ ರಣದೊಳಗೆ ರಥವೇರಿ ।
ಬಂದಿರಲು ನೋಡಿ ಈ ಧನುರ್ಧಾರಿಯಾ
ಸ್ಕಂದದ ಮೇಲೇರಿಸಿಕೊಂಡು ಗಗನಕೆ ಬೆಳೆದು
ನಿಂದು ಚಾಲ್ವರಿದು ಬೊಬ್ಬಿರಿದದುಕ್ಕೇನು ಫಲಾ ೩

ಒಂದೇ ಹಾರಿಕಿಯಲಿ ಜಿಗಿದು ಕುಪ್ಪಳಿಸಿ ನೀ ।
ಗಂಧಮಾದನಗಿರಿಯ ಕಿತ್ತು ತಂದು ।
ಅಂದದಲಿ ದೇವತತಿ ಕೊಂಡಾಡುತಿರೆ ಕಪಿ ।
ವೃಂದವೆಬ್ಬಿಸಿ ಖಳರ ಮಡುಹಿದದುಕ್ಕೇನು ಫಲಾ ೪

ಅಪರಿಮಿತ ಉಪಕಾರ ಮಾಡಿದಲ್ಲದೆ ನಿನ್ನ ।
ಉಪವೀತ ಕೌಪೀನ ಬಿಡಿಸಲಿಲ್ಲಾ ।
ತಪಸಿವೇಷಿ ರಾಮ ವಿಜಯವಿಠ್ಠಲನೆ ಬಲು ।
ಕೃಪ ವನಧಿ ನಿಜವೆಂದು ತುತಿಸಿದದುಕ್ಕೇನು ಫಲಾ ೫

೨೨೩

ಕೊಂಡಾಡಲಳವೆ ಕಪಿಕುಲೋತ್ತಮ
ನಿನ್ನ ಚಂದ್ರಕೋಟಿ ತೇಜ ಚಕ್ರಧರನ ಭೃತ್ಯಾ ಪ

ತ್ರಿದಶ ದೈತ್ಯರು ಕೂಡಿ ತೀವ್ರದಿಂದಲಿ ತಾವು
ವೊದಗಿ ಮಂದರ ಶೈಲ ತವಕದಿ ತಂದಾಗ
ಉದಧಿಯೊಳಿಟ್ಟು ಸರ್ಪವನೆ ಸುತ್ತಿದರು ಪಿಡಿದು
ಮುದದಿಂದ ಕಟೆಯಲು ಮುನಿದು ಮಹರೋಷದಿ
ಉದಧಿಯೊಳು ವಿಷ ಹೊರಡಲು
ಅದು ನೋಡಿ ಮದನಾರಿ ಕಂಗೆಡಲು ಅಂಜದೆ ನೀನು
ಉದರದೊಳು ತಾಳಿದಿ ಸುರರು ಸುಖಬಡಲು ೧

ವಾತನ ಸುತನಾಗಿ ವಾಲಿಯ ತಮ್ಮನ ಕೂಡಿ
ಭೂತಳಾಧಿಪ ರಾಮಚಂದ್ರನ ಪದವಾರಿ
ಜಾತಕ್ಕೊಂದನೆ ಮಾಡಿ ವೃತ್ತಾಂತವನು ಪೇಳಿ
ಆತುರದಲಿ ಪುರಹೂತನಂದನ ನಿ
ರ್ಭೀತನ ಕೊಲ್ಲಿಸಿ ಶರಧಿಯನು ಹಾರಿ
ಸೀತೆಗುಂಗುರ ಕೊಟ್ಟು ಬೆಳೆದ ಚಲ್ವ–
ಮಾತುಲಿಯನು ಕಿತ್ತಿಟ್ಟು ಅಕ್ಷನ ಕೊಂದು
ವಾತಹತಮಾಡಿ ಲಂಕಾಪುರವ ಸುಟ್ಟ ೨

ಪಾಂಡುಚಕ್ರವರ್ತಿ ಕುಂತಿಯಲಿ ಜನಿಸಿ
ಮಂಡಲದೊಳು ಮಹಾಶೂರನೆನಿಸಿ ವಿಷ
ಉಂಡು ದಕ್ಕಿಸಿಕೊಂಡು ಉರಗಲೋಕದಲ್ಲಿದ್ದು
ತಾಂಡ ಭಾದಿಯ ಗೆದ್ದು ಹಿಡಿದು ಹಿಡಂಬನ
ಹಿಂಡಿ ಬಕಾಸುರನ ಖಂಡರಿಸಿ ಕೀಚಕನ
ಮಂಡಲದೊಳಗೆ ನಿಂದೆ ವಿರಾಟನ್ನ
ಕೊಂಡೊಯ್ಯೆ ಬಿಡಿಸಿ ತಂದೆ ಕುರು ನೃಪನ
ದಿಂಡುಗೆಡುಹಿ ಕದನದಲಿ ವೇಗ ಕೊಂದೆ ೩

ಮಧ್ವಾವತಾರವ ಮಾಡಿ ದುರ್ಮತದಿಂದ
ಬುದ್ಧಿಹೀನರಾಗಿ ಬಾಳಿದ ಮನುಷ್ಯರ
ಶುದ್ಧಾತ್ಮರನ ಮಾಡಿ ಶುಭವೇಗದಲಿ ಶ್ರೀ
ಮುದ್ರೆಧಾರಣ ಕೊಟ್ಟು ಜ್ಞಾನಾಂಬುಧಿಯೊಳಿಟ್ಟು
ಅದ್ವೈತ ಮತ ಕಾಲಿಲೊದ್ದು ಪರವಾದಿ
ಎದ್ದೋಡಿ ಬಂದು ತಿರುಗಿ ನಿಮ್ಮ
ಪದ್ಮಪಲ್ಲವಕ್ಕೆರಗಿ ಬೇಡಿಕೊಳ್ಳಲು
ಉದ್ಧರಿಸಿ ಅವರವರ ದೋಷ ಹೋಯಿತು ಕರಗಿ ೪

ಭೂವ್ಯೋಮ ಪಾತಾಳದೊಳಗೆ ಎದುರುಗಾಣೆ
ವಾಯು ಹನುಮ ಭೀಮ ಮಧ್ವನೆಂದಿನಿಸಿದೆ
ಕಾಯಜ ಜನಕನ ಪದವ ಪೂಜಿಸಿ ಅಂಬು
ಜೆಯನ ಪದವಿ ಪಡೆದು ಹರ ಇಂದ್ರಾದಿಗಳಿಗೆ
ನಾಯಕನೆನಿಸಿದೆ ನಾನಾ ದುರಿತವಾಗಿ
ಮಾಯಿಗಳೆಲ್ಲ ತರಿದೆ ಸುಭಕುತರ
ಆಯತದಿಂದ ಪೊರೆದೆ ವಿಜಯವಿಠ್ಠಲ
ರಾಯ ವೆಂಕಟನ ಒಲಿಮೆಯಿಂದಲಿ ಮೆರೆದೆ ೫

೨೨೪

ಗುರುವೇ ನಿಮ್ಮ ಮಹಿಮೆ ಅರಿವೇ ವಿಚಿತ್ರವೆಂದು
ಕರವೇ ವಂದಿಸಿ–ನಮಸ್ಕರಿಸಿ ಮಾತನುಸುರುವೆ ಪ

ಪರಮಾದರದಲಿ ಕರುಣ ಎನ್ನ ಮೇಲೆ
ಹರಹಿ ದುರುಮತಿಯ ಪರಿಹರಿಸುವುದು ಅ.ಪ.

ವಾತತನಯ ವಾರಿಜಾತ ಬಾಂಧವ ಸಂ
ಭೂತ ಸಹಾಯ ರಘುನಾಥನ್ನ ಪ್ರಿಯದೂತ
ಶಾತಕುಂಭ ಮಕುಟ ಶೀತಕರ ಕುಂಡಲ–
ತೀತ ಸುಂದರ ಕಾಯ–ಜಾತ ಶರವರ್ಜಿತ
ದಾತನಿಂದಲಿ ಬಹಳಾತುರದಲಿ ಗು–
ರುತು ಪಡೆದು ನಿರ್ಭೀತನಾಗಿ ಪೋಗಿ
ಮಾತೆಗೆರಗಿ ಖಳವ್ರಾತವ ಘಾತಿಸಿ
ಪ್ರೀತಿಯಿಂದಲಿ ನಿಜರಾತಿಯ ತಣಿಸಿದ ೧

ಪಾಂಡುತನಯ ಗಿರಿ ಖಂಡಿತ ಶತಶೃಂಗ
ಮಂಡಲದೊಳಗೆ ಉದ್ದಂಡ ವಿಷವನುಂಡು
ಕುಂಡಲಿಯಿಂದ ಕೈಗೊಂಡು ಮನ್ನಣೆಯ
ಚಂಡಗದೆಯ ದಿಟ್ಟ ಗಂಡುಗಲಿ ಪ್ರಚಂಡ

ಹಿಂಡು ಖಳರ ಶಿರ ಚೆಂಡಾಡಿ ಗುರು ಕೋ
ದಂಡ ರುದ್ರನ ಮುಂಕೊಂಡು ಭಜಿಸಿ ರಣ
ಮಂಡಲದೊಳು ಜಗಭಂಡನ ಕರುಳನು
ದಂಡೆಯ ಮುಡಿಸಿದ ಖಂಡ ಪ್ರತಾಪ ೨

ದ್ವಿಜನ ಉದರದಲ್ಲಿ ಸೃಜಿಸಿ ಮೆರೆದೆಯೊ
ತ್ರಿಜಗದೊಳಗೆ ಶುದ್ಧ ಸುಜನಾಂಬುಧಿಗೆ ಚಂದ್ರ
ಕುಜನ ಮತ ಭುಜಂಗ ದ್ವಿಜರಾಜನೆನಿಸಿದೆ
ಅಜನ ಪಿತನ ಪಾದಾಂಬುಜವ ಬಿಡದೆ ನಿತ್ಯ-

ಭಜಿಸುವೆ ಯತಿ ದಿಗ್ವಿಜಯ ಮೂರುತಿ ಸುರ-
ವ್ರಜವ ಪಾಲಿಪ ಪಂಕಜ ಭವ ಪದವಿಯ
ನಿಜವಾಗಿ ಕೈಗೊಂಡು ಋಜುಗಣದಧಿಪ ತಿ
ವಿಜಯವಿಠ್ಠಲನಂಘ್ರಿರಜವನು ಧರಿಸಿದ ೩

೨೨೫

ದಾಶರಥ ಪಾದಸರಸಿಜ ಮಧುಕರ
ಸಮೀರಜ ಹನುಮ ಎನ್ನ ಪ್ರಾಣಾಪದಕಾ ಪ

ಶಿರಸನಾ ಮಗಗೊಲಿದು ರಾಮಚಂದ್ರನ
ಶಿರಿಚರಣದಲಿ ಮಸ್ತಕವನಿಟ್ಟ ಹೊಂತಕಾರಿ
ಸುರಪನಂದನನ ಕೊಲ್ಲಿಸಿದ ನಿರುತ ಉದಾರಿ
ಪರಮ ನಿನ್ನಂಘ್ರಿಯವಾರಿ ಸತತ ಶಿರದಲಿ
ಧರಿಸುವೆನು ರಿಪುನಿಕರ ಮಾರೀ ೧

ಉಂಗುರುವ ಕೊಂಡು ಸರ್ರನೆ ಸಾಗರ ಹಾರಿ
ತುಂಗ ಮಹಿಮಳಿಗೆ ವಂದಿಸಿ ಗುರುತನೆ ತೋರಿ
ಸಂಗಡಲೆ ಯಿತ್ತು ನಂದನ ಕಿತ್ತೆ ಬಲು ಮೀರಿ
ಸಂಗರಕೆ ಬಂದ ವಿಕಾರಿಗಳ ನೋಡಿ
ಭಂಗಬಡಿಸಿದೆ ಅವರ ಬಲವೆಲ್ಲ ತೂರಿ ೨

ಸಭೆಯೊಳಗೆ ರಾವಣನ ರಕ್ತವನೆ ಕಾರಿಸಿದೆ
ನಭಚರರು ಕೊಂಡಾಡೆ ಪುರವೆಲ್ಲ ದಹಿಸಿದೆ
ಅಭಿವಂದಿಸಿ ಕುರುಹವರಿಯನ ಮುಂದುವರಿಸಿದೆ
ಅಬುಧಿಯನು ವೇಗ ಬಂಧಿಸಿದೆ
ಪರ್ವತವ ರಭಸ ಮಿಗೆ ತಂದು ಕಪಿಬಲವನೆಬ್ಬಿಸದೆ ೩

ದಾತನಿಗೆ ರಥವಾಗಿ ಚಲ್ಲಿರಿದು ಬೊಬ್ಬಿರಿದೆ
ಭೂತಳಕೆ ನೆಗ್ಗೊತ್ತಿ ಎದುರಾದವರ ತರಿದೆ
ನೀ ತಡೆಯದೆ ಪೋಗಿ ಮೈರಾವಣನ ಮುರಿದೆ
ಕೋತಿಗಳೊಳಗೆ ನೀ ಮೆರೆದೆ ವೇದ
ವಿಖ್ಯಾತನೆ ರಾಮ ಸಹಭೋಜದಲಿ ನೆರೆದೆ ೪

ಬಲವನು ಬೆಳಿಸಿ ವಾರಿಧಿಯ ಆಚೆಗೆ ಬಲವ
ಆಲಸಗೈಸದಲೆ ದಾಟಿಸಿದೆ ಬಲು ಛಲವಾ
ವಾಲಯದಲಿ ಮಾಡಿ ವೈರಿದಳವನು ಗೆಲುವಾ
ಕಾಳಗದೊಳು ನಿನ್ನ ಬಲವ ಕೊಂಡಾಡಿದವರು
ಮೂಲೋಕದೊಳಗೆ ಸವಿಯದು ಬಲು ಚೆಲುವಾ ೫

ಶತಮೌಳಿಯನು ಕೊಲಿಸಿ ಸತ್ಕೀರ್ತಿಯನು ಪಡೆದೆ
ಪ್ರತಿಕಕ್ಷಿ ನಿನಗಿಲ್ಲವೆಂದು ಸತ್ಯವ ನುಡಿದೆ
ಸತತದಲಿ ಕಾಪಾಡು ಎನುತ ಪಾದವ ಪಿಡಿದೆ
ಮತಿಯಲಿಡು ಎಂದು ಬೇಡಿದೆ ಅಭಯವ
ಚತುರ ಫಲದಾಯಕನೆ ದಯಮಾಡು ಬಿಡದೆ ೬

ಕಿಂಪುರುಷ ಖಂಡದಲಿ ನಿಜಮೂರುತಿಯ ಧ್ಯಾನ
ಇಂಪಾಗಿ ಮಾಡುವ ಅಂಜನೆಯನಂದನಾ
ಲಂಪಟವೆ ಸಾಕು ನಿನ್ನಯ ಸುರದ್ರುಮ ಚರಣ
ಸಂಪಿನಲಿ ಪೊಂದಿಸನುದಿನ ಎನ್ನ ಗುರು
ಸಂಪತ್ತು ವಿಜಯವಿಠ್ಠಲನಲ್ಲಿ ಪ್ರಾಣಾ ೭

೨೨೬

ನಂಬಿದೇ ನಿನ್ನಯ ಪಾದ ಮುಖ್ಯ ಪ್ರಾಣಾ
ನಂಬಿದೇ ನಿನ್ನಯ ಪಾದಾ
ಡಂಬರ ತೊಲಗಿಸಿ
ಡಿಂಬದೊಳಗೆ ಹರಿಯ ಬಿಂಬ ಪೊಳೆವಂತೆ ಮಾಡೊ ಪ

ಇಪ್ಪತ್ತು ಒಂದು ಸಾವಿರ ಐದೊಂದು ನೂರು
ಅಪ್ರತಿಹಂಸಮಂತ್ರ ತಪ್ಪದೆ ದಿನದಿನ
ಒಪ್ಪದಿಂದಲಿ ಭಜಿಸಿ ತಪ್ಪಿಸೋ ಭವವಾ ಸ
ಮೀಪದ ಜೀವ ಕೊ ಅಪ್ಪನಂದದಿ ಪುಣ್ಯ
ವಪ್ಪಂತೆ ಕರುಣಿಸೊ
ಕಪ್ಪುವರ್ಣನ ಕೂಡಪ್ಪಿಸಿ ಪಾಲಿಸೋ ೧

ಹತ್ತೇಳು ಎರಡಾಯುತ ನಾಡಿಯೊಳು
ಸುತ್ತಿ ಸೂತ್ರವ ಮಾರುತಾ
ಉತ್ತರ ಪಾಲಿಸೋ ಉತ್ತಮಣದಲ್ಲಿ ನೆತ್ತಿಯದ್ವಾರದಿಂದ
ಎತ್ತಮರಿಯಲೀ ಸದದೆ ತತ್ತುವರೊಳು ಜೀವೋ
ತ್ತಮನೆ ಸತ್ ಚಿತ್ ಎನಗೆ ಕೊಡು
ಉತ್ತರ ಧರಿಸೋ ೨

ಅಂತರಂಗದಿ ಉಸುರಾ ಹೊರಗೆ ಬಿಟ್ಟು
ಅಂತರಂಗಕ್ಕೆ ಸೇರುವ ಪಂಥದೊಳು ನೀನೆ
ಕಂತುಜನಕನಲ್ಲಿ ಮಂತ್ರಿ ಎನಿಸಿ ಸರ್ವ
ರಂತರ್ಯಾಮಿ ಆಗಿ
ನಿಂತು ನಾನಾಬಗೆ ತಂತು ನಡಿಸುವ
ಹೊಂತಕಾರಿ ಗುಣವಂತ ಬಲಾಢ್ಯ ೩

ಪಂಚಪರಣ ರೂಪನೆ ಸತ್ವ ಕಾಯಾ
ಪಂಚೇಂದ್ರಿಯಗಳ ಲೋಪನೆ
ಮುಂಚಿನ ಪರಮೇಷ್ಟಿ ಸಂಚಿತಾಗಾಮಿ ಬಿಡಿಸಿ
ಕೊಂಚ ಮಾಡೋ ಪ್ರಾರಬ್ಧ ವಂಚನೆ ನೆನೆದೊ

ಅಂಚಗಂಚಿಗೆ ಪರಪಂಚವೆ ಓಡಿಸಿ
ಪಂಚವಕ್ತ್ರ ಹರಿ ಮಂಚದ ಗುರುವೇ ೪

ಯೋಗಾಸನದೊಳಿಪ್ಪ ಯಂತ್ರೋದ್ಧಾರಾ
ಭಾಗವತರಪ್ಪಾ ಯೋಗಿಗಳೀಶಾ ವ್ಯಾಸಾ
ಯೋಗಿಗೊಲಿದ ವ್ಯಾಸಾ ಶ್ರೀ
ತುಂಗಭದ್ರಾ ವಾಸಾ ಬಾಗುವೆ ಕೊಡು ಲೇಸಾ
ಶ್ರೀಗುರು ವಿಜಯವಿಠ್ಠಲನ ಪಾದಕೆ
ಬಾಗುವ ಭವದೂರ ಜಾಗರ ಮೂರುತಿ ೫

೨೨೭

ಪವಮಾನ ಜಗದ ಪ್ರಾಣ ಸಂಕರುಷಣ
ಭವನೇ ಭಯಾರಣ್ಯದಹನ ಪ

ಶ್ರವಣವೆ ಮೊದಲಾದ ನವವಿಧ ಭಕುತಿಯ
ತವಕದಿಂದಲಿ ಕೊಡು ಕವಿಗಳ ಪ್ರೀಯ ಅ.ಪ.

ಹೇಮ ಕಚ್ಚುಟ ಉಪವೀತ-ಧರಿಪ ಮಾರುತ
ಕಾಮಾದಿ ವರ್ಗರಹಿತ
ವ್ಯೋಮಾದಿ ಸರ್ವವ್ಯಾಪುತ-ಸತತ ನಿರ್ಭೀತ
ರಾಮಚಂದ್ರನ ನಿಜದೂತ
ಯಾಮ ಯಾಮಕೆ ನಿನ್ನರಾಧಿಪುದಕೆ
ಕಾಮಿಪೆ ಎನಗಿದ ನೇಮಿಸಿ ಪ್ರತಿದಿನ
ಈ ಮನಸಿಗೆ ಸುಖಸ್ತೋಮವ ತೋರುತ
ಪಾಮರ ಮತಿಯನು ನೀ ಮಾಣಿಪುದು ೧

ವಜ್ರ ಶರೀರ ಗಂಭೀರ-ಮಕುಟಧರ
ದುರ್ಜನವನ ಕುಠಾರ
ನಿರ್ಜರಮಣಿ ದಯಾ ಪಾರಾ-ವಾರ ಉದಾರ
ಸಜ್ಜನರಘ ಪರಿಹಾರ
ಅರ್ಜುನಗೊಲಿದಂದು ಧ್ವಜವಾನಿಸಿ ನಿಂದು

ಮೂರ್ಜಗವರಿವಂತೆ ಗರ್ಜನೆಮಾಡಿದೆ
ಹೆಜ್ಜೆ ಹೆಜ್ಜೆಗೆ ನಿನ್ನ ಅಬ್ಜಪಾದದ ಧೂಳಿ-
ಮೂರ್ಜನದಲಿ ಭವವರ್ಜಿತನೆನಿಸೊ ೨

ಪ್ರಾಣ ಅಪಾನ ಉದಾನ-ವ್ಯಾನ ಸಮಾನ
ಆನಂದ ಭಾರತೀರಮಣ
ನೀನೆ ಯಾಮ ಯಾಮಕೆ ಜ್ಞಾನ
ಧನಪಾಲಿಪ ವರೇಣ್ಯ
ನಾನು ನಿರುತದಲಿ ಏನೇನನೆಸಗಿದೆ
ಮಾನಸಾದಿ ಕರ್ಮ ನಿನಗೊಪ್ಪಿಸಿದೆನೊ
ಪ್ರಾಣನಾಥ ಸತ್ಯ ವಿಜಯವಿಠ್ಠಲನ
ಕಾಣಿಸಿ ಕೊಡುವುದು ಭಾನು ಪ್ರಕಾಶ ೩

೨೨೮

ಪವಮಾನಾ ಮದ್ಗುರವೆ ಪವಮಾನಾ ಪ

ಪವಮಾನಾ ಗುರುವೆ ಪರಾಕು । ನಾನು ।
ವಿವರಿಸುವೆನು ಕೇಳು ವಾಕು ॥ ಆಹಾ ।
ತವಕದಿಂದಲಿ ಸಂಭವಿಸುವ ಮತಿಯಿತ್ತು ।
ಭವದಿಂದ ಕಡೆಗಿತ್ತು ಅ.ಪ.

ಆಶ್ರಿತಜನ ಕಲ್ಪವೃಕ್ಷಾ । ನಿನ್ನ ।
ಆಶೆಮಾಡಿದೆ ಬಲು ದೀಕ್ಷಾ ।
ಗುಣರಾಶಿವಿರಾಗ ಪ್ರತ್ಯಕ್ಷ । ವಾಗಿ ।
ದಾಸತ್ವ ಕೊಡು ಬಲುದೀಕ್ಷಾ ॥ ಆಹಾ ॥
ಏಸು ಜನ್ಮಗಳಿಂದ ।
ದೋಷವ ಕಳೆದು ಸಂ ।
ತೋಷವಾಗುವ ಕರ್ಣ ।
ಭೂಷಣ ಕೃಪೆ ಮಾಡೊ ೧

ಜ್ಞಾನ ಪ್ರಾಣೋತ್ತಮ ರೂಪ । ನಿನ್ನ ।
ನಾನು ನಂಬಿದೆನೊ ಪ್ರತಾಪ । ಸುರ ।
ಧೇನು ಭಕ್ತರಿಗೆ ಸಮೀಪ । ಜಗ ।
ತ್ರಾಣ ಕಪಿಕುಲ ದೀಪ ॥ ಆಹಾ ॥
ಆನಾದಿಯಲಿ ಬಂದು ।
ಜ್ಞಾನವ ನೋಡಿಸಿ ।
ಮಾನಸದಲಿ ಭೇದ ।
ವನ್ನು ಕರುಣಿಸು ನಿತ್ಯಾ ೨

ಹರಿದಾಸರೊಳು ಅಗ್ರಣಿಯೆ । ನೋಡು ।
ಸುರರೊಳು ನಿನಗಾರು ಯೆಣೆಯಾ । ಚಿಂತಿ ।
ಪರಿಗೆ ಆವಾವಾ ಹೊಣೆಯೇ । ಆಹಾ ।
ಕರವ ಮುಗಿವೆ ಸಂ ।
ತೈಸು ಸ್ವಧರ್ಮವ ।
ಮೊರೆ ಹೊಕ್ಕವರ ವಿ ।
ಸ್ತರವಾಗಿ ಪ್ರತಿದಿನ ૩

ತತ್ವೇಶ ಜನರೆಲ್ಲ ನೆರೆದು । ಅಹಂ ।
ಮತಿಯಲ್ಲಿ ಸತ್ಕರ್ಮ ಮರೆದು । ನಿನ್ನ ।
ನುತಿಸದೆ ಅತಿಶಯ ಜರೆದು । ತಮ್ಮ ।
ಗತಿಯೆಲ್ಲ ಅಲ್ಲಲ್ಲೆ ಮರೆದು ॥ ಆಹಾ ॥
ಚತುರಾನನ ಶ್ರೀ ।
ಪತಿನೋಡುತಲಿರೆ ।
ಪ್ರತಿಕಕ್ಷಿಯಲ್ಲಿ ಸಂ ।
ತತಿಯೆನಿಸಿಕೊಂಡೇ ೪

ಇಂದ್ರಿಯಂಗಳ ನಿಯಾಮಕನೇ । ಗುಣ ।
ವೃಂದ ನಿರ್ಜರ ನಾಯಕನೆ । ಪಾಪ ।
ಸಿಂಧು ಬತ್ತಿಪ ಪಾವಕನೆ । ನಿಜ ।
ಬಂಧು ಸಂಶ್ರಿತ ತಾರಕನೇ ॥ಆಹಾ ॥

ಇಂದು ಮಹಾದಯ ।
ದಿಂದ ಗಂಗೆಯ ಕರ ।
ತಂದು ಉದ್ಧರಿಸಿದ ।
ಇಂದ್ರಪ್ರಸ್ತನೇ ೫

ಇನ್ನಾದರು ಕೇಳು ವಾಕು । ದೇವ ।
ಯೆನ್ನ ಕುತ್ಸಿತ ಮನ ನೂಕು । ಮುನ್ನೆ ।
ಘನ್ನ ಭಕುತಿಯ ನೀಡಬೇಕು । ಇಂತು ।
ಪುಣ್ಯಮಾಡಿಸಿ ಬಿಡದೆ ಸಾಕು ॥ಆಹಾ ॥
ಕಣ್ಣುಕಾಣದೆ ಘೋರಾ ।
ರಣ್ಯದಿ ಬಿದ್ದಿಹೆ ।
ಬನ್ನ ಬಡಿಸುವದು ।
ನಿನ್ನ ಧರ್ಮವಲ್ಲಾ ೬

ಎಣೆಗಾಣೆನೊ ನಿನ್ನ ಪ್ರೇಮ । ಅನು ।
ಗುಣ್ಯವಾಗಲಿ ನಿಸ್ಸೀಮ । ಸುಪ್ರ ।
ಸನ್ನ ಶುದ್ಧಾತ್ಮ ಧಾಮ । ಗುಣ ।
ಪೂರ್ಣ ಮಧ್ವ ಹನುಮ ಭೀಮ ॥ಆಹಾ॥
ಪನ್ನಂಗಾರಿ ವಾ ।
ಹನ್ನ ವಿಜಯವಿಠ್ಠ ।
ಲನ್ನ ಮೂರುತಿಯನ್ನು ।
ನಿನ್ನೊಳು ತೋರಿಸೋ ೭

೨೨೯

ಪಾಲಿಸು ಅವಾಂತರೇಶಾ ಪಾವನ ಕೋಶಾ
ಪಾಲಾಬ್ಧಿ ಶಯನನ ದಾಸಾ
ಕಾಲ ಜನಕ ವಿಶಾಲಮಹಿಮಾರ್ಯೆಯಿ
ಲೋಲಾ ಜೀವೋತ್ತಮ ಕಾಲಕಾಲಕೆ ಎನ್ನ ಪ

ಪುಣ್ಯಗಾತುರ ಮಾರುತಾ ಪುಂಜಿತ ಜೀವಾ
ಗಣ್ಯರಹಿತ ಗುಣಜಾತಾ
ಮನ್ಯುದಾನವ ಕುಲಘಾತಾ ಮಹಾತತ್ವ ದಾತಾ
ಸನ್ನ್ಯಾಯಮಣಿ ಶ್ರುತಿಗೀತಾ
ಧನ್ಯನ ಮಾಡೊ ಅನ್ಯನೇನೊ ನಾನು ಕಾ
ರುಣ್ಯದಿ ದುರಿತಾರಣ್ಯ ಮನ್ಮಥ ಲಾ
ವಣ್ಯ ಸರ್ವದಾತಾ
ಗುಣ್ಯ ಮನದಾ ಕಾರ್ಪಣ್ಯವ ಓಡಿಸಿ ೧

ದ್ವಿತೀಯ ನಿರ್ಜರವರೇಣ್ಯ ದೀನನುಗಣ್ಯ
ದಿತಿಜಾವಳಿಗೆ ಕಾಠಿಣ್ಯ
ಸತತ ಅಪ್ರತಿರಾಜ್ಯನ್ಯಾಸ ಚರಾಚರಮಾನ್ಯಾ
ತುತಿಸುವೆ ಕೇಳು ದೈನ್ಯ
ಗತಿ ನೀನೆ ಕ್ಷಿತಿಯೊಳಗಿತರರ ಕಾಣೆನೊ
ಸತಿಪತಿ ಮಿಗಿಲಾದ ತುತುವೇಶ ತತಿಗಳ
ಜಿತ ಸದ್ಗುರು ಭಾರಿತ ಪ್ರತಿಪಾದ್ಯ ಮಾರುತಿ
ಮತಿಯಲಿ ನಿನ್ನ ಮತದಲಿ ಪೊಂದಿಸಿ ೨

ವಿಕಸಿತ ಸದನಾ ಜ್ಞಾನ ವಿಶೇಷ ಧ್ಯಾನಾ
ಅಖಿಳ ವಿಚಾರ ನಿದಾನಾ
ಅಕಳಂಕವಾದ ಬಹುಮಾನಾ ಅಮೃತಪ್ರಾಣಾ
ಸಕಲಕ್ಕು ನೀನೇ ಪವಮಾನಾ
ಸುಖಸಾಗರ ಸುರನಿಕರವಿನುತ ಮಹಾ
ಭಕುತ ಭವಾಬ್ಧಿತಾರಕ ವಿಷಭಂಜನ
ಲಕುಮಿವಲ್ಲಭ ನಮ್ಮ ವಿಜಯವಿಠ್ಠಲನ್ನ
ನಖ ಕೊನೆ ಪೊಗಳುವ ಉಕುತಿ ನೀಡಿಂದು ೩

೨೩೦

ಪಿಡಿ ಎನ್ನ ಕೈಯ್ಯ ಮುಖ್ಯ ಪ್ರಾಣ
ಭುವನ ತ್ರಾಣ ಸದ್ಭವ ಪ್ರವೀಣ ಪ

ಶ್ಲೋಕ :
ಹೀನಾಹೀನ ವಿವೇಕವಿಲ್ಲದೆಸೆವಾ । ನಾನಾ ವಿಧ ಪ್ರಾಣಿ ಭ ।
ಜ್ಞಾನಾ ಜ್ಞಾನ ತ್ರಿಕಾಖಿಳ ಕ್ರಿಯೆಗಳು । ಹೇ ನಾಥ ನಿನ್ನಿಂದಲಿ ॥
ಏನಾಶ್ಚರ್ಯ ನಿವೇದಕೀಯ ನಿನಗೆ ಶ್ರೀನಾಥನ ಪ್ರೀತಿಗೆ
ನಾನಾ ರೂಪ ವಿಶಿಷ್ಟನಾದಿ ರಿಪುಸ್ಸೇನೇಯ ಸಂಹರಿಸಿಬ ೧

ಪದ:
ಏನ ಹೇಳಲಿ ನಿಜ ಸಂಶಯ ಜನರಾಸೆಯ । ಉದ್ಧರಿಸುವ ಬಗೆಯಾ
ಜ್ಞಾನ ಭಕುತಿ ವಿರಕ್ತಿಯಾ । ಕೋಟಿ ಮುಕ್ತಿಯಾ ।
ನೀ ಕೊಡುವಿ ಕಾಣಯ್ಯಾ । ಶ್ರೀ ನಾರಸಿಂಹನ ಪದಾಶ್ರಯಾ
ಗುಣ ಸಂಚಯ । ಮಾಡೊ ಎನ್ನಲ್ಲಿ ದಯಾ ।
ಹೀನನಾಗಿ ಪಾಪರಾಶಿಯ ।
ಮಾಡಿದೆನಯ್ಯಾ । ಮುಂದೇನೋ ಉಪಾಯ ೨

ಶ್ಲೋಕ:
ನೀನೊಬ್ಬಾನಲ್ಲದಾವ ದೇವತೆಗಳು । ದಾವಂಗೆ ಬಿಟ್ಟೀರ್ವರು ।
ಕಾವಾ ಮಾಯಾದಿ ವೊಸ್ಥವೆಂದು ಜನರು ।
ಜೀವಾತ್ಮಗೆ ಪೇಳ್ವಿರೊ ॥
ಶ್ರೀ ವತ್ಸಾಂಕನ ಆಜ್ಞೆಯಿಂದ ತನು ಬಿಟ್ಟಾವ್ಯಾಳಿಗೆ ಪೋಪಿಯೋ ।
ಆವಾಗೆಲ್ಲರು ಕೂಡಿ ಊರ ಹೊರಗೆ ದೇವೇಶ ಕೊಂಡೊಯ್ವರೋ

ಪದ:
ಕಂಸಾರಿ ಚರಣವ ಭಜಿಸದೆ । ನಿನ್ನ ನೆನೆಯದೇ ।
ದುರ್ವಿಷಯದಿ ಬರಿದೆ । ಸಂಸಕ್ತನಾಗಿ
ನಾ ಭ್ರಮಿಸಿದೆ ಬುದ್ಧಿಸಾಲದೇ ॥

ಬಹು ಪಾಮರನಾದೆ । ಸಂಶಯ ಬಿಟ್ಟಿನ್ನು ತಪ್ಪದೇ ।
ನಿನ್ನ ನಂಬಿದೆ । ಇನ್ನು ಬಿಡುವುದು ಚಂದೇ ।
ಸಂಸಾರದಲ್ಲಿ ಪದೇ ಪದೇ ದುಃಖಪಡಿಸದೆ । ಉದ್ಧರಿಸೆನ್ನ ತಂದೆ ೨

ಶ್ಲೋಕ :

ಶ್ರೀಶ ಪ್ರೀತಿಗೆ ಕೀಶನಾದೆ ರವಿಯ । ಗ್ರಾಸಕ್ಕೆ ಬೆನ್ನಟ್ಟಿದೆ ।
ಈಶಾಧೀಶರು ಆತಗಾಗಿ ನಿನಗೆ । ಕಾಶರಭವನ್ನಾಕಲು ॥
ಲೇಶಾಯಾಸವು ಆಗಲಿಲ್ಲ ನಿನಗೆ ಶ್ವಾಸಾ ಬಿಡದಾಯಿತೋ ।
ಆಶಾಪಾಶ ಸಮಸ್ತ ಮೂರುಜಗಕೇ । ಆ ಶಕ್ತಿ ಅತ್ಯದ್ಭುತ ೩

ಪದ:

ಅಂಜನೆಯುದರದಿ ಜನಿಸಿದಿ । ಹನುಮನೆನಿಸಿದಿ ।
ರಾಮದೂತ ನೀನಾದಿ
ಕಂಜನಾಭನ ಮಾತು ಕೇಳಿದಿ । ವನಧಿ ದಾಂಟಿದಿ ।
ಲಂಕಾಪುರವ ನೈದಿದೀ॥
ಅಂಜದೆ ಸೀತೆಯಾ ನೋಡಿದಿ । ಮಾತನಾಡಿದಿ ।
ಚೂಡಾರತ್ನವ ಪಿಡಿದಿ । ಬಂಧಿಸಿ ಮನವ ಸಂಚರಿಸಿದಿ ।
ಆರ್ಭಟಿಸಿ । ರಕ್ಕಸರ ಸೀಳಿದಿ ೩

ಶ್ಲೋಕ :

ಕನ್ಯಾ ದೇಶನ ಕಂಡು ಅವನ ಪುರವ । ಹವ್ಯಾದಗೆ ಅರ್ಪಿಸೀ ।
ಅವ್ಯಾಷ್ಟಾಯೆಂದ ವಿಭೀಷಣಾಲಯವನು । ಅವ್ಯಸ್ತ ನಿರೀಕ್ಷಿಸಿ ॥
ದೇವ್ಯಾದೇಶವ ಕೇಳಿ ಬಂದು
ರಘುರಾಮರ ದಿವ್ಯಾಂಘ್ರಿಗೇ ವೊಂದಿಸೀ
ಸೇವ್ಯ ನಿಜ ಕೃತ್ಯ ಅರ್ಪಿಸಿದೆಯೊ । ಅವ್ಯಾಜ ಭಕ್ತಾಗ್ರಣೇ ೪

ಪದ:

ಸಹ ಭೋಗ ಕೊಟ್ಟನು ರಾಘವ । ನಿನಗೆ
ಯೋಗ್ಯವ । ಬದಲು ಕಾಣದೆ ದೇವಾ

ಅಹಿ ಪಾಶಾ ಮೋಹಿತ ಬಂಧವಾ । ಜನ
ಸದ್ಭಾವ । ನೋಡಿ । ಗಂಧಮಾದನವ ।
ಮೋಹಿಸಿ ಕ್ಷಣಕೆ ಬಂದು ಪೊದಗುವ । ನಿನ್ನ
ವೇಗವ । ಪೊಗಳಲಾರೆನು ಭವ ।
ಮಹಿತ ಚರಣ ಸರಸಿರುಹವ । ನಿನ್ನ ಚರಣವ ।
ಮೊರೆ ಐದಿವರವ ೪

ಶ್ಲೋಕ :
ಕುಂತಿದೇವಿಯು ಮಂತ್ರದಿಂದ ಕರೆಯೇ ।
ಸಂತುಷ್ಟನಾಗಿ ಸ್ವಯಂ ।
ಕಾಂತಸ್ಪರ್ಶನ ಮಾತ್ರದಿಂದ ಧರೆಯೊಳ್ ।
ನಿಂತ್ಹಾಂಗೆ ನೀ ಹುಟ್ಟಿದಿ ।
ಸಂತಾಪಪ್ರದನಾಗಿ ದುಷ್ಟ ಮಣಿಮ್ಮಂತಾದ ದೈತ್ಯಾಘಕೇ ।
ಎಂಥಾ ದೇಹವೊ ನಿಂದು ಅದ್ರಿ ಪುಡಿಯಾ ।
ಎಂಥ ಬಲವೆ ನಿನ್ನದು

ಪದ:
ನಾಮದಿಂದಲಿ ನಿನಗೆಲ್ಲರು । ತ್ರಿಜಗದ್ಗುರು ।
ಭೀಮಾಸೇನನೆಂಬುವರು ।
ಭೂಮಿಯೊಳಗೆ ನಿನಗೊಬ್ಬರು । ಸಮರಿಲ್ಲರು ।
ಧೃತರಾಷ್ಟ್ರನ್ನ ಸುತರು ।
ಭೀಮನ್ನ ಕೊಲ್ಲಬೇಕೆಂಬೋರು । ವಿಷವನಿತ್ತರು ॥
ಸರ್ಪಗಳ ಕಚ್ಚಿಸಿದರು । ಕ್ಷೇಮವಾಯಿತು ಏನಾದರು ।
ಭಕ್ತ ಸುರತರು । ಮೋಕ್ಷ ಮಾರ್ಗವ ತೋರು ೫

ಶ್ಲೋಕ :
ಕಕ್ಷಾ ವಾಸಕ ಋಕ್ಷ ಕೇಸರಿ ಮಹಾ । ವೃಕ್ಷಾದಿ ಸಂಹಾರಕಾ ।
ಲಾಕ್ಷಾಗಾರವು ಬಿಟ್ಟು ನಿನ್ನವರ ನಾ । ಸುಕ್ಷೇಮದಿಂದ್ವೈದಿಸಿ ।
ಭಿಕ್ಷಾರ್ಥಾವಿನಿಯುಕ್ತನಾಗಿ ಬಕನಾ । ಲಕ್ಷಿಲ್ಲದೇ ಕುಟ್ಟಿದೀ ।
ಸಾಕ್ಷೀ ಮೂರುತಿ ಚಿತ್ರವೇ ನಿನಗದಧ್ಯಕ್ಷಗ್ರ ಸರ್ವೇಶಗಾ ೬

ಪದ :

ಭಾರತಿ ನಿನಗಾಗಿ ಬಂದಳು ವೇದವತಿಯಾಳು ।
ದ್ರುಪದಜೆ ಎನಿಸಿದಳು ।
ಘೋರ ದುಃಶಾಸನು ಮುಟ್ಟಲು । ಮೊರೆಯಿಟ್ಟಳು ದ್ವಾರರಾದಳು ।
ವರ ಸುಜನಾಭೀಷ್ಟ ಕೊಡುವಳು ।
ಧೀರನೆನವೆ ಹೃದಯದೊಳು ಹಗ
ಲಿರುಳು । ಭಜನೆಗಳಿಪ್ಪನಂಘ್ರಿಗಳು ॥ ೬

ಶ್ಲೋಕ :

ಎಲ್ಲಾ ದೈತ್ಯರು ಹುಟ್ಟಿ ಭೂತಳದಿ ನಿನ್ನಲ್ಲೆ ಪ್ರದ್ವೇಷದಿಂ ।
ದಿಲ್ಲೇ ಇಲ್ಲ ಮುಕುಂದನಾ ಗುಣಗಳು । ಸುಳ್ಳಷ್ಟು ಈ ವಿಶ್ವವೊ ॥
ಇಲ್ಲೆಂಧೇಳಲು ಸದ್ಗುಣಕ್ಕೆ ಗೊತ್ತಿಲ್ಲಾ ತಾನಾಗ ಈ ತತ್ವವೊ ।
ಅಲ್ಲಿಂದಚ್ಯುತನಾಜ್ಞೆಯಿಂದವನಿಯೋಳ್ । ಪುಲ್ಲಾಕ್ಷ ಮತ್ತೈದಿದಿ

ಪದ :

ಪಾಜಕ ಕ್ಷೇತ್ರದಿ ಜನನವನು ಮತ್ತೈದಿ ನೀನು ।
ಮಧ್ಯಗೇಹಾರ್ಯನ ಸೂನು ।
ರಾಜತಾಸನದಲ್ಲಿ ಇದ್ದನು । ಒಬ್ಬ ಯತಿಪನು ।
ಅಚ್ಯುತಪ್ರೇಕ್ಷ ಎಂಬುವನು । ಸ್ರಜನಿಯನು ಸೇವಿಸಿ ತಾನು ।
ವರ ಪಡೆದನು । ಭಾವೀ ಶಿಷ್ಯ ನಿನ್ನನು ।
ದ್ವಿಜನಾಗಿ ಬಂದು ಆ ಯತಿಯನು ಪೊಂದಿದಿ ನೀನು ।
ತುರ್ಯಾಶ್ರಮವನು ಯಿನ್ನು ೭

ಶ್ಲೋಕ :

ದುರ್ವಾದ್ಯುಕ್ತ ಭಾಷ್ಯ ಸಂಘಗಳನು । ಸರ್ವೇದ್ಯನೀ ಖಂಡಿಸೀ ।
ಸರ್ವಾನಂದದಿ ದಿವ್ಯ ಶಾಸ್ತ್ರಗಳನು । ವಾಗಾಜಯಂ ನಿರ್ಮಿಸಿ ॥
ಪೋರ್ವಾನಂದ ಸುತೀರ್ಥ ಮಧ್ವ ಎನಿಸಿ ।
ಗರ್ವೋಚಿಸಲ್ಲೋಕಕೆ ।
ನಿರ್ವಾಣಕ್ಕೆ ಸುಮಾರ್ಗ ತೋರಿದಿ ಮಹಾ ।
ಸರ್ವಜ್ಞ ಚೂಡಾಮಣಿ

ಪದ:

ಕೃಷ್ಣನು ಗೋಪಿಚಂದನದಲ್ಲಿ ಬಂದು ಧರೆಯಲ್ಲಿ ।
ರಜತಪೀಠ ಪುರದಲ್ಲಿ ।
ವಿಷ್ಣು ತಾ ನಿಂದನು ನಿನ್ನಲ್ಲಿ । ದಯದಿಂದಲ್ಲಿ ।
ನೀ ಕಲಿಯುಗದಲ್ಲಿ ।
ವೃಷ್ಣೀಶನ ಮಾಡಿಸುತಲ್ಲಿ ಅನುದಿನದಲ್ಲಿ ।
ಇರುವಿ ಮತ್ತೊಂದರಲ್ಲಿ ।
ವಿಷ್ಣು ಕೃಪೆಯು ಎಷ್ಟು ಹೇಳಲಿ ದಿನದಿನದಲ್ಲಿ ।
ಪಟ್ಟವಾಳಿದಿ ಅಲ್ಲಿ ।
ವಿಠ್ಠಲನ ವಿಜಯಪಾದದಲ್ಲಿ ಅನುದಿನದಲ್ಲಿ ೮

೨೩೧

ಪ್ರಾಣ ನಿನ್ನಂಘ್ರಿ ಸಿರಿರೇಣು ಕಾಣು
ತ್ರಾಣ ತ್ರಾಹಿ ತಾತಾ ದಾತಾ । ನಾನಾ
ಯೋನಿಯಲಿ ಬಂದೆ ನೊಂದೆ ಗುರುವೆ
ನೀನೆ ಗತಿಯೊ ಪ

ಭರತ ಭಾರತಿರಮಣ ಭಾರತ ಪ್ರತಿಪಾದ್ಯ
ಭರತ ಕುಲೋತ್ತಮ ಭವ್ಯ
ಭರದಿಂದಲಿ ಎನ್ನಭಾರ ವಹಿಸುವ
ಭರಣ ಭಾರದ್ವಾಜಾತ್ಮಜ ಭಾರಭಂಗಾ ೧

ಗತಿ ಅಗತಿ ಗಮನಗರ್ಭ ಸ್ವರ್ಗ ನರಕ ಈ
ಕ್ಷಿತಿ ಲೋಕಾಂತದಲ್ಲಿ ಬಳಲಿ
ಮತಿಯ ಕಾಣದೇ
ಮಂತ್ರಿ ರಾಜ ಮಹಾತತುವೇಶ ಬಲವತ್ವ್ಸರೂಪ ೨

ಪಂಚಾಹುತಿಯಲಿ ಹಾಕದಿರೋ ಜೀವೇಶ
ಸಂಚಿತಾವಳಿ ಸರ್ವನಾಶಾ

ಪಂಚದ್ವಾರದಲಿ ಶ್ರೀ ಹರಿಯ ಪೂಜಿಪ ಪುಣ್ಯ
ಸಂಚಕನೆ ಪುರುಷಾಕಾರನೀಯೋ ೩

ಅಪೂಪ ಬಹುರೂಪ ಹರಿಚಾಪ ಪ್ರತಾಪ
ಕಪಿಕುಲಾಂಬುಜ ದಿನಪ ಸುರಪ
ರಿಪು ವಿಪಿನಕಾಲ ಮಹಾ
ಗುಪುತ ವ್ಯಾಪ್ತ ಸುಪ್ತಿ ಸ್ವಪನ ಜಾಗ್ರುತಕಾರ್ಯಫಲದಾ ೪

ತೇಜೋದಕ ಅನ್ನ ಚತುರ್ವಿಂಶತಿ ತತ್ವದಲಿ
ರಾಜಿಸುವ ರಾಗವಿದೂರಾ
ವಾಜಿರೂಪ ವಾಶಿಷ್ಟ ವಂದ್ಯಾ ವರದಾ
ಮಜ್ಜಗದ್ಗುರು ಮುಖ್ಯ ಪ್ರಾಣಾ ೫

ಪೂರ್ವೋತ್ತರಂಗ ಸಂಧಿ ಸಂಧಾನ ವಿಶಿಷ್ಟಾ
ಈರ್ವ ಸ್ಥಾನದಲಿ ನೀನೇ
ಸರ್ವದಲಿ ಧ್ಯಾನವನು ಇತ್ತು ಪಾಲಿಸು ನಿತ್ಯ
ಗೀರ್ವಾಣ ಜ್ಯೇಷ್ಠ ಶ್ರೇಷ್ಠ ಮೂರ್ತಿ ೬

ಮಾನವ ಪವನ ಪವಮಾನ್ ಮಾನವ ರೂಪಾ
ಮಾನಾಭಿಮಾನಿಗಳೊಡಿಯಾ
ಆನಂದತೀರ್ಥಪದ ಭಕ್ತ ಅನಾಥಬಂಧು ವೈರಾಗ್ಯ ೭

ನಾಮಾದಿ ವಿಡಿದು ಪ್ರಾಣಕಳೆಗಳತನಕ
ಸಮಸ್ತ ಪರಮಾಣು ತಿಳಿಸೋ
ಕಾಮಿಸುವನೆ ಇದನೆ ಹೃತ್ಕಮಲದೊಳಗಿದ್ದ
ಸಾಮ ಸೂರ್ಯಸ್ಥಿತನೆ ಸೂತ್ರಾ ೮

ಇಪ್ಪತ್ತೆರಡು ಸ್ಥಾನದಲಿ ಪ್ರಭುವೆ ಜಗ
ದಪ್ಪ ಚತುರದ್ವಾರವಾಸ
ಅಪ್ರತಿಮಲ್ಲ ಶ್ರೀ ವಿಜಯವಿಠ್ಠಲನ್ನ
ಅಪ್ಪಿಕೊಂಡು ಮೆರೆದ ಧೀರಾ ೯

೨೩೨

ಭಾರತೀಶ ಮದ್ಭಾರ ನಿನ್ನದಯ್ಯ । ಕರುಣದಿ ಪಿಡಿ ಕೈಯ್ಯಾ ॥
ಪೂರೈಸೆನ್ನ ಮನೋಭಿಲಾಷೆ ಗುರುವೆ । ಭಜಕರ ಸುರತರುವೆದ್ಧ ಪ

ಹರಿಭಕ್ತಾಗ್ರೇಸರನೆ ಹನುಮಂತಾ । ಹರನುತ ಬಲವಂತಾ ।
ತರಣಿಕುಲಜ ಶ್ರೀರಾಮನ ಕೈಯಿಂದ । ಬಲುಸಂಭ್ರಮದಿಂದಾ ।
ಶರಧಿಯನು ದಾಂಟಿ ಸೀತಾಕೃತಿಯನ್ನ ನೋಡಿ ।
ರಣದೊಳಗೋಲ್ಯಾಡಿ ।
ದುರುಳ ರಕ್ಕಸರ ದುಷ್ಟ ದನುಜರ । ತರಿದೆ ಲೋಕೈಕ ಸಮರ್ಥಾ ೧

ಕುಂತಿ ಜಠರಾಂಭೋನಿಧಿ ಚಂದ್ರಮನೆ ರಾಜಾಗ್ರೇಸರನೆ ।
ಕಂತು ಜನತನಿಚ್ಛಾನುಸಾರವಾಗಿ । ರಣದೊಳಗೆ ಚೆನ್ನಾಗಿ ।
ನಿಂತು ದುಷ್ಟ ದುರ್ಯೋಧನಾದಿಗಳನು ಸಂಹರಿಸಿದಿ ನೀನು ।
ಭ್ರಾಂತಿ ಮನ ಜರಿವರೇನು ।
ಬಲ್ಲರಯ್ಯ ಕರುಣದಿ ಪಿಡಿಯೊ ಕೈಯಾ ೨

ನಡುಮನೆಯೆಂಬೊ ವಿಪ್ರನ ಮನೆಯಲ್ಲಿ । ಅವತರಿಸಿ ಚೆನ್ನಾಗಿ ।
ಮೃಡ ಸರ್ವೋತ್ತಮ ಹರಿಯೆ ತಾನೆಂದು । ಮಿಥ್ಯಾಜಗವೆಂದು ।
ನುಡಿವ ಜನರ ಮತಗಳನೆ ನಿರಾಕರಿಸಿ ಶಾಸ್ತ್ರವ ರಚಿಸಿ ।
ಒಡೆಯ ತಂದೆ ಶ್ರೀ ವಿಜಯವಿಠಲನ್ನ ಪೂಜಾಸಕ್ತನೇ ೩

೨೩೩

ಮಂಗಳಂ ಪ್ರಧಾನ ಮಾರುತಗೆ ಪ

ಮಂಗಳಂ ಪಾವನ ಮೂರುತಿಗೆ ।
ಮಂಗಳಂ ತ್ರಿವಿಧ ಸತ್ಕೀರ್ತಿಗೆ ।
ಮಂಗಳಂ ಸದ್ಗುಣ ಕೀರ್ತಿಗೆ ಅ.ಪ.

ಮುಕ್ಕೋಟಿ ರೂಪನಿಗೆ ರುಗ್ಮಮಣಿ ಹಾರನಿಗೆ ।
ಚಿಕ್ಕವನಾಗಿ ಪುರಪೊಕ್ಕವಗೆ ॥
ಸಿಕ್ಕಿ ವೈರಿಯ ಕೈಗೆ ರಕ್ಕಸರ ಎದೆಯಲ್ಲಿ ।
ನಿಕ್ಕಿಸಿದರಣದ ವಿಷ ಭೋಕ್ತನಿಗೆ ೧

ವೃಕೋದರ ಭೀಮಗೆ ವಿಶೋಕನೊಡೆಯಗೆ ।
ಬಕ ಜರಾಸಂಧ ಕೀಚಕ ವಧೆ ಮಾಡಿದಗೆ ॥
ಸಕಲ ದಳದೊಳಗೆ ನಾಯಕನೇ । ನೀ ।
ನೇ ಕಲಿಬಂಧಕ ಶಕುತಿಗೆದ್ದ ತಾರಕ ಚರಿತಗೆ ೨

ಒಂದೆ ಅಕ್ಷರದಿಂದ ನಂದ ಕೊಡುವವನಿಗೆ
ಒಂದೆರಡು ಮೂರಾರು ಮುರಿದವಗೆ ॥
ಒಂದೆ ದೈವ ನಮ್ಮ ವಿಜಯವಿಠ್ಠಲ ಕೃಷ್ಣನ್ನ ।
ವಂದಿಸುವ ಶ್ರೀಮದಾನಂದತೀರ್ಥಗೆ ೩

೨೩೪

ಮುಂಜಾನೆ ಎದ್ದು ಸಂಜೀವನೆನ್ನಿ ।
ಎಂದೆಂದಿನ ದುರಿತ ಪೋದವೆನ್ನಿ ಪ

ವಾಯುನಂದನನನೆನ್ನಿ । ವರವಜ್ರಕಾಯನೆನ್ನಿ ।
ರಾಯ ರಾಘವನ ಕಿಂಕರನೆನ್ನಿರೈ ।
ಛಾಯಾಗ್ರಿಯನ ಕೊಂದು ವನ ಕಿತ್ತಿದನೆನ್ನಿ ।
ಮಾಯದ ಲಂಕೆಯ ದಹನನೆನ್ನಿರೈ ೧

ಪಾಂಡು ಕುಮಾರನೆನ್ನಿ ಪಾಪ ಸಂಹಾರನೆನ್ನಿ ।
ಉಂಡು ವಿಷವ ತೇಗಿದಾನೆನ್ನಿರೈ ।
ಲೇಂಡ ಹಿಡಂಬಕನ ಕೊಂದನೆನ್ನಿ ।
ಚಂಡ ಕುರವಂಶಹತನೆನ್ನಿರೈ ೨

ಆನಂದತೀರ್ಥರೆನ್ನಿ ಅಮಿತ ಜೀವಾತ್ಮನೆನ್ನಿ ।
ಜ್ಞಾನಕೆ ಮೊದಲು ದೇವತಿಯನ್ನಿರೈ ।
ಆನಂದಮಯನಾದ ವಿಜಯವಿಠ್ಠಲರಾಯನ
ಧೇನಿಪ ಜನರಿಗೆ ಕೈವಲ್ಯ ಮಾರ್ಗವೆನ್ನಿ ೩

೨೩೫

ಮುಖ್ಯಪ್ರಾಣನೀತಾ । ನಮಗೆ ।
ಮುಖ್ಯ ಪ್ರಾಣನೀತ ನಮಗೆ ಮೂಲ ಗುರುವಿತ ಸತತಾ ।
ಸೌಖ್ಯವನು ಕರುಣಿಸಿ ನಮ್ಮ ಸಖ್ಯನಾಗಿ ಪೊರೆವನೀತಾ ಪ

ನಿಗಮವೇದ್ಯನೀತಾ ನಂಬಿಕೆಯನೀವ ಚರಣ ।
ಯುಗಳ ಪೂಜಿಪಾ ದುರಿತ ರಾಗಗಳ ಕಳೆನೀತಾ ।
ವಿಗಡ ವಿಷವನುಂಡನೀತಾ ।
ಹಗಲ ವಲ್ಲಭನಲ್ಲಿ ಸಂಮೊಗದವನಾಗಿ । ಓದಿದನೀತಾ ।
ಅಗಣಿತಾದವಿದ್ಯನೀತಾ ೧

ಜಗವ ಪಾಲಕನೀತಾ ಚತುರ । ಯುಗದಿ ಬಲುದಿಟ್ಟನೀತಾ ।
ಪೆಗಲಿಲಿ ಭೂಮಿ ಮಗಳ ಪತಿಯ । ಜಗಳದಲ್ಲಿ ಪೊತ್ತನೀತಾ ।
ಹಗೆಯ ದುಶ್ಯಾಸನ್ನ ವಡಲ ಬಗೆದು ಮುಂದೆ ಚತುರ ।
ಮೊಗದವನಾಗಿ ವಾನರ ಬಲವ ।
ನಗವ ತಂದೆತ್ತಿದವನೀತಾ ೨

ವರ ವೃಕೋದರನೀತಾ ಸಕಲ ಸುರರೊಳು ಬಲು ಪ್ರಬಲನೀತಾ ।
ಕರೆದು ಕೊಡುವ ಚತುರ ವಿಧದ ।
ಪರಮ ಮಂಗಳ ಪದದಿ ಭವದ ।
ಶರಧಿ ಬತ್ತಿಪನೀತಾ । ಒಮ್ಮೆ ಸ್ಮರಿಸಿದಾಕ್ಷಣ ಬರುವನೀತಾ ।
ಮರುತಾವತಾರನೀತಾ ತನ್ನ ।
ಶರಣ ಜನರ ಪೊರೆವನೀತಾ ೩

ಅಸಮ ಸಾಹಸನೀತಾ ಭಕ್ತರ ವಶವಾಗಿ ವೊಳಗಿಪ್ಪನೀತಾ ।
ವಸುಧಿ ಜನರ ಪುಣ್ಯದಂತೆ ಸಮ ವಿಷಮ
ನೋಡಿ ಪೊರೆವನೀತಾ ।
ಅಸುರ ಲಿಂಗಭಂಗವ ಮಾಡಿ ।
ಬೆಸನೆ ಮತವ ಕಟ್ಟುವನೀತಾ ।
ಹಸನಾದ ಮುನಿ ಈ ರಕ್ಕಸರೆದೆಯ ಶೂಲನೀತಾ ೪

ಜ್ಞಾನ ಪೂರ್ಣನೀತಾ ಶ್ರೀಮದಾನಂದತೀರಥನೀತಾ ।
ದಾನ ಧರ್ಮ ಪ್ರೇರಕನೀತಾ ।
ಪ್ರಾಣನೀತಾ ನಾಶವಿಲ್ಲದೆ ನಾನಾ ಮಹಿಮನೀತಾ ।
ನಮಗೇನೇನು ಕೊಡುವನೀತಾ ।
ಗಾನವಿಲೋಲ ವಿಜಯವಿಠ್ಠಲ ಧ್ಯಾನ ಮಾಳ್ಪನೀತಾ ೫

೨೩೬

ಯೆಂತು ವರ್ಣಿಸಲಮ್ಮ ಈ ಗುರುಗಳ ।
ಯಂತ್ರೋದ್ಧಾರ ನಾಗಿ । ಇಂತು ಮೆರೆವ ಯತಿಯಾ ಪ

ಕೋತಿ ರೂಪದಿ ಬಂದು । ಭೂತಳಕ್ಕೆ ಬೆಡಗು ತೋರಿ ॥
ಈ ತುಂಗ ಭದ್ರೆಯಲಿ । ಖ್ಯಾತನಾಗಿಪ್ಪ ಯತಿಯೊ ೧

ಸುತ್ತು ವಾನರ ಬಂಧ । ಮತ್ತೆ ಮಲೆಯಾಕಾರ ॥ ಮಧ್ಯ
ಚಿತ್ರಕೋಣ ಅದರೊಳು । ನಿತ್ಯದಲಿ ಮೆರೆವಾ ಯತಿಯಾ ೨

ವ್ಯಾಸರಾಯರಿಂದ ಬಂದು । ಈ ಶಿಲೆಯಾಳು ನಿಂತು ॥
ಶ್ರೀಶ ವಿಜಯವಿಠ್ಠಲನ್ನ । ಯೇಸು ಬಗೆ ವರ್ಣಿಪೆ ಯತಿಯಾ ೩

೨೩೭

ರಕ್ಷಿಸೆನ್ನ ರಮಣ ಪಂಚಪರಣಾ ಜಗತ್ಪಾವನಾ ।
ಮೋಕ್ಷದಾಯಕ ಯಂತ್ರೋದ್ಧಾರಕ ಹನುಮಂತಾ ಪ

ಗತಿಯ ಕಾಣೆನೊ ಸದಾ ಗತಿಯೊ ಎನ್ನ ಮನಸು ।
ಸತತ ಚಂಚಲ ದೂರ ಸ್ಥಿತಿಗೆ ಎರಗಿದೆ ಸು ।
ಕೃತವೆಲ್ಲ ಪೋಗಾಡಿದೆ ಇದಕೆ ಪ್ರಾಯಶ್ಚಿತ್ತ
ನಿನ್ನ ನಾಮವ ಬೇಡಿದೆ । ಹಾಡಿ ಪಾಡಿದೇ ।
ಪ್ರತಿದಿನ ದಯ ಮಾಡಿದೆ ವರವನ ಬೇಡಿದೆ ।
ಅತಿಶಯದಿಂದಲಿ ವಿಪ್ರಜಿತು ವಿರೋಧಿಯ ವಿಪ್ರ ೧

ನಾನಾ ಮಹಿಮ ಮಾನ ಪಾವನ ವಿದ್ಯಾ ಪ್ರ ।
ವೀಣಾರೋಚನಾ ವಿಜ್ಞಾನಾಭಿಮಾನಿ ನಿ ।
ದಾನ ತ್ರಿಜಗದ್ಗುರುವೆ ಸುರತರುವೇ ।
ನಾನೆ ನಿನಗೆ ಕರವ ಮುಗಿದು ಕರವೇ ।
ಧ್ಯಾನದಿಂದಲಿ ಬೆರವೆ ಸುತ್ಯನ್ಯರವೇ ।
ಜನನವ ಬಿಡಿಸೋದು ಗಾನವ ನುಡಿಸೋದು ೨

ವ್ಯಾಸಮುನಿ ವರದಾ ವಸುಧಿಯೊಳಗೆ ಮೆರೆದಾ ।
ಭಾಷಿಸುವ ಮಾತಂಗ ಪರ್ವತದಲಿ ತುಂಗಾ ।
ವಾಸಾ ವಾಸವ ವಿನುತ ಸತ್ವಕಾಯಾ ।
ಶಾಶ್ವತಾಗಮ ವಿಖ್ಯಾತಾ ನಿತ್ಯ ಜಪಿತಾ ।
ಲೇಸು ಸುದರುಶನ ತೀರ್ಥ ತೀರದಲ್ಲಿಪ್ಪಾ ।
ಶ್ರೀಶ ವಿಜಯವಿಠ್ಠಲನ ದಾಸನ ಮಾಡಿ ಮುನ್ನಾ ೩

೨೩೮

ವಂದಿಪ ಬನ್ನಿ ನೀವೆಲ್ಲ ಚನ್ನಾಗಿ ಕುಂತಿ
ಕಂದ ಭೀಮಗೆ ಸರಿಯಿಲ್ಲ
ಎಂದೆಂದಿಗೆ ಬಿಡದೆ ಬಂದಾ ಪ್ರತಿಬಂಧಕಗಳ
ನಿಂದಿರಗೊಳದಲೆ ಕಳಿವ ನಿತ್ಯ ಸುಳಿವಾ
ಅರಿತುಳಿವಾ ಸತ್ಕೀರ್ತಿ ಪೊಳವ ಪ

ಪ್ರಳಯಾಂತದಲ್ಲಿ ತಾನು ತಿಳಿದು ಸತ್ವ ಜೀವರ ನೆಲೆ
ಗೊಳಿಸುವೆನೆಂದು ಬಲುಹರುಷದಲಿ
ಜಲಜನಾಭನ ಚರಣಾಬ್ಜಕರಿಗೆ ಹಸ್ತ ಮುಗಿದು
ತಲೆಬಾಗಿ ಬಿನ್ನೈಸಿದಾತಾ ಗುಣಜಾತಾ
ಶ್ರುತಿವಿನುತ ಇದೇ ಕಾಯವನಿತ್ತ ೧

ಅಂಡಾಂತದೊಳು ತನ್ನ ಮಂಡೆ ಮೇಲೆ ಭಾರವ
ಕೊಂಡಾ ಸಹಸ್ರ ಫಣ ಕುಂಡಲಿಯ ಪೊತ್ತಾ
ಗಂಡುಗಲಿ ಕೂರ್ಮನಾ ಕೊಂಡಾಡಲು ನಮಗೆ
ತಂಡತಂಡದ ಮಹಾ ಸೌಖ್ಯವನೀವ ಸಖ್ಯಾ
ಸಗುಣಾಖ್ಯಾ ಗುರುವೀತನೇ ಮುಖ್ಯಾ ೨

ಭೀಮನೆ ಭೀಮಸೇನಾ ಭೀಮರಾಯನೆಂದು ನೇಮದಿಂದಲಿ
ನಾಮವ ನೆನೆದಡೆ ಪಾಮರ ಬುದ್ಧಿಯನ್ನು
ತಾಮಸರ ಕರ್ಮಸ್ತೋಮ ಓಡಿಸಿ ನಿತ್ಯ ಸತ್ಪುಣ್ಯ
ಅನುಗಣ್ಯ ಬಲು ಗುಣ್ಯಮಾಡಿಸುವನನ್ಯ ೩

ಹಿಂದೆ ರಘುನಾಥನ ಛಂದದ ದೂತನಾಗಿ
ಸಿಂಧು ಬಂಧಿಸಿ ಶತಕಂಧರನ ಕೊಲ್ಲಿಸಿ ಇಂದು ವಂಶದಲಿಂದು
ಮಂದಹಾಸದಲುದಿಸಿ ನಂದದಿಂದಲಿ ಕುರುಬಲವ
ಗೆದ್ದ ಚಲುವ ಭಕ್ತಗೊಲಿವ ಮೂಲೋಕವ ಗೆಲುವ ೪

ಜ್ಞಾನ ಭಕ್ತಿ ವೈರಾಗ್ಯ ನಾನಾ ಪ್ರಕಾರ ಭೀಷ್ಟೆ
ಮಾಣದೆ ಕೊಡುವನು ಅನಂತ ಕಾಲಕೂ ಆನಂದತೀರ್ಥನೀತಾ
ಪ್ರಾಣಾದಿ ಪಂಚರೂಪ ಶ್ರೀನಾಥ ವಿಜಯ
ವಿಠ್ಠಲಾ ಸಿರಿನಲ್ಲಾ ಪೊರೆವೆಲ್ಲಾ ಒಂದೆಂಬದಲ್ಲಾ ೫

೨೩೯

ವಾತನ್ನ ಜಯಾಜಾತನ್ನ ಲೋಕ–
ಪ್ರೀತನ್ನ ಸ್ತುತಿಸಿ ಖ್ಯಾತನ್ನ ಪ

ವಿಷವ ನುಂಗಿದ ಮಹಾಶೌರ್ಯನ್ನ ನಿತ್ಯ
ಅಸಮ ಸುಂದರ ಮತಿಧಾರ್ಯನ್ನ
ನಿಶಾಚರ ಕುಲದೋಷ ಸೂರ್ಯನ್ನ ಆರಾ
ಧಿಸುವ ಭಕ್ತರ ಸುಕಾರ್ಯನ್ನ ೧

ವಾನರ ಕುಲದೊಳು ಧೈರ್ಯನ್ನ ಮುದ್ದು
ಆನನ ಗೀರ್ವಾಣವರ್ಯನ್ನ
ಆನಂದ ವಿಜ್ಞಾನ ಚರ್ಯನ್ನ ದುಷ್ಟ –
ದಾನವರಳಿದತಿ ವೀರ್ಯನ್ನ ೨

ದ್ವಿಜರಾಜ ಕುಲಾಗ್ರಣಿ ಭೀಮನ್ನ ಮಹ
ದ್ವಿಜಕೇತ ನಂಘ್ರಿಗೆ ಪ್ರೇಮನ್ನ
ದ್ವಿಜರ ಪಾಲಿಸಿದ ನಿಸ್ಸೀಮನ್ನ ಕುರು
ವ್ರಜವ ಸದೆದ ಸಾರ್ವಭೌಮನ್ನ ೩

ಅದ್ವೈತ ಮತ ಕೋಲಾಹ ಲನ್ನ ವೇದ
ಸಿದ್ಧಾಂತ ಶುಭಗುಣ ಶೀಲನ್ನ
ಸದ್ವೈಷ್ಣವರನ್ನು ಪಾಲನ್ನ ಗುರು
ಮಧ್ವಮುನಿ ಗುಣಲೋಲನ್ನ ೪

ಚಾರುಚರಿತ ನಿರ್ದೋಷನ್ನ ಲೋಕ
ಮೂರರೊಳಗೆ ಪ್ರಕಾಶನ್ನ
ಧೀರ ವಿಜಯವಿಠ್ಠಲೇಶನ್ನ ಬಿಡದೆ
ಆರಾಧಿಪ ಭಾರತೀಶನ್ನ ೫

೨೪೦

ಶರಣು ವಾಯು ತನುಜ ಶರಣು ಭಾಸ್ಕರ ತೇಜ ।
ಶರಣು ರಾಜಾಧಿರಾಜ । ಶರಣು ಗೋಸಹಜ ।
ಶರಣಾರ ಸುರಭೋಜ ಪ

ಸೂತ್ರನಾಮಕ ದೇವ । ಸ್ತೋತ್ರ ಮಾಳ್ಪರ ಕಾವ ।
ಚಿತ್ರ ಮಹಿಮರ ಕಾವ ವಿ । ಚಿತ್ರ ಶರೀರ ಸ ।
ತ್ಪಾತ್ರನೆ ಸುಮನಸದಲಿಗರಳ ಹೇಮ ।
ಪಾತ್ರಿಯೊಳಗೆ ಸವಿದು ಶ್ರೀಪತಿಯ ಶತ ।
ಪತ್ರ ಪಾದವ ಕಾ । ಲತ್ರಯ ನೆನೆಸುವನೆ ೧

ಜ್ಞಾನ ಭಕುತಿ ವೈರಾಗ್ಯ ನೀ ನೀಯೋ
ಇದೆ ಭಾಗ್ಯ ನಾನಾವದೂ ಒಲ್ಲೆ ।
ಆ ನಾಮದ ಸೊಲ್ಲೆ ಮೇಣು ಪಾಲಿಪುದು ಮುಖ್ಯ ।
ಪ್ರಾಣಪಾವನ ಲೀಲ । ದಾನವರ ಕುಲಕಾಲ ।
ಏನೇನು ಮಾಳ್ಪಾಧಿಷ್ಠಾನದಲಿ ।
ನೀನೇ ನಾನೆಲ್ಲಿ ಎಣೆಗಾಣೆ ೨

ವಂದಿಸುವೆ ಜಗದ್ಗುರುವೆ । ಎಂದು ನಿನ್ನನು ಕರೆವೆ ।
ಮುಂದೆ ಈ ಜನ್ಮವು । ಹಿಂದೆ ಮಾಡಿ ನೇಮವು ।
ಪೊಂದಿಸು ಮೇಲುಗತಿ । ತಂದೆ ತಾಯಿ ಮಿಕ್ಕ ।
ಬಂಧು ಬಳಗವನೇಕ ಅಂದವೆಲ್ಲವು ನಿತ್ಯ ।
ವೆಂದೆ ಬಂದೆ ಸತ್ಯ ಕುಂದದೆ ಉದ್ಧರಿಸು ೩

ರಾಮಚಂದ್ರನ ದೂತ । ಸೌಮಿತ್ರಿ ಪ್ರಾಣ । ದಾತ ।
ರೋಮ ರೋಮ ಕೋಟಿ ಕಾಮ ಸಂಹಾರನೇ ।
ಭೂಮಂಡಲಧರನೆ ಭೀಮಶ್ಯೆನ ।
ಭೀಮ ರಿಪು ಗಂಟಲಗಾಣ । ತಾಮಸ ಜ್ಞಾನವಳಿ ।
ನೀ ಮುಂದೆ ಬಂದು ಸುಳಿ । ಶ್ರೀ ಮದಾನಂದತೀರ್ಥ ೪

ಶ್ರೀ ಸಪುತ ಕುಜನರ । ಭಾಷ್ಯ ಮುರಿದ ಧೀರ ।
ಭಾಸುರ ಕೀರ್ತಿ ಹಾರಾ । ದೋಷರಾಶಿ ದೂರ ।
ಹ್ರಾಸವಿಲ್ಲದ ಮಹಿಮ । ಶ್ರೀಶ ವಿಜಯವಿಠ್ಠಲನ್ನ ।
ದಾಸರೊಳಧಿಕ ನಿನ್ನ ಲೇಶವಾದರು ಬಿಡೆ ।
ನಾ ಸರ್ವಥಾ ಕರೆ । ತೋಷದಲಿಡುವುದೆನ್ನ ೫

೨೪೧

ಶುಭಸುಂದರ ಕಾಯಾ ವಿಭುವೆ ಸುರಗುರುರಾಯಾ ।
ಅಭಿವಂದಿಸುವೆನೊ ಜೀಯ್ಯಾ ಪ

ನಿರುತ ಅಂತರದೊಳು ಹರಿಗೆ ಸಮ್ಮೊಗನಾಗಿ
ಕರವ ಜೋಡಿಸಿ ಬಿನ್ನೈಪಾ ॥
ಗುರುವೆ ಎನ್ನಯ ಮಾತು ಕೇಳೊ ದುರಿತ ರಾಶಿ ।
ಪರಿಹಾರ ಮಾಡಿಸಯ್ಯಾ ೧

ಮಾರುತಿ ಸದಾಗತಿ ಭಾರತೀಪತಿ ಯತಿ ।
ಮಾರಾರಾತಿಗೆ ನೀ ಗತಿ ॥
ಮಾರುತ್ತರ ಕಾಣೆ ಮಾರುತಿ
ಮಾರಿಗಳಿಗೆ ನಿರುತ ಮಾರಕ ನೀನಹುದೋ ೨

ವಾಯು ಎನಗೆ ಸಂಪೂರ್ಣಾಯು ಪಾಲಿಸೊ ಸರ್ವ ।
ಸಾಯುಜ್ಯ ಸಾರೂಪ್ಯನೆ ॥
ಕುಯುಕ್ತಿ ಜನರ ಗದಾಯುದ್ಧದಿಂದಟ್ಟಿ ।
ಈ ಯುಗದೊಳು ಬಲವಾಗೋ ೩

ಕಾಯಯ್ಯಾ ಕರುಣದಿ ಕಾಯ ನಿನ್ನದು ಗುಣನಿ ।
ಕಾಯ ನಿರ್ದೋಷ ಕಾಯಾ ॥
ಕಾಯಾ ಐದಳಮಾನ । ಕಾಯ್ದ ಕಲಿವೈರಿ ।
ಕಾಯಜಪಿತನ ದೂತಾ ೪

ಪಂಕಜನಾಭನ ಅಂಕದಲ್ಲಿಪ್ಪ
ಬಿಂಕವ ತಾಳದಿರೊ ।
ಸಂಕರುಷಣ ನಮ್ಮ ವಿಜಯವಿಠ್ಠಲನ ಹೃ
ತ್ಪಂಕದೊಳು ತೋರಿಸೊ ೫

೨೪೩-೨

ಹನುಮಂತ ಬಲವಂತ ಅತಿ ಗುಣವಂತಾ ।
ಇನ ಶಶಿ ಶಿಖಿನೇತ್ರ ರೂಪ ಚರಿತ್ರ ।
ವನಚರ ಪುಂಗವ ಸನಕ ಸನಂದನ ।
ವಿನುತ ಹರಿಚರಣನನುದಿನ ಜಪಿತಾ ಪ

ವಾಯುಕುಮಾರ ದೋಷ ಗಜ ಕಂಠೀರಾ ।
ರಾಯ ಕಪಿಗೆ ಹರಿಯಾ । ತೋರಿದ ಸಿರಿಯಾ ।
ಶ್ರೀಯರಸನ ನಾಮ ಸವಿದ ನಿಸ್ಸೀಮ ।
ಪ್ರಿಯ್ಯಾದಿಕೊಂಡು ಗುರುತು ಸಾಗರನರಿತು ।
ಮಾಯಾಛಾಯಾ ಗ್ರೀಯಾ ನೋಯ ।
ಸಾಯಬಡದ ಸೀತೆಯ ಮುಂದೆ ನಿಂದು ।
ತೋಯಜ ಕೈಯಿಂದಾಯತ ಮುದ್ರಿಕುಪಾಯದಿ ಕೊಂಡ ಸ ।
ಮಾಯದ ಲಂಕಿಯ ನ್ಯಾಯವುರಹಿದ ಧೇಯಾಂಜನೇಯಾ ೧

ವರ ಕುಂತಿನಂದನಾ ಕಲಿಯ ಭಂಜನಾ ।
ಗರಳನ್ನ ಭುಂಜನಾ । ಉರಗ ಭಂಜನಾ ।
ಉರಿತಾಪ ಪರಿಹಾರ । ಕರುಣ ಸಾಗರಾ ।

ದುರುಳ ಕೀಚಕರ ಹಿಡಂಬಕಾಂತಕ ।
ಕೌರವಾ ಪಾರಾವಾರಾ ಉರಹಿದ ಬಲುಧೀರ ಶರ ಗದಾಧಾರಾ ।
ಗುರುವರ ಸುತದಿನ ।
ಕರಜನುವರದೊಳು ।
ತರಬಲು ಪರಿ ಪರಿಹರಿಸಿದೆ ಸಮರಾ ೨

ಆನಂದತೀರ್ಥನಾಗಿ ಅತಿ ಹರುಷಯೋಗಿ
ಕಾನನ ಪರಮತಾ ದಹಿಸಿದ ಖ್ಯಾತಾ ।
ಭಾನುಕುಲ ಸಾಂದ್ರಾ ಎನಿಸುವ ಚಂದ್ರಾ ।
ಧ್ಯಾನಾಮೃತ ಪಾನಾ । ಮುಕ್ತಿ ಸೋಪಾನಾ ।
ಜ್ಞಾನಾಹೀನಾ ದೀನಾ ಜನಾ ।
ಮಾನಿಸಫಲದಾನಾ ನಿರತ ನಿಧಾನಾ ।
ಶ್ರೀನಿಧಿ ವಿಜಯವಿಠ್ಠಲ ।
ಶ್ರೀನಿವಾಸನ ಮಾನಸ ಪೂಜಿಪೆ
ಗಾನನ ಮುನಿಗಳ ಆನನಮಣಿ ಪವಮಾನಸೂನು ೩

೨೪೩

ಹನುಮಂತ ಬಲವಂತ ಅತಿ ದಯವಂತಾ ।
ಘನವಂತ ಕೀರ್ತಿವಂತ ಅತಿ ಜಯವಂತಾ ॥
ಅನುದಿನದಲಿ ನಿನ್ನ ನೆನೆಸುವೆ ಎನ್ನ ಮನದಾಸೆ ।
ಯ ನೀಯೋ ದನುಜ ಕೃತಾಂತಾ ಪ

ಪಾವಮಾನಿ ಸತತ ಪಾವನ್ನ ಚರಿತಾ ।
ಪಾವಕಾಂಬಕನುತಾ ಪ್ಲವಂಗನಾಥಾ ॥
ದೇವ ಕರುಣಪಾಂಗಾ ಭಾವುಕತುಂಗಾ ।
ಗ್ರೀವಾ ಶತಶೃಂಗ ಗ್ರಾವವೆ ಭಂಗಾ ॥
ಕಾವಾ ವರವೀವಾ ಭೋದೇವ ಸಂಭವಾ । ಸು ।

ಗ್ರೀವ ಸಹಾಯ ಸರ್ವ
ದೇವನರಸಿ ಯತಿವರ ಹಾರಿದಾ ।
ಕೋವಿದಾ ಕಪಿವರ ದೇವಕಿ ತನುಜನಾ ॥
ಮಾವನ ಮಾವನಾ । ಜೀವಕೆ ಮುನಿದನೆ ।
ಜೀವೇಶ ಮತವನ ಪಾವಕಾ ಜಯ ಜಯ ೧

ಧರಣಿಜಾತಿಗೆ ಭದ್ರಕರವಾದ ಮುದ್ರಾದರದಿಂದ ಇತ್ತ ನಿದ್ರಾ ।
ಹರ ಗುಣಸಮುದ್ರಾ ಗರಳ ಅಂದು ಮೆದ್ದಾ
ದುರುಳರ ವರವದ್ದಾ ।
ನೆರದಲ್ಲಿ ಶಲ್ಯ ಎದುರ ಬರಲಾಗಿ ಗೆದ್ದಾ ।
ಮರುತಾ ಸುಖ ಗುರುವೆ ಸುರತರುವೆ । ಫಲ ।
ಗುರುವೆ ಬಲು ಮೆರೆವೇ ನಿರ್ಜರ ಗಣದಲ್ಲಿ ಇಹ ।
ಪರದಲಿ ದೇವ ।
ಹರುಷವ ತೋರಿದೆ ಕುರುಪುರಾ ಕೆಡಿಸುತಾ
ಶರಧೀ ಬಾಗಿದ ಧೀರಾ ।
ವರ ಪಾಂಡವ ಸೂನು ಆವಾಸ ಯೋಗಕೆ ಸಂ ।
ಚರಿಸಿ ಶೌರ್ಯನೆ ಸುರನದಿ ದಾಟಿದಾ ಪರಮಹಂಸ ೨

ಕರಡಿ ವಾನರಬಲಾ ನೆರಹಿ ಮಹಾ ಪ್ರಬಲ ।
ಶಿರ ಹತ್ತುವುಳ್ಳವನ ಕುಲ ವರಿಸಿದಾ ಸುಬಲಾ ।
ಕುರುಪತಿ ನಿಜ ತಮ್ಮ ಬರಲವನ ಹಮ್ಮು ।
ಮುರಿದೆ ಭಳಿರೆ ಬೊಮ್ಮ ಪೊರೆವನೆ ನಮ್ಮ ।
ಮರುತಾ ಸುಖ ಭರಿತಾ ಸಂಹರಗೈಸುವ । ಸಂ ।
ಕರ ಗರ್ವಹರ ಸರಯು ತೀರದಲ್ಲಿದ್ದಾ ।
ಪುರದಲ್ಲಿ ಮೆರದನೆ ।
ಗುರುವ್ಯಾಸಮುನಿಗಳ ಕರ ಕಮಲೋದ್ಭವ ।
ವರ ವೃಕೋದರನೆ ವಿಜಯವಿಠ್ಠಲನ ।
ಶರಣರ ಪಾಲಾ ಬದರಿವಾಸಾ ಯಂತ್ರೇಶಾ ೩

೨೪೪

ಹಾರುವಗೆ । ಮರದ ಮೇಲಿರುವಗೆ ।
ಮುದ್ರಿಕೆಯ ತೋರುವಗೆ । ವನ ಕೀರ್ತಿ ತೋರುವವಗೆ ।
ಹೀರುವವಗಾಕ್ಷಣದಿ । ಚೀರುವಗೆ ಅರ್ಭಟಿಸಿ ।
ಸಾರುವಗೆ । ರಾವಣನ ಮೀರಿದವಗೆ ಜಯಮಂಗಳಂ ।
ನಿತ್ಯ ಶುಭ ಮಂಗಳಂ ೧

ವೃಕೋದರ ಭೀಮಗೆ । ಅಶೋಕದೊಡೆಯಗೆ ।
ಬಕಜರಾಸಂಧ ಕೀಚಕವಧನಿಗೆ । ಸಕಲ ದಳದೊಳಗೆ ।
ನಾಯಕನೆನೆಸಿ ಕಲಿಯ । ಬಂಧಕ ಶಕುತಿಗೆದ್ದ ಲೌಕಿಕ ಚರಿತಗೆ ।
ಜಯಮಂಗಳಂ ನಿತ್ಯ ಶುಭಮಂಗಳಂ ೨

ಒಂದೆ ಅಕ್ಷರದಿಂದ ಆನಂದ ಕೊಡುವವನಿಗೆ ।
ಒಂದೆರಡು ಈರೈದು ಮುರಿದವನಿಗೆ ।
ಒಂದೇ ದೇವ ನಮ್ಮ ವಿಜಯವಿಠ್ಠಲನಂಘ್ರಿ
ವಂದಿಸುವ ಶ್ರೀಮದಾನಂದ ಮುನಿಗೆ ।
ಜಯಮಂಗಳಂ ನಿತ್ಯ ಶುಭಮಂಗಳಂ ೩

(ಎ) ಭೀಮ

೨೪೫

ಭೀಮ ಪರಿಪೂರ್ಣ ಕಾಮ ಸೋಮಕುಲಾಬ್ಧಿ
ಸೋಮ ರಣರಂಗ ಭೀಮಾ ಆ ಮಹಾದುರಿತ
ರಾಮರಾಸಿಗೆ ದೇವಾ ಮೊಗನೆನಿಸುವ ಭೂಮಿ ಭಾರ ಹರ ಪ

ಧರ್ಮನಂದನನೊಡನೆ ಜನಿಸಿ ಬಂದು
ದುರ್ಮತಿಗಳಾ ಕೂಡ ನಿರ್ಮತ್ಸರಾದಲ್ಲಿರದೆ ನಿರುತ ಛಾತ್ರಾ

ಕರ್ಮದಲ್ಲಿ ಮರೆದೆ ಧರ್ಮಕ ಹಿತರೊಂದು ನಿರ್ಮಿತದರಗಿನ
ಅರ್ಮನೆ ಮಾಡಿರೆ ಮರ್ಮ ತಿಳಿದು ದಾಟಿ
ಮಾರ್ಮಲೆತ ಅಸುರನ ನಿರ್ನಾಮಗೈಸಿದ
ನಿರ್ಮಳಾ ಮನೋಹರಾ ಪೇರ್ಮಿವುಳ್ಳವನೆ ೧

ಬಕನ ಸರ್‍ರನೆ ಸೀಳಿ ಬಿಸಾಟಿ ಪಾಂಚಾಲಕನ ಸಭಾದ ಮೌಳಿ
ಅಕಟ ತೊಲಗಿಸಿ ಗೆಲಿದು ನೆರೆದ ಕಾ
ಮುಕರ ಬಿಂಕವ ಹಳಿದು
ಬಕ ವಿರೋಧಿಯ ಭಕುತಿಯಿಂದಲಿ ಬಲು ಸುಖ ಬಡಿಸುತ ಕು
ಹಕ ಮಾಗಧನ ರಣಮುಖಕಾಹುತಿಯಿತ್ತು
ವಿಕಳತನದ ಕೀಚರ ಕಿಮ್ಮೀರ ಲಿಕಿಲಿಕಿ ಮಾಡಿದ ೨

ಗುರುವಿನ ರಥವೆ ತೆಗೆದು ಗಗನಕ್ಕೆ ಭರದಿಂದಲಿ ಬಗೆದು
ಹರಿದಾಡಿ ಕುಣಿಕುಣಿದು ನೆರದ ಸುತ್ತುವದ ರಥಿಕರ ಹಣಿದು
ಅರಿಗಳ ಶಿರಗಳ ತರಿ ತರಿದವನಿಗೆ
ಹರಪಿದೆ ಗುರುಸುತ ಧುರ ಧರದೊಳು
ಹರಿಶರ ಬಿಡಲಂಜದೆ ಎರಗದಲಿಪ್ಪ ಭ
ಳಿರೆ ಪರಾಕ್ರಮ ವರ ವೃಕೋದರ ೩

ಕೊಬ್ಬಿದ ದುಃಶಾಸನ್ನ ಉರವಣಿಸಿ ಮಬ್ಬಾದ ಕರಿ ತೀಕ್ಷಣ
ಕಬ್ಬು ತುಡಕಿದಂದದಿ ಪಿಡಿದವನ
ಇಬ್ಬಗದು ಉದರದ ಕೊಬ್ಬು ಹರಿಸಿ ಕರು
ಳಬ್ಬರದಲಿ ಸತಿಗೆ ಉಬ್ಬಿಗೆ ತೀರಿಸಿ
ಇಬ್ಬಲದವರನ ಯೆಬ್ಬಟಲು ಸುರರಬ್ಬೆಬ್ಬೆನುತಿರೆ
ಬೊಬ್ಬಾಟಕೆ ಜಗ ಸುಬ್ಬನ ಸೂರೆ ೪

ಕುರುಪ ಜಲದೊಳಗೆ ಅಡಗಿರಲು
ಬಿರಬು ನುಡಿಯ ಕೇಳಗೆ ಪೊರಡಿಸಿ ಗದೆಯಿಂದಲಿ
ವೈರಿಯ ತೊಡೆ ಮುರಿದು ನಿರ್ಭಯದಿಂದಲಿ
ತುರಗಧ್ವರದಲಿ ಮೆರೆದೆ ದೋಷರಾಶಿ
ವಿರಹಿತ ಕಾಮನೆ ಸುರಮಣಿ ಜಗದಂ
ತರಿಯಾಮಿ ಪರಮಗುರುವೆ ವಿಜಯ
ವಿಠ್ಠಲರಿವ ಭಾರತ ಮಲ್ಲ ಮರುತಾವತಾರ ೫

(ಏ) ಮಧ್ವಾಚಾರ್ಯ

೨೪೬

ಇದು ನಿನಗೆ ಬಲು ಚಂದವಾಗಿದೇನೋ ।
ಬಾದರಾಯಣನ ಮೆಚ್ಚಿಸಿ ಸೇವೆ ಮಾಡಬೇ ।
ಕಾದರೂ ಮತ್ತಾವ ಪರಿಯಿಲ್ಲವೇ ।
ಈ ಧರೆ ಮನುಜರಿಗೆ ಆವಾವ ಕಾಲಕ್ಕೆ
ಭೋದವಾಗದಂತೆ ಇದ್ದದ್ದೇನು ಬಗೆ ೧

ಸಂಪುಟಾಕಾರವನು ಧರಿಸಿ ಅಲಂಕಾರ ।
ಸಂಪತ್ತಿನಿಂದ ಯತಿಗಳ ಕೈಯ್ಯಲಿ ।
ಸೊಂಪಾಗಿ ಮಿಗೆ ಪೂಜೆ ಕೊಳುತ ಪೊಗಳಿದ ಜನಕೆ ।
ತಂಪಾಗಿ ಗುರು ಶ್ರೀ ಮದಾಚಾಯರ್ಸ ೨

ಪೆಟ್ಟಿಗೆಯಂದದಲಿ ಒಪ್ಪುವನೆಂದದಕೆ ।
ದಿಟ್ಟವಾಯಿತು ದಾಸರು ನುಡಿದುದು ।
ವಿಷ್ಣುತೀರ್ಥರಿಂದ ಆರಿಸಿ ಬಂದ । ವಿಜಯವಿಠ್ಠಲ ವೇದ ।
ವ್ಯಾಸನಂಘ್ರಿವಾರಿಜ ಮಧುಪಾ ೩

೨೪೭

ನಮೋ ನಮೋ ಶ್ರೀ ಮಧ್ವರಾಯ ಸುರಮುನಿಗೇಯ
ನಮೋ ನಮೋ ಶ್ರೀ ಮಧ್ವಾಚಾರ್ಯ ಆರ್ಯಾ ಪ

ಭೃಗು ಕುಲೋತ್ತಮ ರಾಮ ಭೂಸುರರಿಗೆ ಸರ್ವ
ಜಗವೆಲ್ಲ ಧಾರಿಯನು ಯೆರದು ಸಂಹ್ಯಾ
ನಗದಲ್ಲಿ ನಿಂದು ಸಮುದ್ರನ್ನ ಹಿಂದಕ್ಕೆ ತೆಗಿಸಿ
ಈ ಭೂಮಿಯನು ಸಾಧಿಸಿದನು ೧

ಅತಿ ದಯಾಪರ ಮೂರ್ತಿ ಅಲ್ಲಿಗಲ್ಲಿಗೆ ಕ್ಷೇತ್ರ
ಗತಿ ತಪ್ಪಿದಂತೆ ನಿರ್ಮಾಣ ಮಾಡಿ
ಸತಿಪತಿಯ ಉದ್ಧರಿಸಿ ಬರುತ ಕಂಡನು ಉ
ನ್ನತವಾದ ಪರ್ವತವು ಯೋಜನವಿರೆ ೨

ಬೆರಗಾಗಿ ಪರಶುರಾಮನು ಬಂದು ಈ
ಗಿರಿಯಲ್ಲಿ ನಿಂದು ಅಗ್ರಭಾಗವೈದೆ
ತರಹರಿಸಲಾರದೇ ಭೂಮಿಗಿಳಿಯಿತು ಅದ್ರಿ
ನಿರೀಕ್ಷಿಸಿ ಸುಜನರು ಇದ್ದನಿತು ೩

ಸಿರಿರೂಪ ದುರ್ಗಾನಾಮಕಳಾದ ದೇವಿಯನು
ಕರದು ಈ ಸ್ಥಾನದಲಿ ಇರ ಹೇಳಿದಾ
ಅರವು ಮಾಡದೆ ಮುಂದೆ ಕಲಿಯುಗದಲಿ ನೆರದು
ದುರುಳರಾತಿಯರ ಸಂಹರಿಸುಯೆಂದು ೪

ಅನಿತರೊಳಾಕಾಶದಲಿ ಜಯ ಜಯವೆಂದು
ಅನಿಮಿಷರು ಕೊಂಡಾಡಿ ನಗುತ ದಿವ್ಯ
ಮಣಿಮಯ ವಿಮಾನದಿಂದಾ ಗಿರಿಗೆ ವೇಗದಿ ಸು
ಮ್ಮನರಾಗಿ ಬಂದು ತುತಿಸಿದರು ಹರಿಯಾ ೫

ಅಂದಿನಾರಭ್ಯವಾಗಿ ಇದೇ ವಿಮಾನಗಿರಿ
ಯೆಂದು ಕರೆಸಿತು ಶ್ರುತಿ ಯುಕ್ತಿಯಲ್ಲಿ
ಎಂದೆಂದಿಗೆ ಇದನೆ ನೋಡಿದವರಿಗೆ ದೋಷ
ಗಂಧವಾದರು ಇಲ್ಲಾ ಇಲ್ಲ ಇಲ್ಲಾ ೬

ಈ ಮಹಿಮೆಯನು ಕೇಳಿ ಧರ್ಮ ತಪವನು ಮಾಡಿ
ಭೂಮಿಯೊಳಗೆ ಎನ್ನ ವಂಶಸ್ಥನು
ಸೋಮಾರ್ಕ ಪ್ರಭಯಂತೆ ಕೀರ್ತಿಯನು ಪಸರಿಸಿ
ಪಾಮರರ ಉದ್ಧರಿಸಬೇಕು ಯೆಂದು ೭

ಈ ಪರಿ ಶ್ರೀಹರಿಯ ಧ್ಯಾನವನು ಮಾಡಲು
ಶ್ರೀಪತಿ ವರವಿತ್ತ ಮುಂದೆ ಮಹ
ಪಾಪಿ ಪುಟ್ಟುವನು ಅವನಗೋಸುಗ ವಾಯು
ತಾ ಪರಮ ಪ್ರೀತಿಯಲಿ ಜನಿಸುವನು ೮

ಅಂದ ಮಾತಿಗೆ ಯಮನು ಬಹುಕಾಲದಲಿದ್ದ
ಛಂದದಿಂದದಿ ಪೋದ ತನ್ನ ಪುರಕೆ
ಇಂದಿರಾಪತಿ ನೇಮಿಸಿದ ಪರಿಯಂತೆ ಆ
ನಂದತೀರ್ಥರಾಗಿ ಜನಿಸಿದರು ೯

ಏನು ಪೇಳಲಿ ಪುಣ್ಯ ಚರಿತಯನು ಚನ್ನಾಗಿ
ಇಂತು ಹೇಳಿದ ಪ್ರಕಾರದಲಿ ಹೇಳಿ ಕೇಳೆ
ಜ್ಞಾನದಲಿ ಅಧಿಕಾರಾಗಿ ಇಷ್ಟಾನಿಷ್ಟ ಪುಣ್ಯ
ಮಾನದಲಿ ಕೊಂಡಾಡಿ ಸುಖಿಪರಲ್ಲಿ ೧೦

ಹುರಳಿ ಗುಗ್ಗರಿ ಮೆದ್ದ ಅದ್ಭುತವ ಕೇಳಿದರೆ
ಉರಳಿ ಹೋಗುವದು ಜನ್ಮಾಂತರದ ದುಷ್ಕರ್ಮ
ಮರಳಿ ಬಲಿ ಬಾಲವನು ಪಿಡಿದದು ನೆನಸಿದರೆ
ನೆರಳಾಗುವರು ಸುರರು ಮುಕ್ತಿಯಿನಿತ್ತು ೧೧

ಧರಣಿಧರದಿಂದ ಧುಮುಕಿದ ಪಾದಯುಗ ನೋಡೆ
ಎರಡೊಂದು ಏಳು ಕುಲತೃಪ್ತರಹರೊ
ಅರೆ ಮ್ಯಾಲೆ ಸಾಲವನು ತಿದ್ದಿದಾ ವಾರ್ತಿ ಕೇಳಿ
ಎರಡೊಂದು ಋಣದಿಂದ ಕಡೆಗಾಗುವ ೧೨

ತಲೆಕೆಳಕಾಗಿ ಬೆಳೆದಾ ವೃಕ್ಷವನು ನೋಡಿ
ಬಲಿವನು ಸುರದ್ರುಮದಂತೆ ರಂಗ
ಛಲದಿಂದ ಸರ್ಪನ ವರಸಿದ ಸ್ಥಳ ಕಾಣೆ
ಬಲು ವಿಷಗಳು ಪೋಗಿ ನಿರ್ಮಲಹರೋ ೧೩

ಧೂಳಿ ಅಕ್ಷರ ಬರೆದ ಪ್ರದೇಶ ನೋಡಲು
ವಾಲಯಾ ಶುಭವಿದ್ಯ ಫಲಿಸುವದು
ಲೀಲೆಯಿಂದ ಗ್ರಂಥ ಅಭ್ಯಾಸಕೆ ಪೋಗಿ ಬರುವ
ಶೀಲತೆಯು ಕೇಳೆ ಮನೋ ವಾಯುವೇಗ ೧೪

ಬುತ್ತಿಯ ಉಂಡ ಸ್ಥಳವನ್ನು ಕೊಂಡಾಡಲು
ತೃಪ್ತನಾಗುವ ಮನುಜ ಮೃಷ್ಟಾನ್ನದಿ
ನಿತ್ಯ ಬಾಲಕ್ರೀಡೆ ಆಡಿದ್ದು ಪಾಡಲು
ಪುತ್ರೋತ್ಸವಗಳಿಂದ ಬಾಳುತಿಪ್ಪ ೧೫

ಶರ ಚಾಪ ಗದ ಪದುಮ ಎರಡೊಂದು ತೀರ್ಥಗಳು
ಇರುತಿಪ್ಪ ವಾಸುದೇವನೆಂಬೊ ನಾಮಾ
ಸರೋವರದಲಿ ಮಿಂದು ಸ್ತೋತ್ರ ಮಾಡಿದ ನರಗೆ
ವಿರಜೆಯಲಿ ಸ್ನಾನ ಸಂದೇಹವಿಲ್ಲ ೧೬

ಜನಿಸಿ ಮೊದಲು ಮಹಾ ಬದರಿಗೆ ಪೋದಾರಭ್ಯ
ಎಣಿಕೆ ಇಲ್ಲದೆ ಚರಿತೆ ಅನುದಿನದಲಿ
ಗುಣಿಸಿ ಗುಣದಲಿ ತಿಳಿದು ಕೀರ್ತನೆಯನೆಸಗಿದಾ
ಮನುಜರಿಗೆ ಸತ್ಕೀರ್ತಿ ಬರುವುದಯ್ಯಾ ೧೭

ಮಧ್ವ ಮಧ್ವ ಎಂಬೋ ನಾಮವನು ನುಡಿದರೆ
ಬದ್ಧವಾಗಿದ್ದ ಭವಾಬ್ಧಿಯಿಂದ
ಎದ್ದು ಕಡಿಗೆ ಬಿದ್ದು ಸಂಚಿತಾಗಾಮಿಯಿಂದ
ಗೆದ್ದು ಚರ್ಮ ದೇಹದಿಂದ ನಲಿವ ೧೮

ಶ್ರೀ ಪೂರ್ಣಬೋಧ ಗುರುಶೇಖರ ಸುಗುಣಧಾಮ
ಆಪನ್ನ ಪರಿಪಾಲ ಅಮೃತಫಲದ
ವ್ಯಾಪುತ ನಾನಾ ಸ್ಥಾನ ಹನುಮ ಭೀಮ ಸರ್ವ
ರೂಪಾತ್ಮಕ ಪ್ರಾಣ ಭಾರತೀಶ ೧೯

ಕೇಳಿ ಹರುಷಿತನಾಗಿ ಬಂದ ವೈಭವದಂತೆ
ಕಾಲ ಹಿಂಗಳಿಯದೇ ನಿತ್ಯದಲ್ಲಿ
ಲೀಲೆಯಲಿ ವಾಸವಾಗಿರಲೆಂದು ಅಂದು
ಪೇಳಲಾ ಮೌಳಿಯನು ತೂಗಿ ಸರ್ವರು ನಿಂತರು ೨೦

ಪುಂಜಕಾಸ್ಥಳ ಬಂದು ತಪವು ಮಾಡಲು ಕ್ಷೇತ್ರ
ರಂಜನವಾಯಿತು ಇದೇ ನಾಮದಲ್ಲಿ
ಕುಂಜರ ವರದ ನಮ್ಮ ವಿಜಯವಿಠ್ಠಲನಂಘ್ರಿ
ಕಂಜವನು ಭಜಿತ ಗುರುರಾಜ ಜಯತು ೨೧

೨೪೮

ನಿನ್ನನೆ ನಂಬಿದೆ ಅನ್ಯರೊಬ್ಬರ ಕಾಣೆ । ಮಧ್ವರಾಯಾ ಪ

ನಿಮ್ಮ ಸಿದ್ಧಾಂತದಿ ಮನವ ನಿಲ್ಲಿಸಯ್ಯ । ಮಧ್ವರಾಯಾ ಅಪ

ಪತಿತ ಸಂಕರ ಪುಟ್ಟಿ ಮತವೆಲ್ಲ ಕೆಡಿಸಲು ॥ ಮಧ್ವರಾಯಾ ॥
ಗತಿಯ ಕಲ್ಪಿಸಿ ಸಜ್ಜನರ ತತಿಗಳ ಕಾಯಿ ॥ ಮಧ್ವರಾಯಾ ೧

ತಂದೆ ತಾಯಿ ಬಂಧು ಬಳಗವೆಲ್ಲವು ನೀನೆ । ಮಧ್ವರಾಯಾ ।
ಎಂದೆಂದಿಗು ನಿಮ್ಮ ಪೋದಿರುವಂತೆ ಮಾಡೈ । ಮಧ್ವರಾಯಾ ೨

ಬಾಲಕೃಷ್ಣನ ಸೇವೆ ಮೇಲಾಗಿ ಮಾಡುವ । ಮಧ್ವರಾಯಾ ।
ಮೂಲ ಮೂವತ್ತೇಳು ಮೇಲು ಗ್ರಂಥಗಳಿತ್ತೆ । ಮಧ್ವರಾಯಾ ೩

ಶ್ರೀನಿಧಿ ಕೃಷ್ಣನೆ ಜಗಕೆಲ್ಲ ದೊರೆಯೆಂಬ । ಮಧ್ವರಾಯಾ ।
ಆನಂದ ಮುನಿಯೆಂದು ನೀನು
ಹೆಸರು ಪೊತ್ತೆ । ಮಧ್ವರಾಯಾ ೪

ಅಜಪದಕೆ ಬಂದು ಅಖಿಲರ ಪಾಲಿಪ । ಮಧ್ವರಾಯಾ ।
ವಿಜಯಸಾರಥಿ ಕೃಷ್ಣ ವಿಜಯವಿಠ್ಠಲಪ್ರಿಯ । ಮಧ್ವರಾಯಾ ೫

೨೪೯

ಪರಮಯೋಗಿಯ ನೋಡಿರೊ ನೀವೆಲ್ಲರು ।
ಪರಮಯೋಗಿಯ ನೋಡಿರೊ ॥
ಪರಮಯೋಗಿಯ ನೋಡಿ ಪ್ರೀತಿವಂತರಾಗಿ ।
ನಿರಯವ ಕಳೆದು ಆನಂದ ಬೇಡುವರೆಲ್ಲ ಪ

ವಾನರ ವೇಷವಾಗಿ ಪರ್ವತ ಸೇರಿದಾ ।
ಭಾನುನಂದನ ಮನೋಬಯಕೆಯ ಸಲ್ಲಿಸಿ ॥
ಏನೆಂಬೆ ಬಲು ಒಂದು ರೂಪವಾಗಿ ತೋರಿ ।
ತಾನೆ ತನ್ನೊಳಗೆದ್ದು ದುರುಳರ ಮೋಹಿಸಿದಾ ೧

ವಿಷವನುಂಡು ಮೂರು ಲೋಕದೊಳಗೆ ಮೆರೆದು ।
ಅಸುರ ಬಕನ ಸೀಳಿ ಧರಿಗೆ ಬಿಸುಟು ।
ಶಶಿಮುಖಿಯಳ ಪ್ರೀತಿಬಡಿಸಿ ಅರ್ಜುನಗೊಲಿದು ।
ಶಶಿಕುಲದಲಿ ಪುಟ್ಟಿ ದುರ್ಜನ ಸಂತಾಪಬಡಿಸಿ ೨

ಯತಿಯಾಗಿ ಜನಿಸಿ ಸುವಾಕ್ಯವ ಬಯಸಿ ।
ಮತಿಹೀನ ಜನರ ಶಾಸ್ತ್ರವ ಖಂಡಿಸಿ ॥
ತುತಿಸಿದ ಭಕ್ತರ್ಗೆ ಗತಿಯ ಕೊಡುವ ಪ್ರಾಣ–
ಪತಿ ವಿಜಯವಿಠ್ಠಲ ಬದರಿನಿಲಯ ನಿತ್ಯ ಪರಮ ೩

೨೫೦

ಪೂರ್ಣಪ್ರಜ್ಞನೆಂಬ ಪರಿಪೂರ್ಣ
ಸುಜ್ಞಾನ ಸಮುದ್ರ ಮಧ್ವಮುನಿರಾಯ ॥
ವಾರಣದಿಂದಲಿ ಬಂದ ವಾದಿಯ
ನಿವಾರಿಸಿದ । ಮಧ್ವ ಮುನಿರಾಯಾ ಪ

ಮಣಿವಂತನೆಂಬೊ ದೈತ್ಯ ಧಾರುಣಿಯೊಳಗೆ
ಸಂಕರನಾದಾ । ಮಧ್ವರಾಯಾ ॥
ಅವ । ಜನಿಸಿ ಬಂದು ಉತ್ತಮರ
ಗುಣಗಳಲ್ಲ ಕೆಡಿಸಿದಾ । ಮಧ್ವರಾಯಾ ೧

ಹರಿಯಿಲ್ಲ ಗುರುವಿಲ್ಲ ಹರನು ಹುಸಿ ಎಂದು ॥ ಮಧ್ವ । ಅವ ।
ಪರದೈವ ತಾನೆ ಎಂದು ಧರೆಯೊಳು ತಿರುಗಿದ । ಮಧ್ವ ೨

ವೇದಶಾಸ್ತ್ರವೆಲ್ಲ ಮಿಥ್ಯ ಅಹಂ ಬ್ರಹ್ಮ ಜಗಕೆಂದ । ಮಧ್ವ ॥ ಅವ ।
ಭೇದಾಭೇಧ ಇಲ್ಲ ಹೆತ್ತ ತಾಯಿ ಸತಿ ಒಂದೆ ಎಂದು ಮಧ್ವ ೩

ಜಾತಿಧರ್ಮವೆಲ್ಲ ತೊರೆದು । ಜಾತಿ ಸಂಕರವಾಗೆ ಮಧ್ವ ॥
ಭೂತಳದೊಳಗೆ ಮಿಥ್ಯ ಪಾತಕವೆ ತುಂಬಿತು । ಮಧ್ವರಾಯ ೪

ಸುರರು ಚಿಂತಿಸಿ ಪೋಗಿ । ಪರಮೇಷ್ಠಿಗೆ
ಪೇಳಲು । ಮಧ್ವ ॥ಬೊಮ್ಮ ।
ಪರಿಹರ ಕಾಣದೆ ಹರಿಗೆ ಬಿನ್ನೈಸಿದ । ಮಧ್ವ ೫

ಜಯ ತನಯನ್ನ ಕರೆದು । ದಯದಿಂದ
ಪೇಳಲು । ಮಧ್ವ ॥ ವೇಗ ।
ಪ್ರಿಯದಲ್ಲಿ ಬಂದು ಮಧ್ಯಗೇಹನಲ್ಲಿ ಅವತರಿಸಿದ । ಮಧ್ವ ೬

ಮುಖ್ಯ ಶಿಷ್ಯ ತಿಪ್ಪಣ್ಣ ಅವಧಾನಿ ಸೋತು ವೈಷ್ಣವನಾಗೆ । ಮಧ್ವ ॥
ಮಾಯಾ ಶಕ್ಯವಲ್ಲವೆಂದು ಸೋತು ।
ಸಂಕರ ಮೂಲಿಯ ಪೊಕ್ಕ । ಮಧ್ವ ೭

ಶುಂಠ ಮಿಕ್ಕ ರಕ್ಕಸರ ಗಂಟಲ ಮುರಿದುವಟ್ಟಿ । ಮಧ್ವ ॥
ಉಂಟು ಮಾಡಿದನು ವೈಕುಂಠ ಪತಿದೇವವೆಂದು । ಮಧ್ವ ೮

ಮರುತ ಮತ ಉದ್ಧರಿಸಿ । ಗುರುಕುಲ ತಿಲಕನಾದ । ಮಧ್ವ ॥
ಶಿರಿ ವಿಜಯವಿಠ್ಠಲನ್ನ ಚರಣಾಬ್ಜ ಭೃಂಗನಾದ ಮಧ್ವ ೯

೨೫೧

ಪೂರ್ಣಪ್ರಜ್ಞರ ನೆನೆದು ಜ್ಞಾನಪೂರ್ಣರಾಗಿರೊ ।
ಆನಂದ ಜನನದಲಿ ಜನನಗಳ ನೀಗಿರೊ ಪ

ಮಲಗಿ ಏಳುವಾಗ ಮಾತುಗಳನಾಡುವಾಗ ।
ಇಳಿಯ ಮೇಲಡಿಯಿಟ್ಟು ತಿರುಗುವಾಗ ॥
ಜಲದಲಿ ಮಿಂದರ್ಘ್ಯ ಪ್ರಣವ ಜಪಿಸುವಾಗ ।
ಮಲಿನ ಸಂಕರನಳಿದಮಲಬೋಧನ ನೆನೆಯಿರೊ ೧

ದೇವತಾ ಪೂಜೆಮಾಡಿ ಸ್ತೋತ್ರ ಪಠಿಸುವಾಗ ।
ಪಾವಕಾವನಿ ಸುರರ ಉಣಿಸುವಾಗ ॥
ಕೋವಿದರ ಸಂಗಡ ಸಂತೋಷಬಡುವಾಗ ।
ಶ್ರೀ ವೀರ ವೈಷ್ಣವಾಚಾರ್ಯನ ನೆನೆಯಿರೊ ೨

ಸತಿಸುತರ ಕೂಡ ಹರಿ ಚರಿತೆಗಳ ಪೇಳುವಾಗ ।
ಪ್ರತಿ ದಿವಸ ಷಟ್ಕರ್ಮ ಮಾಡುವಾಗ ॥
ಪತಿತ ಪಾವನ ವಿಜಯವಿಠ್ಠಲನ ಭಜಿಪ ಸದಾ ।
ಗತಿಯಾದ ಸುಜನರಿಗೆ ಯತೀಶ್ವರನ ನೆನೆಯಿರೊ ೩

೨೫೨

ಮಧ್ವಮುನಿಯೇ ಎನ್ನ ಹೃತ್ಕುಮುದ ಚಂದ್ರ ಪ

ಅದ್ವೈತಮತಾರಣ್ಯ ದಹನ ಗುಣಸಾಂದ್ರ ಅ.ಪ.

ನೊಂದೆ ಎಂಭತ್ನಾಲ್ಕು ಲಕ್ಷಯೋನಿಗಳಲ್ಲಿ
ಒಂದೇ ಪ್ರಕಾರ ಸಂಚರಣೆಯಿಂದ
ಒಂದೊಂದು ಕರ್ಮಗಳನರಸಿ ನೋಡಲು ಅದ-
ರಿಂದ ಭವಾಬ್ಧಿಗೆ ಬಂದುಪಾಯವ ಕಾಣೆ ೧

ನೀರು ಚಳಪಳಕಾಸಿ ಆರಲಿಟ್ಟು ಹೆಪ್ಪು
ನೀರಿನಿಂದಲಿ ಕೊಡಲು ಬಪ್ಪುದೇನೊ
ಮಾರುತೀ ನಿನ್ನ ಕೃಪೆ ಪಡೆಯದಲೆ ಉಳಿದವರ
ಕಾರುಣ್ಯವಾಗಲು ಮೋಕ್ಷಸಾಧನವಿಲ್ಲ ೨

ಹರಿಸಿರಿಗೆ ಎರಗುವ ಸತ್ವ ಶರೀರನೆ
ನಿರುತ ಎನ್ನೊಳಗಿಪ್ಪ ಮೂಲಗುರುವೆ
ನೆರೆ ನಂಬಿದೆನೊ ಸ್ವಾಮಿ ವಿಜಯವಿಠ್ಠಲರೇಯನ
ಚರಣದಲ್ಲಿರುವಂತೆ ಸಾಧ್ಯವಾಗಲಿ ಮನಸು ೩

೨೫೩

ಮಧ್ವಮುನಿಯೆ ನಿನಗೆ ಎದ್ದು ಕರಗಳ ಮುಗಿವೆ ।
ಬುದ್ಧಿ ಪಾಲಿಸಿ ಎನ್ನ ಉದ್ಧರಿಸೊ ಗುರುವೇ ಪ

ದುರುಳ ಪಾಮರ ಸಂಕರನೆಂಬುವನು ।
ದುರಾಚಾರಗಳು ಧರಿಯೊಳಗೆ ಕುಭಾಷ್ಯಗಳ ವ್ಯಾಪಿಸೀ ।
ಇರಲು ಉತ್ತಮ ಸಂಪ್ರದಾಯದಲ್ಲಿಪ್ಪ ।
ವರರು ಇರದಂತಾಗೆ ಸುಜನರು ಕೂಗೆ ೧

ಮಲ್ಲ ಮಾಯಿಗಳ ಹಲ್ಲು ಮುರಿದ ಅಪ್ರತಿಮಲ್ಲ ।
ಇಳಿಯೊಳಗೆ ಶುದ್ದ ಭಾಷ್ಯ ರಚಿಸಿ ಲೇಸಾ ।
ಕಿಲಕಿಲನೆ ನಗುತ ಮೊಗ ಕಳೆವೇರುತಾ ವೇಗ ।
ನಳಿನನಾಭನ ಚರಣ ಮನದಲಿಟ್ಟ ಪರಣಾ ೨

ಇಪ್ಪತ್ತು ಒಂದು ದುರ್ಮತದ ವರ ಕುವಾಕು ।
ಸರ್ಪನನ್ ಗರುಡ ಶೀಳಿದಂತೆ ಕೇಳಿ ।
ಇಪ್ಪ ಬಲು ಅಜ್ಞಾನ ಓಡಿಸಿ ಸುಜ್ಞಾನ ।
ತಪ್ಪದಲೆಗರದು ಸಂತರನೆಲ್ಲ ಪೊರೆದು ೩

ಪಂಚ ಭೇದವೆ ಸತ್ಯ ಐಕ್ಯವೆಂಬದು ಮಿಥ್ಯ ।
ಪಂಚವಿರಹಿತ ಹರಿ ಪರನೆಂದು ಸಾರೀ ।
ಚಂಚಲವ ಪರಿಹರಿಸಿ ಮರುತ ಮತ ಉದ್ಧರಿಸಿ ।
ಮಿಂಚುವ ಹೇಮದ ಕಾಯ ಸುಖ ತೀರ್ಥರಾಯಾ ೪

ಸುರರಾದಿಗಳ ಮಣಿಯ ಆರಾರು ನಿನಗೆಣೆಯೇ ।
ಅರಸಿದರೆ ಕಾಣೆ ಹರಿ ಪದಗಳಾ ಆಣೆ ।
ಶಿರಿ ವಿಜಯವಿಠ್ಠಲನ್ನ ಭಜಿಸುವ ಯತಿರನ್ನ ।
ಶರಣಪಾಲಕ ಪೂರ್ಣಪ್ರಜ್ಞ ಗುಣಪೂರ್ಣ ೫

೨೫೪

ಮಧ್ವರಾಯರ ಕರುಣ ಪಡೆಯದವ ।
ಧರೆಯೊಳಗೆ ಇದ್ದರೇನು ಇಲ್ಲದಿದ್ದರೇನು ಪ

ಮಧ್ವಮತವೇ ಮತವು ಸಕಲ ಶ್ರುತಿ ಸಮ್ಮತವು ।
ಮಧ್ವರಾಯರ ಧ್ಯಾನ ಅಮೃತಪಾನ ॥
ಮಧ್ವರಾಯರ ಲೀಲೆ ನವರತುನದಾ ಮಾಲೆ ।
ಮಧ್ವೇಶನಾ ಸ್ಮರಣೆ ಕುಲಕೋಟಿ ಉದ್ಧರಣೆ ೧

ಮಧ್ವರಾಯರ ಕಥೆಯ ಕೇಳಲದು ದುರಿತ ಹತ ।
ಮಧ್ವರಾಯರ ಭಕುತಿ ಮಾಡೆ ಮುಕುತಿ ॥
ಮಧ್ವರಾಯರ ಸ್ತೋತ್ರ ಮಾಡಿದವ ಸತ್ಪಾತ್ರ ।
ಮಧ್ವರಾಯರ ಭಜನೆ ದುಷ್ಕರ್ಮ ತ್ಯಜನೆ ೨

ಮಧ್ವರಾಯರ ದಾಸನಾದವನೆ ನಿರ್ದೋಷ ।
ಮಧ್ವರಾಯರ ಬಂಟ ಜಗಕೆ ನೆಂಟ ॥
ಮಧ್ವರಮಣಾ ನಮ್ಮ ವಿಜಯವಿಠ್ಠಲನಾದ ।
ಮಧ್ವೇಶನಾ ಕರುಣೆ ಪಡೆದವನೆ ಶರಣ ೩

೨೫೫

ಶುಕಪಿತನ ಪದಕಂಜ ಪದುಪಾ ।
ಅಖಿಳ ಲೋಕದ ಗುರುವೆ ಸುಖ ತೀರ್ಥ ಮುನಿಪಾ ಪ

ಮತಿ ತಿರಸ್ಕಾರವಾಗಿ ನಿತ್ಯ ನೈಮಿತ್ಯಗಳು ।
ಗತಿ ತಪ್ಪಿ ಪೋಗಿರಲು ಸರ್ವ ದೇವತೆಗಳು ॥
ಪಥವ ಕಾಣದೆ ನೆರೆದು ಯೋಚಿಸಿ ತಮ್ಮೊಳು ।
ಅತಿಶಯದಿ ಪೊದರಿ ಕೇಳು ಭವನದಾ ।
ಪತಿಯಾದ ಭೊಮ್ಮಗುಸರಿದರಂದು ಮೇಲು ೧

ತುತಿಸಲಾಕ್ಷಣ ಕೇಳಿ ಅಜನು ಶಿರದೂಗಿದನು ।
ಕೃತಭುಜರ ಸಹವಾಗಿ ಹರಿಪುರಕೆ ಸಾಗಿದನು ।
ನತನಾಗಿ ಶಿರಿಪತಿಯ ಪದಯುಗಕೆ ಬಾಗಿದನು ।
ಗತಿ ನೀನೆ ಎಂದು ಕೂಗಿದನು ಹರಿ ಕೇಳಿ ।
ಸತತ ನಿನ್ನನ್ನು ಕರೆದು ಪೇಳಿದವೇಗಿದನು ೨

ಭೂಸುರನ ಗರ್ಭದಲಿ ಬಂದೆ ನೀನವತರಿಸಿ ।
ವಾಸುದೇವನೆಂಬ ನಾಮದಿಂದಲಿ ಜನಿಸೀ ।
ಭಾಸುರ ಕೀರ್ತಿಯಲಿ ಮೆರೆದೆ ಬಲು ಪಸರಿಸಿ ।

ದೋಷ ವರ್ಜಿತದ ಗುಣರಾಸಿ ಎನಿಸುವಾ ।
ಲೇಸು ಆರ್ಯೆದೆರಡು ಲಕ್ಷಣ ಸಂನ್ಯಾಸಿ ೩

ಪುಟ್ಟಿ ಇಳಿಯೊಳಗೆ ಸಂಕರನೆಂಬ ದುರವಾದಿ ।
ಜಟ್ಟಿಗನಾಗಿ ಸೋಹಂ ಯೆಂಬ ಅತಿ ಕ್ರೋಧಿ ।
ಅಟ್ಟಹಾಸದಲಿ ತಿರುಗಿದನು ಬೀದಿ ಬೀದಿ ।
ಘಟ್ಟವಚನದಿಂದ ಕಾದಿ ಅವನ ಮುರಿ ।
ದೊಟ್ಟಿದೇ ವಪ್ಪದಲಿ ಮಾಯಿ ಮತಭೇದಿ ೪

ಶ್ರುತ್ಯರ್ಥವಾರಿಧಿಯ ಮಥಿಸಿ ಅಮೃತ ।
ಗ್ರಂಥ ಉತ್ತಮರಿಗೆರೆದು ಸುಖ ಬಡಿಸಿದೆ ಅತಿಶ್ಯಾಂತ ।
ನಿತ್ಯದಲಿ ಶುಕ್ಲ ಶೋಣಿತರಹಿತ ನಿಶ್ಚಿಂತ
ಅತ್ಯಂತ ಮಹಿಮ ಬಲವಂತ ನಿಮಗೆ ನಾ ।
ಎತ್ತಿ ಕರಗಳ ಮುಗಿವೆ ತೋರು ನಿಜ ಪಂಥ ೫

ಹರಿಯೆ ಪರನೆಂದು ಬೊಬ್ಬರಿದು ಎಳಹರಿ ।
ಮರಿಯೆ ಬಿರಿದು ಡಂಗುರವ ಹೊಯಿಸಿ ।
ಚರಿಸಿದ ಗುರು ದೊರೆಯೇ ।
ಸರಿಗಾಣೆ ನಿನಗೆಲ್ಲಿ ಮತ್ತೊಬ್ಬರನ ಕರಿಯೇ ।
ಹರಣದೊಳಗೆ ನಿನ್ನ ಮರಿಯೆ ಆನಂದ
ವರ ಬದರಿಲಿಪ್ಪ ವೈರಾಗ್ಯದ ಸಿರಿಯೇ ೬

ಮುನಿಗಳೊಳಗೆ ರನ್ನ ಮುನಿದವರಿಗಿರಬೆನ್ನ ।
ಘನ ವಿದ್ಯಸಂಪನ್ನ ಗುಣದಲ್ಲಿ ಅಚ್ಛಿನ್ನ ।
ನೆನೆದವರ ಪ್ರಸನ್ನ ತನುವೆ ತಪುತ ಚಿನ್ನ ।
ಮಿನಗುವಂತೆಯಿಪ್ಪ ಪಾವನ್ನ ಮಧ್ವಮುನಿ ।
ಚಿನುಮಯ ವಿಜಯವಿಠ್ಠಲನ್ನ ಪ್ರಸನ್ನಾ ೭

(ಐ) ಸರಸ್ವತೀ

೨೫೬

ಕಿಂಕರನ ಧ್ವನಿಗೆ ಕೊಡು ಮತಿಯನು ಪ

ಪಂಕಜಾನಾಭನ ಸೊಸೆ ಸರಸ್ವತಿಯೆ ಅ.ಪ.

ಸಕಲ ವಿದ್ಯಾರಂಭೆ ಕನಕ ಪುತ್ಥಳಿ ಬೊಂಬೆ
ವಿಕಸಿತ ಸುಲಲಿತಾಂಬೆ ಸುನಿತಂಬೆ
ನಿಕುರುಂಬೆ ಸುರರಂಭೆ ದಂತ ದಾಳಿಂಬೆ
ಭಕುತಿಯಲಿ ಕಾಂಬೆ ನಿನ್ನ ನಾಮವನುಂಬೆ ೧

ಗಂಗೆ ಯಮುನೆ ಉಭಯ ಸಂಗಮೆ ಭಕ್ತ ಭಯ
ಹಿಂಗಿಸಿ ಕೊಡು ಅಭಯ ಅಖಿಳ ಧ್ಯೇಯೆ
ಮಂಗಳ ಶೋಭನ ಮಣಿಯೆ ಅಭ್ಯುದಯೆ ಅತಿ ಸದಯೆ
ರಂಗು ಮಾಣಿಕ ಪ್ರಭೆಯೆ ಸುಜನಾಬ್ಧಿಗೇಯೆ ೨

ಪ್ರಯಾಗ ವರಕ್ಷೇತ್ರವಾಸೆ ಪುಣ್ಯಕ್ಷೇತ್ರೆ
ಕ್ಷಯ ರಹಿತ ಮುನಿಸ್ತೋತ್ರೆ ಶುಭಚರಿತ್ರೆ
ನಯವಿನಯ ನೇತ್ರೆ ಪವಿತ್ರ ಅಜನ ಕಳತ್ರೆ
ಜಯಜಯೆ ವಿಜಯ ಸಿರಿ ವಿಠ್ಠಲನ ಪೌತ್ರೆ ೩

೨೫೭

ವಾಣೀ ನೀ ತೋರೆ ವಾರಿಜನಾಭನ, ಮಹಾಲಾಭನ್ನ
ನಿತ್ಯ ಸುಲಭನ ಭಾನು ಸನ್ನಿಭನ ಪ

ಕ್ಷೋಣೀಯೊಳಗಣ ಪ್ರಾಣಶ್ರೇಷ್ಠ – ಜಗ
ತ್ರಾಣನ ತೋರಿಸೆ ಭಾನು ಸನ್ನಿಭಳೆ ಅ. ಪ.

ಚೈತನ್ಯರಾಣಿ ಪುಸ್ತಕಪಾಣಿ–ಸುನೀಲವೇಣಿ
ಅತ್ಯಂತ ಮಹಿಮೆ ಗುಣಗುಣಶ್ರೇಣಿ ತ್ರಿಲೋಕ ಜನನಿ
ಸತ್ಯವ ತೋರುತ ನಿತ್ಯೋಪಾದಿಲಿ
ದೈತ್ಯರ ಮರ್ದಿಸಿ ಮುಕ್ತಿಯ ಕೊಡುತಿಹ
ಸತ್ಯ ಸಂಕಲ್ಪಳೆ ನಿತ್ಯದಿ ಪೂಜಿಪೆ
ತ್ವತ್ಪಾದಾಂಬುಜವಿತ್ತು ನೀ ಸಲಹೆ ೧

ನಾಲಿಗೆಯಲ್ಲಿ ಬಂದು ನಿಂದು ದಯದಿಂದ ಇಂದು
ಶ್ರೀಲೋಲ ಹರಿಯೆ ದೈವವೆಂದು ಕೊಂಡಾಡೆ ಮುಂದು
ಬೀಳುವ ಭವಣೆಯ ಕಾಲ ಹಿಂಗಿಸಿ ವಿ–
ಶಾಲ ಮತಿಯ ಕೊಟ್ಟು ಆಳುಗಳೊಡನೆ ಸು–
ಶೀಲ ಜ್ಞಾನವಿತ್ತು ಆಲಸ್ಯಮಾಡದೆ
ಶೀಲ ಮುಕ್ತಿಗನುಕೂಲವಾಗುವುದಕ್ಕೆ ೨

ಜನ್ಮ ಬಂದಿದೆ ಕಡೆಗೆ ಮಾಡು ದಯದಿಂದ ನೋಡು
ಘನ ಕೀರ್ತಿವಂತೆ ಅಭಯವ ನೀಡು, ನಿನಗಲ್ಲ ಈಡು
ಕನಸಿಲಿ ಮನಸಿಲಿ ಮನಸಿಜನ್ಯೆಯನ
ನೆನೆಸುವ ಸೌಭಾಗ್ಯವನುದಿನ ಕೊಟ್ಟು
ಘನಪ್ರೇರಣೆಯಿಂದ ವಿಜಯವಿಠ್ಠಲನಂಘ್ರಿ
ವನಜವ ತೋರಿ ಸನ್ಮೋದವನೀಯೆ ೩

೨೫೮

ವಾಣೀ ಪರಮ ಕಲ್ಯಾಣಿ – ವಾರಿಜೋದ್ಭವನ
ರಾಣೀ ನಾರೀ ಶಿರೋಮಣಿ ಪ

ಕ್ಷೋಣಿಯೊಳಗೆ ಸರಿಗಾಣೆನೆ ನಿನಗೆ ಸು–
ಪ್ರಾಣಿಯೆ ಹರಿಪದರೇಣು ಧರಿಪೆ ಸದಾ ಅ. ಪ.

ಸರಸ್ವತಿ ನಿತ್ಯಾಸಾವಿತ್ರಿ ದೇವಿ ಗಾಯತ್ರಿ
ಸರಸಿಜದಳ ಸುನೇತ್ರಿ
ಸುರಮುನಿ ನಿಕರ ಸ್ತೋತ್ರಿ - ಶೋಭನಗಾತ್ರಿ
ಕರುಣಾಸಾಗರೆ ಪವಿತ್ರಿ
ಚರಣದಂದಿಗೆ ಪಂಚ ಬೆರಳು ಭೂಷಣ ಧ್ವನಿ
ಸರವು ಕನಕ ಗೆಜ್ಜೆ ಸರಪಳಿ ಪೊಳೆವಾಂ-
ಬರಧರೆ ಸುಂದರಿ ಎರಗುವೆ ಎನ್ನನು
ಎರವು ಮಾಡದೆ ತ್ರಿಕರಣ ಶುದ್ಧನೆ ಮಾಡೆ ೧

ಸರ್ವರಾತ್ಮಕೆ ಪ್ರಖ್ಯಾತೆ-ಧವಳಗೀತೆ
ಸರ್ವರಿಗೆ ಮಹಾ ಪ್ರೀತೆ
ನಿರ್ವಾಹವಂತೆ ಪತಿವ್ರತೆ ನಿರ್ಮಲ ಚರಿತೆ
ಪೂರ್ವದೇವತೆ ಹರಿಜಾತೆ
ಉರ್ವಿಯೊಳಗೆ ಮದಗರ್ವದ ಮತಿನಾ-
ನೋರ್ವನಲ್ಲದೆ ಮತ್ತೋರ್ವನ ಕಾಣೆನು
ಪೂರ್ವಜನ್ಮದ ಪಾಪ ಪರ್ವತದಂತಿದೆ
ನಿರ್ವಾಹವನುಮಾಡೆ ದೂರ್ವಾಂಕುರದಿ ೨

ನಗೆಮೊಗದ ಜಗದಂಬೆ-ನೀ ಗಂಧಲೇಪಿಸಿ
ನಿಗಮಾಭಿಮಾನಿ ಸುಜ್ಞಾನಿ
ಬಗೆಬಗೆ ವಿದ್ಯಾ ಭಾಸಿನಿ-ಶುಭಲಕ್ಷಣೆ
ಅಗಣಿತ ಫಲದಾಯಿನಿ
ಝುಗಝುಗಿಸುವ ಕರಯುಗಳ ಭೂಷಣ ಪ -
ನ್ನಗವೇಣಿ ಕುಂಕುಮ ಮೃಗಮದ ವೊಪ್ಪಲು
ಜಗತ್ಪತಿ ಪ್ರದ್ಯುಮ್ನ ವಿಜಯವಿಠ್ಠಲನ
ಮಗಳೆ ಸುಖಾತ್ಮಕೆ ಜಗದಿ ಶುಶ್ರೋಣೆ ೩

೨೫೯

ಶಾರದಾಂಬಿಕೆ ನಿತ್ಯ ಶಾರದಾ ಕೊಡು ಎನಗೆ ।
ಸಾರುವೆ ನಾ ನಿನ್ನ ಪ

ಪುಂಡರೀಕ ನಯನೆ ಪುಂಡರೀಕನ ರಾಣಿ
ಪುಂಡರೀಕಗಮನೆ । ಪುಂಡರೀಕ ಚರ್ಮಾಂಬರ ।
ಪುಂಡರೀಕನಾಥನುತೆ ಪುಂಡರೀಕವೆ ನಮಗೆ ೧

ಶುಚಿ ಶರೀರಳೆ ಎನ್ನ ಶುಚಿಯ ಮಾಡುವ ಈ ।
ಶುಚಿಯೊಳಗೆ ನಿನ್ನ ಕೀರ್ತಿ ಶುಚಿಯಾಗಿ ಮನದಲ್ಲಿ ।
ಶುಚಿ ಜನ ಪೇಳುತಿದೆ । ಶುಚಿ ಮಾರ್ಗವನೆ ತೋರಿಸೆ. ೨

ಕೌಂಶಿಕ ವಾಣಿಯೆ ಕೌಂಶಿಕ ಬಿಂಬಸದನೆ ।
ಕೌಂಶಿಕವೇಣಿ ಕರುಣಿ । ಕೌಂಶಿಕ ವಿಜಯವಿಠ್ಠಲನಲ್ಲಿ
ಕೌಂಶಿಕದವನ ಮಾಡು ೩

೨೬೦

ಶಾರದೆಯೇ ಕರುಣಾವಾರಿಧಿಯೇ ಪ

ಸಾರಾಂಶ ವಚನಕೊಟ್ಟು ಸಲಹು ಎನ್ನನು ತಾಯೆ ಅ. ಪ.

ಚಂದ್ರ ಕಿರಣ ಪೋಲ್ವಳೆ ಜಗದಂಬೆ ನಾನು ನಿನ್ನ
ಕಂದ ಎನ್ನಮತಿಗೆ ಸಾಕಾರವಾಗಿರು ಎಂಬೆ ೧

ಸರಸೀರುಹದಳ ನೇತ್ರೆ ಸಾಮಜಕ್ಕೆ ಸಮಯಾತ್ರೆ
ಪರಮಪಾವನ ಚರಿತ್ರೆ ನೀ ಗತಿ ಜಗಕೆ ಮಿತ್ರೆ ೨

ಅಜನ ಪಟ್ಟದ ರಾಣಿ ಅಬುಜ ಪಲ್ಲವ ಪಾಣಿ
ವಿಜಯವಿಠ್ಠಲನ ಸೊಸೆ ಮುದ್ದುವಾಣಿಯೆ ೩

(ಒ) ಭಾರತೀ ದೇವಿ

೨೬೧

ಏನು ಮರುಳಾದೆಮ್ಮ ಯೆಲ ಭಾರತೀ ।
ವಾನರ ಕುಲ ನಿಕರ ಶ್ರೇಷ್ಠನಾದವಗೆ ಪ

ಕಣ್ಣಿಲ್ಲದಂಜನೆಯ ಉದರದೊಳು ಜನಿಸಿ ।
ನಿನ್ನ ತೊರೆದು ಬ್ರಹ್ಮಚಾರಿಯಾಗಿ ॥
ಹಣ್ಣಿಗಾಗಿ ಹೋಗಿ ವನವ ಕಿತ್ತೀಡ್ಯಾಡಿ ।
ಉಣ್ಣ ಕರದರೆ ಎಂಜಲೆಡೆವೈದ ಕಪಿಗೆ ೧

ಪುಟ್ಟಿದನು ಗುರುತಲ್ಪಕನ ವಂಶದಲಿ ।
ನಟ್ಟಿರುಳೆ ಒಬ್ಬ ಅಸುರಿಯ ಕೂಡಿದಾ ॥
ಹೊಟ್ಟೆಗಾಗಿ ಪೋಗಿ ಭಿಕ್ಷದನ್ನವನುಂಡ ।
ಅಟ್ಟು ಹಾಕುವನಾದ ಕುಲವ ಕೊಂದವಗೆ ೨

ಮಂಡೆ ಬೋಳನಾಗಿ ಭೂಮಂಡಲ ಚರಿಸುವ ।
ಕಂಡವರಾರು ಈತನ ಗುಣಗಳಾ ॥
ಪುಂಡರೀಕಾಕ್ಷ ವಿಜಯವಿಠ್ಠಲನ್ನ ।
ಕೊಂಡಾಡುತ ತಾ ಬೋರೆ ಗಿಡದ ಕೆಳಗಿಪ್ಪ ೩

೨೬೨

ಭಾರತೀ ಜನನಿ ಪಾಲಿಸು ನಿತ್ಯ ಮಾರುತನ ರಾಣಿ ।
ಭಾರಿ ಭಾರಿಗೆ ಎನ್ನ ಭಾರ ನಿನ್ನದೇ ವಾಣೀ ಪ

ಭಕುತಿ ಇಲ್ಲದೇ ಅನುದಿನ ।
ಅಕಟನಿಲ್ಲದೆ ।
ಸಕಲ ಠಾವಿನಲ್ಲಿ ಅರ್ಭಕನಾಗಿ ತಿರುಗಿ ಪಾ ।
ಪಕೆ ಎರಗಿದೆ ಯಾತಕೆ ಬಾರದವನಾದೆ ೧

ಆರನ್ನ ಕಾಣದೆ ನಿನ್ನನು ನಾ ।
ಸಾರಿದೆ ಮಾಣದೆ ।
ವಾರ ವಾರಕೆನ್ನ ಉದ್ಧಾರವ ಮಾಳ್ಪುದು ।
ಕಾರುಣ್ಯದಿಂದಲಿ ಶೃಂಗಾರವಾರಿಧಿ ವೇಗ ೨

ನುತಿಸಿ ವಂದನೆ ಮಾಡುವೆ ನಿತ್ಯ ।
ಕೃತಿಯನಂದನೆ ।
ಸತತ ವಿಜಯವಿಠ್ಠಲನ ಪದಾಬ್ಜದಿ ।
ರತಿ ಆಗುವಂತೆ ಸುಮತಿಯನು ಕರುಣಿಸೇ ೩

೨೬೩

ಭಾರತೀ ಭವಹಾರಿಯೆ । ಭಕ್ತರಪ್ರಿಯೆ ।
ಭಾರತೀ ಭವಹಾರಿಯೇ ಪ

ಈರೈದು ಇಂದ್ರಿಯಗಳುಗಾರು ।
ಮಾಡದಂತೆ ಸಾಕಾರವಾಗಿ ಪಾಲಿಸು ಅ.ಪ.

ಮತಿವಂತನ ಮಾಳ್ಪುದು । ಇದಕೆ ನಿನ್ನ ।
ಪತಿಯ ಈಗಲೆ ಕೇಳ್ವುದು ।
ಕ್ಷಿತಿಯೊಳು ಹೀನರ ಸ್ತುತಿಸಲರಿಯೆ । ಮು–
ಕುತಿ ಮಾರ್ಗವ ತೋರಿ ಭಕುತಿ ಬೇಗ ಒದಗಿಸು ೧

ಮಹತ್ತತ್ವದಭಿಮಾನಿ ನೀ । ಕಲಿರಹಿತೆ ।
ಅಹಿಪತಿ ಅಪ್ಪ ಖಗಪ ಜನನೀ ॥
ಮಹಾಪ್ರಮಾಣು ವ್ಯಾಪುತೆ ಸರ್ವಜೀವರ ।
ದೇಹದಲಿ ನಿಂದು ಶ್ರೀಹರಿ ಆರಾಧನೆಯ ರಹಸ್ಯವ ೨

ಶರಣು ಶರಣು ಗುಣಮಣಿ । ಚಂದ್ರಪ್ರಕಾಶೆ ।
ಪರಮ ಪಾವನಿ ಕಲ್ಯಾಣಿ ತರತಮ್ಯ ಭಾವದಿ ॥
ಅರಿದು ಕೊಂಡಾಡುವ ಚಿಂತೆ ಇರಲಿ । ವಿ– ।
ಸ್ಮರಣೆಯಾಗದಂತೆ ವಿಜಯವಿಠ್ಠಲನ್ನ ನಿರುತ ಪೊಂದಿಸು ೩

೨೬೪

ಶರಣು ಮಾರುತನ ರಾಣಿಗೆ । ಶರಣು ನಿತ್ಯ ಕಲ್ಯಾಣಿಗೆ ।
ಶರಣು ಶರಣು ಲೋಕ ಜನನಿಗೆ । ಶರಣು ಮುಂದಣ ವಾಣಿಗೆ ಪ

ಶ್ರದ್ಧೆ ಭಾರತಿ ಭಾಗ್ಯ ಸಂಪನ್ನೆ ।
ಪದ್ಮ ಮಂದಿರ ನಂದನೆ ।
ಭದ್ರ ಫಲದಾಯಕಳೆ ಕರುಣಾಬ್ಧಿಯೇ ಭಕ್ತರಪ್ರಿಯೇ ೧

ಖಗಪನ್ನಗ ನಗಮಗಳ ಪತಿಯಿಂದ ಮಿಗಿಲೆನಿಪೆ ಶತಗುಣದಲಿ ।
ಮೃಗನಾಭಿ ನೊಸಲಲ್ಲಿ ಶೋಭಿಸೆ ।
ಮೃಗಕುರುಹ ಸಿರಿಮೊಗದವಳೆ ೨

ಇಂದ್ರಸೇನಳೆ ವಿಪ್ರ ಕನ್ನಿಕೆ । ಚಂದ್ರದಿ ಸ್ಥಾನವಾಸಳೆ ।
ಇಂದ್ರನುತ ಸಿರಿ ವಿಜಯವಿಠ್ಠಲನ ।
ವಂದಿಸುವ ದ್ರೌಪದಿದೇವಿ ೩

೨೬೫

ಶರಣು ಶರಣು ಪ

ಶರಣು ಭಾರತಿದೇವಿಗೆ ಶರಣು ವಾಯುರಮಣಿಗೆ
ಶರಣು ಶರಣರ ಪೊರೆವ ಕರುಣಿಗೆ ಶರಣು ಸುರವರ ದೇವಿಗೆ ಅ. ಪ.

ಶ್ರದ್ಧೆ ಭಾರತಿ ಭಾಗ್ಯ ಸಂಪನ್ನೆ ಪದ್ಮ ಮಂದಿರ ನಂದನೆ
ಬುದ್ಧಿ ವರದಾಯಕಳೆ ಕರುಣಾಬ್ಧಿಯೆ ಭಕ್ತರ ಪ್ರಿಯಳೆ ೧

ಖಗ ಪನ್ನಗ ಗಿರಿ, ಶರಿಂದಲಿ ಮಿಗಿಲೆನಿಪೆ ಶತಗುಣದಲಿ
ಮೃಗನ ನಾಭಿ ನೊಸಲಿಗೊಪ್ಪುವ ಮೃಗಕಲಾನನೆ ದೇವಿಯೆ ೨

ಇಂದ್ರಸೇನಳೆ ವಿಪ್ರಕನ್ನಿಕೆ ಚಂದ್ರಾಧಿಷ್ಠನ ವಾಸಳೆ
ಇಂದ್ರನುತ ಸಿರಿ ವಿಜಯವಿಠ್ಠಲನ ವಂದಿಪ ದ್ರೌಪದಿ ದೇವಿಯೆ ೩

೨೬೬

ಶ್ರೀ ಮಾರುತನ ಮಾನಿನಿ ಭಾರತೀದೇವಿ
ಆ ಮಹಾಭಕುತಿಗಭಿಮಾನಿ ಪ

ಕಾಮಾಂತಕ ಸುತ್ರಾಮ ಕಾಮ ರವಿ
ಸೋಮವಿನುತೆ ಮದಸಾಮಜ ಗಮನೆ
ನೀಲಕುಂತಳೆ ಮೋಹನ್ನೇ–ಸುವಾಣಿ ಚನ್ನೆ
ಬಾಲಾರ್ಕ ತಿಲಕರನ್ನೆ
ಫಾಲೆ ವಿಶಾಲೆ ಗುಣರನ್ನೆ –ಕುಂದರದನ್ನೆ
ಮೂಲೋರ್ಕದೊಳು ಪಾವನ್ನೆ
ಕಾಳವ್ಯಾಳ ವೇಣಿ ಮ್ಯಾಲೆ ರ್‍ಯಾಗಟೆ ಪೊ
ನ್ನೊಲೆ ಚವುರಿಗೊಂಡ್ಯ ಹೆರಳು ಭಂಗಾರ ಕು–
ಟ್ಟಿಲ ಚಂಪಕ ನಾಸಿಕ ನೀಲೋ
ತ್ಪಲೆ ನೇತ್ರಳೆ ಪಾಂಚಾಲಿ ಕಾಳಿ ನಮೋ ೧

ಪೊಳಿವೊ ಕೆಂದುಟಿ ನಸುನಗೆ ಪತ್ತು ದಿಕ್ಕಿಗೆ
ಬೆಳಕು ತುಂಬಿರಲು ಮಿಗೆ
ಥಳಕು ವೈಯಾರದ ಬಗೆ ಮೂಗುತಿಸರಿಗೆ
ಸಲೆ ಭುಜಕೀರ್ತಿ ಪೆಟ್ಟಿಗೆ
ಥಳಥಳಿಸುವ ಕೊರಳೊಳು ತ್ರಿವಳಿ ನ್ಯಾ
ವಳಿ ತಾಯಿತು ಸರಪಳಿಯ ಪದಕ ಪ್ರ
ವಳ ಮುತ್ತಿನ ಸರಪಳಿಗಳು ತೊಗಲು
ಎಳೆ ಅರುಣನ ಪೋಲುವ ಕರತಳವ ೨

ಕಡಗ ಕಂಕಣ ಮಣಿದೋರೆ–ದೋಷ ವಿದೂರೆ
ಝುಡಿತದುಂಗುರ ಶೃಂಗಾರೆ
ಮುಡಿದ ಮಲ್ಲಿಗೆ ವಿಸ್ತಾರೆ–ಕಂಚುಕಧರೆ

ಉಡಿಗೆ ಶ್ವೇತಾಂಬರ ನೀರೆ
ಬಡ ನಡು ಕಿಂಕಿಣಿ ನಿಡುತೋಳ್ಕದಳಿಯ
ತೊಡೆ ಪದದುದಿಗೆ ಉಡುಗೆಯಿಂದೊಪ್ಪುತ
ಪೊಡವಿಗೊಡೆಯ ನಮ್ಮ ವಿಜಯವಿಠ್ಠಲನ್ನ
ಅಡಿಗಳರ್ಚಿಪುದಕೆ ದೃಢಮನ ಕೊಡುವಳ ೩

(೬) ಶ್ರೀರುದ್ರದೇವರು

೨೬೭

ಈತನೀಗ ಪ್ರಣವ ಪಾದ್ಯನೊ ।
ಭೂತ ಪ್ರೇತ ಪ್ರಮಥ ತತಿಗೆ ।
ನಾಥನೆನಿಪ ನಮಗೆ ನಿರುತ ।
ವಾಕನೊಳಗೆ ಹರಿಯ ತೋರುವ ಪ

ಗಜದನುಜ ವಿನಾಶನೀತ ।
ಗಜವದನನ ಪೆತ್ತನೀತ ।
ಗಜನ ಸದದನೀತ ಪೆತ್ತಂ ।
ಗಜನ ಗೆದ್ದ ಗಂಭೀರನೀತ ।
ಗಜರಿಪುರಥ ರಮಣನೀತಾ ನಂ ।
ಗಜಮಾರಗೊಲಿದನೀತ ।
ಗಜ ವರದನ ಭಕ್ತರಘವೆಂಬೊ ।
ಗಜಕೆ ಕೇಸರಿಯಾಗಿಪ್ಪನೀತಾ ೧

ದ್ವಿಜರಾಜ ಜುಟನೀತಸೋತ್ತಮ ।
ದ್ವಿಜಗೆ ಪಾಲಿಪನೀತ ಸತತಾ ।
ದ್ವಿಜ ಪನ್ನಗನ್ನ ಸಮಗುಣನೀತಾ ।
ದ್ವಿಜ ಕುಲದಲ್ಲಿ ಉದ್ಭವನೀತ ।
ದ್ವಿಜನ ಶಾಪವ ಕೈಕೊಂಡನೀತ ।

ದ್ವಿಜ ಭೂಷಣ ಯಾಗದಲಿ ಸೂರ್ಯನ ।
ಧ್ವಜವ ಕಿತ್ತಿದನೀತ ಕೈಲಾಸ ।
ದ್ವಿಜವಾಗಿವುಳ್ಳ ಉಗ್ರೇಶನೀತ ೨

ತ್ರಿಗುಣಾಕಾರ ನೀತ ಮೂರು ।
ಜಗವದಲ್ಲಣನೀತ ಮೇರು ।
ನಗಚಾಪನೀತ ನಾರಾಯಣಾಸ್ತ್ರದಿ ।
ನಗರನುರುಪಿ ಬಿಟ್ಟನೀತ ।
ಬಗೆಬಗೆಯ ಜೀವಿಗಳಿಗೆ ಬಿಡದೆ ।
ಅಗಣಿತ ಭೋಗ ಪ್ರದಾತನೀತ ।
ಮೃಗಲಾಂಛನದ ಮೊಗನಗೆ ಈತ ।
ನಿಗಮಾಶ್ರವದಗಧಿಕನೀತಾ ೩

ಭಸುವ ರಾವಣ ಮಾಗಧ ಕಶ್ಯಪ ।
ಅಸುರಗಣಕೆ ವರವಿತ್ತನೀತ ।
ಪಶುವದನ ಪರಮೇಶ್ವರನೀತ ।
ವಿಷವ ಭಂಜನಭವ ಶಿವನೀತ ।
ಬಿಸಿಜ ಸಂಭವ ನಂದನನೀತ ।
ಅಸಮವೀರ ವೈಷ್ಣವನೀತ ।
ವಸುಧಿಯೊಳಗೆ ಶರಣ ಜನಕೆ ।
ವಶವಾಗಿಯಿಪ್ಪ ಉಗ್ರೇಶನೀತಾ ೪

ಹೇಮಕೂಟಾದ್ರಿ ನಿಲಯನೀತ ।
ರಾಮದೇವ ವಾಸವಂದ್ಯ ।
ಸೋಮವರ್ಣನೀತ ಸಕಲ ।
ಕಾಮಿತಾರ್ಥವ ಕೊಡುವನೀತ ।
ಯಾಮ ಯಾಮಕೆ ಮನದೊಳು ನಿಂದು ।
ಕ್ಷೇಮ ಮಾರ್ಗಕ್ಕೆ ಪ್ರೇರಕನೀತ ।
ರಾಮ ವಿಜಯವಿಠ್ಠಲನಂಘ್ರಿ ।
ನಾಮನೆನಿಸಿ ಕೊಂಡಾಡುವನೀತಾ ೫

೨೬೮

ಈಶಾ ಕೈಲಾಸವಾಸಾ । ಕಾಶೀನಗರಾಧೀಶಾ ।
ಶೇಷಭೂಷಣ । ಗಿರೀಶಾ । ವಿಶ್ವೇಶ ಚಿತ್ತವಾಸಾ ಪ

ಶಿವಸಿದ್ಧ ಸಾಧ್ಯ ಸೇವ್ಯಾ । ಭವವನಾಶವ ದಿವ್ಯ ।
ಭವಮೂರ್ತಿ ಕೀರ್ತಿಭವ್ಯಾ । ಕವಿ ಪ್ರಿಯ ಜ್ಞಾನ ದ್ರವ್ಯಾ ಹಾ ॥
ಶಿವ ಓಂ ನಮಃ ಶಿವ । ಸವಚರಣ ನೋಡುವ ।
ಪವಿತ್ರ ಚಿತ್ತವ ಕೊಡು । ಧವಳ ಗಂಗಾಧರನೇ ೧

ಸತಿನಾಥ ಭೂತ ಪ್ರೀತ । ಸತತ ಸದ್ಗುಣ ವ್ರಾತ ।
ಪತಿತ ಪಾವನ ತಾತ । ಕೃತುವೈ ಪದ್ಮಜಾತ ಹಾ ॥
ಕ್ಷಿತಿಯೊಳು ನೀಲಲೋಹಿತ । ನೀನೇ ಗುರುವೆಂದು ।
ತುತಿಪ ಗತಿಗೆ ರಘು । ಪತಿನಾಮ ಎನಗೀಯೋ ೨

ತ್ರಯನೇತ್ರ ಚಿತ್ರಗಾತ್ರ । ನಯ ನಮಿಪರ ಮಿತ್ರ ಜಯ ।
ಜಯಾಮರ ಸ್ತೋತ್ರ । ದಯಮಾಡೋ ಪುಣ್ಯ ಪಾತ್ರಾ ಹಾ ॥
ಭಯ ನಿವಾರಣ ಸಿರಿ । ವಿಜಯವಿಠ್ಠಲನ ।
ಭಕುತಿಯ ಕೊಡು ಅತಿ । ಶಯದಿ ಪಿನಾಕೀಶಾ ೩

೨೬೯

ಎಂದು ನೋಡುವೆ ಎನ್ನ ಗುರುವಿನಾ ।
ನಿಂದು ನಂದಿಗಮನನಾ ಎಂದೆಂದಿಗೆ ಪೊಂದಿದವರಿಗಾ ।
ನಂದ ಕೊಡುವ ಇಂದು ಮೌಳಿಯ ಪ

ತ್ರಿಗುಣ ರೂಪನ ತ್ರಿಭುವನೇಶನ ।
ಜಗತಿಧರ ವಿಭೂಷನ ॥
ನಿಗಮವಂದ್ಯ ನೀಲಕಂಠನ
ನಗವತಿ ಸುತಿಪತಿಯ ರುದ್ರನ ೧

ತಪೋಧನೇಶನ ತಪ ಪ್ರತಾಪನ ।
ತಪನ ಶಶಿ ಅಗ್ನಿನೇತ್ರನ ।
ಕುಪಿತ ರಹಿತ ಕುಜನ ಮಥನನ ।
ಅಪರಮಿತ ಗುಣ ವನದಿ ಶಿವನ ೨

ವಿಮಲಗಾತ್ರನ ವಿಶ್ವಪಾಲನ ।
ರಮೆಯರಸ ಪದಿಧಾರನ ॥
ಶಮಜಿತನನ ಸುಜನ ರನ್ನನ ।
ನಮಿಸುವರ ಮನೋವಾಸ ಈಶನ ೩

ಅಂಧಹರಣನ ಅರ್ಧವೇಷನ ।
ಮಂದಮತಿ ವಿದುರನ ।
ಬಂಧು ಬಳಗನ ಬಹು ಉದ್ದಂಡನ ।
ಅಂಧ ಏಕೇಶವರ್ನ ವದನನ ೪

ತತುವನಾಥನ ತುಂಗ ವರದನ ।
ಸತತ ವೈರಾಗ್ಯ ಭಾಗ್ಯನ ॥
ಪತಿತ ಪಾವನ ವಿಜಯ ವಿಠ್ಠಲನ್ನ ।
ತುತಿಪ ಅವಿಮುಕ್ತಿ । ಪತಿ ವಿಶ್ವೇಶನ ೫

೨೭೦

ಕೈಲಾಸವಾಸ ಗೌರೀಶ ಈಶ ಪ

ತೈಲ ಧಾರೆಯಂತೆ ಮನಸುಕೊಡು ಹರಿಯಲ್ಲಿ ಶಂಭೋ ಅ

ಅಹೋ ರಾತ್ರಿಯಲಿ ನಾನು ಅನುಚರಾಗ್ರಣಿಯಾಗಿ
ಮಹಿಯೊಳಗೆ ಚರಿಸಿದೆನೊ ಮಹದೇವನೆ

ಅಹಿಭೂಷಣನೆ ಎನ್ನವಗುಣಗಳೆಣಿಸದಲೆ
ವಿಹಿತ ಧರ್ಮದಿ ಕೊಡು ವಿಷ್ಣುಭಕುತಿಯ ಶಂಭೋ ೧

ಮನಸು ಕಾರಣವಲ್ಲ ಪಾಪ ಪುಣ್ಯಕ್ಕೆಲ್ಲ
ಅನಲಾಕ್ಷ ನಿನ್ನ ಪ್ರೇರಣೆಯಲ್ಲದೆ
ದನುಜ ಗಜಮದ ಹರಿಯೆ ದಂಡ ಪ್ರಣಾಮವ ಮಾಳ್ಪೆ
ಮಣಿಸು ಈ ಮನವ ಸಜ್ಜನರ ಚರಣದಿ ಶಂಭೋ ೨

ಭಾಗೀರಥೀಧರನೆ ಭಯವ ಪರಿಹರಿಸೈಯ ಲೇ
ಸಾಗಿ ಒಲಿದು ಸಂತತ ಶರ್ವದೇವ
ಭಾಗವತ ಜನಪ್ರೀಯ ವಿಜಯವಿಠ್ಠಲನಂಘ್ರಿ
ಜಾಗುಮಾಡದೆ ಭಜಿಪ ಭಾಗ್ಯವನು ಕೊಡೋ ಶಂಭೋ ೩

೨೭೧

ಗೌರೀವರನೆ ಎನ್ನ ಮೊರೆ ಕೇಳೊ ಚೆನ್ನ
ಹೌರನೆ ಮತಿಯಿತ್ತು ಸಲಬೇಕೆನ್ನ ಪ

ಗೌರವ ಗಾತುರ ತೌರ ಮನೆಯ ಹರ
ಕೌರವಾಂತಕನೊಳು ಶೌರಿಯ ತೋರಿಸೋ ಅ.ಪ.

ಮೃಗಲಾಂಛನ ಸನ್ಮೌಳಿ ಶಿವ ಮಹಾದೇವ
ತ್ರಿಗುಣಾತುವ ಗಾತುರ ಭಕ್ತ ಸಂಜೀವ
ನಿಗಮತುರಗ ಪಾವ ವನಮಾಲ ಪಾವಾ
ಮೃಗಪಾಣಿ ಮೃತ್ಯುಂಜಯ ಸುಪ್ರಭಾವ

ನಗೆಪಗೆ ಮಗನನು ಮೃಗನೆವನದಿ ಕಾ
ಳಗಮಾಡಿ ಮೆಚ್ಚಿದೆ ಅಗಣಿತ ಗುಣಮಣಿ
ಯುಗಯುಗದಲಿ ವಾಲಗ ನಿನ್ನವರೊಳು
ಮಗಳೆ ಮಗುಳೆ ಕೊಡು ಗಗನೇಶ ಜನಕ ೧

ಭವಹರ ತ್ರಿಯಂಬಕ ತ್ರಿಪುರಾರಾತಿ
ಪವನ ಸಪುತ ಸಪ್ತ ವಂದಿತ ಖ್ಯಾತಿ
ಅವನಿಯೋಳ್ ಕೈಲಾಸ ವಾಸ ಅಪ್ರತಿ
ನವ ವಿಧ ಭಕುತಿ ಕೊಡು ಶಂಭು ಪಶುಪತಿ

ದಿವಸ ದಿವಸ ವೈಶ್ರವಣ ಬಾಂಧವ ದೇ
ಹವೆ ನಿನಗೊಪ್ಪಿತು ಅವನಿಯೊಳುತ್ತಮ
ಶ್ರವಣದೊಳಗೆ ರಾಘವನ ಕಥಾಮೃತ
ಸವಿದೋರುವುದೋ ಭುವನ ಪವಿತ್ರ ೨

ಅಜಭೃಕುಟ ಸಂಭೂತ ಭೂತಗಣೇಶ
ಭುಜಗ ಕುಂಡಲ ಮಾಲಾ ವಿಭೂತಿ ಭೂಪ
ನಿಜ ಮಹಾ ಸ್ಮಶಾನವಾಸ ಉಗ್ರೇಶ
ತ್ರಿಜಗಪಾವನ ಗಂಗಾಧರ ವಿಶ್ವೇಶ

ಸುಜನರ ಹೃದಯ ಪಂಕಜದೊಳ್ ಮಿನುಗುವ
ಗಜ ಪಾಲಕ ರಂಗ ವಿಜಯವಿಠ್ಠಲನಂಘ್ರಿ
ಭಜನೆಯ ಕೊಡು ಭೂಭುಜ ದೇವೋತ್ತಮ
ರಜತಾದ್ರಿ ನಿಲಯನೆ ಗಜ ಅಜಿನಾಂಬರ ೩

೨೭೨

ಪಂಪಾತೀರದ ಲಿಂಗಾ ಭವಭಸಿತಾಂಗಾ
ಸಂಪುಲ್ಲಾಕ್ಷನ ತೋರೋ ಭಕ್ತ ಕೃಪಾಂಗ ಪ

ನೀನೆ ಗತಿಯೆಂದು ನಿದಾನದಿಂದ
ಧ್ಯಾನವ ಮಾಡಲು ದೈನ್ಯದಲಿಂದ
ಹೀನ ಪಾಪಂಗಳು ಕಳೆದು ದಯದಿಂದ
ಮಾನಾಭಿಮಾನದೊಡೆಯನೆ ಆನಂದ ೧

ಗಜಚರ್ಮಾಂಬರ ಗಂಗಾಧರ ಪುರವೈರಿ
ಭಜಿಸಿದೆನೊ ನಿನ್ನ ಭಕ್ತಿಯಲಿ ಸಾಕಿರೆ
ಕುಜನರೊಳಿಡದೆ ಉತ್ತಮವಾದ ದಾರಿ
ನಿಜವಾಗಿ ತೋರಯ್ಯ ದೀನರುಪಕಾರಿ ೨

ಹೇಮಗಿರಿಯ ವಾಸಾ ಈಶನಿರೀಶಾ
ಸೋಮಶೇಖರನೆ ಪಾರ್ವತಿಯ ವಿಲಾಸಾ
ರಾಮ ಶ್ರೀ ವಿಜಯವಿಠ್ಠಲನೆ ನಿರ್ದೋಷಾ
ಸ್ವಾಮಿಯ ನೆನೆವಂತೆ ಕೊಡು ಎನಗೆ ಮನಸಾ ೩

೨೭೩

ಪಂಪಾಪುರಾಧಿಪ ಶ್ರೀ ವಿರೂಪಾಕ್ಷ ನೀ ಪಾಲಿಪುದೆಮ್ಮನು ಪ

ಕಾಪಾಡುವುದು ಶ್ವೇತ ದ್ವೀಪಾವಾಸನ ತೋರಿ
ಸರ್ಪಭೂಷಣ ದೇವ ತ್ರಿಪುರಸಂಹಾರ
ಭಾಪುರೆ ಸುರಕುಲ ದೀಪ ಸದಾಶಿವ
ಶ್ರೀಪತಿ ಪಾದ ಸಮೀಪದ ಸೇವಕ ಅ.ಪ.

ಹರಿಪಾದೋದಕ ಶಿರದಲಿ ಧರಿಸಿದ
ಹರಿಕಥಾಮೃತ ಮಳೆಗರೆವೆ ನೀ
ಕರುಣಿ ಸಂಕರುಷಣನ ಚರಣಾಬ್ಜ ಧೂಳಿ ಶ-
ರೀರ ಲೇಪನದಿಂದ ವರ ತೇಜಯುತನೆ

ಮುರಹರಗೆರಗದ ನರನಿಗೆ ನರಕವು
ಸ್ಥಿರವೆಂದು ಸುರವರ ಭೇರಿ ಭೋರಿಡುತಿರೆ
ನಿರುತ ಅವನ ಪದ ಮರೆಯದೆ ಮನಗೊಂಡೆ
ಶರಣು ಅಮರನುತ ಗುರು ಶಿರೋಮಣಿಯೆ ೧

ದೇಶಕ್ಕೆ ದಕ್ಷಿಣ ಕಾಳಿಯೆನಿಸುವ ವಿ-
ಶೇಷ ಸ್ಥಳದೊಳು ವಾಸವಾಗಿ ಅ-
ಶೇಷ ಜನರನ್ನು ಲೇಸಾಗಿ ಸಲಹುವಿ
ವಾಸವಾದಿ ಅನಿಮೇಷ ವಂದಿತನೆ

ದೋಷನಾಶನ ಸಂತೋಷದಿ ಗಿರಿಜೆಗೆ
ಶ್ರೀಶನ ಮಂತ್ರೋಪದೇಶವ ಮಾಡಿದೆ
ದಾಶರಥಿಯ ನಿಜದಾಸರೆನಿಸುವರ
ಪೋಷಿಪೆ ಶಿವ ಪರಮೇಶ ಕೃಪಾಳೊ ೨

ಕಂದುಗೊರಳ ಜೀಯ ಸಿಂಧೂರ ಮೊಗನಯ್ಯ
ಕಂದರ್ಪಹರ ಭಕ್ತಬಾಂಧವ ಕಾಯೊ
ಇಂದಿರೆರಮಣ ಗೋವಿಂದನ ಪಾದಾರ-
ವಿಂದ ಭೃಂಗನೆ ಭವದಿಂದ ಕಡೆಗೆ ಮಾಡೊ

ನಂದಿವಾಹನ ಎನ್ನ ಹಿಂದಣ ಕಲುಷಿತ
ವೃಂದಗಳೋಡಿಸುವ ಇಂದುಧರ ಅರ-
ವಿಂದನಯನ ಸಿರಿ ವಿಜಯವಿಠ್ಠಲನ
ಕುಂದದೆ ಭಜಿಪ ಆನಂದವ ಕರುಣಿಸು ೩

೨೭೫

ಬಂದು ಕಂಡೆನೊ ಇಂದು ।
ಇಂದುಧರನ ಪಾದದ್ವಂದ್ವಗಳನು ದಿನವು ।
ಎಂದೆಂದಿಗೆ ಬಿಡದೆ । ಪೊಂದಿದ್ದ ಪಾಪಗಳು ।
ನಿಂದಿರದಲೆ ಓಡಿ ಬೆಂದು ಪೋದವು ನೋಡಾ ಪ

ಸತಿಗೆ ಅರ್ಧಕಾಯ ಹಿತದಿಂದಲಿ ಇತ್ತು ।
ಚತುರತನದಲಿಳೆಯೊಳು ಪತಿತ ಮಾನವರಿಗೆ ।

ಮತಿಬಾಹದೊ ಮಾನಸ ಸತತ ದೃಢವನೀವ ।
ಪ್ರತಿದಿನದಲಿ ಕಾಯ್ವಾ ೧

ವಿಷವ ಧರಿಸಿ ಸುಮನಸರ ನಡುವೆ ಮೆರೆದೆ ।
ಪಶುವಾಹನ ಪರಮೇಶ ಅಸುರಾರಿಗಲ್ಲದ ।
ಅಸುರರ ಕೊಲ್ಲುವ ರಂಜಿಸುವಾ ।
ಶಶಿ ಜಟಾ ಕಮನೀಯ ಮಣಿಮಕುಟಾ ೨

ಕಡಲ ತಡಿಯವಾಸ । ವೊಡಿಯ ರಾಮನ ದಾಸ ।
ಮೃಡರುಂಡ ಮಾಲಾಭೂಷಾ ॥
ಬಿಡದೆ ಸೇತುಬಂಧ ವಿಜಯವಿಠ್ಠಲನ ।
ಅಡಿಗಡಿಗೆ ನೆನೆಸುವ ಶಿವರಾಮಲಿಂಗಾ ೩

೨೭೫

ಮನ್ನಿಸು ಮಾರಾರಿ ಮುದದಿಂದಲಿ ಎನ್ನ ।
ಬಿನ್ನಪವನೆ ಲಾಲಿಸಿ ಮುನ್ನೆ ಮಾಡಿದ
ಯಿನ್ನು ದುರಿತಗಳನ್ನು ಹಾರಿಸಿ ।
ಎನ್ನನನುದಿನ

ಪ

ಅಮಿಶ್ರ ತತ್ವದಲಿ ಕಲಿ ವಿರಹಿತ ರುದ್ರ ।
ಹಮ್ಮಿನಿಂದಿತ್ತ ಸರ್ವವ ನೋಳ್ಪನೆ ।
ಬೊಮ್ಮನಾ ತತ್ವದಲಿ ಹೋಗಿಬರುವ ಪ್ರಬಲ್ಯ ।
ಉಮ್ಮೆಯರಸಾ ತಾಮಸ ಕಾರ್ಯದಧಿಪತಿ ।
ಒಮ್ಮೆ ಬಿಡದಲೆ ನರಹರಿಯ ನಾ ।
ಮಾಮ್ಮರತ ಮನದಲಿ ನೆನಸುವ ಸುಖದಿಂದಲಿ ।
ಅಮ್ಮಹಾ ವೈರಾಗ್ಯ ಭಾಗ್ಯವ ।
ಕಮ್ಮರದಿ ಕೊಡು ಕರುಣದಿಂದಲಿ ೧

ನಂದಿವಾಹನ ನಾಗತಲ್ಪ ಕಲ್ಪಾಂತರ ।
ಚಂದಿರಮವ್ಯಾಳಿ ಚರ್ಚಕನಾಯಕ ।
ಕುಂದುಗೊರಳ ನೀಲಕಂಠಾಗಮನ್ಯೆಯ್ಯ ।
ವಂದೀರ್ಯೆದು ಸ್ಥಾನ ವಾಸವಾದ್ಯ ॥
ಇಂದು ನಿನ್ನ ಪಾದದ್ವಂದ್ವ ನಂಬಿದೆ ।
ನಿಂದಕರ ಸಂಗತಿ ಸಂಗತಿಯಲಿಡದಲೇ ।
ಪೊಂದಿಸೋಮ ಜನರೊಳಗೆ ಎರ ।
ಡೊಂದುಪುರ ವಿನಾಶಾ ಈಶಾ ೨

ತುಂಗ ಪೊಂಪಾಕ್ಷೇತ್ರ ನಿಲಯ ನಿಖಿಳ ಶಾಂತ ।
ತುಂಗ ಮಹಿಮಾ ಶಂಭೋ ನಿಟಿಲನೇತ್ರ ।
ಮಂಗಳಾಂಗ ಶ್ರೀ ವಿಜಯವಿಠ್ಠಲನ ।
ಹಿಂಗದೆ ಮನದಲ್ಲಿ ನೆನೆಸುವರ ।
ಸಂಗಸುಖ ಸರ್ವದಾ ಸುಜನಪಾಲಕ ।
ಪೊಂಗರ್ಭಸುತ ಪತಿತ ಪಾವನ ೩

೨೭೬

ರುದ್ರಾ ವೀರಭದ್ರ ಅದ್ರಿನಂದನೆ ರಮಣಾ ಪ

ರೌದ್ರ ಮೂರುತಿ ದಯಾಸಮುದ್ರ ಎನ್ನನು ಕಾಣೊ ಅ. ಪ.

ಮುಪ್ಪುರವ ಗೆದ್ದ ಮುಕ್ಕಣ್ಣ ಮನ್ಮಥ ವೈರಿ
ಸರ್ಪಭೂಷಣ ಮೃತ್ಯು ನಿವಾರಣ
ಕಪ್ಪುಗೊರಳ ಕೃತ್ತಿವಾಸ ವ್ಯೋಮಕೇಶ
ಒಪ್ಪಿಕೊಳ್ಳಬೇಕು ಒಲಿದು ಈ ವಾಕು ೧

ಸದ್ಯೋಜಾತ ಭೂತನಾಥ ಭಕುತರದಾತ
ಖದ್ಯೋತ ಲಾವಣ್ಯ ಸುರಜ್ಯೇಷ್ಠನ

ಮಧ್ಯವಾಸನ ಭೇದ ಶ್ರೀ ವಿಷ್ಣುವಿನ ಪಾದ
ಹೃದ್ಯದೊಳಗಿಟ್ಟ ಜಟಾ ಜೂಟ ಬಲು ಧಿಟ್ಟ ೨

ಮನೋನಿಯಾಮಕ ಗುರುವೆ ದೈನ್ಯದಿಂದಲಿ ಕರೆವೆ
ಜನಿಸಿ ಕಾಡುವ ರೋಗ ಕಳೆಯೊ ಬೇಗ
ಅನುಪಮ ವಿಜಯವಿಠ್ಠಲನ ನಾಮಾಮೃತವ
ಎನಗುಣಿಸುವುದೋ ಸಾಂಬು ಮರುತ ಪ್ರತಿಬಿಂಬ ೩

೨೭೭

ಲಿಂಗಾ ಎನ್ನಂತರಂಗ ಪ

ಮಂಗಳಾಂಗ ಸರ್ವೋ-ತುಂಗನೆ ರಾಮ ಅ. ಪ.

ಮಂದಾಕಿನೀಧರಗೆ ಗಂಗಾಂಬು ಮಜ್ಜನವೆ
ಚಂದ್ರಮೌಳಿಗೆ ಗಂಧ ಕುಸುಮಾರ್ಪಣೆಯೆ
ಇಂದು ರವಿನೇತ್ರಗೆ ಕರ್ಪೂರದಾರತಿಯೆ
ಕಂದರ್ಪಜಿತಗೆ ಮಿಗಿಲಾಪೇಕ್ಷೆಯೆ ರಾಮಾ ೧

ಘನವಿದ್ಯಾತುರಗೆ ಮಂತ್ರಕಲಾಪವೆ
ಧನವತಿಯ ಸಖಗೆ ಕೈಕಾಣಿಕೆಯೆ
ಮನೆರಜತ ಪರ್ವತಗೆ ಫಣಿಯ ಆಭರಣವೆ
ಮನೋ ನಿಯಾಮಕಗೆನ್ನ ಬಿನ್ನಹವೆ ರಾಮಾ ೨

ವೈರಾಗ್ಯ ನಿಧಿಗೆ ಈ ವಿಷಯ ಪದಾರ್ಥವೆ
ಗೌರಿಯ ರಮಣಗೆ ಈ ಸ್ತೋತ್ರವೆ
ವೀರ ರಾಘವ ವಿಜಯವಿಠ್ಠಲ ನಿಜಹಸ್ತ
ವಾರಿಜದಳದಿಂದುದ್ಭವಿಸಿದ ಮಹಾ ೩

೨೭೮

ಲಿಂಗಾಭವ ಭಸಿತಾಂಗ ಅಂಗಜಮದ ಭಂಗ ಪ

ಶೃಂಗಾರ ಗುಣನಿಧಿ ಕೃಪಾಂಗ ಎನ್ನನು ಕಾಯೊ ಅ. ಪ.

ರಜತಪರ್ವತವಾಸ ಸುಜನ ಮನವಿಲಾಸ
ಅಜನಂದನ ರುದ್ರ ವೀರಭದ್ರಾ
ಕುಜನಮತವನು ಬಿಡಿಸೊ ನಿಜಪಥವ ತೋರಿ
ಭುಜಗಭೂಷಣ ಸಾಂಬ ಪ್ರಾಣ ಪ್ರತಿಬಿಂಬ ೧

ನೀಲಕಂಧರ ವಿಶಾಲಗುಣ ಸುಂದರ
ಫಾಲಲೋಚನ ಭಜಕ ಕಾಲಹರ ಪಾರ್ವತಿ
ಲೋಲ ಭಕ್ತರ ಪಾಲ
ಪಾಲಯ ಶ್ರೀ ಸಿರಿ ಲೊಲನಪ್ರಿಯ ೨

ದುರ್ವಾಸ ಶುಕಮುನಿಯೆ ಉರ್ವಿಯಾಳ್ ನಿನಗೆಣೆಯೆ
ಓರ್ವ ಮೂಕನ ಕೊಂದು ಮರಳೆ ಬಂದು
ದೇವ ದೇವ ನಮ್ಮ ವಿಜಯವಿಠ್ಠಲರೇಯ
ಸರ್ವೋತ್ತಮನೆಂಬ ನಾಮರಸ ಉಂಟಾ ೩

೨೭೯

ಶಂಕರನಾರಾಯಣ ಸಲಹೊ ಎನ್ನ ।
ಪಂಕಜ ಪಾರ್ವತಿ ಪ್ರಿಯಾ । ಕಿಂಕರನ ಮೊರೆ ಕೇಳು ಪ

ಶಂಖ ಚಕ್ರಪಾಣಿ । ಮೃಗಾಂಕ ಮೌಳಿ ಅಹಿಪರಿ-।
ಯಂಕ ರುಂಡಮಾಲಾ ಶ್ರೀ । ವತ್ಸಾಂಕ ಭುಜಗಭೂಷಣ ವಿಷ್ಣು ೧

ನಂದಿಗಮನ ಗರುಡಾರೂಢಾ । ಅಂದ ಭಸ್ಮಧರ ಕಸ್ತೂರಿ ।
ಗಂಧಲೇಪ ಭೂತನಾಥಾ । ಸಿಂಧು ಶಯನ ತ್ರಿಪುರ ವೈರಿ ೨

ಪೀತಾಂಬರಧರ ಕೃತ್ತಿವಾಸಾ । ಜಾತರಹಿತ ಜಾಹ್ನವಿಧರ । ವಿ–
ಧಾತ ಜನಕ ತ್ರಿಶೂಲಪಾಣಿ । ವಾತನೋಡಿಯ ಶಿವ ಗೋವಿಂದ ೩

ಕೈಲಾಸವಾಸ ವೈಕುಂಠ । ಲೋಲ ಮಹಾಲಿಂಗ ರಂಗಾ ।
ಜ್ವಾಲನೇತ್ರ ಕಮಲನಯನಾ । ಕಾಲಾ ನೀಲವರ್ಣ ಕಪರ್ದಿ ೪

ರಾಜನೊಬ್ಬ ಭೃತ್ಯನೊಬ್ಬ । ಪೂಜ್ಯನೊಬ್ಬ ಮಾಳ್ಪನೊಬ್ಬ ।
ಮೂಜ್ಜಗೇಶ ವಿಜಯವಿಠ್ಠಲ । ರಾಜ ತಾತ ಈಶ ಮೊಮ್ಮಗ ೫

೨೮೦

ಶಂಭೋ ಸ್ವಯಂಭು ಸಂಭವ–ನಂಬಿದೆ ಕಾಯೊ
ಜಂಭಾರಿಸುತ ಅಭವ ಪ

ಅಂಬರ ಪುರಹರ ಸಾಂಬ ತ್ರಿಯಂಬಕ
ಶಂಬಕಾರಿ ರಿಪುಗಂಭೀರ ಕರುಣಿ ಅ. ಪ.

ಭಸಿತ ಭೂಷಿತ ಶರೀರ–ಭಕ್ತರುದ್ಧಾರ
ವಿಷಕಂಠ ದುರಿತಹರ
ಪಶುಪತಿ ಫಣಿಹಾರ–ಪಾವನಕಾರ
ತ್ರಿಶೂಲ ಡಮರುಗಧರ
ನೊಸಲನಯನ ವಿಕಸಿತಾಂಬುಜ ಮುಖ
ಶಶಿಧರ ಮತ್ತರಕ್ಕಸ ಮದ ಮರ್ದನ
ಘಸಣೆಗೊಳಿಪ ತಾಮಸವ ಕಳೆದು ಮಾ–
ನಸದಲಿ ರಂಗನ ಬಿಸಜ ಪಾದವ ತೋರೊ ೧

ರಜತ ಪರ್ವತ ನಿವಾಸ ನಿರ್ಮಲ ಭಾಸ
ಗಜವೈದ್ಯನಾಶ ಗಿರೀಶ
ಸುಜನರ ಮನೋವಿಲಾಸ ವ್ಯೋಮಕೇಶ
ತ್ರಿಜಗದಲ್ಲಣ ಗೌರೀಶ

ಅಜಸುತನಧ್ವರ ಭಜನೆಯ ಕೆಡಸಿದೆ
ಅಜಗರ ಮಂದಿ ಗಜಮುಖ ಜನಕನೆ
ಗಜಗಮನ ಮುನಿ ತನುಜನ ಕಾಯ್ದನೆ
ವಜ್ರಮುನಿ ವಂದಿತ ಭಜಿಸುವೆ ನಿನ್ನ ೨

ಮಧರಾಪುರಿ ನಿಲಯ ಮೃತ್ಯುಂಜಯ
ಸದಮಲ ಸುಮನಗೇಯ
ಸದಾ ನಮಿಪರ ಹೃದಯದೊಳಗುಳ್ಳ ಭಯ-
ಸದೆಯುತ್ತ ಕೊಡು ಅಭಯ
ಸದಾಶಿವ ಜಾಹ್ನವಿ ಧರಕೃತ ಮಾರಾ
ನದೀತೀರದಿ ವಾಸವಾಗಿಪ್ಪ ಸೌಂದರ್ಯ
ಮಧುಪುರಿ ವಿಜಯವಿಠ್ಠಲನ ಪದಾಬ್ಜಕೆ
ಮಧುಪನೆನಿಪ ಪಂಚವದನ ಕೈಲಾಸ ೩

೨೮೧

ಶರಣು ಶರಣು ಲಿಂಗಾ । ಶರಣು ಶ್ರೀ ಭಸಿತಾಂಗಾ ।
ಶರಣು ಗಗನ ಗಂಗಾಧರ ಗೋರಾಜ ತುರಂಗ ।
ಗುರುಕುಲೋತ್ತುಂಗಾ ಪ

ಅಂತರಿಕ್ಷ ಪುರಹರ । ಸಂತರ ಮನೋಹರ ।
ಅಂತಕನ ಗೆದ್ದೆ । ದಂತಿ ಚರ್ಮವ ಪೊದ್ದೆ ।
ಕಂತು ಮುನಿಯ ಗೆಲಿದೆ ಮಂತ್ರಿವಂದಿತ ಶೀಲ ।
ಸಂತತಿಗಳ ಪಾಲ ।
ಅಂತರಂಗದಲೆನ್ನ ಗ್ರಂಥಿಯ ಹರಿಸಿ ನಿರಂತರ ಸಂತರಿಸೋ ೧

ಮನ ವೈರಾಗ್ಯದಧಿಪತಿಯೇ ।
ಮುನಿದು ದುರ್ವಾಸ ಶುಕ ಯತಿಯೆ ।
ವನದೊಳು ರಾಯನ । ವನುತಿಯ ಮಾಡಿದ ।
ಘನ ಶೌರ್ಯನ ಶಿವನೆ ॥

ಸನಕಾದಿಗಳ ಪರಿಯ । ಅನುದಿನದಲಿ ಗಿರಿಯ ।
ತುನುಜೆಯ ಹೃದಯಾಬ್ಜ । ದಿನಕರ ಶಶಿಜೂಟ ।
ಫಣಿಭೂಷಣ ಶಂಭೋ ೨

ಅಹಂಕಾರಾತ್ಮನೆ ಶರ್ವ । ಮಹಾಕೇಶ ವಿಷಗ್ರೀವ ।
ಬಹುದೂರ ಕೂಟ । ಮಹಿಧರ ನಿವಾಸನೆ ।
ಮಹಿಧರ ತೀರದಿ ॥
ಮಹಿಮೆಯ ಬೀರುತ್ತ । ರಹಸ್ಯದಲಿ ಮೆರೆವ ।
ಶ್ರೀಹರಿ ವಿಜಯವಿಠ್ಠಲ ಸರ್ವೋತ್ತಮ । ನಹುದೆಂದು ಧೇನಿಪನೆ ೩

೨೮೨

ಶಿವನ ನೋಡಿರೊ ಇಂದು ಸ್ತವನ ಮಾಡಿರೊ ।
ತವಕದಿಂದ ತಿಳಿದು ಅವಗುಣಂಗಳ ತೊರೆದು ನಿತ್ಯ ಪ

ಅಂತಕಾಪುರ ವೈರಿ । ದಿನಾಂತ ವೃಷಭನೇರಿ ।
ಶಾಂತಿ ಸಹಿತ ಜನರಂಗಣದಿ । ನಿಂತು ಮಾತು ।
ಲಾಲಿಪ ಮಹಿಮ ೧

ಸುರಜನತೆ ಪ್ರೀತ ಸರ್ವದ । ಅಸುರ ವೈರಿಯು ನೇಮದಿಂದ ।
ವಸುಧೆಯಾಳಗೆ ಬಲಿದಾನೇಕಾ ।
ದಶರುದ್ರರೊಳು ಬಲು ಗುಣವಂತ ೨

ದಕ್ಷ ಪ್ರಜೇಶ್ವರನಧ್ವರ । ರಕ್ಷಣೆ ಮಾಡಿದ ದಕ್ಷಮೂರ್ತಿ ।
ಮೋಕ್ಷಕೆ ಮನಸು ಕೊಡುವ । ನಿಟಲೇಕ್ಷವಂತ ಶಾಂತ ೩

ಕರಿಚರ್ಮಾಂಬರಧಾರಿ ವಾರಿ । ಧರ ತ್ರಿಶೂಲ
ಡಮರುಗ ಪಾಣಿ ।
ಶರಗದ್ದುಗೆ ಸುಮೇರುವೇದಾ । ತುರಗವಾಗಿರಲಂದು ಅಂದದಿ ೪

ನಮಿಸಿ ಬರಲಿ ಬೇಡಿ ಭವದಿ । ಮಮತೆ
ಓಡಿಸಿ ಭಕುತಿಯಿಂದಲಿ ।
ರಮೆಯರಸ ವಿಜಯವಿಠ್ಠಲನ್ನ ।
ಶಮೆ ದಮೆಯಿಂದ ಪೂಜಿಪ ಧೀರ ೫

೨೮೩

ಹರಹರ ಮಹಾದೇವ ಮಹಾನುಭಾವಾ ।
ಪರಮೇಶ ಮೃತ್ಯುಂಜಯ ಭವ ವ್ಯೋಮಕೇಶ ।
ಸುರಹರ ಅಂಧಕ ಸುರರಿಪು ಜಾಣಾ ।
ಸುರವರ ಪುರ ಮುರಹರ ಪದವಿನುತಾ ಪ

ಭಸಿತ ಭೂಷಿತ ಶಿವ ಭಕ್ತ ಸಂಜೀವ ।
ವಿಷ ಕರ್ತುವಾಭರಣ ಜಗದ ಸೂತ್ರಾಣ ।
ಎಸೆವ ರುಂಡಮಾಲಾ ಪಾರ್ವತಿಯ ಲೋಲ ।
ಪಶುಪತಿ ಪಾವನ್ನ ವರಸುಪ್ರಸನ್ನ ।
ಅಸಮಾನಸಮಾ ಕುಸುಮಾಭಿಸಮ ।
ನಿಶಕರ ದಿನಕರ ಬಿಸಿ ನಯನ ।
ನಿಶಾಚರ ದಶಶಿರ ಪ್ರಸನ್ನ ಭಜಿಪರ ೧

ಗುರುಕುಲೋತ್ತ್ರಮ ತುಂಗ ವೃಷಭ ।
ತುರಂಗ ಸುರನದಿ ಧರ ಧೀರ ಜಗದೋದ್ಧಾರ ।
ನಿರುತ ನಿರಂಜನ ಸುಂದರ ವದನ ।
ಕರಿ ಚರ್ಮಾಂಬರ ಶೋಭಾಂತರವಾದನಾ ಭಾ ।
ಪುರ ಹರಣ ಚರಾಚರ ಸುರವರ ಡಮುರಗ ತ್ರಿಶೂಲಧರ ।
ನರವರ ಶರಭೂತ ಪರಿವಾರ ಭಯಂಕರ ।
ಗುರುವರ ಸುಸ್ಥಿರ ದುರಿತ ವಿದೂರಾ ೨

ಈಶಕಪರ್ದಿ ಉಗ್ರೆ ಅಂಬರ ವ್ಯಾಘ್ರಾವಾಸಾ । ಯ್ಯೋಮ ।
ಕೇಶ ಸ್ಮಶಾನವಾಸ ।
ಭಾಸುರೋನ್ನತ ಲೀಲಾ । ಸುರಮುನಿಪಾಲಾ ।
ನಾಶರಹಿತ ಚಾಪ ಪಿನಾಕಿ ಚಮುಪಾ ।
ಕಾಸೀವಾಸಿ ತೋಷಿಸೆ । ದಾಶರಥಿ ನಾಮತಾರಕ ಉಪದೇಶಿ ।
ಕೋಶ ಶ್ರೀ ವಿಜಯವಿಠ್ಠಲ ವೆಂಕಟೇಶನ ।
ದಾಸರೊಳು ಘನದಾಸನು ಪುರಂದರ ।
ದಾಸನ ದಾಸನ ಕ್ಲೇಶವಿನಾಶಾ ೩

(೬) ಶ್ರೀತುಳಸೀ

೨೮೪

ತುಳಸಿಯ ಸೇವಿಸಿ ಪ

ಶ್ರೀ ತುಳಸಿಯಳ ಸೇವೆ ಪ್ರೀತಿಯಿಂದಲಿ ಮಾಡೆ
ಗಾತರದ ಮಲವಳಿದು ಮಾತೆ ಯೆಂಬನಿತರೊಳು
ಪಾತಕ ಪರಿಹರಿಸಿ ಪುನೀತರನು
ಮಾಡುವಳು ಯಾತಕನುಮಾನವಯ್ಯ ಅ.ಪ.

ಸುಧೆಗಡಲ ಮಥಿಸುವ ಸಮಯದಲಿ ವೈದ್ಯನಾಗಿ ।
ಪದುವನಾಭನು ತಾನು ಉದುಭವಿಸಿ ಬರಲಂದು ।
ಉದುರಿದುವು ಕಣ್ಣಿಂದ
ಉದಕವುತ್ಸಹದಿಂದಲದೆ ತುಳಸಿ ನಾಮನಾಗೆ ॥
ತ್ರಿದಶರೊಂದಿಸುತ ಮೋದದಿಂ ಕೊಂಡಾಡಿದರು ।
ಒದಗಿ ಸುಜನರು ತಮ್ಮ ಸದನದಲಿ ನಿತ್ಯ
ತ್ಪದವಿಗೆ ಸಿದ್ಧವೆಂದು ಮುದದಿಂದ
ತಿಳಿದು ವೃಂದಾವನ ರಚಿಸಿದರೈಯ ೧

ಮೂಲದಲಿ ಸರ್ವ ತೀರ್ಥಗಳುಂಟು ತನ್ಮಧ್ಯೆ ।
ಕಾಲ ಮೀರದೆ ಸರ್ವ ನದನದಿಗಳಮರಗಣ ।
ಮೇಲೆ ದಳ ಒಂದರಲಿ ಒಂದೊಂದು
ಮೂರತಿಯು ವಾಲಯವಾಗಿಪ್ಪುದು ॥
ಮೂಲೋಕಗಳ ಧರ್ಮ ವ್ರತಕೆ ಮಿಗಿಲೆನಿಸುವುದು ।
ನೀಲಮೇಘಶ್ಯಾಮಗರ್ಪಿಸಿದ ತುಳಸಿ ನಿ ।
ರ್ಮಾಲ್ಯವನು ಸತತ ಕರ್ಣದಲಿ
ಧರಿಸಿದ ಮನುಜ ಕಾಲನಾಳಿಗೆ ಶೂಲನೊ ೨

ಉದಯದೊಳಗೆದ್ದು ನೀರೆರೆದು ಮಜ್ಜನಗೈದು ।
ತುದಿ ಬೆರಳಿನಿಂದ ಮೃತ್ತಿಕೆಯ ಫಣಿಯೊಳಗಿಟ್ಟು ।
ಮುದದಿಂದಲೊಂದು ಪ್ರದಕ್ಷಿಣೆ ನಮಸ್ಕಾರ
ತದನಂತರದಲಿ ಭಜನೆ ॥
ವದನದೊಳು ಗೈಯೆ ಧರೆಯೊಳಗಿದ್ದ ಸರ್ವವದ ।
ನದಿಗಳಿಗೆ ನೂರ್ಮಡಿ ಯಾತ್ರೆ ಮಾಡಿದ ಫಲ ।
ಒದಗುವುದು ಹಿಂದಣಾನಂತ
ಜನ್ಮಗಳಘವ ತುದಿ ಮೊದಲು ದಹಿಪುದಯ್ಯ ೩

ಆವವನ ಮನೆಯಲ್ಲಿ ತುಳಸಿ ಸಾಲಿಗ್ರಾಮ ।
ಆವವನ ಮನೆಯಲ್ಲಿ ಹರಿದಾಸರಾ ಕೂಟ ।
ಆವವನ ಭುಜದಲ್ಲಿ ತಪ್ತಮುದ್ರಾಂಕಿತವು
ಪಾವಮಾನಿಯ ಮತದೊಳು ॥
ಆವವನು ಕಾಂತ್ರಯವ ಕಳೆವ ನಾವಲ್ಲಿ ।
ಶ್ರೀ ವಾಸುದೇವ ಮುನಿ ದೇವಾದಿಗಣ ಸಹಿತ ।
ಕಾವುತ್ತಲಿಪ್ಪ ಒಲಿಗೊಲಿದಂತೆ ತೊಲಗದಲೆ
ಭಾವಿಸಿರಿ ಭಾವಜ್ಞರು ೪

ಕಂಡರೆ ದುರಿತಕ್ಕೆ ಕೆಂಡವನು ಬೀರುವುದು ।
ಕೊಂಡಾಡಿದರೆ ಪುಣ್ಯವ ಪರಿಮಿತವುಂಟು ಮೈ-।

ದಿಂಡುಗೆಡಹಿದರೆ ಪುನರಪಿ
ಜನನವಿಲ್ಲ ಸಲೆ ದಂಡ ವಿಟ್ಟವ ಮುಕ್ತನೊ ॥
ಚಂಡಾಲ ಕೇರಿಯೊಳು ಇರಲು ಹೀನಯವಲ್ಲ ।
ಪಾಂಡುರಂಗ ಕ್ಷೇತ್ರ ಸರಿಮಿಗಿಲು ಎನಿಸುವುದು ।
ಕಂಡ ತಂಡದ ಕುಲಕೆ ಅವರವರ
ಯೋಗ್ಯ ಫಲ ಕಂಡವರಿಗುಂಟೆ ಅಯ್ಯ ೫

ಚಿತ್ತ ಶುದ್ಧನು ಆಗಿ ಮುಂಝಾನೆಯೊಳು ತುಳಸಿ ।
ಸ್ತೋತ್ರವನೆ ಮಾಡುತ್ತ ದಿವ್ಯಾವಾಗಿಹ ತ್ರಿದೊಳ ।
ಪ್ರತ್ಯೇಕ ಪಾತ್ರೆಯಲಿ ತೆಗೆದು
ಶೋಧಿಸಿ ತುಂಬಿ ವಿತ್ತಾದಿಯಲಿ ತಾರದೆ ॥
ಮತ್ತೆ ವಸ್ತ್ರದಿ ಹಸ್ತ ಶಿಲೆಯರ್ಕ ಏರಂಡ ।
ಪತ್ರದಲಿ ತಾರದಲೆ ಭೂಮಿಯೊಳಗಿಡದೆ ಪೂ – ।
ರ್ವೋತ್ತರಭಿಮುಖನಾಗಿ ಭಕ್ತಿಯಿಂ
ತರಬೇಕು ಹೊತ್ತು ಮೀರಿಸಲಾಗದೊ ೬

ಕವಿ ಮಂಗಳವಾರ ವೈಧೃತಿ ವ್ಯತೀಪಾತ
ರವಿ ಶಶಿಯ ಸಂಗಮ ಪರ್ವಣಿ ಪುಣ್ಯಕಾಲ
ದಿವಸ ದ್ವಾದಶಿ ಶ್ರೇಷ್ಠ ಉಪರಾಗ ಪಿತೃಶ್ರಾದ್ಧ
ಇವುಗಳಲಿ ತೆಗೆಯಾದಿರಿ
ನವವಸನ ಪೊದ್ದು ಊಟವ ಮಾಡಿ ತಾಂಬೂಲ–
ಸವಿಯುತ್ತ ಮುಟ್ಟದಿರಿ ಯುವತಿ ಶೂದ್ರರಿಂ ತರಿ
ಸುವುದುಚಿತವಲ್ಲೆಂದು ತಿಳಿದು
ಕೊಂಡಾಡುತಿರಿ ದಿವಸಗಳೊಳಯ್ಯ ೭

ದಳವಿದ್ದರೇ ವಳಿತು ಇಲ್ಲದಿದ್ದರೆ ಕಾಷ್ಟ
ಎಲೆ ಮೃತ್ತಿಕೆಗಳಿಂದ ಪೂಜೆ ಮಾಡಲಿಬಹುದು
ತುಳಿಸಿ ನಿರ್ಮಾಲ್ಯವಾದರು ತ್ರಿವಾರದಲಿ
ತೊಳೆ ತೊಳೆದು ಏರಿಸಲಿಬಹುದು
ತುಳಸಿ ಒಣಗಿದ್ದರೂ ಲೇಶದೋಷಗಳಲ್ಲಿ

ತುಳಸಿ ವಿರಹಿತವಾದ ಪೂಜೆಯದು ಸಲ್ಲದು
ತುಳಸಿ ತುಳಸೀ ಎಂದು ಸ್ಮರಣೆಯಾದರು
ಮಾಡಿ ಜಲಜಾಕ್ಷನರ್ಚಿಸಿರೈಯ್ಯ ೮

ತುಳಸಿ ಇಲ್ಲದ ಸದನ ಹೊಲೆಮಾದಿಗರ ಸದನ
ತುಳಸಿ ಇಲ್ಲದ ಬೀದಿ ನರಕಕೆಳಸುವ ಹಾದಿ
ತುಳಸಿ ಇಲ್ಲದ ತೀರ್ಥವೆಂದಗಿದ್ದರು
ವ್ಯರ್ಥ ತುಳಸಿ ಬಲು ಪ್ರಾಧಾನ್ಯವೊ
ತುಳಸಿ ಮಿಶ್ರಿತವಾದ ನೈವೇದ್ಯ ಗತಿಸಾಧ್ಯ
ತುಳಸಿ ಧರಿಸಿದ ದೇಹ ಪರಮ ಸಾರ್ಥಕವಯ್ಯ
ತುಳಸಿದಳ ಹರಿಗೆ ಅರ್ಪಿಸಿದವನ ಪುಣ್ಯಕ್ಕೆ
ನೆಲೆಯ ನಾ ಕಾಣೆನಯ್ಯ ೯

ಶಿವನ ಸತಿ ಪ್ರಹ್ಲಾದ ನಾರದ ವಿಭೀಷಣನು
ಧ್ರುವ ಅಂಬರೀಷ ಶಶಿಬಿಂದು ರುಕ್ಮಾಂಗದನು
ಇವರೆ ಮೊದಲಾದವರು ಭಕ್ತಿಪೂರ್ವದಲೀ
ವಿವರವನು ತಿಳಿದರ್ಚಿಸಿ
ತವಕದಿಂ ತಂತಮ್ಮ ಘನ ಪದವನೈದಿದರು
ಭುವನದೊಳಗುಳ್ಳ ನಿರ್ಮಲ ಜನರು ಭಜಿಸಿದರು
ಜವಭಟರನೋಡಿಸೀ ಜಡದೇಹವನು
ನೀಗಿ ಭವದೂರರಾದರೈಯ ೧೦

ಉದಯಕಾಲದೊಳೆದ್ದು ಆವನಾದರು ತನ್ನ
ಹೃದಯ ನಿರ್ಮಲನಾಗಿ ಭಕುತಿಪೂರ್ವಕದಿಂದ
ಸದಮಲಾ ತುಳಸಿಯನು
ಸ್ತೋತ್ರಮಾಡಿದ ಕ್ಷಣಕೆ ಮದ ಗರ್ವ ಪರಿಹಾರವೊ
ಇದೆ ತುಳಸಿ ಸೇವಿಸಲು ಪೂರ್ವದ ಕಾವೇರಿ
ನದಿಯ ತೀರದಲೊಬ್ಬ ಭೂಸುರ ಪದಕೆ ವ್ಯೋವ
ಪದಪದೆಗೆ ಸಿರಿ ವಿಜಯವಿಠ್ಠಲಗೆ
ಪ್ರಿಯಳಾದ ಮದನತೇಜಳ ಭಜಿಸಿರೈದು ೧೧

(ಅಂ) ಪಾರ್ವತೀದೇವಿ

೨೮೫

ಉಮಾ ಕಾತ್ಯಾಯನೀ ಗೌರಿ ದಾಕ್ಷಾಯಣಿ ।
ಹಿಮವಂತ ಗಿರಿಯ ಕುಮಾರಿ ಪ

ರಮೆಯರಸನ ಪದಕಮಲ ಮಧುಪೆ ನಿತ್ಯ ।
ಅಮರವಂದಿತೆ ಗಜಗಮನೆ ಭವಾನಿ ಅ. ಪ.

ಪನ್ನಗಧರನ ರಾಣಿ ಪರಮಪಾವನಿ ।
ಪುಣ್ಯಫಲ ಪ್ರದಾಯಿನಿ ॥
ಪನ್ನಗವೇಣಿ ಶರ್ವಾಣಿ ಕೋಕಿಲವಾಣಿ ।
ಉನ್ನತ ಗುಣಗಣ ಶ್ರೇಣಿ ।
ಎನ್ನ ಮನದ ಅಭಿಮಾನ ದೇವತೆಯೆ ।
ಸ್ವರ್ಣಗಿರಿ ಸಂಪನ್ನೆ ಭಾಗ್ಯ ನಿಧಿ ॥
ನಿನ್ನ ಮಹಿಮೆಯನು ಬಿನ್ನಾಣದಲಿ ನಾ ।
ಬಣ್ಣಿಸಲಳವೆ ಪ್ರಸನ್ನ ವದನಳೆ ೧

ಮುತ್ತಿನ ಪದಕ ಹಾರ ಮೋಹನ ಸರ ।
ಉತ್ತಮಾಂಗದಲಂಕಾರ ॥
ಜೊತ್ಯಾಗಿ ಇಟ್ಟ ಪಂಜರದೋಲೆ ವಯ್ಯಾರ ।
ರತ್ನಕಂಕಣದುಂಗುರ ॥
ತೆತ್ತೀಸ ಕೋಟಿ ದೇವತೆಗಳ್ ಪೊಗಳುತ ।
ಸತ್ತಿಗೆ ಚಾಮರವೆತ್ತಿ ಪಿಡಿಯುತಿರೆ ॥
ಸುತ್ತಲು ಆಡುವ ನರ್ತನ ಸಂದಣಿ ।
ಎತ್ತ ನೋಡಿದರತ್ತ ಕಥ್ಥೈ ವಾದ್ಯ ೨

ಪೊಳವ ವಸನ ಕಂಚುಕ ತಿಲಕ ।
ಥಳಪಿ ಮೂಗುತಿ ನಾಸಿಕ ॥
ಕಳಿತ ಮಲ್ಲಿಗೆ ಗಂಧಿಕ ಮುಡಿದ ಸೂಸುಕ ।
ಸಲೆ ಭುಜ ಕೀರ್ತಿಪಾಠಿಕ ॥
ಇಳೆಯೊಳು ಮಧುರಾ ಪೊಳಲೊಳು ವಾಸಳೆ ।
ಅಳಿಗಿರಿ ವಿಜಯವಿಠ್ಠಲ ಕೊಂಡಾಡುವ ॥
ಸುಲಭ ಜನರಿಗೆಲ್ಲ ಒಲಿದು ಮತಿಯನೀವ ।
ಗಳಿಕರ ಶೋಭಿತೆ ಪರಮಮಂಗಳ ಹೇ ೩

೨೮೬

ಪಶುಪತಿಯ ತೋರಮ್ಮಾ
ವಶವಾಗಿ ಉದ್ಧರಿಸಮ್ಮಾ
ವಿಷವ ಸವಿದ ರುಂಡಮಾಲನ ತ್ರಿಭುವನ ಪಾಲನ ಪ

ಸತಿ ಮೈನಾಕ ನಂದನೆ ಮಾಡುವೆ ನಾನೀಗ ವಂದನೆ
ಮತಿಯ ಕೊಡುತಿಪ್ಪ ಎನ್ನ
ಅಂತರಂಗನ ತ್ರಿಪುರವ ಭಂಗನಾ ಕರುಣಾ ಪಾಂಗನ ೧

ಬುದ್ಧ್ಯಾಭಿಮಾನಿ ದೇವಿ
ಇಂದ್ರಾದ್ಯ ಸುರರನ್ನ ಕಾಯ್ವಿ
ಖದ್ಯೋತ ಶಶಿ ಅನಳನೇತ್ರ ಸಾ ಮಂಗಳ
ಗಾತ್ರನ ಧನಪತಿ ಮಿತ್ರನಾ ೨

ತ್ರಿಜಗ ಪೂಜಿತೆ ಉಮೆ ಪೊಗಳುವೆನು ಒಮ್ಮೆ
ವಿಜಯವಿಠ್ಠಲರೇಯನ ದಾಸದಾಸನ
ಕೈಲಾಸವಾಸನ ಜಗಕೆ ವಿಶೇಷನಾ ೩

(ಅಃ) ಕಾಮದೇವ

೨೮೭

ವರಗಳನು ಕೊಡುವದು ವಾಸುಕಿಯ ಪ್ರಿಯಾ ।
ಕರುಣದಿಂದಲಿ ಒಲಿದು ಕಂಡನಾತುರದಲಿ ಪ

ಇಂದ್ರಸಮಾನ ದೇವತೆಯೆ ರತಿಪತಿಯೇ ।
ಇಂದಿರೇಶನ ನಿಜಕುಮಾರ ಮಾರ ॥
ಬಂದು ಕಲ್ಪದಲಿ ಸುಂದರನೆನಿಸಿಕೊಂಡಿರ್ದ ।
ಬಂಧುವೇ ಅಹಂಕಾರ ಪ್ರಾಣನಿಂದಧಿಕನೆ ೧

ವನಜ ಸಂಭವನು ಸೃಷ್ಟಿ ಸೃಜಿಪಗೋಸುಗ ।
ಮನದಲ್ಲಿ ಪುಟ್ಟಿಸೆ ಚತುರ ಜನರ ॥
ಮುನಿಗಳೊಳಗೆ ನೀ ಸನತ್ಕುಮಾರನಾಗಿ ಜನಿಸಿ ।
ಯೋಗ ಮಾರ್ಗದಲ್ಲಿ ಚಲಿಸಿದ ಕಾಮಾ ೨

ತಾರಕಾಸುರನೆಂಬ ಬಹು ದುರುಳತನದಲ್ಲಿ ।
ಗಾರುಮಾಡುತಲಿರಲು ಸುರಗಣವನು ॥
ಗೌರಿಮಹೇಶ್ವರರಿಗೆ ಪುತ್ರನಾಗಿ ಪುಟ್ಟಿ ।
ಧಾರುಣಿಯೊಳಗೆ ಸ್ಕಂದನೆನಿಸಿದೆ ೩

ರುಕ್ಮಿಣಿಯಲಿ ಜನಿಸಿ ಮತ್ಸ್ಯ ಉದರದಲಿ ।
ಪೊಕ್ಕು ಶಿಶುವಾಗಿ ಸತಿಯಿಂದ ಬೆಳೆದು ॥
ರಕ್ಕಸ ಶಂಬರನೊಡನೆ ಕಾದಿ ಗೆದ್ದು ಮರಳಿ ।
ಚಕ್ಕನೆ ಸಾಂಬನೆನಿಸಿದೆ ಜಾಂಬವತಿಯಲ್ಲ ೪

ಜನಪ ದಶರಥನಲ್ಲಿ ಭರತನಾಗಿ ಪುಟ್ಟಿದೆ ।
ಮನೋ ವೈರಾಗ್ಯ ಚಕ್ರಾಭಿಮಾನಿ ॥
ಎನಗೊಲಿದ ವಿಜಯವಿಠ್ಠಲರೇಯನಂಘ್ರಿ ।
ಅರ್ಚನೆ ಮಾಡುವ ಸುಬ್ರಮಣ್ಯಾ ಬಲು ಧನ್ಯ ೫

(ಕ) ಷಣ್ಮುಖ

೨೮೮

ಸುಬ್ಬರಾಯ ಶುಭ ಕಾಯಾ ।
ಸುಬ್ಬರಾಯ ಶುಭ ಕಾಯಂಗಜ ನೀನೆ ॥
ನಿಬ್ಬರ ಮಹಿಮಾ ದಯಾಂಬುಧಿ ಸ್ಕಂದಾ ಪ

ಮಾರಾ ಭರತನೆ ಶಂಬ । ರಾರಿ ಸನತ್ಕುಮಾರ ಕು ।
ಮಾರಾ ಸಾಂಬಾ ॥
ಸಾರಿದೆ ನಿನ್ನವತಾರ ಮೂಲರೂಪ ॥
ಸಾರಿಸಾರಿಗೆ ಸಂಸಾರಮನ ವಿ ॥
ಸ್ತಾರವಾಗದಂತೆ
ಹಾರಿಸುದುರವ್ಯಾಪಾರ ಗುಣ ಪಾರಾವಾರಾ ೧

ಮಾಡುವೆ ವಂದನೆ ಸತತ । ಸಜ್ಜನರೊಳ ।
ಗಾಡಿಸು ಭಕ್ತ ಪ್ರೀತಾ ॥
ಪಾಡಿದವರ ಕಾ । ಪಾಡುವ ರತಿ–ಪತಿ ।
ಈಡಾರು ನಿನಗೇ ನಾಡಿನೊಳಗೆಲ್ಲ ।
ಬೇಡುವೆ ದಯವನ್ನು । ಮಾಡುವಿರಕುತಿಯ ।
ನೀಡು ಬಿಡದಲೆ ನೋಡು ೨

ಕುಕ್ಕೆಪುರಿಯ ನಿಲಯಾ । ಶ್ರೀಧರ ಬೊಮ್ಮ ।
ಮುಕ್ಕಣ್ಣಗಳ ತನಯ ॥
ಸೊಕ್ಕಿದ ತಾರಕ ರಕ್ಕಸ ಹರ ದೇ ।
ವಕ್ಕಳ ನಿಜ ದಳಕೆ ನಾಯಕನಾದೆ ॥
ಪಕ್ಕಿವಾಹನ ಸಿರಿ ವಿಜಯವಿಠ್ಠಲನ ।
ಚಕ್ರ ಐದೊಂದು ವಕ್ರಾ ೩

(ಖ) ಶತಸ್ಥಮರುತುಗಳು

೨೯೦

ಮರುತಗಳ ನಾಮವನು ಉದಯದಲಿಯೆದ್ದು ।
ಸ್ಮರಿಸಿದವರ ದುರಿತ ಪರಿಹಾರವಾಗುವುದು ಪ

ಪ್ರಾಣ ಅಪಾನನು ವ್ಯಾನ ಉದಾನ ಸ ।
ಮಾನ ಮತ್ತೆ ನಾಗ ಕೈಕಲಕೂರ್ಮ ॥
ಏನೆಂಬೆ ದೇವದತ್ತನು ಧನಂಜಯ ಪ್ರವಾ ।
ಹನನು ವಿವಹ ಸಂಯಾ ಸಂವಾಹನೆಂದು ೧

ಶೀಲ ಪರಾವಹ ಉದ್ವಹ ವಾಹಶಂಕು ।
ಕಾಲ ಶ್ವಾಸ ಅನಳ ಅನಿಲಪ್ರತಿಯೂ ॥
ಬಾಲ ಕುಮುದಾಕಾಂತ ಶುಚಿಶ್ವೇತ ಅಜಿತಗುರು ।
ಮೇಲಾಗಿ ಸಂಸಾರ ಪ್ರವರ್ತಕ ಕಿಲರನ್ನ ೨

ತರುವಾಯ ಅಜಿತ ಸಂಯನು ಕಪಿ ಜಡದೇವ ।
ಮರಳೆ ಮಂಡುಕ ಸತತ ಸಿದ್ಧ ರಕ್ತಾ ॥
ಸರಸ ಕೃಷ್ಣ ಪಿಕಶುಕ ಯತಿ ಭೀಮಹನು ।
ಮರಿಯದಲೆ ಪಿಂಗ ಅಹಂಪ್ರಾಣ ಕಂಪನ ೩

ಇವರ ಸಹಿತವಾಗಿ ಸೂತ್ರನಾಮಕ ಮೂಲ ।
ಪವಮಾನನೊಡನೆ ಗಣಣೆಯನು ಮಾಡಿ ॥
ತವಕದಿಂದಲಿ ತಾರತಮ್ಯವನೆ ತಿಳಿದು ।
ಶ್ರವಣದಲಿ ಕೇಳಿ ಸಾಕಲ್ಯವಾಗಿ ನಿತ್ಯ ೪

ಇವನೆ ಪಠಿಸಿದರೆ ಜನ್ಮ ಜನುಮದ ಪಾಪ ।
ಉದರಿ ಪೋಗುವದು ಲೇಶ ಉಳಿಯದೆ ॥
ಪಮುಮನಾಭ ನಮ್ಮ ವಿಜಯವಿಠ್ಠಲರೇಯನ ।
ಪದವ ಭಜಿಸುವದಕ್ಕೆ ಜ್ಞಾನವೇ ಪುಟ್ಟವದು ೫

(ಗ) ನದಿಸರೋವರಗಳು

೨೯೦

ನದನದಿಗಳನು ಸ್ಮರಿಸಿರೋ
ನದನದಿಗಳನು ಸ್ಮರಿಸಿ ಹೃದಯ ನಿರ್ಮಳರಾಗಿ
ಮುದದಿಂದ ನಿಮ್ಮ ಮನದಧಮತನ ಬಿಟ್ಟ ಸಂ
ಪದವಿಗೆ ಸೋಪಾನದಂತಾಗುವದು ಶ್ರೀ
ಪದುಮನಾಭನು ವೊಲಿವನು ಪ

ಸುರ ತರಂಗಿಣಿ ಸಿಂಧು ಕುಶವರ್ತಳೆ ಸೀತ
ಮರುಧೃತಿ ಹೇಮವತಿ ನೇಮಿ ನೇತ್ರವತಿ
ತರಣಿಸುತೆ ನರ್ಮದಾ ಗಾಯತ್ರಿ ಗೋಮತಿ
ಗರುಡ ಸಾಧರ್ಮಾ
ಸರಸ್ವತಿ ಮಣಿಮುಕ್ತ ಮುಕ್ತನದಿಯು ಪ್ರಣತ
ವರದಕಾಗಿಣಿ ಕೃಷ್ಣವೇಣಿ ವೇದವತಿ
ಹರಿಧೃತಿ ಇಂದ್ರಾಣಿ ಪುನಃ ಪುನಃ ವಾಣಿವಂ
ಜರಘಣಿ ಭೀಮರಥಿನೀ ೧

ವಾರುಣಿ ವರುಣ ಅಸಿಭುವನಾಶಿ ಕುಮಾರ
ಧಾರಿ ತುಂಗಾ ಭದ್ರಿಗಣಪತಿ ಶತಭಾಗ
ನಾರದಿ ಉಭಯಪಿನಾಕಿ ಚಿತ್ರವತೀ
ಮೂರು ಲೋಕೋದ್ಭವ ಭವಾನೀ
ಚಾರು ಗಂಡಿಕೆ ಸರಯು ಶ್ರೋಣಿ ಭದ್ರನೀಲ
ಕ್ಷೀರನದಿ ಪಾಪಘ್ನ ಮಹಾನದಿ ಅಘನಾಶಿ
ವಾರಿಜಾಪ್ತಾವತಿ ಸುರ್ವಣ ಮುಖರೀ
ವಿಸ್ತಾರ ಹಾಟಕ ಅತ್ರಿಣೀ ೨

ಮಲಾಪಹಾರಿ ತ್ರಿಪತಿ ಪೂರ್ಣ ಕುಮದ್ವತಿ
ಸುಲಭ ಮಂದಾಕಿನಿ ಕೌಮೋದಕಿ ಶಾಂತಿ
ಫಲ್ಗುಣೀ ವೇಗವತಿ ಅರ್ಜುನ ಮಹೇಶ್ವರಿ

ಕಪಿಲ ಚಂದ್ರಭಾಗ ಅರುಣೀ
ಪೊಳೆವ ಕಾಳಾವತಿ ತ್ರಿಪಥಿ ಗೌರಿ ಕುಂತಿ
ಅಳಕನಂದನ ಅಮಲವತಿ ಭೀಮಸಂಭೆ
ಸಿ ತಾಂಬ್ರ ಪರ್ಣಿಯು ಜಯ ಮಂ
ಗಳೇ ಸತಿ ಸತ್ಯವತಿ ವೈಷ್ಣವೀ ೩

ಕನಿಕ ಶುಕ್ಲಾವತೀ ಬಾಹುನದಿಗೋವಿಂದ
.... ಸುತಿ ಕಲ್ಯಾಣ ಕೌಸಿಕಾ
ಮಿನಗುವ ಭೋಗವತಿ ಕಾಶ್ಯಪಿಂಕಾಳಿಂದಿ
ಅನುಸಿಂಧು ಐರಾವತಿ
ಋಣ ವಿಮೋಚನ ಮಯೂರ ಸಂಭವೆ
ಘನಸ್ವಾಮಿ ಚಂದಿರಾ ನಿತ್ಯ ಪುಷ್ಕರಣಿ ಪಯೋ
ಷ್ಣಿನಿ ಮಹಾಪಗ ಭದ್ರ ಭೈರವಿ ವಿಚಿತ್ರ ನದಿಗಳನು ೪

ಅರುಣೋದಯಲೆದ್ದು ಧರೆಯೊಳುಗಳ್ಳ ಬಲು
ಸರಿತಗಳ ನೆನೆದು ಪುಳಕೋತ್ಸವದಲಿ
ಪರಮ ಧನ್ಯರಾಗಿ ಪಾಪಗಳ ಪೋಗಾಡಿ
ನಿರುತ ಮಾರುತ ಮತದಲೀ
ಚರಿಸಿ ನಿಜಭಕುತಿಯಲಿ ಹಗಲು ಇರಳು ಇನಿತು
ಸಿರಿಯರಸ ವಿಜಯವಿಠ್ಠಲನ ಚರಣಾಂಬುಜವ
ಸರಸದಿಂದಲಿ ಧ್ಯಾನಗೈದು ಈ ನದಿಗಳಲಿ
ಕರಣದಲಿ ತಿಳಿದು ನಿತ್ಯಾ ೫

೨೯೧

ಏನು ಕಾರಣ ಬಂದೆ ಗಂಗೆ ।
ನಾನೇನು ಪುಣ್ಯವನು ಮಾಡಿದವನಲ್ಲ ಪ

ಕಾಸೀಪುರದಿಂದಲಿ ದೇಶ ನೋಡಲು ಬಂದ್ಯೋ ।
ಬೀಸಿ ಬಿಸುಟುವಂಥ ಅಸ್ಥಿಗಾರದೆ ಒಂದ್ಯೋ ।

ದಾಸರ ಮಹಿಮೆಯನು ನೋಡುವೆನೆಂದು ಬಂದ್ಯೋ ।
ದೋಷವರ್ಜಿತ ವಾರಣಾಸಿ ಕಡಿಯದಲೆ ।
ಲೇಸಾಗಿ ತಿಳಿಪುವದು ಭೀಷ್ಮನ ಜನನೀ ೧

ತಿಲನೀರು ಕುಡಿದು ಧರಿಸಲಾರದೆ ಬಂದ್ಯೋ ।
ಮಲಜನರ ದೋಷವನು ಕಳೆವೆನೆಂದು ಬಂದ್ಯೋ ।
ಕಲಿಯುಗಕೆ ಈ ಕೃಷ್ಣಾ ಅಧೀನಳೆಂದು ಬಂದ್ಯೋ ।
ಸುಲಭ ತ್ರಿದದೇಶ್ವರಿ ಗಂಗೆ ತಡೆಯದಲೆ ।
ನಿಲಜಾಲೆ ತಿಳಿಪುವದು ನೀರಜ ನಯನೇ ೨

ಸುರರ ನಿತ್ಯ ಕರ್ಮಗಳು ನೋಡಲಿ ಬಂದ್ಯೋ ।
ಮಜ್ಜನವ ಮಾಡಿಸಿ ಎನ್ನ ಪೊರಿಯಲು ಬಂದ್ಯೋ ।
ಮೂಜಗದೊಳು ಪೆಸೆರಾಗಿಪ್ಪೆನೆಂದು ಬಂದ್ಯೋ ।
ನಿರ್ಜನ ತಟನಿ ನಿರ್ಗುಣಸಾಂದ್ರೆ ತಡಿಯದಲೆ ।
ನಿಜವ ತಿಳುಪುವದು ವಿಜಯವಿಠ್ಠಲಸುತೆ ೩

೨೯೨

ಗಂಗೆ ಶೋಭನ ತರಂಗೆ
ರಂಗನಂಘ್ರಿಯಂಗುಷ್ಠೆ ಸಂಗೆ ಭವಭಂಗೆ ಪ

ಇಂದ್ರಸೇನನು ಸ್ವರ್ಗವ ಪರಿಹರಿಸಿ ಯಿರಲು
ಉಪೇಂದ್ರ ಭಗವಂತ ಪಟುರೂಪ ಧರಿಸಿ
ಚಂದ್ರಮಂಡಲ ಮೀರಿ ಬೆಳದಜಾಂಡವನೊಡಿಯೆ
ಸಾಂದ್ರಗುಣದಿಂದ ಉದ್ಭವಿಸಿದೆ ಜನನಿ ೧

ಕಮಲಜನು ಪಾತ್ರಿಯೊಳು ಧರಿಸಿ ಸಿರಿಹರಿಪಾದ
ಕಮಲವನು ತೊಳಿಯಲಾವೇಗದಿಂದ
ವಿಮಲಗತಿಯಲಿ ಬಂದು ಮಂದಾಕಿನಿ ಎನಿಸಿ
ಸುಮನ ಸಾವನಿಯಲ್ಲಿ ಪರಿದೆ ಸ್ವರ್ಣನದಿಯೇ ೨

ಧ್ರುವಲೋಕಕಿಳಿದು ಅಮರಾಲಯವ ಸಾರಿದೆ
ರವಿಯಂತೆ ಪೊಳೆವುತ ಅಜನಮಧ್ಯ
ತವಕದಿಂದಲಿ ಧುಮುಕಿ ಚತುರಭಾಗವಾದೆ
ಭವ ಪರಿಹರಿಸಿ ಭಾಗೀರಥಿ ಎನಿಸಿದೆ ೩

ಶಿವನ ಮಸ್ತಕದಲ್ಲಿ ಶೋಭಿಸುವ ಮಹಾಮಹಿಮೆ
ಭವದೊರೆ ಭಗೀರಥಗೆ ಒಲಿದು ಬರುತ
ಕವಿಜನ್ಹು ಮುನಿಯಿಂದ ಪುಟ್ಟಿ ಹಿಮಗಿರಿದಾಟಿ
ಜವನ ಮನಿಯ ಕೊಡ ಮಣಿಕರ್ಣಿಕೆ ನೆರದೆ ೪

ಅಳಕನಂದನೆ ನಿನ್ನ ಸ್ಮರಣೆ ಮಾಡಿದ ಜನಕೆ
ಕುಲಕೋಟಿ ಉದ್ಧಾರ ನಿಃಸಂದೇಹಾ
ಸಲಿಲವನು ಸ್ಪರ್ಶ ಮಜ್ಜನ ಪಾನ ಪಾಡಿದರೆ
ಪೊಳೆವ ವೈಕುಂಠಪುರ ಅವನ ಹೃದಯದಲಿ ೫

ಕುಲಪ್ರವಹವಾಗಿದ್ದ ಜೀವರ ಪುಣ್ಯವನು
ಹೇಳಿ ಕೇಳುವವನಾರು ಮೂಲೋಕದಿ
ಸೀಲಗುಣ ಸಂಪನ್ನೆ ವರುಣನರ್ಧಾಂಗಿನಿ
ಕಾಲ ಕಾಲಕೆ ನಿನ್ನ ಧ್ಯಾನದಿಂದಲ್ಲಿರಿಸು ೬

ದೇಶದೇಶದಲಿಂದ ಬಂದ ಸುಜನರ ಪಾಪ
ನಾಶ ಮಾಳ್ಪ ಕಾಮಿತ ಫಲಪ್ರದೆ
ಕಾಸಿ ನಿರ್ಮಿತ ಬಿಂದು ಮಾಧವ ಚಲುವ ಶ್ರೀನಿ
ವಾಸ ಯದುಪತಿ ವಿಜಯವಿಠ್ಠಲನ ಸುತೆ ಖ್ಯಾತೇ ೭

೨೯೩

ಗಂಗೆ ಸನ್ಮಂಗಳಾಂಗೆ
ರಂಗನಂಘ್ರಿಯ ಸಂಗೆ
ತುಂಗೆ ಕಾರುಣ್ಯ ಪಾಂಗೆ
ಅಸಿತಾಂಗೆ ತಿಂಗಳಾನನೆ ಪ

ಪರಮೇಷ್ಟಿ ಪಾತ್ರಜಾತೆ
ವರುಣನ್ನ ನಿಜದೈಯಿತೆ
ಸುರ ಮುನಿಗಣವಿನುತೆ
ವರದಾತೆ ಸರ್ವಖ್ಯಾತೆ
ತರಣಿಸುತನ ಉದ್ಧರಿಸಿದೆ
ಕರುಣದಿ ಧರೆಯೊಳು ನಿನಗೆ ಎ
ದುರುಗಾಣೆ ಶರಣಾ ೧

ಭಯ ಪಾಪ ತಾಪದೊರೆ
ಜಯ ಜಯ ಗುಣಸಾರೇ
ತ್ರಯಭುವನ ಉದ್ಧಾರೆ
ಆಯುತಾರ್ಕವರ್ನ ನೀರೆ
ನಯವ ಭಕುತಿ ಹೃ
ದಯದೊಳಗಿತ್ತು ಸಹಾಯ ದಿನ ದಿನ ನಯನ ಶ್ರವಣವೇಣಿ ೨

ಘನ್ನ ವಾರಣಾಸಿ ಕಾಸಿವನ
ಆನಂದ ನಿವಾಸಿ ಪ್ರಣತ ಜನರಘನಾಶ
ಮಣಿಭೂಷೆ ಸೌಖ್ಯರಾಸಿ
ಅನನುತ ವಿಜಯವಿಠ್ಠಲನ ಮನಸಿನಲಿ
ನೆನೆಸುವ ಸಾಧನ ಕೊಡು ವಿರಜೇ ೩

೨೯೪

ಜಯಜಯತು ಜಾಹ್ನವಿಯೆ ಭಕ್ತ ಸಂಜೀವಿ
ಜಯ ಮಂಗಳವನೀಯೆ ಜಯ ನಮ್ಮ ಕಾಯೆ ಪ

ಕಮಲಜನು ಪಾತ್ರೆಯೊಳು ಧರಿಸಲಾ ಹರಿಪಾದ-
ಕಮಲವನು ತೊಳೆಯಲಾವೇಗದಿಂದ
ವಿಮಲ ಸಂಗತಿಯಿಂದ ಮಂದಾದಿನಿಯೆನಿಸಿ
ಸುಮನ ಸಾವನಿಯಲ್ಲಿ ಮೆರೆದೆ ಸುರನದಿಯೆ ೧

ಧ್ರುವಲೋಕಕಿಳಿದು ಅಮರಾವತಿಯ ಸಾರಿದೆ
ರವಿಯಂತೆ ಪೊಳೆಯುತ ಆ ಜನ ಮಧ್ಯದಿಂ
ಭುವನದೊಳಗೀರೈದು ನೂರು ಯೋಜನದಗಲ
ತವಕದಿಂದಲಿ ಧುಮುಕಿ ಚತುರ ಭಾಗವಾದೆ ೨

ಶಿವನ ಮಸ್ತಕದಲ್ಲಿ ಶೋಭಿಸುವ ಮಹಮಹಿಮೆ
ಭವದೊರೆ ಭಗೀರಥಗೆ ಒಲಿದು ಬರುತ
ಕವಿ ಜನ್ಹುಮುನಿಯಿಂದ ಪುಟ್ಟಿ ಹಿಮಗಿರಿ ದಾಟಿ
ಜವನ ಭಗಿನಿಯ ಕೂಡಿ ಮಣಿಕರ್ಣಿಕೆಯ ನೆರದೆ ೩

ಅಳಕನಂದನೆ ನಿನ್ನ ಸ್ಮರಣೆ ಮಾಡಿದ ಜನಕೆ
ಕುಲಕೋಟಿ ಪಾವನವು ಸಂದೇಹವಿಲ್ಲ
ಸಲಿಲವನು ಸ್ಮರಿಸಿ ಮಜ್ಜನ ಪಾನ ಮಾಡಿದಗೆ
ಪೊಳೆಗೆ ವೈಕುಂಠಪುರ ಅವನ ಹೃದಯದಲಿ ೪

ದೇಶದೇಶಗಳಿಂದ ಬಂದ ಸುಜನರ ಪಾಪ
ನಾಶನವ ಮಾಳ್ಪ ನೀ ನಿಷ್ಕಾಮದಿ
ಕಾಶಿಸ್ಥ ಬಿಂದು ಮಾಧವ ವಿಜಯವಿಠ್ಠಲನ
ಸೋಸಿನಿಂದಲಿ ಪೊಗಳುತಿಹೆ ಸುವಿಖ್ಯಾತೆ ೫

೨೯೫

ಜಯ ಜಾಹ್ನವಿ ದೇವಿ ಜಯ ಭಕುತ ಸಂಜೀವಿ
ಜಯ ಪ್ರದಾಯಕ ವೀವೆ
ಜಯ ಎಮ್ಮ ಕಾವೆ ಪ

ಅಜನ ಸಭೆಯಲಿ ವರುಣಗೆ ಶಾಪವು ಬರಲು
ಪ್ರಜಪಾಲನಾದ ಶಂತುನ ನಾಮದೀ
ನಿಜರೂಪದಲಿ ಬಂದು ಅಷ್ಟವಸುಗಳ ಪಡೆದೆ
ಭಜಿಸಬಲ್ಲೆನೆ ನಿನ್ನ ಬಹು ಭಾಗ್ಯವಂತೇ ೧

ಭಗೀರಥಗೆ ಪೊಲಿದು ಭವದೂರ ಪಾವನಕಾರೆ
ಸಗರರಾಯನ ವಂಶವನ್ನೆ ಉದ್ಧಾರೆ
ಅಗಣಿತೋದಯ ಪಾರಂವಾರೆ ಶುಭಶರೀರೆ
ಮುಗುವೆನು ಕರವೆತ್ತಿ ಸಂತತ ವಾರಂವಾರೆ ೨

ಏನು ಧನ್ಯರೊ ಎನ್ನ ಕುಲಕ ಪಾವನೆಯೆನಲು
ನೀನುಬ್ಬಿ ಪೊರದೆ ಉತ್ಸಾಹದಿ ಮೆರೆದೆ
ಮಾನನಿಧಿ ವಿಜಯವಿಠ್ಠಲನ ಸನ್ನಿಧಿಯಲ್ಲಿ
ಜ್ಞಾನಪೂರ್ವಕ ಪೊಲಿದು ಭಕುತಿ ಕೊಡು ಎನಗೆ ೩

೨೯೬

ಮಂಗಳಂ ಮಹಾಗಂಗೆ । ಭಕುತ ಮನೋಹಾರಿಗೆ ।
ಮಂಗಳಂ ಬಲುದುರಿತ ಸಂಹಾರಿಗೆ ।
ಮಂಗಳಂ ಪ್ರಯೋಗ ಕ್ಷೇತ್ರ ವಿಹಾರಿಗೆ
ಮಂಗಳಂ ಕುಸುಮ ಚಿತ್ರಹಾರಿಗೆ ಪ

ವೇಣಿಗೆ ನಿತ್ಯಕಲ್ಯಾಣಿಗೆ ಪಲ್ಲವ ।
ಪಾಣಿಗೆ ಗಂಭೀರ ಗುಣಶ್ರೇಣಿಗೆ ।
ತ್ರಾಣಿಗೆ ಕೋಕಿಲವಾಣಿಗೆ ಯಾದವನ ।
ರಾಣಿಗೆ ಮಣಿಹೇಮ ಭೂಷಣೆಗೆ ೧

ಖ್ಯಾತಿಗೆ ತ್ರಿಲೋಕ ಮಾತೆಗೆ ಯ ।
ಮುನೆ ಸಂಘಾತಿಗೆ ಸರ್ವದಾ ಬಲುನೀತಿಗೆ ।
ಜಾತಿಗೆ ತುಹಿನಗಿರಿದಾತೆಗೆ ಲಕುಮಿಯ ।
ದೂತಿಗೆ ಅಮಿತ ಗುಣ ಪ್ರತಾಪಿಗೆ ॥ ೨

ಚನ್ನಿಗೆ ನಾರಿಕುಲರನ್ನಿಗೆ ಭಾಗ್ಯ ಸಂ ।
ಪನ್ನಿಗೆ ಸಗರಕುಲ ಪಾವನ್ನಿಗೆ ।
ಕಣ್ಣಿಗೆ ಪೊಳೆವ ಪ್ರಸನ್ನಿಗೆ ಸೀತಾ ಸು ।
ವರ್ನಿಗೆ ವಿಜಯವಿಠ್ಠಲ ಕನ್ನಿಗೆ ೩

೨೯೭

ಶ್ರೀ ಭಾಗೀರಥಿ ತಾಯೇ ಶೃಂಗಾರ ಶುಭಕಾಯೆ ।
ಶ್ರೀ ಭೂರಮಣನ ತನಯೇ ಪ

ನಿನ್ನ ಯಾತ್ರೆಗೋಸುಗ ಎನ್ನ ಮನಸು ಪುಟ್ಟಿತು ।
ಇನ್ನು ನೀ ಮರಿಸದೇ ।
ಪುಣ್ಯನರನ ಮಾಡೊ ಪೂತೋಭಾವವೆಂದು ।
ಧನ್ಯ ಜನ ಮಾನ್ಯಾ ಭಕ್ತಜನ ಪ್ರಸನ್ನೇ ೧

ಶಿವ ನಿನ್ನ ಶಿರದಲ್ಲಿ ಧರಿಸಿದೆ ಕಾರಣ ಪವಿತ್ರಂಗನಾದನೆಂದು ।
ಅವನಿಯೊಳಗೆ ಮಹಾ ।
ಕವಿಜನ ಪೇಳಿದ ಶ್ರವಣದಿಂದಲಿ ಭಕುತಿಯಿಂದಲಿ ನಿಂದೆ ೨

ದೂರದಿಂದಲಿ ನಿನ್ನ ಸ್ಮರಿಸಿದವರ ಪಾಪ ।
ಹಾರಿಹೋಗುವದು ಸಿದ್ಧಾ ।
ಶ್ರೀರಮಣ ವಿಜಯವಿಠ್ಠಲರೇಯನ ಪಾದ ।
ವಾರಿಜ ಪೊಗಳುವಂತೆ ಬುದ್ಧಿ ಪಾಲಿಸುವದು ೩

೨೯೮

ಗೋದೆ ಅತಿ ಪುಣ್ಯ ಸಾಧೆ
ಮಾಧವನ ಚರಣಾರವಿಂದೆ ಪಾದೆ ಪ

ಇದ್ದಲ್ಲಿ ನಿನ್ನ ಸ್ಮರಣೆಯನು ಮಾಡಲು ಪಾಪ
ಎದ್ದೋಡಿ ತಿರುಗಿ ನೋಡದೆ ಹೋಪವು
ಸದ್ಭಕ್ತಿಯಿಂದ ನಿನ್ನನು ನೋಡಬೇಕೆನುತ
ಉದ್ಯುಕ್ತವಾಗೆ ಬ್ರಹ್ಮಹತ್ಯ ಪರಿಹಾರವೊ ೧

ಬಂದು ಹರುಷದಲಿ ಕಣ್ಣಲಿ ಕಂಡು ಶಿರವಾಗಿ
ವಂದನೆಯ ಮಾಡಿ ಸಾಷ್ಟಾಂಗೆರಗಲೂ
ಹಿಂದಣ ಶತಕೋಟಿ ದುರಿತ ರಾಸಿಗಳೆಲ್ಲ
ಒಂದು ಉಳಿಯದಂತೆ ಬೆಂದು ಹೋಹವು ೨

ಅತಿವೇಗದಿಂದ ಬಂದು ಸ್ನಾನವನು ಮಾಡಲು
ಮತಿವಂತರನ ಮಾಡಿ ದುರ್ಮಾರ್ಗ ಬಿಡಿಸಿ
ರತಿಪತಿ ಜನಕ ಸಿರಿ ವಿಜಯವಿಠ್ಠಲನ್ನ
ಸ್ತುತಿಸಿ ಗತಿ ಪಡೆವಂತೆ ಧನ್ಯರನು ಮಾಡುವ ತಾಯಿ ೩

೨೯೯

ಧ್ಯಾನವನು ಮಾಡಿ ತ್ರಿವೇಣಿ ಕ್ಷೇತ್ರವ ಬಿಡದೆ ।
ಜ್ಞಾನಭಕ್ತಿ ವೈರಾಗ್ಯ ನಾನಾ ಸತ್ಕರ್ಮ ನಿ ।
ದಾನದಿಂ ಸಿದ್ಧಿಪುದು ಮಾನಸದಲಿ ಸಿರಿ ।
ಪ್ರಾಣೇಶ ಕುಣಿಯುವನಯ್ಯಾ ಅಯ್ಯಯ್ಯಾ ಪ

ಹರಿವೀರ ದ್ರುಪದನುದ್ಧರಿಸಿವಾಗಲು ತನ್ನ ।
ಶರೀರದಿಂದಲಿ ಅಷ್ಟಕೇತ್ರಗಳ ಪುಟ್ಟಿಸಿ ।
ವರದೇಶ ವೈಕುಂಠದಲ್ಲಿಟ್ಟನು ಸಪ್ತ ।
ಪಿರಿಸಹಿತ ತೀರ್ಥರಾಜಾ ॥
ಮೆರೆವದಿದೆ ಪುಂ ಕ್ಷೇತ್ರ ಉಳಿದವೇಳು ಸ್ತ್ರೀ ।
ಇರುತಿಪ್ಪವಲ್ಲಿ ಮಿಗಿಲಿದಾದಕೆ ಅತಿಶಯವೊ ।
ಧರಣಿಯೊಳಗಿದಿ ಕಾಲಾಂತರಕೆ ಹರಿತಂದ ವಟ ।
ತರು ಸಹವಾಗಿ ಅಯ್ಯಾ ಅಯ್ಯಾ ಅಯ್ಯಾ ೧

ತರಣಿಸುತೆ ಮಾನಸೋತ್ತರ ಶೈಲದಲಿ ಕುಳಿತು ।
ವರರಾಜ ತೀರ್ಥ ಮಾಧವನ ಸಾರುವೆನೆಂದು ।
ಭರದಿಂದ ತಪವು ಮಾಡೆ ಸರಸಿಜೋದ್ಭವನೊಲಿದು ।
ವರವಿತ್ತ ಮುಂದೆ ನೀನು ಧರೆಯೊಳು ಕಾಳಿಂ ॥

ದ ರಾಯಗೆ ಕುವರಿ ಎನಿಸಿ ಮಹಾಸರತಿಯಾಗಿ ಪೋಗಿ ।
ಸಿರಿ ಮಾಧವನ ಚರಣ ।
ಶರಣು ಪೋಗೆನೆ ಸಪ್ತಶರಧಿ ಭೇದಿಸಿಯಲ್ಲಿ
ನೆರೆ ಮೆರೆದಳೈಯ್ಯಾ ಅಯ್ಯಾ ಅಯ್ಯಾ ಅಯ್ಯಾ ೨

ತುರುಗಮ ನೆವದಿಂದ ಅರವತ್ತು ಸಾವಿರ ಸ ।
ಗರನ ಕುಲದವರು ಕಪಿಲಾಖ್ಯಾ ಹರಿ ಮುನಿಯಿಂದ ।
ಉರಿದು ಪೋಗೆನಲಾಗಿ ಭಗೀರಥ ಭೂಪತಿ ಉಗ್ರ ।
ಧುರಧಿ ತಪವನ್ನೆ ಮಾಡೇ ।
ಹರಿ ನಿರೂಪವ ತಾಳಿ ಗಿರಿಗಹ್ವರವನೊಡದು ।
ಸುರಗಂಗೆ ಬಂದು ತ್ರಿವೇಣಿ ಮಾಧವನ ಸಿರಿ ।
ಚರಣದೆಡೆಯಲ್ಲಿ ನಿಂದು ಯಮುನೆ ವಡಗೊಡಿ ಬಾ ।
ಮರವಾದವಳಂದು ಅಯ್ಯ ಅಯ್ಯಾ ಅಯ್ಯಾ ೩

ಸರಸ್ವತಿಯ ಬೆರೆದು ತ್ರಿವೇಣಿ ಸಂಗಮವೆಂದು ।
ಕರಿಸಿಕೊಂಡಿತು ವಿಕರ ಸೋಮೇಶ್ವರನ ತನಕ ।
ಪರಮೇಷ್ಠಿಯಿಲ್ಲಿಗೈತಂದು ಬೊಮ್ಮಾಂಡವನು ।
ಸರಿ ಮಾಡಿ ತೊಲಗಲಾಗೀ ॥
ಅವರೇ ಪೇಳುವದೇನು ಸುರರು ಶಿರದೂಗುತಿರೆ ।
ವರರಾಜತೀರ್ಥ ಮಹಾಭಾರವಾಗಲು ಇದಕೆ ।
ಸರಿ ಮಿಗಿಲು ಇಲ್ಲೆನುತ ಪೊಗಳಿ ಕರದರು ಮಹ ।
ವರದ ಪ್ರಯಾಗವೆಂದಯ್ಯಾ ಅಯ್ಯಾ ಅಯ್ಯಾ ೪

ಪುರವೈರಿ ನಟಣೆ ಪೂ ತುಲಸಿ ಸುರಪತಿ ವೈಶ್ವಾ ।
ನರನು ತಿಲ ಹೋಮ ಯಮರಾಯಕಿಂಚಿತು ದಾನ ।
ನಿಋುರುತಿತ ಪೈತೃಕಕರ್ಮ ವರುಣ ಜಲದಾನಸ್ತುತಿ ।
ಮರುತ ಭೂತನು ಕುಬೇರ ॥
ಅರಗಳಿಗೆ ವಸತಿ ಈ ವಟನಿಕಟ್ಟಿಯಲಿಯಿದ್ದು ।
ಪರಿಪರಿಯಿಂದಲಿ ಒಲಿಸಿ ಮಾಧವನಿಂದ ।

ಪುರಷಾರ್ಥ ಪಡೆದು ಸುಖಿಸಿದರು ಸಮಸ್ತ ಬಗೆ ।
ಅರಿತು ಕೊಂಡಾಡಿ ಜನರೈಯ್ಯ ಅಯ್ಯಾ ಅಯ್ಯಾ ೫

ಎರಡೊಂದು ಮೂರು ಕುಲದ ಮಧ್ಯ ನಿಂದು ।
ಕರ್ತಾರಿಯೊಳಗೆ ಮಿಂದು ಸತ್ಕರ್ಮವನೆಸಗಿ ಭೂ ।
ಸುರರ ಮೆಚ್ಚಿಸಿ ಮನದಿ ಪಾಪಗಳ ಉಚ್ಚರಿಸಿ ।
ಕರಣ ನಿರ್ಮಲಿನರಾಗಿ ।
ನರನಾರಿ ಈರ್ವ ಜನ ವಿಪ್ರ ಚಂಡಾಲ ॥
ಕುಲ ಪರಿಯಂತ ವಪನವೆ ಮುಖ್ಯವೆಂದು ತಿಳಿದು ।
ಚರಿಸಿದರೆ ಅನಂತ ಜನ್ಮಕ್ಕೆ ಮಹಾಸೌಖ್ಯ ।
ಬರಿದೆ ಆಗದು ಕಾಣಿರೈಯ್ಯ ಅಯ್ಯ ಅಯ್ಯಾ ೬

ಧರೆಯ ಮೇಲೆ ಬಿದ್ದ ಶಿಶುಗಳ ತಂದು ಮುಂಡಣವ ।
ಉರುತರ ಬುದ್ಧಿಯಿಂದ ಮಾಡಿಸಲಿ ಬೇಕು ವಿ ।
ಸ್ತರಿಸುವೆನಯ್ಯಾ ಯೌವನ ವಾರ್ಧಿಕರಿಗೆ ನಿಜ ।
ವರನಾರಿಯರಿಗೆ ವೇಣಿ ಸರಿ ಎನ್ನಿ ಸಾತ್ವೀಕ ॥
ಪುರಾಣದಲಿ ಪೇಳಿದ ಎರಡು ಭುಜದಲಿ ತಪ್ತ ಚಕ್ರ ।
ವಿರಹಿತರಾಗಿ ಬರಲು ಷಣ್ಮುತ ಜನಕ ಗತಿಯಿಲ್ಲ ಮತಿಯಿಲ್ಲ ।
ಸ್ಥಿರವಾಕ್ಯ ಲಾಲಿಪುದು ಅಯ್ಯಾ ಅಯ್ಯಾ ಅಯ್ಯಾ ೭

ಎರಡೈದು ತುರಗ ಕೃತು ಮೊದಲಾದ ತೀರ್ಥಗಳು ।
ಪರಿಪರಿ ದೇವ ಮುನಿಗಳು ನಾಮದಲಿ ಉಂಟು ।
ಪರಮಭಕುತಿಯಿಂದ ಮಜ್ಜನಾದಿಯ ಮಾಡೆ ।
ಪರಲೋಕ ಕರತಳದೊಳು ॥
ಇರುತಿಪ್ಪದು ನಿತ್ಯಾ ಪ್ರಯಾಗರಾಜನ ।
ಸ್ಮರಣೆ ಮಾಡಿದ ಮನುಜನು ಆವಾವಲ್ಲ್ಯಾದರು ಇರಲು ।
ಮರಣ ಕಾಲಕೆ ಮೂಲ ಮಾಧವ ವೊಳಗೆ ಮೊಳೆವ ।
ದರುಶನವ ಕೊಡುತಲಯ್ಯ ಅಯ್ಯಾ ಅಯ್ಯಾ ೮

ಅರುಣೋದಯಲೆದ್ದು ಶುದ್ಧಾತ್ಮರಾಗಿ ।
ಪರಿಪರನೆಂಬೊ ಜ್ಞಾನದಲಿ ಹಾಡಿಪಾಡಿದವರ ।
ತೆರಳಿ ಪೋಗದೆ ದುರಿತ ರಾಸಿಗಳ ದಹಿಸಿ ನಿಂ ।
ದಿರದೆ ಸಂತರ ಕೊಡಿಸಿ ॥
ಮೊರೆವುತಿಪ್ಪುದು ಗಡಾ ಸಿದ್ದಾರ್ಥ ಕ್ಷೇತ್ರವಿದು ।
ನೆರೆನಂಬಿ ಮಾನವನು ಮಾನಸದಲಿ ಭಜಿಸಿ ।
ಸಿರಿ ವಿಜಯವಿಠ್ಠಲ ಕರುಣವುಳ್ಳವನಿಗೆ ।
ದೊರಕುವದು ದೊರಕುವದಯ್ಯಾ ಅಯ್ಯಾ ಅಯ್ಯಾ ೯

೩೦೦

ವೇಣಿ ಮಾಧವನ ತೋರಿಸೆ ಜಾಣೆ ತ್ರಿವೇಣಿ
ಕಾಣದೆ ನಿಲ್ಲಲಾರೆನೆ ಪ

ಕಾಣುತ ಭಕುತರ ಕರುಣದಿ ಸಲಹುವ
ಜಾಣೆ ತ್ರಿವೇಣಿ ಕಲ್ಯಾಣಿ ಸುಸನ್ನುತೆ ಅ.ಪ.

ಬಂದೆನೆ ಬಹಳ ದೂರದಿ ಭವಸಾಗರ ತರಣಿ
ನಿಂದೆನೆ ನಿನ್ನ ತೀರದಿ
ಒಂದು ಘಳಿಗೆ ನೀ ಹರಿಯ ಬಿಟ್ಟಿರಲಾರಿ
ಮಂದಗಮನೆ ಎನ್ನ ಮುಂದಕ್ಕೆ ಕರೆಯೆ ೧

ಶರಣಾಗತರನು ಪೊರೆವುದು ಇದು ನಿನ್ನ ಬಿರುದು
ಕರುಣದಿಂದೆನ್ನ ಕರೆವುದು
ಸ್ಮರಣೆ ಮಾತ್ರದಿ ಭವ ತಾಪವ ಹರಿಸುವ
ಸ್ಮರನಪಿತನ ಮುರಹರನ ಕರುಣದಿ ೨

ಸುಜನರಿಗೆಲ್ಲ ದಾತಳೆ ಸುಶೀಲೆ ಕೇಳೆ
ಕುಜನರ ಸಂಗದೂರಳೆ
ನಿಜ ಪದವಿಯನಿತ್ತು ಸಲಹುವ ನಮ್ಮ
ವಿಜಯವಿಠ್ಠಲ ನಿಜಪದ ತೋರಿಸೆ ೩

ಈ ಹಾಡು ವಾರಿಜಾಂಗರದು...

೩೦೧

ಕೃಷ್ಣವೇಣಿ ಕಲ್ಯಾಣಿ
ಕಷ್ಟ ಪರಿಹರಿಪೆ ನಿತ್ಯ ಸಾಗರನ ರಾಣಿ ಪ

ಅಜನ ನಿರೂಪದಲಿ ಜಾಬಾಲಿಮುನಿ ಬಂದು
ಭಜಿಸಿದನು ನಿನ್ನ ಬಲುದಿವಸಂಗಳು
ನಿಜವಾಗಿ ಹರನ ಜಡೆಯಲ್ಲಿ ಉದ್ಭವಿಸಿದೆ
ತ್ರಿಜಗದೊಳಗೆ ಮೆರೆದೆ ತ್ರಿದಶಾಮರವಂದಿತೆ ೧

ಕನ್ಯಾರಾಶಿಗೆ ಜೀವ ಬಂದು ಪ್ರಾಪುತನಾಗೆ
ಹನ್ನೆರಡು ವರುಷಕೆ ಒಮ್ಮೆ ಬಿಡದೇ
ಮನ್ನಿಸಿ ಭಕುತಿಯಿಂದ ಒಂದು ಮಜ್ಜನಮಾಡೆ
ಧನ್ಯನ ಮಾಳ್ಪೆ ಬಲು ಘನ್ನ ತರಂಗಿಣಿ ೨

ಎತ್ತ ನೋಡಿದರತ್ತ ನಾಲ್ಕುವರೆ ಯೋಜನವು
ಕ್ಷೇತ್ರ ಪುಣ್ಯದೇವಿಯೆನಿಸಿಕೊಂಬೆ
ಸ್ತುತಿಸಲಳವೇ ನಿನ್ನ ಮಹಿಮೆಯ ಅನುಗಾಲ
ಮತ್ತಗಜಗಮನೆ ಮಲದೂರೆ ಮುಕ್ತಿಧಾರೆ ೩

ಪೋಗದ ಪಾಪಗಳಿರಲು ನಿನ್ನ ದರುಶನವು
ಆಗುತ್ತ ಓಡಿದವು ನೆಲೆಗಾಣದೆ
ಬಾಗಿ ನಮೋ ನಮೋಯೆಂಬ ಭಾಗವತರ ಮನೆಯ
ಬಾಗಿಲ ಕಾಯ್ವ ಭಾಗ್ಯವ ಕೊಡು ಕರುಣದಲಿ ೪

ಕಲಿಯುಗಕೆ ನೀನೇ ವೆಗ್ಗಳವೆಂದು ಬುಧಜನರು
ಒಲಿದು ಕೊಂಡಾಡುವರು ಸತತದಲ್ಲಿ
ಜಲನಿಧಿಯ ಎರಡು ಮೊಗದಲಿ ಮೆರೆದೆ ಮಹತಟಿನಿ
ನೆಲೆಗೊಳಿಸು ವಿಜಯವಿಠ್ಠಲ ಚರಣದಲ್ಲಿ ೫

೩೦೨

ಜಯ ಕೃಷ್ಣವೇಣಿ ದುರ್ಜನರ ಗಂಟಲಗಾಣಿ
ನೀ ತಮತಗುಣ ಶ್ರೇಣಿ ನಿತ್ಯ ಕಲ್ಯಾಣಿ ಪ

ಹರಜಡಿಯಲಿ ಜನಿಸಿ ಹರಿಪಾದ ಜಲವೆನಿಸಿ
ಮುರಹರನ ವರ್ಣ ಪೆಸರವನೇ ಪೊತ್ತು
ಧರೆಯೊಳಗೆ ಮಹಾಬಳೇಶ್ವರದಲ್ಲಿ ನೆಲೆಯಾಗಿ
ಪೊರಿದೆ ಶರಣಾಗತರ ದುರಿತಗಳ ತರಿದೆ ೧

ದೋಷರಹಿತಾಥೆರೆಯೊಳು ಸಾಸಿರ ಭಾಗದಲಿ
ಆ ಸಲಿಲ ಬಿಂದು ಪವಮಾನ ಬಂದೂ
ಬೀಸಿದಾ ಸಮಯದಲಿ ಜೀವರಾಸಿಯ ಮೇಲೆ
ಸೂಸಿ ಬೀಳಲು ಕ್ಲೇಶ ಶೋಕ ವಿನಾಶ ೨

ಅಷ್ಟಾರ್ಥಮಾಸ ಕೃಷ್ಣಪಕ್ಷ ಚತುರ್ದಶಿ
ಕೃಷ್ಣವಾರ ವಿಷ್ಣು ತಾರೆಯಲ್ಲೀ
ಕೃಷ್ಣಕೃಷ್ಣಾ ಎಂದು ನಿಷ್ಠೆಯಿಂದಲಿ ಮನ
ಮುಟ್ಟಿ ಸ್ನಾನವ ಮಾಡೆ ಕಷ್ಟ ಪರಿಹರಿಪ ೩

ಸೂರಪಾಲಿ ಕಪಟ ಸಂಗಮಛಾಯಾ
ಶ್ರೀ ಶೈಲ ವರ ಚತುಸ್ಥಾನಗಳಲಿ ವಾಸಮಾಡಿ ಇರಲು
ವಾರಣಾಶಿಯ ಫಲಗರೆದು ಜೀವನ್ಮು
ಕ್ತರನು ಮಾಡಿ ಪೊರದೇ ೪

ಕಲಿಯುಗದಿ ಕೃಷ್ಣಾ ಸ್ನಾನ ಕೃಷ್ಣ ಸ್ಮರಣೆ ವೆ
ಗ್ಗಳವೆಂದು ಅಜನ ಸತಿ ಪೊಗಳಲು
ಜಲನಿಧಿಯ ಉಭಯಮುಖದಲಿ ಕೂಡಿ ಭಕ್ತರಿಗೆ
ಒಲಿದು ಸಿರಿ ವಿಜಯವಿಠ್ಠಲ ಕಾಣಿಸಿದಿಯಾ ೫

೩೦೩

ಶ್ರೀ ಕೃಷ್ಣವೇಣಿ ಕಲ್ಯಾಣಿ । ಕಷ್ಟ ನಿತ್ಯ ಸಾಗರನರಾಣಿ ಪ

ಅಜನ ನಿರೂಪದಲಿ ಜಾಬಾಲಿ ರಿಷಿ ನಿಂದು
ಭಜಿಸಿದನು ನಿನ್ನ ಬಹುದಿನಂಗಳಲಿ
ನಿಜವಾಗಿ ಹರನ ಶಿರದಲ್ಲಿ ಉದ್ಭವಿಸಿದೆ
ತ್ರಿಜಗದೊಳಗೆ ಮೆರೆದೆ ತ್ರಿದಶಸುರಶುಭವರದೆ ೧

ಎತ್ತ ನೋಡಿದರತ್ತ ನಾಲ್ಕೂವರೆ ಯೋಜನವು
ಸ್ತುತ್ಯ ಪುಣ್ಯದೇವಿ ಎನಿಸಿಕೊಂಬೆ
ಸ್ತುತಿಸಲಳವೇ ನಿಮ್ಮ ಮಹಿಮೆ ಅಮಿತವಲ
ಮತ್ತಗಜಗಮನೆ ಶುಭಕರೆ ಜ್ಞಾನಧಾರೆ ೨

ನೂಗದ ಪಾಪಗಳೆನಿತೊ ನಿನ್ನ ದುರುಶನವು
ಆಗುತ್ತ ಓಡಿದವು ತಳವಿಲ್ಲದೇ
ಚಾಗಿ ನಮೋ ನಮೋ ಎಂಬ ಭಾಗವತರ ಮನಿಯ
ಬಾಗಿಲ ಕಾಯುವ ಭಾಗ್ಯವ ನೀಡೆಲೆ ವರದೇ ೩

ಕಲಿಯುಗದಿ ನೀನೇ ವೆಗ್ಗಳೆಂದು ಸಾತ್ವಿಕರು
ಒಲಿದು ಕೊಂಡಾಡುವರು ನಿರುತದಲಿ
ಜಲನಿಧಿಯ ಇಮ್ಮೊಗದಿಂದಲಿ ಮೆರದೆ ಮಹತಟನಿ
ನೆಲೆಗೊಳಿಸು ವಿಜಯವಿಠ್ಠಲನ ಸಂಪದದೊಳು ೪

೩೦೪

ಯಮುನೆ ದುರಿತ ಉಪಶಮನೆ । ಅಮಮ ಮಂದಗಮನೆ ॥
ಅಗಣಿತ ಸುಮನೆ ಪ

ಆ ಮಹಾ ಮಾರ್ತಾಂಡ ಪುತ್ರೆ ಮಂಗಳಗಾತ್ರೆ ।
ಕಾಮಿತ ಸುಫಲದಾಯೆ ಕಾಲನಿಭ ಕಾಯೆ ।

ಆ ಮಂಜುಗಿರಿ ಬಳಿಯ ಅಲ್ಲಿ ಪುಟ್ಟಿದ ಸಿರಿಯೆ ।
ಸೋಮಕುಲಪಾವನೇ ಶರಣ ಸಂಜೀವನೆ ೧

ಗಂಗಾ ಸಂಗಮ ಘನತರಂಗಿಣೀ ಮಹಾಮಹಿಮೆ ।
ಅಂಗವಟೆ ಅತಿ ಚಲುವೆ ನಲಿದಾಡಿ ನಲಿವೆ ।
ಮುಂಗುರಳು ಸುಮಲತೆ ಮೂಲೋಕ ವಿಖ್ಯಾತೆ ।
ಕಂಗಳಲಿ ನೋಳ್ಪಂಗೆ ಹೃತ್ಕಮಲ ಭೃಂಗೆ ೨

ವಾರಿನಿಧಿ ಪ್ರಥುಕುಗಾಮಿನಿ ।
ಹಾರ ಮುಖೆ ಸುಪ್ರಮುಖೆ ।
ವೀರಶಕ್ತಿ ವಿಜಯವಿಠ್ಠಲನ ।
ಕಾರುಣ್ಯಪಾತ್ರೆ ಸಂಗೀತಲೋಲೆ ೩

೩೦೫

ಕಾವೇರಿ ತ್ರಿಭುವನಕಾಯೆ । ಸುರಮುನಿಗೇಯೆ ।
ಕಾವೇರಿ । ಆವಾವ ಜನುಮಕೆ ಬಿಡದೆ ಎನ್ನನು ಕಾಯೆ ಪ

ಅಜನನಂದನೆ ಚಂದ್ರವದಗೆ । ಚತುರಮಯೆ ।
ಸುಜನರಿಗಾನಂದ ಸದಗೆ । ಧವಳಕಾಯೆ ।
ಭಜಿಸಿ ಬೇಡುವೆ ನಿನಗಿದನೆ ।
ಸೃಜಿಸಿ ಕೊಡುವುದು ।
ತ್ರಿಜಗದೊಳಗೆ ಹರಿ ।
ನಿಜ ಭಕ್ತರಪಾದ । ರಜವಾಗಿ ಯಿಪ್ಪ ಸ ।
ಹಜ ಮತಿಯನುದಿನ । ಕುಜನ ನಿವಾರೆ ೧

ಕಲಿನಾಶ ಕಾರುಣ್ಯ ನಿಧಿಯೆ । ನಿರ್ಮಳಶೀಲೆ ।
ಕಲಕಾಲಾ ಸುಜ್ಞಾನಾಂಬುಧಿಯೆ ।
ತಲೆವಾಗಿ ನಮಿಸುವೆ ।

ಹಲವು ಜನ್ಮಂಗಳ । ಒಳಗೊಳಗೆ ಬಿದ್ದು ।
ಹಲಬುತಿಪ್ಪ ವ್ಯಾ ।
ಕುಲವನು ಕಳೆದು ನಿ ।
ಶ್ಚಲ ಮತದೊಳಗಿಡು ೨

ನಿತ್ಯ ಉತ್ತಮ ಗುಣಸಮುದ್ರೇ ।
ಸಿಂಹಜೆ ಮಾರುದ್ಯತೆ ಎನಿಪ ಲೋಪಾಮುದ್ರೆ ।
ಕವೇರಕನ್ಯೆ ......ಗಿತ್ತ ಪೊಳೆವ ಸೂಭದ್ರೆ ।
ಸತ್ಯ ಸಂಕಲ್ಪ ಶ್ರೀ ವಿಜಯವಿಠ್ಠಲನ್ನ ಭೃತ್ಯನೆನೆಸಿಕೊಂಡು
ಸ್ತೋತ್ರದಿಂದಲಿ ಬಲು ।
ನೃತ್ಯಮಾಡುವ ಸಂ ।
ಪತ್ತನೆ ಕರುಣಿಸು ೩

೩೦೬

ವರದೆ ಸಮಸ್ತ ವರದೆ । ಪರಮ ಭಕುತಿಯಿಂದ ತುತಿ ।
ಪರನ ಪೊರದೇ ಪ

ನೋಡಿದಾಕ್ಷಣದಲ್ಲಿ ಅನಂತ ಜನ್ಮದಿಂದ ।
ಮಾಡಿದ ಪಾಪಗಳು ಪರಿದವಯ್ಯ ।
ಆಡಲೇನು ತೋಯ ಸ್ಪರ್ಶವಾಗಲು । ನಲಿ ।
ದಾಡಿದರು ಗೋತ್ರಜರು ಇವನ ಪುಣ್ಯಕ್ಕೆ ಎಣೆಯೇ ೧

ಮಿಂದು ಮನಃಪೂರ್ವಕದಿ ಕೊಂಡಾಡಲು ವಳಗೆ ।
ಪೊಂದಿದ ದಾಸವರು ಸುಮ್ಮನಹರೋ ।
ವೃಂದಾರಕರ ಬಳಗ ಇವನ ಸಾಧನೆ ಮಾಳ್ಪಾ
ನಂದದಲಿ ಇಪ್ಪನೆ ಅಭಿಮೊಗರಾಗಿ ೨

ವರನ ಕೊಡುವೆನೆಂದು ವೈಷ್ಣವ ಮಣಿಯಿಂದ ।
ಧರೆಯೊಳಗೆ ಜನಿಸದೆ ಜಗಜ್ಜನನಿ ।
ಕರಸಿಕೊಂಡೆ ನೀನು ವರದೆ ವರದೆ ಎಂದು ।
ವರವ ಕೊಡು ಎನಗೆ ಸುಜನರು ಮೆಚ್ಚವಂದದಲಿ ೩

ಇದನೆ ಬೇಡಿಕೊಂಬೆ ಇರಳು ಹಗಲು ನೀನೆ ।
ಒದಗಿ ಬಿನ್ನಹ ಮಾಡು ನಿನ್ನ ಪತಿಗೆ ।
ಮುದದಿಂದ ಹರಿಯಾಪ್ರವಿಷ್ಟಾಪ್ರವಿಷ್ಟ ಕಥೆ ।
ತುದಿನಾಲಿಗೆಯಲ್ಲಿ ಬರಲಿ ಬಣ್ಣಿಸುವಂತೆ ೪

ಪಾಂಚಜನ್ಯಾದ್ರಿಯಲ್ಲಿ ಉದುಭವಿಸಿ ತುಂಗೆಯೊಳು ।
ಪಂಚನದಿ ಸಂಗಮವೆಂದೆನಿಸಿದೆ ।
ಪಂಚವಿಂಶತಿ ನಮ್ಮ ವಿಜಯವಿಠ್ಠಲದೇವ ।
ಕಾಂಚನದಂತೆ ಪೊಳೆವ ಮೂರ್ತಿ ಮನದೊಳಗಿರಲಿ ೫

೩೦೭

ತುಂಗೆ ಬಂದಳು ದೇವೋತ್ತುಂಗ ವರಹನಾ
ಮುಂಗೋರಿಯಲ್ಲಿ ಪುಟ್ಟಿ ಭಕ್ತ ನಿಕರನಾ
ಹಿಂಗದೆ ಪೊರೆದು ಸುಖಂಗಳನೀವು ತಾ
ಮಂಗಳಾಂಗೆ ಮಾತಂಗೆ ಸುಗಮನೆ ಪ

ಕಾಳ ಪನ್ನಗವೇಣಿ ಕೋಕಿಲವಾಣಿ
ಫಾಲ ಕಸ್ತುರಿ ಜಾಣೆ ಪಲ್ಲವಪಾಣಿ
ವಾಲೆ ಮೂಗುತಿ ಅಣಿ ಮುತ್ತು ಕಠಾಣಿ
ತೋಳು ಮಂದಾರಮಣಿ ಅರಿಗುಣಶ್ರೇಣಿ
ಮೌಳಿಯಾ ಮೇಲಿನ ಜಾಳಿಗೆ ಸೂಸುಕಾ
ವಾಲಲು ಕದಿಪಿನ ನೀಲಗೂದಲು ಭ್ರಮ
ರಾಳಿಗಳಂತಿರೆ ಬಾಲ ಸುಧಾಕರ ಪೋಲುವ ವದನೇ ೧

ಕುಡುತೆಗಂಗಳ ನೀರೆ ಕಂಬುಕಂಧರೆ
ಕಡಗ ಕಂಕಣದ್ವಾರೆ ಕೈಯ ಶೃಂಗಾರೇ
ಜಡಿವ ಪದಕಹಾರೆ ಕಂಚಕಸೀರೆ
ಮುಡಿದ ಪುಷ್ಪಂಗಳು ಮರೆ ಕುಚಗಳು ಅದರೆ
ಬಡನಡುವಿನ ಕಡು ಉಡುವಿನ ಕಿಂಕಣಿ
ಒಡನುಡಿಸುವ ಗೆಜ್ಜೆ ಕಾಲಂದಿಗೆ ಪೆಂಡೇ ಅ
ಡಿಗಡಿಗೊಪ್ಪಲು ಕಡಲನ ಮಡದಿ ೨

ತೀಡಿದ ಪರಿಮಳ ಗಂಧದ ಭೋಗಿ
ಕೂಡಲಿಪುರದಲಿ ಭದ್ರಿವಂದಾಗಿ
ಕೂಡಿ ಸೂಸಿದಳಂದು ಮುಂದಕ್ಕೆ ಸಾಗಿ
ಆಡುತ ಪಾಡುತ ಬಲು ಲೇಸಾಗಿ
ಬೇಡಿದ ಜನರಿಗೆ ಈಡಿಲ್ಲದ ವರವ
ನೀಡುತ ನಿರುತರ ಮಾಡುತ ದಯವನು
ನೋಡುತ ತಡವಿಲ್ಲದಲೆ ೩

ಶೃಂಗಾರ ಮಾರ್ತಾಂಡೆ ಹರಿಹರ ಮಾತಾ
ಅಂಗಾಧಿ ಪರ್ವತ ಪಂಚ ಪ್ರಖ್ಯಾತ
ಹಿಂಗದೆ ಬಲಗೊಂಡು ಕೊಡ್ಲೀಗೆ ಬರುತ
ಸಂಗೀತ ಗಾಯನದಿಂದ ವಾಲಗಗೊಳುತ
ಸಂಗಮೆಯಾಗಿ ತಂಗಿಯ ಬೆರತೀಗ
ಮಂಗಳ ಕ್ರೀಡೆಯಲ್ಲಿ ಪ್ರವೇಶಿಸಿ
ಗಂಗೆ ಎನಿಸಿಳ್ಕಮನನಾದೇಳಗೆ ೪

ಲೋಕದೊಳಗೆ ಪ್ರತಿರಹಿತ ಪೆಸರಾದ
ಚೀಕನ ಬರವಿಯ ಅಶ್ವಥಮರದ
ನೃಕಂಠೀರವನ ಪಾದದಿ ವ್ಯಾಧಿಷ್ಟರಾದ
ಸೋಕಿ ಮೈಮರೆದಂಥ ನಮಿತರು ಕರದಾ
ಪಾಕ ಪದಾರ್ಥಕೆ ಒಲಿದೊಲಿದಾಡುತ
ಶ್ರೀಕರ ವಿಜಯವಿಠ್ಠಲಗೆರಗುತ
ನಾಕಕನ್ನಿಕೆಯಂತೆ ಹೊಳೆದಳುಯಿಂದು ೫

೩೦೮

ನಮೋ ನಮೋ ಜಯ ತುಂಗಭದ್ರೆ
ನಮಿತರನು ಪಾಲಿಸುವ ಸದ್ಗುಣ ಸಮುದ್ರೆ ಪ

ವೈರಾಚ ನಗರಿಯಲಿ ವಿಧಾರುಣಿಯ ರೋಚಕನು
ಮೀರಿ ದೇವಾದಿಗಳಿಗಂಜದಿರಲು
ಘೋರ ರೂಪವ ತಾಳಿ ಅವನ ಕೊಲ್ಲಲು ಹರಿಯ
ಮೋರೆ ಕರಿಬೆವರಿಡಲು ಅತಿ ಹರುಷದಿಂದ ೧

ರೂಢಿಯೊಳಗೆಲ್ಲ ಸಮಸ್ತ ನದಿ ಉದಕಗಳು
ನೋಡಿದರು ರುಚಿಕರವಿಲ್ಲವೆಂದೂ
ದಾಡಿಯಲಿ ಧರಿಸಿದನು ಸುರರು ಕೊಂಡಾಡುತಿರೆ
ಈಡ್ಯಾರು ನಿನ್ನ ಮಹಿಮೆಗೆ ವರಹತನಯೇ ೨

ಸಲಿಲವೇ ಹರಿಯಾದ ಶಿವ ನಿನಗೆ ಶಿಲೆಯಾದ
ಬಲು ಮುನಿಗಳು ಮಳಲವಳಗಾದರೂ
ಜಲಜ ಸಂಭವನು ತೃಣನಾದ ಬಳಿಕ ವಿಷ್ಣು
ಕೆಲವುಕಾಲ ನಿನ್ನೊಳಗೆ ನಿಲಿಸಿದನು ತುಂಗೆ ಗಂಗೆ ೩

ವೇದಾದ್ರಿಯಲಿ ಜನಿಸಿ ನರಸಿಂಹ ಕ್ಷೇತ್ರದಲಿ
ಭೇದವಿಲ್ಲದಲೆ ಸಂಗಮವು ಎನಿಸೀ
ಆದರದಿಂದ ಹರಹರ ಪೊಂಪ ಬಲಗೊಂಡು
ಮೊದಲು ಶ್ರೀ ಕೃಷ್ಣ ಬೆರದೆ ಕೂಡಲಿಯೊಳು ೪

ತುಂಗೆ ತುಂಗೆ ಎಂದು ಸ್ಮರಿಸುವಾ ಜನರಿಗು
ತ್ತಂಗ ಗತಿಯಾಗುವುದು ಪಾಪವಳಿದು
ಮಂಗಳ ಮೂರುತಿ ವಿಜಯವಿಠ್ಠಲನ ಚರ
ಣಂಗಳಲಿ ಇದ್ದವರ ಸತತ ಪೊರೆವುದು ದೇವಿ ೫

೩೦೯

ಮಧ್ವ ಸರೋವರದ ಸ್ನಾನವ ಮಾಡಿರೊ
ಬುದ್ಧಿವಂತರು ಕೇಳಿ ಇದರ ಮಹಾತ್ಮೆಯನು ಪ

ಕೃತಯುಗದಲಿ ಇದೇ ಅನಂತ ಸರೋವರ
ತ್ರೇತಾಯುಗದಲ್ಲಿ ವರುಣತೀರ್ಥ
ಕ್ಷಿತಿಯೊಳಗೆ ದ್ವಾಪರದಿ ಚಂದ್ರ ಪುಷ್ಕರಣಿ ಉ-
ನ್ನತ ಕಲಿಯುಗದಲ್ಲಿ ಮಹಾ ತೀರಿಥ ೧

ಸುರನದೀ ಮಿಕ್ಕಾದ ಸ್ಥಾನದಲಿ ಸೇವೆ ವಿ-
ಸ್ತರವಾಗಿ ಕೊಳುತಿಪ್ಪಳು ಉಪೇಕ್ಷದಿ
ಧರೆಯೊಳಗೆ ಇಲ್ಲಿ ಗುರು ಮಧ್ವಮುನಿ ಸರ್ವಾರ್ಥ
ನಿರುತದಲ್ಲಿ ತೀವ್ರಗತಿ ಕೊಡುವಳೂ ೨

ಸಕಲ ವೇದಶಾಸ್ತ್ರ ಓದಿದವನಾದರೂ
ಶಕುತಿವಂತನಾಗಿ ಇದ್ದನಾಗೆ
ಸುಖ ತೀರ್ಥ ಸರೋವರದ ಸ್ನಾನ ಮಾಡದಿರಲು
ಶಕಲ ಮತಿಯಲಿ ಮಹಾನರಕ ಭುಂಜಿಸುವಾ ೩

ಒಂದೆ ಮಜ್ಜನ ಮಾಡೆ ಅನಂತ ಜನುಮಕೆ
ತಂದು ಕೊಡುವದು ನರಗೆ ಮಿಂದ ಫಲವೊ
ಎಂದೆಂದಿಗೆ ಇಲ್ಲಿ ಬಿಡದೆ ವಾಸವಾದ
ಮಂದಿಗಳ ಪುಣ್ಯ ಪ್ರತಾಪ ಎಣಿಸುವರಾರು ೪

ಆದಿಯಲ್ಲಿ ಇದ್ದ ಲಿಂಗ ಶರೀರವು
ಭೇದಿಸುವದಕೆ ಇದೇ ಸ್ನಾನವೆನ್ನಿ
ಮೋದ ಮೂರುತಿ ನಮ್ಮ ವಿಜಯವಿಠ್ಠಲ ಕೃಷ್ಣ
ಭೇದಾರ್ಥ ಮತಿಕೊಟ್ಟ ಭೇದವನು ತೊಲಗಿಸುವಾ ೫

ಚಂದ್ರಮೌಳಿ	– ತಲೆಯಲ್ಲಿ ಚಂದ್ರನನ್ನು ಧರಿಸಿದ–ಶಿವ
ಜಗತ್ರಯ	– ಮೂರುಲೋಕ
ಜಗದಪ್ಪ	– ಲೋಕ ರಕ್ಷಕ
ಜತ್ತಾಗಿ	– ಎಚ್ಚರಿಕೆಯಿಂದ
ಜಯ ವಿಜಯ	– ವೈಕುಂಠದ ದ್ವಾರಪಾಲಕರು
ಜೀರ್ಣಮಲಿನ ವಸ್ತ್ರ	– ಹರಿದು ಕೊಳೆಯಾದ ಬಟ್ಟೆ
ತಂತ್ರಸಾರ	– ಒಂದು ಶಾಸ್ತ್ರ ಗ್ರಂಥ
ತಮಸು	– ಕತ್ತಲೆ
ತರುಣಿಸು	– ದಾಟಿಸು
ತಾಮಸ	– ಅಜ್ಞಾನ
ತಾರಕ್ಷ್ಯರಂಗ	– ಹುಲಿಯನ್ನೇ ವಾಹನ ಮಾಡಿಕೊಂಡವನು
ತಿರ್ಮಲನ	– ತಿರುಮಲೇಶನ
ತುತಿಪನ್ನ	– ಹೊಗಳಲ್ಪಟ್ಟವನ
ತುತಿಸಿ	– ಸ್ತುತಿ ಮಾಡಿ
ತೆತ್ತಿಸ ಕೋಟಿ	– ಮುವ್ವತ್ತ ಮೂರು ಕೋಟಿ
ದಧ್ಯನ್ನ	– ಮೊಸರನ್ನ
ಧಮನುನಾ	– ನಾನು ನಿನ್ನ ಭಕ್ತ
ನಿಶಿತದಲ್ಲಿ	– ರಾತ್ರಿಯಲ್ಲಿ
ನೀರೇರು	– ನಾರಿಯರು
ನೊಸಲ ನಯನ	– ಹಣೆಗಣ್ಣ–ಶಿವ
ಪಂಕಜನೇತ್ರೆ	– ಲಕ್ಷ್ಮಿ
ಪಂಚವದನ	– ಶಿವ

ಪನ್ನಗಧರ	– ಶಿವ
ಪರಮ ನಿರ್ಘೃಣಿ	– ಕರುಣ ರಹಿತನಾದ
ಪುರ	– ತ್ರಿಪುರ
ಪುರಂದರಾಲಯ ಘಟ್ಟ	– ಪುರಂದರ ಗಡ
ಪ್ರಹರ	– ಪೆಟ್ಟು
ಪ್ರಾಪ್ತಿ	– ಸಿದ್ಧಿ
ಬೆಡಗುಗೊಳಿಸು	– ಬೆರಗುಗೊಳಿಸು
ಬೊಮ್ಮ	– ಬ್ರಹ್ಮ
ಬೋರೆಮರದಡಿಯ ಲಿರುವವಗೆ	– ಬದರೀ ವೃಕ್ಷದ ಕೆಳಗೆ ವೇದವ್ಯಾಸರ ಬಳಿ ಕುಳಿತ ಮಧ್ವರು
ಭವ	– ಸಂಸಾರ ಬಂಧನ
ಭಾರತಿ	– ವಾಯುದೇವರ ಪತ್ನಿ
ಮಂಡೆಬೋಳಾಗಿ	– ಸಂನ್ಯಾಸಿ ಆದ
ಮಂತ್ರಕಲಪ	– ಮಂತ್ರೋಚ್ಚಾರಣೆ (ವೇದ ಪಠಣ)
ಮಂದ ಮತಿ	– ಅಜ್ಞಾನಿ
ಮಂದಾಕಿನೀಧರ	– ಭಾಗೀರಥಿಯನ್ನು ಧರಿಸಿದವನು
ಮನ್ಮಥಪಿತ	– ಶ್ರೀಹರಿ
ಮಾವಾರಿ	– ಸೋದರಮಾವ ನಾದ ಕಂಸನಿಗೆ ಶತ್ರುವಾದ ಶ್ರೀ ಕೃಷ್ಣ
ಮೂಡಲ ದಿಕು	– ಪೂರ್ವದಿಕ್ಕು
ಮೃಗಲಾಂಛನ	– ಏಣಾಂಕ
ರಜತ ಪರ್ವತ	– ಕೈಲಾಸ

ರಮ್ಯೆಧರಣೀದೇವಿ	– ಶ್ರೀದೇವಿ ಭೂದೇವಿ
ರವಿಯುಂಗುರ	– ಉದಯರವಿ ಯಂತೆ ದುಂಡಗಿರುವ ಉಂಗುರ
ರಾಕೇಂದು	– ಹುಣ್ಣಿಮೆ ಚಂದ್ರ
ವಾನರರೊಳಗೆ ಅತಿ ಶ್ರೇಷ್ಠ	– ಹನುಮಂತ
ವಿಡ್ಡೂರ	– ಕಷ್ಟ
ವಿನಶ	– ನಾಶವಿಲ್ಲದ
ವೇದವತಿ	– ಪದ್ಮಾವತಿಯಾಗಿ ಶ್ರೀನಿವಾಸನನ್ನು ವರಿಸಿದವಳು
ವ್ಯಾಪುತ	– ಸರ್ವವ್ಯಾಪ್ತ
ಶಿಲೆಯ ನಾರಿಯ ಮಾಡಿದಾತ	– ಅಹಲ್ಯೆಯ ಉದ್ಧಾರ ಮಾಡಿದ ಶ್ರೀರಾಮ
ಶ್ರೀಧರಾ ದುರ್ಗ	– ಶ್ರೀ ಭೂದುರ್ಗಾ ರೂಪಳಾದ
ಸಂಚಿತ	– ಈ ಜನ್ಮದಲ್ಲಿ ಮಾಡಿದ ಕರ್ಮಗಳು
ಸಂಸೃತಿಯ ಗರ್ತ	– ಸಂಸಾರದ ಸುಳಿ
ಸಟೆ	– ಸುಳ್ಳು
ಸತ್ಯವತಿ	– ಸತ್ಯವತಿಯ ವರಸೂನು ವರಪುತ್ರ
ಸದನ	– ಮನೆ
ಸದಾಚಾರಸ್ಮೃತಿ	– ಮಧ್ವಾಚಾರ್ಯರಿಂದ ರಚಿತವಾದ ಒಂದು ಗ್ರಂಥ
ಸಚ್ಚಿದಾನಂದೈಕ್ಯ	– ಸತ್–ಇರುವಿಕೆ, ಚಿತ್–ಜ್ಞಾನ, ಆನಂದ–ಸಂತಸ– ಈ ಮೂರೂ ಹೊಂದಿದ ಶ್ರೀ ಹರಿ
ಸಾಯಕ	– ಬಾಣ
ಸರ್ವೋತ್ತುಂಗ	– ಇಂದ್ರಾದಿ ದೇವತರಗಳಿಗಿಂತ ಶ್ರೇಷ್ಠನು
ಸರ್ಭರ	– ಸರ್ವರ

ಅನುಬಂಧ-೨

ಟಿಪ್ಪಣಿಗಳು

ಕೀ. ೬

ಅನಂತಗಿರಿವಾಸ ಕೊಡು ಎನಗೆ ವೀಸಾ : ತೀರ್ಥಯಾತ್ರೆ ಕಾಲದಲ್ಲಿ ದಾಸರು ಶ್ರೀ ಶೈಲಕ್ಷೇತ್ರದಲ್ಲಿ ಸಂಚರಿಸುತ್ತಿರುವಾಗ ಹುಲಿಯೊಂದು ಎದುರು ಬಂದಾಗ ಶ್ರೀಹರಿಯನ್ನು ನೆನೆದಾಗ ಮೂಡಿಬಂದ ಕೀರ್ತನೆ

ಕೀ . ೧೬

ಈತನೀಗ ವಿಜಯವಿಠ್ಠಲಾ : ರಾಯಚೂರಿನಲ್ಲಿದ್ದ ಮಾಳಿಗೆ ಶ್ರೀನಿವಾಸಚಾರ್ಯರೆಂಬುವರ ಬಳಿ ವಿಜಯವಿಠ್ಠಲ ಮುರ್ತಿಯೊಂದು ಇದ್ದು ಪೂಜೆಗೊಳ್ಳುತ್ತಿತ್ತು. ವಿಜಯದಾಸರು ರಾಯಚೂರಿಗೆ ಬಂದಾಗ ಶ್ರೀನಿವಾಸಾಚಾರ್ಯರಿಗೆ ಮೂರ್ತಿಯನ್ನು ವಿಜಯದಾಸರಿಗೆ ಕೊಡುವಂತೆ ಸ್ವಪ್ನವಾಯಿತು, ಶ್ರೀನಿವಾಸಾಚಾರ್ಯರು ಕೂಡಲೇ ವಿಜಯದಾಸರನ್ನು ಕಂಡು ಭಕ್ತಿಯಿಂದ ಮೂರ್ತಿಯನ್ನು ಒಪ್ಪಿಸಿದರು. ಆಗ ದಾಸರು ಹಾಡಿದ ಕೀರ್ತನೆಯಿದು.

ಕೀ. ೬೦

ಭಕುತಜನ ಮುಂದೆ ನೀನವರ ಹಿಂದೆ : ಈ ಕೀರ್ತನೆ ಅಲ್ಪಸ್ವಲ್ಪ ಪಾಠಾಂತರಗಳೊಂದಿಗೆ ಪುರಂದರ ವಿಠಲಾಂಕಿತದಲ್ಲೂ ದೊರೆಯುತ್ತಿದೆ. ವಿಜಯವಿಠಲಾಂಕಿತ ಪಾಠ ಮತ್ತು ಪುರಂದರ ವಿಠಲ ಪಾಠಗಳೆರಡನ್ನು ಹೋಲಿಸಿದರೆ ವಿಜಯವಿಠಲರದೇ ಈ ಕೀರ್ತನೆ ಎಂದೆನ್ನಿಸುತ್ತದೆ.

ಯುಕುತಿ ಕೈಗೊಳ್ಳದೊ ಗಯಗದಾಧರನೆ : ಭಾರತದಲ್ಲಿರುವ ಪಿತೃತೀರ್ಥಕ್ಷೇತ್ರಗಳಲ್ಲಿ ಗಯಾ ಮುಖ್ಯವಾದುದು. ಗಯೆಯಲ್ಲಿ ಪಿತೃಶ್ರಾದ್ಧ ಮಾಡಿದರೆ ಮತ್ತೆ ಪಿತೃಶ್ರಾದ್ಧ ಮಾಡಬೇಕಿಲ್ಲವೆಂದು ಕೆಲವರು ನಂಬುತ್ತಾರೆ. ವಾದಿರಾಜರು ತೀರ್ಥಪ್ರಬಂಧದಲ್ಲಿ ಗಯಾಕ್ಷೇತ್ರವನ್ನು ವರ್ಣಿಸಿದ್ದಾರೆ. ಗಯೆಯಲ್ಲಿರುವ ವಿಷ್ಣುಪಾದ ದರ್ಶನದಿಂದ ಪಿತೃಗಳಿಗೆ ಮೋಕ್ಷವುಂಟಾಗುತ್ತದೆ. ಅಲ್ಲಿ ಮಾಡುವ ಪಿಂಡ ಪ್ರದಾನದಿಂದ ಪಾಪಗಳು ನಾಶವಾಗುತ್ತದೆ.

ಕೀ. ೧೦೧

ನಿನ್ನ ದರುಶನಕೆ ಬಂದವನಲ್ಲವೋ : ತಿರುಪತಿಯಲ್ಲಿ ದೇವರ ದರ್ಶನ ದಾಸರಿಗೆ ಆಗದಿದ್ದ ಸಂದರ್ಭದಲ್ಲಿ ದಾಸರು ಹಾಡಿದ್ದು ಈ ಕೀರ್ತನೆ ಎನ್ನುತ್ತಾರೆ. ನೀನು ಯಾವ ಮಹಾವ್ಯಕ್ತಿ ! ನಿನ್ನ ಭಕ್ತರು ದೊಡ್ಡವರು ನೀನು ಭಕ್ತಪರಾಧೀನ. ಆದ್ದರಿಂದ ಅವರನ್ನು ನೋಡಲಿಕ್ಕೆ ಬಂದೆ ನಿನ್ನನ್ನಲ್ಲ ಎಂದು ನಿಂದಾಸ್ತುತಿ ಮಾಡಿದ್ದಾರೆ.

ಸೊಲ್ಲಿಗೆ ಕಂಬದೊಳು ತೋರಿದ ಮಹಾಮಹಿಮ ಎಂದು ನರಸಿಂಹಾವತಾರವನ್ನು ನೆನಪಿಸಿದ್ದಾರೆ. ಕೇವಲ ಚೇತನದಲ್ಲಷ್ಟೇ ಅಲ್ಲ ಜಡದಲ್ಲೂ ಇದ್ದಾನೆ ಸರ್ವವ್ಯಪಿ ಶ್ರೀ ಹರಿ ಎಂದ ಮೇಲೆ ನಿನ್ನನು ದೇವಸ್ಥಾನದಲ್ಲೇ ನೋಡಬೇಕಿಲ್ಲ ಎಂದು ವ್ಯಾಜದಲ್ಲಿ ಹೇಳಿದ್ದಾರೆ.

ಒಲಿದು ಭಕುತರಿಗಾಗಿ ಮದುವೆ ಹಮ್ಮಿಕೊಂಡೆ : ಶ್ರೀನಿವಾಸ ಕಲ್ಯಾಣ ಭಕುತರಿಗಾಗಿ ಭಗವಂತ ಸೃಷ್ಟಿಸಿದ ಲೀಲಾವಿಲಾಸಗಳಲ್ಲಿ ಒಂದಾಗಿದೆ ಎನ್ನುತ್ತಾರೆ ದಾಸರು. ತಿರುಪತಿಯಲ್ಲಿ ವೈಭವದಿಂದ ನಡೆಸುವ ಉತ್ಸವವೇ ಶ್ರೀನಿವಾಸಕಲ್ಯಾಣ.

ಕೀ. ೧೦೭

ವಿಜಯದಾಸರು ತೀರ್ಥಯಾತ್ರೆ ಹೊರಟಾಗ ತಿರುಪತಿಯನ್ನು ಸಂದರ್ಶಿಸಿದಾಗ ಹಾಡಿದ್ದು.

ಒಡನೆ ಪ್ರಾಣಾಚಾರದವರು ಪಡೆದ ವರಗಳನು ಕೇಳಿದೆ : "ಪ್ರಾಣಾಚಾರದವರು" ಅಂದರೆ ಅತ್ಯಂತ ಕಷ್ಟಕ್ಕೆ ಸಿಕ್ಕ ಭಕ್ತನು ತನ್ನ ಸಕಲ ಪ್ರಯತ್ನಗಳನ್ನೂ ಮಾಡಿ, ಯಾವ ಪ್ರಯತ್ನದಿಂದಲೂ ತನ್ನ ಕಷ್ಟ ನಿವಾರಣೆ ಆಗದೆ ಹೋದಾಗ ಆ ಕಷ್ಟ ಪರಿಹಾರವಾಗದೆ ಒಂದು ನಿಮಿಷವೂ ಬದುಕಲು ಸಾಧ್ಯವಾಗದೆ ಇಕ್ಕಟ್ಟಿಗೆ ಸಿಕ್ಕಿ, ದೇಹತ್ಯಾಗ ಮಾಡುವುದೊಂದೇ ಈ ಕಷ್ಟ ಪರಿಹಾರಕ್ಕೆ ಮಾರ್ಗ ಎಂಬ ಅಭಿಪ್ರಾಯದ ತುಟ್ಟತುದಿಯಲ್ಲಿ ನಿಂದು ಎಲ್ಲಿಯೂ ದೇಹ ಬಿಡುವುದು ಉಚಿತವಲ್ಲವೆಂದು ಬಲ್ಲ ಆ ಸಾತ್ವಿಕ ಜೀವನು ಈ ನಮ್ಮ ಸ್ವಾಮಿಯ ಸನ್ನಿಧಿಯಲ್ಲಿ ಮುಗಿಯಲಿ ನನ್ನ ಈ ಜನ್ಮ ಎಂದು ನಿಶ್ಚಯಿಸಿಕೊಂಡು ಈ ಶ್ರೀನಿವಾಸನ ಗುಡಿಯ ಗರುಡಗಂಬದ ಸಮೀಪದಲ್ಲಿ ಉಪವಾಸದಿಂದ "ನೀನೆ ಗತಿ ವೆಂಕಟೇಶ ಎನ್ನುವ ಮನೋಭಾವದಿಂದ ಮಲಗಿ ಬಿಡುತ್ತಾನೆ. ಬದುಕಿನಲ್ಲಿ ನಿರಾಶನಾಗಿ ಶ್ರೀ ಹರಿಗೆ ಮೊರೆಬಿದ್ದ ಈ ಜೀವವು ಶ್ರೀ ವೆಂಕಟೇಶನಿಂದ ಅಭಯಪ್ರದಾನ ಆಗುವವರೆಗೆ ಏಳುವುದೇ ಇಲ್ಲ. ಅದು

ಎಷ್ಟೇ ವೇಳೆಯಾಗಬಹುದು ಅಭಯಪ್ರದಾನ ಸಿಕ್ಕರೆ ಏಳುತ್ತೇನೆ ಇಲ್ಲ ಪ್ರಾಣ ಹೋಗಲಿ ಎಂಬ ಈ ಮನೋಭಾವದಿಂದ ಗರುಡಗಂಬದ ಹತ್ತಿರ ಬಿದ್ದಿರುವುದನ್ನು ಪ್ರಾಣಾಚಾರ ಎನ್ನುತ್ತಾರೆ" ಈ ರೀತಿ ಭಕ್ತರು ಪ್ರಾಣಾಚಾರದಿಂದ ನಿನ್ನಿಂದ ವರಪಡೆದಿದ್ದಾರೆ ಎಂದು ದಾಸರು ಕೇಳಿ ತಿಳಿದಿದ್ದಾರೆ.

ಕೀ.೧೦೮

ಹಿಮಋತು ಪ್ರಥಮ ಮಾಸದ ದಶಮಿ ಹಿಮಕರವಾರ ದಿನದಲಿ : ಈ ದಿನಾಂಕ ಹೇವಿಳಂಬಿ ಸಂವತ್ಸರ ಹೇಮಂತ ಋತು ಮಾರ್ಗಶೀರ್ಷ ಶುದ್ಧದಶಮಿ ಸೋಮವಾರ ವಾಗುತ್ತದೆ ಎಂದರೆ ಶಾಲಿವಾಹನ ಶಕೆ ೧೬೩೯ ಕ್ಕೆ ಸರಿ ಹೊಂದುವ ಕ್ರಿ. ಶ ೩–೧೨– ೧೭೧೭ಕ್ಕೆ ಸರಿಹೊಂದುತ್ತದೆ ಎರಡು ಹರಿದಾಸರತ್ನ ಗೋಪಲದಾಸರು ತಿಳಿಸಿದ್ದಾರೆ. (ಪು ೭೭ ಶ್ರೀ ವಿಜಯದಾಸರ ಜೀವನಚರಿತ್ರೆ:)

ಪುರಂದರರ ಸಂಗತಿಯಲ್ಲಿ ಸತತ ಸಾಕಿದ : ಶ್ರೀ ವಿಜಯದಾಸರ ಹಿಂದಿನ ಜನ್ಮದಲ್ಲಿ ಪುರಂದರದಾಸರ ಪುತ್ರ ಶ್ರೀ ಗುರು ಮಧ್ವ ಪತಿ ಆಗಿ ಜನಿಸಿ ಅವರೊಡನೆ ವೆಂಕಟೇಶನ ಸಂದರ್ಶನ ಮಾಡಿದ್ದನ್ನು ದಾಸರು ಇಲ್ಲಿ ನೆನೆಸಿಕೊಂಡಿದ್ದಾರೆ ಎಂದು ಹೇಳುತ್ತಾರೆ.

ಕೀ . ೧೧೨

ಬಾಬಾ ಭಕುತರ ಹೃದಯಮಂದಿರ :

ಸೂಕ್ಷ್ಮಾಂಬರಧರಾಧ್ಯಕ್ಷ = ರೇಷ್ಮೆಯ ಪೀತಾಂಬರಗಳನ್ನು ಧರಿಸಿರುವವನು ಸೂಕ್ಷ್ಮವಾದ ಅಂಬರ (ಆಕಾಶ) ಧರಾ (ಭೂಮಿ) ಇವುಗಳಿಗೆ ಅಧ್ಯಕ್ಷ (ಒಡೆಯ) ಆದವನು. ವಿಷ್ಣು.

ಅಕ್ಷತನಾರೇರ ತಕ್ಷಣದಲಿ ತರದ : ನರಕಾಸುರನ ಬಂಧನದಲ್ಲಿದ್ದ ಹದಿನಾರು ಸಾವಿರಶುದ್ದ ಕನ್ನೆಯರನ್ನು ಬಂಧನದಿಂದ ಬಿಡಿಸಿ ಕರೆದೊಯ್ದು ವರಿಸಿದನು ಶ್ರೀನಿವಾಸ.

ಸಾಂಬಜನಕ : ಜಾಂಬವತಿಯಿಂದ ಜನಿಸಿದ ಸಾಂಬನ ತಂದೆ ಶ್ರೀ ಕೃಷ್ಣ

ಜಾಂಬವಂತಪರಿಪಾಲ : ಸ್ಯಮಂತಕಮಣಿಗಾಗಿ ಶ್ರೀಕೃಷ್ಣನು ಜಾಂಬವಂತ ನೊಡನೆ ದ್ವಂದ್ವ ಯುದ್ಧಮಾಡಿ ಅನಂತರ ಅವನ ಮೇಲೆ ಕರುಣೆದೋರಿ ಅವನ ಜರ್ಝರಿತ ದೇಹವನ್ನು ತನ್ನ ದಿವ್ಯ ಸ್ಪರ್ಶದಿಂದ ಮೊದಲಿನ ಹಾಗೆ ಮಾಡಿದನು.

ಕಾಳಿಂಗಭಂಗ : ಯಮುನೆಯ ಮಡುವಿನಿಂದ ಕಾಳೀಯಸರ್ಪನನ್ನು ಓಡಿಸಿದವನು ಶ್ರೀ ಕೃಷ್ಣ.

ಮಾತಂಗ ವಿಹಂಗ ಪ್ಲವಂಗ ನಾಯಕ ಪರಿಪಾಲ : ಗಜೇಂದ್ರ ಗರುಡ ಹನುಮಂತರನ್ನು ಪ್ರಭುವಾಗಿ ರಕ್ಷಿಸಿ ಜಗತ್ತಿಗೆ ಭಕ್ತ ಪರಿಪಾಲನೆಂದು ತೋರಿಸಿದ ಶ್ರೀ ಕೃಷ್ಣ

ಅಂತರಂಗ ಸಂತಾಪ ವಿದೂರ : ಗೋಪಿಯರು ಕಾಮಿ ಭಕ್ತರಾಗಿದ್ದರು. ಅವರ ಮನಸ್ಸಿನ ವಿರಹವನ್ನು ಹೋಗಲಾಡಿಸಿ ಸಂಸಾರ ವಿಮೋಹತೆಯನ್ನು ಉಂಟುಮಾಡಿದ ಶ್ರೀ ಕೃಷ್ಣ.

ಮೂರು ನಾಮಂಗಳ ಧರಿಸದ ದಾಸರು : ಶಿರಸ್ಸು, ಲಲಾಟ ಕಂಠಗಳಲ್ಲಿ ಎದ್ದು ತೋರುವಂತೆ ಮೂರು ಪುಂಡ್ರಗಳನ್ನು ಧಾರಣೆಮಾಡಿದ ಹರಿದಾಸರು: ಶ್ರೀಹರಿಯ ಅಧಿಭೂತ, ಅಧ್ಯಾತ್ಮ, ಅಧಿದೈವ, ರೂಪಗಳು ಪ್ರತೀಕನಾದ ಅನಂತ ಗೋವಿಂದ ಅಚ್ಯುತನೆಂಬ ನಾಮತ್ರಯಗಳನ್ನು ಸದಾ ಸ್ಮರಿಸುವ ಭಕ್ತರು.

ಬಾಲಾ ಭಕುತರ ಹೃದಯಮಂದಿರ

ವೀರ ಮಾರರುತಿಮಂತ : ಶ್ರೀ ವಾಯುದೇವಾಂಶರಾದ ಶ್ರೀ ವಾದ್ವಾಚಾರ್ಯರು ಸ್ಥಾಪಿಸಿದ ಸದ್ವೈಷ್ಣವಮತ.

ತಾರರು ಮನಸಿಗೆ ಊರ ದೇವತೆಗಳ : ಮಾರಿ ಮಸಣಿ ಮುಂತಾದ ಗ್ರಾಮದೇವತೆಗಳನ್ನು ಸೇವೆಗೆ ಯೋಗ್ಯರು ಎಂಬ ಭಾವನೆಯನ್ನು ತಂದು ಕೊಳ್ಳುವುದಿಲ್ಲ.

ಸಾರಹೃದಯರು : ಶ್ರೀ ಹರಿಯ ಸರ್ವೋತ್ತಮತ್ವವನ್ನು ಸಾರುವ ಶಾಸ್ತ್ರ ನಿರ್ಣಯಗಳನ್ನು ಸದಾ ಮನದಟ್ಟು ಮಾಡಿಕೊಂಡವರು.

ಇಂದು ನಿನಗೆ ಈ ರಥ ತರಿಸುವುದು ಅಂದವಾಗಿಹುದೇನೋ ಹರಿಯೆ : ತಿರುಪತಿಯಲ್ಲಿ ಅರ್ಚಕರಿಗೂ ಮಹಂತರಿಗೂ ವಿವಾದ ಉಂಟಾಗಿ ರಥ ಸಾಗಲು ಅಡ್ಡಿಯಾದ ಸಂದರ್ಭದಲ್ಲಿ ಅದನ್ನು ಚಲಿಸುವಂತೆ ಶ್ರೀ ಹರಿಯನ್ನು ವಿಜಯದಾಸರು ಪ್ರಾರ್ಥಿಸಿದ ಪ್ರಸಂಗವನ್ನು ಈ ಸಾಲುಗಳು ನೆನೆಪಿಸುತ್ತವೆ.

ಕೌಂಶಿಕಾಪತಿ ಪಾಶಿ : ಕೌಶಿಕ ಹೆಸರಿನ ನದಿಯ ಪತಿಯೂ ಪಾಶಧಾರಿಯೂ (ಪಾಶಿ) ಆದವನು ವರುಣ.

ಕೌಂಶಿಕೆ : ಪಾರ್ವತಿಯ ಪ್ರಸನ್ನಭಾವದಿಂದ ಜನಿಸಿದವಳು ಕೌಂಶಿಕೆ. ಪಾರ್ವತಿ ದೇಹದಿಂದ ಜನಿಸಿದ ಈಕೆ ಶುಂಭ ನಿಶುಂಭರನ್ನು ಸಂಹರಿಸಿ ನಂತರ ನದಿಯಾಗಿ ಹರಿಯುತ್ತ ಗಂಗೆಯೊಡನೆ ಸೇರಿಕೊಂಡು ಸಮುದ್ರಲ್ಲಿ ಲೀನಳಾಗುವಳು. ಇವಳಿಗೆ ಪತಿ ವರುಣ.

ಹತ್ತವತಾರದ ಹರಿಯೆ : ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಭಾರ್ಗವರಾಮ, ದಶರಥರಾಮ, ಕೃಷ್ಣ, ಬುದ್ಧ, ಕಲ್ಕಿಗಳೆಂಬ ಹತ್ತು ಅವತಾರಗಳನ್ನು ತಾಳಿದ ಶ್ರೀ ಹರಿ.

ಕೀ . ೧೧೭

ಭಕ್ತಜನ ಸಂರಕ್ಷಣ ಭಕ್ತಜನ ಸುರಕ್ಷ

ಜಮದಗ್ನಿ : ಜಮದಗ್ನಿ ಋಷಿ ಪರುಶುರಾಮನ ತಂದೆ ಭೃಗು ವಂಶದ ಋಚೀಕ ಮುನಿ ಮತ್ತು ಗಾಧಿ ರಾಜನ ಮಗಳು ಸತ್ಯವತಿಯಲ್ಲಿ ಜನಿಸಿದ ರೇಣುಕೆಯ ಪತಿ.

ಕಶ್ಯಪ : ಬ್ರಹ್ಮನ ಮಾನಸ ಪುತ್ರರಲ್ಲೊಬ್ಬನಾದ ಮರೀಚಿಯಿಂದ ಕರ್ದಮನ ಪುತ್ರಿಯಾದ ಕಲಾದೇವಿಯಲ್ಲಿ ಜನಿಸಿದವನು ಇವನಿಗೆ ದಕ್ಷಪುತ್ರಿಯರಾದ ೧೩ ಮಂದಿ ಪತ್ನಿಯರು.

ನಿದ್ರೆಗೆವೆಹಾಕದಿರೋ : ಈ ಷಟ್ಪದಿಯಲ್ಲಿ ದಾಸರು ದಶಾವತಾರಗಳನ್ನು ತಿಳಿಸಿದ್ದಾರೆ.

೧) ನಿದ್ರೆಗೆ ಎವೆ ಹಾಕದಿರು (ಮತ್ಸ್ಯ)

೨) ನೀರೊಳಗೆ ನೀನಿರೊ (ಕೂರ್ಮ)

೩) ಉಪದ್ರ ಭೂಮಿಗೆ ಕಳೆಯೊ (ವರಾಹ)

೪) ಕಶ್ಯಪನ ಸುತನಳಿಯೊ (ನರಸಿಂಹ)

೫) ಸಮುದ್ರರಾಣಿಯ ಪಡೆಯೊ (ವಾಮನ)

೬) ರಾಯರಾಯರ ತಡೆಯೊ (ಪರಶುರಾಮ)

೭) ಮುದ್ರೆ ಭೂಮಿಜೆಗೆ ಕಳುಹೊ(ರಾಮ)

೮) ಅದ್ರಿಯನದ್ಧರಿಸೊ (ಕೃಷ್ಣ)

೯) ಮುಪ್ಪುರವ ಸಂಹರಿಸೂ (ಬುದ್ಧ)

೧೦) ಕಲಿ ಕ್ಷುದ್ರಕಳೆ (ಕಲಿ)

ಹೀಗೆ ದಶಾವತಾರಗಳನ್ನು ದಾಸರು ಸೂಚಿಸಿದ್ದಾರೆ.

ಕಶ್ಯಪನ ಸುತನಳಿಯೊ : ಕಶ್ಯಪ ಋಷಿಯ ಪತ್ನಿ ದಿತಿ ಅವಳಲ್ಲಿ ಜನಿಸಿಸದವರು ದೈತ್ಯರು. ಶಾಪನಿಮಿತ್ತ ಜಯನೆಂಬ ದ್ವಾರಪಾಲಕ ಪ್ರಥಮ ಜನ್ಮದಲ್ಲಿ ಹಿರಣ್ಯಾಕ್ಷನಾಗಿ ಜನಿಸಿ ಭೂಮಿಯನ್ನು ಚಾಪೆಯಂತೆ ಸುತ್ತಿಕೊಂಡು ಸಾಗರಗರ್ಭ ಸೇರಿದಾಗ ಶ್ರೀ ಹರಿ ವರಾಹ ಅವತಾರಿಯಾಗಿ ಅವನನ್ನು ಕೊಂದು ಭೂಮಿಯನ್ನು ಉದ್ಧರಿಸಿದನು.

ಬತ್ತೀಸರಾಗಗಳು : ಧನಾಶ್ರೀ ೨ ಭೂಪಾಳಿ ೩ ವರಾಳಿ ೪ ಬಂಗಾಳಿ ೫ ಸಾಳಂಗ ೬ ಗೂರ್ಜರಿ ೭ ನಾಟಿ ೮ ದೇಶಾಕ್ಷಿ ೯ ಮಂಗಳ ಕೌಶಕೀ ೧೦ ಮಾಳವ ೧೧ ಸೌರಾಷ್ಟ್ರ ೧೨ ಧನ್ಯೆ ೧೩ ನಾರಾಯಣಿ ೧೪ ಮೊಧವೀ ೧೫ ಲಲಿತಾ ೧೬ ರೇಗುಪ್ತಿ ೧೭ ಕುರಂಜಿ ೧೮ ದೇವಗಾಂಧಾರಿ ೧೯ ಪಳವ ಮಂಜರಿ ೨೦ ದೇಶಿ ೨೧ ಮಲಹರಿ ೨೨ ಆಹೇರಿ ೨೩ ರಾಮಶ್ರೀ ೨೪ ಗುಂಡಕ್ರೀ ೨೫ ಭೈರವಿ ೨೬ ಕಲ್ಯಾಣಿ ೨೭ ಶ್ರೀ ರಾಗ ೨೮ ತೋಡಿ ೨೯ ಘಂಟಾರವ ೩೦ ಕಾಂಭ್ರೋಜಿ ೩೧ ಸಾರಂಗ ೩೨ ವಸಂತ (ಪ್ರೌಢದೇವರಾಯನ ಕೃಪೆ) ಇವೇ ೩೨ ರಾಗಗಳು. ವಾಚನಗಳಲ್ಲೂ ಇದರ ಪ್ರಸ್ತಾವವಿದೆ.

ಕೀ. ೧೪೦

ಸಾಗಿಬಾರೈಯ್ಯ ಭವರೋಗ ವೈದ್ಯಾನೆ : ಒಮ್ಮೆ ತಿರುಪತಿಯಲ್ಲಿ ಶ್ರೀನಿವಾಸನ ಬ್ರಹ್ಮೋತ್ಸವ ನಡೆದ ಕಾಲಕ್ಕೆ ದಾಸರು ಹೋಗಿದ್ದರು. ಆಗ ರಥ ಮುಂದಕ್ಕೆ ಹೊರಡದಿದ್ದಾಗ, ರಥದ ಮುಂದೆ ನಿಂತು ಗೆಜ್ಜೆಯಕಾಲಿನಿಂದ ಕುಣಿಯುತ್ತಾ, ತಂಬೂರಿ ಮೀಟುತ್ತಾ ಚಿಟಿಕೆ ತಾಳ ಹಾಕುತ್ತಾ ಈ ಕೀರ್ತನೆ ಹಾಡಿದರಂತೆ, ಆಗ ರಥ ಚಲಿಸಿತು.

ಕೀ. ೧೬೨

" ಆವಜನ್ಮದ ಪುಣ್ಯ ಫಲಿಸಿತೆನಗೆ........." : ಪ್ರತಿದಿನದ ದೇವತಾಕಾರ್ಯಗಳು ಮುಗಿಸಿದ ನಂತರ, ರಾತ್ರಿಯ ವೇಳೆ ಸ್ವಲ್ಪ ಹೊತ್ತು ಧಾರ್ಮಿಕ ವಿಷಯಗಳನ್ನು ಕುರಿತು ಉಪನ್ಯಾಸ ಮಾಡುವುದು ಶ್ರೀ ದಾಸರ ಪದ್ಧತಿ. ಹಾಗೆ ಉಪನ್ಯಾಸ ಮಾಡುವಾಗ ಶ್ರೀ ಕೃಷ್ಣನ ಪ್ರಸಾದದ ಮಹಿಮೆಯನ್ನು ತಿಳಿಸುತ್ತಾ, ಆ ಪ್ರಸಾದದಲ್ಲಿರುವ ಒಂದೊಂದು ಪದಾರ್ಥಗಳೂ ಹೇಗೆ ಇಂದ್ರಿಯಗಳನ್ನು ನಿಯಂತ್ರಿಸಿ ಮನಸ್ಸನ್ನು ಭಗವಂತನ ಸಾನ್ನಿಧ್ಯ ಪಡೆಯಲು ಯೋಗ್ಯವನ್ನಾಗಿ ಮಾಡುತ್ತವೆ ಎನ್ನವುದನ್ನು ತಿಳಿಸಿ ಹೇಳುವ ಕೀರ್ತನೆ.

ಕೀ. ೧೯೦

ಮಾತನ್ನಾಡೈ ಮನ್ನಾರಿ ಕೃಷ್ಣ : ಮನ್ನಾಸುರನೆಂಬ ದೈತ್ಯನು ತನ್ನ ಸಮಾನ ಯಾರು ಇಲ್ಲೆಂದು ಗರ್ವಿಸುತ್ತ ಋಷಿಗಳ ತಪಸ್ಸನ್ನು ಕೆಡಿಸುತ್ತಿದ್ದಾಗ ಅವನನ್ನು ಕಾಲಿಂದ ತಿಕ್ಕಿ ಕೊಂದ ಕೃಷ್ಣನನ್ನು ಮನ್ನಾರಿ ಕೃಷ್ಣ ಎನ್ನುತ್ತಾರೆ.

ಕೀ. ೨೧೪

ಸೋಮ ಸೋದರಿಯೆ : ಅಮೃತಮದಥನ ಕಾಲದಲ್ಲಿ ಚಂದ್ರಮಾ ರೂಪಾಂತರದಿಂದ ಶ್ರೀ ಮಹಾಲಕ್ಷ್ಮಿಯು ಕಾಣಿಸಿಕೊಂಡಿದ್ದರಿಂದ ಅವರಿಬ್ಬರದು ಸೋದರ ಸೋದರೀಭಾವವೆಂದು ತಿಳಿಯಬೇಕು.

ಕಿ. ೨೨೦

ಹಂಪೆಯಲ್ಲಿ ಶ್ರೀ ವ್ಯಾಸರಾಯರು ಬಂಡೆಯ ಮೇಲೆ ಚಕ್ರಾದಿಗಳನ್ನು ಬರೆದು ಸ್ಥಾಪಿಸಿದ ಯಂತ್ರೋದ್ಧಾರಕ ಹನುಮನನ್ನು ಕಂಡು ವಿಜಯದಾಸರು ರಚಿಸಿದ ಕೀರ್ತನೆ.

ತುಂಗಭದ್ರೆಯಲ್ಲಿ ಖ್ಯಾತಿಯಾಗಿದ್ದ ಯುತಿಯಾ

ವ್ಯಾಸರಾಯರನ್ನು ಕುರಿತು ಹೇಳಿದಮಾತು.

ವಲಯಾಕಾರದಾಢ್ಯ ಚಿತ್ರಿಕೋಣ

ಹನಾಯ ಪ್ರತಿಷ್ಠದಿತನಾದ ಚಕ್ರದ ವರ್ಣನೆ

ಕೀ . ೨೨೬

ನಂಬಿದೆ ನಿನ್ನಯಪಾದ ಮುಖ್ಯ ಪ್ರಾಣ : ಈ ಕೀರ್ತನೆ ಶ್ರೀ ಮೊದಲ್‌ಕಲ್ ಶೇಷದಾಸರ ಕೀರ್ತನೆಗಳ ಪುಸ್ತಕದಲ್ಲೂ ಸಿಗುತ್ತದೆ. ಚಿಪ್ಪಗಿರಿಯ ಮೂಲಪ್ರತಿಯಲ್ಲಿ

ಈ ಪದ ಶ್ರೀ ವಿಜಯದಾಸರ ಪದಗಳ ಜೊತೆಯಲ್ಲೇ ಇದೆ. ಶ್ರೀ ಮೊದಲ್‌ಕಲ್ ಶೇಷದಾಸರಾಯರ ಕೃತಿ ಸಂಗ್ರಹದ ಮೂಲಪ್ರತಿಯಲ್ಲಿ ಈ ಪದವಿಲ್ಲವೆಂದು ಹರಿದಾಸರತ್ನಂ ಗೋಪಾಲದಾಸರು ತಿಳಿಸಿದ್ದಾರೆ.

ಇಪ್ಪತ್ತು ಒಂದುಸಾವಿರ ಐದೊಂದುನೂರು=೨೧೬೦೦

ಹಂಸಮಂತ್ರ : ಹಂಸಃ ಸೋಹಂಸ್ವಾಹಾ=ದೋಷರಹಿತನಾದ ಶ್ರೀ ಹರಿಯೇ ನನ್ನ ಅಂತರ್ಯಾಮಿ ಆಗಿದ್ದಾನೆ. ಅತನಿಗೆ ನನ್ನನ್ನು ಅರ್ಪಿಸಿದ್ದೇನೆ.

ಒಪ್ಪದಿಂದಲಿ ಜಪಿಸಿ : ಶ್ರೀ ಹರಿಗೆ ಪ್ರೀತಿಯಾಗುವಂತೆ ಧ್ಯಾನಿಸಿ

ಸಮ್ಮಪ್ಪದ ಜೀವರು : ಭಕ್ತರು,

ಅಪ್ಪನಂದದಿ : ಪುತ್ರವಾತ್ಸಲ್ಯದಿಂದ.

ಹತ್ತೇಳು ಎರಡುಯುತ ಸಾವಿರ ನಾಡಿ ಸೂಕ್ತಿ ೧೦x೭=೭೯+೨= ೭೨x೧೦೦೦ =೭೨೦೦೦ ನಾಡಿಗಳಲ್ಲಿ ಸುತ್ತುತ್ತಲೇ ಇದ್ದು.

ಸೂತ್ರ ಮಾರುತ ಉತ್ತರ ಲಾಲಿಸು : ಸೂತ್ರ ನಾಮಕ ಪ್ರಾಣದೇವನೇ ನನ್ನ ಮುಂದಿನ ಅಪೇಕ್ಷೆಯನ್ನು ಕೇಳುವಂಥವನಾಗು.

ಉತ್ತಮಣದಲ್ಲಿ ನೆತ್ತಿಯ ದ್ವಾರದಿಂದಲ್ಲಿ ಎತ ಮರಿಯಲೀಸದದೆ : ಜೀವ ದೇಹವನ್ನು ಬಿಟ್ಟು ಹೋಗುವ ಸಮಯದಲ್ಲಿ ಬ್ರಹ್ಮರಂಧ್ರದಿಂದಲೇ ಹೋಗುವಂತೆ (ಬೇರೆ ರೀತಿ ಹೋಗದಂತೆ ಮಾಡು). ಏಕೆಂದರೆ ಬ್ರಹ್ಮರಂಧ್ರದಿಂದ ಜೀವ ಹೋದರೆ ತಿರುಗಿ ಸಂಸಾರಕ್ಕೆ ಬಾರದು ಅರ್ಚಿರಾದಿ ಮಾರ್ಗದಲ್ಲಿ ಮುಂದೆ ಸಾಗುತ್ತಾರೆ ಎಂದರ್ಥ.

ಪಂಚಪರಣ ರೂಪನೆ : ಪ್ರಾಣ ಅಪಾನ ವ್ಯಾನ ಉದಾನ ಸಮಾನಗಳೆಂಬ ಐದು ರೂಪಗಳಿಂದ ಇರುವ ಪ್ರಾಣ ಸ್ವರೂಪ.

ಸತ್ಯಕಾಯ : ಸತ್ವಶರೀರ ಬ್ರಹ್ಮವಾಯುಗಳ ಪ್ರಾಕೃತ ಶರೀರವು ಶುದ್ಧ ಸತ್ವಾತ್ಮಕವಾದದು.

ಪಂಚಾದ್ರಿಗಳ ಲೋಪನೆ: ತಮಸ್ಸು, ಮೋಹಾ, ಮಹಾಮೋಹ ತಾಮಿಸ್ರ, ಅಂಧತಾಮಿಸ್ರ ಎಂಬ ೫ ಬೆಟ್ಟಗಳಷ್ಟು ಬಾರಿಯಾದ ಅವಿದ್ಯಗಳಿಂದ ದೂರವಿರುವವನು ಪ್ರಾಣದೇವರು.

ಪರಪಂಚಗಳೋಡಿಸಿ : ಹರಿಯನ್ನು ನೆನೆಯದಂತೆ ಮಾಡುವ ಶಬ್ದ ರೂಪ, ರಸ ಗಂಧ ಸ್ಪರ್ಶ ಎಂಬ ತನ್ಮಾತ್ರೆಗ ಸಂಬಂಧವನ್ನು ತೊಲಗಿಸು.

ಪಂಚವಕ್ತ್ರ ಹರಿಮಂಚದ ಗುರುವೆ : ರುದ್ರದೇವ ಮತ್ತು ಶೇಷದೇವ (ಹರಿಗೆ ಶಯ್ಯಾ ರೂಪನಾದವನು) ಇವರಿಗೆ ಗುರುವಾದವನು ಮುಖ್ಯಪ್ರಾಣ.

ವ್ಯಾಸಯೋಗಿಗೊಲಿದ ನ್ಯಾಸ : ಯೋಗೀಂದ್ರರಾದ ಶ್ರೀ ವ್ಯಾಸರಾಯರಿಗೆ ಒಲಿದ ಪಂಪಾ ಕ್ಷೇತ್ರದಲ್ಲಿರುವ ಯಂತ್ರೋದ್ಧಾರಕ ಪ್ರಾಣದೇವರು ಆದ ಶ್ರೀ ತುಂಗಾಭದ್ರಾ ವಾಸನಾಗಿರುವ ನಿನಗೆ ನಮಿಸುವೆನು.

ಭವದೂರ ಜಾಗರ ಮೂರ್ತಿ : ಸಂಸಾರ ಬಂಧನದಿಂದ ವಿರಹಿತನಾದವನು ನಿತ್ಯ ಜಾಗ್ರತನಾದ ವಾಯುದೇವರು.

ಕೀ. ೨೨೭

ಪವಮಾನ ಜಗದ ಪ್ರಾಣ ಸಂಕರುಷಣ

ಸಂಕರುಷಣಭವನೇ : ಸರ್ವಾಕರ್ಷಕ ಶಕ್ತಿಯುಳ್ಳ ಶ್ರೀ ಸಂಕರ್ಷಣನಿಂದ ಜನಿಸಿದವನು ವಾಯುದೇವನು.

ದುರ್ಜನ ವನ ಕುಠಾರ : ದುರ್ಜನರೆಂಬ ಅರಣ್ಯವನ್ನು ಕತ್ತರಿಸಿ ಒಗೆಯುವಲ್ಲಿ ಕೊಡಲಿಯಂತಿರುವವನು.

ಮೂರ್ಜಗವರಿವಂತೆ ಗರ್ಜನೆ ಮಾಡಿದೆ : ಅರ್ಜುನನ ರಥದ ಮೇಲೆ ಧ್ವಜರೂಪನಾಗಿ ನಿಂತು ಮೂರು ಲೋಕಗಳಿಗೆ ಕೇಳುವಂತೆ ಹನುಮ ಗರ್ಜಿಸಿದ ಕೌರವ ನಾಶಕ್ಕೆ ನಾಂದಿ ಹಾಡಿದನು.

ಯಾಮ ಯಾಮಕೆ : ಪ್ರತಿಯಾಮದಲ್ಲಿ (ಯಾಮ ಎಂದರೆ ೩ ಗಂಟೆಗಳ ಕಾಲ. ದಿನಕ್ಕೆ ಹಗಲಿನಲ್ಲಿ ೪ ಮತ್ತು ರಾತ್ರಿಯಲ್ಲಿ ೪ ಯಾಮಗಳು)ಎನ್ನ ಸದಾ ನಿನ್ನ ಸ್ಮರಣೆಯಲ್ಲಿರುವಂತೆ ಮಾಡು.

ಸತ್ಯ ವಿಜಯವಿಠ್ಠಲನ ಕಾಣಿಸಿಕೊಡುವುದು : ಸುಜನ ಹಿತಕರನಾದ ವಿಜಯ ವಿಠಲನ ದರ್ಶನ ಲಭಿಸುವಂತೆ ಮಾಡು ಎಂದರೆ ಮುಖ್ಯ ಪ್ರಾಣನು ಪಂಚರೂಪದಿಂದ ವಿಶೇಷ ಸನ್ನಿಹಿತನಾದರೆ ಮಾತ್ರ ಮನಸ್ಸಿಗೆ ದಿವ್ಯ ದೃಷ್ಟಿ ಉಂಟಾಗಿ ಶ್ರೀ ಹರಿಯ ದರ್ಶನಕ್ಕೆ ಮನಸ್ಸು ಶಕ್ತವಾಗುತ್ತದೆ.

ಕೀ. ೨೨೮

ಪವಮಾನ ಶ್ರೀಗುರುವೆ ಪವಮಾನ

ಪರಾಕು : ರಾಜಾಧಿರಾಜರಿಗೆ ಅವರ ಪರಾಕ್ರಮಾಧಿಗಳನ್ನು ಕುರಿತು ಮಂದಿ ಮಾಗಧರು ಮಾಡುವ ಜಯಘೋಷ.

ವಿರಾಗ ಪ್ರತ್ಯಕ್ಷವಾಗಿ ದಾಸತ್ವಕೊಡು : ವೈರಾಗ್ಯ ಮೈಗೂಡುವಂತೆ ಮಾಡಿ ಶ್ರೀಹರಿಯ ಮತ್ತು ನಿನ್ನ (ವಾಯುದೇವರು) ದಾಸತನವನ್ನು ದಯಪಾಲಿಸು.

ಕರ್ಣ ಭೂಷಣ ಕೃಪೆ ಮಾಡು : ಸದಾನಂದಪ್ರದವಾದ ಶ್ರೀ ಹರಿಗುರು ಕಥಾ ಶ್ರವಣವನ್ನು ದಯಮಾಡಿ ನೀಡು.

ಮಾನಸದಲಿ ಭೇದ ಜ್ಞಾನವ ಕರುಣಿಸು : ಪಂಚಭೇದ ಜ್ಞಾನ ನಿಶ್ಚಯವನ್ನು ಎನ್ನಂತರಂಗದಲ್ಲಿ ಮೂಡಿಸು.

ಪಂಚಭೇದ ಜ್ಞಾನ : ಶ್ರೀ ಮನ್ಮಧ್ವಾಚಾರ್ಯರ ಮತದಂತೆ ಪಂಚಭೇದ ಜ್ಞಾನ ಹೀಗಿದೆ : ೧) ಜಡ-ಜೀವ ೨) ಜಡ – ಜಡ ೩) ಜೀವ – ಜೀವ ೪) ಜಡ – ಪರಮಾತ್ಮ ೫) ಜೀವ – ಪರಮಾತ್ಮ. ಈ ೫ ಬಗೆಯ ಭೇದವೂ ವಾಸ್ತವವಾಗಿ ಸತ್ಯವಾದುದು.

ಜ್ಞಾನ ಪ್ರಾಣೋತ್ತಮ ರೂಪ : ವಾಯುದೇವನು ಅಮುಕ್ತನಾಗಿದ್ದರೂ ಪ್ರಾಕೃತ ದೇಹ ರಹಿತನಾದವನಂತೆ ಮುಕ್ತ ಪ್ರಾಯನೇ ಆಗಿರುವನು. ಆದಕಾರಣ ಜ್ಞಾನವೇ ಮೂರ್ತಿಗೊಂಡ ಮುಖ್ಯಪ್ರಾಣ ರೂಪನೇ ಎಂದಿದ್ದಾರೆ ದಾಸರು.

ನೋಡೆ ಸುರರೊಳು ನಿನಗಾರು ಯೆಣೆಯಾ : ದೇವತೆಗಳಲ್ಲಿ ಬ್ರಹ್ಮನ ವಿನಾ ಯಾರಾದರೂ ತಕ್ಕವರಿದ್ದಾರೆಯೆ ? ಇಲ್ಲ ರುದ್ರಾದಿಗಳಾರು ನಿನಗೆ ಎಣೆ ಅಲ್ಲ.

ಕೀ. ೨೫೬

ಕಿಂಕರನ ಧ್ವನಿಗೆ ನೀ ಕೊಡು ಮತಿಯನು :

ನೀ ಕೊಡು ಮತಿಯನು : ಕ್ಷುದ್ರ ನರಸ್ತುತಿಯನ್ನು ತ್ಯಜಿಸಿ ಶ್ರೀ ಹರಿಯ ಗುಣಾವಳಿಗಳನ್ನೇ ಕೀರ್ತಿಸುವ ವಿವೇಕವನ್ನು ಅನುಗ್ರಹಿಸು.

ವಿಕಸಿತ ಸುಲಲಿತಾಭೆ : ಮಲ್ಲಿಕಾ ಮತ್ತು ಲಲಿತವೆಂಬ ಹಾರಗಳನ್ನು ಧರಿಸಿ ಪ್ರಕಾಶಮಾನವಾದವಳು ಸರಸ್ವತಿ.

ಹಾರಗಳಲ್ಲಿ ಲಲಿತ, ವಿಲಾಸ, ವಿಕಸಿತ ಎಂದು ಮೂರು ಬಗೆಗಳಿವೆ ಎಂದು ನಾನಾರ್ಥ ರತ್ನಮಾಲ ಹೇಳುತ್ತದೆ.

ವಿಜಯವಿಠಲನ ಪೌತ್ರೇ : ಬ್ರಹ್ಮದೇವನು ಶ್ರೀಹರಿಯ ಮಗನು ಸರಸ್ವತಿ ಒಂದು ರೂಪದಿಂದ ಬ್ರಹ್ಮನ ಮಗಳಾಗಿ ಜನಿಸಿದಳು. ಬ್ರಹ್ಮನು ಆಕೆಯನ್ನು ಮದುವೆಯಾದನು. ಆದ್ದರಿಂದ ಅಜಕಳತ್ರೆಯು (ಹೆಂಡತಿ) ಹೌದು ಶ್ರೀಹರಿಯ ಪೌತ್ರೆಯೂ ಹೌದು.

ಕ್ಷಯರಹಿತ ಮುನಿ ಸ್ತೋತ್ರೆ : ಅಕ್ಷಯ ಮುನಿಗಣದಿಂ ಅಥವಾ ನಿತ್ಯ ಜ್ಞಾನಿಗಳಾದ ಮುನಿಗಳಿಂದ ಕೀರ್ತಿತಳಾದವಳು

ರಂಗುಮಾಣಿಕ ಪ್ರಭೆಯೆ : ಪದ್ಮರಾಗಮಣಿಯಲ್ಲಿ ಪ್ರೀತಿಯುಳ್ಳವಳು.

ಸಕಲ ವಿದ್ಯಾರಂಭೆ : ಎಲ್ಲ ವಿದ್ಯೆಗಳ ಆರಂಭದಲ್ಲಿ ಪೂಜಿತಳಾದವಳು.

ಗಂಗೆಯಮುನೆ ಉಭಯಸಂಗಮೆ : ಗಂಗಾನದಿ ಮತ್ತು ಯಮುನಾ ನದಿಗಳ ಸಂಗಮದಲ್ಲಿರುವ ಸರಸ್ವತೀ (ನದಿ) ವಿದ್ಯಾದೇವತೆಯಾದ ಸರಸ್ವತಿಯನ್ನು ಪುಣ್ಯತೀರ್ಥಗಳಲ್ಲಿ ಒಂದಾದ ಸರಸ್ವತೀ ನದಿಯನ್ನು ಅಭಿನ್ನ ಭಾವದಿಂದ ದಾಸರು ಇಲ್ಲಿ ಸ್ತುತಿಸಿದ್ದಾರೆ.

ಉತ್ತರ ಪ್ರದೇಶದ ಗಂಗಾತೀರದ ಮಹಾಕ್ಷೇತ್ರಗಳಲ್ಲಿ ಒಂದು ಪ್ರಯಾಗ. ಇಲ್ಲಿ ಗಂಗಾ, ಯಮುನಾ, ಸರಸ್ವತೀ ಮೂರು ತೀರ್ಥಗಳ ಸಂಗಮವಾಗಿ ತ್ರಿವೇಣಿ ಸಂಗಮ ಎಂದು ಹೆಸರಾಗಿದೆ.

ಕೀ. ೨೫೭

ವಾಣಿ ನೀ ತೋರೇ ವಾರಿಜನಾಭನ್ನ ಮಹಾಲಾಭನ್ನ

ಮಹಾಲಾಭನ್ನ : ನಮಗೆ ಪರಮಲಾಭ ರೂಪನಾದ ಶ್ರೀಹರಿಯನ್ನು ಅಥವಾ ಮಹಾಜ್ಞಾನಿಗಳಿಗೆ ಸಿಗುವಂಥ ಶ್ರೀಹರಿಯನ್ನು

ನಿತ್ಯ ಸುಲಭವ : ಸಾಮಾನ್ಯ ಭಕ್ತರಿಗೂ ಸದಾ ಸುಲಭನಾದವನು ಎಂದರೆ ಯೋಗ್ಯತಾನುಸಾರ ಅಲ್ಪ ಭಕ್ತಿಗೂ ಒಲಿದವನನ್ನು.

ತ್ರಿಲೋಕಜನನಿ : ಲೋಕ ಸರ್ಜಕನಾದ ಬ್ರಹ್ಮನ ಪತ್ನಿಯಾದುದರಿಂದ ಜಗತ್ತಿನ ತಾಯಿ ಆದವಳು. ಮೂರು ಲೋಕದ ಪ್ರಜೆಗಳಿಗೆ ತಾಯಿ ಸ್ವರೂಪದವಳು ಆದ ಸರಸ್ವತೀ ದೇವಿ.

ನಿತ್ಯೋಪಾಧಿಲಿ ದೈತ್ಯರವಾರ್ಧಿಸಿ : ಸದಾ ನಾವು ಮಾಡುವ ಸತ್ಕರ್ಮಗಳಿಗೆ ವಿಘ್ನವುಂಟು ಮಾಡುವ ಅಸುರರನ್ನು ನಾಶಮಾಡಿ

ಕೀ. ೨೬೦

ಶಾರದೆಯೇ ಕರುಣಾ ವಾರಿಧಿಯೇ

ಸಾರಾಂಶ ವಚನ ಕೊಟ್ಟು ಸಲಹಿ : ಶಾಸ್ತ್ರದ ಸಾರಜ್ಞಾನವನ್ನು ದಯಪಾಲಿಸಿ ಸಾರ ಸ್ವರೂಪನಾದ ಶ್ರೀಹರಿಯನ್ನು ಕೀರ್ತಿಸುವ ಸಾಮರ್ಥ್ಯವನಿತ್ತು ಕಾಪಾಡು

ಜಗದಂಬೆ : ಸೃಷ್ಟಿಕರ್ತನಾದವನು ಬ್ರಹ್ಮ. ಅವನ ಪತ್ನಿ ಶಾರದೆ ಆದ್ದರಿಂದ ಈಕೆ ಜಗದಂಬೆ.

ಕೀ. ೨೬೧

ಏನು ಮರುಳಾದೆಮ್ಮ ಎಲೆ ಭಾರತೀ : ಈ ಕೀರ್ತನೆಯಲ್ಲಿ ಮೊದಲನೇ ನುಡಿಯಲ್ಲಿ ಹನುಮನನ್ನು, ಎರಡನೇ ನುಡಿಯಲ್ಲಿ ಭೀಮನನ್ನು, ಮೂರನೇ ನುಡಿಯಲ್ಲಿ ಮಧ್ವರನ್ನು ಒಟ್ಟಿನಲ್ಲಿ ವಾಯುದೇವರ ಮೂರು ಅವತಾರಗಳನ್ನು ದಾಸರು ಬಣ್ಣಿಸಿದ್ದಾರೆ.

ಈ ಕೀರ್ತನೆ ಮುಂಡಿಗೆ ಹಾಗಿದೆ. ಇಲ್ಲಿ ಸಾಂಕೇತಿಕ ವರ್ಣನೆಯ ಪದಗಳು ಸುಲಭವಾಗಿ ತಿಳಿಯುವುದಿಲ್ಲ. ಇಂಥ ಹಲವಾರು ಕೀರ್ತನೆಗಳನ್ನು ವಿಜಯದಾಸರು ರಚಿಸಿದ್ದಾರೆ.

ಕೀ. ೨೭೧

ಗೌರೀವರನೆ ಎನ್ನ ಮೊರೆ ಕೇಳೋ

ಗೌರವಗಾತುರ ತವರು ಮನೆಯ ಭಕ್ತ : ಬೆಳ್ಳನೆಯ ಮೈಯ ಹಿಮವತ್ ಪರ್ವತವನ್ನೇ ಜನ್ಮ ಭೂಮಿಯಾಗುಳ್ಳ ಪಾರ್ವತಿಯ ವಿಶ್ವಾಸಿ = ಶಿವ.

ತ್ರಿಗುಣೋತ್ತಮಗಾತುರ : ಸತ್ತ್ವಗುಣಾಧಿಕ್ಯವುಳ್ಳ ವೈಚಾರಿಕ ರಜೋಗುಣ ಪ್ರಚುರ ತೈಜಸ, ತಮೋಧಿಕ್ಯದ ತಾಮಸ, ಈ ತ್ರಿವಿಧ ಅಹಂಕಾರ ತತ್ವಗಳ ನಿಯಾಮಕ ಶರೀರಿ.

ನಗೆಪಗೆ ಮಗನನು ಮೃಗನೆವದಿ ಕಾಳಕಮಾಡಿ ಮೆಚ್ಚಿದೆ : ನಗ (ಪರ್ವತಗಳಿಗೆ) ಪಗೆ (ಶತ್ರುವಾದ ಇಂದ್ರನ) ಮಗನನು (ಅರ್ಜುನನ್ನು) ಮೂಕನೆಂಬ ದಾನವ ಹಂದಿ ರೂಪ ತಾಳಿ ಬಂದಾಗ ಅರ್ಜುನನು ಅದನ್ನು ಸಂಹರಿಸಿದಾಗ ಅದೇ ಸಂದರ್ಭದಲ್ಲಿ ಶಿವನೂ ಬೇಡನ ರೂಪದಲ್ಲಿ ಆ ಹಂದಿಯನ್ನೇ ಕೊಂದಾಗ ಯಾರು ಕೊಂದವರು ಎಂಬ ಬಗ್ಗೆ ಕಾಳಗವಾಗಿ ಅರ್ಜುನನ ಶೌರ್ಯಕ್ಕೆ ಶಿವನು ಮೆಚ್ಚಿ ಪಾಶುಪತಾಸ್ತ್ರ ದಾನ ಮಾಡಿ ಮೆಚ್ಚಿದೆ ಎನ್ನುತ್ತಾನೆ.

ಅಪ್ರತಿ–ನವವಿಧ ಭಕುತಿ ಕೊಡು ಶಂಭು : ಭಕ್ತಿಯ ಅಸಮಾನವಾದ ಒಂಬತ್ತು ಪ್ರಕಾರಗಳು : ೧. ಶ್ರೀ ವಿಷ್ಣು ಕಥಾಶ್ರವಣ, ೨. ಕೀರ್ತನ, ೩. ಸ್ಮರಣ, ೪. ಪಾದಸೇವನ, ೫. ಅರ್ಚನ, ೬. ನಮನ, ೭. ದಾಸ್ಯ, ೮. ಸಖ್ಯ, ೯. ಆತ್ಮ ಸಮರ್ಪಣೆ.

ದೇಹವೇ ನಿನಗೊಪ್ಪಿತು : ದೇಹ ಮನೋ ನಿಯಮ್ಯವಾದುದು. ಶಿವನು ಮನೋನಿಯಾಮಕ ಹೀಗೆಂದು ತಿಳಿದು ದೇಹವನ್ನು ಶಿವನಿಗೆ ಒಪ್ಪಿಸುವುದು.

ಅಜಭೃಕುಟಿಸಂಭೂತ : (ಬ್ರಹ್ಮನು ಹುಬ್ಬು ಗಂಟಿಕ್ಕಿದ್ದರಿಂದ ಹುಟ್ಟಿದವನು = ಶಿವ) ಬ್ರಹ್ಮನ ಮಾನಸಪುತ್ರರು ಪ್ರಬಾಭಿವೃದ್ಧಿ ಕಾರ್ಯದಲ್ಲಿ ಅವನಾಜ್ಞೆಯಂತೆ ಕಾರ್ಯ ನಿರ್ವಹಿಸದೇ ಭಗವಂತನ ಧ್ಯಾನಪರರಾಗಲು ಆಗಿ ಬ್ರಹ್ಮದೇವನು ಕೋಪಗೊಂಡಾಗ ಕೋಪ ಸೂಚಕ ಭೃಕುಟಿಯುಕ್ತ ಲಲಾಟದಿಂದ ರುದ್ರನು ಜನಿಸಿದನು.

ಕೀ. ೨೭೨

ಪಂಪಾತೀರದ ಲಿಂಗಾಭವ ಭಸಿತಂಗಾ

ಪಂಪಾತೀರ : (ಪಂಪಾಪುರ) ಎಂಬ ಪಾಠಾಂತರವೂ ಇದೆ.

ಕರ್ನಾಟಕ ಇತಿಹಾಸದಲ್ಲಿ ವೈಭವದ ತುತ್ತ ತುದಿಯನ್ನೇರಿದ ವಿಜಯನಗರ ಸಾಮ್ರಾಜ್ಯದ ಹಂಪೆ ಐತಿಹಾಸಿಕವಾಗಿಯೂ ಪೌರಾಣಿಕವಾಗಿಯೂ ಪ್ರಾಶಸ್ತ್ಯ ಪಡೆದಿದೆ. ಪೌರಾಣಿಕವಾಗಿ ರಾಮಾಯಣದಲ್ಲಿ ಕಿಷ್ಕಿಂದೆ ಎಂದು ಹೆಸರು ಪಡೆದಿದ್ದ, ವಾನರೋತ್ತಮರಿದ್ದ ಬೀಡು ಇದು. ವಿರೂಪಾಕ್ಷ ಗುಡಿ ಐತಿಹಾಸಿಕವಾಗಿ ಬಹಳ ಪ್ರಸಿದ್ಧವಾದುದು. ವಿಜಯನಗರದಂತಹ ವೈಭವ ಸಾಮ್ರಾಜ್ಯವನ್ನು ಕಣ್ಣು ಕಂಡು ಅರಿಯದು, ಕಿವಿಗಳು ಕೇಳಿ ತಿಳಿಯದು ಎಂದು ವಿದೇಶಿ ಪ್ರವಾಸಿಗರು ಬಣ್ಣಿಸಿದ್ದಾರೆ.

ಸಾಮಾನ್ಯವಾಗಿ ಎಲ್ಲಾ ಪ್ರಸಿದ್ಧ ಹರಿದಾಸರೂ ಪಂಪಾ ವಿರೂಪಾಕ್ಷನನ್ನು ಸಂದರ್ಶಿಸಿದ್ದಾರೆ, ಧನ್ಯರಾಗಿದ್ದಾರೆ. ಕೀರ್ತನೆ ಹಾಡಿದ್ದಾರೆ. ದಕ್ಷಿಣ ಕಾಶಿ ಎಂದು ಪ್ರಸಿದ್ಧವಾದ ಪಂಪಾಕ್ಷೇತ್ರವನ್ನು ವಿರೂಪಾಕ್ಷನನ್ನು ಕೀರ್ತಿಸಿರುವವರಲ್ಲಿ ವಿಜಯದಾಸರು ಒಬ್ಬರು. ಈ ಪ್ರದೇಶದಲ್ಲಿ ಪಂಪಾ ಸರೋವರದಲ್ಲಿ ಪಂಪಾನದಿ ಹುಟ್ಟಿ ಹರಿದು ತುಂಗಭದ್ರೆಯನ್ನು ಸೇರುತ್ತದೆ.

ಮಧ್ಯ ದಾನನ ಛೇದ : ಬ್ರಹ್ಮನಿಗೆ ೫ ಮುಖಗಳಿದ್ದವು. ಅದರಲ್ಲಿ ಮೇಲಿನದಾದ ಮಧ್ಯ ಮುಖವನ್ನು ವೇದವನ್ನು ಅಪಶಬ್ದದಿಂದ ಉಚ್ಚರಿಸಿದ್ದಕ್ಕೆ ಶ್ರೀ ವಿಷ್ಣುವಿನ ಆಜ್ಞೆಯಿಂದ ರುದ್ರನು ಅದನ್ನು ಕತ್ತರಿಸಿದನು.

ಮರುತ ಪ್ರತಿಬಿಂಬ : ವಾಯುದೇವನು ಪರಮಾತ್ಮನ ಮುಖ್ಯ ಪ್ರತಿಬಿಂಬನಾದಂತೆ ರುದ್ರನು ವಾಯುವಿನ ಮುಖ್ಯ ಪ್ರತಿಬಿಂಬನು. ಸರ್ವಜೀವರೂ ಸ್ವೋತ್ತಮರ ಪ್ರತಿಬಿಂಬ.

ಜನಿಸಿ ಕಾಡುವ ರೋಗ : ಹುಟ್ಟಿನಿಂದಲೇ ಪೀಡಿಸುವ ಭವರೋಗ.

ವೀರಭದ್ರ : ರುದ್ರನು ಸಿಟ್ಟಿನಿಂದ ಜಟೆಯ ಒಂದೆಳೆನು ಕಿತ್ತು ನೆಲಕ್ಕೆ ಅಪ್ಪಳಿಸಿದಾಗ ಪ್ರಕಟವಾದ ರೂಪ ವೀರಭದ್ರ ರೂಪ. ರುದ್ರ, ವೀರಭದ್ರ ಎರಡೂ ಶಿವನ ನಾಮಗಳೇ.

ಕೀ. ೨೭೩

ಪಂಪಾಪುರಾಧಿಪ ಶ್ರೀವಿರೂಪಾಕ್ಷ

ಪಂಪಾಪುರಾಧಿಪನಾದ, ಹಂಪೆಯ ಶ್ರೀ ವಿರೂಪಾಕ್ಷನನ್ನು ಕುರಿತು ದಾಸರು ಹಾಡಿದ ಕೀರ್ತನೆಗಳಲ್ಲಿ ಇದೊಂದು.

ಶ್ವೇತ ದ್ವೀಪಾವಾಸನ ತೋರಿ : ಜೀವನಿಗೆ ನಿತ್ಯ ಪ್ರಕಟವಾಗುವ ಶ್ರೀ ಹರಿಯು ವಿರಾಜಿಸುವ ತ್ರಿಧಾಮಗಳು ಎಂದರೆ ವೈಕುಂಠ – ಅನಂತಾಸನ – ಶ್ವೇತ ದ್ವೀಪಗಳು.

ಶ್ರೀಪತಿ ಪಾದ ಸಮೀಪದ ಸೇವಕ : ಶ್ರೀ ಹರಿಯ ಸಮೀಪದಲ್ಲಿದ್ದು ಋಜುಗಣದ ಜೀವರ ನಂತರ ಪ್ರಧಾನ ಸೇವಕನಾದವನು.

ಸಂಕರುಷನ ಚರಣಾಬ್ಜಧೂಳಿ ಶರೀರಲೇಪನದಿಂದ ವರತೇಜ ( ) : ಪ್ರಳಯಕಾಲದಲ್ಲಿ ಜಗತ್ತನ್ನು ದಹಿಸಿ ಭಸ್ಮ ಗೊಳಿಸುವವನು ಶ್ರೀ ಸಂಕರ್ಷಣ ರೂಪಿ ಶ್ರೀ ಹರಿಯು ; ಹರಿಯ ಪಾದ ಧೂಳಿಯನ್ನು ಭಸ್ಮರೂಪದಿಂದ ತನ್ನ ಶರೀರಕ್ಕೆ ಬಳಿದುಕೊಂಡವನು ಶಿವನು. ಶ್ರೀ ಸಂಕರ್ಷಣನು ರುದ್ರಾಂತರ್ಯಾಮಿ ವಿಷ್ಣು ಭಕ್ತರು ಶಿವನ ಭಸ್ಮ ಧಾರಣೆಯನ್ನು ಹೇಗೆ ಭಾವಿಸಬೇಕು ಎಂಬುದರ ಸೂಚನೆ ಇಲ್ಲಿದೆ.

ದಕ್ಷಿಣ ಕಾಶಿ : ಹಂಪೆ (ಪಂಪಾಕ್ಷೇತ್ರ) ದಕ್ಷಿಣ ಕಾಶಿಯೆಂದೇ ಪ್ರಸಿದ್ಧವಾಗಿದೆ.

ಶ್ರೀಶನ ಮಂತ್ರೋಪದೇಶವ ಮಾಡಿದೆ : ಶಿವನು ಗಿರಿಜೆಗೆ ಶ್ರೀರಾಮತಾರಕ ಮಂತ್ರವ ಉಪದೇಶ ಮಾಡಿದ ಸಂಗತಿ ಪುರಾಣಗಳಲ್ಲಿ ಉಕ್ತವಾಗಿದೆ.

ಕೀ. ೨೭೭

ಲಿಂಗ ಎನ್ನಂತರಂಗ ಮಂಗಳಾಂಗ : ಲಿಂಗ ಎಂದರೆ ಇಲ್ಲಿ ರಾಮಲಿಂಗೇಶ್ವರ. ಬ್ರಹ್ಮ ಶಿರಃಛೇದನದಿಂದ ಪ್ರಾಪ್ತವಾದ ಬ್ರಹ್ಮ ಹತ್ಯಾ ದೋಷ ಪರಿಹಾರಕ್ಕಾಗಿ ರಾಮೇಶ್ವರನಲ್ಲಿ ಶ್ರೀರಾಮನಿಂದ ರಾಮಸೇತುವಿನ ನಿತ್ಯ ದರ್ಶನಕ್ಕಾಗಿ ಲಿಂಗ ರೂಪದಿಂದ ಪ್ರತಿಷ್ಠಾಪಿತನಾದ ಶಿವ.

ವಿಜಯದಾಸರು ದರ್ಶಿಸಿದ ಅನೇಕ ಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲಿ ಇದೊಂದು ಇದನ್ನು ಕುರಿತ ಕೀರ್ತನೆ. ರಾಮೇಶ್ವರಲಿಂಗದ ಸಮೀಪವೆ ಶ್ರೀ ರಾಮನು ತನ್ನ ಧನುಸ್ಸಿನಿಂದ ಭೂಮಿ ಸೀಳಿ ಒಂದು ತೀರ್ಥವನ್ನು ನಿರ್ಮಿಸಿದನು. ಇದಕ್ಕೆ ಕೋಟಿತೀರ್ಥವೆನ್ನುತ್ತಾರೆ. ರಾಮೇಶ್ವರ ದಕ್ಷಿಣ ಭಾರತದ ಪ್ರಸಿದ್ಧ ಪುಣ್ಯಕ್ಷೇತ್ರಗಳಲ್ಲಿ ಒಂದು.

ಮಂದಾಕಿನೀಧರಗೆ ಗಂಗಾಮಜ್ಜನವೆ : ಭಕ್ತರು ಕಾಶಿಗೆ ಹೋದವರು ರಾಮೇಶ್ವರದಲ್ಲಿ ರಾಮಲಿಂಗಕ್ಕೆ ಗಂಗಾಜಲವನ್ನು ತಂದು ಅಭಿಷೇಕ ಮಾಡುವುದು ಸಂಪ್ರದಾಯ. ಹೀಗೆ ಮಾಡಿದರೆ ವಿಷ್ಣು ಪಾದೋದಕವನ್ನು ಶಿರಸಾ ಧರಿಸಿದ ಶಿವನು ಅಭಿಷೇಕ ಮಾಡಿದವರ ಮೇಲೆ ಅನುಗ್ರಹ ಮಾಡುತ್ತಾನೆ. ಶಿವನಿಗೆ ಇದರಿಂದ ಯಾವ ಆಧಿಕ್ಯವೂ ಇಲ್ಲ.

ಕಂದರ್ಪಜಿತಗೆ ಮಿಗಿಲಾಪೇಕ್ಷೆಯೆ ? : ಅಂಗಸಂಗದ ಮೋಹಕ್ಕಿಂತ ಪ್ರಬಲ ವಿಷಯ ಕಾಮನೆ ಇನ್ನೊಂದಿಲ್ಲ. ಅದನ್ನು ಪ್ರಚೋದಿಸುವ ಮನ್ಮಥನನ್ನೇ ಗೆದ್ದವನು (ಸುಟ್ಟವನು) ಶಿವ. ಅಂಥವನಿಗೆ ಬೇರಾವ ವಸ್ತುಗಳಿಂದ ತೃಪ್ತಿಗೊಳಿಸಲಾದೀತು ?

ಮನೆರಜತಪರ್ವತಗೆ ಫಣಿಯ ಆಭರಣವೆ : ಬೆಳ್ಳಿ ಪರ್ವತವೆ (ಹಿಮಾಲಯ) ಮನೆಯುಳ್ಳಾತನು ಶಿವ. ಅಂಥ ಥಳಿಥಳಿಸುವ ಲೋಕದವನಿಗೆ ಹೊಳೆಯುವ ಸರ್ಪವು ಆಭರಣವಾದೀತೆ? ಸರ್ಪಭೂಷಣನಾಗಿರುವುದೇಕೆಂದರೆ ಮುಂದೆ ಬರಲಿರುವ ಶೇಷಪದವಿಯೇ ತನಗೆ ಭೂಷಣವೆಂಬುದನ್ನು ಸೂಚಿಸುತ್ತದೆ ಎಂದು ಹೇಳುತ್ತಾರೆ.

ಕೀ. ೨೮೦

ಶಂಭೋ ಸ್ವಯಂಭು ಸರಭದ ನಂಬಿದೆ : ಮಧುರೆಯಲ್ಲಿನ ಚಿಕ್ಕನಾಥೇಶ್ವರನನ್ನು ಕುರಿತು ವಿಜಯದಾಸರು ಹಾಡಿದ ಕೀರ್ತನೆ ಇದು.

ಜಂಭಾರಿಸುತ ಅಭವ : ಇಂದ್ರ ದೇವನಿಂದ ಸ್ತುತ್ಯನಾದವನು ಜಂಭನು ತಾರಕಾಸುರನ ಮಂತ್ರಿ, ತಾರಕಾಸುರನ ಸಂಹಾರ ಕಾಲದಲ್ಲಿ ಈತನೂ ಹತನಾದ. ಜಂಭನು ಇಂದ್ರನ ಶತ್ರುವಾದದ್ದರಿಂದ ಜಂಭಾರಿ (ಇಂದ್ರ)

ಅಂಬರಪುರಹರ : ತಾರಕಾಸುರನ ಪುತ್ರ ಕಮಲಾಕ್ಷನೆಂಬ ಅಸುರನ ಪಟ್ಟಣವನ್ನು ನಾಶಮಾಡಿದವನು ಶಿವ.

ಮಯಾಸುರನು ಬ್ರಹ್ಮನಾದ ವರ ಪಡೆದು ಉಕ್ಕಿನಿಂದ ಭೂಮಿಯಲ್ಲಿ ಬೆಳ್ಳಿಯಿಂದ ಅಂತರಿಕ್ಷದಲ್ಲಿ ಅಂದರೆ ಮೇಲ್ಭಾಗದ ಆಕಾಶದಲ್ಲಿ ಬಂಗಾರದಿಂದ ಪುರಗಳನ್ನು ನಿರ್ಮಿಸಿದನು. ಇವುಗಳನ್ನು ತಾರಕಾಸುರನ ಮೂರು ಜನ ಮಕ್ಕಳಿಗೆ (ತಾರಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ) ಕ್ರಮವಾಗಿ ಸುವರ್ಣಪುರ, ರಜತಪುರ, ಆಯಸಪುರಗಳನ್ನು ನೀಡಿದನು. ಶಿವನು ಏಕಕಾಲಕ್ಕೆ ಈ ೩ ಪುರಗಳನ್ನು ದಹಿಸಿ ತ್ರಿಪುರಾರಿಯಾದನು.

ಶಂಬರಾರಿಂದ್ರ : ಶಂಬರಾಸುರನನ್ನು ಕೊಂದವನು ಮನ್ಮಥ, ಮನ್ಮಥನನ್ನು ದಹಿಸಿದವನು ಶಿವ.

ಮೂಕ ರಕ್ಕಸ ಮದ ಮರ್ದನ : ವರಾಹ ರೂಪದ ಈ ರಾಕ್ಷಸನನ್ನು ಇಂದ್ರಜಾಲ ಪರ್ವತದಲ್ಲಿ ಸಂಚಾರ ಮಾಡುತ್ತಿದ್ದಾಗ ಶಿವ ಮತ್ತು ಅರ್ಜುನರಿಂದ ಕೊಲ್ಲಲ್ಪಟ್ಟನು. ಇನ್ನೊಂದು ಐತಿಹ್ಯದಂತೆ ಕೊಲ್ಲೂರು (ಮಹಾರಣ್ಯಪುರ) ಕ್ಷೇತ್ರದ ರಾಕ್ಷಸ ಮೂಕಾಸುರ ಇವನನ್ನು ಅಂಬಿಕೆ ಕೊಂದು ಮೂಕಾಂಬಿಕೆ ಎಂಬ ಹೆಸರಿನಿಂದ ಕೊಲ್ಲೂರಿನಲ್ಲಿ ನೆಲೆ ನಿಂತಳು.

ಗಜದೈತ್ಯನಾಶ ಗಿರೀಶ : ಮಹಿಷಾಸುರನ ಮಗ ಗಜಾಸುರ ಶಿವವರದಿಂದ ದೇವತೆಗಳನ್ನು ಪೀಡಿಸಿದಾಗ ಶಿವನು ಇವನನ್ನು ಕೊಂದನು. ಅಸುರನ ಪ್ರಾರ್ಥನೆಯಂತೆ ಅವನ ಚರ್ಮವನ್ನು ಧರಿಸುವುದಾಗಿ ವಾಗ್ದಾನ ಮಾಡಿ, ಗಜಚರ್ಮಾಂಬರನಾದನು ಶಿವ.

ಕೃತಮಾಲಾ ನದೀ ತೀರದಿ ವಾಸವಾಗಿಪ್ಪ : ಮತ್ಸ್ಯಾವತಾರ ಚರಿತ್ರೆಯಲ್ಲಿ ಈ ಪ್ರಸಂಗ ಬರುತ್ತದೆ. ಸತ್ಯವ್ರತರಾಜನಿಗೆ ಮತ್ಸ್ಯರೂಪದ ಶ್ರೀಹರಿಯ ಬೊಗಸೆಯಲ್ಲಿ ದೊರೆದ ನದಿ ಇದು ಕೃತಮಾಲಾನದಿ.

ಮಧುರಿಪು : ಮಧುವೈರಿ = ಶ್ರೀಹರಿ. ಆದಿ ಸೃಷ್ಟಿಯಲ್ಲಿ ವೇದಗಳನ್ನು ಕದ್ದು ಹಯಗ್ರೀವರೂಪೀ ಶ್ರೀಹರಿಯಿಂದ ಸಂಹರಿಸಲ್ಪಟ್ಟ ಮಧು ಕೈಟಭರೆಂಬ ಆದಿ ದೈತ್ಯರಲ್ಲಿ ಒಬ್ಬ ಮಧು. ಇವನಿಗೆ ಶತ್ರುವಾದವನು ಶ್ರೀಹರಿ.

ಸದಾ ನಮಿಪರ ಹೃದಯಸ್ಥ ಚಕ್ಕನಾಥ : ಮಧುರೆಯಲ್ಲಿರುವ ಚಕ್ಕನಾಥೇಶ್ವರ (ಶಿವ).

ಕೀ. ೨೮೫

ಉಮಾ ಕಾತ್ಯಾಯಿನಿ ಗೌರಿ ದಾಕ್ಷಾಯಿಣಿ

ಉಮಾ=ಪಾರ್ವತಿ. ಶಿವನನ್ನು ಪತಿಯಾಗಿ ಪಡೆಯುವುದಕ್ಕಾಗಿ ತಪಸ್ಸಿಗೆ ಹೊರಡುವಾಗ ಆಕೆಯ ತಾಯಿ ಮೇನಕಾದೇವಿ ಉ=ಎಲೈ ಮಗಳೇ ಮಾ = ಬೇಡ ಎಂದಿದ್ದರಿಂದ ಉಮಾ ಎಂದು ಹೆಸರಾಯಿತಂತೆ ಪಾರ್ವತಿಗೆ.

ಕಾಳಿ : ರಾಕ್ಷಸರು ದೇವತೆಗಳನ್ನು ಪದಚ್ಯುತಿಗೊಳಿಸಿದಾಗ ಆ ಇಂದ್ರಾದಿ ದೇವತೆಗಳೆಲ್ಲರೂ ಪಾರ್ವತಿಗೆ ಶರಣಾದರು. ಆಗ ಪಾರ್ವತಿಯ ದೇಹದಿಂದ ಸುಂದರಿಯೊಬ್ಬಳು ಆವಿರ್ಭವಿಸಿದಳು. ಅವಳು ಶುಂಭ ನಿಶುಂಭರನ್ನು ಸಂಹರಿಸಿದಳು. ಆಗ ಪಾರ್ವತಿ ಕಪ್ಪಾಗಿ ಕಂಡಿದ್ದರಿಂದ ಶಿವನು ಪಾರ್ವತಿಯನ್ನು ಕಾಳಿ ಎಂದು ಕರೆದನು.

ಗೌರಿ : ಪಾರ್ವತಿ ತಪಸ್ಸನ್ನು ಮಾಡಿ ಶುಭ್ರವರ್ಣೆಯಾಗಿದ್ದರಿಂದ ಅವಳಿಗೆ ಗೌರಿ ಎಂದು ಹೆಸರಾಯಿತು.

ದಾಕ್ಷಾಯಿಣಿ = ದಕ್ಷ ಪುತ್ರಿಯಾದ್ದರಿಂದ ದಾಕ್ಷಾಯಿಣಿ

ಪಾರ್ವತಿ : ಮನದ ಅಭಿಮಾನಿದೇವತೆ = ಪಾರ್ವತಿ. ಮನಸ್ತತ್ತ್ವದ ಮುಖ್ಯಾಭಿಮಾನಿ ಶಿವನ ಸತಿಯಾದ್ದರಿಂದ ಈಕೆಗೂ ಈ ತತ್ತ್ವದ ಮೇಲೆ ಅಧಿಕಾರವಿರುತ್ತದೆ.

ಅನುಬಂಧ – ೩

ಅಂಕಿತನಾಮಸೂಚಿ

ಆ

ತ

ದ

ಧ

ಮ

ಯ

ವ

ಶ

ಹ

ಅನುಬಂಧ–೪

ಕೀರ್ತನೆಗಳ ಅಕಾರಾದಿ

ಕ್ರಮ. ಸಂಖ್ಯೆ.	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
ಚ		
೮೧	ಚಿನ್ಮಯ ಚಿದಾನಂದ ನೀನೆ	೨೮
ಜ		
೮೨	ಜಗಪತಿಯ ತೋರಮ್ಮ ಎನಗೆ	೨೦೯
೮೩	ಜಯ ಕೃಷ್ಣವೇಣಿ ದುರ್ಜನರ ಗಂಟಲಗಾಣಿ	೩೦೨
೮೪	ಜಯ ಜಯ ಮೂಷಕಗಮನಾ	೨
೮೫	ಜಯ ಜಯತು ಜಾಹ್ನವಿಯೆ ಭಕ್ತಸಂಜೀವಿ	೨೯೪
೮೬	ಜಯ ಜಾಹ್ನವಿ ದೇವಿ ಜಯ ಭಕುತ ಸಂಜೀವಿ	೨೯೫
೮೭	ಜಾಣ ನಿನಗೆ ಸರಿಗಾಣೆ	೨೯
೮೮	ಜಾನಕಿರಾಮ ಜಾನಕಿರಾಮ ಜಾನಕಿರಾಮ	೧೫೨
೮೯	ಜೋಕುಮಾರನೆಂದು ಪಾಡಿದಳೊ	೧೭೫
೯೦	ಜೋ ಜೋ ಹರಿ ಜಾಹ್ನವಿ ಜನಕ	೧೭೬
ಡ		
೯೧	ಡೀ ಡೀ ಆಡೋನೆ ರಂಗ ಡೀ ಡೀ ಆಡೋನೆ	೧೭೭
ತ		
೯೨	ತಕ್ಕೋ ಗಂಟ ನಿನ್ನಾಟವ ತಿಳಿಸುವೆ	೧೭೮
೯೩	ತರತಮದಿ ಶರಣುಮಾಡುವೆ ನಿಮಗೆ	೩೦
೯೪	ತಾರೋ ವಸನ ಎಷ್ಟೋ ವಿನೋದ	೧೭೯
೯೫	ತಿಮ್ಮ ನಿನ್ನಯ ಪಾದ ಒಮ್ಮೆಗಾದರು ನೆನೆಯೆ	೯೭
೯೬	ತಿರಿದುಂಬುವ ನೀನು ತಿರುಮಲೇಶಾ	೯೮
೯೭	ತಿಳಿವರು ಮನುಜರು ತಿಳಿದೊಮ್ಮೆ ತಿಳಿಯರು	೩೧
೯೮	ತುಂಗೆ ಬಂದಳು ದೇವೋತ್ತುಂಗೆ	೩೦೭
೯೯	~~ತ್ರಿವೇಣೀ ಕ್ಷೇತ್ರವ ಬಿಡದೆ ಧ್ಯಾನವನು ಮಾಡಿ~~	~~೨೯೯~~

ಯ

ರ

ಕ್ರಮ. ಸಂಖ್ಯೆ.	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
೨೧೫	ರಂಗನಾಡಿದನೊ ಮನ್ನಾರಿ ಕೃಷ್ಣನಾಡಿದನೊ	೧೯೫
೨೧೬	ರಂಗ ಮಾನವ ಸಿಂಗನಾದನು	೧೪೮
೨೧೭	ರಂಗಾ ದುರಿತ ಮದಭಂಗಾ ನಿತ್ಯ ನಿಸ್ಸಂಗಾ	೬೮
೨೧೮	ರಕ್ಷಿಸನ್ನರೈ ರಮಣ ಪಂಚಪರಣಾ ಜಗತ್ಪಾವನಾ	೨೩೭
೨೧೯	ರಜತಪೀಠದ ಯಾತ್ರೆ ರಜೋತಮ ಗುಣವುಳ್ಳ	೧೯೬
೨೨೦	ರಥವನೇರಿದ ರಥಗಾತ್ರ ಪಾಣಿ	೧೨೦
೨೨೧	ರಾಜುಕುಲವನ ರಾಶಿ ರಾಜರಾಜೇಶ್ವರಾ	೧೯೭
೨೨೨	ರಾಮ ಜಾನಕೀ ರಮಣ ರಾಜೀವದಳನಯನ	೧೫೪
೨೨೩	ರಾಮ ರಘುಕುಲಾಬ್ಧಿ ಸೋಮಾ	೧೫೫
೨೨೪	ರಾಮ ರಾಮ ಎಂಬೆರಡಕ್ಕರ	೧೫೬
೨೨೫	ರುದ್ರ ವೀರಭದ್ರಾ ಅದ್ರಿನಂದನೆ ರಮಣಾ	೨೭೬
ಲ		
೨೨೬	ಲಿಂಗಾ ಎನ್ನಂತರಂಗಾ	೨೭೭
೨೨೭	ಲಿಂಗಾಭವ ಭವಭಸಿತಾಂಗ ಅಂಗಜ ಮದಭಂಗ	೨೭೮
ವ		
೨೨೮	ವಂದಿಪ ಬನ್ನಿ ನೀವೆಲ್ಲ	೨೩೮
೨೨೯	ವಂದಿಸು ವಂದಿಸು ಗುಣವ ಕೊಂಡಾಡಿ	೬೯
೨೩೦	ವಂದೇ ಮುಕುಂದ ನಮೋ	೧೪೯
೨೩೧	ವರ್ಣಿಸಲರಿಯೆ ನಿನ್ನ ವರ್ಣಿಸಲರಿಯೆ	೭೦
೨೩೨	ವರಗಳನು ಕೊಡುವುದು ವಾಸುಕಿ ಪ್ರಿಯಾ	೨೮೭
೨೩೩	ವರದೆ ಸಮಸ್ತ ವರದೆ	೩೦೬
೨೩೪	ವಾತನ್ನ ಜಯಜಾತನ್ನ ಲೋಕಪ್ರೀತನ್ನ	೨೩೯
೨೩೫	ವಾಣಿ ನೀ ತೋರೆ ವಾರಿಜನಾಭನೆ	೨೫೭
೨೩೬	ವಾಣೀ ಪರಮ ಕಲ್ಯಾಣಿ	೨೫೮
೨೩೭	ವಾಣಿಯರಸ ಪರಮೇಷ್ಠಿ ನಿರುತನಿಷ್ಠಿ	೨೧೭

ಅನುಬಂಧ-೫

ಸಹಾಯಕ ಸಾಹಿತ್ಯ

೧ ಶ್ರೀ ವಿಜಯದಾಸರ ಪದಗಳು (ಭಾಗ-೧) (೧೯೫೩. ಪ್ರ,ಮು)
ಸಂ: ಹನುಮಂತರಾವ್ ಗೊರಬಾಳ
ಪ್ರ: ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲ, ಲಿಂಗಸೂಗೂರ

೨ ಶ್ರೀ ವಿಜಯದಾಸರ ಪದಗಳು (ಭಾಗ-೨) (೧೯೫೩. ಪ್ರ,ಮು)
ಸಂ: ಹನುಮಂತರಾವ್ ಗೊರಬಾಳ
ಪ್ರ: ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲ, ಲಿಂಗಸೂಗೂರ

೩ ವಿಜಯದಾಸರ ಹಾಡುಗಳು(೧೯೯೪. ತೃ. ಮು)
ಸಂ: ಕಾವ್ಯಪ್ರೇಮಿ
ಸಹ ಸಂಪಾದಕರು: ಚಿದಂಬರ ಇನಾಂದರ, ವಿ.ಅರ್ಜ ಬೇಗೂರ
ಪ್ರ: ಸಮಾಜ ಪುಸ್ತಕಾಲಯ, ಧಾರವಾಡ.

೪ ಶ್ರೀ ವಿಜಯದಾಸರ ಕೀರ್ತನೆಗಳು (೧೯೬೮, ದ್ವಿ.ಮು)
ಸಂ: ಸುಬೋಧ ಎಂ ರಾಮರಾವ್
ಪ್ರ: ಸುಬೋಧ ಪ್ರಕಟನಾಲಯ, ಚಾಮರಾಜಪೇಟೆ, ಬೆಂಗಳೂರು

೫ ವಿಜಯದಾಸರ ಕೀರ್ತನೆ(ಭಾಗ-೧, ೧೯೨೨, ಪ್ರ.ಮು)
ಸಂ: ಪಾವಂಜೆ ಗುರುರಾವ್
ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ

೬ ವಿಜಯದಾಸರ ಕೀರ್ತನೆ(ಭಾಗ-೧, ೧೯೨೯, ದ್ವಿ.ಮು ಪರಿಷ್ಕೃತ)
ಸಂ: ಪಾವಂಜೆ ಗುರುರಾವ್
ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ

೭ ವಿಜಯದಾಸರ ಕೀರ್ತನೆ (ಭಾಗ-೨, ೧೯೨೯ ವಿಸ್ತೃತ ಮುದ್ರಣ)
ಸಂ: ಪಾವಂಜೆ ಗುರುರಾವ್
ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ

೮ ಶ್ರೀವಿಜಯದಾಸರ ಕೀರ್ತನೆಗಳು (೧೯೯೬)
ಸಂ: ನಾರಾಯಣಾಚಾರ್ಯ
ಪ್ರ: ಶ್ರೀ ವಾರಿಧಿ ಪ್ರಕಟನ ಮಂದಿರ, ಬಸವನಗುಡಿ, ಬೆಂಗಳೂರು.

೯ ಭಜನಮಂಜರಿ (೧೯೮೬)
ಸಂ: ಕೆ.ಎಲ್.ಪುಷ್ಕರಾಚಾರ್ಯ ಮತ್ತು ದಿ॥ಜೆ.ಹೆಚ್.ಬಿ ಆಚಾರ್ಯ
ಪ್ರ: ನಾರಾಯಣಾಚಾರ್ ಪೂಜಾ ಭಂಡಾರ್ರ್, ಮಾಡೆರ್ಲ್ ಹೌಸ್ ಬೀದಿ,
ಬಸವನಗುಡಿ, ಬೆಂಗಳೂರು-೪

೧೦ ಶ್ರೀ ಗುರುಸಾರ್ವಭೌಮ ರಾಘವೇಂದ್ರ ತೀರ್ಥರು (೧೯೮೩ ಪ್ರ.ಮು)
ಸಂ: ಎಚ್.ಎಸ್, ಶ್ರೀನಿವಾಸಮೂರ್ತಿ
ಪ್ರ: ಶ್ರೀ ಉರಗಾದ್ರಿವಾಸ ವಿಠಲ ಪ್ರಕಾಶನ, ೫ನೇ ಕ್ರಾಸ್,
ನರಸಿಂಹರಾಜ ಕಾಲೋನಿ, ಬೆಂಗಳೂರು-೬೬೦೦೧೯

೧೧ ಭಜನ ಕೌಸ್ತುಭ (ಸಂಪುಟ-೧, ಪ್ರ.ಮು ೧೯೯೩)
ಸಂ: ಎಚ್.ಎಸ್. ಶ್ರೀನಿವಾಸಮೂರ್ತಿ
ಪ್ರ: ಶ್ರೀ ಉರಗಾದ್ರಿವಾಸ ವಿಠಲ ಪ್ರಕಾಶನ, ೫ನೇ ಕ್ರಾಸ್,
ನರಸಿಂಹರಾಜಕಾಲೋನಿ, ಬೆಂಗಳೂರು-೫೬೦೦೧೯.

೧೨ ಭಜನ ಕೌಸ್ತುಭ (ಸಂಪುಟ-೨, ಪ್ರ.ಮು ೧೯೯೩)
ಸಂ: ಎಚ್.ಎಸ್. ಶ್ರೀನಿವಾಸಮೂರ್ತಿ
ಪ್ರ: ಹೆಚ್.ಎಸ್. ಶ್ರೀನಿವಾಸಮೂರ್ತಿ, ಶ್ರೀ ಹರಿದಾಸ ಸಾಹಿತ್ಯ
ಪ್ರಚಾರಮಾಲೆ, ಬೆಂಗಳೂರು.

೧೩ ಭಜನ ಕೌಸ್ತುಭ (ಸಂಪುಟ-೩, ಪ್ರ.ಮು ೧೯೯೪)
ಸಂ: ಎಚ್.ಎಸ್. ಶ್ರೀನಿವಾಸಮೂರ್ತಿ
ಪ್ರ: ಶ್ರೀ ಉರಗಾದ್ರಿವಾಸ ವಿಠಲ ಪ್ರಕಾಶನ, ೫ನೇ ಕ್ರಾಸ್,
ನರಸಿಂಹರಾಜಕಾಲೋನಿ, ಬೆಂಗಳೂರು-೫೬೦೦೧೯.

೧೪ ಶ್ರೀ ಹರಿಗುರು ಭಜನ ಚಂದ್ರಕಾ (೧೯೯೬, ಹನ್ನೆರಡನೇ ಮುದ್ರಣ)
ಸಂ: ಕೃಷ್ಣದಾಸ ಮುರಗೋಡ, ಬೆಂಗಳೂರು
ಪ್ರ: ಕೃಷ್ಣದಾಸ ಮುರಗೋಡ, ಬೆಂಗಳೂರು

೧೫ ಶ್ರೀ ವರಮಹಾಲಕ್ಷ್ಮೀ ಹಾಡುಗಳು (ದ್ವಿ.ಮು. ೧೯೮೭)
ಸಂ: ಅ.ರಾ. ಪಂಚಮುಖಿ

ಪ್ರ: ಶ್ರೀ ರಾಘವೇಂದ್ರ ತೀರ್ಥ ಪ್ರತಿಷ್ಠಾಪನಾ. ಪವಮಾನ ಸದನ
ಧಾರವಾಡ-೭

೧೬ ತಾರತಮ್ಯೋಕ್ತ ಶ್ರೀ ಹರಿ ಭಜನಾಮೃತಕಲಶ (೧೯೯೫. ದ್ವಿ. ಮು)
ಸಂ: ಪ್ರಹ್ಲಾದಾಚಾರ್ಯ. ಕೃ.ಜೋಷಿ, ಕುಷ್ಟಗಿ, ರಾಯಚೂರು
ಪ್ರ: ಶ್ರೀ ಆನಂದತೀರ್ಥ ಪ್ರತಿಷ್ಠಾನ, ಪೇಜಾವರ ಮಠ, ಉಡುಪಿ.

೧೭ ಹರಿದಾಸ ಕೀರ್ತನ ಮಂಜರಿ (೧೯೮೫. ಪ್ರ.ಮು)
ಸಂ: ಪ್ರೊ. ವಿ.ಎ. ಜೋಶಿ.
ಪ್ರ: ಸಮಾಜ ಪುಸ್ತಕಾಲಯ, ಧಾರವಾಡ

೧೮ ಶ್ರೀ ಹರಿಗುರು ಭಜನಾಮಂಜರೀ (೧೯೯೧)
ಸಂ: ಹೆಚ್.ಪಿ. ನಾಗರಾಜರಾವ್
ಪ್ರ: ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ ಟ್ರಸ್ಟ್ (ರಿ)
ಕಡೂರು-೫೭೭೫೪೮.

೧೯ ಶ್ರೀ ಹರಿಭಜನ ಪದ್ಧತಿ (ಭಾಗ-೧, ಪ್ರ.ಮು ೧೯೮೧)
ಸಂ: ಹರಿದಾಸರತ್ನಂ ಗೋಪಾಲದಾಸರು,
ಪ್ರ: ಹರಿದಾಸರತ್ನಂ ಗೋಪಾಲದಾಸರು,
ನಂ ೧೪೨, ಗವಿಪುರಂಗುಟ್ಟಹಳ್ಳಿ, ಬೆಂಗಳೂರು-೫೬೦೦೦೯

೨೦ ಶ್ರೀ ಹರಿಭಜನ ಪದ್ದತಿ (ಭಾಗ-೨, ಪ್ರ.ಮು ೧೯೮೫)
ಸಂ: ಹರಿದಾಸರತ್ನಂ ಗೋಪಾಲದಾಸರು,
ಪ್ರ: ಹರಿದಾಸರತ್ನಂ ಗೋಪಾಲದಾಸರು,
ನಂ ೧೪೨, ಗವೀಪುರ

೨೧ ಹರಿದಾಸರ ಜನಪ್ರಿಯ ಹಾಡುಗಳು (ಮೊ.ಮು ೧೯೯೬)
ಸಂ: ಡಾ.ಟಿ.ಎನ್.ನಾಗರತ್ನ, ಡಾ.ಮಂದಾಕಿನಿ
ಪ್ರ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೨೨ ಹರಿಭಕ್ತಿವಾಹಿನಿ (೧೯೮೩)
ಸಂ: ಡಾ.ಜಿ ವರದರಾಜರಾವ್
ಪ್ರ: ವಿಶ್ವಕನ್ನಡ-ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು.

೨೩ ಭಕ್ತಿ ಸುಮನಾಂಜಲಿ (೧೯೫೦)
ಸಂ: ಮ. ಶ್ರೀ.ದೇಶಪಾಂಡೆ
ಪ್ರ: ಬುರ್ಲಿ ಬಿಂದು ಮಾಧವ, ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ

೨೪ ಹರಿದಾಸ ಭಕ್ತಿಸಾಧನೆ ಅರ್ಥಾತ್ ತಾರತಮ್ಯ ಗೀತಾವಳಿ (೧೯೬೫)
ಸಂ: ಬುರ್ಲಿ ಬಿಂದು ಮಾಧವ
ಪ್ರ: ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ

೨೫ ಕನ್ನಡ ಪರಮಾರ್ಥ ಸೋಪಾನ (೧೯೬೯)
ಸಂ: ಡಾ.ರಾ.ದ. ರಾನಡೆ + ಮ.ಶ್ರೀ ದೇಶಪಾಂಡೆ
ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೬ ಶ್ರೀ ವಿಜಯದಾಸರ ಜೀವನ ಚರಿತ್ರೆ (ಪ್ರ.ಮು. ೧೯೯೫)
ಲೇ: ಹರಿದಾಸರತ್ನಂ ಗೋಪಾಲದಾಸರು
ಪ್ರ: ವಿಜಯಮಂದಿರ, ಮಾರುತಿನಗರ, ಯಲಹಂಕ, ಬೆಂ–೭೪

೨೭ ಶ್ರೀ ವಿಜಯದಾಸರು (೧೯೭೮ ಪ್ರ.ಮು)
ಲೇ: ಡಾ.ಕೆ. ಗೋಕುಲನಾಥ್
ಪ್ರ: ಸಿಂಧುಶಯನ ಪ್ರಕಾಶನ, ೫ನೇ ಬ್ಲಾಕ್, ರಾಜಾಜಿನಗರ, ಬೆಂ–೧೦

೨೮ ಶ್ರೀ ಕರ್ನಾಟಕ ಭಕ್ತ ವಿಜಯ (೧೯೮೩ ಮೂರನೇ ಮುದ್ರಣ)
ಲೇ: ಬೇಲೂರು ಕೇಶವದಾಸರು
ಪ್ರ: ಉಷಾ ಸಾಹಿತ್ಯಮಾಲೆ, ಮೈಸೂರು

೨೯ ಹರಿದಾಸ ಸಾಹಿತ್ಯ ವೈಭವ (೧೯೮೨)
ಲೇ: ಅರಳು ಮಲ್ಲಿಗೆ ಪಾರ್ಥಸಾರಥಿ
ಪ್ರ: ಶ್ರೀಪಾದರಾಜ ಮಠ, ಮುಳಬಾಗಿಲು

೩೦ ದಾಸ ಸಾಹಿತ್ಯವಾಹಿನಿ (೧೯೯೭)
ಲೇ: ಅರಳು ಮಲ್ಲಿಗೆ ಪಾರ್ಥಸಾರಥಿ
ಪ್ರ: ಶೃಂಗಾರ್ ನಾಗರಾಜ್ ಹಾಗೂ ರಾಘವೇಂದ್ರ ಪ್ರಕಾಶನ

೩೧ ಶ್ರೀ ವಿಜಯದಾಸರು (೧೯೭೫)
ಲೇ: ಶ್ರೀ ಕೃಷ್ಣ ಕೊಲ್ಹಾರ ಕುಲಕರ್ಣಿ
ಪ್ರ: ಐ.ಬಿ.ಹೆಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು

೩೨ ಶ್ರೀ ಕನಕದಾಸರು ಮತ್ತು ಪುರಂದರದಾಸರು (೧೯೭೬)
ಲೇ: ಎಚ್.ಎಸ್. ಶ್ರೀನಿವಾಸಮೂರ್ತಿ
ಪ್ರ: ಉರಗಾದ್ರಿ ವಿಠಲ ಪ್ರಕಾಶನ, ನರಸಿಂಹರಾಜ ಕಾಲೋನಿ
ಬೆಂಗಳೂರು-೧೯

೩೩ ಭಕ್ತಿಯೋಗಿ ಶ್ರೀ ವಿಜಯದಾಸರು (೧೯೯೫)
ಲೇ: ಡಾ. ಶ್ರೀಮತಿ ಮಂದಾಕಿನಿ
ಪ್ರ: ದಾಸ ಸಾಹಿತ್ಯ ಅಧ್ಯಯನ ಕೇಂದ್ರ, ಜವಾಹರ ನಗರ,
ರಾಯುಚೂರು-೧೦೧

೩೪ ಶ್ರೀ ವಿಜಯದಾಸರ ಸ್ತೋತ್ರಗಳು (೧೯೫೪)
ಸಂ: ಹನುಮಂತರಾವ ವೆಂಕಟರಾವ್ ಕುಲಕರ್ಣಿ ಗೊರಬಾಳ
ಪ್ರ: ಸಂಪಾದಕರು, ಲಿಂಗಸೂಗೂರ, ರಾಯಚೂರು ಜಿಲ್ಲೆ

೩೫ ಶ್ರೀ ವಿಜಯದಾಸರು(ಅವರನ್ನು ಕುರಿತ ಕೀರ್ತನೆಗಳು) ೧೯೭೮
ಸಂ: ಹೆಚ್.ಎಸ್. ಶ್ರೀನಿವಾಸಮೂರ್ತಿ
ಪ್ರ: ಶ್ರೀ ಉರಗಾದ್ರಿವಾಸ ವಿಠ್ಠಲ ಪ್ರಕಾಶನ
ನರಸಿಂಹರಾಜ ಕಾಲೋನಿ, ಬೆಂಗಳೂರು-೧೯

೩೬ ಹರಿದಾಸರ ನಿಂದಾಸ್ತುತಿಗಳು (೧೯೮೭)
ಸಂ: ಡಾ.ಕೆ ಗೋಕುಲನಾಥ್
ಪ್ರ: ಸಿಂಧುಶಯನ ಪ್ರಕಾಶನ, ಬೆಂಗಳೂರು

೩೭ ಶ್ರೀ ವಿಜಯದಾಸರ ಉಗಾಭೋಗಗಳು (೧೯೮೩)
ಸಂ: ಡಾ.ಕೆ ಗೋಕುಲನಾಥ,
ಪ್ರ: ಸಿಂಧುಶಯನ ಪ್ರಕಾಶನ, ಬೆಂಗಳೂರು

೩೮ ಉಡುಪಿ ಶ್ರೀ ಕೃಷ್ಣಕೃತಿಮಂಜರೀ (೧೯೮೯)
ಸಂ: ಹೆಚ್.ಎಸ್. ನಾಗರಾಜರಾವ್, ಡಾ.ಕೆ ಗೋಕುಲನಾಥ್
ಪ್ರ: ಶ್ರೀ ರಾಘವೇಂದ್ರ ಮಠ, ಕಡೂರು.

೩೯ ಹರಿದಾಸರು ಕಂಡ ಶ್ರೀ ಗುರುಸಾರ್ವಭೌಮರು (೧೯೮೫)
ಸಂ: ರಾಜಾ ಎಸ್. ಪವಮಾನಾಚಾರ್ಯ, ಲಿಂಗಸೂಗೂರು ಶ್ರೀನಿವಾಸದಾಸ
ಪ್ರ: ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ

೪೦ ಶ್ರೀ ವಿಜಯದಾಸರ್ಯರ ಚರಿತೆ (೧೯೬೩)
ಲೇ: ಪ್ರಸನ್ನ ಶ್ರೀನಿವಾಸದಾಸರ್ಯ
ಪ್ರ: ಶ್ರೀ ಪ್ರಸನ್ನ ಶ್ರೀನಿವಾಸದಾಸಾರ್ಯರ ಭಕ್ತವೃಂದ
೪೫, ರಾಘವೇಂದ್ರ ಕಾಲೋನಿ, ಬೆಂಗಳೂರು-೧೮

೪೧ ವಿಜಯದಾಸರ ಸುಳಾದಿಗಳು (ಉಪಾಸನಾ ವಿಭಾಗ, ೧೯೬೨)
ಸಂ: ಗೊರಬಾಳ ಹನುಮಂತರಾವ್
ಪ್ರ: ಶ್ರೀ ವರದೇಂದ್ರ ಸಾಹಿತ್ಯ ಮಂಡಲ, ಲಿಂಗಸೂಗೂರು

೪೨ ವಿಜಯದಾಸರ ಸುಳಾದಿಗಳು (ಪ್ರಮೇಯ ಭಾಗ, ೧೯೫೧)
ಸಂ: ಗೊರಬಾಳ ಹನಮಂತರಾವ್
ಪ್ರ: ಶ್ರೀ ವರದೇಂದ್ರ ಸಾಹಿತ್ಯ ಮಂಡಲ, ಲಿಂಗಸೂಗೂರು

೪೩ ವಿಜಯದಾಸರ ಸುಳಾದಿಗಳು(ಸೃಷ್ಟಿಪ್ರಕರಣ, ೧೯೯೪)
ಸಂ: ಗೊರಬಾಳ ಹನುಮಂತರಾವ್
ಪ್ರ: ಶ್ರೀ ವರದೇಂದ್ರ ಸಾಹಿತ್ಯ ಮಂಡಲ, ಲಿಂಗಸೂಗೂರು

೪೪ ವಿಜಯದಾಸರ ಸುಳಾದಿಗಳು (ಭಾಗ-೧, ಸಾಧನಾಭಾಗ, ೧೯೫೦)
ಸಂ: ಹನುಮಂತರಾವ್ ಗೊರಬಾಳ
ಪ್ರ: ಶ್ರೀ ವರದೇಂದ್ರ ಸಾಹಿತ್ಯ ಮಂಡಲ, ಲಿಂಗೂಸೂರು

೪೫ ಶ್ರೀ ವಿಜಯದಾಸರ ಕಂಕಣಾಕಾರ ಸುಳಾದಿ(೧೯೫೭)
ಸಂ: ಹನುಮಂತರಾವ್ ಗೊರಬಾಳ
ಪ್ರ: ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲ, ಲಿಂಗೂಸೂರ

೪೬ ಗಮಕ ಮತ್ತು ಹರಿದಾಸರು (೧೯೮೩)
ಸಂ: ಗಮಕಿ ಎಂ ರಾಘವೇಂದ್ರರಾವ್
ಪ್ರ: ಪೂರ್ಣಿಮಾ ಎಂಟರಪ್ರೈಸಸ್, ಮೈಸೂರು

೪೭ ಶ್ರೀ ಹರಿದಾಸ ಸಾಹಿತ್ಯ (೧೯೮೦)
ಬೇಲೂರು ಕೇಶವದಾಸರು
ಪ್ರ: ಗೀತಾ ಬುಕ್ ಹೌಸ್, ಮೈಸೂರು.

೪೮ ಕನ್ನಡದ ಹರಿದಾಸರು (೧೯೯೬)
ಲೇ: ಕಮಲದಾನಿ ಗುರುರಾಯ
ಪ್ರ: ಶ್ರೀಕಾಂತ ಕುಲಕುರ್ಣಿ, ಬುಕ್‌ಸೆಲ್ಲರ್, ಹರಿಹರ

೪೯ ಹರಿದಾಸ ವಾಙ್ಮಯ (೧೯೮೫)
ಸಂ: ಟಿ.ಎನ್ ನಾಗರತ್ನ
ಪ್ರ: ಗಾನಭಾರತಿ, ಕುವೆಂಪು ನಗರ, ಬೆಂಗಳೂರು

೫೦ ಹರಿದಾಸ ಸಾಹಿತ್ಯ ಸಾರ(೧೯೮೭)
ಡಾ. ಜಿ. ವರದರಾಜರಾವ್
ಕನ್ನಡ ಅಧ್ಯಯನ ಸಂಸ್ಥೆ , ಮೈ .ವಿ. ವಿ

೫೧ ಶ್ರೀ ವ್ಯಾಸರಾಜ ಗುರುಸಾರ್ವಭೌಮರು(೧೯೯೬. ಎ.ಮು) (ಜೀವನ ಚರಿತ್ರೆ)
ಲೇ: ಟಿ.ಕೆ ವೇಣುಗೋಪಾಲದಾಸರು
ಪ್ರ: ಗುರುರಾಜ ಪ್ರಕಾಶನ, ೩೫, ರಾಮಚಂದ್ರ ಅಗ್ರಹಾರ
ಚಾಮರಾಜಪೇಟೆ, ಬೆಂಗಳೂರು-೧೮

೫೨ ಕನ್ನಡ ಸಂತರ ಪರಮಾರ್ಥಪದ (೧೯೬೨ ಪ್ರ.ಮು ಕೀರ್ತನೆಗಳು)
ಲೇ: ಡಾ.ಅರ್.ಡಿ ರಾನಡೆ ಅನು: ಎಂ.ಎಸ್ ದೇಶಪಾಂಡೆ
ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫೩ ಶ್ರೀ ಪುರಂದರ ದಾಸರು (ಜೀವನ ಚರಿತ್ರೆ, ೧೯೯೭ ಎ.ಮು)
ಲೇ: ಟಿ.ಕೆ ವೇಣುಗೋಪಾಲದಾಸರು.
ಪ್ರ: ಗುರುರಾಜ ಪ್ರಕಾಶನ, ಚಾಮರಾಜಪೇಟೆ, ಬೆಂ-೧೮.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು